ವ್ಯಾಕರಣಶಾಸ್ತ್ರದ ಪರಿವಾರ

(ಕನ್ನಡ ವ್ಯಾಕರಣ ವಿಚಾರಗಳು)

ವಿದ್ವಾನ್ ಎನ್. ರಂಗನಾಥ ಶರ್ಮಾ

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ
೨೦೦೨

ಸೇಡಿಯಾಪು ಕೃಷ್ಣಭಟ್ಟ ಸ್ಮಾರಕ ಗ್ರಂಥಮಾಲಿಕೆ : ಪುಷ್ಪ – ೬

ವ್ಯಾಕರಣಶಾಸ್ತ್ರದ ಪರಿವಾರ

(ಕನ್ನಡ ವ್ಯಾಕರಣವಿಚಾರಗಳು)

ವಿದ್ವಾನ್ ಎನ್. ರಂಗನಾಥ ಶರ್ಮಾ

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ

೨೦೦೧

Vyaakaraṇaśaastrada Parivaara : [Collection of writings on Kannada Grammar) by Vidwan Ranganatha Sharma, 831, 'Janaki Kripa', IV Cross, Vijayanagara, Bangalore-560 040.

Published by Rashtrakavi Govind Pai Samshodhana Kendra, Udupi-2.

Pages : ೬ + 208

First Edition : 2002

Price : 94-00

© All Rights Reserved.

ಈ ಗ್ರಂಥಪುಷ್ಪದ ವಿಕಸನಕ್ಕೆ ಸೇಡಿಯಾಪು ನಿಕಟಬಂಧುಗಳಾದ
ಡಾ। ಯು. ನಾರಾಯಣ ಭಟ್,
ಸೌತ್ ಮೆಥಡಿಸ್ಟ್ ಯುನಿವರ್ಸಿಟಿ, ಡಲ್ಲಾಸ್, ಯು.ಎಸ್.ಎ. ಇವರು
ಉದಾರ ಸಹಾಯವಿತ್ತುದನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಲಾಗಿದೆ.

ಸೇಡಿಯಾಪು ಕೃಷ್ಣ ಭಟ್ಟ ಸ್ಮಾರಕ ಗ್ರಂಥಮಾಲಿಕೆ : ಪುಷ್ಪ – ೯

ಮಾಲಿಕೆಯ ಸಂಪಾದಕ ಸಮಿತಿ

- ಡಾ। ಪಾದೇಕಲ್ಲು ವಿಷ್ಣು ಭಟ್ಟ
- ಪ್ರೊ। ಹೆರಂಜೆ ಕೃಷ್ಣ ಭಟ್ಟ
- ಪ್ರೊ। ಎಂ. ರಾಮಚಂದ್ರ
- ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ
- ಡಾ। ಸೇಡಿಯಾಪು ಜಯರಾಮ ಭಟ್ಟ
- ಪ್ರೊ। ಮುರಳೀಧರ ಉಪಾಧ್ಯ, ಹಿರಿಯಡಕ.

ಅಕ್ಷರಸಂಯೋಜನೆ :
'ನವದುರ್ಗಾ ಲೇಸರ್‌ಟೆಕ್', C/o. ಡಾ। ಕೆ. ಪದ್ಮನಾಭ ಕೇಕುಣ್ಣಾಯ,
ಉಡುಪಿ-೨. [Ph. 531159]

ಮುದ್ರಣ :
ಹೊನ್ನ-ಪದ್ಮ ಪ್ರಿಂಟರ್ಸ್, ಉಡುಪಿ- 576 101

ಪ್ರಕಾಶಕರ ಮಾತು

ವಿದ್ವಾನ್ ರಂಗನಾಥ ಶರ್ಮಾ ಅವರು ನಮ್ಮ ದೇಶದ ಹಿರಿಯ ವಿದ್ವಾಂಸರಲ್ಲೊಬ್ಬರು. ಕನ್ನಡ ಸಂಸ್ಕೃತ –ಎರಡೂ ಭಾಷೆಗಳನ್ನೂ ಆಳವಾಗಿ ವ್ಯಾಸಂಗ ಮಾಡಿದವರು. ಎರಡೂ ಭಾಷೆಗಳ ಶಾಸ್ತ್ರ, ಕಾವ್ಯ, ಸಾಹಿತ್ಯಗ್ರಂಥಗಳ ತಲಸ್ಪರ್ಶಿ ಅಧ್ಯಯನ ಮಾಡಿದುದು ಮಾತ್ರವಲ್ಲ ಸಂಸ್ಕೃತದಲ್ಲಿ ಕಾವ್ಯನಾಟಕಾದಿಗಳನ್ನು ರಚಿಸಿದವರು. ರಾಮಾಯಣ, ಭಗವದ್ಗೀತೆ ಮೊದಲಾದ ಅನೇಕ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದವರು; ವ್ಯಾಕರಣ, ಅಲಂಕಾರ, ವೇದಾಂತವೇ ಮೊದಲಾದ ಶಾಸ್ತ್ರಗಳಲ್ಲಿ ಪಾರಂಗತರು ಮತ್ತು ಆ ವಿಷಯಗಳಲ್ಲಿ ಆಧಾರಭೂತವಾದ ಕೃತಿಗಳನ್ನು ರಚಿಸಿದವರು.

ಶ್ರೀಮಾನ್ ಶರ್ಮರು ಸಂಸ್ಕೃತ ಅಧ್ಯಯನಕ್ಕಾಗಿ ರಾಷ್ಟ್ರಪ್ರಶಸ್ತಿಯನ್ನು ಪಡೆದವರು. ನೂರಾರು ವಿದ್ಯಾರ್ಥಿಗಳಿಗೆ ಬೋಧಿಸಿದ ಹಿರಿಯ ಅಧ್ಯಾಪಕರು. ಕನ್ನಡದ ಹಿರಿಯ ಚೇತನ ಗಳಾದ ಡಿ.ವಿ.ಜಿ., ಸೇಡಿಯಾಪು ಮೊದಲಾದವರಿಗೆ ಆತ್ಮೀಯರಾಗಿದ್ದವರು. ಅವರ ವ್ಯಾಕರಣವಿಷಯಕ ಕೃತಿಯೊಂದು ನಮ್ಮ ಸಂಸ್ಥೆಯಿಂದ ಪ್ರಕಾಶಿತವಾಗುತ್ತಿರುವುದು ನಮಗೆ ತುಂಬ ಸಂತೋಷ ತಂದ ವಿಚಾರ.

ವಿದ್ವಾನ್ ರಂಗನಾಥ ಶರ್ಮರು ಸಂಸ್ಕೃತ ವ್ಯಾಕರಣಶಾಸ್ತ್ರದ ಹಿನ್ನೆಲೆಯನ್ನಿರಿಸಿಕೊಂಡು ಕಾರಕ, ವಿಭಕ್ತಿ ಮೊದಲಾದ ಇತರ ವಿಷಯಗಳ ಬಗೆಗೆ ಬರೆದ ಲೇಖನಗಳೊಡನೆ ಬೇರೆಬೇರೆ ಸಂದರ್ಭಗಳಲ್ಲಿ ಬರೆದ ವ್ಯಾಕರಣವಿಷಯಕ ಲೇಖನಗಳನ್ನು ಸೇರಿಸಿಕೊಂಡು ಈ ಸಂಕಲನವನ್ನು ಸಿದ್ಧಗೊಳಿಸಲಾಗಿದೆ. 'ಪಂಚಮೀ ವಿಭಕ್ತಿ'ಯ ಬಗೆಗೆ ಸೇಡಿಯಾಪು ಅವರ ಲೇಖನ ಪ್ರಸಿದ್ಧವಾದುದು. ಸೇಡಿಯಾಪು ಅವರೊಡನೆ ತಮಗಿರುವ ಭಿನ್ನಾಭಿಪ್ರಾಯಗಳನ್ನೂ ಶ್ರೀ ಶರ್ಮರು ತಮ್ಮ ಲೇಖನದಲ್ಲಿ ಶಾಸ್ತ್ರೀಯಕ್ರಮದಿಂದ ನಿರೂಪಿಸಿದ್ದಾರೆ. ವಿದ್ವಾನ್ ಶರ್ಮರು ಸೇಡಿಯಾಪು ಪ್ರಶಸ್ತಿ ಪುರಸ್ಕೃತರು. ಶಾಸ್ತ್ರವಿಷಯಗಳಲ್ಲಿ ಮಿತ್ರತ್ವ ವ್ಯಕ್ತಿಮಹತ್ತ್ವಾದಿಗಳ ಪರಿಗಣನೆ ಸಲ್ಲದೆಂದು ಸೇಡಿಯಾಪು ಅವರ ಅಭಿಪ್ರಾಯವಿತ್ತು. ಅದು ಶರ್ಮರಿಗೂ ಸಂಮತವಾದ ಮಾತಾಗಿದೆ. ವಿದ್ವಾಂಸರೊಳಗಿನ ಭಿನ್ನಮತ ಮತ್ತು ಚರ್ಚೆಗಳಿಂದ ಯಾವುದೇ ವಿಷಯವೂ ಹೆಚ್ಚು ಮಥಿತವಾಗುತ್ತದೆ. ಜಿಜ್ಞಾಸುಗಳಿಗೆ ಅದು ಪ್ರಯೋಜನಕಾರಿ. ಶಾಸ್ತ್ರಸಾಹಿತ್ಯವು ಬೆಳೆಯುವುದು ಹೀಗೆಯೇ.

ವಿದ್ವಾನ್ ಶರ್ಮರು ಈ ವ್ಯಾಕರಣವಿವೇಚನಾತ್ಮಕವಾದ ಕೃತಿಯನ್ನು 'ಸೇಡಿಯಾಪು ಕೃಷ್ಣಭಟ್ಟ ಸ್ಮಾರಕಗ್ರಂಥಮಾಲಿಕೆ'ಯಲ್ಲಿ ಪ್ರಕಟಿಸಲು ಅನುಮತಿಯನ್ನಿತ್ತುದಕ್ಕಾಗಿ ಅವರಿಗೆ ಕೃತಜ್ಞತೆಗಳು. ಈ ಕೃತಿ ಆ ಮಾಲಿಕೆಯ ಒಂಬತ್ತನೆಯ ಪುಷ್ಪವಾಗಿದೆ.

ರಂಗನಾಥ ಶರ್ಮರು ಕಾರಕವಿಭಕ್ತಿಗಳ ಬಗೆಗಿನ ಲೇಖನಗಳನ್ನು ಬರೆಯುವಲ್ಲಿಯೂ ಕಿಂಚಿತ್ಕಾರ್ಯನಿರ್ವಹಣೆ ಮಾಡಿದ (ಈ ವಿಷಯವನ್ನು ಲೇಖಕರೇ ಪ್ರಸ್ತಾವಿಸಿದ್ದಾರೆ.) ಮತ್ತು ಕೃತಿಯ ಕರಡಚ್ಚು ತಿದ್ದಿ ಸರಿಪಡಿಸಿದ ಡಾ। ಪಾದೇಕಲ್ಲು ವಿಷ್ಣು ಭಟ್ಟರಿಗು ಅಕ್ಷರಸಂಯೋಜನೆ ಮಾಡಿದ ಡಾ। ಪದ್ಮನಾಭ ಕೇಕುಣ್ಣಾಯರಿಗೂ ಮುದ್ರಿಸಿದ ಹೊನ್ನಪದ್ಮ ಪ್ರಿಂಟರ್ಸ್‌ನವರಿಗೂ ಕೃತಜ್ಞತೆಗಳು.

ಹೆರಂಜೆ ಕೃಷ್ಣ ಭಟ್ಟ

ಅರಿಕೆ

“ಕನ್ನಡದಲ್ಲಿ ಪಂಚಮೀವಿಭಕ್ತಿ ಇಲ್ಲ. ತೃತೀಯಾವಿಭಕ್ತಿಯಾದ ‘ಇಂದ’ ಎಂಬುದೇ ಪಂಚಮಿಯ ಕಾರ್ಯವನ್ನು ನಿರ್ವಹಿಸುತ್ತದೆ” ಎಂದು ಕೆಲವು ಕನ್ನಡ ಸಾಹಿತಿಗಳು ಬರೆದದ್ದುಂಟು. ವಿಖ್ಯಾತವಿದ್ವಾಂಸರಾದ ಶ್ರೀ ಸೇಡಿಯಾಪು ಕೃಷ್ಣ ಭಟ್ಟರು “ಕನ್ನಡದಲ್ಲಿ ಪಂಚಮೀವಿಭಕ್ತಿ ಇದೆ. ತೃತೀಯಾವಿಭಕ್ತಿ ಇಲ್ಲ. ಅದರ ಕಾರ್ಯವನ್ನು ಪಂಚಮೀವಿಭಕ್ತಿಯೇ ನಿರ್ವಹಿಸುತ್ತದೆ” ಎಂದು ತಮ್ಮ ಪಂಚಮೀವಿಭಕ್ತಿಯೆಂಬ ಪ್ರಬಂಧದಲ್ಲಿ ವಾದಿಸಿದ್ದಾರೆ. ಇದೊಂದು ಪ್ರೌಢವಾದ ಪ್ರಬಂಧ. “ಕನ್ನಡದಲ್ಲಿ ತೃತೀಯಾವಿಭಕ್ತಿಯೂ ಇದೆ, ಪಂಚಮೀವಿಭಕ್ತಿಯೂ ಇದೆ. ಎರಡು ಪ್ರತ್ಯಯಗಳೂ ‘ಇಂದ’ ಎಂಬ ಒಂದೇ ಆಕೃತಿಯಲ್ಲಿವೆ. ಒಂದೇ ಆಕೃತಿಯಲ್ಲಿ ಬೇರೆಬೇರೆ ಜಾತಿಯ ಪ್ರತ್ಯಯಗಳಿರಬಹುದು” ಎಂದು ನನ್ನ ವಾದವಾಗಿದೆ. ಒಂದೇ ಆಕೃತಿಯ ಎರಡು ಸೌಟುಗಳಿರುತ್ತವೆ: ಒಂದು ಸೌಟು ಸಾರನ್ನು ಬಡಿಸುವುದಕ್ಕೆ, ಇನ್ನೊಂದು ಪಾಯಸ ವನ್ನು ಬಡಿಸುವುದಕ್ಕೆ. ಸಾರು ಬಡಿಸುವುದನ್ನು ಪಾಯಸದಲ್ಲಾಗಲಿ ಪಾಯಸ ಬಡಿಸು ವುದನ್ನು ಸಾರಿನಲ್ಲಾಗಲಿ ಅದ್ದಬಾರದು. ಈ ವಿಚಾರವಾಗಿ ನಾನೊಂದು ಲೇಖನವನ್ನು ಬರೆದು ಡಾ| ಪಾದೇಕಲ್ಲು ವಿಷ್ಣುಭಟ್ಟರಿಗೆ ತೋರಿಸಿದೆ. ಅವರು ಗಂಭೀರವದನರಾಗಿ ಕಾರಕಗಳ ವಿಷಯದಲ್ಲೊಂದು ಪ್ರಬಂಧವನ್ನು ಬರೆದು ಕೊಡಬೇಕೆಂದೂ ಇವೆರಡನ್ನೂ ಮುದ್ರಿಸಿ ಪ್ರಕಟಿಸಲು ಪ್ರಯತ್ನಿಸುವುದಾಗಿಯೂ ನನ್ನನ್ನು ಒತ್ತಾಯಿಸಿ ದರು. ಅವರ ಸೌಹಾರ್ದದ ಆಗ್ರಹಕ್ಕೆ ಮಣಿದು ‘ಕಾರಕ ಮತ್ತು ವಿಭಕ್ತಿಗಳು’ ಎಂಬ ಪ್ರಬಂಧವನ್ನು ಬರೆದೆನು.

ಗಮಕಸಮಾಸ, ವರ್ತಮಾನಕಾಲ, ಕವಿರಾಜಮಾರ್ಗದ ಕನ್ನಡ ಅನುವಾದದ ವಿಮರ್ಶೆ –ಇವು ಮೂರು ಬಿ.ಎಂ.ಶ್ರೀ. ಪ್ರತಿಷ್ಠಾನದ ‘ಲೋಚನ’ ಎಂಬ ಪತ್ರಿಕೆಯಲ್ಲಿ ಹಿಂದೆ ಪ್ರಕಟವಾಗಿದ್ದವು. ಅವನ್ನೂ ಈ ಪುಸ್ತಕದಲ್ಲಿ ಸೇರಿಸಿ ಮುದ್ರಿಸಲಾಗಿದೆ. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರವು ಈ ಗ್ರಂಥವನ್ನು ಪ್ರಕಾಶಿಸಲು ಕೃಪೆಯಿಂದ ಅಂಗೀಕರಿಸಿತು. ಸಂಸ್ಥೆಯ ನಿರ್ದೇಶಕರಾದ ಪ್ರೊ| ಎಚ್. ಕೃಷ್ಣ ಭಟ್ಟರ ಸೌಹಾರ್ದಸಹೃದಯತೆಗಳೇ ಇದಕ್ಕೆ ಮುಖ್ಯ ಕಾರಣ. ಮಾನ್ಯ ಶ್ರೀ ಡಾ| ಪಾದೇಕಲ್ಲು ವಿಷ್ಣು ಭಟ್ಟರು ತುಂಬ ಆಸಕ್ತಿಯನ್ನು ವಹಿಸಿ ಕರಡುಗಳನ್ನು ತಿದ್ದಿ ಮುದ್ರಣ ಕಾರ್ಯವನ್ನು ನೋಡಿಕೊಂಡು ವಿಶೇಷವಾಗಿ ಉಪಕರಿಸಿದ್ದಾರೆ. ಈ ಇಬ್ಬರು ಮಹನೀಯರುಗಳಿಂದಾದ ಉಪಕಾರವನ್ನು ಸ್ಮರಿಸಿಕೊಳ್ಳುತ್ತ ಅವರಿಗೆ ಕೃತಜ್ಞತಾ ಪೂರ್ಣ ನಮಸ್ಕಾರಗಳನ್ನು ಅರ್ಪಿಸುತ್ತೇನೆ. ಈ ಪುಸ್ತಕದಿಂದ ವಾಚಕರಿಗೆ ಕಿಂಚಿತ್ ಉಪಕಾರವಾದರೆ ನನ್ನ ಶ್ರಮವು ಸಾರ್ಥಕವಾಯಿತೆಂದು ತಿಳಿಯುತ್ತೇನೆ.

ಬೆಂಗಳೂರು **ವಿದ್ವಾನ್ ಎನ್. ರಂಗನಾಥ ಶರ್ಮಾ**

20-5-2002

ವಿಷಯಾನುಕ್ರಮ

೧. ಕಾರಕ ಮತ್ತು ವಿಭಕ್ತಿ

ಪ್ರಸ್ತಾವನಾಭಾಗ 1

ವ್ಯಾಕರಣ ವಿವೇಚನಾಭಾಗ 14

೨. ಪಂಚಮೀವಿಭಕ್ತಿಯ ಪರಾಮರ್ಶೆ 101

೩. ವರ್ತಮಾನಕಾಲ 134

೪. ಗಮಕಸಮಾಸ – ಒಂದು ಸಮೀಕ್ಷೆ 146

೫. ಕವಿರಾಜಮಾರ್ಗದ ನೂತನ ಸಂಸ್ಕರಣ 164

ಕಾರಕ ಮತ್ತು ವಿಭಕ್ತಿ

೧

ಪ್ರಸ್ತಾವನಾಭಾಗ

ಕಾರಕ ವಿಭಕ್ತಿಗಳ ವಿಷಯವಾಗಿ ಈ ಪ್ರಬಂಧವನ್ನು ಬರೆಯಬೇಕಾದ ಒಂದು ಸಂದರ್ಭ ನನಗೆ ಒದಗಿತು. ಕೀರ್ತಿಶೇಷರಾದ ಪೂಜ್ಯಶ್ರೀ ಸೇಡಿಯಾಪು ಕೃಷ್ಣ ಭಟ್ಟರು 'ಪಂಚಮೀವಿಭಕ್ತಿ' ಎಂಬ ಒಂದು ಲೇಖನವನ್ನು ಬರೆದು, ಕನ್ನಡದಲ್ಲಿ ತೃತೀಯಾ ವಿಭಕ್ತಿ ಇಲ್ಲವೆಂದು ವಾದಿಸಿದ್ದರು. ತೃತೀಯಾವಿಭಕ್ತಿಯ ಕಾರ್ಯವನ್ನು ಪಂಚಮಿಯೇ ನಿರ್ವಹಿಸಬಲ್ಲುದೆಂದು ಅವರ ಆಶಯವಾಗಿತ್ತು. ಅದಕ್ಕೆ ಪ್ರತಿಯಾಗಿ ನಾನೊಂದು ಲೇಖನವನ್ನು ಬರೆದು, ಕನ್ನಡದಲ್ಲಿ ತೃತೀಯಾಪಂಚಮಿಗಳೆರಡೂ ಇವೆಯೆಂದು ಪ್ರತಿಪಾದಿಸಿದ್ದೆನು. ಆ ಲೇಖನವನ್ನು ನನ್ನ ಮಾನ್ಯ ಮಿತ್ರರಾದ ಡಾ। ಪಾದೇಕಲ್ಲು ವಿಷ್ಣು ಭಟ್ಟರು ಓದಿನೋಡಿ, ಕಾರಕಗಳ ವಿಷಯವಾಗಿ ಒಂದು ಪ್ರಬಂಧವನ್ನು ಬರೆಯಬೇಕೆಂದು ಕೇಳಿಕೊಂಡರು. ಕಾರಕಗಳ ಸ್ವರೂಪವನ್ನು ವಿವರಿಸುವ ಯಾವ ಬರೆಹಗಳೂ ಕನ್ನಡದಲ್ಲಿ ಕಾಣುತ್ತಿಲ್ಲವೆಂದೂ ಅದನ್ನು ನಾನು ಬರೆಯಬೇಕೆಂದೂ ಅವರು ಒತ್ತಡವನ್ನು ತಂದಾಗ ನಾನು ಈ ಪ್ರಬಂಧರಚನೆಗೆ ತೊಡಗಬೇಕಾಯಿತು.

ಕನ್ನಡದ ವೈಯಾಕರಣರಾದ ನಾಗವರ್ಮನೂ ಕೇಶಿರಾಜನೂ ಕರ್ತೃ, ಕರ್ಮ ಮುಂತಾದ ಕಾರಕಗಳ ಮೇಲೆ ಯಾವ ವಿಭಕ್ತಿಗಳು ಬರುತ್ತವೆಯೆಂಬುದನ್ನು ಹೇಳಿದರೇ ಹೊರತು, ಕಾರಕಗಳ ಸ್ವರೂಪಜಿಜ್ಞಾಸೆಯನ್ನು ಅವರು ಮಾಡಲಿಲ್ಲ. ಕಾರಕದ ಲಕ್ಷಣವನ್ನಾಗಲಿ ಕರ್ತೃ, ಕರ್ಮಾದಿ ಕಾರಕಭೇದಗಳ ಲಕ್ಷಣವನ್ನಾಗಲಿ ಅವರು ನಿರೂಪಿಸಲಿಲ್ಲ. ಅದೆಲ್ಲವೂ ಸಂಸ್ಕೃತ ವ್ಯಾಕರಣದಲ್ಲಿ ನಿರೂಪಿತವಾಗಿಯೇ ಇದೆಯಾದ್ದರಿಂದ ಪುನಃ ಇಲ್ಲಿ ಹೇಳಬೇಕಾದ್ದಿಲ್ಲವೆಂದು ಅವರು ಭಾವಿಸಿರಬಹುದು. ಭಟ್ಟಾಕಳಂಕನು ತನ್ನ ಸೂತ್ರಗಳಲ್ಲಿಯೂ ವ್ಯಾಖ್ಯಾನದಲ್ಲಿಯೂ ಈ ವಿಷಯವನ್ನು ಸಾಕಷ್ಟು ಹೇಳಿದ್ದಾನೆ. ಅದೆಲ್ಲವೂ ಸಂಸ್ಕೃತದಲ್ಲಿಯೇ ನಿರೂಪಿತವಾದ್ದರಿಂದ ಅದನ್ನು ಓದಿ ತಿಳಿದುಕೊಳ್ಳತಕ್ಕವರು ಯಾರು? ಶಾಸ್ತ್ರೀಯ ವಿಷಯವಾದ್ದರಿಂದ ಅದನ್ನು ಬಿಡಿಸಿ ತಿಳಿಸಿಕೊಡತಕ್ಕವರ ಸಹಾಯವೂ ಬೇಕಾಗುತ್ತದೆ. ಹೀಗಾಗಿ ಕನ್ನಡ ವಿದ್ವಾಂಸರಿಗೂ ಅದರ ಪರಿಚಯವು ಸರಿಯಾಗಿ ಇಲ್ಲದಿದ್ದರೆ ಅಚ್ಚರಿ ಏನೂ ಇಲ್ಲ.

ನಾನು ಈ ಪ್ರಬಂಧವನ್ನು ರಚಿಸಲು ಒಪ್ಪಿದ ಮೇಲೆ, ಶ್ರೀ ಪಾದೇಕಲ್ಲು ವಿಷ್ಣುಭಟ್ಟರು 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ' ಎಂಬ ಒಂದು ಗ್ರಂಥವನ್ನು ನೋಡಲು ತಂದುಕೊಟ್ಟರು. ಭಾಷಾಶಾಸ್ತ್ರಜ್ಞರಾದ ಶ್ರೀ ಡಿ. ಎನ್. ಶಂಕರ ಭಟ್ಟರೆಂಬ

ವಿದ್ವಾಂಸರು ಅದನ್ನು ಬರೆದವರು. ಕನ್ನಡ 'ವೈಯಾಕರಣಿ'ಗಳು (ವೈಯಾಕರಣರು) ಸಂಸ್ಕೃತವ್ಯಾಕರಣವನ್ನನುಸರಿಸಿ ಬಹಳ ದೊಡ್ಡ ತಪ್ಪು ಮಾಡಿದರೆಂದು ಈ ಪುಸ್ತಕದಲ್ಲಿ ಹೇಳಿ, ಈ ವಿಚಾರವನ್ನು ೨೪೦ ಪುಟಗಳಲ್ಲಿ ತಿಳಿಸಿಕೊಡಲು ಪ್ರಯತ್ನಿಸಿದ್ದಾರೆ. "ಕಾರಕಗಳೆಂಬವು ಸಂಸ್ಕೃತ ವೈಯಾಕರಣಿಗಳು ತಮ್ಮ ಅನುಕೂಲಕ್ಕಾಗಿ ಸೃಷ್ಟಿಸಿ ಕೊಂಡಿರುವ ಕಾಲ್ಪನಿಕ ತತ್ತ್ವ" (ಪು. ೧೪೭) ಎಂದೂ ಬರೆದಿದ್ದಾರೆ. 'ತಾವು ಒಬ್ಬ ವೈಯಾಕರಣಿಗಳೆಂದು ಹೇಳಿಕೊಂಡು ಗ್ರಂಥದ ಉದ್ದಕ್ಕೂ 'ವೈಯಾಕರಣಿ' ಎಂಬ ರೂಪವನ್ನೇ ಬಳಸುತ್ತ ಹೋಗಿದ್ದಾರೆ.' ಕನ್ನಡ ಭಾಷಾಸ್ವರೂಪವನ್ನು ಹೇಳುವ ಇನ್ನೂ ಎರಡು ಮೂರು ಪುಸ್ತಕಗಳನ್ನು ಓದಿದೆ. ಈ ಪ್ರಬಂಧವನ್ನು ಬರೆಯಲು ಮೂಡಿದ್ದ ನನ್ನ ಉತ್ಸಾಹವು ಮತ್ತೆ ಇಂಗಿಹೋಯಿತು.

ನಗ್ನ ಕ್ಷಪಣಕೇ ದೇಶೇ ಕುವಿಂದಃ ಕಿಂ ಕರಿಷ್ಯತಿ –ಎಂಬ ಮಾತು ಸ್ಮರಣೆಗೆ ಬಂದಿತು. ಬತ್ತಲೆಯಾಗಿ ತಿರುಗತಕ್ಕವರ ದೇಶದಲ್ಲಿ ನೆಯ್ಗೆಯವನಿಗೆ ಏನು ಕೆಲಸ? ಅಥವಾ ಬಟ್ಟೆಯುಡುವವರ ದೇಶದಲ್ಲಿ ಬತ್ತಲೆಯವನು ತಿರುಗಾಡಬಾರದು –ಎಂದಾದರೂ ಹೇಳಬಹುದು.

ಹೀಗೆ ಒಂದು ವಾರ ಕಳೆಯಿತು. ಮತ್ತೆ 'ಊದುವ ಶಂಖವನ್ನು ಊದಿ ಬಿಡೋಣ' ಎಂದು ಧೈರ್ಯವನ್ನು ತಳೆದು ಈ ಲೇಖನಕ್ಕೆ ಕೈಹಾಕಿದೆ. ಸಂಸ್ಕೃತ ವೈಯಾಕರಣರು ಕಾರಕಗಳನ್ನು ತಮ್ಮ ಅನುಕೂಲಕ್ಕಾಗಿ ಸೃಷ್ಟಿಸಿಕೊಳ್ಳಲೂ ಇಲ್ಲ. ಅದು ಕಾಲ್ಪನಿಕ ತತ್ತ್ವವೂ ಅಲ್ಲ. ಸಕಲ ಭಾಷಾಶಬ್ದಗಳಲ್ಲಿಯೂ ಅಡಗಿರುವ ಶಬ್ದಶಕ್ತಿಯನ್ನು ಎಳೆದು ತೋರಿಸುವ, ಸಕಲ ಭಾಷೆಗಳಲ್ಲಿಯೂ ನಿಹಿತವಾಗಿರುವ ಗೂಢತತ್ತ್ವವೇ ಕಾರಕತ್ವ. ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ -ಎಂಬ ಆರು ಕಾರಕಗಳಿಲ್ಲದ ಭಾಷೆಯೇ ಇರದು. ಇವು ತಮ್ಮ ಶಕ್ತಿಗಳ ಆವಿಷ್ಕರಣ ದಿಂದಾದ ಕ್ರಿಯಾಸಂಬಂಧವನ್ನು ಬೋಧಿಸುತ್ತವೆ. ಕ್ರಿಯೇತರ ವಸ್ತುಗಳೊಡಗಿರುವ ಕ್ವಚಿತ್ ಕ್ರಿಯೆಯೊಡನೆಯೂ ಇತರ ಎಲ್ಲ ಸಂಬಂಧಗಳನ್ನು ಷಷ್ಠೀವಿಭಕ್ತಿಯು ಬೋಧಿಸುತ್ತದೆ. ಯಾವ ಭಾಷೆಯಲ್ಲಿಯೂ ಕ್ರಿಯೆ ಇಲ್ಲದೆ ವಾಕ್ಯಾರ್ಥವೇ ಮುಗಿಯುವುದಿಲ್ಲ. ಶಬ್ದಗಳಿಗೆ ಕ್ರಿಯೆಯೊಡನೆ ಸಂಬಂಧವಿಶೇಷವು ಆರು ವಿಧದಲ್ಲಿ ಮಾತ್ರ ಸಾಧ್ಯ. ಅದಕ್ಕಿಂತ ಹೆಚ್ಚು ವಿಧದಲ್ಲಿ ಈ ಸಂಬಂಧವನ್ನು ಯಾವ ಶಬ್ದವೂ ತಿಳಿಸಲಾರದು. ಆದ್ದರಿಂದ ಯಾವ ಭಾಷೆಯಲ್ಲಾಗಲಿ ಆರು ಕಾರಕಗಳಿರುತ್ತವೆ. ಅಧಿಕವೂ ಇಲ್ಲ ಕಡಿಮೆಯೂ ಇಲ್ಲ. ಆಯಾ ಭಾಷೆಯ ಜಾಯಮಾನ ಸ್ವಭಾವಕ್ಕೆ ಅನುಗುಣ ವಾಗಿ ಈ ಕಾರಕಶಕ್ತಿಯು ವಿಭಕ್ತಿಯಿಂದಾಗಬಹುದು. By, with, from ಮುಂತಾದ ಶಬ್ದಾಂತರಗಳಿಂದಾಗಬಹುದು. ವಾಕ್ಯದಲ್ಲಿ ಗೊತ್ತಾದ ಸ್ಥಾನಬಲದಿಂದಾಗಬಹುದು. ಅಥವಾ ಮಾರ್ಗಾಂತರವೂ ಇದ್ದೀತು. ಷಷ್ಠೀವಿಭಕ್ತಿಯ ಸಂಬಂಧ ಸಾಮಾನ್ಯವೂ ಬೇರೆಬೇರೆ ವಿಧಗಳಲ್ಲಿ ಅಭಿವ್ಯಕ್ತವಾಗಬಹುದು. ಒಟ್ಟು ಈ ಕಾರಕ ಸಂಬಂಧಗಳನ್ನು ವರ್ಜಿಸಿ, ಇನ್ನೊಂದು ಬಗೆಯಲ್ಲಿ ಶಬ್ದಗಳಿಂದ ಸ್ವಾಭಿಪ್ರಾಯವನ್ನು ತಿಳಿಸಲು ಶಕ್ಯವಿಲ್ಲ.

ಪ್ರಾಣಿಗಳ ಆಹಾರವು ನೂರಾರು ಬಗೆಯದಾದರೂ ಬಾಯಿಯ ಮೂಲಕವೇ ಹೊಟ್ಟೆಗೆ ಇಳಿಯಬೇಕು.

ಮಾನ್ಯರಾದ ಶ್ರೀಯುತ ಡಿ. ಎನ್. ಶಂಕರ ಭಟ್ಟರು ಹಿಂದೆ ಹೇಳಿದ ತಮ್ಮ ಗ್ರಂಥದಲ್ಲಿ 'ವಿಭಕ್ತಿಗಳು ಮತ್ತು ಕಾರಕಗಳು' ಎಂಬ ವಿಷಯವನ್ನು ಕುರಿತು ಇನ್ನೂ ಕೆಲವು ಮಾತುಗಳನ್ನು ಹೇಳಿದ್ದಾರೆ. 'ಸಂಸ್ಕೃತವ್ಯಾಕರಣಗಳಲ್ಲಿ ಇಂತಹ ವಿಭಕ್ತಿ ಎಂಬ ವ್ಯಾಕರಣತತ್ತ್ವವನ್ನು ಮಾತ್ರವಲ್ಲದೆ ಕಾರಕ ಎಂಬ ಇನ್ನೊಂದು ವ್ಯಾಕರಣತತ್ತ್ವವನ್ನೂ ಬಳಸಲಾಗಿದೆ. ಈ ಕಾರಕಗಳು ನಡೆಸುವ ಕಾರ್ಯ, ವಿಭಕ್ತಿಗಳು ನಡೆಸುವ ಕಾರ್ಯಕ್ಕಿಂತ ತೀರ ಭಿನ್ನವಾದುದು. ಅವು ವಿಭಕ್ತಿಗಳ ಹಾಗೆ ನಿಜಕ್ಕೂ ವಾಕ್ಯಗಳಲ್ಲಿ ಕಾಣಿಸುವ ಅಂಗಗಳಲ್ಲ. ಸಂಸ್ಕೃತ ವೈಯಾಕರಣಿಗಳು ತಮ್ಮ ಅನುಕೂಲಕ್ಕಾಗಿ ಸೃಷ್ಟಿಸಿಕೊಂಡಿರುವ ವೈಯಾಕರಣಿಕ ತತ್ತ್ವಗಳು (ಎಂದರೆ ಪರಿಕಲ್ಪನೆಗಳು) ಮಾತ್ರ' (ಪು. ೧೪೩). ಯಾವ ಅರ್ಥದಲ್ಲಿ ಇವರು ತತ್ತ್ವ ಶಬ್ದವನ್ನು ಬಳಸುತ್ತಾರೋ ತಿಳಿಯದು. ಕಾರಕಗಳಿಗೂ ವಿಭಕ್ತಿಗಳಿಗೂ ಸಂಬಂಧವಿಲ್ಲವೆನ್ನುವುದಕ್ಕೆ ಅವರು ಕೊಡುವ ಉದಾಹರಣೆಗಳಿಗೆ ಸಮರ್ಪಕವಾದ ಉತ್ತರವನ್ನೂ ಈ ನನ್ನ ಪ್ರಬಂಧವನ್ನು ಓದಿದವರು ತಾವೇ ಕಂಡುಕೊಳ್ಳಬಹುದು. 'ವಿವಕ್ಷಾತಃ ಕಾರಕಾಣಿ ಭವಂತಿ' ಎನ್ನುವುದು ಸರ್ವಸಮ್ಮತವಾದ್ದರಿಂದ ಸಮಸ್ತಭಾಷೆಗಳಿಗೂ ಅನ್ವಯಿಸುವ ನಿಶ್ಚಲವಾದ ಕಾರಕತತ್ತ್ವವನ್ನು ಈ ವಿದ್ವಾಂಸರು ಪರಿಶೀಲಿಸಿಲ್ಲ. ಅವರು ಉದಾಹರಿಸಿದ್ದರಲ್ಲಿ ಕೆಲವನ್ನು ಮಾತ್ರ ಇಲ್ಲಿ ನೋಡಬಹುದು.

1. ರಾಮಃ ಸ್ಥಾಲ್ಯಾಂ ಓದನಂ ಪಚತಿ
   ಸ್ಥಾಲೀ ಪಚತಿ
   ಕಾಷ್ಠಂ ಪಚತಿ

ಇಲ್ಲಿ ಕಾರಕಗಳಿಗೂ ವಿಭಕ್ತಿಗಳಿಗೂ ಸಂಬಂಧವೆಲ್ಲಿದೆ? ಎಂದು ಅವರ ಅಭಿಪ್ರಾಯ. ಆಯಾ ಕಾರಕಕ್ಕೇ ಆಯಾ ವಿಭಕ್ತಿ ಬಂದಿದೆ ಎಂದು ಸಂಸ್ಕೃತ ವೈಯಾಕರಣರ ಅಭಿಪ್ರಾಯ. ಕನ್ನಡದಲ್ಲಿ ಈ ಬಗೆಯ ಪ್ರಯೋಗಗಳಿಲ್ಲವೆ?

ರಾಮನು ಪಾತ್ರೆಯಲ್ಲಿ ಅನ್ನವನ್ನು ಬೇಯಿಸುತ್ತಾನೆ.
ಕುಕ್ಕರ್ ಪಾತ್ರೆ ಅನ್ನವನ್ನು ಬೇಯಿಸುತ್ತದೆ.
(ನಮ್ಮ ಮನೆಯಲ್ಲಿ ಗ್ಯಾಸ್ ಬಳಸುವುದಿಲ್ಲ) ಕಟ್ಟಿಗೆಯೇ ಬೇಯಿಸುತ್ತದೆ –ಇತ್ಯಾದಿ ಪ್ರಯೋಗವೈವಿಧ್ಯವನ್ನು ಬಲ್ಲವರು ಇದೊಂದು ಆಕ್ಷೇಪವೆಂದೇ ಪರಿಗಣಿಸುವುದಿಲ್ಲ.

2. ಪರ್ವತೇ ಆಸ್ತೇ
   ಪರ್ವತಮಧ್ಯಾಸ್ತೇ

ಅಧಿಕರಣಕ್ಕೆ ದ್ವಿತೀಯಾ ಬಂದದ್ದು ಹೇಗೆ ಎಂದು ಆಕ್ಷೇಪ. ಎರಡನೆಯ ವಾಕ್ಯದಲ್ಲಿ 'ಅಧಿ' ಎಂಬ ಉಪಸರ್ಗವಿರುವುದನ್ನು ಗಮನಿಸಬೇಕು. 'ಹತ್ತಿ ಕುಳಿತಿದ್ದಾನೆ' ಎಂದು ಕ್ರಿಯಾಪದದ ಅರ್ಥ. ಹತ್ತುವುದಕ್ಕೆ ಪರ್ವತವು

ಕರ್ಮವಾದ್ದರಿಂದ ದ್ವಿತೀಯಾ (ಪರ್ವತಂ = ಪರ್ವತವನ್ನು) ಬಂದಿದೆ. ಇದನ್ನೇ 'ಅಧಿಶೀಙ್‌ಸ್ಥಾಸಾಂ ಕರ್ಮ' ಎಂಬ ಪಾಣಿನಿಸೂತ್ರವು ಕರ್ಮಸಂಜ್ಞೆಯನ್ನು ವಿಧಿಸುವುದರ ಮೂಲಕ ವಿವರಿಸಿದೆ. ಕಾರಕಕ್ಕೆ ಅನುರೋಧವಾಗಿಯೇ ವಿಭಕ್ತಿ ಬಂದಿದೆ.

3. ಅಕ್ಷಾನ್ ದೀವ್ಯತಿ.
ಅಕ್ಷೈಃ ದೀವ್ಯತಿ.

ಕರ್ಮವಾದರೆ ತೃತೀಯಾ ಬರಬಾರದು. ಕರಣವಾದರೆ ದ್ವಿತೀಯಾ ಬರಬಾರದು ಎಂದು ಆಕ್ಷೇಪ. ಮೊದಲನೇ ವಾಕ್ಯದಲ್ಲಿ ಅಕ್ಷವೆಂದರೆ ಪಗಡೆ ಆಟವೆಂದರ್ಥ. ಅದು ಕರ್ಮವಾದ್ದರಿಂದ ದ್ವಿತೀಯಾ ಬಂದಿದೆ. ಎರಡನೇ ವಾಕ್ಯದಲ್ಲಿ ಅಕ್ಷವೆಂದರೆ ಪಗಡೆದಾಳವೆಂದರ್ಥ. ಅದು ಕ್ರೀಡೆಗೆ ಕಾರಣವಾದ್ದರಿಂದ ತೃತೀಯಾ ಬಂದಿದೆ. ಇದನ್ನೇ 'ದಿವಃ ಕರ್ಮ ಚ' ಎಂಬ ಸೂತ್ರದಲ್ಲಿ ಕರ್ಮ, ಕರಣ ಎಂಬ ಎರಡು ಕಾರಕಸಂಜ್ಞೆಗಳನ್ನು ವಿಧಿಸಿ ಸಂಸ್ಕೃತ ವೈಯಾಕರಣರು ಸ್ಪಷ್ಟಪಡಿಸಿದ್ದಾರೆ. ಕನ್ನಡದಲ್ಲಿಯೂ 'ಈ ಹುಡುಗನು ಫುಟ್‌ಬಾಲನ್ನು ಆಡುತ್ತಾನೆ.'; 'ಫುಟ್‌ಬಾಲಿನಿಂದ ಆಡುತ್ತಾನೆ' ಎಂದು ಎರಡು ಬಗೆಯಲ್ಲಿ ಪ್ರಯೋಗಿಸುವುದಿಲ್ಲವೆ?

4. ಆಜ್ಯಂ ಜುಹೋತಿ.
ಆಜ್ಯೇನ ಜುಹೋತಿ.

ಆಕ್ಷೇಪಣೆ ಹಿಂದಿನಂತೆಯೇ. ಧಾತುಗಳಿಗೆ ಅನೇಕಾರ್ಥಗಳಿರುತ್ತವೆ. 'ಹು' ಧಾತುವಿಗೆ 'ವಿಧಿಪೂರ್ವಕವಾಗಿ ಅಗ್ನಿಯಲ್ಲಿ ಹಾಕು' ಎಂದರ್ಥ. ಹಾಕು ಎಂಬುದಕ್ಕೆ ಕರ್ಮವಾದ್ದರಿಂದ ದ್ವಿತೀಯಾ. 'ವಿಧಿಪೂರ್ವಕವಾಗಿ ಹವನಕ್ರಿಯೆಯನ್ನು ಮಾಡು' ಎಂದು ಇನ್ನೊಂದು ಅರ್ಥ. ಅದಕ್ಕೆ ಕರಣವಾದ್ದರಿಂದ ಎರಡನೆಯ ವಾಕ್ಯದಲ್ಲಿ ತೃತೀಯಾ ಬಂದಿದೆ.

ಕನ್ನಡದಲ್ಲಿಯೂ ತುಪ್ಪವನ್ನು ಹೋಮಿಸುತ್ತಾನೆ, ತುಪ್ಪದಿಂದ ಹೋಮವನ್ನು ಮಾಡುತ್ತಾನೆ ಎಂದು ಪ್ರಯೋಗಿಸಲಡ್ಡಿ ಇಲ್ಲ.

ಸಂಸ್ಕೃತದಲ್ಲಿ ಕಾರಕಕ್ಕೂ ವಿಭಕ್ತಿಗೂ ಸಂಬಂಧವಿದೆಯೆಂಬುದನ್ನೂ ಸಂಸ್ಕೃತ ವ್ಯಾಕರಣಕ್ಕೂ ಕನ್ನಡವ್ಯಾಕರಣಕ್ಕೂ ನಿಕಟವಾದ ಸಾಮ್ಯವಿದೆಯೆಂಬುದನ್ನೂ ಇದರಿಂದ ಮತ್ತಷ್ಟು ದೃಢಪಡಿಸಿದಂತಾಯಿತು.

ಧಾತುವನ್ನು ಸಕರ್ಮಕ-ಅಕರ್ಮಕ ಎಂದು ವಿಭಜಿಸುವುದಕ್ಕಿಂತಲೂ ಐಚ್ಛಿಕ-ಅನೈಚ್ಛಿಕ ಎಂದು ವಿಭಾಗಿಸುವುದು ಉತ್ತಮವೆಂದು ಈ ಭಾಷಾಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಈ ಪ್ರಕಾರದ ಕೆಲವು ಹೇಳಿಕೆಗಳು ನಮಗೇ ಅರ್ಥವಾಗದಿದ್ದಾಗ ನಾವು ಹೇಳಬೇಕಾದ್ದೇನೂ ಇರುವುದಿಲ್ಲ.

ಒಂದು ಪ್ರಸಂಗವಿಲ್ಲಿ ನೆನಪಿಗೆ ಬರುತ್ತದೆ. ಒಬ್ಬ ಭಾಷಾಶಾಸ್ತ್ರಜ್ಞರು ಒಮ್ಮೆ ನನಗೆ ಹೇಳಿದರು: "ನಿಮ್ಮ ಪಾಣಿನಿ ಲುಟ್ ಎಂಬ ಒಂದು ಲಕಾರವನ್ನು ಕಲ್ಪಿಸಿ 'ಭವಿತಾ ಭವಿತಾರೌ ಭವಿತಾರಃ' ಇತ್ಯಾದಿ ರೂಪಗಳನ್ನು ಸಾಧಿಸಲು ಹೊರಟಿದ್ದಾನೆ.

ಇದು ವ್ಯರ್ಥ. ತೃಚ್ ಎಂಬ ಕೃತ್ ಪ್ರತ್ಯಯದಿಂದಲೇ ಈ ರೂಪಗಳು ಸಿದ್ಧಿಸುತ್ತವೆ. ಕರ್ತಾ ಕರ್ತಾರೌ ಕರ್ತಾರಃ ಇತ್ಯಾದಿ ರೂಪಗಳಂತೆಯೇ ಭವಿತಾ ಮೊದಲಾದವೂ ತೃಜಂತರೂಪಗಳು''.

ಆಗ ನಾನು ಹೇಳಿದೆ: ಭವಿತಾ ಎನ್ನುವುದು ತೃಜಂತನಾಮಪದವಾದರೆ ಸ್ತ್ರೀಲಿಂಗವು ಕರ್ತೃವಾದಾಗ ರೂಪಸಿದ್ಧಿ ಹೇಗೆ? 'ಶ್ವಃ ವಿಧಾನಪರಿಷತ್ ಭವಿತಾ' ಎನ್ನುವುದು ಹೇಗೆ? ಭವಿತ್ರೀ ಎಂದಾಗಬೇಕಾದೀತು. ಹಾಗೆಯೇ ದ್ವಿವಚನ-ಬಹುವಚನಗಳಲ್ಲಿ ಭವಿತ್ರ್ಯೌ, ಭವಿತ್ರ್ಯಃ ಎಂದಾಗಿಬಿಡುತ್ತದೆ. ಲುಟ್ ಬಂದರೆ ಭವಿತಾ, ಭವಿತಾರೌ, ಭವಿತಾರಃ –ಎಂದು ಮೂರು ವಚನಗಳಲ್ಲಿಯೂ ಆಗುತ್ತದೆ. ನಪುಂಸಕ ಲಿಂಗದಲ್ಲಿಯೂ ಈ ತೊಡಕು ಬರುತ್ತದೆ ಎಂದೆ. ಭಾಷಾಶಾಸ್ತ್ರಜ್ಞರು 'ನಮ್ಮ ಭಾಷಾಶಾಸ್ತ್ರದಲ್ಲಿ ಹಾಗೆ ಹೇಳಿದ್ದಾರೆ' ಎಂದು ನುಡಿದು ಸುಮ್ಮನಾದರು.

ವ್ಯಾಕರಣಶಾಸ್ತ್ರದ ಪರಾಮರ್ಶವು ವೇದದಲ್ಲಿಯೇ ಬಂದಿದೆ. 'ತೇ ದೇವಾ ಇಂದ್ರಮಬ್ರುವನ್, ಇಮಾಂ ನೋ ವಾಚಂ ವ್ಯಾಕುರ್ವಿತಿ । ತಾಮಿಂದ್ರೋ ಮಧ್ಯತೋಽವಕ್ರಮ್ಯ ವ್ಯಾಕರೋತ್'. ವ್ಯಾಕರಣವು ವೇದಾಂಗವೆಂದೂ ವೇದಕ್ಕೆ ಮುಖವಿದ್ದಂತೆ ಪ್ರಧಾನವೆಂದೂ ಹಿಂದಿನವರು ಗಣಿಸಿದ್ದಾರೆ. ಪಾಣಿನಿಯು ಕ್ರಿ. ಪೂ. ೭ನೆಯ ಶತಮಾನದವನೆಂದು ಸಂಶೋಧಕರ ಹೇಳಿಕೆ. ಆತನಿಗಿಂತ ಪೂರ್ವದಲ್ಲಿಯೂ ಅನೇಕ ವೈಯಾಕರಣರಿದ್ದರೆಂದು ಪಾಣಿನಿಯ ಅಷ್ಟಾಧ್ಯಾಯಿಯಿಂದಲೇ ತಿಳಿದು ಬರುತ್ತದೆ. ಭಾಷಾಶಾಸ್ತ್ರವು ಪಾಣಿನಿವ್ಯಾಕರಣದಿಂದ ಚೋದಿತವಾಗಿ ಬೆಳೆದು ಬಂದದ್ದು. ಅದರ ಕ್ಷೇತ್ರವೇ ಬೇರೆ, ವ್ಯಾಕರಣಶಾಸ್ತ್ರದ ಕ್ಷೇತ್ರವೇ ಬೇರೆ.

ಕನ್ನಡವು ದೀರ್ಘಕಾಲದ ವರೆಗೆ ಆಡುನುಡಿಯಾಗಿಯೇ ಇತ್ತೆಂದು ತೋರುತ್ತದೆ. ಅಚ್ಚಗನ್ನಡದಲ್ಲಿ ಬರೆದ ಯಾವ ಶಾಸನವಾಗಲಿ ಗ್ರಂಥವಾಗಲಿ ದೊರಕಿಲ್ಲ. ಸಂಸ್ಕೃತ ಭಾಷೆಯ ಸಂಪರ್ಕವಾದಮೇಲೆಯೇ ಅದು ಲಿಖಿತರೂಪದಲ್ಲಿ ಕಾಣಿಸಿಕೊಂಡಿದೆ. ಸಂಸ್ಕೃತದ ಸಂಪರ್ಕ ಯಾವಾಗ ಆಯಿತೆಂಬುದನ್ನು ಊಹಿಸಲು ಸಹ ಶಕ್ಯವಿಲ್ಲ. ಕ್ರಿ. ಶ. ೯ನೆಯ ಶತಕದಲ್ಲಿದ್ದ ನೃಪತುಂಗನ ಕವಿರಾಜಮಾರ್ಗವೇ ದೊರಕಿರುವ ಪ್ರಥಮ ಕೃತಿ. ಅದರಲ್ಲಿ ಉದಾಹೃತವಾದ ಕೆಲವು ಗ್ರಂಥಗಳು ಆತನ ಕಾಲಕ್ಕಿಂತ ನೂರಿನ್ನೂರು ವರ್ಷಗಳೊಳಗೆ ರಚಿತವಾಗಿರಬಹುದು. ನೃಪತುಂಗನ ಕಾಲದಲ್ಲಿ ಯಥೇಚ್ಛವಾಗಿ ಸಂಸ್ಕೃತ ಶಬ್ದಗಳು ಕನ್ನಡದಲ್ಲಿ ಸೇರಿ ಕನ್ನಡ ಪದಗಳೊಡನೆ ತಾದಾತ್ಮ್ಯವನ್ನು ಪಡೆದಿದ್ದವು. ಇದಕ್ಕೆ ಕವಿರಾಜಮಾರ್ಗದಲ್ಲಿರುವ ಸಂಸ್ಕೃತಭೂಯಿಷ್ಠವಾದ ಪದ್ಯಗಳೇ ಸಾಕ್ಷಿ. ನೃಪತುಂಗ, ಶ್ರೀವಿಜಯ, ಕವಿರಾಜಮಾರ್ಗ –ಎಂಬ ನಾಮಕರಣಗಳೇ ಸಾಕ್ಷಿ. ಅನಂತರ ಹುಟ್ಟಿದ ಸಾಹಿತ್ಯವೆಂದರೆ ಕಾವ್ಯಸಾಹಿತ್ಯವೇ. ಒಂದೆರಡು ಸ್ತೋತ್ರ ಗ್ರಂಥಗಳೂ ನೀತಿಗ್ರಂಥಗಳೂ ಇದ್ದರೂ ಅವು ಕಾವ್ಯಪ್ರಕಾರದಲ್ಲಿ ಅಳವಡತಕ್ಕವು.

ಈ ಕಾವ್ಯಗಳಲ್ಲಿ ವರ್ಣಿತವಾದ ಕಥಾವಸ್ತು ಸಹ ಸಂಸ್ಕೃತಸಾಹಿತ್ಯದಿಂದ ತೆಗೆದುಕೊಂಡದ್ದು. ಮಹಾಭಾರತ, ರಾಮಾಯಣ, ಭಾಗವತಗಳು ಕಥಾವಸ್ತುವಿನ ಆಕರಗ್ರಂಥಗಳು. ಸುಪ್ರಸಿದ್ಧರಾದ ಜೈನಕವಿಗಳಿಗೆ ವಿಶೇಷವಾಗಿ ಜೈನಪುರಾಣಗಳು. ಆ

ಪುರಾಣಗಳಲ್ಲಿ ಕೆಲವು ಸಂಸ್ಕೃತದಲ್ಲಿ, ಕೆಲವು ಪ್ರಾಕೃತದಲ್ಲಿ ರಚಿತವಾದವು. ವಿಖ್ಯಾತನಾದ ಕನ್ನಡದ ಆದಿಕವಿ ಪಂಪನ ವಿಕ್ರಮಾರ್ಜುನವಿಜಯವು ಮಹಾಭಾರತದ ಕಥೆ. ಆದಿಪುರಾಣವು ಜಿನಸೇನಾಚಾರ್ಯರಚಿತವಾಗಿ ಸಂಸ್ಕೃತಭಾಷೆಯಲ್ಲಿರುವ ಮಹಾಪುರಾಣದ ಕಥೆ. ಮಹಾಕಾವ್ಯಗಳಿರಲಿ, ದುರ್ಗಸಿಂಹನ ಪಂಚತಂತ್ರವೂ ಸಹ ಸಂಸ್ಕೃತ ಪಂಚತಂತ್ರದಿಂದ ಬಂದದ್ದು. ಪಂಪ, ಪೊನ್ನ, ರನ್ನ, ಅಗ್ಗಳ, ಜನ್ನ, ನಾಗಚಂದ್ರ –ಮುಂತಾದ ಜೈನಕವಿಗಳಿಂದಾದ ಕನ್ನಡ ಸಾಹಿತ್ಯಸೇವೆ ಪ್ರಶಂಸನೀಯವಾದದ್ದು. ಹಳಗನ್ನಡದಲ್ಲಿ ಸಾಕಷ್ಟು ಕಾವ್ಯಗಳೇನೋ ಹುಟ್ಟಿವೆ. ಕನ್ನಡಕ್ಕೆ ಹೆಮ್ಮೆಯನ್ನು ಗಳಿಸಿಕೊಟ್ಟಿವೆ. ಆದರೆ ಕನ್ನಡದ ಯಾವ ಆಕರಗ್ರಂಥವು ಇವುಗಳಿಗೆ ಕಥಾವಸ್ತುವನ್ನೊದಗಿಸಿತು?

ಕನ್ನಡದಲ್ಲಿ ಸ್ವೋಪಜ್ಞವಾದ ಯಾವ ಶಾಸ್ತ್ರವೂ ಉದಿಸಲಿಲ್ಲ. ಕಾವ್ಯೋಪಯೋಗಿಯಾದ ಅಲಂಕಾರಶಾಸ್ತ್ರವೂ ಹುಟ್ಟಲಿಲ್ಲ. ಕವಿರಾಜಮಾರ್ಗ, ರಸರತ್ನಾಕರ ಮೊದಲಾದ ಒಂದೆರಡು ಗ್ರಂಥಗಳಿದ್ದರೂ ಸಂಸ್ಕೃತದ ಅನುಕರಣೆ, ಭಾಷಾಂತರಗಳೆನ್ನಬಹುದು. ಅಲಂಕಾರ, ರಸ, ಭಾವ, ಉಪಮಾ, ಉತ್ಪ್ರೇಕ್ಷೆ, ಧ್ವನಿ ಮುಂತಾದ ಒಂದು ಶಬ್ದವೂ ಕನ್ನಡದ್ದಲ್ಲ. ಸಂಗೀತ, ನಾಟ್ಯ, ಶಿಲ್ಪ, ಜ್ಯೋತಿಷ, ವೈದ್ಯ –ಮುಂತಾದವುಗಳಲ್ಲಿ ಸಹ ಸಂಸ್ಕೃತದ ಪ್ರಭಾವವಿಲ್ಲದ ಕೃತಿ ಯಾವುದು? ವೀರಶೈವರ ವಚನಸಾಹಿತ್ಯವೂ ಸಹ ವೇದಾಂತಪ್ರಭಾವಿತವಾದದ್ದು.

ಇದೆಲ್ಲವನ್ನೂ ಇಲ್ಲಿ ಪ್ರಸ್ತಾವಿಸಿದ್ದೇಕೆಂದರೆ ಅಚ್ಚಗನ್ನಡವು ಸಂಸ್ಕೃತದ ನೆರವಿಲ್ಲದೆ ವಿಸ್ತೃತವಾಗಲಿಲ್ಲ. ವಿವಿಧ ಶಾಸ್ತ್ರಗಳೂ ಸಾಹಿತ್ಯದ ನಾನಾಮುಖಗಳೂ ವಿಚಾರಗಳೂ ಶೋಧನೆಗಳೂ ಒಂದು ಭಾಷೆಯಲ್ಲಿ ಸ್ವತಂತ್ರವಾಗಿ ನಡೆದರೆ ಮಾತ್ರ ಹೊಸ ಹೊಸ ಶಬ್ದಗಳೂ ಪ್ರಯೋಗವೈವಿಧ್ಯಗಳೂ ಆ ಭಾಷೆಯಲ್ಲಿ ಹುಟ್ಟಿಕೊಳ್ಳುತ್ತವೆ. ಏಕೆಂದರೆ, ಹೃದಯಗತವಾದ ಭಾವದ ಅಭಿವ್ಯಕ್ತಿಗೆ ಬೇರೆ ದಾರಿಯಿಲ್ಲದ್ದರಿಂದ ಆವಶ್ಯಕವಾದವೆಲ್ಲವನ್ನೂ ಆ ಭಾಷೆ ತಾನೇ ನಿರ್ಮಿಸಿಕೊಳ್ಳುತ್ತದೆ. ಸಾಲವು ಸಿಗದಾಗ ಮನುಷ್ಯನು ತಾನೇ ದುಡಿದು ಮನೆಯನ್ನು ಕಟ್ಟುತ್ತಾನೆ. ದುಡಿತಕ್ಕೆ ಬೇರೆ ಬೇರೆ ಮಾರ್ಗೋಪಾಯಗಳನ್ನಾಶ್ರಯಿಸಿ ಶ್ರಮಿಸುತ್ತಾನೆ. ಸಾಲವು ಧಾರಾಳವಾಗಿ ದೊರೆಯುತ್ತಿದ್ದರೆ ಸಾಹುಕಾರನು ಹಣವನ್ನು ಹಿಂದಿರುಗಿಸೆಂದು ಕೇಳದಿದ್ದಾಗ, ಯಾವನು ದುಡಿಯುವುದಕ್ಕೆ ಸ್ವತಃ ಪ್ರಯತ್ನಿಸುತ್ತಾನೆ? ಕನ್ನಡಕ್ಕಾದ ಪರಿಸ್ಥಿತಿ ಇದು. ಕನ್ನಡದ ಹರಹು ವಿಸ್ತಾರವಾಗಲೇ ಇಲ್ಲ.

ಇದರಿಂದ ಕನ್ನಡಿಗರಿಗೆ ಒಟ್ಟಿನಲ್ಲಿ ಉಪಕಾರವೇ ಆಯಿತು. ಯಥೇಷ್ಟವಾಗಿ ವಿಪುಲ ಶಬ್ದಗಳು ದೊರೆತವು. ಕನ್ನಡದ ಸ್ಥಿತಿಗತಿಗಳಿಗೆ ಸರಿಯಾಗಿ ಅವು ಹೊಂದಿಕೊಂಡವು. ಬರೆಯುವಾಗ, ಉಚ್ಚರಿಸುವಾಗ, ಪ್ರತ್ಯಯಗಳನ್ನು ಸೇರಿಸುವಾಗ, ಸಮಾಸದಲ್ಲಿ–ಸ್ತ್ರೀಪ್ರತ್ಯಯದಲ್ಲಿ, ಕೃದಂತದಲ್ಲಿ, ತದ್ಧಿತಾಂತದಲ್ಲಿ ಯಾವ ಹೊಸ ಸಮಸ್ಯೆಯನ್ನು ತಂದೊಡ್ಡಿದಾಗ, ಸಂಸ್ಕೃತಪದಗಳು ಕನ್ನಡಪದಗಳೊಡನೆ ತಾದಾತ್ಮ್ಯದಿಂದ ಸೇರಿ ಕನ್ನಡಪದಗಳೇ ಆಗಿಬಿಟ್ಟವು. ಸಂಸ್ಕೃತದಲ್ಲಿದ್ದ ಪ್ರಯೋಗವೈವಿಧ್ಯವನ್ನು

ಕನ್ನಡಕ್ಕೆ ಸೇರಿಸಿದವು. ಯಾವುದು ಕನ್ನಡದ ಮನೆಗೆ ಹೊಂದಿಕೊಳ್ಳಲಿಲ್ಲವೋ ಅದು ಬಿಟ್ಟುಹೋಯಿತು. ಭಾವೇ ಪ್ರಯೋಗವು ಹೊಂದಿಕೊಳ್ಳದೆ ದೂರ ಉಳಿಯಿತು. ಕರ್ಮಣಿಪ್ರಯೋಗವು ಉಳಿದುಕೊಂಡು ತನ್ನ ವ್ಯಾಪ್ತಿಯನ್ನು ಸಂಸ್ಕೃತಕೃದಂತಗಳೊಡನೆ ವಿಸ್ತರಿಸಿತು. ಕನ್ನಡಲ್ಲಿದ್ದ 'ಅಲ್ಪಡು' ಪ್ರಯೋಗವು ಸಂಕೋಚವಿಲ್ಲದೆ ಕ್ರಿಯಾ ಪದದೊಡನೆ ತಲೆಯೆತ್ತಿತು. ಸತಿಸಪ್ತಮಿಯೆಂಬ ಭಾವಲಕ್ಷಣಸಪ್ತಮಿಯು ಕನ್ನಡಕ್ಕೆ ಹೊಂದಿಕೊಳ್ಳಲಿಲ್ಲ. ಋಷಿ, ಋಣ, ಕೃಷ್ಣ, ಕೃಪೆ –ಮುಂತಾದ ಶಬ್ದಗಳಿಗಾಗಿ ಋಕಾರ ವನ್ನು ಕ್ಲ್ರಪ್ತ, ಕ್ಲ್ರಪ್ತಿ –ಎಂಬ ಪದಗಳನ್ನು ಗುರುತಿಸುವುದಕ್ಕಾಗಿ ಲೃ(ಌ) ಕಾರವನ್ನೂ ಕನ್ನಡವು ಸ್ವೀಕರಿಸಿತು. ಕನ್ನಡದಲ್ಲಿ ಐ, ಔ ಎಂಬ ಸ್ವರಗಳಿಲ್ಲವೆಂದು ಸಂಶೋಧಕರು ಹೇಳಿದ್ದಾರೆ. ಐದು, ಕೈದು –ಮುಂತಾದ ಶಬ್ದಗಳನ್ನು ಅಯ್ದು, ಕಯ್ದು ಎಂದು ಬರೆದರೆ ಇಷ್ಟಸಿದ್ಧಿಯಾಗುತ್ತದೆಯೆಂದು ಅವರ ಅಭಿಪ್ರಾಯವಿರಬಹುದು. ಔತಣ ವನ್ನು ಅವ್ತಣ ಎಂದು ಬರೆದರಾಯಿತು. ಐ–ಅಯ್‌ಗಳಿಗಾಗಲಿ, ಔ–ಅವ್‌ಗಳಿಗಾಗಲಿ ಇರುವ ಸೂಕ್ಷ್ಮವಾದ ಉಚ್ಚಾರಣಭೇದವನ್ನು ಗಮನಿಸಬೇಕಾದ್ದಿಲ್ಲ. ಐಶ್ವರ್ಯ, ಔದುಂಬರ ಮುಂತಾದ ಸಂಸ್ಕೃತಶಬ್ದಗಳನ್ನು ಬರೆಯುವುದಕ್ಕಾಗಿ ಐ ಔ ಎಂಬ ಲಿಪಿಗಳು ಕನ್ನಡದಲ್ಲಿ ಹುಟ್ಟಿಕೊಂಡವು ಎಂದು ಅವರ ಆಶಯ.

ಏ ಓಗಳು ಕನ್ನಡದಲ್ಲಿ ಸ್ವತಂತ್ರವಾದ ಅಕ್ಷರಗಳು. ಸಂಸ್ಕೃತದಲ್ಲಿ ಸಂಧ್ಯಕ್ಷರಗಳು ಎಂದು ಕೆಲವು ವಿದ್ವಾಂಸರ ಹೇಳಿಕೆಯುಂಟು. ದೇವ+ಇಂದ್ರ ಇವು ಸೇರಿ ದೇವೇಂದ್ರ ಎಂದು ಗುಣಸಂಧಿಯಾಗಿದೆ. ಅಕಾರ ಇಕಾರಗಳ ಸ್ಥಾನದಲ್ಲಿ ಏಕಾರ ಬಂದಿದೆ ಯಾದ್ದರಿಂದ ಅದು ಸಂಧ್ಯಕ್ಷರ ಎಂದು ಅಭಿಪ್ರಾಯ. ಅಲ್ಲಿಯೇ ದೇ ಎಂಬಲ್ಲಿರುವ ಏಕಾರವು ಯಾವ ಎರಡಕ್ಷರಗಳ ಸ್ಥಾನದಲ್ಲಿ ಬಂದಿದೆ? ಏಕ, ಕೇವಲ, ಪೇಲವ, ಮೇದುರ, ಮೇಘ –ಇತ್ಯಾದಿ ಸ್ಥಳಗಳಲ್ಲಿ ಏಕಾರವು ಹೇಗೆ ಸಂಧ್ಯಕ್ಷರವಾಯಿತು? ಏಧತೇ ಎಂಬಲ್ಲಿ ಧಾತುವಿನ ಏಕಾರವು ಸ್ವತಃ ಸಿದ್ಧವಾದದ್ದು. ಓಘ, ಓದನ –ಇತ್ಯಾದಿಪದಗಳಲ್ಲಿ ಓಕಾರವೂ ಸ್ವತಃಸಿದ್ಧವೇ. ಆ ವರ್ಣಗಳನ್ನು ಸಂಧ್ಯಕ್ಷರಗಳೆಂದು ಹೇಳುವುದು ಎರಡು ಅಕ್ಷರಗಳ ಸ್ಥಾನದಲ್ಲಿ ಬಂದದ್ದರಿಂದಲ್ಲ. ಎರಡು ಸ್ಥಾನಗಳಲ್ಲಿ ಹುಟ್ಟುವುದರಿಂದ ಬಂದದ್ದು ಏಕಾರದ ಸ್ಥಾನ ಕಂಠತಾಲು. ಏಕಾರದ ಪ್ರಥಮಾಂಶವು ಕಂಠದಲ್ಲಿಯೂ ದ್ವಿತೀಯಾಂಶವು ತಾಲುವಿನಲ್ಲಿಯೂ ಹುಟ್ಟುತ್ತದೆ. ಓಕಾರದ ಸ್ಥಾನ ಕಂಠೋಷ್ಠ. ಅದರ ಪ್ರಥಮಾಂಶವು ಕಂಠದಲ್ಲಿಯೂ ದ್ವಿತೀಯಾಂಶವು ಓಷ್ಠದಲ್ಲಿಯೂ ಹುಟ್ಟುತ್ತದೆ –ಎಂದು ಶಿಕ್ಷಾಶಾಸ್ತ್ರವು ಹೇಳುತ್ತದೆ. ಕನ್ನಡದ ಏಕಾರ ಓಕಾರಗಳೂ ಹಾಗೆಯೇ ಹುಟ್ಟುತ್ತವೆ. ಸಂಸ್ಕೃತದವರು ನೇತ್ರದಿಂದ ನೋಡಿದರೆ, ಕನ್ನಡದವರು ಕಣ್ಣಿಂದ ನೋಡುತ್ತಾರೆ! ಇಷ್ಟೇ ಭೇದ.

ಅಕ್ಷರಮಾಲೆ

ಇದಕ್ಕೆ ವರ್ಣಮಾಲೆಯೆಂದೂ ಹೆಸರಿದೆ. ಇದರ ರಚನೆ ಬಹುಪ್ರಾಚೀನ ವಾದದ್ದು. ಕೇಶಿರಾಜನು–

ವರ್ಣಂಗಳ ಪಾಠಕ್ರಮ

ವರ್ಣವವ್ಯತ ಧಾತ್ರಿಯೊಳ್ ಪ್ರಸಿದ್ಧಂ ನಿಜದಿಂ ।

ಎಂದಿದ್ದಾನೆ (ಸೂ. ೧೪). ಭಟ್ಟಾಕಳಂಕನು 'ಸಿದ್ಧಾ ಹಿ ಶುದ್ಧಕಾಃ' ಎಂದು ಆದಿಯಲ್ಲಿಯೇ ಸೂತ್ರಿಸಿ, ಈ ವರ್ಣಮಾಲೆಯು ಹಿಂದಿನಿಂದಲೇ ಸಿದ್ಧವಾಗಿ ಬಂದಿದೆ ಎಂದು ತಿಳಿಸಿದ್ದಾನೆ. ಸಿದ್ಧಶಬ್ದಕ್ಕೆ ನಿತ್ಯವಾದದ್ದು ಎಂಬ ಅರ್ಥವೂ ಉಂಟು, ಋಕ್‌ತಂತ್ರವ್ಯಾಕರಣದಲ್ಲಿ ಶಾಕಟಾಯನನು ಈ ಅಕ್ಷರಮಾಲೆಯನ್ನು 'ಅಕ್ಷರಚ್ಛಂದಸ್' ಎಂದು ಕರೆದಿದ್ದಾನೆ. ಅಕ್ಷರವೇದ ಎಂದು ಅದರ ಅರ್ಥ. "ಇದಮಕ್ಷರಚ್ಛಂದೋ ವರ್ಣಶಃ ಸಮನುಕ್ರಾಂತಂ ಯಥಾಚಾರ್ಯಾ ಊಚುಃ ಬ್ರಹ್ಮಾ ಬೃಹಸ್ಪತಯೇ ಪ್ರೋವಾಚ ಬೃಹಸ್ಪತಿರಿಂದ್ರಾಯ................." ಇತ್ಯಾದಿಯಾಗಿ ಹೇಳಿ ಬ್ರಹ್ಮನಿಂದಲೇ ಇದು ಉಪದಿಷ್ಟವಾಯಿತೆಂದು, ಶಾಕಟಾಯನನು ಹೇಳುತ್ತಾನೆ. ಪಾಣಿನಿಯು ಪ್ರತ್ಯಾಹಾರಸೂತ್ರರಚನೆಗಾಗಿ '**ಅ ಇ ಉಣ್**' ಇತ್ಯಾದಿ ಸೂತ್ರಗಳನ್ನು ಬಳಸಿ ಈ ವರ್ಣಗಳ ಆನುಪೂರ್ವಿಯನ್ನು ಸ್ವಲ್ಪ ವ್ಯತ್ಯಾಸವಾಗಿ ವ್ಯವಹರಿಸುತ್ತಾನೆ. ಭರ್ತೃಹರಿಯು ವಾಕ್ಯಪದೀಯದಲ್ಲಿ– "ಈ ವರ್ಣಮಾಲೆಯನ್ನು ಯಾವ ಆಧುನಿಕನೂ ರಚಿಸಿಲ್ಲ. 'ವೇದಪಾರಂಪರ್ಯೇಣ ಸ್ಮರ್ಯಮಾಣಂ'– ಪರಂಪರೆಯಿಂದ ವೇದವು ಬಂದಂತೆ ಸ್ಮರಣೆಯಿಂದ ಇದು ಬರುತ್ತಾ ಇದೆ." –ಎಂದಿದ್ದಾನೆ.

ಈ ಅಕ್ಷರಮಾಲೆಯಲ್ಲಿ ಅಕ್ಷರಗಳ ವ್ಯವಸ್ಥಿತವಾದ ವಿಭಜನಾರೀತಿಯನ್ನು ನೋಡಿದರೆ ಅಚ್ಚರಿಯಾಗುತ್ತದೆ. ಮೊದಲು ಎಲ್ಲ ಸ್ವರಗಳ ಒಂದು ಗುಂಪು. ಆಮೇಲೆ ಕವರ್ಗ, ಚವರ್ಗ –ಮೊದಲಾದ ಐದು ವರ್ಗಗಳಿಗೆ ಸೇರಿದ ಇಪ್ಪತ್ತೈದು ಅಕ್ಷರಗಳು. ಅನಂತರ ಈ ವರ್ಗಗಳಿಗೆ ಸೇರಿಸಲಾಗದ ಅವರ್ಗೀಯ ವ್ಯಂಜನಗಳು. ಅವುಗಳಲ್ಲಿಯೂ ಮೊದಲು ಸ್ವರಸ್ಥಾನದಲ್ಲಿ ಬರುವ ಯ, ರ, ಲ, ವಗಳೆಂಬ ಅಂತಃಸ್ಥಗಳು. ಕಡೆಯಲ್ಲಿ ಊಷ್ಮಗಳಾದ ಶ, ಷ, ಸ, ಹಗಳು.

ಅಕ್ಷರಗಳೆಲ್ಲವೂ ಬಾಯಿಯಲ್ಲಿ ಹುಟ್ಟುತ್ತವೆಯಷ್ಟೆ. ಬಾಯಿಯಲ್ಲಿಯೂ ಕಂಠ, ತಾಲು, ಮೂರ್ಧಾ, ದಂತ, ಓಷ್ಠ ಎಂಬ ಅಂತರ್ಭೇದವುಳ್ಳ ಸ್ಥಾನಗಳಲ್ಲಿ ಹುಟ್ಟುತ್ತವೆ. ಈ ಸ್ಥಾನಾನುರೋಧವಾಗಿ ಅಕ್ಷರಗಳಿಗೂ ಬೇರೆಬೇರೆ ಸ್ಥಾನ. ಕಂಠದ ಬುಡದಲ್ಲಿ ಹುಟ್ಟುವ ಅಕಾರಕ್ಕೆ ಮೊದಲ ಸ್ಥಾನ. ಆಕಾರವೂ ಇದಕ್ಕೆ ಸೇರಿದ್ದು. ಈ ಅಕಾರಗಳು ಕಂಠ್ಯಸ್ಥಾನಗಳು. ಆಮೇಲೆ ಇಕಾರ ಬರುತ್ತದೆ. ಇದು ತಾಲವ್ಯ.

ಉಕಾರವು ಓಷ್ಠ್ಯ. ಅನಂತರ ಋ ಲೃ (ಌ) ಬರುತ್ತವೆ. ಏಕೆಂದರೆ, ಇವು ವ್ಯಂಜ ನಾಂಶಗಳನ್ನೊಳಗೊಂಡ ಸ್ವರಗಳು. ಅವುಗಳಲ್ಲಿಯೂ ಮೊದಲು ಮೂರ್ಧನ್ಯವಾದ ಋಕಾರ ಅನಂತರ ದಂತ್ಯವಾದ ಲೃ(ಌ)ಕಾರ. ಅನಂತರ ಸ್ಥಾನದ್ವಯದಲ್ಲಿ ನಿಷ್ಪನ್ನವಾಗುವ ಏಕಾರಾದಿಗಳು. ಆಮೇಲೆ ಸ್ವರ, ವ್ಯಂಜನಗಳೆರಡಕ್ಕೂ ಸೇರುವ ಅನುಸ್ವಾರವಿಸರ್ಗಗಳು.

ಅನಂತರ ವ್ಯಂಜನಗಳು. ಅವುಗಳಲ್ಲಿಯೂ ಮೊದಲು ಕಂಠ್ಯವಾದ ಕವರ್ಗ. ಆಮೇಲೆ ತಾಲವ್ಯವಾದ ಚವರ್ಗ –ಇತ್ಯಾದಿ. ಒಂದೊಂದು ವರ್ಗದಲ್ಲಿಯೂ

ಕರ್ಕಶವರ್ಣಗಳೆನಿಸಿದ ಕ, ಖ, ಚ, ಛ –ಇತ್ಯಾದಿ ವರ್ಣದ್ವಯಗಳು ಮೊದಲು. ಆಮೇಲೆ ಗ, ಘ –ಇತ್ಯಾದಿ ಮೃದುವರ್ಣದ್ವಂದ್ವ. ಅನಂತರ ಆಯಾವರ್ಗಕ್ಕೆ ಸೇರಿದ ಅನುನಾಸಿಕ. ಹೀಗೆಯೇ ಅವರ್ಗೀಯಗಳಲ್ಲಿಯೂ ವ್ಯವಸ್ಥೆ ಇದೆ. ಅಲ್ಲದೆ ಎಲ್ಲ ಅಕ್ಷರಗಳನ್ನು ನಾವು ಉಚ್ಚರಿಸಲು ಮಾಡಬೇಕಾದ ಪ್ರಯತ್ನಗಳಿವೆ. ಇವುಗಳಲ್ಲಿ ಆಭ್ಯಂತರ, ಬಾಹ್ಯ ಎಂದು ಎರಡು ವಿಭಾಗ. ಆಭ್ಯಂತರಪ್ರಯತ್ನಗಳು ಈಷತ್ ಸ್ಪೃಷ್ಟ, ಸ್ಪೃಷ್ಟ, ವಿವೃತ, ಸಂವೃತ –ಎಂದು ನಾಲ್ಕು ವಿಧ. ಬಾಹ್ಯಪ್ರಯತ್ನ ಹನ್ನೊಂದು ವಿಧ. ಅಲ್ಪಪ್ರಾಣ, ಮಹಾಪ್ರಾಣ ಎಂಬ ಇನ್ನೊಂದು ವಿಭಾಗ. ಉಚ್ಚರಿಸುವಾಗ ಹೆಚ್ಚು ಉಸಿರನ್ನು ಬಯಸುವ ಶ, ಷ, ಸ, ಹ ಗಳು ಊಷ್ಮವರ್ಣಗಳು. ಇವು ಅಕ್ಷರಮಾಲೆಯ ಕಡೆಯಲ್ಲಿ ಬರುತ್ತವೆ. ಹ್ರಸ್ವ, ದೀರ್ಘ, ಪ್ಲುತಗಳೆಂಬ ಸ್ವರಭೇದಗಳು. ಹೀಗೆ ಅಕ್ಷರಮಾಲೆಯನ್ನು ಸಹ ಎಷ್ಟು ವೈಜ್ಞಾನಿಕ ವಾಗಿ, ಕ್ರಮವಿಶಿಷ್ಟವಾಗಿ ವಿಂಗಡಿಸಿದ್ದಾರೆಂಬುದನ್ನು ಗಮನಿಸಬಹುದು. ಈ ಅಕ್ಷರಮಾಲೆಯು ಕನ್ನಡಕ್ಕೆ ಸಂಸ್ಕೃತವು ನೀಡಿದ ಕಾಣಿಕೆ.

ಈಗ ಸಂಸ್ಕೃತದಲ್ಲಿ ಬಳಸುವ ದೇವನಾಗರೀಲಿಪಿಯು ಬ್ರಾಹ್ಮೀಲಿಪಿಯಿಂದ ಆವಿಷ್ಕೃತವಾದದ್ದು. ಅದು ಹೇಗೆ ಈ ಕ್ರಮದಲ್ಲಿ ರೂಪಾಂತರಗೊಳ್ಳುತ್ತ ಬಂದಿತೋ ಹಾಗೆಯೇ ಸಂಸ್ಕೃತಲಿಪಿಯನ್ನನುಸರಿಸಿ ಕನ್ನಡನಾಡಿನಲ್ಲಿ ಕನ್ನಡಲಿಪಿಯೂ ಆಂಧ್ರದಲ್ಲಿ ತೆಲುಗುಲಿಪಿಯೂ ರೂಪಾಂತರಗೊಳ್ಳುತ್ತ ಈಗಿರುವ ಸ್ಥಿತಿಯನ್ನು ಮುಟ್ಟಿವೆ ಯೆಂಬುದನ್ನು ಡಾ। ಎಸ್. ಶ್ರೀಕಂಠಶಾಸ್ತ್ರಿಗಳು 'ಭಾರತೀಯ ಸಂಸ್ಕೃತಿ' ಎಂಬ ಗ್ರಂಥದಲ್ಲಿ ಶಾಸನಪ್ರಮಾಣಸಹಿತವಾಗಿ ತೋರಿಸಿಕೊಟ್ಟಿದ್ದಾರೆ (ಪುಟ ೨೭೩–೨೭೮). ಕನ್ನಡವು ದೀರ್ಘಕಾಲದಿಂದ ಸಂಸ್ಕೃತಸಾಹಿತ್ಯದೊಂದಿಗೆ ಸೇರಿ ಬೆಳೆದುದರಿಂದ, ಕನ್ನಡದಲ್ಲಿ ಸಂಸ್ಕೃತಪದಗಳನ್ನು ಬರೆಯುವುದು ಅನಿವಾರ್ಯವಾಯಿತು. ಆದ್ದರಿಂದ ಕನ್ನಡದ ವೈಯಾಕರಣರು ವ್ಯವಸ್ಥಿತವಾಗಿದ್ದ ಸಂಸ್ಕೃತವರ್ಣಮಾಲೆಯನ್ನೇ ಸ್ವೀಕರಿಸಿ ದರು.* ಕನ್ನಡಕ್ಕೆ ಬೇಕಾದ್ದರಿಂದ ಹ್ರಸ್ವ ಎ, ಹ್ರಸ್ವ ಒಗಳನ್ನೂ ರಳ, ಶಕಟರೇಫಗಳನ್ನೂ ಸೇರಿಸಿಕೊಂಡರು. ರಳ = ೞ, ಶಕಟರೇಫ = ಱ. ಈಗ ರಳ ಶಕಟರೇಫಗಳೂ ಇಲ್ಲ.

ಅಪಭ್ರಂಶಪ್ರಕರಣದಲ್ಲಿ ಕೇಶಿರಾಜನು ಸಂಸ್ಕೃತದಿಂದ ಕನ್ನಡಕ್ಕೆ ಬಂದ ತದ್ಭವ ಗಳ ಪಟ್ಟಿಯನ್ನು ಕೊಟ್ಟಿದ್ದಾನೆ. ಇವು ಕೇಶಿರಾಜನಿಗಿಂತ ಪೂರ್ವದಲ್ಲಿಯೇ ರೂಢಿಗೆ ಬಂದಿದ್ದ ವಿಕೃತರೂಪಗಳು. ಆ ಶಬ್ದಗಳೂ ಸಹ ಕನ್ನಡದಲ್ಲಿ ಪಳಗಿಹೋಗಿದ್ದುದರಿಂದ ಮಹಾಕವಿಗಳೂ ಅವನ್ನು ಬಳಸಿದರು. ಕಾವ್ಯಗಳು ಬೆಳೆದು ಒಂದು ಅಭಿಜಾತ ಸಾಹಿತ್ಯದ ನಿರ್ಮಾಣವಾದ ಮೇಲೆ ಸಂಸ್ಕೃತಪದಗಳು ಅಪಭ್ರಂಶಗಳಾಗದೆ ಸ್ವಸ್ವರೂಪದಲ್ಲಿಯೇ ಉಳಿದುಕೊಂಡವು. ವ್ಯಂಜನಾಂತಶಬ್ದಗಳು ಕನ್ನಡ ವಿಭಕ್ತಿ ಪ್ರತ್ಯಯಗಳಿಗೆ ಹೊಂದಿಕೊಳ್ಳುವುದಕ್ಕಾಗಿ ಕೆಲವೇ ವಿಕಾರಗಳನ್ನು ಪಡೆದು ಅಕಾರಾಂತಗಳೋ ಉಕಾರಾಂತಗಳೋ ಆದವೆಂದು ತರ್ಕಿಸಬಹುದು. ಉದಾ:

---

* ಕನ್ನಡದ ವರ್ಣಮಾಲೆ –ಇ ಈ ಎ ಏ –ಉ ಊ ಒ ಓ ಅ ಆ ಹೀಗಿರಬೇಕೆಂದು ಆಧುನಿಕ ಭಾಷಾಶಾಸ್ತ್ರಜ್ಞರ ಅಭಿಮತ (ನೋಡಿ: ಶ್ರೀ ಡಿ. ಎನ್. ಶಂಕರಭಟ್ಟರ 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ.')

ವಿದ್ವಾಂಸ, ದಿವಿಷದ, ಮರುತ್ತು, ವಿಶ್ರವಸ್ಸು. ಕೇಶಿರಾಜನು ಅಪಭ್ರಂಶಗಳೆಂದು ಉದಾಹರಿಸುವ ಶಬ್ದಗಳನ್ನು ಪರೀಕ್ಷಿಸಿದರೆ, ಅವು ಗ್ರಾಮ್ಯಜನರ ಬಾಯಲ್ಲಿ ಸಿಕ್ಕಿ ಬಹುಕಾಲದಿಂದ ನರಳಿ ನಾನಾವಿಕಾರಗಳನ್ನು ಪಡೆಯುತ್ತಾ ಹೋದವುಗಳೆಂದು ಸ್ಪಷ್ಟವಾಗುತ್ತದೆ. ಉದಾಹರಣೆ–

ಸಂಸ್ಕೃತ – ಸಕ್ಕದ
ಮರೀಚ – ಮೆಳಸು
ವೃಷಭ – ಬಸವ
ಪದ್ಧತಿ – ಪಜ್ಜ – ಹಜ್ಜೆ
ಕೂಷ್ಮಾಂಡ – ಕುಂಬಳ

ಈ ಬಗೆಯ ಬದಲಾವಣೆಗೆ ನೂರಾರು ವರ್ಷಗಳೇ ಬೇಕಾಗುತ್ತವೆ. ಕನ್ನಡವು ಕೇವಲ ಆಡುನುಡಿಯಾಗಿದ್ದಾಗ ಆದ ಬದಲಾವಣೆಗಳು ಇವು. ಈ ಪ್ರಕ್ರಿಯೆಯು ಮುಗಿದು ಉತ್ತಮಕಾವ್ಯಗಳು ಹುಟ್ಟಲಾರಂಭಿಸಿದ ಮೇಲೆ ಬಹುಶಃ ಸಂಸ್ಕೃತವು ತದ್ಭವರೂಪದಿಂದ ಕನ್ನಡವನ್ನು ಪ್ರವೇಶಿಸುವುದು ನಿಂತುಹೋಗಿರಬೇಕು. ಆದರೆ ಕನ್ನಡಶೈಲಿಗೆ ಹೊಂದಿಕೊಳ್ಳುವ ಸಂಸ್ಕೃತಶಬ್ದಗಳು ಸ್ವಸ್ವರೂಪದಿಂದ ಪ್ರವೇಶಿಸುತ್ತಲೇ ಇದ್ದವು. ಸಾಮಾನ್ಯವಾಗಿ ಉಚ್ಚೈಃ, ನೀಚೈಃ, ಸಮ್ಯಕ್, ಮುಹುಃ, ಇತಸ್ತತಃ –ಮುಂತಾದ ಅವ್ಯಯಗಳು ಸ್ವತಃ ಕನ್ನಡಕ್ಕೆ ಹೊಂದಿಕೊಳ್ಳಲಿಲ್ಲ. ಸಮಾಸದಲ್ಲಿ– ಬಹಿರುದ್ಯಾನ, ಮುಹುರಾಗತ, ಉಚ್ಚೈರ್ಧ್ವಾನ ಮುಂತಾದವುಗಳ ಸೇರ್ಪಡೆಗೆ ಬಾಧೆ ಇರಲಿಲ್ಲ. ಅವು ಸೇರಿದರೆ, 'ಸೊಗಯಿಸುಗುಂ ಕಾವ್ಯಬಂಧಮೆಂದುಮನಿಂದ್ಯಂ' ಎಂದು ಕವಿರಾಜಮಾರ್ಗ ಹೊಗಳಿದೆ. (೧–೫೭).

ನೃಪತುಂಗನಿಗಿಂತ ಪೂರ್ವದಲ್ಲಿಯೇ ಕನ್ನಡದಲ್ಲಿ ವ್ಯಾಕರಣಶಾಸ್ತ್ರವು ಹುಟ್ಟಿರ ಬಹುದು. ಆರು ಕಾರಕಗಳೂ ಏಳು ವಿಭಕ್ತಿಗಳೂ ಕನ್ನಡದಲ್ಲಿವೆಯೆಂದೂ ವಿದ್ವಾಂಸರು ಅಂಗೀಕರಿಸಿದ್ದರೆಂದೂ ಕವಿರಾಜಮಾರ್ಗದ ಈ ಪದ್ಯದಿಂದ ಗೊತ್ತಾಗುತ್ತದೆ.

ಕಾರಕಮಾರು ಕರ್ಮಕರಣಾದಿಕದಿಂ ಪ್ರಥಮಾದಿಭೇದನಿ–
ರ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇಳೆನಿಕ್ಕುಂ ॥ – (೧–೧೪)

ದಿ| ಶ್ರೀ ಮುಳಿಯ ತಿಮ್ಮಪ್ಪಯ್ಯನವರು ತಮ್ಮ ಕವಿರಾಜಮಾರ್ಗವಿವೇಕದಲ್ಲಿ "ಆರು ಕಾರಕಗಳು, ಏಳು ವಿಭಕ್ತಿಗಳು. ಇದೇನಾಶ್ಚರ್ಯ!"ವೆಂದು ವಿಸ್ಮಿತರಾಗಿ ಕರ್ತೃವಾಚಿಯಾದ ಪ್ರಥಮಾವಿಭಕ್ತಿಯು ಕನ್ನಡದಲ್ಲಿ ಕಾರಕವಲ್ಲವೆಂದು ವಿಚಿತ್ರ ಸಿದ್ಧಾಂತವನ್ನು ಮಂಡಿಸಿದ್ದಾರೆ. ವಿಭಕ್ತಿಗಳು ಏಳಿರಲಿ, ಎಪ್ಪತ್ತಿರಲಿ –ಕಾರಕಗಳು ಆರೇ ಎಂಬುದನ್ನೇ ಈ ಪ್ರಬಂಧದಲ್ಲಿ ತೋರಿಸಿದ್ದೇನೆ.

ಕನ್ನಡದಲ್ಲಿ ಸಂಸ್ಕೃತದಲ್ಲಿರುವಂತೆಯೇ ಕಾರಕ – ವಿಭಕ್ತಿ ಎಂಬ ಎರಡು ಪ್ರಬಲ ವಾದ ಅಂಶಗಳು ಭಾಷಾಸ್ವರೂಪದ ವಿವೇಚನೆಗೆ ಮತ್ತು ಶಬ್ದಸಾಧುತ್ವದ ನಿಷ್ಕರ್ಷೆಗೆ ಆವಶ್ಯಕಗಳೆಂಬುದು ಕನ್ನಡ ವೈಯಾಕರಣರಿಗೆ ಸಂಮತವಾಗಿತ್ತೆಂದು ಇದರಿಂದ ಸ್ಪಷ್ಟವಾಗುತ್ತದೆ. ಈ ಪರಿಸ್ಥಿತಿಯಲ್ಲಿ ನಾಗವರ್ಮನೂ ಕೇಶಿರಾಜನೂ ಸಂಸ್ಕೃತ

ವ್ಯಾಕರಣದ ಮೇಲ್ಪಂಕ್ತಿಯನ್ನು ಅನುಸರಿಸುವುದು ಅನಿವಾರ್ಯವಾಯಿತು. ಏಕೆಂದರೆ, ಯಾವ ಕನ್ನಡಿಗನೂ ಕನ್ನಡಕ್ಕಾಗಿ ಅಚ್ಚ ಕನ್ನಡದಲ್ಲಿ ಸ್ವೋಪಜ್ಞವಾದ ವ್ಯಾಕರಣವನ್ನು ರಚಿಸಿಯೇ ಇರಲಿಲ್ಲ. ನಮಗೆ ತಿಳಿದಂತೆ ನಾಗವರ್ಮನೇ ಕನ್ನಡಕ್ಕೊಂದು ವ್ಯಾಕರಣ ಬೇಕೆಂದು ಅದನ್ನು ರಚಿಸುವ ಸಾಹಸಕ್ಕೆ ಕೈಹಾಕಿದ ಪ್ರಥಮ ವಿದ್ವಾಂಸನಾಗಿದ್ದಾನೆ. ಕವಿರಾಜಮಾರ್ಗಕಾರನು ಅಲಂಕಾರಶಾಸ್ತ್ರಕ್ಕಾಗಿ ಹೇಗೆ ದಂಡಿಭಾಮಹಾದಿಗಳನ್ನು ಅನುಸರಿಸಿದನೋ ಹಾಗೆ ನಾಗವರ್ಮನು ಪಾಣಿನಿಶಾಕಟಾಯನಾದಿಗಳನ್ನು ವ್ಯಾಕರಣ ಶಾಸ್ತ್ರಕ್ಕಾಗಿ ಅನುಸರಿಸಿದನು.

'ವ್ಯಾಕರಣ' ಎಂಬ ಶಬ್ದಕ್ಕೆ ಕನ್ನಡದಲ್ಲಿ ಒಂದು ಪರ್ಯಾಯನಾಮವನ್ನು ನಾವು ಕಾಣೆವು. ಅ ಆ ಇ ಈ ಮುಂತಾದ ಅಕ್ಷರಗಳು ಸಹ ಸ್ವೋಪಜ್ಞವಾದವಲ್ಲ. ವ್ಯಾಕರಣದಲ್ಲಿ ಬಳಸುವ ಹ್ರಸ್ವ, ದೀರ್ಘ, ಸ್ವರ, ವ್ಯಂಜನ, ಕವರ್ಗಪವರ್ಗಾದಿಗಳು, ಸಂಜ್ಞೆ, ಸಂಧಿ, ಸಮಾಸ, ಪ್ರಾತಿಪದಿಕ, ಪ್ರತ್ಯಯ, ಧಾತು, ಸ್ತ್ರೀಪ್ರತ್ಯಯ, ವಚನ, ವಿಭಕ್ತಿ, ಲಿಂಗ, ವರ್ತಮಾನ, ಭೂತ, ಭವಿಷ್ಯತ್ಕಾಲ, ಪ್ರಥಮಪುರುಷ, ಮಧ್ಯಮ ಪುರುಷ, ಉತ್ತಮಪುರುಷ, ಲೋಪ, ಆಗಮ, ಆದೇಶ – ಈ ಅರ್ಥವನ್ನೀಯುವ ಒಂದು ಪದವೂ ಕನ್ನಡದಲ್ಲಿ ನಮಗೆ ದೊರಕಿಲ್ಲ. ಮಣ್ಣು, ಇಟ್ಟಿಗೆ, ಮರ, ನೀರು, ಗುದ್ದಲಿ, ಪಿಕಾಶಿ –ಮುಂತಾದ ಯಾವ ಸಾಮಗ್ರಿಯೂ ಇಲ್ಲದೆ ಮನೆ ಕಟ್ಟುವ ಬಗೆಯಾದರೂ ಯಾವುದು? ಹೀಗಿರುವಾಗ ನಾಗವರ್ಮಾದಿಗಳು ವ್ಯಾಕರಣರಚನೆಗೆ ಸಂಸ್ಕೃತವ್ಯಾಕರಣವನ್ನನುಸರಿಸಿ ತಪ್ಪುಮಾಡಿದರೆಂಬುದು ಅರ್ಥಶೂನ್ಯವಾದ ಪ್ರಲಾಪವೇ ಸರಿ.

ಸಂಸ್ಕೃತಪದಗಳಿಂದ ಮೆಯ್ದುಂಬಿದ ಕನ್ನಡಕ್ಕೆ ಸಂಸ್ಕೃತವ್ಯಾಕರಣವು ಆದರ್ಶ ವಾದದ್ದು ಅಚ್ಚರಿಯೂ ಅಲ್ಲ. ಕನ್ನಡವೂ ಸಂಸ್ಕೃತದಂತೆ ಪ್ರತ್ಯಯಪ್ರಧಾನವಾದ ಭಾಷೆ. ನಾಮಪದಗಳೂ ಕ್ರಿಯಾಪದಗಳೂ ಬೇರೆಬೇರೆ ಪ್ರತ್ಯಯಗಳಿಂದಲೇ ಘಟಿತವಾದವುಗಳು. ಕನ್ನಡದಲ್ಲಿಯೂ ಲೋಪ, ಆಗಮ, ಆದೇಶಗಳೆಂಬ ಸಂಧಿ ಗಳುಂಟು. ವಿಭಕ್ತಿಗಳುಂಟು. ಸ್ತ್ರೀಪ್ರತ್ಯಯಗಳೂ ಸಮಾಸಭೇದಗಳೂ ಇವೆ. ಕೃತ್ತದ್ಧಿತ ಪ್ರತ್ಯಯಗಳಿವೆ. ಧಾತುಗಳಿಗೆ ಕಾಲತ್ರಯದಲ್ಲಿ ಸೇರುವ ಆಖ್ಯಾತಪ್ರತ್ಯಯಗಳಿವೆ. ಸಂಸ್ಕೃತದಲ್ಲಿರುವಂತೆಯೇ ಧಾತುವಿಗೆ ಪ್ರೇರಣಾರ್ಥಕರೂಪವಿದೆ. ವರ್ಣಗಳ ಉಚ್ಚಾರಣವಿಧಾನವೂ ಸಂಸ್ಕೃತದಂತೆ. ಅವುಗಳ ಸ್ಥಾನಪ್ರಯತ್ನಗಳೂ ಸಮಾನ.

ಈ ಬಗೆಯ ಸಾದೃಶ್ಯವಿರುವುದರಿಂದಲೇ ಸಂಸ್ಕೃತವ್ಯಾಕರಣದ ಸಂಧಿಸಮಾಸ ಪ್ರತ್ಯಯಾದಿಸಂಜ್ಞೆಗಳನ್ನು ಬಳಸಿಕೊಂಡು ಕನ್ನಡವ್ಯಾಕರಣವನ್ನು ರಚಿಸುವುದು ಸಹಜವೂ ಆಯಿತು. ಸುಲಭವೂ ಆಯಿತು. ಅಲ್ಲದೆ ದೇವೇಂದ್ರ, ಗೌರೀಶ, ಮಹರ್ಷಿ –ಮುಂತಾದ ಸಂಸ್ಕೃತಪದಗಳ ಸಂಧಿಸಮಾಸಾದಿಗಳನ್ನು ಹೇಳುವುದು ಕನ್ನಡ ವೈಯಾಕರಣರಿಗೆ ಅನಿವಾರ್ಯವಾಗಿತ್ತು. ಎಲ್ಲೆಲ್ಲಿ ಕನ್ನಡಪದಗಳ ಸಂಧಿಕಾರ್ಯ ಪ್ರತ್ಯಯಾದಿಗಳಲ್ಲಿ ವೈಲಕ್ಷಣ್ಯ ಉಂಟೋ ಅದನ್ನು ಕನ್ನಡವ್ಯಾಕರಣವು ತಿಳಿಸುತ್ತಲೇ ಹೋಗಿದೆ. ಈ ವೈಯಾಕರಣರು ಅನುಸರಿಸಿರುವುದು ಸಮೀಚೀನವಾದ ಮಾರ್ಗ

ವೆಂಬುದರಲ್ಲಿ ಸಂದೇಹವಿಲ್ಲ. ಇದನ್ನು ಉಲ್ಲಂಘಿಸಿ ಇನ್ನೊಂದು ದಾರಿಯನ್ನು ಹಿಡಿಯುವುದು ಶಕ್ಯವೂ ಇರಲಿಲ್ಲ. ಇದೆಲ್ಲವನ್ನೂ ತ್ಯಜಿಸಿ 'ಕನ್ನಡದ್ದೇ ವ್ಯಾಕರಣ' ವನ್ನು ಬರೆಯುವುದು ಹೇಗೆಂಬುದು ನಮ್ಮ ಊಹೆಗೂ ನಿಲುಕುವುದಿಲ್ಲ.

ವ್ಯಾಕರಣಶಾಸ್ತ್ರದಿಂದಾಗಬೇಕಾದ ಪ್ರಯೋಜನವಾದರೂ ಯಾವುದು? ಶಬ್ದಾಪಶಬ್ದವಿವೇಕ, ಭಾಷಾಸ್ವರೂಪರಕ್ಷಣೆ ಇವೆರಡು ವ್ಯಾಕರಣದಿಂದಾಗುವ ಮುಖ್ಯ ಪ್ರಯೋಜನಗಳು. ನಾವು ಮನೆಯಲ್ಲಾಡುವ ಭಾಷೆಯನ್ನೂ ಅನಕ್ಷರಸ್ಥರಾದ ಗ್ರಾಮೀಣರು ಬಳಸುವ ಶಬ್ದಗಳನ್ನೂ ವಿದ್ವತ್ಸಭೆಯಲ್ಲಾಗಲಿ ಗ್ರಂಥರಚನೆಯಲ್ಲಾಗಲಿ ಬಳಸುವುದಿಲ್ಲ. ಬಳಸುವುದು ಶಿಷ್ಟಸಂಮತವೂ ಅಲ್ಲ. ಇದು ಸರ್ವದೇಶದಲ್ಲಿಯೂ ಸರ್ವಭಾಷೆಯಲ್ಲಿಯೂ ಮಾನ್ಯವಾದ ಪದ್ಧತಿ. ಹೀಗಿರುವಾಗ ಯಾವಶಬ್ದವು ಸಾಧು-ಶಿಷ್ಟಸಂಮತವಾದದ್ದು ಎಂಬುದನ್ನೂ ಯಾವುದು ಅಪಶಬ್ದ, ಗ್ರಂಥರಚನೆಯಲ್ಲಿ ಬಳಸತಕ್ಕದ್ದಲ್ಲ ಎಂಬುದನ್ನೂ ತಿಳಿದು ಶಬ್ದಾಪಶಬ್ದವಿವೇಕವನ್ನು ಗಳಿಸುವುದು ಪ್ರಥಮಪ್ರಯೋಜನ. ಈ ವಿವೇಕದಿಂದ ವ್ಯಾಕರಣಶಾಸಿತಶಬ್ದಗಳನ್ನೇ ಬರೆಹಗಾರರು ಬಳಸುತ್ತಾಹೋದಾಗ ಭಾಷಾಸ್ವರೂಪವು ಒಂದೇ ರೀತಿಯಲ್ಲಿ ಉಳಿದು ಅದರ ರಕ್ಷಣೆ ತಾನಾಗಿ ಆಗುತ್ತದೆ. ಭಾಷಾಸ್ವರೂಪವನ್ನು ಕೆಡಿಸದೆ ಉಳಿಸಿಕೊಂಡು ಹೋಗುವುದು ಅತ್ಯಾವಶ್ಯಕ. ಇಲ್ಲದಿದ್ದರೆ ನಾಮಪದಗಳೂ ಕ್ರಿಯಾಪದಗಳೂ ಅವ್ಯಯಗಳೂ ಸಹ ನಾನಾರೂಪಗಳನ್ನು ತಳೆದು ವಿಕೃತಗೊಳ್ಳುತ್ತಾ ಭಾಷೆಯ ಸ್ವರೂಪವೇ ಬದಲಾಯಿಸಿ ಬಿಡುತ್ತದೆ. ಒಂದೆರಡು ಶತಮಾನದಲ್ಲಿಯೇ ಹಿಂದಿನವರ ಭಾಷೆ ಅರ್ಥವಾಗದೆ ಅವರು ರಚಿಸಿದ ಗ್ರಂಥಗಳು ಪರಕೀಯ ಭಾಷಾಗ್ರಂಥಗಳಾಗಿಬಿಡುತ್ತವೆ. ಈಗ ಕನ್ನಡಕ್ಕಾದದ್ದೂ ಅದೇ ಗತಿ. ಪಂಪಾದಿ ಮಹಾಕವಿಗಳ ಕಾವ್ಯಗಳು ಎಷ್ಟು ಜನರಿಗೆ ಅರ್ಥವಾಗುತ್ತವೆ? ಆ ಕಾವ್ಯಗಳನ್ನು ಓದಿ ಆನಂದಿಸತಕ್ಕವರು ಯಾರು? ಈಗಿನ ಕನ್ನಡಿಗರಿಗೆ ಹಳಗನ್ನಡ ಒಂದು ಪರಕೀಯ ಭಾಷೆಯಾಗಿಬಿಟ್ಟಿದೆ.

ಹಳಗನ್ನಡವೇ ನಿಜವಾದ ಕನ್ನಡ. ಅದರ ಇಂಪು, ಅದರ ಸೌಂದರ್ಯ ಈ ಹೊಸಗನ್ನಡವೆಂಬ ಭಾಷೆಗೆ ಎಂದಿಗೂ ಬಾರದು. ಸಂಸ್ಕೃತದಿಂದ ಹಿಂದೀ, ಮರಾಠಿ ಮುಂತಾದ ಭಾಷೆಗಳು ಹುಟ್ಟಿದಂತೆ ಪ್ರಾಚೀನವಾದ ಶುದ್ಧ ಕನ್ನಡದಿಂದ ಈ ಹೊಸಗನ್ನಡವೆಂಬ ಹೊಸ ಭಾಷೆ ಹುಟ್ಟಿದೆ -ಎಂದರೆ ತಪ್ಪೇನು? ಕನ್ನಡನಾಡಿನಲ್ಲಿಯೇ ರೂಪಾಂತರ ಹೊಂದಿ ಬಳಕೆಯಲ್ಲಿರುವುದರಿಂದ ಹೊಸಗನ್ನಡ ಎಂದು ಕರೆಯುತ್ತಿದ್ದೇವೆ. ವಾಕ್ಯರಚನೆ ಹಳಗನ್ನಡಕ್ಕೆ ಸಮಾನವಾದ್ದರಿಂದ ಹಿಂದಿನ ವ್ಯಾಕರಣವು ಇಂದಿಗೂ ಬೇಕಾಗಿದೆ. ಯಾವ ಭಾಷೆಯಲ್ಲಾದರೂ ಗದ್ಯ, ಪದ್ಯ ಎಂಬ ಎರಡು ವಿಭಾಗಗಳಿರುತ್ತವೆ, ಇರಬೇಕು. ಈ ಹೊಸಗನ್ನಡದ 'ಅವನನ್ನು, ಇವನನ್ನು, ಹೋಗುತ್ತಾನೆ, ಬರುತ್ತಾನೆ' ಮುಂತಾದ ಪದಗಳನ್ನು ಬಳಸಿ ಛಂದೋಬದ್ಧವಾಗಿ ಪದ್ಯವನ್ನು ಬರೆಯಲು ಸಾಧ್ಯವೆ? ಭಾಮಿನೀಷಟ್ಪದಿ, ಸಾಂಗತ್ಯ, ಕಂದ, ತ್ರಿಪದಿಗಳಲ್ಲಿ ಒಂದು ಪದ್ಯವನ್ನಾದರೂ ರಚಿಸಲು ಈ ಕವಿಗಳು ಪ್ರಯತ್ನಿಸಿ ನೋಡ

ಬಹುದು. 'ಕನ್ನಡ ಬೆಳೆಯುವ ಭಾಷೆ, ಬದಲಾವಣೆ ಸಹಜ' ಎಂದು ಹೇಳಿ ಜಾರಿಕೊಳ್ಳುವವರಿದ್ದಾರೆ. ಹೌದು, ಅವಶ್ಯವಾಗಿ ಕನ್ನಡ ಬೆಳೆಯಬೇಕು. ಬೆಳವಣಿಗೆ ಸಾಹಿತ್ಯಸಮೃದ್ಧಿಯಿಂದ, ಶಾಸ್ತ್ರಗ್ರಂಥಗಳ ಮತ್ತು ವೈಜ್ಞಾನಿಕಕೃತಿಗಳ ವೈಪುಲ್ಯದಿಂದ, ಇತರ ಭಾಷೆಗಳಲ್ಲಿರುವ ಶ್ರೇಷ್ಠಕೃತಿಗಳ ಅನುವಾದಗಳಿಂದ. ಹೀಗೆ ಹಲವು ಪ್ರಕಾರಗಳಿಂದ ಆಗಬೇಕು. ತನಗೆ ಹೊಂದಿಕೊಳ್ಳುವ ಭಾಷೆಯಿಂದ ನೂತನಶಬ್ದ ಗಳನ್ನು ಸೇರಿಸಿಕೊಳ್ಳುತ್ತಾ ಬೆಳೆಯಬೇಕು. ಮಗು ಹುಡುಗನಾದಂತೆ, ಹುಡುಗನು ಯುವಕನಾದಂತೆ, ಯುವಕನು ಪ್ರೌಢನಾದಂತೆ ಸಹಜರೀತಿಯಲ್ಲಿ ಬೆಳೆಯಬೇಕೇ ಹೊರತು, ರೋಗವು ಬೆಳೆದಂತೆ ಆಗಬಾರದು. ಅಪಶಬ್ದಗಳನ್ನೂ ಅನನ್ವಿತವಾಕ್ಯ ಗಳನ್ನೂ ತುಂಬಿಕೊಳ್ಳುತ್ತ ಹಿಗ್ಗಬಾರದು. ವಿಕೃತರೀತಿಯಲ್ಲಿ ಈಗಿನಂತೆ ಬೆಳೆಯುತ್ತ ಹೋದರೆ, ಈ ಹೊಸಗನ್ನಡಸಾಹಿತ್ಯವೂ ಮುಂದಿನ ಪೀಳಿಗೆಗೆ ಅರ್ಥವಾಗದೆ, ಹಳ ಗನ್ನಡದ ಜಾಡಿಗೆ ಸೇರಿಹೋದೀತು. ಪರಭಾಷೆಯವರು ಕನ್ನಡವನ್ನು ಕಲಿಯಲ ಪೇಕ್ಷಿಸಿದಾಗ, ಅವರಿಗೆ ಉಪಯುಕ್ತವಾಗಿರುವುದೂ ವ್ಯಾಕರಣದ ಇನ್ನೊಂದು ಪ್ರಯೋಜನ.

ಇಪ್ಪತ್ತಾರು ವರ್ಷಗಳ ಹಿಂದೆ (ಕ್ರಿ. ಶ. ೧೯೭೬) ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಒಂದು 'ಹೊಸಗನ್ನಡ ವ್ಯಾಕರಣ'ವನ್ನು ಬರೆದುಕೊಡಬೇಕೆಂದು ನನಗೆ ಹೇಳಿದರು. ಈಗಿನ ಕನ್ನಡಕ್ಕೆ ವ್ಯಾಕರಣವನ್ನು ಬರೆಯಲು ಸಾಧ್ಯವೇ? –ಎಂಬ ಚಿಂತೆಯಿಂದ ನಾನು ಮೊದಲು ಒಪ್ಪಿಕೊಳ್ಳಲಿಲ್ಲ. ಅಧ್ಯಕ್ಷರು ಮತ್ತೂ ಒತ್ತಾಯಿಸುತ್ತಲೇ ಇದ್ದುದರಿಂದ ಒಂದು ದಿನ ಸಂಕೋಚದಿಂದಲೇ ಅಂಗೀಕರಿಸಿ, ಹೇಗೆ ರಚಿಸಬೇಕೆಂದು ಗುಣಿಸುತ್ತಲೇ ಬರೆಯಲಾರಂಭಿಸಿದೆ. ಪೂಜ್ಯರಾದ ಡಾ॥ ಡಿ. ವಿ. ಗುಂಡಪ್ಪನವರಿಗೆ ಇದು ತಿಳಿದಾಗ, ಅವರು ನನ್ನನ್ನು ಕುರಿತು "ಕನ್ನಡಕ್ಕೆ ವ್ಯಾಕರಣವೂ ಇದೆಯೇ?" ಎಂದು ಪ್ರಶ್ನಿಸಿದ್ದರು! ನಾನು ಬರೆದ ಆ ಹೊಸಗನ್ನಡ ವ್ಯಾಕರಣವನ್ನು ಸಾಹಿತ್ಯಪರಿಷತ್ತು ಅಂಗೀಕರಿಸಿ ಮುದ್ರಿಸಿತು. ಕಾವ, ಜಾಣ ಪರೀಕ್ಷೆಗಳಿಗೆ ಪಠ್ಯಪುಸ್ತಕವನ್ನಾಗಿಯೂ ಗೊತ್ತುಮಾಡಿತು. ಕ್ರಿ. ಶ. ೧೯೭೭ರಿಂದ ಇದುವರೆಗೆ ೬ ಮುದ್ರಣಗಳನ್ನು ಕಂಡು ಇನ್ನೂ ಪಠ್ಯವಾಗಿಯೇ ಇದೆ. ಅದರಲ್ಲಿ ನಾನು ಆಧರಿಸಿದ್ದು ಕಾರಕ–ವಿಭಕ್ತಿಗಳೆಂಬ ಹಳೆಯ ಮಾರ್ಗವೇ. ಮಹಾಜನರಿಗೆ ಅದು ಮಾನ್ಯವಾಗಿದೆಯೆಂಬುದು ದೃಢವಾಯಿತು.

ಹಿಂದೆ ಮೈಸೂರು ರಾಜ್ಯದ ಮಾಧ್ಯಮಿಕಶಾಲೆಗಳಲ್ಲಿ ಶ್ರೀ ಬಿ. ಮಲ್ಲಪ್ಪನವರು ರಚಿಸಿದ 'ಶಬ್ದಾದರ್ಶ' ಎಂಬ ವ್ಯಾಕರಣಗ್ರಂಥವು ತುಂಬ ಮನ್ನಣೆಯನ್ನು ಗಳಿಸಿತ್ತು. ಅದರ ಉಪಬೃಂಹಣವೇ ಸಾಹಿತ್ಯ ಪರಿಷತ್ತಿನ ಹೊಸಗನ್ನಡ ವ್ಯಾಕರಣ.

ಶಬ್ದಶಾಸ್ತ್ರಜ್ಞರ ವಿಚಿತ್ರಕಥನಗಳ ಪ್ರಭಾವದಿಂದ ಈ ಪ್ರಸ್ತಾವನೆಯು ಎತ್ತೆತ್ತಲೋ ತಿರುಗಿ ಹರಿದುಬಂದಿತು. ಆ ಕಥನಗಳನ್ನಿಲ್ಲಿ ಪರಿಶೀಲಿಸುವುದು ಅಪ್ರಸ್ತುತ. ಪರಿಶೀಲನೆಗೆ ಕೈಹಾಕಿದರೆ, ಈ ಪ್ರಸ್ತಾವನೆಯೇ ದೊಡ್ಡ ಪ್ರಬಂಧ ವಾದೀತು. ಆದುದರಿಂದ ಪ್ರಸ್ತುತ ಇಷ್ಟು ಸಾಕು.

೨

ವ್ಯಾಕರಣವಿವೇಚನಾಭಾಗ

ಶಬ್ದಶಕ್ತಿ

ನಮ್ಮ ಅಭಿಪ್ರಾಯವನ್ನು ಇತರರಿಗೆ ತಿಳಿಸಲು ಶಬ್ದಾತ್ಮಕವಾದ ವಾಕ್ಯವು ಉತ್ತಮ ಸಾಧನ. ಪರಸ್ಪರಾನ್ವಿತವಾಗಿರುವ ಪದಗಳಿಂದ ಕೂಡಿ, ಒಂದು ಪೂರ್ಣಾರ್ಥವನ್ನು ಕೊಡುವ ಶಬ್ದಸಂಘಾತವೇ ವಾಕ್ಯವೆನಿಸುತ್ತದೆ. ವಾಕ್ಯದಲ್ಲಿ ಕ್ರಿಯಾಪದವು ಮುಖ್ಯವಾದದ್ದು. ಉಳಿದ ಎಲ್ಲ ಪದಗಳೂ ಕಡೆಗೆ ಕ್ರಿಯೆಯಲ್ಲಿ ಅನ್ವಿತವಾಗಿ ತಮ್ಮಲ್ಲಿರುವ ಅರ್ಥಬೋಧಕತೆಯನ್ನು ಮುಗಿಸಿ ಶಾಂತವಾಗುತ್ತವೆ. ವಾಸ್ತವದಲ್ಲಿ ಅನ್ವಯವಿರುವುದು ಅರ್ಥಗಳಿಗೆ, ಶಬ್ದಗಳಿಗಲ್ಲ. ಆದರೂ ಶಬ್ದಾರ್ಥಗಳಿಗೆ ಅಭೇದವನ್ನಂಗೀಕರಿಸಿ ಶಬ್ದಶಾಸ್ತ್ರದಲ್ಲಿ ಹೀಗೆ ವ್ಯವಹರಿಸುತ್ತಾರೆ. ಅದರಂತೆ ಲೋಕದಲ್ಲಿಯೂ (ಅಭೇದದಿಂದ) ಹೇಳುವುದುಂಟು. ಶಬ್ದ ಮತ್ತು ಅರ್ಥ –ಇವುಗಳಿಗೆ ನಿತ್ಯಸಂಬಂಧವಿರುವುದೇ ಇದಕ್ಕೆ ಕಾರಣವಾಗಿದೆ. ಶಬ್ದವನ್ನು ಹೇಳಿದೊಡನೆ ಅರ್ಥವು ಸ್ಫುರಿಸುತ್ತದೆ. ಒಂದು ವಸ್ತುವನ್ನು ನೋಡಿದಾಗ ಅದರ ಹಿಂದೆ ವಸ್ತುವಾಚಕಶಬ್ದವೂ ಹೊಳೆಯುತ್ತದೆ. ನಾವು ಯಾವುದನ್ನು ಸ್ಮರಿಸಿಕೊಂಡರೂ ಆಲೋಚಿಸಿದರೂ ಶಬ್ದಪೂರ್ವಕವಾಗಿಯೇ ಸ್ಮರಿಸಿಕೊಳ್ಳುತ್ತೇವೆ, ಶಬ್ದಪೂರ್ವಕ ವಾಗಿಯೇ ಆಲೋಚಿಸುತ್ತೇವೆ. ಶಬ್ದವಿಲ್ಲದೆ ವಸ್ತುಸ್ಮರಣೆ ಇಲ್ಲ. ಆಲೋಚನೆ ಇಲ್ಲ. ಹೀಗೆ ಶಬ್ದಾರ್ಥಗಳು ನಿತ್ಯಸಂಬದ್ಧಗಳಾದ್ದರಿಂದಲೇ ಮಹಾಕವಿ ಕಾಳಿದಾಸನು ಅರ್ಧನಾರೀಶ್ವರರಾದ ಪಾರ್ವತೀಪರಮೇಶ್ವರರನ್ನು 'ವಾಗರ್ಥಾವಿವ ಸಂಪೃಕ್ತೌ' ಎಂದು ರಘುವಂಶಕಾವ್ಯದ ಆದಿಯಲ್ಲಿಯೇ ಸ್ತುತಿಸಿದ್ದಾನೆ. ಇಷ್ಟೇ ಅಲ್ಲ, ನಮಗಾಗುವ ಯಾವುದೇ ವಸ್ತುಜ್ಞಾನವೂ ಸಹ ಶಬ್ದಾರ್ಥಗಳೆರಡನ್ನೂ ವಿಷಯೀ ಕರಿಸುತ್ತದೆ. ಹೂವಿನ ಜೊತೆಗೆ ಹೂವಿನ ತೊಟ್ಟು ಸೇರಿಕೊಂಡಂತೆ ಶಬ್ದವೂ ಸೇರಿರುತ್ತದೆ. ಆದ್ದರಿಂದ ಶಬ್ದ, ಅರ್ಥ, ಜ್ಞಾನ ಇವು ಮೂರೂ ನಿತ್ಯಸಂಬದ್ಧವಾದವು.

ಕ್ರಿಯೆಯನ್ನು ಬೋಧಿಸುವ ಪದವು ತಿಙಂತ, ಕೃದಂತ –ಎಂದು ಎರಡು ವಿಧ. ಧಾತುವಿಗೆ ತಿಙ್, ಕೃತ್ ಎಂಬ ಎರಡು ಬಗೆಯ ಪ್ರತ್ಯಯಗಳು ಹತ್ತುತ್ತವೆ. ಆಖ್ಯಾತಪ್ರತ್ಯಯಗಳಿಗೆ 'ತಿಙ್' ಎಂದು ಸಂಸ್ಕೃತವ್ಯಾಕರಣಶಾಸ್ತ್ರದ ಸಂಜ್ಞೆ. ತಿಙಂತ, ಆಖ್ಯಾತಪ್ರತ್ಯಯಾಂತ, ಕ್ರಿಯಾಪದ –ಇವು ಮೂರು ಸಮಾನಾರ್ಥಕಪದಗಳು. ಕೃತ್ ಪ್ರತ್ಯಯಗಳನ್ನು ಕನ್ನಡದಲ್ಲಿಯೂ ಕೃತ್ ಎಂದೇ ಹೇಳುತ್ತಾರೆ. ಕೃದಂತಗಳೆಲ್ಲವೂ ನಾಮಪದಗಳಾಗುತ್ತವೆ. ಇವನ್ನು ಸುಬಂತಗಳೆಂದು ಸಂಸ್ಕೃತವ್ಯಾಕರಣದಲ್ಲಿ ವ್ಯವ ಹರಿಸುತ್ತಾರೆ. ಸುಪ್ ಎನ್ನುವುದು ಪ್ರಾತಿಪದಿಕಗಳ ಮೇಲೆ ಬರುವ ವಿಭಕ್ತಿಪ್ರತ್ಯಯಗಳ ಹೆಸರು. ಕೃದಂತಗಳಾದ ಅವ್ಯಯಗಳ ಮೇಲೂ ಈ ಸುಪ್‌ಪ್ರತ್ಯಯಗಳು ಬಂದು ಲುಪ್ತವಾಗುತ್ತವೆ. ಸುಬಂತಗಳಾದ್ದರಿಂದ ಅವ್ಯಯಗಳು ಪದಸಂಜ್ಞೆಯನ್ನು ಪಡೆಯು

ತ್ತವೆ. ಪ್ರತ್ಯಯಗಳನ್ನು ವಿಧಿಸಿ ಲೋಪವನ್ನು ಹೇಳಿರುವುದು ಪದಸಂಜ್ಞೆಯ ಪ್ರಾಪ್ತಿಗಾಗಿ. **ಅಪದಂ ನ ಪ್ರಯುಂಜೀತ** –ಪದವಲ್ಲದ್ದನ್ನು ಪ್ರಯೋಗಿಸಬಾರದು– ಎಂದು ವ್ಯಾಕರಣಶಾಸ್ತ್ರದ ನಿಯಮ. ಈ ಪದಸಂಜ್ಞೆಗೆ ಇನ್ನು ಬೇರೆ ಪ್ರಯೋಜನ ವಿದೆ. ಅದನ್ನಿಲ್ಲಿ ವಿಸ್ತರಿಸುವುದು ಅನಾವಶ್ಯಕ. ಏವಂ ಚ ಕ್ರಿಯಾಪದ, ನಾಮಪದ –ಎಂದು ಶಬ್ದಗಳಲ್ಲಿ ಎರಡೇ ಮುಖ್ಯವಿಭಾಗ. ತದ್ಧಿತಾಂತದ ಮೇಲೂ ಸುಪ್ ಪ್ರತ್ಯಯವು ಬರುವುದರಿಂದ ಅದೂ ನಾಮಪದವೇ.

ಈ ಎಲ್ಲ ಶಬ್ದಗಳನ್ನೂ ಶಾಸ್ತ್ರಕಾರರು ತಾತ್ತ್ವಿಕವಾಗಿ ಮೂರು ಗುಂಪುಗಳನ್ನಾಗಿ ವಿಂಗಡಿಸಿದ್ದಾರೆ. ಶಬ್ದದ ಅರ್ಥದಲ್ಲಿರುವ ಮುಖ್ಯಧರ್ಮವೇ ಇಲ್ಲಿ ತತ್ತ್ವ. ಇದನ್ನು ಪ್ರವೃತ್ತಿನಿಮಿತ್ತವೆನ್ನುತ್ತಾರೆ. ಪ್ರವೃತ್ತಿ –ಶಬ್ದಪ್ರಯೋಗಕ್ಕೆ ನಿಮಿತ್ತ – ಕಾರಣವಾಗಿ ಅರ್ಥದಲ್ಲಿರುವ ಧರ್ಮ. ಜಾತಿ, ಗುಣ, ಕ್ರಿಯೆ –ಇವೇ ಪ್ರವೃತ್ತಿನಿಮಿತ್ತಗಳು.

೧. ಮನುಷ್ಯ, ಹಸು, ಮರ, ಕುರಿ, ಜಲ –ಇವು ಜಾತಿಶಬ್ದಗಳು. ಇವು ದ್ರವ್ಯ ವಾಚಿಗಳಾದರೂ ಇವುಗಳಲ್ಲಿರುವ ಮನುಷ್ಯತ್ವ, ಗೋತ್ವ, ವೃಕ್ಷತ್ವ –ಮುಂತಾದವು ಈ ಶಬ್ದಪ್ರಯೋಗಗಳಿಗೆ ನಿಮಿತ್ತ. ಇದಕ್ಕೆ ಕನ್ನಡದಲ್ಲಿ ಸರಿಯಾದ ಪರ್ಯಾಯಪದವಿಲ್ಲ. ಆದರೆ ಗೋತ್ವವು ಹಸುವಿನಲ್ಲಿಯೂ ವೃಕ್ಷತ್ವವು ಮರದಲ್ಲಿಯೂ ಜಲತ್ವವು ನೀರಿನಲ್ಲಿಯೂ ಇದ್ದೇ ಇರುತ್ತವೆ ಯೆಂಬುದನ್ನು ನೆನಪಿನಲ್ಲಿಡಬೇಕು. ಎಲ್ಲ ದ್ರವ್ಯಗಳಲ್ಲಿಯೂ ಇರುವ ಈ ಧರ್ಮವಿಶೇಷಕ್ಕೆ ಜಾತಿ ಎಂದು ಹೆಸರು.

೨. ಬಿಳಿಯದು, ಕಿರಿಯದು, ಎಳೆಯದು, ಶುಕ್ಲ, ರಕ್ತ, ದೀರ್ಘ –ಮುಂತಾದವು ಗುಣಶಬ್ದಗಳು. ಇವುಗಳಲ್ಲಿರುವ ಬಿಳಿಪು, ಕಿರಿಯತನ, ಶುಕ್ಲತ್ವ, ರಕ್ತತ್ವ, ದೀರ್ಘತ್ವ –ಮೊದಲಾದವು ಗುಣಗಳು. ಇವು ಈ ಶಬ್ದಪ್ರಯೋಗಗಳಿಗೆ ನಿಮಿತ್ತ. ಇವೆಲ್ಲವು ಗುಣವುಳ್ಳ ಗುಣವಾಚಕಗಳು. ಸ್ವತಃ ಗುಣವಾಚಕಗಳೇ ಆದ ಬಿಳಿಪು, ಕಿರಿಯತನ, ಶುಕ್ಲತ್ವ ಮೊದಲಾದವುಗಳಲ್ಲಿ ಜಾತಿಯು ಪ್ರವೃತ್ತಿನಿಮಿತ್ತ. ಗುಣದಲ್ಲಿರತಕ್ಕದ್ದು ಜಾತಿ. ಗುಣದಲ್ಲಿ ಗುಣ ಇರುವುದಿಲ್ಲ.

೩. ಕರ್ತೃ, ಮಾಡತಕ್ಕವನು, ಪಾಚಕ, ಲೇಖಕ, ಹೇಳಿದವನು –ಮುಂತಾದವು ಗಳಲ್ಲಿ ಮಾಡುವುದು ಮೊದಲಾದ ಕ್ರಿಯೆ ಪ್ರವೃತ್ತಿನಿಮಿತ್ತ. ಆದರೆ ಕ್ರಿಯಾಬೋಧಕಗಳೇ ಆದ ಕ್ರಿಯೆ, ಪಾಕ, ಲೇಖನ, ಭಾಷಣ –ಇವುಗಳಲ್ಲಿ ಕ್ರಿಯಾತ್ವ, ಪಾಕತ್ವ –ಮುಂತಾದ ಜಾತಿಯು ಪ್ರವೃತ್ತಿನಿಮಿತ್ತ. ಕ್ರಿಯೆಯಲ್ಲಿ ಕ್ರಿಯೆ ಇರುವುದಿಲ್ಲ. ಕ್ರಿಯಾತ್ವ, ಪಾಕತ್ವ ಮೊದಲಾದವು ಜಾತಿಗಳು.

ಚೈತ್ರ, ಮೈತ್ರ, ದೇವದತ್ತ ಮುಂತಾದ ಸಂಜ್ಞಾಶಬ್ದಗಳಲ್ಲಿ ಚೈತ್ರ ಮುಂತಾದ ಸಂಜ್ಞೆಯೇ ಪ್ರವೃತ್ತಿನಿಮಿತ್ತವೆಂದು ಕೆಲವರು ಹೇಳುತ್ತಾರೆ. ಆದರೆ ಚೈತ್ರನು ಮೈತ್ರ ನೆಂದು ಹೆಸರನ್ನು ಬದಲಾಯಿಸಿಕೊಳ್ಳಬಹುದಾದ್ದರಿಂದ ಸಂಜ್ಞೆಯು ನಿತ್ಯವಾದ್ದಲ್ಲ. ಆದರೂ ಪ್ರಯೋಗಕ್ಕೆ ನಿಮಿತ್ತವಾದ್ದರಿಂದ ಜಾತಿ, ಗುಣ, ಕ್ರಿಯೆ, ಸಂಜ್ಞೆ – ಇವು ನಾಲ್ಕು ಪ್ರವೃತ್ತಿನಿಮಿತ್ತಗಳೆನ್ನಬಹುದು. ಸಂಜ್ಞೆಯು ಸಹ ಜಾತಿ, ಗುಣ, ಕ್ರಿಯೆಗಳಲ್ಲಿ

ಯಾವುದಾದರೊಂದು ಪ್ರವೃತ್ತಿನಿಮಿತ್ತವಾಗಿರುವ ವಸ್ತುವಿಗೇ ಅನ್ವಯಿಸುತ್ತದೆ ಯೆಂಬುದನ್ನು ನೆನಪಿನಲ್ಲಿಡಬೇಕು.

ತಿಙಂತ ಕೃದಂತಗಳಲ್ಲಿರುವ ಭೇದ

ತಿಙಂತಕೃದಂತಗಳೆರಡೂ ಕ್ರಿಯಾವಾಚಕಗಳಾದರೂ ಇವು ತಿಳಿಸುವ ಕ್ರಿಯೆಯ ಸ್ವರೂಪದಲ್ಲಿ ಭೇದ ಉಂಟು. ತಿಙಂತದಲ್ಲಿ ಕ್ರಿಯೆಯು ಕರ್ತೃಕರ್ಮಗಳಿಗೆ ವಿಶೇಷ್ಯವಾಗಿದ್ದು ಪ್ರಧಾನವಾಗಿರುತ್ತದೆ. ಕೃದಂತದಲ್ಲಿ ಅದು ಕರ್ತೃಕರ್ಮಗಳಿಗೆ ವಿಶೇಷಣವಾಗಿದ್ದು ಅಪ್ರಧಾನವಾಗಿರುತ್ತದೆ. ವಿವರಣೆ–

ಫಲವ್ಯಾಪಾರಯೋರ್ಧಾತುರಾಶ್ರಯೇ ತು ತಿಙಃ ಸ್ಮೃತಾಃ ।
ಫಲೇ ಪ್ರಧಾನಂ ವ್ಯಾಪಾರಸ್ತಿಙರ್ಥಸ್ತು ವಿಶೇಷಣಮ್ ॥

– ಭಟ್ಟೋಜಿ ದೀಕ್ಷಿತರ 'ವೈಯಾಕರಣಸಿದ್ಧಾಂತಕಾರಿಕಾ'

ತಾತ್ಪರ್ಯ–

"ಫಲ ಮತ್ತು ವ್ಯಾಪಾರಗಳು ಧಾತುವಿನ ಅರ್ಥ. ತಿಙ್‌ಪ್ರತ್ಯಯಗಳ (ಆಖ್ಯಾತ ಪ್ರತ್ಯಯಗಳ) ಅರ್ಥಗಳಾದ ಕರ್ತೃಕರ್ಮಗಳು ಫಲವ್ಯಾಪಾರಗಳಿಗೆ ಆಶ್ರಯವಾದವು. ಈ ಫಲವ್ಯಾಪಾರಗಳಲ್ಲಿ ವ್ಯಾಪಾರವು ಪ್ರಧಾನವಾಗಿಯೂ ಫಲವು ಅದಕ್ಕೆ ವಿಶೇಷಣವಾಗಿಯೂ ಇರುತ್ತವೆ. ತಿಙರ್ಥಗಳಾದ ಕರ್ತೃಕರ್ಮಗಳೂ ಸಹ ಫಲವ್ಯಾಪಾರಗಳಿಗೆ ವಿಶೇಷಣವಾಗಿರುತ್ತವೆ."

ಇದನ್ನೀಗ ವಿಸ್ತಾರವಾಗಿ ವಿವರಿಸಬೇಕಾಯಿತು. ಎಲ್ಲ ಧಾತುಗಳ ಅರ್ಥವೂ ಕ್ರಿಯೆಯೆಂದು ಹೇಳುತ್ತೇವೆ. ಹಾಗಾದರೆ ಹೋಗು, ಬಾ, ಹೇಳು, ಕೇಳು, ನೋಡು, ಕೊಡು –ಇವೆಲ್ಲವೂ ಕ್ರಿಯಾವಾಚಕಗಳಾದ್ದರಿಂದ ಪರ್ಯಾಯಪದಗಳೆಂದು ಹೇಳ ಬೇಕಾದೀತು. ಇವುಗಳ ಅರ್ಥ ಬೇರೆಬೇರೆ ಕ್ರಿಯೆ. ಇವು ಪರ್ಯಾಯಪದಗಳಲ್ಲ ಎಂಬುದು ಸ್ಪಷ್ಟವಾಗಿದೆ. ಚಲನಾತ್ಮಕವಾದ ಏಕಜಾತೀಯ ಕ್ರಿಯೆಯಲ್ಲಿ ಯಾವ ಕಾರಣದಿಂದ ಭೇದ ಉಂಟಾಗುತ್ತದೆ? ಧಾತ್ವರ್ಥವು ಶುದ್ಧವಾದ ಕ್ರಿಯೆಯೊಂದೇ ಅಲ್ಲ. ಕ್ರಿಯಾಜನ್ಯವಾದ ಫಲವೂ ಧಾತ್ವರ್ಥವಾಗಿದೆ. ಫಲವು ಬೇರೆಬೇರೆಯಾದ್ದರಿಂದ ಫಲಜನಕಕ್ರಿಯೆಯಲ್ಲಿ ಭೇದ ಉಂಟಾಗಿ ಧಾತ್ವರ್ಥಗಳು ವಿಭಿನ್ನವಾಗುತ್ತವೆ. ಉದಾ:

ಪಚತಿ = ಬೇಯಿಸುತ್ತಾನೆ, ಅಡುಗೆ ಮಾಡುತ್ತಾನೆ.

ಇಲ್ಲಿ ಪಚ್ ಧಾತುವಿನ ಅರ್ಥವು 'ವಿಕ್ಲಿತ್ತ್ಯನುಕೂಲವ್ಯಾಪಾರ'ವೆಂದು ಸಂಸ್ಕೃತದಲ್ಲಿ ಹೇಳುತ್ತಾರೆ. ಬೇಯಿಸುವುದೆಂದರೂ ಅದೇ. ವಿಕ್ಲಿತ್ತಿಯೆಂದರೆ, ನೀರಿನಲ್ಲಿ ಬೇಯಿಸಿದಾಗ ಅಕ್ಕಿ ಮೊದಲಾದ್ದರಲ್ಲಾಗುವ ಅರಳುವಿಕೆ, ವಿಕಾಸ, ಮೆದುವು. ಅನುಕೂಲ = ಜನಕವಾದ, ಹುಟ್ಟಿಸುವ. ವ್ಯಾಪಾರ = ಕ್ರಿಯೆ. ಫಲಾಂಶವು ಸೇರದ ಕೇವಲ ಕ್ರಿಯೆ. ಇದನ್ನು ವ್ಯಾಪಾರವೆಂದು ಶಾಸ್ತ್ರಕಾರರು ವ್ಯವಹರಿಸುತ್ತಾರೆ. ವಿಕ್ಲಿತ್ತಿಯು ಫಲ, ಅದನ್ನು ಉಂಟುಮಾಡುವ ಕ್ರಿಯೆಯೇ ವ್ಯಾಪಾರ. ಈ ಫಲ ವ್ಯಾಪಾರಗಳು ಪಚ್ ಧಾತುವಿನ ಅರ್ಥ. ಬೇಯಿಸು ಎಂಬ ಧಾತುವಿನ ಅರ್ಥವೂ

ಅದೇ. ಫಲಾನುಕೂಲವ್ಯಾಪಾರ ಎಂಬಲ್ಲಿ ವ್ಯಾಪಾರವು ವಿಶೇಷ್ಯವಾದ್ದರಿಂದ ಪ್ರಧಾನ ವೆನಿಸುತ್ತದೆ. ಫಲವು ವಿಶೇಷಣವಾಗಿ ಅಪ್ರಧಾನವಾಗಿದೆ. ಹೀಗೆ ಎಲ್ಲ ಧಾತುಗಳಿಗೂ ಫಲವ್ಯಾಪಾರಗಳು ಅರ್ಥವಾಗಿರುತ್ತವೆ.

ಇನ್ನೊಂದು ಉದಾಹರಣೆ– ಗಚ್ಛತಿ = ಹೋಗುತ್ತಾನೆ, ಹೋಗುತ್ತಾಳೆ, ಹೋಗುತ್ತದೆ. ಇಲ್ಲಿ ಗಮ್ ಅಥವಾ ಹೋಗು ಧಾತುವಿನ ಅರ್ಥವೇನು? ಇದೆಲ್ಲವನ್ನೂ ಸಂಸ್ಕೃತದಲ್ಲಿ ಮಾತ್ರ ವ್ಯವಸ್ಥಿತವಾಗಿ ಹೇಳಲು ಸಾಧ್ಯ. 'ಉತ್ತರದೇಶ ಸಂಯೋಗಾನುಕೂಲವ್ಯಾಪಾರ' ಹೋಗು ಧಾತುವಿನ ಅರ್ಥ. ಮುಂದಿರುವ ಸ್ಥಳಕ್ಕೆ ತನ್ನ ಸಂಯೋಗವಾಗುವಂತೆ ಮಾಡುವ ಕೆಲಸವೆಂದು ಅಭಿಪ್ರಾಯ. ಹುಡುಗನು ಶಾಲೆಗೆ ಹೋಗುತ್ತಾನೆ– 'ಬಾಲಕಃ ಶಾಲಾಂ ಗಚ್ಛತಿ'. ಈ ಉದಾಹರಣೆಯಲ್ಲಿ ಹುಡುಗನು ತನಗಿಂತ ಮುಂದಿರುವ ಶಾಲೆಗೆ ಹೋಗುತ್ತಾನೆ. ಅದು ಇಲ್ಲಿ ಉತ್ತರದೇಶ. ಇವನು ಹೋದಾಗ ಶಾಲೆಗೂ ಇವನಿಗೂ ಸಂಯೋಗವಾಗುತ್ತದೆ –ಎಂದರೆ ಹುಡುಗನ ಶರೀರವು ಆ ಸ್ಥಳದೊಡನೆ ಸಂಬಂಧಿಸುತ್ತದೆ. ಈ ಸಂಬಂಧವೇ ಫಲ. ಹುಡುಗನು ಕಾಲಿಡುತ್ತ ನಡೆಯುವುದು ಆ ಸಂಬಂಧವನ್ನುಂಟುಮಾಡುವ ವ್ಯಾಪಾರ. ಹೀಗೆ ಸಕಲ ಧಾತುಗಳಿಗೂ ಫಲವ್ಯಾಪಾರಗಳ ಅರ್ಥ. ಬೇರೆಬೇರೆ ಧಾತುಗಳಲ್ಲಿ ಫಲವು ಯಾವುದೆಂಬುದನ್ನು ಊಹಿಸಿಕೊಳ್ಳಬೇಕು. ಧಾತುಪಾಠದಲ್ಲಿ ಇದೆಲ್ಲವನ್ನೂ ಬಿಡಿಸಿ ಹೇಳಿರುವುದಿಲ್ಲ.

ಆಶ್ರಯೋ ತು ತಿಙಃ ಸ್ಮೃತಾಃ = ಫಲವ್ಯಾಪಾರಗಳಿಗೆ ಆಶ್ರಯವಾದವು. ಆಖ್ಯಾತ ಪ್ರತ್ಯಯಗಳು. ಕರ್ತರಿಪ್ರಯೋಗದಲ್ಲಿ ಆಖ್ಯಾತಪ್ರತ್ಯಯದ (ತಿಙ್) ಅರ್ಥವು ಕರ್ತೃ. ಧಾತ್ವರ್ಥವ್ಯಾಪಾರಕ್ಕೆ ಈ ಕರ್ತನು ಆಶ್ರಯ. ಉದಾಃ ಹುಡುಗನು ಶಾಲೆಗೆ ಹೋಗುತ್ತಾನೆ. ಇಲ್ಲಿ 'ಉತ್ತಾನೆ' ಆಖ್ಯಾತ ಪ್ರತ್ಯಯ.* ಇದರ ಅರ್ಥ ಕರ್ತಾ. ಇವನಲ್ಲಿ ಹೋಗುವ ವ್ಯಾಪಾರವಿದೆಯಾದ್ದರಿಂದ ವ್ಯಾಪಾರಕ್ಕೆ ಆಶ್ರಯನಾದವನು ಈತ. ಕರ್ಮಣಿಪ್ರಯೋಗದಲ್ಲಿ ಆಖ್ಯಾತಾರ್ಥವು ಕರ್ಮ. ಧಾತ್ವರ್ಥಫಲವು ಈ ಕರ್ಮದಲ್ಲಿರುತ್ತದೆ. ಉದಾಃ ತರಕಾರಿಯು ಬೇಯಿಸಲ್ಪಡುತ್ತದೆ. ಇಲ್ಲಿ ಧಾತ್ವರ್ಥವು ಹಿಂದೆ ಹೇಳಿದಂತೆ ವಿಕ್ಲಿತ್ತಿಯಾಗಿದೆ. ಇದು ಧಾತ್ವರ್ಥವಾದ ಫಲ. ಇದು ತರಕಾರಿ ಎಂಬ ಕರ್ಮದಲ್ಲಿದೆಯಾದ್ದರಿಂದ ಕರ್ಮವು ಫಲಾಶ್ರಯವಾಗುತ್ತದೆ.

ಧಾತುವಿನ ಮೇಲೆ ಆಖ್ಯಾತಪ್ರತ್ಯಯವು ಕರ್ತ್ರರ್ಥದಲ್ಲಿ ಬಂದಾಗ ಕರ್ತರಿ ಪ್ರಯೋಗವೆಂದೂ ಕರ್ಮಾರ್ಥದಲ್ಲಿ ಬಂದಾಗ ಕರ್ಮಣಿಪ್ರಯೋಗವೆಂದೂ ಹೆಸರು. ಕನ್ನಡದಲ್ಲಿ ಭಾವೇಪ್ರಯೋಗವಿಲ್ಲ. ಭಾವವೆಂದರೆ ಧಾತ್ವರ್ಥವಾದ ಕ್ರಿಯೆ. ಭಾವೇ ಪ್ರಯೋಗದಲ್ಲಿ ತಿಙ್ಪ್ರತ್ಯಯವು ಭಾವಾರ್ಥದಲ್ಲಿ ಬರುತ್ತದೆ.

ಧಾತ್ವರ್ಥಃ ಕೇವಲಃ ಶುದ್ಧೋ ಭಾವ ಇತ್ಯಭಿಧೀಯತೇ ॥

---

* ಕನ್ನಡದ ಕ್ರಿಯಾಪದದಲ್ಲಿ ಧಾತುವಿನ ಮುಂದಿರುವುದೆಲ್ಲವನ್ನೂ ಆಖ್ಯಾತವೆಂದು ಗ್ರಹಿಸಲಾಗಿದೆ. ವಿಕರಣ, ಆಗಮ –ಎಂಬ ಭೇದವನ್ನಿಲ್ಲಿ ಗಣಿಸಿಲ್ಲ.

ಫಲೇ ಪ್ರಧಾನಂ ವ್ಯಾಪಾರಃ = ಫಲವ್ಯಾಪಾರಗಳಲ್ಲಿ ವ್ಯಾಪಾರವು ವಿಶೇಷ್ಯವಾಗಿದ್ದು ಫಲವು ವಿಶೇಷಣವಾಗಿರುತ್ತದೆ. ವಿಕ್ಲಿತ್ತ್ಯನುಕೂಲವ್ಯಾಪಾರ, ಸಂಯೋಗಾನುಕೂಲವ್ಯಾಪಾರ -ಎಂದು ಹಿಂದೆಯೇ ತೋರಿಸಲಾಗಿದೆ. ವಿಕ್ಲಿತ್ತಿ, ಸಂಯೋಗಗಳೆಂಬ ಫಲಗಳು ವ್ಯಾಪಾರಕ್ಕೆ ವಿಶೇಷಣಗಳಾಗಿವೆ. ತಿಙರ್ಥಸ್ತು ವಿಶೇಷಣಮ್ = ಕರ್ತೃ, ಕರ್ಮ -ಇವೆರಡು ತಿಙರ್ಥಗಳು. ಇವು ಧಾತ್ವರ್ಥಗಳಾದ ಫಲವ್ಯಾಪಾರಗಳಿಗೆ ಆಶ್ರಯಗಳು. ಆಶ್ರಯಗಳಾದರೂ ಇವು ಫಲವ್ಯಾಪಾರಗಳಿಗೆ ವಿಶೇಷಣಗಳಾಗಿ ಅಪ್ರಧಾನಗಳಾಗಿಬಿಡುತ್ತವೆ. ಒಂದು ವಾಕ್ಯವನ್ನು ಕೇಳಿದಾಗ ಶ್ರೋತೃಗಳಿಗೆ ಆ ರೀತಿಯಲ್ಲಿಯೇ ಪ್ರತೀತವಾಗುತ್ತವೆ ಎಂದು ಅಭಿಪ್ರಾಯ. ಈ ಪ್ರತೀತಿಗೆ 'ಶಾಬ್ದಬೋಧ'ವೆಂದು ಹೆಸರು.

ಶಾಬ್ದಬೋಧ = ವಾಕ್ಯದಲ್ಲಿರುವ ಶಬ್ದಗಳಿಂದ ಆಗುವ ಅರ್ಥಜ್ಞಾನ. ಪ್ರಾತಿಪದಿಕ, ಪ್ರತ್ಯಯ, ಧಾತು, ಆಖ್ಯಾತಪ್ರತ್ಯಯ -ಇವುಗಳ ಅರ್ಥಗಳಿಗೆ ಯಾವ ಸಂಬಂಧದಿಂದ ಪರಸ್ಪರ ಅನ್ವಯವಾಗುತ್ತದೆ, ವಿಶೇಷ್ಯ-ವಿಶೇಷಣಭಾವ ಹೇಗಿರುತ್ತದೆ -ಇತ್ಯಾದಿಗಳೆಲ್ಲವನ್ನೂ ಶಾಸ್ತ್ರವಿಧಿಗೆ ಅನುಗುಣವಾಗಿ ಜೋಡಿಸಿ ಕಡೆಯಲ್ಲಿ ವಾಕ್ಯದ ವಿಶೇಷ್ಯವು ಯಾವುದೆಂಬುದನ್ನು ತೋರಿಸುವ ಹಿಗ್ಗಿಸಿದ ವಾಕ್ಯವನ್ನು ರಚಿಸಿದರೆ ಶಾಬ್ದಬೋಧಪ್ರಕಾರವನ್ನು ತಿಳಿಸಿದಂತಾಗುವುದು. ಅನ್ವಯಾದಿಗಳನ್ನು ವಿವರಿಸದೆ, ಶಾಬ್ದಬೋಧಸ್ವರೂಪವನ್ನು ಒಂದು ಚಿಕ್ಕ ಉದಾಹರಣೆಯಲ್ಲಿ ಹೀಗೆ ತೋರಿಸಬಹುದು-

ಚೈತ್ರಃ ಗ್ರಾಮಂ ಗಚ್ಛತಿ = ಚೈತ್ರನು ಹಳ್ಳಿಗೆ ಹೋಗುತ್ತಾನೆ. ಇಲ್ಲಿ ಹಳ್ಳಿಯು ಕರ್ಮ. ಕನ್ನಡದಲ್ಲಿ ಚತುರ್ಥೀವಿಭಕ್ತಿ ಬಂದಿದೆ.

ಚೈತ್ರನಿಗೆ ತಿಙರ್ಥವಾದ ಕರ್ತೃವಿನಲ್ಲಿ ಅಭೇದಸಂಬಂಧದಿಂದ ಅನ್ವಯ. ಕರ್ತೃವಿಗೆ ಧಾತ್ವರ್ಥವ್ಯಾಪಾರದಲ್ಲಿ ಆಧೇಯತಾಸಂಬಂಧದಿಂದ ಅನ್ವಯ. ಕರ್ಮವಾದ ಗ್ರಾಮಕ್ಕೆ ಫಲವಾದ ಸಂಯೋಗದಲ್ಲಿ ಅನ್ವಯ. ಸಂಯೋಗಕ್ಕೆ ಅನುಕೂಲತಾಸಂಬಂಧದಿಂದ ವ್ಯಾಪಾರದಲ್ಲಿ ಅನ್ವಯ. ತಿಙರ್ಥವಾದ ವರ್ತಮಾನಕಾಲಕ್ಕೆ ವ್ಯಾಪಾರದಲ್ಲಿ ಅನ್ವಯ. ಇವೆಲ್ಲವನ್ನೂ ಸೇರಿಸಿದರೆ-

'ಗ್ರಾಮಾಭಿನ್ನಕರ್ಮನಿಷ್ಠಸಂಯೋಗಾನುಕೂಲಃ ಚೈತ್ರಾಭಿನ್ನಕರ್ತೃನಿಷ್ಠಃ ವರ್ತಮಾನಕಾಲಿಕೋ ವ್ಯಾಪಾರಃ' -ಎಂದು ಶಾಬ್ದಬೋಧಾಕಾರವಾಗುತ್ತದೆ.

ಇಲ್ಲಿ ತಿಙರ್ಥಕರ್ತೃವಿಗೆ ವ್ಯಾಪಾರದಲ್ಲಿ ಅನ್ವಯ ಬಂದಿದೆ. ಕರ್ತೃವು ವಿಶೇಷಣವಾಗಿದೆ. ಕರ್ಮಣಿಪ್ರಯೋಗದಲ್ಲಿ ತಿಙರ್ಥವು ಕರ್ಮವಾಗಿರುತ್ತದೆ. ಅದೂ ಸಹ ಫಲದಲ್ಲಿ ವಿಶೇಷಣ. ಉದಾಃ ಗ್ರಾಮಃ ಚೈತ್ರೇಣ ಗಮ್ಯತೇ -ಹಳ್ಳಿಯು ಚೈತ್ರನಿಂದ ಹೋಗಲ್ಪಡುತ್ತದೆ. ಇಲ್ಲಿ ಆಖ್ಯಾತಪ್ರತ್ಯಯದ ಅರ್ಥ ಕರ್ಮ. 'ಗ್ರಾಮಾಭಿನ್ನಕರ್ಮನಿಷ್ಠಸಂಯೋಗಃ ಚೈತ್ರನಿಷ್ಠವ್ಯಾಪಾರಜನ್ಯಃ' ಎಂದು ಶಾಬ್ದಬೋಧ. ಇಲ್ಲಿಯೂ ತಿಙರ್ಥವಾದ ಕರ್ಮವು ಫಲವಾದ ಸಂಯೋಗದಲ್ಲಿ ವಿಶೇಷಣವಾಗಿದೆ. ಶಾಬ್ದಬೋಧಕ್ಕೆ ಇನ್ನೊಂದು ಉದಾಹರಣೆ-

'ಗಂಧವತೀ ಪೃಥಿವೀ' ಎಂದು ಪೃಥಿವೀಲಕ್ಷಣ. ಗಂಧವುಳ್ಳದ್ದು ಪೃಥಿವೀ ಎಂದರ್ಥ. ಇದಕ್ಕೆ ಶಾಬ್ದಬೋಧ ಹೀಗೆ– 'ಸಮವಾಯಸಂಬಂಧಾವಚ್ಛಿನ್ನಗಂಧನಿಷ್ಠಾಧೇಯತಾ ನಿರೂಪಿತಾಧಿಕರಣತಾವತೀ ಪೃಥಿವೀ.' ಈ ಬಗೆಯ ಅರ್ಥಗಳು ಆಯಾ ವಾಕ್ಯಗಳಿಂದ ಹೊರಡುತ್ತವೆಯೆಂದು ಶಾಸ್ತ್ರಕಾರರ ಅಭಿಪ್ರಾಯ. ಇಂತಹ ವಿಶ್ಲೇಷಣೆಯನ್ನು ಸಂಸ್ಕೃತಭಾಷೆಯಲ್ಲಿ ಮಾತ್ರ ಮಾಡಲು ಸಾಧ್ಯ. ಇಷ್ಟು ಸೂಕ್ಷ್ಮವಾಗಿ ಜಗತ್ತಿನಲ್ಲಿ ಇನ್ನು ಯಾವ ಭಾಷೆಯ ವ್ಯಾಕರಣಶಾಸ್ತ್ರವು ವಿಚಾರ ಮಾಡಿದೆ? ಬರಿಯ ಶಬ್ದರೂಪಗಳಾಗುವುದನ್ನು ತೋರಿಸಿಬಿಟ್ಟರೆ ವ್ಯಾಕರಣವಾದೀತು, ವ್ಯಾಕರಣಶಾಸ್ತ್ರವಾಗುವುದಿಲ್ಲ.

ಶಬ್ದಾರ್ಥಗಳು

ಕಾರಕಪ್ರಕರಣಕ್ಕೆ ಉಪಯುಕ್ತವಾದ ಇನ್ನೊಂದು ವಿಷಯವನ್ನು ಈಗ ಸಂಕ್ಷೇಪವಾಗಿ ನಿರೂಪಿಸಬೇಕಾಗಿದೆ. ಶಬ್ದ ಮತ್ತು ಅರ್ಥಕ್ಕೆ ಅಭೇದವೆಂದು ಹೇಳಿದ್ದರೂ ಇದು ಪರಮಾರ್ಥವಾದ ಅಭೇದವಲ್ಲ. ಹಾಲು ಕ್ಷೀರಗಳಿಗೆ ಇರುವ ಅಭೇದವಲ್ಲ. ಒಂದನ್ನೊಂದು ಬಿಟ್ಟಿರದ ಅಭೇದ. ಇದನ್ನು ತಾದಾತ್ಮ್ಯ ಎನ್ನುತ್ತಾರೆ. ಶಬ್ದಾರ್ಥಗಳಿಗಿರುವುದು ತಾದಾತ್ಮ್ಯಸಂಬಂಧ. ಭೇದಸಹಿಷ್ಣು ಅಭೇದ ಎಂದು ಇನ್ನೊಂದು ವ್ಯಾಖ್ಯೆ. ಭೇದವನ್ನು ಸಹಿಸಿಕೊಳ್ಳುವ ಅಭೇದ.

ಶಬ್ದಕ್ಕೆ ಅರ್ಥವನ್ನು ಬೋಧಿಸುವ ಸಾಮರ್ಥ್ಯವಿದೆಯಷ್ಟೇ. ಈ ಸಾಮರ್ಥ್ಯವು 'ಅಭಿಧಾ', 'ಲಕ್ಷಣಾ', 'ವ್ಯಂಜನಾ' –ಎಂದು ಮೂರು ವಿಧ. ಅಭಿಧೆಯನ್ನು ಶಕ್ತಿಯೆಂದು ಹೇಳುವುದೂ ಉಂಟು. ಯಾವ ಶಬ್ದಕ್ಕೆ ಯಾವ ಅರ್ಥದಲ್ಲಿ ಶಕ್ತಿಯಿದೆ ಯೆಂಬ ಶಕ್ತಿಗ್ರಹವಿಲ್ಲದಿದ್ದರೆ, ಆ ಶಬ್ದದಿಂದ ಅರ್ಥವಾಗುವುದಿಲ್ಲ. ಈ ಶಕ್ತಿಗ್ರಹವು ಲೋಕವ್ಯವಹಾರದಿಂದಲೂ ವ್ಯಾಕರಣ, ಕೋಶ, ಆಪ್ತವಾಕ್ಯ ಮುಂತಾದವುಗಳಿಂದಲೂ ಆಗುತ್ತದೆ. ಶಕ್ತಿ(ಅಭಿಧಾ)ಯಿಂದ ತೋರುವ ಅರ್ಥಕ್ಕೆ ಶಕ್ಯಾರ್ಥವೆಂದು ಹೆಸರು. ವಾಚ್ಯ, ಅಭಿಧೇಯ ಎಂದರೂ ಇದೇ. ಈ ಅರ್ಥವನ್ನು ಬೋಧಿಸುವ ಶಬ್ದವು ವಾಚಕ, ಅಭಿಧಾಯಕ. ಮನುಷ್ಯ, ಮರ, ಬಳ್ಳಿ, ನೀರು –ಮೊದಲಾದ ಶಬ್ದಗಳು ಆಯಾ ಅರ್ಥಗಳನ್ನು ಬೋಧಿಸುವುದು ಶಬ್ದದ ಅಭಿಧಾರೂಪವಾದ ಶಕ್ತಿಯಿಂದ.

ಲಕ್ಷಣಾ ಎಂದರೆ ಶಕ್ಯಸಂಬಂಧ. ಕೆಲವು ವೇಳೆ ಈ ಶಕ್ಯಾರ್ಥವನ್ನು ಬಿಟ್ಟು ಅದರೊಡನೆ ಸಂಬಂಧವಿರುವ ಇನ್ನೊಂದು ಅರ್ಥವನ್ನು ಗ್ರಹಿಸಬೇಕಾಗುತ್ತದೆ. ಅದು ಲಕ್ಷ್ಯಾರ್ಥ. ಉದಾ–

೧. ನಾನು ರೈಲಿನಲ್ಲಿ ಬಂದೆ.

ರೈಲೆಂದರೆ ಕಬ್ಬಿಣದ ಹಳಿ. ಈ ಅರ್ಥವು ಕೂಡುವುದಿಲ್ಲವಾದ್ದರಿಂದ ರೈಲಿನ ಮೇಲೆ ಸಾಗುವ ರೈಲುಬಂಡಿ ಎಂದು ಅರ್ಥ ಮಾಡಿಕೊಳ್ಳಬೇಕು. ಈ ಹಳಿ ವಾಚ್ಯಾರ್ಥ. ಅದರ ಸಂಬಂಧವಿರುವ ಬಂಡಿ ಲಕ್ಷ್ಯಾರ್ಥ.

೨. ಒಂದು ಕಿಲೋ ಸಕ್ಕರೆ ಬೇಕು.

ಕಿಲೋ ಎನ್ನುವುದು ಒಂದು ಅಳತೆ, ತೂಕ. ಅದೇ ಸಕ್ಕರೆಯಲ್ಲ. ಆದ್ದರಿಂದ ಕಿಲೋ ಅಳತೆಗೆ ಸರಿದೂಗುವ –ಎಂದು ಕಿಲೋ ಶಬ್ದದ ಲಕ್ಷ್ಯಾರ್ಥ.

೩. ಆ ಹುಡುಗನು ಕತ್ತೆ.

ಮನುಷ್ಯನು ಕತ್ತೆಯಲ್ಲ. ಈ ಶಕ್ಯಾರ್ಥವು ಬಾಧಿತ. ಕತ್ತೆಗೆ ಸದೃಶ ಎಂದು ಆ ಶಬ್ದದ ಅರ್ಥ. ಇದೂ ಲಕ್ಷ್ಯಾರ್ಥ.

ಈ ಮೂರನೆಯ ವಾಕ್ಯದಲ್ಲಿ ಆ ಹುಡುಗನು ದಡ್ಡ ಎಂಬ ಇನ್ನೊಂದು ಅರ್ಥವು ಹೊಳೆಯುತ್ತದೆ. ಅದು ವ್ಯಂಜನೆಯಿಂದ ತೋರುವ ಅರ್ಥ. ಅದನ್ನು ವ್ಯಂಗ್ಯಾರ್ಥವೆನ್ನುತ್ತಾರೆ.

ವ್ಯಂಜನೆಗೆ ಒಂದು ಸರಿಯಾದ ಲಕ್ಷಣವನ್ನು ಹೇಳುವುದು ಕಷ್ಟ. ಅದೊಂದು ವಿಲಕ್ಷಣವಾದ ಶಬ್ದಸಾಮರ್ಥ್ಯ. ಅದು ಅಭಿಧೆಯೂ ಅಲ್ಲ, ಲಕ್ಷಣೆಯೂ ಅಲ್ಲ. ಅನುಭವಾದಿಗಳಿಂದ ಪರಿಪಕ್ವವಾದ ಬುದ್ಧಿಶಕ್ತಿಯುಳ್ಳವನಿಗೆ ವಾಕ್ಯದ ಒಂದು ಶಬ್ದವನ್ನು ಕೇಳಿದಾಗ ಹೊಳೆಯುವುದು ವ್ಯಂಗ್ಯಾರ್ಥ. ಅದನ್ನು ತಿಳಿಸುವ ಶಬ್ದಸಾಮರ್ಥ್ಯವೇ ವ್ಯಂಜನಾ. ಇದು ಶಬ್ದದಲ್ಲಿ ಮಾತ್ರವಲ್ಲ, ಅರ್ಥ, ಅಭಿನಯ, ಚೇಷ್ಟೆ ಮೊದಲಾದವುಗಳಲ್ಲಿಯೂ ಇರುತ್ತದೆ– ಎಂಬುದೊಂದು ವಿಶೇಷ.

೧. ಅವಳ ಮನಸ್ಸು ಮಲ್ಲಿಗೆಹೂ = ಮನಸ್ಸು ಮೃದುವೆಂದು ವ್ಯಂಗ್ಯಾರ್ಥ.

೨. ಆ ಯಜಮಾನ ಬೆಂಕಿ = ಕಠೋರಸ್ವಭಾವದವನೆಂದು ವ್ಯಂಗ್ಯಾರ್ಥ.

ವ್ಯಾಕರಣಶಾಸ್ತ್ರದಲ್ಲಿ 'ದ್ಯೋತಕತ್ವ', 'ದ್ಯೋತನಾಶಕ್ತಿ' ಎಂಬ ಒಂದು ರೀತಿಯ ಶಬ್ದಸಾಮರ್ಥ್ಯವನ್ನು ಹೇಳಿದ್ದಾರೆ. ಈ ದ್ಯೋತಕತ್ವವು ಸ್ವತಃ ಯಾವ ಅರ್ಥವನ್ನೂ ಬೋಧಿಸುವುದಿಲ್ಲ. ಸಮೀಪದಲ್ಲಿ ಉಚ್ಚರಿತವಾದ ಇನ್ನೊಂದು ಶಬ್ದದ ಅಭಿಧಾ ಶಕ್ತಿಯನ್ನು ಉದ್ದೀಪನಗೊಳಿಸುತ್ತದೆ. ಉದಾಃ

ವಿಹಾರ, ಆಹಾರ, ಸಂಹಾರ, ಪ್ರಹಾರ, ಪರಿಹಾರ.
ಅನುಭವತಿ, ಪ್ರಭವತಿ, ಸಂಭವತಿ, ಪರಿಭವತಿ.

ಈ ಶಬ್ದಗಳಲ್ಲಿರುವ ವಿ, ಆ, ಸಂ, ಅನು, ಪ್ರ –ಮುಂತಾದ ಉಪಸರ್ಗಗಳಲ್ಲಿ ಈ ದ್ಯೋತಕತ್ವಶಕ್ತಿ ಇದೆ. ಮುಂದಿರುವ ಧಾತುಗಳ ಅರ್ಥಭೇದಕ್ಕೆ ಇವು ನಿಮಿತ್ತಗಳು. ಧಾತುಗಳು ಅನೇಕಾರ್ಥಗಳಾದ್ದರಿಂದ ಹೃ, ಭೂ –ಮೊದಲಾದ ಧಾತುಗಳಿಗೆ ವಿಭಿನ್ನಾರ್ಥಗಳು ಶಕ್ಯಾರ್ಥಗಳೇ. ಆ ಅರ್ಥಗಳನ್ನು ಬೋಧಿಸುವ ಶಕ್ತಿ ಈ ಧಾತುಗಳಲ್ಲಿ ಸುಪ್ತವಾಗಿರುತ್ತದೆ. ಉಪಸರ್ಗಗಳು ಸುಪ್ತಶಕ್ತಿಯನ್ನೆಬ್ಬಿಸಿ ಉದ್ದೀಪನಗೊಳಿಸುತ್ತವೆ ಎಂದು ವ್ಯಾಕರಣಶಾಸ್ತ್ರವು ಹೇಳುತ್ತದೆ. ಈ ಉದ್ದೀಪನ ಶಕ್ತಿಯೇ ದ್ಯೋತನಾ. ಅದರ ಸಹಾಯದಿಂದ ಹೃ ಮೊದಲಾದವು ಬೋಧಿಸುವ ಅರ್ಥವೇ ದ್ಯೋತ್ಯವಾದ ಅರ್ಥ. ವಾಸ್ತವವಾಗಿ ಈ ದ್ಯೋತಕತ್ವವು ವ್ಯಂಜನಾ ಶಕ್ತಿಯಲ್ಲಿ ಸೇರಿಹೋಗುತ್ತದೆ. ಏವಂ ಚ ಅಭಿಧಾ(ಶಕ್ತಿ), ಲಕ್ಷಣಾ, ವ್ಯಂಜನಾ –ಇವು

ಮೂರು ಶಬ್ದದ ಶಕ್ತಿ(ಸಾಮರ್ಥ್ಯ)ವಿಶೇಷಗಳು. ಈ ಮೂರಕ್ಕೆ ವೃತ್ತಿ ಎಂಬ ಇನ್ನೊಂದು ಹೆಸರಿದೆ.

ಕೃದಂತಗಳು

ತಿಙಂತದಲ್ಲಿ ತಿಙರ್ಥವು ಧಾತ್ವರ್ಥಕ್ಕೆ ವಿಶೇಷಣವಾದರೆ, ಕೃದಂತದಲ್ಲಿ ಕೃದರ್ಥವು ವಿಶೇಷ್ಯವಾಗಿರುತ್ತದೆ.

ಉದಾ: ಗಂತಾ = ಹೋಗುವವನು. ಇಲ್ಲಿ ಕೃತ್‌ಪ್ರತ್ಯಯದ ಅರ್ಥ ಕರ್ತೃ. ಹೋಗುವ ಕ್ರಿಯೆ ವಿಶೇಷಣ. ಹೋಗುವ ಕ್ರಿಯೆಯುಳ್ಳವನು ಎಂದು ಶಬ್ದಾರ್ಥ.

ಪಾಚಕ = ಬೇಯಿಸುವವನು ರಕ್ಷಕ = ಕಾಪಾಡುವವನು	ಕ್ರಿಯೆ ಕರ್ತೃವಿಗೆ ವಿಶೇಷಣ
ಪಠಿತವಾನ್ = ಓದಿದವನು ಉಕ್ತವಾನ್ = ಹೇಳಿದವನು	ಭೂತಕಾಲದ ಕ್ರಿಯೆ ಕರ್ತೃವಿಗೆ ವಿಶೇಷಣ
ಪಠಿತ = ಓದಲ್ಪಟ್ಟ ಉಕ್ತ = ಹೇಳಲ್ಪಟ್ಟ	ಕ್ರಿಯೆಗೆ ಕರ್ಮವಾದ ಪುಸ್ತಕವು ವಿಶೇಷ್ಯ
ಸ್ತೋತುಮ್ = ಹೊಗಳುವುದಕ್ಕೆ, ಹೊಗಳಲು ಸ್ನಾತುಮ್ = ಮೀಯಲು	ಈ ಪ್ರತ್ಯಯವು ಮುಂದೆ ನಡೆಯುವ ಕ್ರಿಯೆಯೊಡನೆ ಸಂಬಂಧವನ್ನು ತಿಳಿಸುತ್ತದೆ. ಇಲ್ಲಿ ಸಂಬಂಧಕ್ಕೆ ಧಾತ್ವರ್ಥವು ವಿಶೇಷಣ. ಸಂಬಂಧವೇ ಪ್ರಧಾನ.
ಸ್ತುತ್ವಾ = ಹೊಗಳಿ ಸ್ನಾತ್ವಾ = ಸ್ನಾನಮಾಡಿ, ಮಿಂದು	ಇಲ್ಲಿ ಕೃತ್‌ಪ್ರತ್ಯಯವು ಭೂತಕಾಲದ ಕ್ರಿಯೆಯೊಡನೆ ಭವಿಷ್ಯತ್ತಿನ ಕ್ರಿಯೆಗೆ ಸಂಬಂಧವನ್ನು ಸೂಚಿಸುತ್ತದೆ. ಸಂಬಂಧವು ವಿಶೇಷ್ಯ.

ಆದರೆ ಭಾವಾರ್ಥದಲ್ಲಿ ಬರುವ ಕೃತ್‌ಪ್ರತ್ಯಯವೂ ಇದೆ. ಅದರ ಪರಿಸ್ಥಿತಿ ಬೇರೆಯದು. ಭಾವವೆಂದರೆ ಕೇವಲ ಧಾತ್ವರ್ಥ. ಉದಾ–

ಪಚನ ಪಾಕ	ಅಡುಗೆ ಮಾಡುವುದು
ಗಮನ ಗತಿ	ಹೋಗುವುದು

ಹೀಗೆಯೇ ಸಂಸ್ಕೃತದಲ್ಲಿ– ಸ್ತುತಿ, ರತಿ, ಮತಿ, ನೀತಿ, ಪ್ರೀತಿ, ಖ್ಯಾತಿ, ಜಯ, ಚಯ, ಸ್ತವ, ಜಪ –ಇತ್ಯಾದಿ.

ಕನ್ನಡದಲ್ಲಿ- ಕುಣಿತ, ಬಿಗಿತ, ಆಯ್ಕೆ, ಊಟ, ಆಟ, ಉಡುಗೆ, ನಂಬುಗೆ, ಮಾಳ್ಕೆ, ಕಳವು, ಬೇಡಿಕೆ, ಹೋಗುವುದು, ನೋಡುವುದು –ಇತ್ಯಾದಿ.

ಮೇಲ್ಕಂಡ ಶಬ್ದಗಳಲ್ಲಿ ಕೃದರ್ಥವು ಧಾತ್ವರ್ಥವನ್ನೇ ಅನುವಾದಿಸಿ ವಸ್ತುರೂಪ ದಲ್ಲಿ ಪ್ರಕಟಮಾಡುತ್ತದೆ. "ಕೃದಭಿಹಿತೋ ಭಾವಃ ದ್ರವ್ಯವತ್ ಪ್ರಕಾಶತೇ" ಎಂದು ವ್ಯಾಕರಣಶಾಸ್ತ್ರವು ಹೇಳುತ್ತದೆ. ಕೃತ್‌ಪ್ರತ್ಯಯದಿಂದ ಉಕ್ತವಾದ ಕ್ರಿಯೆಯು ದ್ರವ್ಯದಂತೆ ಪ್ರಕಾಶಿಸುತ್ತದೆ ಎಂದರ್ಥ. ಈ ಕ್ರಿಯೆಯು ಸ್ವತಃ ವಿಶೇಷಣವೂ ಅಲ್ಲ, ವಿಶೇಷ್ಯವೂ ಅಲ್ಲ. ಮಳೆ, ಹೊಳೆ, ಗಿಡ, ಮರಗಳಂತೆ ಒಂದು ದ್ರವ್ಯವೋ ಎಂಬ ರೀತಿಯಲ್ಲಿ ಈ ಕ್ರಿಯೆ ಇರುತ್ತದೆ. ಎಂದರೆ ಈ ಶಬ್ದಗಳ ಮೇಲೆ ಕಾರಕವಿಭಕ್ತಿಗಳು ಹತ್ತುತ್ತವೆ. ಪಾಕದಿಂದ, ಕುಣಿತವನ್ನು, ಕಳವನ್ನು ಮಾಡಿ, ಊಟದಿಂದ, ನೋಡು ವುದರಲ್ಲಿ –ಮುಂತಾದವು ಉದಾಹರಣೆಗಳು. ತಿಙಂತದಲ್ಲಿ ಕ್ರಿಯೆ ಅಸತ್ವರೂಪ ವಾಗಿರುತ್ತದೆ. ಅದು ಸುಪ್‌ಪ್ರತ್ಯಯವನ್ನು ಪಡೆಯಲು ಅರ್ಹವಲ್ಲ. ಕೃದಂತದಲ್ಲಿ ಕ್ರಿಯೆ ಸತ್ವರೂಪವಾಗಿರುತ್ತದೆ. ಆದ್ದರಿಂದ ದ್ರವ್ಯದ ಹಾಗೆ ಸುಪ್‌ಪ್ರತ್ಯಯವನ್ನು ಪಡೆದು ದ್ರವ್ಯದಂತೆ ವಿನಿಯುಕ್ತವಾಗುತ್ತದೆ. ಸತ್ವ = ದ್ರವ್ಯ.

ಸಂಗ್ರಹ

ಶಬ್ದಾರ್ಥಗಳಿಗೆ ಅಭೇದಸಂಬಂಧವಿದೆ. ಶಬ್ದಾರ್ಥಗಳು ಒಂದನ್ನು ಬಿಟ್ಟು ಇನ್ನೊಂದು ಇರುವುದಿಲ್ಲ. ಅರ್ಥದಲ್ಲಿರುವ ಜಾತಿ, ಗುಣ, ಕ್ರಿಯೆ, ಸಂಜ್ಞೆಗಳನ್ನನು ಸರಿಸಿ ಶಬ್ದಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು. ಜಾತಿ ಎಂದರೆ ವ್ಯಕ್ತಿಯಲ್ಲಿರುವ ಮನುಷ್ಯತ್ವ, ವೃಕ್ಷತ್ವ –ಮುಂತಾದ ಧರ್ಮವಿಶೇಷ. ಅವ್ಯಯವೂ ನಾಮಪದದಲ್ಲಿ ಸೇರುವುದರಿಂದ ನಾಮಪದ 'ಕ್ರಿಯಾಪದ' –ಎಂದು ಎರಡು ವಿಧವಾಗಿಯೂ ಪದಗಳನ್ನು ವಿಭಾಗಿಸಬಹುದು. ಪತಂಜಲಿಯ ವ್ಯಾಕರಣ ಮಹಾಭಾಷ್ಯದಲ್ಲಿ 'ನಾಮಾಖ್ಯಾತೋಪಸರ್ಗನಿಪಾತಾಃ' ಎಂಬ ಇನ್ನೊಂದು ಬಗೆಯಲ್ಲಿ ಶಬ್ದಗಳನ್ನು ನಾಲ್ಕು ಬಗೆಯಲ್ಲಿ ವಿಂಗಡಿಸಿದ್ದಾರೆ. ಪರಾ, ಪಶ್ಯಂತೀ, ಮಧ್ಯಮಾ, ವೈಖರೀ –ಎಂಬ ದಾರ್ಶನಿಕವಿಭಾಗವೂ ಉಂಟು.

ತಿಙಂತ (ಆಖ್ಯಾತಪ್ರತ್ಯಯಾಂತ) ಕೃದಂತಗಳೆರಡೂ ಕ್ರಿಯಾವಾಚಕಗಳು. ತಿಙಂತಗಳಲ್ಲಿ ತಿಙ್‌ಪ್ರತ್ಯಯಗಳಿಗೆ ಕರ್ತೃ, ಕರ್ಮ –ಎಂಬ ಎರಡು ಅರ್ಥಗಳುಂಟು. ಇವು ಕ್ರಿಯೆಗೆ ವಿಶೇಷಣವಾಗಿರುತ್ತವೆ. ಭಾವಾರ್ಥಕ ತಿಙ್‌ಪ್ರತ್ಯಯವು ಸಂಸ್ಕೃತದಲ್ಲಿದೆ, ಕನ್ನಡದಲ್ಲಿಲ್ಲ. ಕೃತ್‌ಪ್ರತ್ಯಯಗಳು ಕರ್ತೃ, ಕರ್ಮ –ಇತ್ಯಾದಿ ಎಲ್ಲ ಕಾರಕಾರ್ಥಗಳಲ್ಲಿಯೂ ಭಾವಾರ್ಥದಲ್ಲಿಯೂ ಸಂಬಂಧಾರ್ಥದಲ್ಲಿಯೂ ಬರುತ್ತವೆ. ಭಾವಾರ್ಥವನ್ನು ಬಿಟ್ಟು ಉಳಿದ ಎಲ್ಲ ಅರ್ಥಗಳಲ್ಲಿಯೂ ಕೃದರ್ಥವು ಧಾತ್ವರ್ಥ ಕ್ರಿಯೆಗೆ ವಿಶೇಷ್ಯವಾಗಿರುತ್ತದೆ. ಭಾವಾರ್ಥದ ಕೃದಂತವು ದ್ರವ್ಯವಾಚಿಯಂತೆ ಕಾರಕ ವಿಭಕ್ತಿಪ್ರತ್ಯಯಗಳನ್ನು ಪಡೆಯುತ್ತದೆ.

ಶಾಬ್ದಬೋಧವು ವಾಕ್ಯದಲ್ಲಿರುವ ಪ್ರಕೃತಿಪ್ರತ್ಯಯಾರ್ಥಗಳೆಲ್ಲವನ್ನೂ ವಿಶೇಷಣ ವಿಶೇಷ್ಯಗಳನ್ನೂ ಶಬ್ದಾರ್ಥಗಳಿಗಿರುವ ಸಂಬಂಧವಿಶೇಷಗಳನ್ನೂ ಶಾಸ್ತ್ರವಾಗಿ ಬಿಡಿಸಿ ತಿಳಿಸುತ್ತದೆ. ಇದಕ್ಕಾಗಿಯೇ ಶಾಬ್ದಬೋಧವೆಂಬ ಒಂದು ಪ್ರಕಾರವನ್ನು ಸಂಸ್ಕೃತ ವೈಯಾಕರಣರು ಗೊತ್ತುಮಾಡಿಕೊಂಡಿರುತ್ತಾರೆ. ಕಡೆಗೆ ವಿಶೇಷ್ಯವಾಗಿ ನಿಲ್ಲತಕ್ಕದ್ದು ಕ್ರಿಯೆಯೇ ಸರಿ. ಯಾವ ವಾಕ್ಯದಲ್ಲಿ ಕ್ರಿಯಾಪದವಿಲ್ಲವೋ ಅಲ್ಲಿಯೂ ಸಹ ಕ್ರಿಯಾಪದವೊಂದನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಯಾವುದಿಲ್ಲದಿದ್ದರೂ ಅಸ್ತಿ= ಇದೆ, ಆಗಿದೆ ಎಂಬುದನ್ನಾದರೂ ಸೇರಿಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಆಕಾಂಕ್ಷೆಯು ಮುಗಿಯುವುದೇ ಇಲ್ಲ. ಉದಾ– ಇದು ಸಂಪಿಗೆಹೂ. ಆಪಾತದಲ್ಲಿ ನೋಡಿದಾಗ ಇಲ್ಲಿ ಕ್ರಿಯಾಪದವು ಬೇಡವೆಂದು ತೋರುತ್ತದೆ. ಆದರೆ 'ಇದು ಸಂಪಿಗೆಹೂ' ಆಗಿದೆಯೋ ಆಗಿಲ್ಲವೋ? ಎಂಬ ಪ್ರಶ್ನೆ ಹುಟ್ಟುವ ಸಂದರ್ಭ ಉಂಟು. ಆಗಿದೆ ಎನ್ನಬೇಕು, ಅಥವಾ ಆಗಿಲ್ಲ ಎನ್ನಬೇಕು. ಆಗಲೇ ವಾಕ್ಯದ ಅಭಿಪ್ರಾಯವು ಪೂರ್ಣವಾಗುತ್ತದೆ. ಇದೆ ಎನ್ನುವುದು ಅಸ್ತಿ ಎಂಬ ಅರ್ಥದ ಕ್ರಿಯಾಪದ. ಹೀಗೆಯೇ 'ಅದು ನನ್ನ ಮನೆ, ಇದು ಚಿನ್ನದ ಉಂಗುರ, ನಾಳೆ ಶಾಲೆಗೆ ರಜಾ' ಇತ್ಯಾದಿ. ಇವು ವ್ಯವಹಾರದಲ್ಲಿ ಪ್ರಸಿದ್ಧವಾಕ್ಯಗಳಾದ್ದರಿಂದ ಕ್ರಿಯಾಪದವನ್ನು ಬಳಸುವುದಿಲ್ಲ. ಬಳಸದಿದ್ದರೂ ಕ್ರಿಯಾಪದದ ಅರ್ಥವು ಹೊಳೆಯುತ್ತದೆ.

* * *

ಕಾರಕ

ವಾಕ್ಯದಲ್ಲಿರುವ ದ್ರವ್ಯ, ಗುಣ, ಕ್ರಿಯಾ, ಸಂಜ್ಞಾಶಬ್ದಗಳಲ್ಲಿ ಕ್ರಿಯಾಶಬ್ದವು ಮುಖ್ಯವಾದದ್ದು. ಕ್ರಿಯಾಬೋಧಕಶಬ್ದಗಳಾದ ತಿಙಂತಕೃದಂತಗಳಲ್ಲಿ ಅಸತ್ತ್ವರೂಪ ಕ್ರಿಯೆಯನ್ನು ತಿಳಿಸುವ ತಿಙಂತವು ಪ್ರಧಾನವಾಗಿರುತ್ತದೆ. ಏಕೆಂದರೆ ಇತರ ಪದಗಳಿಂದ ಹುಟ್ಟುವ ಎಲ್ಲ ಅನ್ವಯಾಕಾಂಕ್ಷೆಗಳು ಈ ಅಸತ್ತ್ವಭೂತಕ್ರಿಯೆಯಲ್ಲಿ ಅನ್ವಿತವಾದಾಗಲೇ ಶಾಂತವಾಗುತ್ತವೆ. ಕೃದಂತಕ್ರಿಯೆಯಲ್ಲಿ ಅನ್ವಿತವಾದಾಗ ಆ ಕ್ರಿಯೆಯು ದ್ರವ್ಯಕ್ಕೆ ವಿಶೇಷಣವಾಗಿರುವುದರಿಂದ ದ್ರವ್ಯವೇ ವಿಶೇಷ್ಯವಾಗಿ ಎದ್ದುನಿಂತು ಮತ್ತೆ ಇನ್ನೊಂದು ಕ್ರಿಯೆಯನ್ನು ಆಕಾಂಕ್ಷಿಸುತ್ತದೆ. ಹೇಗೆಂದರೆ,

೧. ಸಃ ಉಕ್ತವಾನ್ = ಅವನು ಹೇಳಿದವನು.

೨. ಅಹಂ ಗತವಾನ್ = ನಾನು ಹೋದವನು.

ಮೊದಲನೆಯ ವಾಕ್ಯಕ್ಕೆ ಆಗಿದ್ದಾನೆ ಎಂದೂ ಎರಡನೆಯ ವಾಕ್ಯಕ್ಕೆ ಆಗಿದ್ದೇನೆ ಎಂದು ಕ್ರಿಯಾಪದವನ್ನು ಸೇರಿಸದಿದ್ದರೆ ವಾಕ್ಯವು ಪೂರ್ಣವಾಗುವುದೇ ಇಲ್ಲ. ಭೂತಕಾಲದ ಸಂಬಂಧವಿರುವುದಾದರೆ ಕ್ರಮವಾಗಿ ಆದನು, ಆದೆನು ಎಂಬುದನ್ನು

ಸೇರಿಸಬೇಕಾಗುತ್ತದೆ. ಸಂಸ್ಕೃತವಾಕ್ಯಗಳನ್ನು ಕೆಳಗೆ ಕಂಡಂತೆ ಭಾಷಾಂತರಿಸುವುದುಂಟು:

೧. ಸ ಉಕ್ತವಾನ್ = ಅವನು ಹೇಳಿದನು.

೨. ಅಹಂ ಗತವಾನ್ = ನಾನು ಹೋದೆನು.

ಇದು ತಾತ್ಪರ್ಯಕಥನವೇ ಹೊರತು ಶಬ್ದಾರ್ಥವಲ್ಲ. ನ್ಯಾಯವಾಗಿ 'ಸಃ ಉಕ್ತವಾನ್' –ಇಲ್ಲಿ ಅಸ್ತಿ- ಅಭವತ್ ಎಂದೂ 'ಅಹಂ ಗತವಾನ್' ಇಲ್ಲಿ ಅಸ್ಮಿ –ಅಭವಮ್ –ಎಂದೂ ತಿಙಂತಗಳ ಅಧ್ಯಾಹಾರದಿಂದಲೇ ವಾಕ್ಯವು ಪೂರ್ಣವಾಗುತ್ತದೆ.

ಈ ಕಾರಣದಿಂದಲೇ 'ಏಕತಿಙ್ ವಾಕ್ಯಂ' ಎಂದು ವ್ಯಾಕರಣಶಾಸ್ತ್ರವು ವಾಕ್ಯದ ಲಕ್ಷಣವನ್ನು ಹೇಳಿದೆ. ಒಂದು ತಿಙಂತದಿಂದ ಘಟಿತವಾದದ್ದು ವಾಕ್ಯವೆಂದರ್ಥ. ಕ್ರಿಯೆಗೆ ಸಂಬಂಧಿಸಿದ್ದು ಕಾರಕ. ಈ ಸಂಬಂಧವು ನಾನಾವಿಧವಾಗಿರುತ್ತವೆ. ಕಾರಕವಿಲ್ಲದೆ ವಾಕ್ಯರಚನೆಯೇ ಸಾಧ್ಯವಾಗದು. ಕ್ರಿಯಾಕಾರಕಸಂಬಂಧಗಳನ್ನು ಸರಿಯಾಗಿ ತಿಳಿದುಕೊಂಡರೆ ಮಾತ್ರ ಯೋಗ್ಯವಾದ ವಿಭಕ್ತಿಪ್ರತ್ಯಯಗಳನ್ನು ಸೇರಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಕಾರಕಪ್ರಕರಣವು ವ್ಯಾಕರಣದಲ್ಲಿ ಮುಖ್ಯಭಾಗವಾಗಿದೆ.

ಕಾರಕಲಕ್ಷಣ

ಇದು ಸಂಜ್ಞಾಶಬ್ದ. ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ –ಈ ಆರಕ್ಕೆ ಕಾರಕವೆಂದು ಸಂಜ್ಞೆ.

ಕರ್ತಾ ಕರ್ಮ ಚ ಕರಣಂ ಸಂಪ್ರದಾನಂ ತಥೈವ ಚ ।
ಅಪಾದಾನಾಧಿಕರಣೇ ಕಾರಕಾಣಿ ಷಡೇವ ಹಿ ॥

–ಎಂಬ ಒಂದು ಪ್ರಾಚೀನಶ್ಲೋಕವಿದೆ. ಇದು ಅನ್ವರ್ಥವಾದ ಸಂಜ್ಞೆ. "ಕರೋತಿ ಕ್ರಿಯಾಂ ಜನಯತಿ–ನಿರ್ವರ್ತಯತೀತಿ ಕಾರಕಮ್". ಕ್ರಿಯೆಯನ್ನು ಉತ್ಪಾದಿಸತಕ್ಕದ್ದು ಕಾರಕ. ಕ್ರಿಯಾಜನಕತ್ವ ಅಥವಾ ಕ್ರಿಯಾನಿರ್ವರ್ತಕತ್ವವು ಕಾರಕದ ಲಕ್ಷಣ. ಆದ್ದರಿಂದ ಇವುಗಳಿಗೆ ಕ್ರಿಯೆಯಲ್ಲಿಯೇ ಅನ್ವಯ ಇರುತ್ತದೆ. ವಾಸ್ತವವಾಗಿ ಕರ್ತೃವೇ ಮುಖ್ಯ ಕಾರಕ. ಧಾತ್ವರ್ಥಕ್ರಿಯೆಯನ್ನು ಕರ್ತೃವೇ ನಡೆಸತಕ್ಕವನು. ಆದರೂ ಕರ್ಮ ಕರಣಾದಿಗಳಿಲ್ಲದೆ ಕರ್ತೃವಿನ ಕ್ರಿಯೆ ನಡೆಯುವುದಿಲ್ಲ. ಅವೂ ಸಹ ತಮ್ಮತಮ್ಮ ಅಪ್ರಧಾನಕ್ರಿಯೆಗಳಿಂದ ಪ್ರಧಾನಕ್ರಿಯೆಗೆ ಉಪಕರಿಸುತ್ತವೆಯಾದ್ದರಿಂದ ಅವನ್ನು ಕಾರಕಗಳೆಂದು ಕರೆದಿದ್ದಾರೆ. 'ಚೈತ್ರನು ಅಕ್ಕಿಯನ್ನು ಪಾತ್ರೆಯಲ್ಲಿಟ್ಟು ಕಟ್ಟಿಗೆಗಳಿಂದ ಮೈತ್ರನಿಗೋಸ್ಕರ ಅಡುಗೆ ಮಾಡುತ್ತಾನೆ' –ಎಂಬ ವಾಕ್ಯದಲ್ಲಿ ಕರ್ತೃವಾದ ಚೈತ್ರನು ಪ್ರಧಾನ ಕಾರಕ. ಅಕ್ಕಿಯು ಬೆಂದು ವಿಕ್ಲಿತ್ತಿಯೆಂಬ ಫಲವನ್ನು ಧರಿಸಿ ಪಾಕಕ್ರಿಯೆಗೆ ಉಪಕರಿಸುತ್ತದೆ. ಕಟ್ಟಿಗೆಗಳು ಬೆಂಕಿಯಿಂದ ಜ್ವಲಿಸಬೇಕು. ಪಾತ್ರೆಯು ಅಕ್ಕಿ ಮತ್ತು ನೀರನ್ನು ತನ್ನಲ್ಲಿ ಇಟ್ಟುಕೊಳ್ಳಬೇಕು. ಮೈತ್ರನಿಗೋಸ್ಕರವೇ ಅಡುಗೆ ಮಾಡುವುದರಿಂದ ಅಡುಗೆಯ ಫಲವಾದ ಅನ್ನವನ್ನು ಪಡೆಯುವುದರ ಮೂಲಕ ಅಡುಗೆಗೆ

ಕಾರಣನಾಗಿದ್ದಾನೆ. 'ಮರದಿಂದ ಹಣ್ಣು ಬೀಳುತ್ತದೆ' ಎಂಬಲ್ಲಿ ಬೀಳುವುದರಿಂದ ಮರಕ್ಕೂ ಹಣ್ಣಿಗೂ ವಿಶ್ಲೇಷವಾಗುತ್ತದೆ. ವಿಶ್ಲೇಷಕ್ಕೆ ಅವಧಿಭಾವವನ್ನು ಹೊಂದುವುದೇ ಬೀಳುವ ಕ್ರಿಯೆಗೆ ಆಗುವ ಉಪಕಾರ. ಇದನ್ನೇ ಮುಂದೆ ವಿಸ್ತಾರವಾಗಿ ತಿಳಿಸಲಾಗುವುದು. ಹೀಗೆ ಈ ಕಾರಕಗಳೆಲ್ಲವೂ ಪ್ರಧಾನಕ್ರಿಯೆಯು ನಡೆಯುವುದಕ್ಕೆ ಉಪಕರಿಸುತ್ತದೆ. ಆದ್ದರಿಂದ ಕರ್ಮಾದಿಗಳೂ ಕ್ರಿಯಾಜನಕಗಳೆಂದು ತಿಳಿಯಬೇಕು.

ಕಾರಕಶಬ್ದಕ್ಕೆ 'ಕ್ರಿಯೆ' ಎಂಬ ಅರ್ಥವನ್ನೂ ಮಹಾಭಾಷ್ಯಕಾರರು ಹೇಳಿದ್ದಾರೆ. 'ಕರೋತಿ ಕರ್ತೃಕರ್ಮಾದಿವ್ಯಪದೇಶಾನ್ ಇತಿ ಕಾರಕಂ=ಕರ್ತೃ, ಕರ್ಮ -ಮುಂತಾದ ಸಂಜ್ಞೆಗಳನ್ನುಂಟುಮಾಡುತ್ತದೆಯಾದ್ದರಿಂದ ಕಾರಕ" -ಎಂದು ಶಬ್ದದ ವ್ಯುತ್ಪತ್ತಿ. ಕಾರಕ ಎಂಬ ಶಬ್ದವಿಶೇಷವನ್ನು ಬೆಳೆಸಿರುವುದರಿಂದ ಕರ್ತೃಕರ್ಮಾದಿಗಳಿಗೆ ಕಾರಕಶಬ್ದವು ಸಂಜ್ಞೆಯೂ ಆಗುತ್ತದೆ. ಏವಂ ಚ ಕರ್ತೃಕರ್ಮಾದಿಸಂಜ್ಞೆಗಳಿಗೆ ಕ್ರಿಯೆಯು ಕಾರಣ. ಕ್ರಿಯೆಯು ಹುಟ್ಟುವುದಕ್ಕೆ ಕರ್ತೃಕರ್ಮಾದಿಗಳು ಕಾರಣ. ಇಲ್ಲಿ ಅನ್ಯೋನ್ಯಾಶ್ರಯ ದೋಷವೇನೂ ಇಲ್ಲ.

ಶ್ರೀರಾಮನು ದಾಶರಥಿ ಎನ್ನಿಸಲು ದಶರಥನು ಕಾರಣ. ದಶರಥನು ಪುತ್ರವಂತನೆನಿಸಲು ಶ್ರೀರಾಮನು ಕಾರಣ -ಎಂದ ಹಾಗೆ ಇದು.

ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ -ಎಂದು ಒಟ್ಟು ಆರು ಕಾರಕಗಳಾಗುತ್ತವೆ. ಕಾರಕದ ಸಾಮಾನ್ಯಲಕ್ಷಣವನ್ನು ಕನ್ನಡದ ವೈಯಾಕರಣರು ಹೇಳಿಲ್ಲ. ಕರ್ತೃ, ಕರ್ಮ -ಮುಂತಾದ ಕಾರಕವಿಶೇಷಗಳ ಲಕ್ಷಣಗಳನ್ನು ಹೇಳಿಲ್ಲ. ಸಂಸ್ಕೃತವ್ಯಾಕರಣಶಾಸ್ತ್ರದಿಂದ ಸಿದ್ಧವಾದದ್ದನ್ನು ಇವರು ನೇರವಾಗಿ ತೆಗೆದುಕೊಂಡು ಅವುಗಳಿಗೆ ಬರುವ ವಿಭಕ್ತಿಗಳನ್ನು ಹೇಳುತ್ತಾರೆ. ಭಟ್ಟಾಕಳಂಕನು ಮಾತ್ರ ತನ್ನ 'ಶಬ್ದಾನುಶಾಸನ'ದ 'ಮಂಜರೀಮಕರಂದ'ದಲ್ಲಿ ತಕ್ಕಮಟ್ಟಿಗೆ ವಿಚಾರಮಾಡಿದ್ದಾನೆ. ಆದ್ದರಿಂದ ಪಾಣಿನಿಯ ಅಷ್ಟಾಧ್ಯಾಯಿಯನ್ನನುಸರಿಸಿ, ಉಚಿತವಾದಷ್ಟನ್ನು ಇಲ್ಲಿ ವಿವರಿಸಲಾಗುವುದು.

ಸಂಸ್ಕೃತದಲ್ಲಿರುವಂತೆ ಕನ್ನಡದಲ್ಲಿ ಏಳು ವಿಭಕ್ತಿಗಳಿವೆ. ಇವು ಕಾರಕವಿಭಕ್ತಿ, ಉಪಪದವಿಭಕ್ತಿ -ಎಂದು ಎರಡು ವಿಧ. ಕರ್ತೃಕರ್ಮಾದಿಕಾರಕಗಳ ಮೇಲೆ ವಿಧಿಸಿದ ವಿಭಕ್ತಿಗಳು ಕಾರಕವಿಭಕ್ತಿಗಳು. ಕಾರಕಗಳನ್ನುಳಿದು ಇತರ ಪದಗಳ ಯೋಗದಲ್ಲಿ ಬರುವ ವಿಭಕ್ತಿಗಳು ಉಪಪದವಿಭಕ್ತಿಗಳು. ಷಷ್ಠೀವಿಭಕ್ತಿಯು ಕಾರಕಾರ್ಥದಲ್ಲಿ ಬಂದಾಗ ಕಾರಕವಿಭಕ್ತಿಯೆನಿಸುತ್ತದೆ. ಹಾಗಲ್ಲದೆ ಬರಿಯ ಸಂಬಂಧಾರ್ಥದಲ್ಲಿ ಬಂದಾಗ ಸಂಬಂಧಸಾಮಾನ್ಯಷಷ್ಠಿ ಎನಿಸುತ್ತದೆ. ಹೀಗೆ ಷಷ್ಠಿಯು ಕಾರಕವಿಭಕ್ತಿಯೂ ಕಾರಕೇತರವಿಭಕ್ತಿಯೂ ಆಗುತ್ತದೆ. ಷಷ್ಠಿಯು ಕಾರಕವಿಭಕ್ತಿಯಾದಾಗ ಹಿಂದೆ ಹೇಳಿದ ಕಾರಕಗಳಲ್ಲಿಯೇ ಕರ್ತ್ರರ್ಥದಲ್ಲಿಯೋ ಕರ್ಮಾರ್ಥದಲ್ಲಿಯೋ ಇರುತ್ತದೆ. ಆದ್ದರಿಂದ ಆರು ಕಾರಕಗಳು. ಏಳು ವಿಭಕ್ತಿಗಳು -ಎಂಬುದು ಸಮಂಜಸವಾಗಿದೆ.

ಉದಾಹರಣೆಗಳು:

ಕಾರಕವಿಭಕ್ತಿಗಳಿಗೆ –

ಕರ್ತೃ

ಭಟ್ಟಾಕಲಂಕೇನ ಶಬ್ದಾನುಶಾಸನಂ ವಿರಚಿತಮ್ = ಭಟ್ಟಾಕಳಂಕನಿಂದ ಶಬ್ದಾನುಶಾಸನವು ವಿರಚಿತವಾಗಿದೆ. ಭಟ್ಟಾಕಳಂಕನು ಕರ್ತೃ. ತೃತೀಯಾವಿಭಕ್ತಿ ಬಂದಿದೆ.

ಕರ್ಮ

ಗೋವಿಂದಃ ವೃಕ್ಷಮಾರೋಹತಿ = ಗೋವಿಂದನು ಮರವನ್ನು ಹತ್ತುತ್ತಾನೆ. ಮರವು ಕರ್ಮ. ದ್ವಿತೀಯಾ ವಿಭಕ್ತಿ ಬಂದಿದೆ.

ಕರಣ

ಬಾಲಕಃ ಲೇಖನ್ಯಾ ಲಿಖತಿ = ಹುಡುಗನು ಲೇಖನಿಯಿಂದ ಬರೆಯುತ್ತಾನೆ. ಲೇಖನಿ ಕರಣ (instrument). ತೃತೀಯಾವಿಭಕ್ತಿ ಬಂದಿದೆ.

ಸಂಪ್ರದಾನ

ಅಹಂ ಶಾರದಾಯೈ ಪುಸ್ತಕಮಯಚ್ಛಮ್ = ನಾನು ಶಾರದೆಗೆ ಪುಸ್ತಕವನ್ನು ಕೊಟ್ಟೆನು. ಶಾರದೆ ಸಂಪ್ರದಾನ. ಚತುರ್ಥೀವಿಭಕ್ತಿ.

ಅಪಾದಾನ

ಸಃ ಗೃಹಾತ್ ನಿರ್ಗತಃ = ಮನೆಯಿಂದ (ಮನೆಯತ್ತಣಿಂ) ಹೊರಟನು. ಮನೆ ಅಪಾದಾನ. ಪಂಚಮೀವಿಭಕ್ತಿ.

ಅಧಿಕರಣ

ಋಷಯಃ ಆಶ್ರಮೇಷು ಅವಸನ್ = ಋಷಿಗಳು ಆಶ್ರಮಗಳಲ್ಲಿ ವಾಸವಾಗಿದ್ದರು. ಆಶ್ರಮ ಅಧಿಕರಣ. ಸಪ್ತಮೀವಿಭಕ್ತಿ.

ಪ್ರಥಮಾವಿಭಕ್ತಿಯು ಕರ್ತರಿಪ್ರಯೋಗದಲ್ಲಿ ಕರ್ತೃವನ್ನೂ ಕರ್ಮಣಿ ಪ್ರಯೋಗದಲ್ಲಿ ಕರ್ಮವನ್ನೂ ಬೋಧಿಸುತ್ತದೆ –ಎಂದು ತಿಳಿಯಬೇಕು. ಆ ಎರಡು ಅರ್ಥಗಳಲ್ಲಿ ಪ್ರಥಮಾವಿಭಕ್ತಿ ಬರುತ್ತದೆಯೆಂದು ವ್ಯಾಕರಣವು ಹೇಳಿಲ್ಲ. ಏಕೆಂದರೆ ಕರ್ತರಿ ಪ್ರಯೋಗದಲ್ಲಿ ಪ್ರಥಮಾಂತವು ಕರ್ತೃವೆಂಬುದನ್ನು ಕರ್ಮಣಿಪ್ರಯೋಗದಲ್ಲಿ ಅದು ಕರ್ಮವೆಂಬುದನ್ನೂ ಆಖ್ಯಾತಪ್ರತ್ಯಯವೋ ಅಥವಾ ಕೃತ್‌ಪ್ರತ್ಯಯವೋ ತಿಳಿಸಿ ಬಿಟ್ಟಿರುತ್ತದೆ. ಬೇರೆ ಯಾವ ವಿಭಕ್ತಿಗೂ ಪ್ರಾಪ್ತ ಇಲ್ಲದಾಗ ಪ್ರಥಮಾ ಬರುತ್ತದೆ. ಕರ್ತೃಕರ್ಮಗಳು ಕಾರಕಗಳಾದ್ದರಿಂದ ಪ್ರಥಮಾವಿಭಕ್ತಿಯನ್ನೂ ಕಾರಕವಿಭಕ್ತಿಯೆನ್ನಬಹುದು. ಕಾರಕ ಎಂಬ ಸಂಜ್ಞೆ ಮಾತ್ರ ಪ್ರಥಮಾವಿಭಕ್ತಿಗೆ ಇಲ್ಲ. ಸಂಸ್ಕೃತವ್ಯಾಕರಣಶಾಸ್ತ್ರವು ಬೇರೆ ಒಂದು ಕಾರಣದಿಂದ ಈ ರೀತಿಯಾಗಿ ಕಲ್ಪಿಸಿಕೊಂಡಿದೆ. ಉದಾ:

ಆಖ್ಯಾತಪ್ರತ್ಯಯ ಬಂದಾಗ–

೧. ಗೋವಿಂದನು ಪಾಠವನ್ನು ಓದುತ್ತಾನೆ. ಇದು ಕರ್ತರಿಪ್ರಯೋಗ. ಗೋವಿಂದನು ಕರ್ತೃ. ಪ್ರಥಮಾವಿಭಕ್ತಿ ಬಂದಿದೆ. ಕರ್ತೃವಾದರೂ ತೃತೀಯಾ ವಿಭಕ್ತಿ ಬಂದಿಲ್ಲ. ಏಕೆಂದರೆ ಓದುತ್ತಾನೆ ಎಂಬಲ್ಲಿರುವ ಆಖ್ಯಾತಪ್ರತ್ಯಯವು

ಕರ್ತ್ರರ್ಥದಲ್ಲಿಯೇ ಬಂದಿದೆ. ಆಖ್ಯಾತಪ್ರತ್ಯಯವು ಗೋವಿಂದನು ಕರ್ತೃ ಎಂಬುದನ್ನು ತಿಳಿಸಿಬಿಟ್ಟಿದೆ. ಈ ವಾಕ್ಯದಲ್ಲಿಯೇ ಪಾಠವು ಕರ್ಮವಾದ್ದರಿಂದ ದ್ವಿತೀಯಾ ಬಂದಿದೆ. ಅದರ ಕರ್ಮತ್ವವನ್ನು ಆಖ್ಯಾತಪ್ರತ್ಯಯವು ಹೇಳಿಲ್ಲ.

೨. ಗೋವಿಂದನಿಂದ ಪಾಠವು ಓದಲ್ಪಡುತ್ತದೆ. ಇದು ಕರ್ಮಣಿಪ್ರಯೋಗ. 'ಅಲ್ಪಡು' ಬಂದಿರುವುದರಿಂದ. ಆಖ್ಯಾತಪ್ರತ್ಯಯವು ಪಾಠದ ಕರ್ಮತ್ವವನ್ನು ತಿಳಿಸುತ್ತದೆ. ಆದ್ದರಿಂದ ದ್ವಿತೀಯಾವಿಭಕ್ತಿ ಬಂದಿಲ್ಲ. ಗೋವಿಂದನು ಕರ್ತೃವೆಂಬುದನ್ನು ಆಖ್ಯಾತವು ತಿಳಿಸಿಲ್ಲವಾದ್ದರಿಂದ ಆ ಶಬ್ದಕ್ಕೆ ತೃತೀಯಾವಿಭಕ್ತಿ ಬಂದಿದೆ.

ಕೃತ್‌ಪ್ರತ್ಯಯ ಬಂದಾಗ–

೧. 'ಗೋವಿಂದಃ ಪಾಠಂ ಪಠಿತವಾನ್ = ಗೋವಿಂದನು ಪಾಠವನ್ನು ಪಠಿಸಿದವನಾದನು.' 'ಪಠಿಸಿದವನು' ಎಂಬುದು ಕೃತ್‌ಪ್ರತ್ಯಯಾಂತ. ಕೃತ್ ಪ್ರತ್ಯಯವೇ ಗೋವಿಂದನು ಕರ್ತೃವೆಂಬುದನ್ನು ತಿಳಿಸಿದೆ.

೨. 'ಗೋವಿಂದನಿಂದ ಪಾಠವು ಪಠಿತವಾಯಿತು.' ಪಠಿತ ಎಂಬಲ್ಲಿರುವ ಕೃತ್ ಪ್ರತ್ಯಯವು ಕರ್ಮಾರ್ಥದಲ್ಲಿ ಬಂದಿದೆ. ಕರ್ಮವು ಉಕ್ತವಾದ್ದರಿಂದ ಪಾಠಶಬ್ದಕ್ಕೆ ದ್ವಿತೀಯಾ ಬಂದಿಲ್ಲ. ಉಳಿದ ಅಂಶಗಳನ್ನು ಹೀಗೆಯೇ ಊಹಿಸಿಕೊಳ್ಳಬೇಕು. ಧಾತುವಿನ ಮುಂದಿರುವ ಆಖ್ಯಾತಪ್ರತ್ಯಯದ ಅಥವಾ ಕೃತ್‌ಪ್ರತ್ಯಯದ ಅರ್ಥವು ಕರ್ತೃವಾದರೆ ಪ್ರಾತಿಪದಿಕದ ಮೇಲೆ ಕರ್ತ್ರರ್ಥದಲ್ಲಿ ಪ್ರಥಮಾವಿಭಕ್ತಿಯೂ ಆ ಪ್ರತ್ಯಯಗಳ ಅರ್ಥ ಕರ್ಮವಾದರೆ ಪ್ರಾತಿಪದಿಕದ ಮೇಲೆ ಕರ್ಮಾರ್ಥದಲ್ಲಿ ಪ್ರಥಮಾವಿಭಕ್ತಿಯೂ ಬರುತ್ತದೆಯೆಂದು ತಾತ್ಪರ್ಯ.

ಷಷ್ಠೀವಿಭಕ್ತಿಯು ಕರ್ತೃಕರ್ಮಗಳಿಗೆ ಬಂದಾಗ ಕಾರಕವಿಭಕ್ತಿಯಾಗುತ್ತದೆ. ಭಾವಾರ್ಥಕ ಕೃದಂತಗಳ ಯೋಗವಿದ್ದಾಗ ಕರ್ತೃಕರ್ಮಗಳ ಮೇಲೆ ಷಷ್ಠೀವಿಭಕ್ತಿ ಬರುವುದುಂಟು–

ಅತಿಥಿಗಳ ಭೋಜನ, ಮಕ್ಕಳ ಆಟ, ನರ್ತಕಿಯ ಕುಣಿತ. ಇಲ್ಲಿ ಕರ್ತರಿ ಷಷ್ಠೀ. ಶತ್ರುಗಳ ಹನನ, ಹಣ್ಣುಗಳ ಭಕ್ಷಣ, ಸಸ್ಯಗಳ ನೆಡುವಿಕೆ –ಇಲ್ಲಿ ಕರ್ಮಣಿ ಷಷ್ಠೀ. ವಿಕಲ್ಪವಾಗಿ ಸಂಬಂಧ ಸಾಮಾನ್ಯಷಷ್ಠಿಯೂ ಬರಬಹುದು. ಅದು ಕಾರಕಷಷ್ಠಿಯಲ್ಲ. ಸಂಸ್ಕೃತದಲ್ಲಿ ಈ ವಿಭಾಗಕ್ಕೆ ಪ್ರಯೋಜನವುಂಟು. ಕನ್ನಡದಲ್ಲಿ ಈ ವಿಭಾಗವೇನನ್ನೂ ಮಾಡದೆ, ಸಂಬಂಧಸಾಮಾನ್ಯಷಷ್ಠೀ ಎಂದು ಬಿಡಬಹುದು. ಏವಂ ಚ ದ್ವಿತೀಯಾ, ತೃತೀಯಾ, ಚತುರ್ಥೀ, ಪಂಚಮೀ, ಸಪ್ತಮೀ –ಇವು ಐದು ಕಾರಕವಿಭಕ್ತಿಗಳು. ಈ ಕಾರಕವಿಭಕ್ತಿಸಂಘಕ್ಕೆ ಪ್ರಥಮಾವಿಭಕ್ತಿ ಆಹ್ವಾನಿತವಿಶೇಷ ಸದಸ್ಯೆ. ಷಷ್ಠಿಯು ಐಚ್ಛಿಕ ಸದಸ್ಯೆ! ಕರ್ತೃ, ಕರಣ –ಇವೆರಡನ್ನು ತೃತೀಯಾವಿಭಕ್ತಿ ಬೋಧಿಸುತ್ತದೆ.

ಇವೂ ಸಹ ಕ್ರಿಯಾಯೋಗದಲ್ಲಿದ್ದು ಕರ್ತೃಕರ್ಮಾದಿಕಾರಕಗಳ ಕಾರ್ಯವನ್ನು ನಿರ್ವಹಿಸುತ್ತಿರುವಾಗ ಮಾತ್ರ ಕಾರಕವಿಭಕ್ತಿಗಳೆನಿಸುತ್ತವೆ. ಅನ್ಯತ್ರ ಬಂದಾಗ ಇವು ಕಾರಕವಿಭಕ್ತಿಗಳೆನಿಸುವುದಿಲ್ಲ. ಉಪಪದ ವಿಭಕ್ತಿಗಳು ಕಾರಕವಿಭಕ್ತಿಗಳಲ್ಲ.

ಉಪಪದವಿಭಕ್ತಿಗಳು

ಉಪ = ಸಮೀಪದಲ್ಲಿ ಉಚ್ಚರಿತವಾದ ಪದ ಉಪಪದವೆಂದು ವ್ಯುತ್ಪತ್ತಿ. ಪ್ರಾಯೇಣ ಉಪಪದಗಳು ಅವ್ಯಯಗಳಾಗಿರುತ್ತವೆ. ಇವುಗಳ ಸಂಬಂಧವಿದ್ದಾಗ ದ್ವಿತೀಯಾದಿ ವಿಭಕ್ತಿಗಳು ಬರುವುದುಂಟು. ಇಲ್ಲಿ ಕರ್ತೃ, ಕರ್ಮಾದಿ ಸಂಜ್ಞೆಗಳೇನೂ ಇರುವುದಿಲ್ಲ. ಸಂಬಂಧಸಾಮಾನ್ಯಷಷ್ಠಿಗೆ ಬದಲಾಗಿ ಬರತಕ್ಕ ವಿಭಕ್ತಿಗಳಿವು. ಉಪಪದ ಗಳ ಸಂಬಂಧದಲ್ಲಿ ಬರುವ ವಿಭಕ್ತಿಗಳಾದ್ದರಿಂದ ಉಪಪದವಿಭಕ್ತಿಗಳೆನ್ನುತ್ತಾರೆ. ಅಥವಾ ಅಭಿತಃ ಪರಿತಃ ಮುಂತಾದ ಪದಗಳ ಸಮೀಪದಲ್ಲಿ ಉಚ್ಚಾರಿತವಾದ ಕೃಷ್ಣಾದಿಪದಗಳೇ ಉಪಪದಗಳು. ಈ ಉಪಪದಗಳಿಗೆ ಬರುವ ವಿಭಕ್ತಿಗಳು ಉಪಪದವಿಭಕ್ತಿಗಳು ಎಂದೂ ಹೇಳಬಹುದು. ಮೊದಲು ಸಂಸ್ಕೃತದಲ್ಲಿರುವ ಕೆಲವು ಉದಾಹರಣೆಗಳನ್ನು ನೋಡಬಹುದು.

೧. ಅಭಿತಃ ಪರಿತಃ, ನಿಕಷಾ, ಅಂತರೇಣ –ಮುಂತಾದ ಕೆಲವು ಉಪಪದ ಗಳಿದ್ದಾಗ ದ್ವಿತೀಯಾವಿಭಕ್ತಿ ಬರುತ್ತದೆ.

ಅಭಿತಃ ಕೃಷ್ಣಂ = ಕೃಷ್ಣನ ಎರಡು ಪಾರ್ಶ್ವಗಳಲ್ಲಿ
ಪರಿತಃ ಕೃಷ್ಣಂ = ಕೃಷ್ಣನ ಸುತ್ತಲೂ
ನಿಕಷಾ ಲಂಕಾಂ = ಲಂಕೆಯ ಹತ್ತಿರ. "ಲಂಕಾಂ ನಿಕಷಾ ಹನಿಷ್ಯತಿ" (ಶಿಶುಪಾಲ ವಧದಲ್ಲಿ ಪ್ರಯೋಗ. ಸರ್ಗ–೧.)
ತ್ವಾಮಂತರೇಣ = ನಿನ್ನನ್ನು ಬಿಟ್ಟು, ನೀನಿಲ್ಲದೆ
ತ್ವಾಂ ಪ್ರತಿ = ನಿನ್ನನ್ನು ಕುರಿತು
ಧಿಕ್ ತ್ವಾಂ = ನಿನಗೆ ಧಿಕ್ಕಾರ

೨. **ಸಹಯುಕ್ತೇಽಪ್ರಧಾನೇ** (೨–೨–೧೯). ಸಹಾರ್ಥಕಶಬ್ದಗಳ ಯೋಗವಿದ್ದಾಗ ತೃತೀಯಾವಿಭಕ್ತಿ ಬರುತ್ತದೆ–

'ಪಿತಾ ಪುತ್ರೇಣ ಸಹ ಆಗತಃ.' ಪುತ್ರೇಣ ಸಾಕಂ, ಪುತ್ರೇಣ ಸಾರ್ಧಂ –ಎಂದೂ ಆಗುತ್ತದೆ. ಪುತ್ರನೊಡನೆ ತಂದೆ ಬಂದನು ಎಂದರ್ಥ.

೩. **ನಮಃ, ಸ್ವಸ್ತಿ, ಸ್ವಾಹಾ, ಸ್ವಧಾಲಂ ವಷಡ್ಯೋಗಾಚ್ಚ ॥** – (೨-೩-೧೬)
ಚತುರ್ಥೀ ಬರುತ್ತದೆ–

ಶಿವಾಯ ನಮಃ, ಪ್ರಜಾಭ್ಯಃ ಸ್ವಸ್ತಿ, ಅಗ್ನಯೇ ಸ್ವಾಹಾ, ಪಿತೃಭ್ಯಃ ಸ್ವಧಾ (ಪಿತೃಗಳಿಗೆ ಅರ್ಪಿತ). ದೈತ್ಯೇಭ್ಯೋ ಹರಿರಲಂ = ರಾಕ್ಷಸರನ್ನೆದುರಿಸಲು ಹರಿಯು ಸಮರ್ಥ. ಸಾಕು ಎಂಬ ಅರ್ಥದ ಅಲಂ ಶಬ್ದವಿದ್ದರೆ ತೃತೀಯಾ ಬರುತ್ತದೆ. ಏತೇನ

ಅಲಂ = ಇಷ್ಟು ಸಾಕು. ದೇವತಾಭ್ಯೋ ವಷಟ್ = ವಷಟ್ ಎಂದರೆ ಅರ್ಪಿತ ಎಂದರ್ಥ.

೪. ಪೃಥಕ್, ವಿನಾ ಶಬ್ದಗಳ ಯೋಗವಿದ್ದಾಗ ದ್ವಿತೀಯಾ, ತೃತೀಯಾ, ಪಂಚಮೀ ವಿಭಕ್ತಿಗಳು ಬರುತ್ತವೆ.

ತಂ ಪೃಥಕ್, ತೇನ ಪೃಥಕ್, ತಸ್ಮಾತ್ ಪೃಥಕ್ = ಅವನನ್ನು ಹೊರತುಪಡಿಸಿ, ಅವನಿಗಿಂತ ಬೇರೆಯಾಗಿ.

ರಾಮಂ ವಿನಾ, ರಾಮೇಣ ವಿನಾ, ರಾಮಾತ್ ವಿನಾ = ರಾಮನನ್ನು ಬಿಟ್ಟು, ರಾಮನನ್ನು ಹೊರತುಪಡಿಸಿ, ರಾಮನಿಲ್ಲದೆ.

ಇತ್ಯಾದಿ.

ಕನ್ನಡದ ಉದಾಹರಣೆಗಳು–

೧. **ಸಹಾರ್ಥೇನಾಪ್ರಧಾನೇ ॥** (–ಭಟ್ಟಾಕಳಂಕನ ಶಬ್ದಾನುಶಾಸನ, ಸೂ. ೨೧೧.)

ಸಹಾರ್ಥಕಶಬ್ದಗಳ ಯೋಗವಿದ್ದಾಗ ತೃತೀಯಾ ಬರುತ್ತದೆ. ಉದಾಃ ಮಗನಿಂ ಕೂಡಿ ಬಂದಂ ತಂದೆ, ಲಕ್ಷ್ಮಿಯಂ ಬೆರಸಿ ಹರಿಯೊಪ್ಪಿದಂ, ಉಮೆಯಿಂ ಸಂಗಡಿಸಿ ಮೆರೆದನಾ ಪೆರೆದಲೆಯಂ, ಮಂತ್ರಿಯಿಂದ ಕೂಡಿ ರಾಜನು ಬಂದನು.

ಒಡನೆ ನ ॥ (ಸೂ. ೨೧೨)

ಒಡನೆ ಶಬ್ದದ ಯೋಗವಿದ್ದರೆ ತೃತೀಯಾ ಬರುವುದಿಲ್ಲ. ಉದಾಃ

ಮಗನೊಡನೆ ಬಂದಂ, ಗುರುವಿನೊಡನೆ ಪೋದಂ. ಮಗನ ಜೊತೆಗೆ ಬಂದನು –ಎಂಬುದೂ ಉದಾಹರಣೆ. ಸಂಬಂಧಸಾಮಾನ್ಯದಲ್ಲಿ ಷಷ್ಠೀ ಬಂದಿದೆ.

೨. ಶಕ್ತಿ, ರುಚಿ, ಅಸೂಯೆ –ಮುಂತಾದ ಅರ್ಥವನ್ನೀಯುವ ಪದಗಳು ಇದ್ದಾಗ ಚತುರ್ಥೀವಿಭಕ್ತಿ ಬರುತ್ತದೆ. ಉದಾಃ

೧. ಮಲ್ಲನಿಗೆ ಮಲ್ಲನು ಶಕ್ತ, ಹಿಡಿಂಬನಿಗೆ ಭೀಮನು ಸಮರ್ಥ.

೨. ನನಗೆ ಸಿಹಿ ರುಚಿಸುತ್ತದೆ, ಅವನಿಗೆ ರೌದ್ರರಸವು ರುಚಿಸುವುದಿಲ್ಲ. ಇವಳಿಗೆ ಕಹಿ ಹಿಡಿಸುತ್ತದೆ.

೩. ಇದು ಪಾಂಡವರಿಗೆ ದ್ರೋಹ.

ಕಪಿಗೆ ಚಪಲತೆ ಸಹಜ, ಇವಳು ಹೂವಿಗೆ ಸದೃಶಳು, ಆತನು ಹುಲ್ಲಿಗೆ ಸಮಾನ, ಜನರಿಗೆ ಹುಲಿಯ ಭಯ, ರೋಗಕ್ಕೆ ಅಂಜುತ್ತಾನೆ –ಇತ್ಯಾದಿ.

ಕನ್ನಡದಲ್ಲಿ ತೃತೀಯಾ, ಚತುರ್ಥೀ –ಇವೆರಡೇ ಉಪಪದವಿಭಕ್ತಿಗಳೆಂದು ತೋರುತ್ತದೆ.

ಕಾರಕೇತರವಿಭಕ್ತಿಗಳು

ಅರ್ಥವಶದಿಂದ ಬರುವ ಕೆಲವು ವಿಭಕ್ತಿಗಳುಂಟು. ಕರ್ತ್ರಾದಿಕಾರಕಗಳಿಗೆ ಬಂದಿಲ್ಲವಾದ್ದರಿಂದ ಇವು ಕಾರಕವಿಭಕ್ತಿಗಳಲ್ಲ. ಉಪಪದವಿಭಕ್ತಿಗಳೂ ಅಲ್ಲ. ಇವನ್ನು ಕಾರಕೇತರವಿಭಕ್ತಿಗಳೆನ್ನಬಹುದು. ತಾದರ್ಥ್ಯದಲ್ಲಿ ಬರುವ ಚತುರ್ಥೀ, ಹೇತ್ವರ್ಥದಲ್ಲಿ ಬರುವ ತೃತೀಯಾ, ಸಂಬಂಧಸಾಮಾನ್ಯದ ಷಷ್ಠೀ –ಇವು ಈ ಗುಂಪಿಗೆ ಸೇರತಕ್ಕವು. 'ಪ್ರಕೃತ್ಯಾದಿಭ್ಯಸ್ತೃತೀಯಾ' ಎಂಬ ಪಾಣಿನೀಯವ್ಯಾಕರಣದ ವಾರ್ತಿಕವು ಪ್ರಕೃತಿ, ಸ್ವಭಾವ –ಮುಂತಾದ ಶಬ್ದಗಳ ಮೇಲೆ ಬೇರೆಬೇರೆ ಸಂಬಂಧಗಳಿದ್ದಾಗ ತೃತೀಯೆ ಯನ್ನು ವಿಧಿಸಿದೆ. ಅಭೇದಸಂಬಂಧವಿದ್ದಾಗಲೂ ತೃತೀಯೆ ಬರುವುದುಂಟು. ಇದು ಕನ್ನಡದಲ್ಲಿಯೂ ಇದೆ. ಉದಾ:

ಪ್ರಕೃತ್ಯಾ ಚಾರು = ಪ್ರಕೃತಿಯಿಂದ ಇದು ಚೆನ್ನಾಗಿದೆ.
ಸ್ವಭಾವೇನ ಕೋಪಿಷ್ಠಃ = ಸ್ವಭಾವದಿಂದ ಕೋಪಿಷ್ಠ.
ನಾಮ್ನಾ ದಶರಥಃ = ಹೆಸರಿನಿಂದ ದಶರಥ.
ಗೋತ್ರೇಣ ವಾಸಿಷ್ಠಃ = ಗೋತ್ರದಿಂದ ವಾಸಿಷ್ಠ.

ಇದರ ವಿವರಣೆ ಹೀಗೆ–

೧. 'ಈ ಗುಲಾಬಿಹೂ ಪ್ರಕೃತಿಯಿಂದ ಸುಂದರ.' ಇಲ್ಲಿ ತೃತೀಯಾವಿಭಕ್ತಿಗೆ ಅನ್ವಯ ಎಲ್ಲಿಗೆ? ಸೌಂದರ್ಯವೇ ಗುಲಾಬಿಹೂವಿನ ಪ್ರಕೃತಿಯಾಗಿದೆ. ಆದ್ದರಿಂದ ಸುಂದರಶಬ್ದಾರ್ಥದ ಏಕದೇಶವಾದ ಸೌಂದರ್ಯದಲ್ಲಿ ಪ್ರಕೃತಿಗೆ ಅಭೇದಾನ್ವಯ. ಪ್ರಕೃತ್ಯಭಿನ್ನವಾದ ಸೌಂದರ್ಯದಿಂದ ಕೂಡಿದ ಗುಲಾಬಿಹೂ ಎಂದರ್ಥ.

೨. 'ದುರ್ವಾಸನು ಸ್ವಭಾವದಿಂದ ಕೋಪಿಷ್ಠ.' ಕೋಪವೇ ಅವನ ಸ್ವಭಾವ. ಸ್ವಭಾವಕ್ಕೆ ಕೋಪಿಷ್ಠ ಶಬ್ದಾರ್ಥದ ಏಕದೇಶವಾದ ಕೋಪದಲ್ಲಿ ಅಭೇದಾನ್ವಯ. ಸ್ವಭಾವವಾದ ಕೋಪದಿಂದ ಕೂಡಿದವನು ಎಂದರ್ಥ.

೩. 'ಹೆಸರಿನಿಂದ ದಶರಥ.' ಅವನ ಹೆಸರೇ ದಶರಥ. ಹೆಸರಾದ ದಶರಥ ಶಬ್ದದಿಂದ ಕೂಡಿದವನು ಎಂದರ್ಥ.

೪. 'ಗೋತ್ರದಿಂದ ವಾಸಿಷ್ಠ.' ಗೋತ್ರವೇ ವಾಸಿಷ್ಠ. ವಾಸಿಷ್ಠವೆಂಬ ಗೋತ್ರವುಳ್ಳ ವನು ಎಂದು ತಾತ್ಪರ್ಯ.

ಅವನು ಹೆಸರಿಗೆ ಅಧ್ಯಕ್ಷ. ಹೆಸರಿಗೆ ತಹಶೀಲ್ದಾರ –ಎಂಬಾಗ ಕನ್ನಡದಲ್ಲಿ ಚತುರ್ಥಿಯೂ ಅಭೇದಾರ್ಥದಲ್ಲಿ ಬರುತ್ತದೆ ಎಂದು ಅಂಗೀಕರಿಸಬೇಕಾಗುತ್ತದೆ.

೧. ಅವನು ಸುಖದಿಂದ ಕಾಶಿಗೆ ಹೋದನು.

೨. ಇವನು ಕಷ್ಟದಿಂದ ಕಾಶಿಗೆ ಹೋಗಿ ಸೇರಿದನು.

ಇಲ್ಲಿ ತೃತೀಯಾವಿಭಕ್ತಿ ಯಾವ ಅರ್ಥದಲ್ಲಿ ಬಂದಿದೆ? ಸುಖ, ಕಷ್ಟಗಳೆಂದೂ ಹೋಗುವುದಕ್ಕೆ ಹೇತುಗಳಲ್ಲ. ಸಾಧನಗಳೂ ಅಲ್ಲ. ಇವು ಕಲ್ಪಿತಪ್ರಯೋಗಗಳಲ್ಲ.

ಶಿಷ್ಟರಿಂದ ಪ್ರಯುಕ್ತವಾಗಿರತಕ್ಕವು. ಸಂಸ್ಕೃತದಲ್ಲಿಯೂ 'ಸುಖೇನ ಯಾತಿ, ದುಃಖೇನ ಯಾತಿ' ಎಂಬ ಪ್ರಯೋಗಗಳುಂಟು. 'ಅದೊಂದು ಪದಪುಂಜ' ಎಂಬ ಹಾರಿಕೆಯ ಉತ್ತರವು ವ್ಯಾಕರಣಶಾಸ್ತ್ರಕ್ಕೆ ಸಲ್ಲದು.

ಈ ವಾಕ್ಯಗಳ ಅಭಿಪ್ರಾಯವನ್ನು ಪರಿಶೀಲಿಸಿ ಉಪಪತ್ತಿಯನ್ನು ಹೇಳಬೇಕು. 'ದಾರಿಯಲ್ಲಿ ಯಾವ ತೊಂದರೆಯೂ ಸಂಭವಿಸಲಿಲ್ಲ. ಸುಖವನ್ನು ಅನುಭವಿಸುತ್ತ ಹೋದನು' ಎಂದು ಮೊದಲನೆಯ ವಾಕ್ಯದ ಆಶಯ. 'ದಾರಿಯಲ್ಲಿ ಬಹಳ ತೊಂದರೆಗಳು ಸಂಭವಿಸಿದವು. ಕಷ್ಟವನ್ನನುಭವಿಸುತ್ತ ಕಾಶಿಯನ್ನು ಸೇರಿದನು' ಎಂದು ಎರಡನೆಯ ವಾಕ್ಯದ ಅಭಿಪ್ರಾಯ.

'ಸುಖಾನುಭವಸಹಿತವಾದ ಗಮನ', 'ಕಷ್ಟಾನುಭವಸಹಿತವಾದ ಗಮನ' ಎಂಬ ಅರ್ಥಗಳು ಈ ಎರಡು ವಾಕ್ಯಗಳಿಂದ ಬರುತ್ತದೆ. ಸುಖಶಬ್ದಕ್ಕೆ ಸುಖಾನುಭವ ಸಹಿತ –ಎಂದು ಲಾಕ್ಷಣಿಕಾರ್ಥ. ಕಷ್ಟಶಬ್ದಕ್ಕೆ ಕಷ್ಟಾನುಭವಸಹಿತ ಎಂದು ಲಾಕ್ಷಣಿ ಕಾರ್ಥ. 'ಪ್ರಕೃತ್ಯಾದಿಭ್ಯಸ್ಸೃತೀಯಾ' ಎಂಬ ವಾರ್ತಿಕದಿಂದ ತೃತೀಯಾವಿಭಕ್ತಿಯು ಅಭೇದಸಂಬಂಧದಲ್ಲಿ ಬಂದಿದೆ. ಧಾತ್ವರ್ಥದಲ್ಲಿ ಅಭೇದಸಂಬಂಧದಿಂದ ಅನ್ವಯ. ಸುಖಾನುಭವಸಹಿತಾಭಿನ್ನವಾದ ಯಾನ, ಕಷ್ಟಾನುಭವಸಹಿತಾಭಿನ್ನವಾದ ಯಾನ –ಎಂದು ಕ್ರಮಶಃ ಎರಡು ವಾಕ್ಯಗಳ ಅರ್ಥ. ಸಾಮಾನಾಧಿಕರಣ್ಯಸಂಬಂಧದಿಂದ ಸುಖದುಃಖಾನುಭವಗಳು ಕ್ರಿಯೆಯೊಂದಿಗೆ ಕರ್ತೃವಿನಲ್ಲಿ ಸೇರಿಕೊಂಡಿವೆ. ಸುಖಾನುಭವ ಯಾರಲ್ಲಿಯೋ ಅವನಲ್ಲಿಯೇ ಯಾನಕ್ರಿಯೆ ಇದೆ. ದುಃಖಾನುಭವ ಯಾರಲ್ಲಿಯೋ ಅವನಲ್ಲಿಯೂ ಯಾನಕ್ರಿಯೆ ಇದೆ. ಹೀಗಿರುವುದೇ ಸಾಮಾನಾಧಿ ಕರಣ್ಯಸಂಬಂಧ. ತೃತೀಯಾವಿಭಕ್ತಿಯ ಅರ್ಥ ಅಭೇದ. ಸಾಮಾನ್ಯಜನರಿಗೆ ಇದನ್ನರಿತುಕೊಳ್ಳುವುದು ಕಷ್ಟವೆನಿಸಿದರೂ ಶಾಸ್ತ್ರಪ್ರಕ್ರಿಯೆ ಹೇಗಿರುತ್ತದೆಂಬುದನ್ನು ತಿಳಿಸಬೇಕಾಗಿ ಬಂದದ್ದರಿಂದ ನಾಲ್ಕು ಮಾತುಗಳನ್ನು ಬರೆಯಬೇಕಾಯಿತು.

೧. ಕರ್ತೃ

ಸ್ವತಂತ್ರಃ ಕರ್ತಾ (೧–೪–೫೪)

ಕ್ರಿಯೆಯನ್ನು ನಡೆಸುವುದರಲ್ಲಿ ಸ್ವತಂತ್ರವಾದ ಕಾರಕವು ಕರ್ತೃಸಂಜ್ಞೆಯನ್ನು ಪಡೆಯುತ್ತದೆ. ಈ ಸೂತ್ರಗಳೆಲ್ಲವೂ ಕಾರಕಾಧಿಕಾರದಲ್ಲಿರುವುದರಿಂದ ಕಾರಕ –ಎಂಬ ಅರ್ಥವೂ ಕ್ರಿಯೆಯನ್ನು ನಡೆಸುವುದರಲ್ಲಿ ಸ್ವಾತಂತ್ರ್ಯವೆಂಬ ಅರ್ಥವೂ ದೊರೆಯು ತ್ತದೆ. ಧಾತ್ವರ್ಥಕ್ರಿಯೆಯಲ್ಲಿ ಪ್ರಧಾನವಾದ ಯಾವ ವ್ಯಾಪಾರ ಉಂಟೋ ಅದಕ್ಕೆ ಆಶ್ರಯನಾದವನು ಸ್ವತಂತ್ರ. 'ಗಚ್ಛತಿ'– ಹೋಗುತ್ತಾನೆ ಎಂಬಲ್ಲಿ ಸಂಯೋಗಾನು ಕೂಲವ್ಯಾಪಾರವು ಧಾತ್ವರ್ಥವೆಂದು ಹಿಂದೆ ಬರೆದಿದೆ. ಈ ವ್ಯಾಪಾರವು ಯಾರಲ್ಲಿದೆಯೋ ಅವನು ಸ್ವತಂತ್ರನಾದ್ದರಿಂದ ಕರ್ತನಾಗುತ್ತಾನೆ. 'ಚೈತ್ರನು ಹಳ್ಳಿಗೆ ಹೋಗುತ್ತಾನೆ. ಹುಡುಗನು ಪಾಠವನ್ನು ಓದುತ್ತಾನೆ' –ಮುಂತಾದ ಉದಾಹರಣೆ ಗಳಲ್ಲಿ ಈ ವ್ಯಾಪಾರಕ್ಕೆ ಆಶ್ರಯನಾದವನು ಕರ್ತೃವೆಂಬುದು ಸ್ಪಷ್ಟವಾಗಿದೆ.

ಇನ್ನೊಂದು ವಿಷಯವನ್ನಿಲ್ಲಿ ಹೇಳಬೇಕಾಗಿದೆ. "**ಸೂತ್ರೇ ಲಿಂಗವಚನಮತಂತ್ರಮ್** = ಸೂತ್ರದಲ್ಲಿ ಬಳಸಿದ ಲಿಂಗವಚನಗಳೆರಡೂ ವಿವಕ್ಷಿತವಲ್ಲ." ಅದನ್ನು ಬಳಸದೆ ಹೇಳಲು ಶಕ್ಯವಿಲ್ಲವಾದ್ದರಿಂದ ಸೂತ್ರದಲ್ಲಿ ಸ್ವತಂತ್ರಃಕರ್ತಾ –ಎಂದು ಪುಲ್ಲಿಂಗವನ್ನೂ ಏಕವಚನವನ್ನೂ ಬಳಸಲಾಗಿದೆ. ಅವೆರಡೂ ಉದ್ದಿಷ್ಟವಲ್ಲ. ಸ್ತ್ರೀಯೂ ಕರ್ತೃವಾಗ ಬಹುದು. ನಪುಂಸಕವೂ ಕರ್ತೃವಾಗಬಹುದು. ಕರ್ತೃಗಳು ಬಹುಮಂದಿ ಇರ ಬಹುದು.

ಉದಾಃ ಶಾರದೆ ಬರೆಯುತ್ತಾಳೆ.
ಹಸು ಹೋಗುತ್ತದೆ.
ಸ್ತ್ರೀಯರು ಹಾಡುತ್ತಾರೆ.

"**ವಿವಕ್ಷಾತಃ ಕಾರಕಾಣಿ ಭವಂತಿ**" –ಕಾರಕಗಳು ಮಾತಾಡತಕ್ಕವನ ಇಚ್ಛೆಗೆ ಅನುಗುಣವಾಗಿ ಬರುತ್ತವೆ." ವಿವಕ್ಷೆಯು ಲೋಕಪ್ರಸಿದ್ಧಿಯನ್ನೂ ಆಯಾ ಭಾಷೆಯ ರಚನಾಸ್ವರೂಪವನ್ನೂ ಅನುಸರಿಸಬೇಕಲ್ಲದೆ ಮನಸ್ಸಿಗೆ ತೋರಿದಂತೆ ಹೋಗಬಾರದು. ಉದಾಹರಣೆಗೆ– ರಥ, ರೈಲುಬಂಡಿ –ಇವು ಸ್ವತಂತ್ರವಾಗಿ ಚಲಿಸುವುದಿಲ್ಲ. ಆದರೂ 'ರಥವು ಹೋಗುತ್ತದೆ, ರೈಲುಬಂಡಿ ಓಡುತ್ತದೆ' ಎಂದು ಪ್ರಯೋಗಿಸಬಹುದು. ಹೊಗೆಬಂಡಿಯಲ್ಲಿರುವ ಕಬ್ಬಿಣವು ಓಡುತ್ತದೆ ಎನ್ನುವುದು ಸರಿಯಲ್ಲ.

'ಹುಡುಗನು ಪಾಠವನ್ನು ಓದುತ್ತಾನೆ.' ಇಲ್ಲಿ 'ಓದುತ್ತಾನೆ' ಎನ್ನುವುದು ಕ್ರಿಯಾಪದ; ಆಖ್ಯಾತಪ್ರತ್ಯಯಾಂತ. 'ಆನೆ' ಎಂಬುದೋ 'ಉತ್ತಾನೆ' ಎಂಬುದೋ ಆಖ್ಯಾತಪ್ರತ್ಯಯವೆಂದು ತಿಳಿಯೋಣ. ಇದು ಸೂಚಿಸುವ ಅರ್ಥ ಯಾವ ಯಾವುದು? ಇದು ಕರ್ತರಿಪ್ರಯೋಗವಾದ್ದರಿಂದ ಒಂದು ಅರ್ಥ ಕರ್ತಾ. ಆಮೇಲೆ ಪುಲ್ಲಿಂಗ, ಏಕತ್ವ, ವರ್ತಮಾನಕಾಲ. ಸಂಸ್ಕೃತದಲ್ಲಿ 'ಪಠತಿ' ಎಂದಾಗ ಆಖ್ಯಾತ ಪ್ರತ್ಯಯವು ಲಿಂಗವನ್ನು ಸೂಚಿಸುವುದಿಲ್ಲ. ಮೂರು ಲಿಂಗಗಳಲ್ಲಿಯೂ 'ಪಠತಿ' ಎಂದೇ ಇರುತ್ತದೆ. ಕನ್ನಡದಲ್ಲಿ ಓದುತ್ತಾಳೆ, ಓದುತ್ತದೆ ಎಂದು ಲಿಂಗಾನುಸಾರವಾಗಿ ಹೇಳಬೇಕಾಗುತ್ತದೆ. ಪ್ರಕೃತ 'ಉತ್ತಾನೆ' ಎನ್ನುವುದು ಕರ್ತ್ರರ್ಥದಲ್ಲಿರುವುದರಿಂದ ಹುಡುಗನು ಕರ್ತೃವೇ ಆಗಿದ್ದಾನೆ. ಪ್ರಥಮಾವಿಭಕ್ತಿಯು ಕರ್ತ್ರರ್ಥದಲ್ಲಿದೆ ಎಂದು ಸಿದ್ಧವಾಗುತ್ತದೆ. ಆಖ್ಯಾತಾರ್ಥಕರ್ತೃವಿಗೂ 'ಹುಡುಗನು' ಎಂಬುದಕ್ಕೂ ಅಭೇದದಿಂದ ಅನ್ವಯ. ಇಲ್ಲಿ ಪ್ರಥಮಾವಿಭಕ್ತಿಯ ಅರ್ಥವು ಕರ್ತೃವೆಂದು ಸಿದ್ಧವಾಯಿತು.

'ಹುಡುಗನಿಂದ ಪಾಠವು ಓದಲ್ಪಡುತ್ತದೆ' –ಇಲ್ಲಿ 'ಅಲ್ಪಡುತ್ತದೆ' ಎನ್ನುವುದು ಆಖ್ಯಾತಪ್ರತ್ಯಯವೆಂದು ತಿಳಿಯಬಹುದು. ಇದು ಕರ್ಮಾರ್ಥದಲ್ಲಿ ಬಂದಿರು ವುದರಿಂದ ಕರ್ಮಣಿ ಪ್ರಯೋಗವೆನ್ನುತ್ತಾರೆ. ಈ ವಾಕ್ಯದಲ್ಲಿಯೂ ಪಾಠವೇ ಕರ್ಮ. 'ಅಲ್ಪಡು' ಎಂಬುದರ ಅರ್ಥವಾದ ಕರ್ಮಕ್ಕೂ ಪಾಠಶಬ್ದದ ಅರ್ಥಕ್ಕೂ ಅಭೇದಾನ್ವಯ. ಏವಂ ಚ ಪ್ರಥಮೆಯ ಅರ್ಥವೂ ಪ್ರಾತಿಪದಿಕದ ಅರ್ಥವೇ ಆದ್ದರಿಂದ ಅದೂ ಕರ್ಮವೆನಿಸುತ್ತದೆ. ಕರ್ತರಿಪ್ರಯೋಗದಲ್ಲಿ ಪ್ರಥಮೆಯ ಅರ್ಥ ಕರ್ತಾ. ಆದರೆ ಅದಕ್ಕೆ ಕಾರಕಸಂಜ್ಞೆ ಪಾಣಿನಿ ವ್ಯಾಕರಣದಂತೆ ಇಲ್ಲ.

ಕರ್ತರಿಪ್ರಯೋಗದಲ್ಲಿ ಕರ್ತೃವಿನ ಕರ್ತೃತ್ವಶಕ್ತಿಯನ್ನು ಕರ್ಮಣಿಪ್ರಯೋಗದಲ್ಲಿ ಕರ್ಮತ್ವಶಕ್ತಿಯನ್ನು ಧಾತುವಿನ ಮುಂದಿರುವ ಪ್ರತ್ಯಯವೇ ಹೇಳಿಬಿಟ್ಟಿರುವುದರಿಂದ ಕರ್ತೃವಿಗೆ ತೃತೀಯೆಯೂ ಕರ್ಮಕ್ಕೆ ದ್ವಿತೀಯೆಯೂ ಬರುವುದಿಲ್ಲ. ಬಂದರೆ ಪುನರುಕ್ತಿಯಾಗುತ್ತದೆ. ಆದ್ದರಿಂದ ಪಾಣಿನಿಯು **ಅನಭಿಹಿತೇ** (೨-೩-೧) ಎಂದು ಸೂತ್ರಿಸಿ ಕಾರಕವಿಭಕ್ತಿಗಳನ್ನೂ ಹೇಳಿದ್ದಾನೆ. ಕನ್ನಡದಲ್ಲಿ ಅದೇ ಕ್ರಮವಿರುತ್ತದೆ. ಭಟ್ಟಾಕಳಂಕನು 'ಕರ್ಮಣ್ಯಮ್' (ಸೂ. ೨೦೪) ಎಂಬ ಸೂತ್ರದ ವೃತ್ತಿಯಲ್ಲಿ "**ಅನುಕ್ತೇ ಕಾರಕೇ ಲಿಂಗಾತ್ ಅಮ್ ಪ್ರತ್ಯಯೋ ಭವತಿ**" ಎಂದು ವ್ಯಾಖ್ಯಾನಿಸಿದ್ದಾನೆ. ಉದಾ:

ಕರ್ತರಿಪ್ರಯೋಗ

'ವೈದ್ಯನು ಔಷಧವನ್ನು ಕೊಡುತ್ತಾನೆ.'

ಇಲ್ಲಿ ವೈದ್ಯನು ಕರ್ತೃ. ಕೊಡುತ್ತಾನೆ -ಎಂಬ ಕ್ರಿಯಾಪದ 'ಉತ್ತಾನೆ' ಎಂಬ ಆಖ್ಯಾತಪ್ರತ್ಯಯವು ಕರ್ತ್ರರ್ಥದಲ್ಲಿ ವಿಹಿತವಾಗಿದೆ. ವೈದ್ಯನಲ್ಲಿರುವ ಕರ್ತೃತ್ವವನ್ನು ಆಖ್ಯಾತಪ್ರತ್ಯಯವೇ ಹೇಳಿದೆಯಾದ್ದರಿಂದ ಅದು ಅಭಿಹಿತವಾಯಿತು. ಆದ್ದರಿಂದ ವೈದ್ಯನು ಕರ್ತೃವಾದರೂ ಕರ್ತರಿ ತೃತೀಯಾ ಬರುವುದಿಲ್ಲ. ಪರಿಶೇಷದಿಂದ ಪ್ರಥಮಾ ಬಂದಿದೆ. ಔಷಧದಲ್ಲಿರುವ ಕರ್ಮತ್ವವು ಹೀಗೆ ಅಭಿಹಿತವಾಗಿಲ್ಲ. ಆದ್ದರಿಂದ ಔಷಧಶಬ್ದಕ್ಕೆ ಕರ್ಮಣಿ ದ್ವಿತೀಯಾ ಬಂದಿದೆ.

ಕರ್ಮಣಿಪ್ರಯೋಗ

'ವೈದ್ಯನಿಂದ ಔಷಧವು ಕೊಡಲ್ಪಡುತ್ತದೆ.'

ಈ ವಾಕ್ಯದಲ್ಲಿ 'ಅಲ್ಪಡುತ್ತದೆ' ಎಂಬ ಆಖ್ಯಾತಪ್ರತ್ಯಯವು ಕರ್ಮಾರ್ಥದಲ್ಲಿ ಬಂದಿದೆ. ವೈದ್ಯನ ಕರ್ತೃತ್ವವನ್ನು ಅದು ಹೇಳುವುದಿಲ್ಲ. ಕರ್ತೃತ್ವವು ಆ ಪ್ರತ್ಯಯದಿಂದ ಅಭಿಹಿತವಾಗಲಿಲ್ಲ. ಆದ್ದರಿಂದ ಕರ್ತರಿತೃತೀಯಾ ಬಂದಿದೆ. ಆಖ್ಯಾತದಿಂದ ಔಷಧದ ಕರ್ಮತ್ವವು ಉಕ್ತವಾದ್ದರಿಂದ ಕರ್ಮಣಿದ್ವಿತೀಯಾ ಬರಲಿಲ್ಲ. ಪರಿಶೇಷದಿಂದ ಕರ್ಮವಾಚಕದ ಮೇಲೂ ಪ್ರಥಮಾವಿಭಕ್ತಿಯೇ ಬಂದಿದೆ.

ಕರ್ತೃವೇ ಮೊದಲಾದ ಆರು ಕಾರಕಗಳೂ ಅವುಗಳ ಮೇಲೆ ಬರುವ ಪ್ರಥಮಾದಿವಿಭಕ್ತಿಗಳೂ ಸಂಸ್ಕೃತವ್ಯಾಕರಣಮಾರ್ಗವನ್ನೇ ಅನುಸರಿಸಿವೆ ಎಂಬುದರಲ್ಲಿ ಸಂದೇಹವಿಲ್ಲ. ಕೆಲವು ಸ್ಥಳಗಳಲ್ಲಿ, ಅದರಲ್ಲಿಯೂ ಉಪಪದವಿಭಕ್ತಿಗಳು ಬರುವಾಗ ವಿಭಕ್ತಿಗಳು ವ್ಯತ್ಯಸ್ತವಾಗಿರುವುದುಂಟು. ಎರಡೂ ಬೇರೆಬೇರೆ ಭಾಷೆಗಳಾದ್ದರಿಂದ ಅಲ್ಪಭೇದವು ಸಹಜವಾದದ್ದು. ಒಬ್ಬ ವ್ಯಕ್ತಿಗೂ ಆತನ ಭಾವಚಿತ್ರಕ್ಕೂ ಭೇದವಿರುವಾಗ ಎರಡು ಭಾಷೆಗಳಿಗೆ ಈ ಅಲ್ಪಭೇದವು ಗಣನೀಯವಲ್ಲ. ವ್ಯಾಕರಣಶಾಸ್ತ್ರದ ಮೂಲತತ್ತ್ವವು ಬೇರೆಯಾಗುವುದಿಲ್ಲ.

ಕನ್ನಡದಲ್ಲಿ 'ಅಲ್ಪಡು' ಮತ್ತು ಸಂಸ್ಕೃತದ ಕರ್ಮಾರ್ಥಕವಾದ ರಚಿತ, ನಿರ್ಮಿತ ಮುಂತಾದ ಕೃದಂತ -ಇವೆರಡು ಕರ್ಮತ್ವಶಕ್ತಿಯನ್ನು ಹೇಳುವುದರಿಂದ ಅವುಗಳ ಯೋಗದಲ್ಲಿ ಕರ್ಮವಾಚಿಗೆ ಪ್ರಥಮಾ ಬರುತ್ತದೆ. 'ಅಲ್ಪಡು' ಇಲ್ಲದ ತಿಙಂತಗಳೂ

ಭಾವಾರ್ಥಕವಲ್ಲದ ಕನ್ನಡದ ಕೃದಂತಗಳೂ ಕರ್ತೃವನ್ನು ಬೋಧಿಸುತ್ತವೆ. ಅವುಗಳ ಯೋಗವಿದ್ದಾಗ ಕರ್ತೃವಾಚಿಗೆ ಪ್ರಥಮಾ ಬರುತ್ತದೆ. ಉದಾಃ

೧. ಕೇಶಿರಾಜನಿಂದ ವ್ಯಾಕರಣವು ರಚಿತವಾಗಿದೆ. ರಚಿತಶಬ್ದದ ಕ್ತಪ್ರತ್ಯಯವು ಕರ್ಮಾರ್ಥದಲ್ಲಿ ಬಂದಿದೆಯಾದ್ದರಿಂದ ವ್ಯಾಕರಣದ ಕರ್ಮತ್ವವು ಉಕ್ತವಾಯಿತು. ಆದ್ದರಿಂದ 'ವ್ಯಾಕರಣವು' ಕರ್ಮವಾದರೂ ಪ್ರಥಮಾ ಬಂದಿದೆ.

೨. ವಿಶ್ವೇಶ್ವರಯ್ಯನವರಿಂದ ಕೃಷ್ಣರಾಜಸಾಗರವು ನಿರ್ಮಿತವಾಗಿದೆ. ನಿರ್ಮಿತ ಶಬ್ದದಿಂದ ಕರ್ಮತ್ವವು ಉಕ್ತವಾದ್ದರಿಂದ, ಕೃಷ್ಣರಾಜಸಾಗರವು ಕರ್ಮವಾದರೂ ಪ್ರಥಮಾ ಬಂದಿದೆ.

೩. ರಾಜು ಪುಸ್ತಕವನ್ನು ಓದುವವನು, ಅವಳು ಬಟ್ಟೆಯನ್ನು ಒಗೆಯುವವಳು. ಇಲ್ಲಿ ಓದುವವನು, ಒಗೆಯುವವಳು –ಎಂಬಿವು ಕರ್ತರಿಕೃದಂತಗಳು. ಕರ್ತೃವಾಚಕಗಳಿಗೆ ಪ್ರಥಮಾ ಬಂದಿದೆ. ಹೀಗೆಯೇ (ಅವನು) **ಹೋಗಿ,** (ಈತನು) **ಬಂದು,** (ಅವರು) ಈ ವಿಚಾರವನ್ನು ತಿಳಿಸುವುದಕ್ಕೆ, ತಿಳಿಯೆ, ನೋಡೆ, ನೋಡಿ –ಮುಂತಾದ ಅಪೂರ್ಣಾರ್ಥಕ ಕೃತ್‌ಪ್ರತ್ಯಯಗಳು ಕರ್ತ್ರರ್ಥದಲ್ಲಿರುತ್ತವೆ. ಇವುಗಳಿದ್ದಾಗ ಕರ್ತೃವಿಗೆ ತೃತೀಯಾ ಬರುವುದಿಲ್ಲ. ಹೊಗಳಿಕೆ, ಬರೆಯುವಿಕೆ, ಬರೆಹ, ಕುಣಿತ, ತುಳಿತ –ಇವು ಭಾವಾರ್ಥದಲ್ಲಿರುವ ಕೃದಂತಗಳು. ಇವುಗಳ ಯೋಗದಲ್ಲಿ ಕರ್ತೃಕರ್ಮಗಳಿಗೆ ಷಷ್ಠೀ ಬರುತ್ತದೆ. ಉದು ಪ್ರತ್ಯಯವು ಭಾವವಾಚಿ ಕೃತ್‌ಪ್ರತ್ಯಯವಾದರೂ ಇದರ ಯೋಗವಿದ್ದಾಗ ಕರ್ತೃಕರ್ಮಗಳಿಗೆ ಷಷ್ಠೀ ಬರುವುದಿಲ್ಲ. ಅವನು ಬರೆಯುವುದು, ನಾನು ಹೋಗುವುದು, ಹಣ್ಣನ್ನು ತಿನ್ನುವುದು, ಸ್ನಾನವನ್ನು ಮಾಡುವುದು –ಇಲ್ಲಿ ಷಷ್ಠೀ ಬಂದಿಲ್ಲ. ಕಾರಣವೇನೆಂಬುದನ್ನು ಕನ್ನಡ ವ್ಯಾಕರಣದಲ್ಲಿ ಹೇಳಿಲ್ಲ.

ನಾಗವರ್ಮನು ಭಾಷಾಭೂಷಣದಲ್ಲಿ "ಲಿಂಗಾರ್ಥವಚನಮಾತ್ರೇ ಪ್ರಥಮಾ" ಎಂದು ಸೂತ್ರಿಸಿ, 'ಒಂದನುಂ, ಎರಡನುಂ' ಎಂದು ಸಂಖ್ಯೆಗೆ ಉದಾಹರಿಸಿದ್ದಾನೆ. ಪ್ರಥಮಾವಿಭಕ್ತಿಯಲ್ಲಿ ಈ ಪ್ರಯೋಗಗಳಿವೆಯೇ? ಸಾಮಾನ್ಯವಾಗಿ ಸಂಖ್ಯಾವಾಚಿಯ ಮೇಲೆ ಪ್ರಥಮಾವಿಭಕ್ತಿಯ ಶ್ರವಣವು ದುರ್ಲಭ. ಎಲ್ಲ ಸಂಖ್ಯಾವಾಚಿಗಳೂ ಉಕಾರಾಂತಗಳಾಗಿರುವುದೇ ಇದಕ್ಕೆ ಕಾರಣವಾಗಿರಬೇಕು. ಸಾವಿರ, ಲಕ್ಷ ಶಬ್ದಗಳ ಮುಂದೆ ಪ್ರಥಮಾವಿಭಕ್ತಿಯ ಶ್ರವಣ ಉಂಟು, ಹೊಸಗನ್ನಡದಲ್ಲಿ 'ಕೋಟಿಯು' ಎಂದೂ ಆಗುತ್ತದೆ.

ಸಂಬೋಧನೇ ಚ (೨–೩–೪೭)

ಸಂಬೋಧನಾರ್ಥದಲ್ಲಿರುವ ಪ್ರಾತಿಪದಿಕದ ಮೇಲೆಯೂ ಪ್ರಥಮಾವಿಭಕ್ತಿಯು ಬರುತ್ತದೆ.

ಸಂಬೋಧನವೆಂದರೆ ಸಂಮುಖೀಕರಣ. ಕಾರ್ಯಾಂತರದಲ್ಲಿ ತೊಡಗಿದ ವ್ಯಕ್ತಿಯನ್ನು ತನಗೆ ಅಭಿಮುಖವಾಗಿ ಮಾಡಿಕೊಳ್ಳುವುದು 'ಕಾರ್ಯಾಂತರವ್ಯಾಪೃತಸ್ಯ

ಸ್ವಾಭಿಮುಖೀಕರಣಮ್'. 'ಅಮ್ಮಾ, ತಮ್ಮಾ, ಹುಡುಗರೇ' ಇತ್ಯಾದಿ ಶಬ್ದಗಳನ್ನು ಪ್ರಯೋಗಿಸುವುದೇ ಅಭಿಮುಖೀಕರಣ. ಅಭಿಮುಖೀಕೃತರಾದವರನ್ನು ಕುರಿತು ಇನ್ನೊಂದು ಕ್ರಿಯೆಯನ್ನು ವಿಧೇಯವಾಗಿ ಹೇಳಿದಾಗ ವಾಕ್ಯವು ಸಮಾಪ್ತವಾಗುತ್ತದೆ. 'ಅಮ್ಮಾ, ನನಗೆ ತಿಂಡಿಯನ್ನು ಕೊಡು' –ಇಲ್ಲಿ ಕೊಡುವ ಕ್ರಿಯೆಯಲ್ಲಿ ಅಮ್ಮನಿಗೆ ಕರ್ತೃರೂಪದಿಂದ ಅನ್ವಯ. 'ತಮ್ಮಾ, ಇಲ್ಲಿಗೆ ಬಾ' –ಬರುವ ಕ್ರಿಯೆಯಲ್ಲಿ ತಮ್ಮನಿಗೆ ಅನ್ವಯ. 'ಹುಡುಗರೆ, ಕೇಳಿರಿ' –ಕೇಳುವ ಕ್ರಿಯೆಯಲ್ಲಿ ಹುಡುಗರಿಗೆ ಅನ್ವಯ. ನಿಷೇಧವೂ ಹೀಗೆ ಅನ್ವಿತವಾಗಬಹುದು. 'ಹುಡುಗರೆ, ಗಲಾಟೆ ಮಾಡಬೇಡಿರಿ' –ಗಲಾಟೆಯ ನಿಷೇಧವೇ ವಿಧೇಯವಾಗಿದೆ.

ಕೆಲವು ವೇಳೆ 'ಅಮ್ಮಾ, ನಾನು ಶಾಲೆಗೆ ಹೋಗುತ್ತೇನೆ' ಎಂದಿಷ್ಟೇ ವಾಕ್ಯವಿರಬಹುದು. ಇಲ್ಲಿ ವಿಧೇಯ ಯಾವುದು? ಇಲ್ಲಿ 'ತಿಳಿದುಕೋ' ಎಂಬ ಕ್ರಿಯೆಯನ್ನು ಅಧ್ಯಾಹಾರಮಾಡಿಕೊಳ್ಳಬೇಕು. ಅಮ್ಮನಿಗೆ ತಾನು ಶಾಲೆಗೆ ಹೋಗುವುದು ತಿಳಿದಿರಲೆಂದು 'ಅಮ್ಮಾ' ಎಂದು ಕರೆದಿರುವುದರ ಉದ್ದೇಶ. ಶಾಲಾಗಮನದ ಜ್ಞಾನವಾಗಲೆಂದು ಮಗನು ಆ ಮಾತನ್ನು ಹೇಳುತ್ತಾನೆ. 'ಥೂ ಅಯೋಗ್ಯ!' ಎಂದಾಗ 'ಇಲ್ಲಿಂದ ಹೊರಡು' ಎಂದೋ 'ನನಗೆ ಸಿಟ್ಟುಬಂದಿದೆ, ತಿಳಿದುಕೋ' ಎಂದೋ ಅಧ್ಯಾಹಾರ ಮಾಡಿಕೊಳ್ಳಬೇಕು. ಇದೆಲ್ಲವೂ ಪ್ರಸಿದ್ಧವಾದ್ದರಿಂದ ಆ ಮಾತನ್ನು ಉಚ್ಚರಿಸದೇ ಇರಬಹುದು. ಹೀಗೆ ಸಂಬೋಧನಪದವು ಕ್ರಿಯೆಯಲ್ಲಿ ಅನ್ವಿತವಾಗುವುದರಿಂದ, ಅದೆಲ್ಲವೂ ಸೇರಿ ಒಂದು ವಾಕ್ಯವೆನಿಸುತ್ತದೆ. ಕ್ರಿಯಾಪದದ ಆಖ್ಯಾತಪ್ರತ್ಯಯಾರ್ಥದಲ್ಲಿ ಸಂಬೋಧನಪ್ರತ್ಯಯಾಂತಕ್ಕೆ ಅಭೇದಾನ್ವಯವಿರುತ್ತದೆ. ಆದ್ದರಿಂದ ಇದನ್ನು ಸಂಬೋಧನಪ್ರಥಮಾವಿಭಕ್ತಿ ಎಂದೇ ಕರೆಯುತ್ತಾರೆ.

೨. ಕರ್ಮ

ಕರ್ತುರೀಪ್ಸಿತತಮಂ ಕರ್ಮ (೧–೪–೪೯)

ಸೂತ್ರದಲ್ಲಿರುವ ಈಪ್ಸಿತಶಬ್ದವು ಕೇವಲ ಯೌಗಿಕಾರ್ಥ ಉಳ್ಳದ್ದು. ರೂಢಾರ್ಥವನ್ನಿಲ್ಲಿ ಇಟ್ಟುಕೊಳ್ಳಬಾರದು.

ಆಪ್ತುಮಿಷ್ಟಮೀಪ್ಸಿತಂ = ಸಂಬಂಧಿಸಲು ಉದ್ದಿಷ್ಟವಾದದ್ದು. ಕರ್ತೃವೆಂದರೆ ಧಾತ್ವರ್ಥಫಲಜನ್ಯವ್ಯಾಪಾರಾಶ್ರಯ. ಕರ್ತನು ತನ್ನಲ್ಲಿರುವ ವ್ಯಾಪಾರದಿಂದ ಹುಟ್ಟುವ ಫಲದೊಡನೆ ಸಂಬಂಧಿಸಲೆಂದು ಯಾವುದನ್ನು ಬಯಸಿರುತ್ತಾನೋ ಆ ಕಾರಕವು ಕರ್ಮಸಂಜ್ಞೆಯನ್ನು ಪಡೆಯುತ್ತದೆ. ಧಾತ್ವರ್ಥಫಲಕ್ಕೆ ಆಶ್ರಯವಾದದ್ದು ಕರ್ಮವೆಂದರ್ಥ. ಸೂತ್ರದಲ್ಲಿರುವ ಪ್ರಕರ್ಷಾರ್ಥದ 'ತಮ' ಪ್ರತ್ಯಯಕ್ಕೆ ಪ್ರಯೋಜನವೇನೆಂಬುದನ್ನು ಮುಂದೆ ತಿಳಿಸಲಾಗುವುದು.

೧. ಚೈತ್ರಃ ತಂಡುಲಂ ಪಚತಿ = ಚೈತ್ರನು ಅಕ್ಕಿಯನ್ನು ಬೇಯಿಸುತ್ತಾನೆ.

ಇಲ್ಲಿ ವಿಕ್ಲಿತ್ತ್ಯನುಕೂಲವ್ಯಾಪಾರವು ಧಾತ್ವರ್ಥವ್ಯಾಪಾರಾಶ್ರಯನಾದ ಚೈತ್ರನು ಕರ್ತೃ. ಆತನು ತನ್ನ ವ್ಯಾಪಾರದಿಂದಾಗುವ ವಿಕ್ಲಿತ್ತಿಯೆಂಬ ಫಲವು ತಂಡುಲದಲ್ಲಾಗಲೆಂದು ಉದ್ದೇಶಿಸಿದ್ದಾನೆ. ಆದ್ದರಿಂದ ತಂಡುಲವು (ಅಕ್ಕಿ) ಕರ್ಮವೆನಿಸುತ್ತದೆ. 'ಕರ್ಮಣಿ ದ್ವಿತೀಯಾ' ದ್ವಿತೀಯಾವಿಭಕ್ತಿ ಬಂದಿದೆ.

೨. ಶಾರದಾ ಫಲಂ ಖಾದತಿ = ಶಾರದೆಯು ಹಣ್ಣನ್ನು ತಿನ್ನುತ್ತಾಳೆ.

ತಿನ್ನುವುದೆಂದರೇನು? ಒಂದು ವಸ್ತುವನ್ನು ಗಂಟಲಿನೊಳಗೆ ಇಳಿಸುವುದು! ಆದ್ದರಿಂದ "ಗಲಬಿಲಾಧಃಸಂಯೋಗಾನುಕೂಲವ್ಯಾಪಾರ"ವು ತಿನ್ನು ಧಾತುವಿನ ಅರ್ಥ. ಶಾರದೆಯು ತನ್ನ ಕ್ರಿಯೆಯಿಂದ ಹಣ್ಣನ್ನು ತನ್ನ ಗಂಟಲಿನೊಳಗಡೆ ಇರುವ ಪ್ರದೇಶಕ್ಕೆ ಮುಟ್ಟಿಸುತ್ತಿದ್ದಾಳೆ. ಆ ಅಧಃಸಂಯೋಗವು ಹಣ್ಣಿನಲ್ಲಾಗುವುದರಿಂದ ಹಣ್ಣು ಕರ್ಮವಾಯಿತು. ಗಲಬಿಲಾಧಃಸಂಯೋಗವೇ ಫಲ.

೩. ಆತನು ನೀರನ್ನು ಬಾವಿಯಿಂದ ಸೇದುತ್ತಾನೆ.

ಊರ್ಧ್ವದೇಶಸಂಯೋಗಾನುಕೂಲವ್ಯಾಪಾರವು 'ಸೇದು' ಧಾತುವಿನ ಅರ್ಥ. ನೀರು ಮೇಲಕ್ಕೆ ಬಂದಂತೆ ಊರ್ಧ್ವದೇಶಸಂಯೋಗವು ನೀರಿಗೆ ಆಗುತ್ತದೆ. ಫಲಾಶ್ರಯವಾದ್ದರಿಂದ ನೀರು ಕರ್ಮ.

೪. ಸೀತೆಯು ಪಾಠವನ್ನು ಓದುತ್ತಾಳೆ.

ಅಭಿವ್ಯಕ್ತ್ಯನುಕೂಲಶಬ್ದೋಚ್ಚಾರಣರೂಪವ್ಯಾಪಾರವು 'ಓದು' ಧಾತುವಿನ ಅರ್ಥ. ಸೀತೆಯ ಉಚ್ಚಾರಣವ್ಯಾಪಾರದಿಂದ ಪಾಠದ ಅಭಿವ್ಯಕ್ತಿಯಾಗುತ್ತದೆ.

ಸೀತೆಯು ಶಬ್ದವನ್ನು ಉಚ್ಚರಿಸುತ್ತಾಳೆ –ಎಂದಾಗ ಶಬ್ದಾಭಿವ್ಯಕ್ತ್ಯನುಕೂಲ ಕಂಠತಾಲ್ವಾದಿ ವ್ಯಾಪಾರವು ಉಚ್ಚಾರಣಾರ್ಥ ಎನ್ನಬೇಕಾಗುತ್ತದೆ. ಕಂಠ, ತಾಲು –ಮುಂತಾದವು ಅಕ್ಷರಗಳ ಉತ್ಪತ್ತಿಯ ಸ್ಥಳ. ಆ ಸ್ಥಳದಲ್ಲಿ ಒಂದಾನೊಂದು ಕ್ರಿಯೆ ಹುಟ್ಟಿದಾಗ ಶಬ್ದದ ಅಭಿವ್ಯಕ್ತಿಯಾಗುತ್ತದೆ. ಈ ಅಭಿವ್ಯಕ್ತಿಯು ಶಬ್ದನಿಷ್ಠವಾದ ಫಲ.

೫. ಯಾಚಕನಿಗೆ ಹಣವನ್ನು ಕೊಡುತ್ತಾನೆ.

ಕೊಡು ಧಾತುವಿನ ಅರ್ಥ ಯಾವುದು? 'ಸ್ವಸ್ವತ್ವತ್ಯಾಗಪೂರ್ವಕ ಪರಸ್ವತ್ವಾಪಾದನಂ' –ಎಂಬುದೇ 'ಕೊಡು' ಧಾತ್ವರ್ಥ. ತನ್ನ ಸ್ವತ್ವವನ್ನು ತ್ಯಜಿಸಿ ಇನ್ನೊಬ್ಬನ ಸ್ವತ್ವವನ್ನು ಉಂಟುಮಾಡುವುದು ಧಾತ್ವರ್ಥ. ಹಣದಲ್ಲಿ ಮೊದಲು ಕೊಡುವ ಕರ್ತೃವಿನ ಸ್ವತ್ವವಿತ್ತು. ಅದನ್ನು ತ್ಯಜಿಸಿ ಈಗ ಯಾಚಕನಿಗೆ ಆ ಹಣದಲ್ಲಿ ಸ್ವತ್ವವನ್ನುಂಟು ಮಾಡುವುದೇ ಕೊಡುವುದು. ಹಣವನ್ನು ಯಾಚಕನಿಗೆ ಕೊಟ್ಟಾಗ ಆ ಹಣದಲ್ಲಿ ಯಾಚಕನ ಸ್ವತ್ವ ಹುಟ್ಟುತ್ತದೆ. ಆದ್ದರಿಂದ ಹಣವು ಕರ್ಮವಾಗಿದೆ. ಹೀಗೆಯೇ ಉಳಿದ ಕಡೆಗಳಲ್ಲಿ ಧಾತ್ವರ್ಥವನ್ನು ಊಹಿಸಿಕೊಳ್ಳಬೇಕು.

೬. ತಂದೆಯು ಮಗನಿಗೆ ಪತ್ರವನ್ನು ಬರೆಯುತ್ತಾನೆ.

ಪತ್ರವೆಂದರೆ ಕಾಗದ. ಕಾಗದವನ್ನು ಬರೆಯಲು ಸಾಧ್ಯವೇ? ಆದ್ದರಿಂದ ಸ್ವಾಭಿಪ್ರಾಯವನ್ನು ಬೋಧಿಸುವ ಶಬ್ದಗಳಿಂದ ವಿಶಿಷ್ಟವಾದ ವಾಕ್ಯಗಳಿಗೆ ಅಧಿಕರಣವಾದ ಪತ್ರವನ್ನು ಎಂದು ಅರ್ಥಮಾಡಬೇಕಾದೀತು. ಆಗಲೂ ಶಂಕೆ ತಪ್ಪುವುದಿಲ್ಲ. ತಂದೆಯು ಬರೆಯುವುದು ವಾಕ್ಯಗಳನ್ನು, ಕಾಗದವನ್ನಲ್ಲ. ವಾಕ್ಯಗಳನ್ನು ಎಂದರೂ ಶಂಕೆ ಉಳಿಯುತ್ತದೆ. ವಾಕ್ಯವು ಶಬ್ದಸಂಘಾತ. ಶಬ್ದವನ್ನು ಕಿವಿಯಿಂದ ಕೇಳಬಹುದೇ ಹೊರತು ಬರೆಯುವುದಕ್ಕಾಗುವುದಿಲ್ಲ! ಆದ್ದರಿಂದ ಶಬ್ದಾಭಿವ್ಯಂಜಕಲಿಪಿಯನ್ನು ಬರೆಯುತ್ತಾನೆ ಎಂದು ಹೇಳಬೇಕಾಗುತ್ತದೆ. ಆ ಲಿಪಿಗೆ ಪತ್ರವು ಅಧಿಕರಣವಾಗುತ್ತದೆಯೇ ಹೊರತು ಕರ್ಮವಾಗುವುದಿಲ್ಲ. ಹಾಗಾದರೆ 'ಪತ್ರವನ್ನು ಬರೆಯುತ್ತಾನೆ' ಎಂಬ ಪ್ರಸಿದ್ಧವಾದ ಪ್ರಯೋಗಕ್ಕೆ ಗತಿ ಏನು?

ಪತ್ರವನ್ನು ಬರೆಯುತ್ತಾನೆ ಎಂಬಲ್ಲಿ 'ಬರೆ' ಧಾತುವಿಗೆ ಪೂರ್ವೋಕ್ತ ಶಬ್ದಾಭಿವ್ಯಂಜಕಲಿಪ್ಯನುಕೂಲವ್ಯಾಪಾರ ಎಂದರ್ಥ. ಈ ವ್ಯಾಪಾರದಿಂದ ಜನ್ಯವಾದ ಫಲವು ಲಿಪಿ. ಲಿಪಿಗೆ ಆಶ್ರಯವಾದ ಪತ್ರವು ಕರ್ಮಸಂಜ್ಞೆಯನ್ನು ಪಡೆದಿದೆ. ಕರ್ಮವು ಯಾವಾಗಲೂ ಧಾತ್ವರ್ಥವ್ಯಾಪಾರಜನ್ಯಫಲಕ್ಕೆ ಆಶ್ರಯವಾಗಿರುತ್ತದೆಯೆಂದು ಹಿಂದೆ ತಿಳಿಸಿದೆ. ಇದು ಅಧಿಕರಣಸಂಜ್ಞೆಗೆ ಬಾಧಕ.

ವ್ಯಾಪಾರಜನ್ಯಫಲವು ಕರ್ಮದಲ್ಲಿರುವಂತೆ ಕರ್ತೃವಿನಲ್ಲಿಯೂ ಇರಬಹುದು. ಈ ವಾಕ್ಯಗಳನ್ನು ನೋಡಿ–

ಚೈತ್ರಃ ಗ್ರಾಮಂ ಗಚ್ಛತಿ
ಚೈತ್ರಃ ಗ್ರಾಮಾಯ ಗಚ್ಛತಿ } ಚೈತ್ರನು ಗ್ರಾಮಕ್ಕೆ ಹೋಗುತ್ತಾನೆ.

ಗತ್ಯರ್ಥಕ ಧಾತುವಿನ ಯೋಗವಿದ್ದಾಗ ಕರ್ಮವಾಚಕದ ಮೇಲೆ ದ್ವಿತೀಯಾ ಚತುರ್ಥಿಗಳೆರಡೂ ಬರುತ್ತವೆ. ಕನ್ನಡದಲ್ಲಿ ಚತುರ್ಥೀವಿಭಕ್ತಿ ಬರುತ್ತದೆ. ದ್ವಿತೀಯೆ ಬರುವುದಿಲ್ಲ.

ಈ ಮೂರು ವಾಕ್ಯಗಳಲ್ಲಿಯೂ ಸಂಯೋಗಾನುಕೂಲವ್ಯಾಪಾರವು ಧಾತ್ವರ್ಥ. ಸಂಯೋಗವು ಉಭಯನಿಷ್ಠವಾದದ್ದು. ಇಂತಹ ಧರ್ಮವನ್ನು 'ವ್ಯಾಸಜ್ಯವೃತ್ತಿ' ಎನ್ನುತ್ತಾರೆ. ಎರಡು ಪುಸ್ತಕಗಳಿದ್ದಾಗ ದ್ವಿತ್ವಸಂಖ್ಯೆ ಯಾವ ಪುಸ್ತಕದಲ್ಲಿರುತ್ತದೆ? ಎರಡು ಪುಸ್ತಕಗಳಲ್ಲಿಯೂ ಇರುತ್ತದೆ. ಇದು ವ್ಯಾಸಜ್ಯವೃತ್ತಿ. ತ್ರಿತ್ವ, ಚತುಷ್ಟ್ವ –ಮೊದಲಾದವೂ ವ್ಯಾಸಜ್ಯವೃತ್ತಿಗಳೇ. ಪ್ರಕೃತ, ಚೈತ್ರನು ಗ್ರಾಮಕ್ಕೆ ಹೋದಾಗ ಚೈತ್ರನಿಗೂ ಗ್ರಾಮಕ್ಕೂ ಸಂಯೋಗವಾಗುತ್ತದೆ. ಈ ಸಂಯೋಗವು ಗ್ರಾಮದಲ್ಲಿರುವಂತೆ ಕರ್ತೃವಾದ ಚೈತ್ರನಲ್ಲಿಯೂ ಇರುತ್ತದೆ. ಹಾಗಾದರೆ ಚೈತ್ರನಿಗೆ ಕರ್ಮಸಂಜ್ಞೆ ಏಕೆ ಬರುವುದಿಲ್ಲ? ನಿಜ; ಕರ್ತೃವಿನಲ್ಲಿ ವ್ಯಾಪಾರಜನ್ಯಫಲವಿದ್ದರೂ ಕರ್ಮಸಂಜ್ಞೆಯನ್ನು ಬಾಧಿಸಿ ಕರ್ತೃಸಂಜ್ಞೆ ಬರುತ್ತದೆ. ಚೈತ್ರನು ಧಾತ್ವರ್ಥವ್ಯಾಪಾರಕ್ಕೆ ಆಶ್ರಯನಾದ್ದರಿಂದ ಕರ್ತೃಸಂಜ್ಞೆಯೂ ಪ್ರಾಪ್ತವಾಗುತ್ತದೆ. ಆಗ ಈ ಎರಡರಲ್ಲಿ ಯಾವುದು

ಬರಬೇಕೆಂಬ ವಿಪ್ರತಿಷೇಧ (ವಿರೋಧ) ಉಂಟಾಗಲು, 'ವಿಪ್ರತಿಷೇಧೇ ಪರಂ ಕಾರ್ಯಂ' (೧-೪-೨) ಎಂಬ ಸೂತ್ರದಿಂದ ಪರವಾದ ಕರ್ತೃಸಂಜ್ಞೆ ಬರುತ್ತದೆಯೇ ಹೊರತು ಕರ್ಮಸಂಜ್ಞೆ ಬರುವುದಿಲ್ಲ. ಅಷ್ಟಾಧ್ಯಾಯೀ ಸೂತ್ರಪಾಠದಲ್ಲಿ ಮೊದಲು ಕರ್ಮ ಸಂಜ್ಞಾಸೂತ್ರವಿದೆ. ಅನಂತರ ಪರದಲ್ಲಿ ಕರ್ತೃಸಂಜ್ಞಾಸೂತ್ರವಿದೆ. ಪೂರ್ವಕ್ಕಿಂತ ಪರಶಾಸ್ತ್ರವು ಪ್ರಬಲವೆಂದು ಈ ಶಾಸ್ತ್ರದ ನಿಯಮ. ಆದ್ದರಿಂದ ಚೈತ್ರನಿಗೆ ಕರ್ಮ ಸಂಜ್ಞೆ ಬರುವುದಿಲ್ಲ. ಇದು ವ್ಯಾಕರಣಶಾಸ್ತ್ರದ ವ್ಯವಸ್ಥೆ.

ತಾರ್ಕಿಕರು ಇನ್ನೊಂದು ಬಗೆಯಲ್ಲಿ ಸಮಾಧಾನ ಹೇಳುತ್ತಾರೆ. ಏನೆಂದರೆ, ಸಂಯೋಗವೆಂಬ ಫಲವು ಚೈತ್ರಗ್ರಾಮಗಳೆರಡರಲ್ಲಿ ಇದ್ದರೂ ಬೇರೆಬೇರೆ ಸಂಬಂಧದಿಂದ ಇದೆ. ಚೈತ್ರನಲ್ಲಿ ಪ್ರತಿಯೋಗಿತಾಸಂಬಂಧದಿಂದಲೂ ಗ್ರಾಮದಲ್ಲಿ ಅನುಯೋಗಿತಾಸಂಬಂಧದಿಂದಲೂ ಇದೆ. ಅನುಯೋಗಿತಾಸಂಬಂಧದಿಂದ ಫಲವು ಇದ್ದಾಗ ಮಾತ್ರ ಕರ್ಮಸಂಜ್ಞೆ ಬರುತ್ತದೆಯಾದ್ದರಿಂದ ಚೈತ್ರನಿಗೆ ಕರ್ಮಸಂಜ್ಞೆ ಬರುವುದಿಲ್ಲ –ಎಂದು ಅವರ ಸಮಾಧಾನ.

ಪ್ರತಿಯೋಗಿತಾ–ಅನುಯೋಗಿತಾಸಂಬಂಧಗಳು

ಸಂಬಂಧವು ಯಾವಾಗಲೂ ಉಭಯನಿಷ್ಠವಾಗಿರುತ್ತದೆ. ಎರಡು ವಸ್ತುಗಳಿಲ್ಲದೆ ಸಂಬಂಧವಿರುವುದಿಲ್ಲ. ಆ ಸಂಬಂಧಿಗಳಲ್ಲಿ ಒಂದು ವಿವಕ್ಷಾನುಸಾರವಾಗಿ ಪ್ರತಿಯೋಗಿ ಯೆಂದೂ ಇನ್ನೊಂದು ಅನುಯೋಗಿಯೆಂದೂ ಶಾಸ್ತ್ರಕಾರರು ಕಲ್ಪಿಸಿಕೊಂಡಿರುತ್ತಾರೆ. ಉದಾಹರಣೆಗೆ, 'ಹನುಮಂತನು ಲಂಕೆಗೆ ಹೋದನು' ಎಂಬಲ್ಲಿ ಹನುಮಂತನಿಗೂ ಲಂಕೆಗೂ ಸಂಯೋಗಸಂಬಂಧವಾಗುತ್ತದೆ. ಆಗ 'ಹನುಮಂತನ ಸಂಯೋಗ ಲಂಕೆಯಲ್ಲಾಯಿತು' ಅಥವಾ 'ಲಂಕೆಯ ಸಂಯೋಗ ಹನುಮಂತನಲ್ಲಾಯಿತು' ಎಂದು ಹೇಳಬಹುದಷ್ಟೆ. ಇದು ಹೇಳತಕ್ಕವನ ವಿವಕ್ಷೆಗೆ ಸೇರಿದ್ದು. ಹೀಗಿರುವಾಗ ಯಾವುದು ಸಂಯೋಗಕ್ಕೆ ಆಶ್ರಯವಾಗಿ ಅಧಿಕರಣವಾಗಿದೆಯೋ ಅದನ್ನು ಅನುಯೋಗಿಯೆಂದೂ ಅದಕ್ಕೆ ಪ್ರತಿಯಾಗಿ ಯಾವುದರ ಸಂಬಂಧವನ್ನು ಹೇಳುತ್ತೇವೆಯೋ ಅದನ್ನು ಪ್ರತಿಯೋಗಿಯೆಂದೂ ಹೇಳುತ್ತಾರೆ. 'ಹನುಮಂತನ ಸಂಯೋಗವು ಲಂಕೆಯಲ್ಲಿ ಆಯಿತು' –ಈ ವಾಕ್ಯದಲ್ಲಿ ಸಂಯೋಗಕ್ಕೆ ಆಶ್ರಯವಾದ ಲಂಕೆಯು ಅನುಯೋಗಿ. ಸಂಯೋಗವು ಅದರಲ್ಲಿ ಅನುಯೋಗಿತಾಸಂಬಂಧದಿಂದ ಇದೆ. ಹನುಮಂತನು ಪ್ರತಿಯೋಗಿ. ಸಂಯೋಗವು ಅವನಲ್ಲಿ ಪ್ರತಿಯೋಗಿತಾಸಂಬಂಧದಿಂದ ಇದೆ. ಇದರ ಸ್ವರೂಪ ಇನ್ನೂ ವಿಸ್ತೃತವಾಗಿದೆ. ಪ್ರಕೃತ ಇಷ್ಟು ಸಾಕು. ಚೈತ್ರನು ಗ್ರಾಮಕ್ಕೆ ಹೋದನು ಎಂಬಲ್ಲಿ ಚೈತ್ರನ ಸಂಯೋಗ ಗ್ರಾಮದಲ್ಲಾಯಿತು ಎಂದೇ ವಿವಕ್ಷೆ ಇದೆ. ಗ್ರಾಮದ ಸಂಬಂಧ ಚೈತ್ರನಲ್ಲಾಗಲಿ ಎಂಬ ವಿವಕ್ಷೆ ಇಲ್ಲ. ಹಾಗೆ ಇದ್ದಿದ್ದರೆ –ಗ್ರಾಮವು ಚೈತ್ರನ ಬಳಿಗೆ ಹೋಗುತ್ತಿತ್ತು! ಆದ್ದರಿಂದ ಸಂಯೋಗವು ಉಭಯ ನಿಷ್ಠವಾದರೂ ಅನುಯೋಗಿತಾಸಂಬಂಧದಿಂದ ಗ್ರಾಮದಲ್ಲಿರುವ ಕಾರಣ ಗ್ರಾಮವೇ ಕರ್ಮ, ಚೈತ್ರನಲ್ಲ.

ಗತ್ಯರ್ಥಕಧಾತುವಿನ ಯೋಗವಿದ್ದಾಗ ಕರ್ಮಕ್ಕೆ ಚತುರ್ಥೀವಿಭಕ್ತಿ ಬರಲು ಕಾರಣವೇನು?

ಈ ವಾಕ್ಯಗಳನ್ನು ಗಮನಿಸಬೇಕು.

೧. ಬಾಲಃ ಶಾಲಾಂ ಗಚ್ಛತಿ.
೨. ಬಾಲಃ ಶಾಲಾಯೈ ಗಚ್ಛತಿ.
೩. ಹುಡುಗನು ಶಾಲೆಗೆ ಹೋಗುತ್ತಾನೆ.
೪. ಬಾಲಃ ಶಾಲಾಂ ಪ್ರಾಪ್ನೋತಿ.
೫. ಹುಡುಗನು ಶಾಲೆಯನ್ನು ಸೇರಿದನು.
೬. ಸಃ ಪುಸ್ತಕಂ ಸ್ಪೃಶತಿ.
೭. ಅವನು ಪುಸ್ತಕವನ್ನು ಮುಟ್ಟುತ್ತಾನೆ.

ಮೇಲ್ಕಂಡ ಎಲ್ಲ ವಾಕ್ಯಗಳಲ್ಲಿಯೂ ಸಂಯೋಗಾನುಕೂಲವ್ಯಾಪಾರವು ಧಾತ್ವರ್ಥ. ಆದರೂ ಗಚ್ಛತಿ ಎಂಬಲ್ಲಿರುವ ಗಮ್ ಧಾತುವನ್ನು ಬಳಸಿದಾಗ ಸಂಸ್ಕೃತದಲ್ಲಿ ಕರ್ಮವಾಚಕದ ಮೇಲೆ ದ್ವಿತೀಯಾ ಚತುರ್ಥಿಗಳೆರಡೂ ಬರುತ್ತವೆ. 'ಗತ್ಯರ್ಥಕರ್ಮಣಿ ದ್ವಿತೀಯಾಚತುರ್ಥ್ಯೌ ಚೇಷ್ಟಾಯಾಮನಧ್ವನಿ' (೨-೩-೧೨) ಎಂಬ ಪಾಣಿನಿಸೂತ್ರವು ಗತ್ಯರ್ಥಕದ ಕರ್ಮದ ಮೇಲೆ ಈ ಎರಡು ವಿಭಕ್ತಿಗಳನ್ನೂ ವಿಧಿಸಿದೆ. ಗ್ರಾಮಂ ಯಾತಿ, ಗ್ರಾಮಾಯ ಯಾತಿ -ಎಂದೂ ಹೇಳಬಹುದು. ಕನ್ನಡದಲ್ಲಿ ಮಾತ್ರ 'ಹಳ್ಳಿಗೆ ಹೋಗುತ್ತಾನೆ' ಎಂದೇ ಪ್ರಯೋಗವಿದೆ. ಹಳ್ಳಿಯನ್ನು ಹೋಗುತ್ತಾನೆ -ಎಂಬುದು ಸಲ್ಲದು. ಸೇರು, ಮುಟ್ಟು -ಎಂಬ ಧಾತುಗಳನ್ನು ಪ್ರಯೋಗಿಸಿದಾಗ ಕರ್ಮದ ಮೇಲೆ ದ್ವಿತೀಯಾವಿಭಕ್ತಿ ಮಾತ್ರ ಬರುತ್ತದೆ. ಸಂಯೋಗವೆಂಬ ಫಲವು ಸರ್ವತ್ರ ಸಮಾನವಾಗಿದ್ದರೂ ಈ ವ್ಯತ್ಯಾಸಕ್ಕೆ ಕಾರಣವೇನೆಂಬ ಪ್ರಶ್ನೆ ಹುಟ್ಟುತ್ತದೆ.

ಫಲವು ಒಂದೇ ಆಗಿದ್ದರೂ ಫಲಜನಕವ್ಯಾಪಾರವು ಬೇರೆಬೇರೆಯಾಗಿರುವುದೇ ಕಾರಣ. ಗಚ್ಛತಿ ಎಂಬಲ್ಲಿ ಗಮ್ ಧಾತ್ವರ್ಥವು ಗತಿ. ಗತಿ ಎಂದರೆ ಮುಂದಕ್ಕೆ ಕ್ರಮಣ. ನಡೆಯುವುದು. ಶರೀರವ್ಯಾಪಿಯಾದ ಚಲನೆ. ಈ ಕ್ರಿಯೆಯು ಆರಂಭಿಸಿದ ಎಷ್ಟೋ ಹೊತ್ತಿನ ಮೇಲೆ ಸಂಯೋಗರೂಪಫಲವು ಹುಟ್ಟುತ್ತದೆ. ಫಲವು ನಿಯತವೂ ಅಲ್ಲ. ಉದಾ- 'ಹುಡುಗನು ಶಾಲೆಗೆ ಹೋಗುತ್ತಾನೆ. ದಾರಿಯಲ್ಲಿ ಏನನ್ನೋ ಸ್ಮರಿಸಿ ಕೊಂಡು ಮನೆಗೆ ಬರುತ್ತಾನೆ'-ಎಂದು ಹೇಳುತ್ತೇವೆ. ಇಲ್ಲಿ ಶಾಲೆಯೊಡನೆ ಹುಡುಗನ ಸಂಯೋಗವಾಗಿರುವುದಿಲ್ಲ. 'ಭೀಮಯ್ಯನು ಯಾತ್ರೆಗಾಗಿ ಕಾಶಿಗೆ ಹೋದನು. ಹೋಗುವಾಗ ದಾರಿಯಲ್ಲಿಯೇ ಮೃತನಾನು' -ಎಂದೂ ಹೇಳಬಹುದು. ತಾತ್ಪರ್ಯ ವೇನೆಂದರೆ, ಗತ್ಯರ್ಥಕಧಾತುವಿದ್ದಾಗ ಫಲವು ಉದ್ದಿಷ್ಟವಾಗಿರುತ್ತದೆ. ಶಾಲಾ ಸಂಯೋಗ, ಕಾಶೀಸಂಯೋಗಗಳನ್ನು ಉದ್ದೇಶಿಸಿ ಗಮನವಾಗುತ್ತದೆ. ಸೇರುತ್ತಾನೆ, ಮುಟ್ಟುತ್ತಾನೆ ಎಂಬಲ್ಲಿ ವ್ಯಾಪಾರವು ಫಲವನ್ನು ಕಚ್ಚಿಕೊಂಡೇ ಬಂದಿರುತ್ತದೆ. ಫಲವಾಗದೆ ಆ ರೀತಿ ಪ್ರಯೋಗವೇ ಬರುವುದಿಲ್ಲ. ಹೀಗೆ ಸಂಯೋ

ಗಾಶ್ರಯವಾಗಲೆಂದು ಶಾಲೆಯು ಉದ್ದಿಷ್ಟವಾಗಿರುವುದರಿಂದ ಸಂಪ್ರದಾನಾದ್ಯರ್ಥದಲ್ಲಿ ಚತುರ್ಥಿಗೆ ಗತ್ಯರ್ಥಕದ ಪ್ರಯೋಗವಿದ್ದಾಗ ಅವಕಾಶವಿದೆ. ಕನ್ನಡದಲ್ಲಿ ಚತುರ್ಥಿಯು ಮಾತ್ರ ಕಂಡುಬರುತ್ತದೆ. ದ್ವಿತೀಯೆ ಕಂಡು ಬರುವುದಿಲ್ಲ. ಇದು ಈ ಭಾಷೆಯ ವೈಶಿಷ್ಟ್ಯ. ಈ ಭೇದವನ್ನು ಇಂಗ್ಲಿಷಿನಲ್ಲಿಯೂ ಕಾಣಬಹುದು.

He goes to school He reaches school He touches school	ಫಲವು ಒಂದೇ ಆದರೂ ಕ್ರಿಯಾಸ್ವರೂಪದಲ್ಲಿ ಭೇದವಿದೆ. ಮೊದಲನೇ ವಾಕ್ಯದಲ್ಲಿ to ಬಂದಿದೆ. ಉಳಿದವುಗಳಲ್ಲಿ ಬಂದಿಲ್ಲ.

ಕರ್ಮವು ಮೂರು ವಿಧ

ನಿರ್ವರ್ತ್ಯಂ ಚ ವಿಕಾರ್ಯಂ ಚ ಪ್ರಾಪ್ಯಂ ಚೇತಿ ತ್ರಿಧಾ ಮತಮ್ ॥

— (ವಾಕ್ಯಪದೀಯ)

೧. ಮೊದಲು ಇಲ್ಲದೆ ನೂತನವಾಗಿ ನಿರ್ಮಿತವಾಗತಕ್ಕದ್ದು ನಿರ್ವರ್ತ್ಯಕರ್ಮ. ಉದಾ: 'ಮನೆಯನ್ನು ಕಟ್ಟುತ್ತಾನೆ. ರಸ್ತೆಯನ್ನು ನಿರ್ಮಿಸುತ್ತಾನೆ.'

೨. ಯಾವುದು ವಿಕಾರವನ್ನು ಹೊಂದುತ್ತದೆಯೋ ಅದು ವಿಕಾರ್ಯಕರ್ಮ. ಉದಾ: 'ಕಟ್ಟಿಗೆಯನ್ನು ಸುಡುತ್ತಾನೆ.' ಇಲ್ಲಿ ಕಟ್ಟಿಗೆಯೇ ಇದ್ದಿಲೋ ಬೂದಿಯೋ ಆಗುವುದರಿಂದ ವಿಕಾರ್ಯಕರ್ಮ. ಕಟ್ಟಿಗೆಯನ್ನು ಸುಟ್ಟು ಇದ್ದಿಲನ್ನು ಮಾಡುತ್ತಾನೆ –ಎಂದಾಗ ಇದ್ದಿಲು ನಿರ್ವರ್ತ್ಯವೆನಿಸುತ್ತದೆ. ಬೂದಿಯಾದರೆ ಅದೂ ನಿರ್ವರ್ತ್ಯವೇ. ಈ ಉದಾಹರಣೆಯಲ್ಲಿ ಕಟ್ಟಿಗೆಯ ಸ್ವರೂಪವು ನಾಶವಾಗಿದೆಯೆಂಬುದನ್ನು ಗಮನಿಸಬೇಕು.

ಚಿನ್ನವನ್ನು ಉಂಗುರವನ್ನಾಗಿ ಮಾಡುತ್ತಾನೆ. ಇಲ್ಲಿ ಚಿನ್ನವು ವಿಕಾರ್ಯಕರ್ಮ. ಇದು ಉಂಗುರವಾದರೂ ಚಿನ್ನದ ಸ್ವರೂಪವು ಇದ್ದೇ ಇರುತ್ತದೆ. ಉಂಗುರವು ನಿರ್ವರ್ತ್ಯಕರ್ಮ.

೩. ಯಾವ ಕರ್ಮದಲ್ಲಿ ಕ್ರಿಯೆಯಿಂದ ಯಾವ ಭೇದವೂ ಆಗುವುದಿಲ್ಲವೋ ಅದು ಪ್ರಾಪ್ಯಕರ್ಮ. ಉದಾ:

ಹಳ್ಳಿಯನ್ನು ಸೇರುತ್ತಾನೆ.
ಮರವನ್ನು ನೋಡುತ್ತಾನೆ.
ಶಬ್ದವನ್ನು ಕೇಳುತ್ತಾನೆ.
ಅರ್ಥವನ್ನು ತಿಳಿಯುತ್ತಾನೆ.
ಹಾಲನ್ನು ಇಚ್ಛಿಸುತ್ತಾನೆ –ಬಯಸುತ್ತಾನೆ.

ಇಲ್ಲಿ ಕ್ರಿಯೆಗಳಿಂದ ಹಳ್ಳಿ ಮೊದಲಾದ ಕರ್ಮಗಳಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲವಾದ್ದರಿಂದ ಪ್ರಾಪ್ಯಕರ್ಮಗಳೆನಿಸುತ್ತವೆ. ಇವು ಹೇಗೆ ಕರ್ಮಗಳಾಗುತ್ತವೆ? ಧಾತ್ವರ್ಥ ಯಾವುದು? ಫಲ ಯಾವುದು? ಅದು ಈ ಕರ್ಮಗಳಲ್ಲಿದೆಯೇ? –ಎಂಬುದೀಗ ವಿಚಾರಣೀಯ.

ಮೊದಲನೆಯ ಉದಾಹರಣೆಯಲ್ಲಿ ಸಂಯೋಗಾನುಕೂಲವ್ಯಾಪಾರವು ಧಾತ್ವರ್ಥವೆಂದೂ ಸಂಯೋಗವೆಂಬ ಫಲವು ಹಳ್ಳಿಯಲ್ಲಿದೆಯೆಂಬುದನ್ನೂ ಹಿಂದೆ ಬರೆದದ್ದಾಗಿದೆ. ಉಳಿದವುಗಳನ್ನೀಗ ವಿವರಿಸಬೇಕು. ಉಳಿದ ನಾಲ್ಕು ಉದಾಹರಣೆಗಳಲ್ಲಿ ಕ್ರಮವಾಗಿ ದರ್ಶನ, ಶ್ರವಣ, ಜ್ಞಾನ, ಇಚ್ಛೆ –ಇವು ನಾಲ್ಕು ಪ್ರಸ್ತುತವಾಗಿವೆ. ದಾರ್ಶನಿಕವಿಷಯಗಳನ್ನಿಲ್ಲಿ ಸ್ವಲ್ಪ ಹೇಳಬೇಕಾಗುತ್ತದೆ–

ಚಕ್ಷುರಿಂದ್ರಿಯದಿಂದ ಆಗುವ ಜ್ಞಾನವೇ ದರ್ಶನ.

ಶ್ರೋತ್ರೇಂದ್ರಿಯದಿಂದ ಆಗುವ ಜ್ಞಾನವೇ ಶ್ರವಣ.

ಇಂದ್ರಿಯಗಳ ವಿವಕ್ಷೆ ಇಲ್ಲದೆ ಮನಸ್ಸಿಗಾಗುವುದು ಮಾನಸಜ್ಞಾನ.

ಇಚ್ಛೆಯೆನ್ನುವುದು ಮನಸ್ಸಿನಲ್ಲಿ ಹುಟ್ಟುವ ಒಂದು ಗುಣ.

ಆತ್ಮನು ಮನಸ್ಸಿನೊಡನೆ, ಮನಸ್ಸು ಇಂದ್ರಿಯದೊಡನೆ, ಇಂದ್ರಿಯವು ವಸ್ತುವಿನೊಡನೆ ಸಂಬಂಧಹೊಂದಿದಾಗ ವಸ್ತುಜ್ಞಾನ ಹುಟ್ಟುತ್ತದೆ. ಇಂದ್ರಿಯವು ಮನಸ್ಸಿಗೂ ಮನಸ್ಸು ಆತ್ಮನಿಗೂ ವಸ್ತುಸ್ವರೂಪವನ್ನು ಅರ್ಪಿಸಿದಾಗ ಆತ್ಮನಿಗೆ ಜ್ಞಾನವಾಗುತ್ತದೆ. ಮನಸ್ಸು ತಾನೇ ವಸ್ತುಸಂಪರ್ಕವನ್ನು ಹೊಂದಿದಾಗ ಇಚ್ಛೆಯೂ ಹುಟ್ಟುತ್ತದೆ.

ಹೀಗೆ ಹಲವಾರು ಪ್ರಕ್ರಿಯೆಗಳಿದ್ದರೂ ಪ್ರಕೃತದಲ್ಲಿ ಇಷ್ಟು ಸಾಕಾಗುತ್ತದೆ. ಏನೆಂದರೆ ಆತ್ಮಮನಃಸಂಯೋಗವೇ ವ್ಯಾಪಾರ. ಈ ವ್ಯಾಪಾರದಿಂದ ಜ್ಞಾನವೂ ಇಚ್ಛೆಯೂ ಹುಟ್ಟುತ್ತವೆ. ಜ್ಞಾನಾನುಕೂಲವಾದ ಆತ್ಮಮನಃಸಂಯೋಗವು ಜ್ಞಾ ಧಾತುವಿನ ಅರ್ಥ. ಇಚ್ಛಾನುಕೂಲಾತ್ಮಮನಃಸಂಯೋಗವು ಇಚ್ಛತಿ ಎಂಬಲ್ಲಿ ಧಾತ್ವರ್ಥ. 'ಚೈತ್ರನು ಮರವನ್ನು ನೋಡುತ್ತಾನೆ' –ಎಂಬಲ್ಲಿ ಮರದ ದರ್ಶನವೇ ಚಕ್ಷುರಿಂದ್ರಿಯದ ಮೂಲಕ ನಡೆದ ವೃಕ್ಷದರ್ಶನಾನುಕೂಲವ್ಯಾಪಾರ. ಶಬ್ದವನ್ನು ಕೇಳುತ್ತಾನೆ –ಎಂಬಲ್ಲಿ ಶಬ್ದಶ್ರವಣವೇ ಶ್ರೋತ್ರೇಂದ್ರಿಯದ ಮೂಲಕ ನಡೆದ ಶಬ್ದಶ್ರವಣಾನುಕೂಲವ್ಯಾಪಾರ. ಶಬ್ದಜ್ಞಾನವು ಫಲ.

ಒಳ್ಳೆಯದು. ಜ್ಞಾನವೆಂಬುದು ಫಲವಾಯಿತು. ಆತ್ಮಮನಃಸಂಯೋಗವು ವ್ಯಾಪಾರವಾಯಿತು. ಈ ವ್ಯಾಪಾರವು ಚೈತ್ರನೇ ಮೊದಲಾದ ಕರ್ತೃವಿನಲ್ಲಿರುತ್ತದೆ. ಫಲವಾದ ಜ್ಞಾನವೂ ಸಹ ಕರ್ತೃವಿನಲ್ಲಿಯೇ ಇರುತ್ತದೆ. ಮರ, ಶಬ್ದ ಮೊದಲಾದವು ಫಲಾಶ್ರಯವಾಗಲಿಲ್ಲವಾದ್ದರಿಂದ ಹೇಗೆ ಕರ್ಮಗಳಾಗುತ್ತವೆ? ಎಂಬ ಪ್ರಶ್ನೆ ಹುಟ್ಟುತ್ತದೆ. ಜ್ಞಾನವು ವಿಷಯವನ್ನು ಬಿಟ್ಟು ಇರುವುದೇ ಇಲ್ಲ. ವಿಷಯವೇ ಇಲ್ಲದೆ "ನನಗೊಂದು ಜ್ಞಾನ ಬಂದಿದೆ. ಯಾವುದರ ಜ್ಞಾನವೆಂಬುದು ಗೊತ್ತಿಲ್ಲ!" ಎಂದು ಯಾವ ಮೂಢನೂ ಹೇಳುವುದಿಲ್ಲ. ಆದ್ದರಿಂದ ಜ್ಞಾನವು ವಿಷಯತಾಸಂಬಂಧದಿಂದ ಕರ್ಮದಲ್ಲಿರುತ್ತದೆಯೆಂದು ತಿಳಿಯಬೇಕು. ಆಶ್ರಯತಾಸಂಬಂಧದಿಂದ ಕರ್ತೃವಿನಲ್ಲಿಯೂ ವಿಷಯತಾಸಂಬಂಧದಿಂದ ಜ್ಞೇಯವಾದ ವಸ್ತುವಿನಲ್ಲಿಯೂ ಇರುತ್ತದೆ. ಹೀಗೆಯೇ ಇಚ್ಛೆಯೂ ವಿಷಯತಾಸಂಬಂಧದಿಂದ ವಸ್ತುವಿನಲ್ಲಿರುತ್ತದೆ. ಈ ಪ್ರಕಾರ

ದಲ್ಲಿ ಫಲಾಶ್ರಯಗಳಾಗುವುದರಿಂದ 'ಮರವನ್ನು ನೋಡುತ್ತಾನೆ, ಹಾಲನ್ನು ಇಚ್ಛಿಸುತ್ತಾನೆ' –ಮುಂತಾದ ಪ್ರಯೋಗಗಳು ಬರಬಹುದು. ಈ ಕರ್ಮಗಳನ್ನು ವೈಷಯಿಕ ಕರ್ಮಗಳೆಂದು ಹೇಳಿ ಕರ್ಮವನ್ನು ನಾಲ್ಕೂ ವಿಧವೆಂದು ಕೆಲವರು ವಿಂಗಡಿಸುತ್ತಾರೆ. ವಾಸ್ತವವಾಗಿ ವೈಷಯಿಕಕರ್ಮವು ಪ್ರಾಪ್ಯಕರ್ಮದಲ್ಲಿ ಸೇರಿ ಹೋಗುತ್ತದೆ.

ಅಕರ್ಮಕ–ಸಕರ್ಮಕಗಳ ವಿಭಾಗ

ಯಾವ ಕ್ರಿಯಾಪದವನ್ನು ಹೇಳಿದಾಗ 'ಯಾರನ್ನು? ಯಾವುದನ್ನು?' –ಎಂಬ ಕರ್ಮದ ಆಕಾಂಕ್ಷೆ ಹುಟ್ಟುತ್ತದೆಯೋ ಅದು ಸಕರ್ಮಕ. ಯಾವ ಕ್ರಿಯಾಪದವನ್ನು ಹೇಳಿದಾಗ ಹಾಗೆ ಕರ್ಮದ ಆಕಾಂಕ್ಷೆ ಹುಟ್ಟುವುದಿಲ್ಲವೋ ಅದು ಅಕರ್ಮಕ ಎಂದು ಹೇಳುವ ರೂಢಿ ಇದೆ. ಅದು ಶಾಲಾವಿದ್ಯಾರ್ಥಿಗಳಿಗೆ ಸಾಕಾಗಬಹುದು. ಆದರೆ ಒಂದು ಕ್ರಿಯಾಪದವನ್ನು ಹೇಳಿದಾಗ ಕರ್ಮಾಕಾಂಕ್ಷೆ ಹುಟ್ಟುವುದೇಕೆ? ಇನ್ನೊಂದನ್ನು ಹೇಳಿದಾಗ ಕರ್ಮಾಕಾಂಕ್ಷೆ ಹುಟ್ಟದಿರುವುದೇಕೆ? –ಎಂಬ ಪ್ರಶ್ನೆಗೆ ಅಲ್ಲಿ ಉತ್ತರವಿಲ್ಲ. ಮತ್ತು ಅಕರ್ಮಕ–ಸಕರ್ಮಕಧಾತುಗಳ ಸ್ವರೂಪವನ್ನು ನಾವು ತಿಳಿಯಬೇಕಾಗಿದೆ.

ಫಲವ್ಯಧಿಕರಣವ್ಯಾಪಾರವಾಚಕತ್ವಂ ಸಕರ್ಮಕತ್ವಮ್– ಎಂದು ಸಕರ್ಮಕ ಧಾತುವಿನ ಲಕ್ಷಣ. ಫಲವ್ಯಾಪಾರಗಳೆರಡೂ ಧಾತ್ವರ್ಥಗಳಷ್ಟೆ. ಫಲಕ್ಕೆ ಯಾವುದು ಆಧಾರವೋ ಅದಕ್ಕೆ ಭಿನ್ನವಾದ ಆಧಾರದಲ್ಲಿರುವ ವ್ಯಾಪಾರವನ್ನು ಬೋಧಿಸುವುದು ಸಕರ್ಮಕ ಧಾತುವಿನ ಲಕ್ಷಣ. ಉದಾಃ

೧. ಅವನು ಮರವನ್ನು ಕಡಿಯುತ್ತಾನೆ. ಕಡಿ ಎಂದರೆ ಎರಡು ವಿಭಾಗವನ್ನು ಮಾಡುವುದು. ವಿಭಾಗವೆಂಬ ಫಲವು ಮರದಲ್ಲಿದೆ. ವಿಭಾಗವನ್ನು ಮಾಡುವ ವ್ಯಾಪಾರವು (ಕ್ರಿಯೆ) 'ಅವನು' ಎಂಬ ಕರ್ತೃವಿನಲ್ಲಿದೆ. ಆದ್ದರಿಂದ 'ಕಡಿ' ಧಾತು ಸಕರ್ಮಕ.

೨. ಸೀತೆ ನೀರನ್ನು ಸೇದುತ್ತಾಳೆ. 'ಸೇದು' ಧಾತುವಿಗೆ ಊರ್ಧ್ವದೇಶಸಂಯೋಗಾನುಕೂಲವ್ಯಾಪಾರವೆಂದರ್ಥ. ಊರ್ಧ್ವದೇಶಸಂಯೋಗವು ಫಲ. ಅದು ನೀರಿನಲ್ಲಿದೆ. ಅದನ್ನು ಮಾಡುವ ಕ್ರಿಯೆ ಸೀತೆಯಲ್ಲಿದೆ. ಆದ್ದರಿಂದ 'ಸೇದು' ಧಾತು ಸಕರ್ಮಕ.

ಕರ್ಮದ ಉದಾಹರಣೆಗೆ ಬಳಸಿದ ಧಾತುಗಳಲ್ಲಿ ಹೀಗೆಯೇ ಸಮನ್ವಯ ಮಾಡಿಕೊಳ್ಳಬಹುದು. ಅಕರ್ಮಕಧಾತುವಿಗೂ ಫಲವ್ಯಾಪಾರಗಳೆಂಬ ಎರಡು ಅರ್ಥಗಳಿವೆ.

ರಾಮನು ನಗುತ್ತಾನೆ.
ಕೃಷ್ಣನು ಏಳುತ್ತಾನೆ.
ಮಗು ಅಳುತ್ತದೆ.
ಅವಳು ನಾಚಿಕೆಪಡುತ್ತಾಳೆ.
ಹಣ್ಣು ಬೀಳುತ್ತದೆ.

ಇವು ಅಕರ್ಮಕಕ್ರಿಯಾಪದಗಳು. ಇಲ್ಲಿ ವ್ಯಾಪಾರ(ಕ್ರಿಯೆ)ವು ಮಾತ್ರ ಧಾತುವಿನಿಂದ ಪ್ರತೀತವಾಗುತ್ತದೆ. ಫಲ ಯಾವುದು? ಫಲವಿಲ್ಲದಿದ್ದರೆ ಈ ಧಾತುಗಳೆಲ್ಲವೂ ಪರ್ಯಾಯಧಾತುಗಳಾಗಿಬಿಡುತ್ತಿದ್ದವು. ಫಲವಿರುವುದರಿಂದಲೇ ಅರ್ಥಭೇದವಿದೆಯೆಂದು ಹೇಳುತ್ತೇವೆ. ಫಲವು ಅನ್ಯತ್ರ ಇರದೆ ಕರ್ತೃವಿನಲ್ಲಿಯೇ ಇದ್ದುಬಿಟ್ಟಿರುವುದರಿಂದ ಸ್ಪಷ್ಟವಾಗಿ ಗೋಚರಿಸುವುದಿಲ್ಲ. 'ಫಲಸಮಾನಾಧಿಕರಣವ್ಯಾಪಾರ ವಾಚಕತ್ವಮಕರ್ಮಕತ್ವಮ್' –ಎಂದು ಅಕರ್ಮಕಧಾತುವಿನ ಲಕ್ಷಣ. ಫಲವು ಯಾವುದರಲ್ಲಿದೆಯೋ ಅದರಲ್ಲಿಯೇ ಇರುವ ವ್ಯಾಪಾರವನ್ನು ಬೋಧಿಸುವುದು ಅಕರ್ಮಕ ಧಾತುವಿನ ಲಕ್ಷಣ. ಮೇಲ್ಕಂಡ ಧಾತುಗಳು ಉದಾಹರಣೆಗಳು. ಇವುಗಳಲ್ಲಿ ಫಲವು ಯಾವುದೆಂಬುದನ್ನೀಗ ವಿವೇಚಿಸಬೇಕು. ನಗುವ ಕ್ರಿಯೆ ನಡೆದಾಗ ಆ ವ್ಯಕ್ತಿಯ ಮುಖವು ಅರಳುತ್ತದೆ. ತುಟಿಗಳು ತೆರೆದುಕೊಳ್ಳುತ್ತವೆ. ಹಲ್ಲು ಕಾಣಿಸುತ್ತದೆ. ಈ ಎಲ್ಲ ಬದಲಾವಣೆಯನ್ನು ಸೇರಿಸಿ ವಿಕಸನ ಎನ್ನಬಹುದು. ಇದೇ ಫಲ. ಮುಖವಿಕಸನಾನುಕೂಲವ್ಯಾಪಾರವು ನಗು ಧಾತುವಿನ ಅರ್ಥ. ಫಲವ್ಯಾಪಾರಗಳೆರಡೂ ನಗುವ ಕರ್ತೃವಿನಲ್ಲೇ ಇವೆ. ಈ ಧಾತು ಫಲಸಮಾನಾಧಿಕರಣ ವ್ಯಾಪಾರವಾಚಿಯಾದ್ದರಿಂದ ಅಕರ್ಮಕ.

ಕುಳಿತವನು ಎದ್ದಾಗ ಅವನ ತಲೆ ಎತ್ತರದ ಜಾಗವನ್ನು ಸ್ಪರ್ಶಿಸುತ್ತದೆ. ಊರ್ಧ್ವದೇಶಸಂಯೋಗಾನುಕೂಲವ್ಯಾಪಾರವು ಏಳು ಧಾತುವಿನ ಅರ್ಥ. ಊರ್ಧ್ವದೇಶಸಂಯೋಗವು ಫಲ. ಅದು ಕರ್ತೃವಿನಲ್ಲಿಯೇ ಇದೆಯಾದ್ದರಿಂದ ಏಳು ಧಾತು ಅಕರ್ಮಕ.

ಒಬ್ಬನು ಅಳುವಾಗ ಆತನ ಮುಖದಲ್ಲಿ ಒಂದು ವಿಕಾರ ಉಂಟಾಗುತ್ತದೆ. ಕಣ್ಣಿಂದ ನೀರು ಸುರಿಯುತ್ತದೆ. ಇದೆಲ್ಲವೂ ಅನುಭವಗಮ್ಯವಾದ ಒಂದು ವಿಕಾರ ವಿಶೇಷ. ವಿಕಾರವಿಶೇಷಾನುಕೂಲವ್ಯಾಪಾರವು ಅಳು ಧಾತುವಿನ ಅರ್ಥ. ಈ ವಿಕಾರವಿಶೇಷವೂ ಅಳುವ ಕ್ರಿಯೆಯೂ ಕರ್ತೃವಿನಲ್ಲಿಯೇ ಇವೆ. ವಿಕಾರವಿಶೇಷವೇ ಫಲ. ಆದ್ದರಿಂದ ಅಳು ಧಾತು ಅಕರ್ಮಕ.

ಹೀಗೆಯೇ ಒಬ್ಬಳು ನಾಚಿಕೊಳ್ಳುತ್ತಾಳೆ ಎಂಬುದು ಹೇಗೆ ಗೊತ್ತಾಗುತ್ತದೆ? ಅವಳ ನಡೆ, ನುಡಿ, ನೋಟ –ಮುಂತಾದ್ದರಿಂದ ಗೊತ್ತಾಗುತ್ತದೆ. ಅವು ಒಂದು ರೀತಿಯ ವಿಕಾರಗಳೇ. ಆ ವಿಕಾರಗಳನ್ನುಂಟುಮಾಡುವ ಮನೋವ್ಯಾಪಾರವು ನಾಚು ಧಾತುವಿನ ಅರ್ಥ.

ಹಣ್ಣು ಬೀಳುತ್ತದೆ. ಇಲ್ಲಿ ಊರ್ಧ್ವದೇಶವಿಭಾಗಪೂರ್ವಕವಾದ ಅಧೋದೇಶ ಸಂಯೋಗಾನುಕೂಲವ್ಯಾಪಾರವು ಬೀಳು ಧಾತುವಿನ ಅರ್ಥ. ಅಧೋದೇಶ ಸಂಯೋಗವೆಂಬ ಫಲವೂ ಫಲಜನಕವ್ಯಾಪಾರವೂ ಕರ್ತೃವಾದ ಹಣ್ಣಿನಲ್ಲಿವೆ. ಆದ್ದರಿಂದ ಬೀಳು ಧಾತು ಅಕರ್ಮಕ.

ಹೀಗೆಯೇ ಇತರ ಧಾತುಗಳಲ್ಲಿಯೂ ಫಲವನ್ನು ನೋಡಿ ಧಾತ್ವರ್ಥವನ್ನು ಊಹಿಸಿಕೊಳ್ಳಬೇಕು. ಕರ್ತೃವಿನಲ್ಲಿಯೇ ಫಲವು ಸೇರಿಕೊಂಡಿರುವುದರಿಂದ ಯಾರನ್ನು?

ಏನನ್ನು? –ಎಂಬ ಆಕಾಂಕ್ಷೆ ಹುಟ್ಟುವುದಿಲ್ಲ. ಸಕರ್ಮಕದಲ್ಲಿ ಧಾತ್ವರ್ಥ ಫಲವು ಎಲ್ಲಿದೆಯೆಂಬ ಆಕಾಂಕ್ಷೆ ಸಹಜವಾಗಿ ಹುಟ್ಟುತ್ತದೆ. ಯಾವ ಅರ್ಥದ ಧಾತುಗಳು ಅಕರ್ಮಕಗಳೆಂಬುದನ್ನು ಈ ಶ್ಲೋಕವು ತಿಳಿಸುತ್ತದೆ–

> ವೃದ್ಧಿಕ್ಷಯಭಯಜೀವತಮರಣ
> ಲಜ್ಜಾಸತ್ತಾಸ್ಥಿತಿಜಾಗರಣ
> ಸ್ವಪ್ನಕ್ರೀಡಾರುಚಿದೀಪ್ತ್ಯರ್ಥಂ
> ಧಾತುಗಣಂ ತಮಕರ್ಮಕಮಾಹುಃ ॥

— (ಅಜ್ಞಾತಮೂಲ– ಲಘುಶಬ್ದೇಂದುಶೇಖರ)

ಉದಾಹರಣೆ–

ವೃದ್ಧಿ = ಬೆಳೆಯುತ್ತದೆ, ಕ್ಷಯ = ಕ್ಷೀಣಿಸುತ್ತದೆ, ಭಯ = ಹೆದರುತ್ತಾನೆ, ಜೀವಿತ = ಬದುಕುತ್ತಾಳೆ, ಮರಣ = ಸಾಯುತ್ತದೆ, ಲಜ್ಜಾ = ನಾಚುತ್ತಾಳೆ, ಸತ್ತಾ = ಇರುತ್ತದೆ, ಸ್ಥಿತಿ = ನಿಲ್ಲುತ್ತಾನೆ, ಜಾಗರಣ = ಎಚ್ಚರಗೊಳ್ಳುತ್ತಾಳೆ, ಸ್ವಪ್ನ = ನಿದ್ರಿಸುತ್ತದೆ (ಸ್ವಪಿತಿ), ಕ್ರೀಡಾ = ವಿಹರಿಸುತ್ತಾನೆ, ರುಚಿ = ರುಚಿಸುತ್ತದೆ, ದೀಪ್ತಿ = ಪ್ರಕಾಶಿಸುತ್ತದೆ.

ಇನ್ನೂ ಕೆಲವು ಬಗೆಯಲ್ಲಿ ಧಾತುಗಳು ಅಕರ್ಮಕಗಳಾಗುವುದುಂಟು.

> ಧಾತೋರರ್ಥಾಂತರೇ ವೃತ್ತೇರ್ಧಾತ್ವರ್ಥೇನೋಪಸಂಗ್ರಹಾತ್ ।
> ಪ್ರಸಿದ್ಧೇರವಿವಕ್ಷಾತಃ ಕರ್ಮಣೋऽಕರ್ಮಿಕಾ ಕ್ರಿಯಾ ॥

— ಸಿದ್ಧಾಂತಕೌಮುದೀ. (ಬಹುಶಃ ವಾಕ್ಯಪದೀಯದ ಶ್ಲೋಕ)

ಉದಾಃ

೧. ಧಾತುವು ಅರ್ಥಾಂತರದಲ್ಲಿದ್ದಾಗ– 'ಹೊಳೆಯು ಸಮುದ್ರವನ್ನು ಸೇರುತ್ತದೆ.' ಇಲ್ಲಿ 'ಸೇರು' ಧಾತು ಸಕರ್ಮಕ. 'ನನಗೆ ಮೂಲಂಗಿ ಸೇರುತ್ತದೆ.' ಇಲ್ಲಿ ಅಕರ್ಮಕ.

೨. ಧಾತ್ವರ್ಥದಲ್ಲಿ ಕರ್ಮವು ಸೇರಿಹೋದಾಗ– 'ಅವಳು ಕುಣಿಯುತ್ತಾಳೆ.' ಕೈಕಾಲು ಮೊದಲಾದ ಅಂಗಗಳನ್ನು ಅತ್ತಿತ್ತ ಬೀಸುವುದು ಕುಣಿ ಧಾತುವಿನ ಅರ್ಥ. ಅಂಗಗಳೆಂಬ ಕರ್ಮವು ಧಾತ್ವರ್ಥದಲ್ಲಿ ಸೇರಿಹೋಗಿದೆ.

ನಾಯಿಯು ಬೊಗಳುತ್ತದೆಯೆಂಬುದೂ ಉದಾಹರಣೆ. ಬೊಗಳುವುದೆಂದರೆ ಶಬ್ದವನ್ನು ಮಾಡುವುದು. 'ಶಬ್ದವನ್ನು' ಎಂಬುದು ಧಾತ್ವರ್ಥದಲ್ಲಿ ಸೇರಿಕೊಂಡಿದೆ.

೩. ಪ್ರಸಿದ್ಧಿ– 'ಅವಳು ಹಾಡುತ್ತಾಳೆ.' ಗೀತಗಳನ್ನು ಎಂಬ ಕರ್ಮವು ಪ್ರಸಿದ್ಧವಾದ್ದರಿಂದ ಪ್ರಯೋಗವಾಗಿಲ್ಲ.

೪. ಅವಿವಕ್ಷೆ– 'ಆತನು ಕೇಳತಕ್ಕವನಲ್ಲ.' ಹಿತವಾದವನ್ನು ಕೇಳತಕ್ಕವನಲ್ಲ ಎಂದರ್ಥ.

ಹೀಗೆಯೇ ಜಾರುತ್ತದೆ, (ಬೆಂಕಿ) ಸುಡುತ್ತದೆ, ನಡೆಯುತ್ತಾನೆ. (ಶಾಲೆಯಲ್ಲಿ) ಓದುತ್ತಾಳೆ– ಇತ್ಯಾದಿ ವಾಕ್ಯಗಳಲ್ಲಿ ಕ್ರಿಯಾಪದಗಳು ಅಕರ್ಮಕಗಳೆಂದು ತಿಳಿಯ

ಬಹುದು. ಇವುಗಳಲ್ಲಿ ಕೆಲವಕ್ಕೆ ಕರ್ಮಪದಗಳನ್ನು ಸೇರಿಸಿ ಸಕರ್ಮಕಗಳೆಂದೂ ವ್ಯವಹರಿಸಬಹುದು.

ಪ್ರಯೋಜ್ಯಕರ್ತೃ ಮತ್ತು ಪ್ರಯೋಜ್ಯಕರ್ಮ

ಎಲ್ಲ ಧಾತುಗಳ ಮೇಲೆ ಪ್ರೇರಣಾರ್ಥವು ತೋರಿದಾಗ ಸಂಸ್ಕೃತದಲ್ಲಿ 'ಣಿಚ್' ಪ್ರತ್ಯಯವೂ ಕನ್ನಡದಲ್ಲಿ 'ಇಸು' ಪ್ರತ್ಯಯವೂ ಬರುತ್ತದೆ. ಪ್ರೇರಣೆ ಮಾಡತಕ್ಕವನಿಗೆ ಪ್ರಯೋಜಕಕರ್ತೃವೆಂದೂ ಪ್ರೇರಣೆಗೆ ಒಳಗಾದ ಕರ್ತೃವಿಗೆ ಪ್ರಯೋಜ್ಯಕರ್ತೃವೆಂದೂ ಹೆಸರು. ಉದಾ:

ಖಾದ್+ಣಿಚ್ – ಖಾದಯತಿ

ತಿನ್ನು+ಇಸು – ತಿನ್ನಿಸುತ್ತಾನೆ

ತಿನ್ನತಕ್ಕವನು ಪ್ರಯೋಜ್ಯಕರ್ತಾ. ತಿನ್ನಿಸತಕ್ಕವನು ಪ್ರಯೋಜಕಕರ್ತಾ.

ತಿನ್ನಿಸು ಎಂಬಲ್ಲಿಯೂ ತಿನ್ನು ಎಂಬ ಪ್ರಕೃತಿಗೆ ಧಾತುಸಂಜ್ಞೆಯಿದೆ. ತಿನ್ನಿಸು ಎಂಬ ಇಸು ಪ್ರತ್ಯಯಾಂತಕ್ಕೂ ಧಾತುಸಂಜ್ಞೆಯಿದೆ. ತಿನ್ನತಕ್ಕವನು, ತಿನ್ನಿಸುವವನು –ಇಬ್ಬರೂ ಧಾತ್ವರ್ಥವ್ಯಾಪಾರಾಶ್ರಯಗಳಾದ್ದರಿಂದ ಕರ್ತೃಗಳಾಗುತ್ತಾರೆ. ಪ್ರಯೋಜಕನ ಕರ್ತೃತ್ವವು ಣಿಜ್‌ಪ್ರತ್ಯಯದಿಂದ ಉಕ್ತವಾದುದರಿಂದ ಕರ್ತರಿ ತೃತೀಯಾ ಬಂದಿಲ್ಲ. ಪ್ರಯೋಜ್ಯನ ಕರ್ತೃತ್ವವು ಉಕ್ತವಾಗಿಲ್ಲವಾದ್ದರಿಂದ ಅದರ ಮೇಲೆ ಕರ್ತರಿ ತೃತೀಯಾವಿಭಕ್ತಿಯು ಬರುವುದು ಯುಕ್ತವಾಗಿದೆ. ಉದಾ:

'ತಾಯಿಯು ಮಗುವಿನಿಂದ ಅನ್ನವನ್ನು ತಿನ್ನಿಸಿದಳು.'

ಇಲ್ಲಿ ತಾಯಿ ಪ್ರಯೋಜಕಕರ್ತೃ. ಮಗು ಪ್ರಯೋಜ್ಯಕರ್ತೃ. ಈ ಪ್ರಯೋಗಗಳನ್ನು ನೋಡಿ–

೧. ಜನರು ನಗುತ್ತಾರೆ –ವಿದೂಷಕನು ಜನರನ್ನು ನಗಿಸುತ್ತಾನೆ.

೨. ಮಗು ಅಳುತ್ತದೆ –ಆತನು ಮಗುವನ್ನು ಅಳಿಸುತ್ತಾನೆ.

೩. ಹುಡುಗನು ಈಜುತ್ತಾನೆ –ಶಿಕ್ಷಕನು ಹುಡುಗನನ್ನು ಈಜಿಸುತ್ತಾನೆ.

೪. ಕುದುರೆ ಓಡುತ್ತದೆ –ಸವಾರನು ಕುದುರೆಯನ್ನು ಓಡಿಸುತ್ತಾನೆ.

೫. ನೀರು ಸುರಿಯುತ್ತದೆ –ಅವರು ನೀರನ್ನು ಸುರಿಸುತ್ತಾರೆ.

ಇಲ್ಲಿ ಪ್ರಯೋಜ್ಯವು ಕರ್ಮವಾಗಿ ದ್ವಿತೀಯಾವಿಭಕ್ತಿಯನ್ನು ಪಡೆದಿದೆ. ಪ್ರಯೋಜಕನ ವ್ಯಾಪಾರದಿಂದ ಪ್ರಯೋಜ್ಯದ ವ್ಯಾಪಾರವು ಹುಟ್ಟುತ್ತದೆ. ಆದ್ದರಿಂದ ಪ್ರಯೋಜ್ಯದ ವ್ಯಾಪಾರವು ಪ್ರಯೋಜಕವ್ಯಾಪಾರಜನ್ಯಫಲವಾಯಿತು. ಫಲಾಶ್ರಯವಾದ್ದರಿಂದ ಮೇಲ್ಕಂಡ ಉದಾಹರಣೆಗಳಲ್ಲಿ ಪ್ರಯೋಜ್ಯವು ಕರ್ಮವಾಗಿದೆ. ಪ್ರಯೋಜ್ಯನು ತನ್ನ ಧಾತ್ವರ್ಥವ್ಯಾಪಾರವನ್ನು ಮಾಡುವುದರಿಂದ ಕರ್ತನೂ ಆಗಬಹುದು. ಆದ್ದರಿಂದ 'ತಾಯಿಯು ಮಗುವಿನಿಂದ ಅನ್ನವನ್ನು ತಿನ್ನಿಸುತ್ತಾಳೆ' ಎಂಬ ಹಿಂದಿನ ಉದಾಹರಣೆಯಲ್ಲಿ ಮಗುವು ಕರ್ತೃವಾದ್ದರಿಂದ ಕರ್ತರಿತೃತೀಯಾ ಬಂದಿದೆ. ಹೀಗೆ ಪ್ರಯೋಜಕ ಕರ್ತೃವಿದ್ದಾಗ ಪ್ರಯೋಜ್ಯಕ್ಕೆ ಸಂಜ್ಞಾದ್ವಯದ ಪ್ರಾಪ್ತಿ

ಇದೆ. ಆಗ ವ್ಯವಸ್ಥೆ ಹೇಗೆಂದರೆ, ಮೂಲಧಾತುವಾದ ಪ್ರಕೃತಿಯು ಅಕರ್ಮಕ ಧಾತುವಾಗಿದ್ದಲ್ಲಿ ಪ್ರಯೋಜ್ಯವು ಕರ್ಮಸಂಜ್ಞೆಯನ್ನು ಮಾತ್ರ ಪಡೆಯುತ್ತದೆ. ಮೇಲ್ಕಂಡ ಐದು ಉದಾಹರಣೆಗಳಲ್ಲಿಯೂ ಪ್ರಕೃತಿಯಾದ ಧಾತು ಅಕರ್ಮಕವಾಗಿರುವುದನ್ನು ನೋಡಬಹುದು. ಪ್ರಕೃತಿಯಾದ ಮೂಲಧಾತು ಸಕರ್ಮಕವಾಗಿದ್ದರೆ ಪ್ರಯೋಜ್ಯವು ಕನ್ನಡದಲ್ಲಿ ಪ್ರಾಯೇಣ ಕರ್ತೃವಾಗಿರುತ್ತದೆ. ಅದು ಕರ್ಮವೆಂದು ತಿಳಿದು ದ್ವಿತೀಯೆಯನ್ನು ಬಳಸಿರುವುದು ತುಂಬ ವಿರಳವಾಗಿ ದೊರೆಯಬಹುದು. ಸಂಸ್ಕೃತದಲ್ಲಿ ಇದಕ್ಕೆ ಪ್ರತ್ಯೇಕವ್ಯವಸ್ಥೆ ಇದೆ. ಭಟ್ಟಾಕಳಂಕನು ಸಂಸ್ಕೃತವ್ಯಾಕರಣವನ್ನನುಸರಿಸಿ, ಅರಸಂ ಭೃತ್ಯನನೂರನೆಯ್ದಿಸಿದಂ, ಗೋವಳಂ ತುರುಗಳಂ ಮನೆಯಂ ಪುಗಿಸಿದಂ –ಮುಂತಾದ ಉದಾಹರಣೆಗಳನ್ನು ಕೊಟ್ಟಿದ್ದಾನೆ.

ಗೌಣಕರ್ಮ

೧. ಗೋವಳನು ಹಾಲನ್ನು ಕರೆಯುತ್ತಾನೆ

೨. ಗೋವಳನು ಹಸುವನ್ನು ಕರೆಯುತ್ತಾನೆ.

೩. ಗೋವಳನು ಹಸುವನ್ನು ಹಾಲನ್ನು ಕರೆಯುತ್ತಾನೆ.

ಇಲ್ಲಿ 'ಕರೆ' ಧಾತುವಿನ ಅರ್ಥ ಯಾವುದು? ಹಸು, ಹಾಲು –ಇವೆರಡೂ ಕರ್ಮಗಳಾಗುವುದು ಹೇಗೆ?

ಮೊದಲನೆಯ ವಾಕ್ಯದಲ್ಲಿ 'ತ್ಯಜನಾನುಕೂಲವ್ಯಾಪಾರ'ವು ಧಾತ್ವರ್ಥ. ತ್ಯಜನವೆಂದರೆ ಸಂಬಂಧತ್ಯಾಗ. ಹಸುವಿನ ಸಂಬಂಧವು ಹಾಲಿನಲ್ಲಿ ಬಿಟ್ಟು ಹೋಗುತ್ತದೆ, ಹಾಲು ಕೆಚ್ಚಲಿನಿಂದ ಹೊರಗೆ ಬರುವುದರಿಂದ. ಗೋವಳನ ಕ್ರಿಯೆಯಿಂದ ಈ ಫಲವು ಹಾಲಿನಲ್ಲಿ ಹುಟ್ಟುತ್ತದೆ. ತ್ಯಜನರೂಪಫಲಾಶ್ರಯವಾದ್ದರಿಂದ ಹಾಲು ಕರ್ಮವಾಗುತ್ತದೆ.

ಎರಡನೆಯ ವಾಕ್ಯದಲ್ಲಿ 'ತ್ಯಜನಾನುಕೂಲವ್ಯಾಪಾರಾನುಕೂಲವ್ಯಾಪಾರ'ವು ಧಾತ್ವರ್ಥ. ಗೋವಳನ ಕ್ರಿಯೆಯಿಂದ ಹಸುವು ಹಾಲನ್ನು ತ್ಯಜಿಸುತ್ತದೆ. ತ್ಯಜನಾನುಕೂಲವ್ಯಾಪಾರವೇ ಗೋವಳನ ವ್ಯಾಪಾರದ ಫಲ. ತ್ಯಜನ= ಹಾಲಿನ ಸಂಬಂಧತ್ಯಾಗ (ಸೋರೆಯುವುದು). ತ್ಯಜನರೂಪಫಲ = ತ್ಯಜನವೆಂಬ ಫಲ. ಈ ಫಲವು ಗೋನಿಷ್ಠವಾದ್ದರಿಂದ ಹಸು ಕರ್ಮವಾಗುತ್ತದೆ. ಇಲ್ಲಿ 'ಕರೆ' ಧಾತುವಿಗೆ ವ್ಯಾಪಾರದ್ವಯವು ಅರ್ಥ. ಕಡೆಯ ವ್ಯಾಪಾರವು ಗೋವಳನಲ್ಲಿರುವುದರಿಂದ ಅವನು ಕರ್ತೃ. ಈ ವ್ಯಾಪಾರದ ಫಲವೇ ಅದರ ಹಿಂದಿನ ವ್ಯಾಪಾರ. ಅದು ಗೋನಿಷ್ಠವಾದ್ದರಿಂದ ಹಸು ಕರ್ಮವಾಯಿತು. ಹಸುವಿನ ವ್ಯಾಪಾರದಿಂದ ಹಾಲಿನಲ್ಲಿ ತ್ಯಜನ(ಸಂಬಂಧತ್ಯಾಗ) ವಾಗುತ್ತದೆ. ಅದು ಹಸುವಿನ ವ್ಯಾಪಾರದ ಫಲ. ಆದ್ದರಿಂದ ಹಾಲೂ ಕರ್ಮವಾಗುತ್ತದೆ. ಈ ಕಾರಣದಿಂದ ಮೂರನೆಯ ವಾಕ್ಯವೂ ಸರಿ. ಹಾಲನ್ನು ಕರೆಯುವಾಗ ಹಸುವಿನಲ್ಲೊಂದು ಪ್ರಯತ್ನ ಹುಟ್ಟುತ್ತದೆ. ಹಸು ಸೋರೆಯುತ್ತದೆ ಎಂದು ಹೇಳುತ್ತಾರೆ. ಹಸು ಆ ವ್ಯಾಪಾರವನ್ನು ಮಾಡಿದರೆ, ಹಾಲು ಕೆಚ್ಚಲಿನಿಂದ ಹೊರಗೆ

ಬರುತ್ತದೆ. ಇಲ್ಲದಿದ್ದರೆ ಹಾಲು ಇದ್ದರೂ ಹೊರಗೆ ಬರುವುದಿಲ್ಲ. 'ಹಸು ಸೊರೆಯದೇ ಹೋದ್ದರಿಂದ ಹಾಲು ಬರಲಿಲ್ಲ' –ಎಂದು ಜನರು ಹೇಳುವುದುಂಟು.

ಹಾಲನ್ನು ಕರೆದಾಗ ಗೋವಿಗೂ ಹಾಲಿಗೂ ವಿಭಾಗವಾಗುತ್ತದೆ. ವಾಸ್ತವದಲ್ಲಿ ಗೋವು ಅಪಾದಾನಕಾರಕ. ಹಸುವಿನಿಂದ ಹಾಲನ್ನೇ ಕರೆಯುತ್ತಾನೆ –ಎಂದು ಪಂಚಮೀವಿಭಕ್ತಿಯನ್ನು ಪ್ರಯೋಗಿಸಬೇಕು. ಮಾತಾಡುವವನು (ಗೋವನ್ನು) ಅಪಾದಾನವೆಂದು ವಿವಕ್ಷೆ ಮಾಡಿದರೆ ಪಂಚಮಿಯೇ ಬರುತ್ತದೆ. ಅಪಾದಾನತ್ವವನ್ನು ವಿವಕ್ಷೆ ಮಾಡದಿದ್ದಾಗ ಕರ್ಮಸಂಜ್ಞೆ ಬಂದು ದ್ವಿತೀಯಾ ಬರುತ್ತದೆ. ಈ ವಿವಕ್ಷೆಯು ಕರ್ಮತ್ವದ ಸಾಧ್ಯತೆ ಇದ್ದರೆ ಮಾತ್ರ ಬರುತ್ತದೆ. ಇಲ್ಲಿ ಹಸು ಅಪ್ರಧಾನಕರ್ಮ ಅಥವಾ ಗೌಣಕರ್ಮ. ಹಾಲು ಮುಖ್ಯಕರ್ಮ.

೧. ಭಿಕ್ಷುಕಿಯು ಗೃಹಿಣಿಯನ್ನು ಹಳೆಯ ಸೀರೆಯನ್ನು ಬೇಡುತ್ತಾಳೆ.

೨. ಪಥಿಕನು ಹಳ್ಳಿಗನನ್ನು ದಾರಿಯನ್ನು ಕೇಳುತ್ತಾನೆ.

೩. ದರೋಡೆಕಾರರು ಆ ಮನೆಯನ್ನು ದರೋಡೆ ಮಾಡಿದರು. ಆಮನೆಯಲ್ಲಿ ಹಣವನ್ನು ದರೋಡೆ ಮಾಡಿದರು. ದರೋಡೆಕಾರರು ಆ ಮನೆಯನ್ನು ಹಣವನ್ನು ದರೋಡೆ ಮಾಡಿದರು.

ಇತ್ಯಾದಿ ಪ್ರಯೋಗಗಳೂ ಇವೆ. ಈ ಧಾತುಗಳನ್ನು ದ್ವಿಕರ್ಮಕಗಳೆಂದು ಹೇಳುವುದುಂಟು. ಇವೆಲ್ಲವೂ ಲೌಕಿಕಪ್ರಯೋಗವನ್ನನುಸರಿಸಿಯೇ ಬರುತ್ತವೆ. ಹಿಂದೆ ತೋರಿಸಿದಂತೆ ಪ್ರೇರಣಾರ್ಥಕವಾದ 'ಇಸು' ಇಲ್ಲದಿದ್ದಾಗಲೂ ಧಾತುವಿಗೆ ವ್ಯಾಪಾರ ದ್ವಯವು ಅರ್ಥವಾಗಿರುವುದುಂಟು. ಆಗ ಈ ಬಗೆಯ ಪ್ರಯೋಗಗಳು ಬರುತ್ತವೆ.

ಇಲ್ಲಿಯ ಮೂರನೆಯ ವಾಕ್ಯದಲ್ಲಿ ಮನೆಯೇ ಅಪಹೃತವಸ್ತುವೆಂಬ ವಿವಕ್ಷೆಯಲ್ಲಿ ಕರ್ಮವೂ, ಅಧಿಕರಣವಿವಕ್ಷೆಯಲ್ಲಿ ಸಪ್ತಮಿಯೂ ಬಂದಿವೆ. ಅಪಹೃತವಸ್ತುವಿಗೆ ಅಪಾದಾನವೆಂಬ ವಿವಕ್ಷೆಯಲ್ಲಿ ಮನೆಯಿಂದ ಎಂದು ಪಂಚಮಿಯೂ ಬರಬಹುದು. ಅಪಾದಾನದ ವಿವಕ್ಷೆಯಿಲ್ಲದಾಗ ಕರ್ಮತ್ವದಿಂದ ದ್ವಿತೀಯಾ ಬರುತ್ತದೆ.

ಇದೆಲ್ಲವೂ ಸಂಸ್ಕೃತವ್ಯಾಕರಣವನ್ನನುಸರಿಸಿಯೇ ಬಂದಿದೆಯೆಂಬುದು ಇಲ್ಲಿ ಗಮನಿಸಬೇಕಾದದ್ದು.

ಆರೋಪಿತಕರ್ಮ

೧. ಅಂಗಿಯನ್ನು ಹೊಲಿಯುತ್ತಾನೆ, ಚಪ್ಪಲಿಯನ್ನು ಹೊಲಿಯುತ್ತಾನೆ.

೨. ಮಜ್ಜಿಗೆಯನ್ನು ಕಡೆಯುತ್ತಾಳೆ, ಬೆಣ್ಣೆಯನ್ನು ಕಡೆಯುತ್ತಾಳೆ.

೩. ಸೀರೆಯನ್ನು ನೇಯುತ್ತಾನೆ.

೪. ಹಗ್ಗವನ್ನು ಹೊಸೆಯುತ್ತಾನೆ.

೫. ಗಂಟನ್ನು ಕಟ್ಟುತ್ತಾನೆ.

ಇಂತಹ ಪ್ರಯೋಗಗಳು ಬೇಕಾದಷ್ಟಿವೆ. ಅಂಗಿಯನ್ನು ಯಾರಾದರೂ ಮತ್ತೆ ಹೊಲಿಯುತ್ತಾರೆಯೆ? ಬಟ್ಟೆಯನ್ನು ಹೊಲಿದು ಅಂಗಿಯನ್ನು ತಯಾರಿಸುತ್ತಾರೆ.

ಚಪ್ಪಲಿಯನ್ನು ಹೊಲಿಯಬೇಕಾದ್ದಿಲ್ಲ. ಚರ್ಮವನ್ನು ಕತ್ತರಿಸಿ ಹೊಲಿದು ಚಪ್ಪಲಿಯನ್ನು ತಯಾರಿಸಬೇಕು. ಮೊಸರನ್ನು ಕಡೆದು ಮಜ್ಜಿಗೆಯನ್ನೂ ಬೆಣ್ಣೆಯನ್ನೂ ಮಾಡಿಕೊಳ್ಳುತ್ತಾರೆ. ನೆಯ್ಗೆಯವನು ನೂಲುಗಳನ್ನು ನೆಯ್ದು ಸೀರೆ ಮಾಡುತ್ತಾನೆ. ಸೀರೆಯನ್ನು ಮತ್ತೆ ನೆಯ್ಯುವುದಿಲ್ಲ. ಹಗ್ಗವಾದ ಮೇಲೆ ಹೊಸೆಯಬೇಕಾದ್ದಿಲ್ಲ. ಗಂಟನ್ನು ಮತ್ತೆ ಯಾರೂ ಹಗ್ಗದಿಂದ ಕಟ್ಟುವುದಿಲ್ಲ. ಮೇಲ್ಕಂಡ ಪ್ರಯೋಗಗಳನ್ನು ಸಮರ್ಥಿಸುವುದು ಹೇಗೆ?

ಈ ಪ್ರಯೋಗಗಳಲ್ಲಿ ಅಂಗಿಯನ್ನು ಎಂದರೆ ಅಂಗಿಯಾಗುವಂತೆ ಬಟ್ಟೆಯನ್ನು ಹೊಲಿಯುತ್ತಾನೆ ಎಂದರ್ಥ. ಮಜ್ಜಿಗೆಯಾಗುವಂತೆ, ಬೆಣ್ಣೆಬರುವಂತೆ ಕಡೆಯುತ್ತಾಳೆ. ಸೀರೆಯಾಗುವಂತೆ ನೂಲನ್ನು ಸೇರಿಸಿ ನೇಯುತ್ತಾನೆ ಎಂದರ್ಥ.

ಆದ್ದರಿಂದ ಭವಿಷ್ಯತ್ಕಾಲದಲ್ಲಾಗಲೆಂದು ಉದ್ದೇಶಿಸಿದ ಬೌದ್ಧವಾದ ಅಂಗಿ, ಚಪ್ಪಲಿ ಮೊದಲಾದ್ದನ್ನು ಬಟ್ಟೆ, ಚರ್ಮ ಮುಂತಾದವುಗಳಲ್ಲಿ ಆರೋಪಿಸಿ ಈ ಬಗೆಯ ಪ್ರಯೋಗಗಳು ಬರುತ್ತವೆ. ಅಂಗಿಯನ್ನು ಎಂದರೆ ಮುಂದೆ ಅಂಗಿಯಾಗಬೇಕಾದ ಬಟ್ಟೆಯನ್ನು ಎಂದರ್ಥ. ಬಟ್ಟೆಯಲ್ಲಿ ಮುಂದೆ ಆಗಬೇಕಾದ ಅಂಗಿಯು ಆರೋಪಿತವಾಗಿದೆ. ಮಜ್ಜಿಗೆಯನ್ನು ಕಡೆಯಬೇಕು ಎಂದರೆ ಮಜ್ಜಿಗೆಯಾಗುವಂತೆ ಕಡೆಯಬೇಕು ಎಂದರ್ಥ. ಗಂಟನ್ನು ಕಟ್ಟುತ್ತಾನೆ ಎಂದರೆ ಗಂಟು ಆಗುವಂತೆ ಕಟ್ಟುತ್ತಾನೆ ಎಂದರ್ಥ.

೩. ಕರಣ

ಸಾಧಕತಮಂ ಕರಣಮ್ (೧–೪–೪೨)

ಕ್ರಿಯೆಯು ನೆರವೇರುವುದಕ್ಕೆ ಅತಿಶಯವಾಗಿ ಉಪಕರಿಸುವ ಕಾರಕವು ಕರಣಸಂಜ್ಞೆಯನ್ನು ಪಡೆಯುತ್ತದೆ. 'ಕರ್ತೃಕರಣಯೋಸ್ತೃತೀಯಾ' ಎಂಬ ಸೂತ್ರದಿಂದ ಕರಣವಾಚಕದ ಮೇಲೆ ತೃತೀಯಾವಿಭಕ್ತಿ ಬರುತ್ತದೆ. ಉದಾ:

೧. ನಾನು ಲೇಖನಿಯಿಂದ ಬರೆಯುತ್ತೇನೆ.
೨. ಸೂಜಿಯಿಂದ ಹೊಲಿಯುತ್ತಾಳೆ.
೩. ಚಾಕುವಿನಿಂದ ಹಣ್ಣನ್ನು ಕತ್ತರಿಸುತ್ತಾನೆ.
೪. ಕೊಡಲಿಯಿಂದ ಮರವನ್ನು ಕಡಿಯುತ್ತಾನೆ.
೫. ರಾಮನು ಬಾಣದಿಂದ ರಾವಣನನ್ನು ಕೊಂದನು.

ಈ ಉದಾಹರಣೆಗಳಲ್ಲಿ ಸೂಜಿ, ಚಾಕು –ಮೊದಲಾದವು ಕರಣಗಳಾದ್ದರಿಂದ ತೃತೀಯಾವಿಭಕ್ತಿ ಬಂದಿದೆ. ಕರಣವನ್ನು ಸಾಧನ, ಉಪಕರಣ ಎಂದೂ ಹೇಳಬಹುದು. ಪ್ರಕರ್ಷವನ್ನು –ಅತಿಶಯವನ್ನು ತೋರಿಸುವುದಕ್ಕಾಗಿ. ಸಾಧಕತಮಂ ಎಂಬಲ್ಲಿ ತಮಪ್ ಪ್ರತ್ಯಯವನ್ನು ಬಳಸಲಾಗಿದೆ. ಅತಿಶಯವಾಗಿ ಉಪಕರಿಸುವುದೆಂದರೆ ತನ್ನ ವ್ಯಾಪಾರವು ಮುಗಿದೊಡನೆ ಕ್ರಿಯೆಯು ನೆರವೇರುವುದು ಎಂದರ್ಥ. ಗೊತ್ತಾದ ಆಕೃತಿಯಲ್ಲಿ ಚಲಿಸುವುದು ಲೇಖನಿಯ ವ್ಯಾಪಾರ. ಅದು ಆಗುತ್ತಿದ್ದಂತೆ ಬರೆಯುವ

ಕೆಲಸವೂ ಮುಗಿಯುತ್ತ ಹೋಗುತ್ತದೆ. ದಾರವನ್ನು ಬಟ್ಟೆಯ ಸಂದಿನಲ್ಲಿ ತೂರಿಸುವುದು ಸೂಜಿಯ ವ್ಯಾಪಾರ. ಹಣ್ಣನ್ನು ಕತ್ತರಿಸುವಾಗ ಅದರ ಒಂದೊಂದು ಅಂಶವನ್ನು ತುಂಡರಿಸುತ್ತಾ ಹೋಗುವುದು ಚಾಕುವಿನ ವ್ಯಾಪಾರ. ಹೀಗೆ ಇತರ ಕರಣಗಳಲ್ಲಿಯೂ ಅವುಗಳ ವ್ಯಾಪಾರಗಳನ್ನು ಗುರುತಿಸಿಕೊಳ್ಳಬಹುದು. ಅವು ನಡೆದೊಡನೆ ಕ್ರಿಯಾಫಲವು ಸಿದ್ಧಿಸುತ್ತದೆ.

ಅಥವಾ ಅಧಿಕವಾಗಿ ಉಪಕರಿಸುವ ಕಾರಕವು ಸಾಧಕತಮವೆನಿಸಿ ಕರಣಸಂಜ್ಞೆಯನ್ನು ಪಡೆಯುತ್ತದೆಯೆನ್ನಬಹುದು. ಕರಣವು ಕರ್ತೃವಿಗೆ ಅಧೀನವಾಗಿ ಕೆಲಸ ಮಾಡುತ್ತದೆ. ಅದು ಸ್ವತಂತ್ರವಲ್ಲ. ಅದರ ವ್ಯಾಪಾರವು ಕರ್ತೃವಿನ ವ್ಯಾಪಾರದಂತೆ ತೋರಿದರೂ ಆ ಎರಡು ವ್ಯಾಪಾರಗಳು ಭಿನ್ನವಾದವು. 'ಸೌದೆಯಿಂದ ಅಡುಗೆ ಮಾಡುತ್ತಾನೆ' ಎಂಬಲ್ಲಿ ಸೌದೆಯು ಅಡುಗೆ ಮಾಡಲು ಕರಣ. ಬೆಂಕಿಗೆ ಆಧಾರವಾಗಿ ಜ್ವಲಿಸುವುದೇ ಸೌದೆಯ ವ್ಯಾಪಾರ. ಸೌದೆಯು ಉರಿದಮಾತ್ರದಿಂದ ಅಡುಗೆಯಾಗಿಬಿಡುವುದಿಲ್ಲ. ಕರ್ತೃವಿನ ವ್ಯಾಪಾರವಾದ ಅಡುಗೆಯು ಇನ್ನು ಹಲವು ವ್ಯಾಪಾರಗಳನ್ನು ಒಳಗೊಂಡಿರುತ್ತದೆ. ಹೀಗೆಯೇ ಲೇಖನಿ, ಸೂಜಿ ಮೊದಲಾದ ವುಗಳ ಕರಣವ್ಯಾಪಾರಕ್ಕಿಂತ ಕರ್ತೃವ್ಯಾಪಾರವು ಭಿನ್ನವಾಗಿರುತ್ತದೆ. ಕರ್ಮವು ಕ್ರಿಯಾಸಿದ್ಧಿಗೆ ಅಧಿಕವಾಗಿ ಉಪಕರಿಸಿದರೂ ಫಲಾಶ್ರಯವಾದ್ದರಿಂದ ಕರಣಸಂಜ್ಞೆಯನ್ನು ಬಾಧಿಸಿ ಕರ್ಮಸಂಜ್ಞೆಯನ್ನೇ ಪಡೆಯುತ್ತದೆ.

ಇನ್ನು ಸಂಪ್ರದಾನವು ಅನುಮತಿಯನ್ನೀಯುತ್ತದೆ. ಕ್ರಿಯಾಸಿದ್ಧಿಗೆ ಬೇಕಾದ ವ್ಯಾಪಾರವೇನನ್ನೂ ಅದು ಮಾಡಬೇಕಾಗಿಲ್ಲ. ಉದಾ: 'ಹಸುವನ್ನು ಬ್ರಾಹ್ಮಣನಿಗೆ ಕೊಡುತ್ತಾನೆ'. ಇಲ್ಲಿ ಬ್ರಾಹ್ಮಣನು ಮಾಡಬೇಕಾದ ಕಾರ್ಯವಿಶೇಷವೇನೂ ಇಲ್ಲ. ಅಪಾದಾನವು ಅವಧಿಭಾವದಿಂದ ಇರುತ್ತದೆಯೇ ಹೊರತು ಯಾವ ವ್ಯಾಪಾರವನ್ನೂ ಮಾಡುವುದಿಲ್ಲ. ಉದಾ: 'ಮರದಿಂದ ಎಲೆ ಬೀಳುತ್ತದೆ'. ಅಧಿಕರಣವು ಸಾಕ್ಷಾತ್ ಕ್ರಿಯೆಯಲ್ಲಿ ಅನ್ವಯಿಸುವುದೇ ಇಲ್ಲ. ಕರ್ತೃದ್ವಾರವಾಗಿಯೋ ಕರ್ಮದ್ವಾರವಾಗಿಯೋ ಅನ್ವಯಿಸುತ್ತದೆ. ಉದಾ: 'ಅವನು ಪೀಠದಲ್ಲಿ ಕುಳಿತುಕೊಳ್ಳುತ್ತಾನೆ'. ಪೀಠವು ಕರ್ತೃವಿಗೆ ಅಧಿಕರಣವಾಗಿದೆ. ಕರ್ತೃವಿನ ಮೂಲಕ ಕ್ರಿಯೆಯಲ್ಲಿ ಅನ್ವಿತವಾಗಿದೆ. 'ಪಾತ್ರೆಯಲ್ಲಿ ತರಕಾರಿಯನ್ನು ಬೇಯಿಸುತ್ತಾನೆ'. ಪಾತ್ರೆಯು ಕರ್ಮವಾದ ತರಕಾರಿಗೆ ಅಧಿಕರಣವಾಗಿ, ಅನಂತರ ಕ್ರಿಯೆಯಲ್ಲಿ ಅನ್ವಯಿಸುತ್ತದೆ. ಆದ್ದರಿಂದ ಕ್ರಿಯಾಸಿದ್ಧಿಗೆ ಅತಿಶಯವಾಗಿ ಉಪಕರಿಸುವುದು ಕರಣವೇ ಎಂದು ಸಿದ್ಧವಾಗುತ್ತದೆ. ಕರ್ತೃಕರ್ಮಗಳು ಅತಿಶಯವಾಗಿ ಉಪಕರಿಸಿದರೂ ಕರಣಸಂಜ್ಞೆ ಬರುವುದಕ್ಕೆ ಅವಕಾಶವಿಲ್ಲ ಎಂಬುದನ್ನು ಹೇಳಿದ್ದಾಗಿದೆ.

ಕರಣವು ಹೇತುವಲ್ಲ

ಕರಣವು ಕೆಲವುವೇಳೆ ಹೇತು(ಕಾರಣ)ವಿನಂತೆ ತೋರುತ್ತದೆ. ಆದರೆ ಹೇತುವಲ್ಲ. ಅವೆರಡರ ಲಕ್ಷಣಗಳೇ ಬೇರೆ.

೧. ದ್ರವ್ಯಾದಿ ಸಾಧಾರಣಂ ನಿರ್ವ್ಯಾಪಾರಸಾಧಾರಣಂ ಚ ಹೇತುತ್ವಮ್.

೨. ಕ್ರಿಯಾಮಾತ್ರವಿಷಯಂ ವ್ಯಾಪಾರನಿಯತಂ ಚ ಕರಣತ್ವಮ್.

೧. ಹೇತುವು ದ್ರವ್ಯ, ಗುಣ, ಕ್ರಿಯೆ –ಈ ಮೂರಕ್ಕೂ ಕಾರಣವಾಗಬಲ್ಲುದು. ಹೇತುವಿನಲ್ಲಿ ವ್ಯಾಪಾರವಿರಬಹುದು ಅಥವಾ ಇಲ್ಲದೆ ಇರಬಹುದು.

೨. ಕರಣವಾದರೋ ಕ್ರಿಯೆಯಲ್ಲಿ ಮಾತ್ರ ಅನ್ವಿತವಾದ ಕಾರಕವಾಗಿರುತ್ತದೆ ಮತ್ತು ಕರಣದಲ್ಲಿ ವ್ಯಾಪಾರವು ಇದ್ದೇ ತೀರಬೇಕು.

ಉದಾ: ಹೇತುವಿಗೆ–

೧. 'ಮಣ್ಣಿನಿಂದ ಗಡಿಗೆಯಾಗುತ್ತದೆ'. ಗಡಿಗೆಯೆಂಬ ದ್ರವ್ಯಕ್ಕೆ ಮಣ್ಣು ಹೇತು.

೨. 'ಸುಣ್ಣದಿಂದ ಅರಿಸಿಣವು ಕೆಂಪಾಗುತ್ತದೆ'. ಕೆಂಪು ಎಂಬ ಗುಣಕ್ಕೆ ಸುಣ್ಣವು ಹೇತು.

೩. 'ಹಣದಿಂದ ಗರ್ವಿಸುತ್ತಾನೆ'. ಗವಿಸುವ ಕ್ರಿಯೆಗೆ ಹಣವು ಹೇತು.

ಕರಣಕ್ಕೆ–

'ಸೌಟಿನಿಂದ ರವೆಯನ್ನು ಹುರಿಯುತ್ತಾಳೆ'. ಸೌಟು ಹುರಿಯುವ ಕ್ರಿಯೆಗೆ ಕರಣ. ಸೌಟಿನಲ್ಲಿ ಅತ್ತಿತ್ತ ಚಲಿಸುವ ವ್ಯಾಪಾರವಿದೆ. ಈ ವ್ಯಾಪಾರದಿಂದ ಹುರಿಯುವ ಕ್ರಿಯೆ ನಡೆಯುತ್ತದೆ.

'ವಿಭಕ್ತಿಪಲ್ಲಟ' ಎಂಬ ಪ್ರಕರಣದಲ್ಲಿ ಈ ವಿಷಯವನ್ನು ವಿವರವಾಗಿ ಚರ್ಚಿಸಲಾಗುವುದು.

೪. ಸಂಪ್ರದಾನ

ಕರ್ಮಣಾ ಯಮಭಿಪ್ರೈತಿ ಸ ಸಂಪ್ರದಾನಮ್ (೧–೪–೩೨)

ದಾನಸ್ಯ ಕರ್ಮಣಾ ಯಮಭಿಪ್ರೈತಿ ಸ ಸಂಪ್ರದಾನಸಂಜ್ಞಃ ಸ್ಯಾತ್.

ದಾನವೆಂದರೆ ಕೊಡುವುದು, ಸಲ್ಲಿಸುವುದು –ಎಂದಿಷ್ಟೇ ಅರ್ಥ. ಗೋದಾನ ಭೂದಾನಗಳೇ ಆಗಬೇಕಾಗಿಲ್ಲ. ಕೊಡುವ ಕ್ರಿಯಗೆ ಯಾವುದು ಕರ್ಮವೋ ಅದನ್ನು ಕರ್ತನು ಯಾರಿಗೆ ಕೊಡಬೇಕಂದು ಉದ್ದೇಶಿಸಿರುತ್ತಾನೋ ಆತನಿಗೆ ಸಂಪ್ರದಾನವೆಂಬ ಸಂಜ್ಞೆ ಬರುತ್ತದೆ. ಸಂಪ್ರದಾನಕ್ಕೆ ಚತುರ್ಥೀವಿಭಕ್ತಿ ಬರುತ್ತದೆ. ಉದಾ:

'ಕಮಲೆಯು ತಾಯಿಗೆ ಸೀರೆಯನ್ನು ಕೊಡುತ್ತಾಳೆ'.

ತಾಯಿಗೆ ಸೀರೆಯನ್ನು ಕೊಡಬೇಕೆಂದು ಕರ್ತೃವಾದ ಕಮಲೆಯು ಉದ್ದೇಶಿಸಿ ಕೊಡುತ್ತಾಳೆ. ಆದ್ದರಿಂದ ತಾಯಿಗೆ ಸಂಪ್ರದಾನಸಂಜ್ಞೆಯಾಗಿ ಚತುರ್ಥೀವಿಭಕ್ತಿ ಬಂದಿದೆ. ಇನ್ನೂ ಕೆಲವು ಉದಾಹರಣೆಗಳು.

೧. ಶಿಷ್ಯನು ಗುರುವಿಗೆ ಫಲವನ್ನು ಕೊಟ್ಟನು.

೨. ಅವನು ಸಾಲವನ್ನು ಸಾಹುಕಾರನಿಗೆ ಸಲ್ಲಿಸಿದನು.

೩. ವೈದ್ಯನು ರೋಗಿಗೆ ಔಷಧವನ್ನಿತ್ತನು.

೪. ದೇವರಿಗೆ ಕಾಣಿಕೆಯನ್ನು ಅರ್ಪಿಸುತ್ತಾನೆ.

೫. ಸೇವಕನು ಚೀಲವನ್ನು ಮಾಲಿಕನಿಗೆ ಒಪ್ಪಿಸಿದನು.

ಇಲ್ಲಿ ಗಮನಿಸಬೇಕಾದದ್ದು

ಈ ಸೂತ್ರದಲ್ಲಿ ಕೊಡುವುದು ಎಂದರೆ ಚೀಲವನ್ನು ಮಾಲಿಕನಿಗೆ ಕೊಟ್ಟಂತೆ ಕೈಯೆತ್ತಿ ಅರ್ಪಿಸುವುದು ಎಂದರ್ಥವಲ್ಲ. ಇನ್ನೊಬ್ಬನಿಗೆ ಸಂಬಂಧಿಸಲೆಂದು ಮಾಡುವ ಎಲ್ಲ ಬಗೆಯ ಕ್ರಿಯೆಯೂ 'ಕೊಡುವುದು' ಎಂಬುದರಲ್ಲಿ ಸೇರುತ್ತದೆ. ಮತ್ತು ಈ ಕ್ರಿಯೆಯ ಕರ್ಮವು ಚೀಲವೋ ಪುಸ್ತಕವೋ ಇದ್ದಂತೆ ಮೂರ್ತದ್ರವ್ಯವೇ ಆಗಬೇಕಾಗಿಲ್ಲ. ಅದು ಕರ್ತನನ್ನು ತ್ಯಜಿಸಿ ಹೋಗಬೇಕಾಗಿಲ್ಲ. ಆ ಕರ್ಮವು ಗುಣಕ್ರಿಯಾರೂಪವೂ ಆಗಿರಬಹುದು. ಒಟ್ಟಿನಲ್ಲಿ ಇನ್ನೊಬ್ಬರಿಗೆ ಸಂಬಂಧಿಸಲೆಂದು ನಡೆಸುವ ಎಲ್ಲ ಕ್ರಿಯೆಗೂ ಕರ್ಮವಾದ ಸಕಲವಸ್ತುವೂ ತದರ್ಥವಾಗಿದ್ದರೆ ಆ ಪದಾರ್ಥವು ಸಂಪ್ರದಾನಸಂಜ್ಞೆಯನ್ನು ಪಡೆಯತ್ತದೆ. ಈ ಉದಾಹರಣೆಗಳನ್ನು ಪರಿಶೀಲಿಸಬೇಕು–

೧. ಗುರು ಶಿಷ್ಯನಿಗೆ ವಿದ್ಯೆಯನ್ನು ಕೊಡುತ್ತಾನೆ.

೨. ಶ್ರೀರಾಮನಿಗೆ ಈ ಮಾತನ್ನು ಹೇಳು.

೩. ಕೆನ್ನೆಗೆ ಹೊಡೆತವನ್ನಿತ್ತನು.

೪. ಭಕ್ತನಿಗೆ ಸದ್ಬುದ್ಧಿಯನ್ನು ಅನುಗ್ರಹಿಸುತ್ತಾನೆ.

೫. ಗೋಡೆಗೆ ಬಣ್ಣವನ್ನು ಹಚ್ಚುತ್ತಾನೆ.

ಕನ್ನಡದಲ್ಲಿ ಈ ಬಗೆಯ ಪ್ರಯೋಗಗಳು ವಿಪುಲವಾಗಿವೆ. ಇಲ್ಲಿ ಸಂಪ್ರದಾನಕ್ಕೆ ಚತುರ್ಥೀವಿಭಕ್ತಿ ಬರುತ್ತದೆ. ಇಲ್ಲಿ ವಿದ್ಯೆ, ಮಾತು, ಹೊಡೆತ, ಸದ್ಬುದ್ಧಿ, ಬಣ್ಣ –ಇವೇ ಕರ್ಮಗಳು. ಈ ಕರ್ಮಗಳನ್ನು ಶಿಷ್ಯ, ಶ್ರೀರಾಮ, ಕೆನ್ನೆ –ಮುಂತಾದವುಗಳಿಗೆ ಮುಟ್ಟಿಸುವುದು ಕರ್ತೃವಿನ ಉದ್ದೇಶವಾಗಿದೆಯಾದ್ದರಿಂದ ಸಂಪ್ರದಾನಸಂಜ್ಞೆ ಬಂದು ಚತುರ್ಥೀವಿಭಕ್ತಿಯು ಆ ಶಬ್ದಗಳ ಮೇಲೆ ಬರುತ್ತದೆ ಎಂದು ತಿಳಿಯಬೇಕು.

ಒಟ್ಟಿನಲ್ಲಿ ಉದ್ದೇಶರೂಪವಾದ ತಾದರ್ಥ್ಯ, ಇಷ್ಟಾವಿಷಯ, ಸಂಬಂಧವಿಶೇಷ –ಇವು ತೋರುವಾಗ ಚತುರ್ಥೀವಿಭಕ್ತಿಯು ಕನ್ನಡದಲ್ಲಿ ಬರುತ್ತದೆ. ಉಪಪದ ವಿಭಕ್ತಿಪ್ರಕರಣದಲ್ಲಿ ಈ ವಿಷಯವನ್ನು ಚರ್ಚಿಸಲಾಗಿದೆ.

೫. ಅಪಾದಾನ

ಧ್ರುವಮಪಾಯೇಽಪಾದನಮ್ (೧–೪–೨೪)

ಅಪಾಯವೆಂದರೆ ವಿಶ್ಲೇಷ, ವಿಯೋಗ. ಒಂದು ವಸ್ತುವಿನಿಂದ ವಿಯೋಗವಾಗುವಾಗ ಅವಧಿಭೂತವಾದ ಕಾರಕಕ್ಕೆ ಅಪಾದಾನವೆಂದು ಹೆಸರು. ಈ ಅಪಾದಾನ ವಾಚಕದ ಮೇಲೆ ಪಂಚಮೀವಿಭಕ್ತಿ ಬರುತ್ತದೆ. ಉದಾ:

೧. ಮರದಿಂದ ಎಲೆ ಉದುರಿತು.
೨. ಕುದುರೆಯಿಂದ ಸವಾರನು ಬೀಳುತ್ತಾನೆ.
೩. ಗೂಡಿನಿಂದ ಹಕ್ಕಿ ಹಾರಿತು.
೪. ದೇಹದಿಂದ ರಕ್ತವು ಚಿಮ್ಮಿತು.
೫. ಬಿಲ್ಲಿನಿಂದ ಬಾಣವು ಸಿಡಿಯಿತು.
೬. ತಂಬಿಗೆಯಿಂದ ನೀರು ಸುರಿಯುತ್ತದೆ.

ಈ ಉದಾಹರಣೆಗಳಲ್ಲಿ ಮರ, ಕುದುರೆ, ಗೂಡು ಮೊದಲಾದವು ಅಪಾದಾನಗಳು. ಎಲೆ, ಸವಾರ ಮುಂತಾದವುಗಳಿಗೆ ಈ ಅಪಾದಾನಗಳಿಂದ ವಿಶ್ಲೇಷವಾಗುತ್ತದೆ. ಹಾರಿತು, ಸಿಡಿಯಿತು –ಮುಂತಾದ ಕ್ರಿಯಾಪದಗಳನ್ನು ಹೇಳಿದಾಗ ಎಲ್ಲಿಂದ? –ಎಂಬ ಆಕಾಂಕ್ಷೆ ಅವಶ್ಯವಾಗಿ ಹುಟ್ಟುತ್ತದೆ. ಆಗ ಉತ್ತರವಾಗಿ ದೊರಕುವ ಈ ಅವಧಿವಾಚಕಗಳಿಗೆ ಕ್ರಿಯಾನ್ವಯವಿರುವುದು ಸ್ಪಷ್ಟವಾಗುವುದು. ಆದ್ದರಿಂದ ಇವು ಕಾರಕಗಳು. ಅವಧಿಭಾವವನ್ನು ಪಡೆಯುವುದೇ ಈ ಕಾರಕಗಳಲ್ಲಿರುವ ಕ್ರಿಯೆ.

ಇಲ್ಲಿ ಬಂದಿರುವ ಪ್ರತ್ಯಯ 'ಇಂದ'. ಇದು ಪಂಚಮೀವಿಭಕ್ತಿ ಎನಿಸಿದೆ. ತೃತೀಯಾವಿಭಕ್ತಿಯೂ 'ಇಂದ'. ಆಕೃತಿ ಒಂದೇ ಆದರೂ ಅರ್ಥವು ಸಂಪೂರ್ಣವಾಗಿ ಭಿನ್ನವಾದ್ದರಿಂದ ಹೆಸರು ಬೇರೆಯಾಗಿದೆ. ಬೆಣ್ಣೆ, ಸುಣ್ಣ ಒಂದೇ ಆಕೃತಿಯಲ್ಲಿದ್ದರೂ ಹೆಸರುಗಳು ಬೇರೆಯೆಂಬುದನ್ನಿಲ್ಲಿ ಸ್ಮರಿಸಿಕೊಳ್ಳಬೇಕು.

ನಾಗವರ್ಮನು ಕಾವ್ಯಾವಲೋಕನದಲ್ಲಿ 'ಅತ್ತಣಿಂ' ಎಂಬುದು ಪಂಚಮೀ ವಿಭಕ್ತಿಯ ಪ್ರತ್ಯಯವೆಂದೂ ಪಂಚಮ್ಯರ್ಥದಲ್ಲಿ ತೃತೀಯಾವಿಭಕ್ತಿಯೂ ವಿಕಲ್ಪದಿಂದ ಬರುತ್ತದೆಯೆಂದೂ ಹೇಳಿದ್ದಾನೆ–

ಅತ್ತಣಿವೆಂದನುಸಂಧಿಸಿ
ಯೊತ್ತಂಬರದಿಂ ತಗುಳ್ಚುವರ್ ಪಂಚಮಿಯೊಳ್ ।
ಬಿತ್ತರಿಸುವರ್ ತೃತೀಯಾ
ವೃತ್ತಿಯುಮಂ ಪಂಚಮೀಪ್ರಯೋಗದೊಳರೆಬರ್ ॥ — ಸೂತ್ರ ೧೧೭.

'ಅತ್ತಣಿಂ' ಪ್ರಯೋಗಕ್ಕೆ–

ಕವಡಿಕೆ ಬಂದುದೋಪಳುಟಿದಟ್ಟಿದಳಾಳ್ದನ ನಂಟರತ್ತಣಿಂ
ದವದಳವಾಯ್ತು ಪೋಯ್ತು.....

–ಎಂಬ ಒಂದು ಪದ್ಯವನ್ನು ಪೂರ್ತಿಯಾಗಿ ಉದಾಹರಿಸಿದ್ದಾನೆ. ಬಹುಶಃ ಇದು ಯಾವುದೋ ಕಾವ್ಯದಿಂದ ಉದ್ಧೃತವಾಗಿರಬೇಕು. ಪಂಚಮ್ಯರ್ಥ ತೃತೀಯೆಗೆ–

ಮತ್ತಹಸ್ತಿಗಳ ಮಸ್ತಕದಿಂ ಬಿದಿರಿಂ ಫಣೀಂ
ದ್ರೋತ್ತಮಾಂಗದಿನಗುರ್ವಿಪ ಪಂದಿಯ ಕೋಟ್ಕಳಿಂ ।

ಎಂಬ ಪದ್ಯವನ್ನು ಉದಾಹರಿಸಿದ್ದಾನೆ. ಇದೂ ಪ್ರಾಚೀನಪದ್ಯವೇ ಆಗಿರಬಹುದು.

ಆತನೇ ತನ್ನ ಭಾಷಾಭೂಷಣದಲ್ಲಿ–

ಅತ್ತಣಿಂ ತ್ವನುಸಂಧೇಯಃ ಪಂಚಮ್ಯಾಃ ॥ — ಸೂತ್ರ ೬೭.

ಎಂದು ಸೂತ್ರಿಸಿ, ಅಪಾದಾನೇ ಪಂಚಮೀ (ಸೂತ್ರ ೮೬) ಎಂದು ಹೇಳಿದ್ದಾನೆ.

ಆತನು ಕೊಟ್ಟಿರುವ ಉದಾಹರಣೆಗಳಿವು–

ಊರತ್ತಣಿಂ ಬಂದಂ, ಅವನತ್ತಣಿಂ ಭಯಂ, ಕೆರೆಯತ್ತಣಿಂ ತಂದಂ, ಬೆಟ್ಟದತ್ತಣಿಂದಿಳಿದಂ –ಇತ್ಯಾದಿ.

ಅನಂತರ ಪಂಚಮ್ಯರ್ಥೇ ತೃತೀಯಾ (ಸೂತ್ರ ೯೦) ಎಂದೂ ವಿಭಕ್ತಿವ್ಯತ್ಯಯವನ್ನು ತಿಳಿಸಿದ್ದಾನೆ. ತೃತೀಯೆಗೆ ಅವನಿತ್ತ ಉದಾಹರಣೆ– 'ಮನೆಯಿಂದ ಪೊರಮಟ್ಟಂ'.

ಕೇಶಿರಾಜನು ಶಬ್ದಮಣಿದರ್ಪಣದಲ್ಲಿ 'ಅತ್ತಣಿಂ' ಎಂಬುದು ಪಂಚಮೀ ಪ್ರತ್ಯಯವೆಂದೂ ವಿಭಕ್ತಿಪಲ್ಲಟದಿಂದ ಅದರ ಸ್ಥಾನದಲ್ಲಿ ತೃತೀಯೆಯೂ ಬರುತ್ತದೆಯೆಂದೂ ಹೇಳಿದ್ದಾನೆ.

ಭಟ್ಟಾಕಳಂಕನೂ 'ಅತ್ತಣಿಂ' ಎಂಬುದು ಪಂಚಮೀಪ್ರತ್ಯಯವೆಂದು ಅಂಗೀಕರಿಸಿ, ಅಪಾದಾನಾರ್ಥದಲ್ಲಿ ತೃತೀಯಾವಿಭಕ್ತಿಯೂ ಬರುತ್ತದೆ ಎಂದಿದ್ದಾನೆ.

ಪ್ರಾಚೀನ ವೈಯಾಕರಣರು 'ಅತ್ತಣಿಂ' ಎಂಬುದು ಪಂಚಮೀಪ್ರತ್ಯಯವೆಂದು ಏಕಕಂಠದಿಂದ ಒಪ್ಪಿದ್ದಾರೆಂಬುದಿಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯ. ಇದರ ಪ್ರಯೋಗವು ವಿರಳವಾಗಿದ್ದರೂ ಕವಿಗಳು ಇದನ್ನು ಒಪ್ಪಿದ್ದರು –ಎನ್ನುವುದರಲ್ಲಿ ಸಂದೇಹವಿಲ್ಲ. ಎಲ್ಲಿಯೂ ಇದರ ಪ್ರಯೋಗವೇ ಇಲ್ಲದೆ ಹೋಗಿದ್ದರೆ, ಈ ವೈಯಾಕರಣರು ಅದನ್ನು ಅಂಗೀಕರಸುತ್ತಿರಲಿಲ್ಲ. ಇವರು ಅದನ್ನು ಹೊಸದಾಗಿ ಕಲ್ಪಿಸಿಕೊಂಡಿದ್ದಾರೆ ಎನ್ನುವುದು ನಿರಾಧಾರವಾದ ಆಪಾದನೆ. ವಿಶಾಲವಾದ ಸಾಹಿತ್ಯಪ್ರಪಂಚವನ್ನು, ಭಾಷಾಸ್ವರೂಪವನ್ನು ಅಳೆಯುವ ದೃಷ್ಟಿಯಿಂದ ಕೂಲಂಕಷವಾಗಿ ಅಧ್ಯಯನ ಮಾಡದವನು ವ್ಯಾಕರಣಶಾಸ್ತ್ರವನ್ನು ರಚಿಸಲು ಎಂದಿಗೂ ಕೈಹಾಕಲಾರ. ಅಂತಹವನು ಕೈಹಾಕಿದರೆ, ಈಜುಬಾರದವನು ಸಮುದ್ರಕ್ಕೆ ಧುಮುಕಿದಂತಾದೀತು.

ವಿಭಾಗವು ಯಾವಾಗಲೂ ಸಂಯೋಗಪೂರ್ವಕವಾಗಿರುತ್ತದೆ. ಮೊದಲು ಸಂಯೋಗವಿಲ್ಲದೆ ವಿಭಾಗವಾಯಿತು. ವಿಭಕ್ತವಾಯಿತು –ಎಂದು ಹೇಳಲಾಗುವುದಿಲ್ಲ. 'ಮರದಿಂದ ಎಲೆ ಉದುರಿತು' –ಎಂದಾಗ ಮೊದಲು ಎಲೆಗೂ ಮರಕ್ಕೂ ಸಂಯೋಗವಿತ್ತು. ಅದು ನಾಶವಾಗಿ ವಿಭಾಗ ಹುಟ್ಟಿದೆ. 'ಕುದುರೆಯಿಂದ ಸವಾರನು ಬಿದ್ದನು.' ಇಲ್ಲಿ ಕುದುರೆಗೂ ಸವಾರನಿಗೂ ಇದ್ದ ಸಂಯೋಗವು ನಾಶವಾದ್ದರಿಂದ ಬಿದ್ದನು ಎಂಬ ಪ್ರಯೋಗ ಬಂದಿದೆ.

'ಲೇಖನಿಯಿಂದ ಬರೆಯುತ್ತಾನೆ, ಚಾಕುವಿನಿಂದ ಹಣ್ಣನ್ನು ಕತ್ತರಿಸುತ್ತಾನೆ, ಸೌಟಿನಿಂದ ಕಡಲೆಯನ್ನು ಹುರಿಯುತ್ತಾಳೆ, ಕಾಲಿನಿಂದ ನಡೆಯುತ್ತಾನೆ' –ಇತ್ಯಾದಿ ಸ್ಥಳಗಳಲ್ಲಿ 'ಕರಣೇ ತೃತೀಯಾ' ಎಂಬುದು ಸ್ಪಷ್ಟವಾಗಿದೆ. 'ಪಂಪನಿಂದ ಭಾರತವು ರಚಿತವಾಯಿತು. ನೇಯ್ಗೆಯವನಿಂದ ಸೀರೆಯು ನೆಯ್ಯಲ್ಪಟ್ಟಿತು' –ಎಂಬಲ್ಲಿ 'ಕರ್ತರಿ

ತೃತೀಯಾ' ಎನ್ನುವುದೂ ಸ್ಫುಟವಾಗಿ ತಿಳಿಯುತ್ತದೆ. ಕನ್ನಡಕ್ಕೆ ಕರ್ಮಣಿಪ್ರಯೋಗವು ಸಹಜವೋ ಅಸಹಜವೋ ಎಂಬುದು ಬೇರೆ ವಿಚಾರ. ಪ್ರಯೋಗಗಳಿವೆಯೆಂಬುದು ನಿಶ್ಚಿತ. ಪ್ರಕೃತ ಹೇಳಬೇಕಾದ್ದೇನೆಂದರೆ, 'ಇಂದ' ಎಂಬ ತೃತೀಯಾವಿಭಕ್ತಿಗೆ ವಿಶ್ಲೇಷ (ವಿಭಾಗ) ಎಂಬ ಅರ್ಥವು ಸರ್ವಥಾ ಇಲ್ಲ. ಹೀಗಿರುವಾಗ ಪಂಚಮ್ಯರ್ಥದಲ್ಲಿ ತೃತೀಯೆ ಬರುವುದಾದರೂ ಹೇಗೆ? ಈ ವೈಯಾಕರಣರು ಪಂಚಮ್ಯರ್ಥದಲ್ಲಿ ತೃತೀಯೆ ಎಂದು ಹೇಳಿರುವುದು ಪ್ರತ್ಯಯಸಾದೃಶ್ಯದಿಂದಲೇ ಹೊರತು ಬೇರೆಯಲ್ಲ. 'ಮರದಿಂದ ಎಲೆ ಬಿದ್ದಿತು' ಎಂಬಲ್ಲಿರುವ 'ಇಂದ' ಪ್ರತ್ಯಯವು ಪಂಚಮಿಯೇ ಹೊರತು ತೃತೀಯೆ ಅಲ್ಲ. ತೃತೀಯಾವಿಭಕ್ತಿಯು ಪಂಚಮ್ಯರ್ಥವಾದ ವಿಭಾಗ ವನ್ನೆಂದಿಗೂ ಸೂಚಿಸಲಾರದು. ಆದ್ದರಿಂದ ಇಂ, ಇಂದಂ, ಇಂದ –ಎಂಬ ಪಂಚಮೀವಿಭಕ್ತಿಯೂ ಇದೆಯೆಂದು ತಿಳಿಯಬೇಕು. ಒಂದೇ ಆಕಾರದ ಬೇರೆಬೇರೆ ವಿಭಕ್ತಿಗಳು ಸಂಸ್ಕೃತದಲ್ಲಿವೆ. ಕರ್ಕಶವಾದ ತರ್ಕವನ್ನು ಸರ್ವತ್ರ ಬಳಸುವ ಸಂಸ್ಕೃತ ವೈಯಾಕರಣರು ಏಕಾಕಾರದ ಬೇರೆ ವಿಭಕ್ತಿಗಳಿವೆಯೆಂದು ಒಪ್ಪಿದ್ದಾರೆ. ಉದಾ ಹರಣೆಗೆ, ಓಸ್ ಎನ್ನುವುದು ಷಷ್ಠೀದ್ವಿವಚನವೂ ಹೌದು, ಸಪ್ತಮೀದ್ವಿವಚನವೂ ಹೌದು. 'ರಾಮಯೋಃ' ಎಂಬ ಒಂದೇ ರೂಪವು ಈ ಎರಡು ವಿಭಕ್ತಿಗಳಲ್ಲಿಯೂ ಇದೆ. 'ಅಸ್' ಎಂಬುದು ಪ್ರಥಮಾ ಬಹುವಚನ, ದ್ವಿತೀಯಾ ಬಹುವಚನ, ಪಂಚಮ್ಯೇಕವಚನ, ಷಷ್ಠ್ಯೇಕವಚನಗಳಲ್ಲಿದೆ. 'ಮರುತಃ' ಎಂದು ಈ ಎಲ್ಲ ವಿಭಕ್ತಿ ಗಳಲ್ಲಿಯೂ ರೂಪವಿದೆ. 'ಭ್ಯಾಂ' ಎಂಬುದು ತೃತೀಯಾ, ಚತುರ್ಥೀ, ಪಂಚಮೀ ವಿಭಕ್ತಿಗಳಲ್ಲಿ ಏಕರೂಪವಾಗಿದೆ. ಇವೆಲ್ಲವೂ ಒಂದೇ ಪ್ರತ್ಯಯವೆಂದು ಯಾವ ವೈಯಾಕರಣನೂ ಹೇಳಿಲ್ಲ. ಒಂದೇ ವಿಭಕ್ತಿಯಾಗಲಿ ಎಂದು ಶಂಕೆಯನ್ನು ಸಹ ಎತ್ತಿಲ್ಲ. ಅತ್ತಣಿಂ, ಇಂ, ಇಂದಂ, ಇಂದ –ಎಂಬಿವು ಮೂಲದಲ್ಲಿ ಪಂಚಮೀವಿಭಕ್ತಿ ಗಳಾಗಿರಬೇಕು. ಕಾಲಕ್ರಮದಲ್ಲಿ 'ಅತ್ತಣಿಂ' ಎಂಬುದರ ಪ್ರಯೊಗವು ಲುಪ್ತವಾಯಿತು ಎನ್ನುವುದು ಅವಿರೋಧಿಯಾದ ಮಾರ್ಗ. ಈಗ ಹೊಸಗನ್ನಡದಲ್ಲಿ ಇಂ, ಇಂದಂ ಎಂಬಿವೂ ಸಪ್ತಮಿಯ ಒಳ್, ಅಲ್ ಎಂಬಿವೂ ಲುಪ್ತವಾದಂತೆ. ಭಿನ್ನಾಕೃತಿಯ ಅನೇಕ ಪ್ರತ್ಯಯಗಳು ಒಂದೇ ವಿಭಕ್ತಿಯಾದರೆ ವಿರೋಧವೇನು? ಹಳಗನ್ನಡದಲ್ಲಿಯೇ ಇಂ, ಇಂದಂ –ಎಂದೂ ಒಳ್ ಅಲ್ –ಎಂದೂ ಒಂದೇ ವಿಭಕ್ತಿಯಾಗಿಲ್ಲವೇ?

ಸಂಸ್ಕೃತದಲ್ಲಿ 'ಭೀತ್ರಾರ್ಥಾನಾಂ ಭಯಹೇತುಃ' (೧–೪–೨೫) ಎಂಬ ಇನ್ನೊಂದು ಸೂತ್ರದಿಂದಲೂ ಅಪಾದಾನಸಂಜ್ಞೆಯನ್ನು ಹೇಳಿದ್ದಾರೆ. ಭಯಾರ್ಥಕ ಧಾತುವಿನ ಯೋಗವಿದ್ದಾಗಲೂ ರಕ್ಷಣಾರ್ಥಧಾತುವಿನ ಯೋಗವಿದ್ದಾಗಲೂ ಭೀತಿಗೆ ಹೇತುವಾದುದಕ್ಕೆ ಅಪಾದಾನಸಂಜ್ಞೆ ಬರುತ್ತದೆ. ಉದಾಃ 'ಹುಲಿಯಿಂದ ಹೆದರುತ್ತಾನೆ. ಹುಲಿಯಿಂದ ರಕ್ಷಿಸುತ್ತಾನೆ'.

ಮೊದಲನೆಯ ವಾಕ್ಯದಲ್ಲಿ ಹೆದರಿಕೆಗೆ ಹುಲಿಯು ಕಾರಣ. ಎರಡನೆಯ ವಾಕ್ಯದಲ್ಲಿ ಹುಲಿಯ ಭಯವು ರಕ್ಷಣೆಗೆ ಕಾರಣ. ಇಲ್ಲಿ ಹುಲಿ ಎಂದರೆ ಹುಲಿಯ ಭಯ. ಭಟ್ಟಾಕಳಂಕನು 'ಪುಲಿಯತ್ತಣಿಂ ಭೀತಿ' –ಎಂಬ ಉದಾಹರಣೆಯನ್ನಿತ್ತಿದ್ದಾನೆ.

ಇದು ಪ್ರಾಮಾಣಿಕಪ್ರಯೋಗವಾಗಿದ್ದರೆ, ಪಂಚಮೀವಿಭಕ್ತಿಗಾಗಿ ಅಪಾದಾನಸಂಜ್ಞೆಯನ್ನಿಲ್ಲಿ ಒಪ್ಪಬೇಕಾಗುತ್ತದೆ. 'ಹುಲಿಯಿಂದ ಭೀತಿ; ರೋಗದಿಂದ ಅಂಜಿಕೆ' ಎಂಬಲ್ಲಿ ಹೇತ್ವರ್ಥದಲ್ಲಿ ತೃತೀಯಾವಿಭಕ್ತಿ ಬಂದಿದೆ ಎನ್ನಬಹುದು. ಸೂತ್ರದಲ್ಲಿ 'ಭಯಹೇತುಃ' ಎಂದು ಹೇತುಶಬ್ದವೇ ಇರುವುದನ್ನಿಲ್ಲಿ ಗಮನಿಸಬೇಕು. ಈ ಸೂತ್ರವಿಲ್ಲದಿದ್ದರೆ 'ಶತ್ರುವಿಂದ ರಕ್ಷಿಸುತ್ತಾನೆ; ರೋಗದಿಂದ ಉಳಿಸುತ್ತಾನೆ' –ಎಂಬ ಪ್ರಯೋಗಗಳು ಹೇಗೆ ಸಿದ್ಧಿಸುತ್ತವೆ? ಅಪಾದಾನಸಂಜ್ಞೆ ಇನ್ನೊಂದು ರೀತಿಯಲ್ಲಿ ಬರಬಹುದು. ರಕ್ಷಣೆ, ಉಳಿವು –ಇವುಗಳಿಗೆ ವಿಭಾಗಪೂರ್ವಕ ರಕ್ಷಣೆಯೆಂದರ್ಥ. ವಿಭಾಗವು ಮಾನಸಿಕ ಸಂಯೋಗಪೂರ್ವಕವಾದದ್ದು, ವಸ್ತುಕೃತವಲ್ಲ.

೧. ಮಾತಾಡುವಾಗ ಒಂದು ವಿಷಯದಿಂದ ಇನ್ನೊಂದು ವಿಷಯಕ್ಕೆ ಹಾರುತ್ತಾನೆ.

೨. ತನ್ನ ವ್ಯಾಸಂಗವನ್ನು ಸಾಹಿತ್ಯದಿಂದ ವೇದಾಂತಕ್ಕೆ ಬದಲಾಯಿಸಿದನು.

ಈ ವಾಕ್ಯಗಳಲ್ಲಿ 'ಇಂದ' ಎಂಬುದು ಪಂಚಮೀವಿಭಕ್ತಿ. ಸಂಯೋಗವಿಭಾಗಗಳು ಬೌದ್ಧವಾದವು. ಬುದ್ಧಿಪೂರ್ವಕವಾಗಿ 'ವಿಷಯಸಾಹಿತ್ಯ'ಗಳೊಡನೆ ಮೊದಲು ಸಂಯೋಗ. ಅನಂತರ ವಿಯೋಗ(ವಿಶ್ಲೇಷ). ವಿಶ್ಲೇಷಕ್ಕೆ ಅವೆರಡೂ ಅವಧಿಗಳಾದ್ದರಿಂದ ಅಪಾದಾನಸಂಜ್ಞೆ ಬಂದಿದೆ.

ಯತಶ್ಚ ನಿರ್ಧಾರಣಮ್ (೨–೨–೪೧)

ನಿರ್ಧಾರಣವೆಂದರೆ ಪೃಥಕ್ಕರಣ. ಸಮುದಾಯದಲ್ಲಿ ಸೇರಿರುವ ಒಂದು ವಸ್ತುವನ್ನು ಜಾತಿ, ಗುಣ, ಕ್ರಿಯಾ, ಸಂಜ್ಞೆಗಳ ಮೂಲಕ ಪೃಥಕ್ಕರಿಸುವಾಗ, ಯಾವ ಸಮುದಾಯದಿಂದ ಪೃಥಕ್ಕರಣವಾಗುತ್ತದೆಯೋ ಆ ಸಮುದಾಯವಾಚಕಕ್ಕೆ ಷಷ್ಠೀ ಸಪ್ತಮೀಗಳೆರಡೂ ಪರ್ಯಾಯವಾಗಿ ಬರುತ್ತವೆ. ಒಂದು ವೈಶಿಷ್ಟ್ಯವನ್ನು ಸೂಚಿಸುವುದಕ್ಕಾಗಿ ಪೃಥಕ್ಕರಣವಾಗುತ್ತದೆ. ಉದಾಃ

ಜಾತಿಗೆ– ಮೃಗಾಣಾಂ ವ್ಯಾಘ್ರಃ ಕ್ರೂರತಮಃ

ಮೃಗಗಳ ನಡುವೆ ಹುಲಿ ಅತ್ಯಂತ ಕ್ರೂರವಾದದ್ದು.

(ಷಷ್ಠೀ ಬಂದಾಗ ಕನ್ನಡದಲ್ಲಿ 'ನಡುವೆ' ಎಂಬುದನ್ನು ಸೇರಿಸಲೇಬೇಕಾಗುತ್ತದೆ.)

ಪಕ್ಷಿಷು ಮಯೂರಃ ಸುಂದರತಮಃ

ಹಕ್ಕಿಗಳಲ್ಲಿ ನವಿಲು ಬಹಳ ಸುಂದರವಾದದ್ದು.

ವ್ಯಾಘ್ರತ್ವ, ಮಯೂರತ್ವ, ಮೃಗತ್ವ, ಪಕ್ಷಿತ್ವಗಳು ಜಾತಿಗಳು.

ವ್ಯಾಘ್ರತ್ವ, ಮಯೂರತ್ವ –ಎಂಬ ಜಾತಿಗಳ ಮೂಲಕ ಸಮುದಾಯದಿಂದ ಪೃಥಕ್ಕರಣವಾಗಿದೆ.

ಗುಣಕ್ಕೆ–

ನಾನಾ ಬಣ್ಣದ ಬಟ್ಟೆಗಳ ನಡುವೆ ಬಿಳಿಯದು ಶುಭ್ರತೆಯ ಪ್ರತೀಕವಾಗಿರುತ್ತದೆ.

ಬಣ್ಣಗಳಲ್ಲಿ ಹಸಿರು ಕಣ್ಣಿಗೆ ಹಿತಕರವಾದದ್ದು.

ಕ್ರಿಯೆಗೆ–

ವೇಗಶಾಲಿಗಳಲ್ಲಿ ವಿದ್ಯುತ್ತು ಅತಿವೇಗವಾಗಿ ಹೋಗುತ್ತದೆ.

ಹಾರುವವರಲ್ಲಿ ಹದ್ದು ಬಹಳ ಹೊತ್ತು ಹಾರಬಲ್ಲುದು.

ಸಂಜ್ಞೆಗೆ–

ಕವಿಗಳಲ್ಲಿ ಕಾಳಿದಾಸನು ಶ್ರೇಷ್ಠನಾದವನು.

ಇಂಜಿನಿಯರುಗಳಲ್ಲಿ ವಿಶ್ವೇಶ್ವರಯ್ಯನವರು ವಿಖ್ಯಾತರು.

ನಡುವೆ ಅಥವಾ ಮಧ್ಯದಲ್ಲಿ ಎಂಬ ಪದವನ್ನು ಸೇರಿಸಿ ಕವಿಗಳ ನಡುವೆ, ಕವಿಗಳ ಮಧ್ಯದಲ್ಲಿ –ಎಂದು ಷಷ್ಠಿಯನ್ನು ಎಲ್ಲ ಸ್ಥಳದಲ್ಲಿ ಬಳಸಬಹುದು.

ಪಂಚಮೀವಿಭಕ್ತಿ (೨–೩–೪೨)

ನಿರ್ಧಾರ್ಯಮಾಣವಾದ ವಸ್ತು ಸಮುದಾಯಕ್ಕೆ ಸೇರದೆ ಮೊದಲೇ ಪ್ರತ್ಯೇಕವಾಗಿ ಬಿಟ್ಟಿದ್ದರೆ (ವಿಭಕ್ತವಾಗಿದ್ದರೆ) ಆಗ ಅವಧಿಭೂತವಾದ ವಸ್ತುವಿನ ಮೇಲೆ ಪಂಚಮೀ ಬರುತ್ತದೆ. ಷಷ್ಠೀ ಸಪ್ತಮಿಗಳು ಬರುವುದಿಲ್ಲ.

ಉದಾ– ಯತಯಃ ಗೃಹಸ್ಥೇಭ್ಯೋ ವಿರಕ್ತತರಾಃ

ಗೃಹಸ್ಥರಿಗಿಂತ ಯತಿಗಳು ಬೇರೆಯೆಂಬುದು ಮೊದಲೇ ಸಿದ್ಧವಾಗಿದೆ. ವೈರಾಗ್ಯ ಗುಣದಿಂದ ಒಂದು ಅತಿಶಯವನ್ನು ಹೇಳುವುದಕ್ಕಾಗಿ ಇಲ್ಲಿ ಗೃಹಸ್ಥರಿಂದ ಪ್ರತ್ಯೇಕಿಸಲಾಗಿದೆ.

ಲಕ್ಷ್ಮಣಃ ಶ್ರೀರಾಮಾತ್ ಯವೀಯಾನ್

ಲಕ್ಷ್ಮಣನು ಶ್ರೀರಾಮನಿಗಿಂತ ಚಿಕ್ಕವನು.

ಲಕ್ಷ್ಮಣನು ಶ್ರೀರಾಮನಿಗಿಂತ ಬೇರೆಯಾದವನೆಂದು ಮೊದಲೇ ಸಿದ್ಧವಾಗಿದೆ. ಕನ್ನಡ ವ್ಯಾಕರಣದಲ್ಲಿ 'ಕೃಷ್ಣನತ್ತಣಿಂ ಪಿರಿಯಂ ಬಲಭದ್ರಂ, ನಕುಲನತ್ತಣಿಂ ಸಹದೇವಂ ಕಿರಿಯಂ' –ಇತ್ಯಾದಿ ರೂಪಗಳನ್ನು ತೋರಿಸಿದ್ದಾರೆ. ಪಂಚಮಿಗೆ ಬದಲು ತೃತೀಯೆಯೂ ಬರುತ್ತದೆಯೆಂದು ಅವರು ಹೇಳುವುದರಿಂದ 'ನಕುಲನಿಂ, ನಕುಲನಿಂದಂ, ನಕುಲನಿಂದೆ ಸಹದೇವಂ ಕಿರಿಯಂ' ಎಂಬ ರೂಪಗಳೂ ಆಗಬಹುದು. ಹೊಸಗನ್ನಡದಲ್ಲಿ ಪಂಚಮಿಯೂ ಇಲ್ಲ, ತೃತೀಯೆಯೂ ಇಲ್ಲ. 'ನಕುಲನಿಗಿಂತ ಸಹದೇವನು ಕಿರಿಯ, ಅದಕ್ಕಿಂತ ದೊಡ್ಡದಿಲ್ಲ' –ಎಂಬುದಾಗಿ ಗಿಂತ, ಕಿಂತಗಳು ಕಾಣುತ್ತವೆ. ಇವು ಹಿಂದಿನ ಸೂತ್ರದ ವಿಷಯದಲ್ಲಿಯೂ ಬರುತ್ತವೆ. 'ಇತರ ಪಕ್ಷಿಗಳಿಗಿಂತ ನವಿಲು ಬಹಳ ಸುಂದರ' –ಎಂದಾಗಬಹುದು. 'ಜಗಳಕ್ಕಿಂತ ಮೌನ ಉತ್ತಮ' –ಎಂದೂ ಹೇಳುತ್ತಾರೆ. ಈ ಕಿಂತ, ಗಿಂತಗಳನ್ನು ಬಿಟ್ಟರೆ ಅವುಗಳ (ಸ್ಥಾನದಲ್ಲಿ) ಸಮೀಚೀನವಾದ ಇನ್ನೊಂದು ವಿಭಕ್ತಿ ಕಾಣದು. ಅವುಗಳ ಮೂಲವೂ ತಿಳಿಯದು.

೧. ಅರ್ಜುನನಿಗಿಂತ ಭೀಮನು ಹಿರಿಯ.

೨. ಪತ್ರ ಬರೆಯುವುದಕ್ಕಿಂತ ಎದುರಿಗೆ ಮಾತಾಡುವುದು ಉತ್ತಮ.

ಗಿಂತ, ಕ್ಕಿಂತ –ಎಂಬಿವು ಯಾವ ವಿಭಕ್ತಿ ಪ್ರತ್ಯಯಗಳು? ಭಾಷಾಶಾಸ್ತ್ರಿಗಳು ಉತ್ತರಿಸಬಹುದು.

ಇನ್ನೂ ಅನೇಕ ಬಗೆಯ ಅಪಾದಾನಗಳನ್ನು ಸಂಸ್ಕೃತವ್ಯಾಕರಣದಲ್ಲಿ ಹೇಳಿದ್ದಾರೆ. ಅವನ್ನು ಚರ್ಚಿಸುವುದರಿಮದ ಹೆಚ್ಚು ಪ್ರಯೋಜನವಾಗದು.

೬. ಅಧಿಕರಣ

ಆಧಾರೋऽಧಿಕರಣಮ್ ॥ (೧–೪–೪೫)

ಕರ್ತೃಕರ್ಮಗಳ ಮೂಲಕ ಕ್ರಿಯೆಗೆ ಆಧಾರವಾದದ್ದು ಅಧಿಕರಣಸಂಜ್ಞೆಯನ್ನು ಪಡೆಯುತ್ತದೆ. ಫಲವ್ಯಾಪಾರಗಳೆರಡೂ ಧಾತ್ವರ್ಥವಾದ್ದರಿಂದ ಕ್ರಿಯೆಯೆನಿಸಿವೆ. ಇವುಗಳಲ್ಲಿ ವ್ಯಾಪಾರಕ್ಕೆ ಸಾಕ್ಷಾತ್ ಆಧಾರವಾದದ್ದು ಕರ್ತೃ. ಫಲಕ್ಕೆ ಆಧಾರವಾದದ್ದು ಸಕರ್ಮಕಸ್ಥಳದಲ್ಲಿ ಕರ್ಮ. ಅಕರ್ಮಕಸ್ಥಳದಲ್ಲಿ ಫಲವ್ಯಾಪಾರಗಳೆರಡೂ ಕರ್ತೃವಿನಲ್ಲಿರುತ್ತವೆ. ಆದ್ದರಿಂದ ಅಧಿಕರಣವು ಕರ್ತೃಕರ್ಮಗಳ ದ್ವಾರಾ ಪರಂಪರೆಯಾಗಿ ಕ್ರಿಯೆಗೆ ಆಶ್ರಯವಾಗುತ್ತದೆ. ಅಧಿಕರಣದ ಮೇಲೆ ಸಪ್ತಮೀವಿಭಕ್ತಿ ಬರುತ್ತದೆ. ಉದಾ:

೧. 'ತೊಟ್ಟಿಲಲ್ಲಿ ಮಗು ಮಲಗಿದೆ.' ಇಲ್ಲಿ ಮಲಗುವ ಕ್ರಿಯೆ ಮಗುವಿನಲ್ಲಿದೆ. ತೊಟ್ಟಿಲು ಮಗುವಿಗೆ ಅಧಿಕರಣವಾಗಿ ಮಲಗುವ ಕ್ರಿಯೆಯನ್ನು ನಡೆಸಲು ಉಪಕರಿಸುತ್ತದೆ.

೨. ಆ ಪಾತ್ರೆಯಲ್ಲಿ ಹಾಲನ್ನು ಕಾಯಿಸುತ್ತೇನೆ. ಕಾಯಿಸುವುದರ ಫಲ ಬಿಸಿ. ಅದು ಹಾಲಿನಲ್ಲಿದೆ. ಪಾತ್ರೆ ಹಾಲಿಗೆ ಆಧಾರವಾಗಿದೆ ಮತ್ತು ಕಾಯಿಸುವ ಕ್ರಿಯೆಗೆ ಸಹಾಯ ಮಾಡುತ್ತದೆ.

ಔಪಶ್ಲೇಷಿಕ, ವೈಷಯಿಕ, ಅಭಿವ್ಯಾಪಕ –ಎಂದು ಅಧಿಕರಣವು ಮೂರು ವಿಧ. ಉಪಶ್ಲೇಷವೆಂದರೆ ಏಕದೇಶಸಂಬಂಧ ಮತ್ತು ಸಾಮೀಪ್ಯಸಂಬಂಧ. ಆದ್ದರಿಂದ ಔಪಶ್ಲೇಷಿಕ ಅಧಿಕರಣವು ಎರಡು ವಿಧ:

೧. ಅವನು ಮಂಚದಲ್ಲಿ ಮಲಗಿದ್ದಾನೆ.

೨. ಇವನು ಚಾಪೆಯಲ್ಲಿ ಕುಳಿತಿದ್ದಾನೆ.

ಇಲ್ಲಿ ಕರ್ತೃವಿಗೂ ಅಧಿಕರಣಕ್ಕೂ ಆಗಿರುವ ಸಂಬಂಧವು ಏಕದೇಶದಲ್ಲಿ ಮಾತ್ರ.

೩. ಅ+ಇ = ಅಕಾರದ ಪರದಲ್ಲಿ ಇಕಾರವಿದೆ. ಸಮೀಪದ ಪರಸ್ಥಾನದಲ್ಲಿದೆ ಎಂದರ್ಥ.

೪. ಉ+ಅ = ಅಕಾರದ ಪೂರ್ವದಲ್ಲಿ ಉಕಾರವಿದೆ. ಸಮೀಪದ ಪೂರ್ವಸ್ಥಾನದಲ್ಲಿದೆ ಎಂದರ್ಥ.

ವಿಷಯತಾಸಂಬಂಧದಿಂದ ಆಧಾರವಾದರೆ ವೈಷಯಿಕ ಅಧಿಕರಣ.

೧. ದೇವರಲ್ಲಿ ಅವನಿಗೆ ಭಕ್ತಿಯಿದೆ.

೨. ಉಪಾಧ್ಯಾಯರು ತರ್ಕದಲ್ಲಿ ಪಂಡಿತರು.

೩. ನೆರೆಹೊರೆಯವರಲ್ಲಿ ಸ್ನೇಹವಿರಬೇಕು.

ದೇವರ ವಿಷಯದಲ್ಲಿ ಭಕ್ತಿ, ತರ್ಕದ ವಿಷಯದಲ್ಲಿ ಪಾಂಡಿತ್ಯ, ನೆರೆಹೊರೆಯವರ ವಿಷಯದಲ್ಲಿ ಸ್ನೇಹ ಎಂದರ್ಥ.

ಸರ್ವಾವಯವವ್ಯಾಪ್ತಿಯುಳ್ಳ ಆಧಾರವು ಅಭಿವ್ಯಾಪಕ ಅಧಿಕರಣ.

೧. ಎಳ್ಳಿನಲ್ಲಿ ಎಣ್ಣೆ ಇದೆ.
೨. ಹೂವಿನಲ್ಲಿ ಸುಗಂಧವಿದೆ.
೩. ಬಟ್ಟೆಯಲ್ಲಿ ನೂಲುಗಳಿವೆ.

ಈ ಉದಾಹರಣೆಗಳಲ್ಲಿ ಸರ್ವಾವಯವವ್ಯಾಪ್ತಿ ಸ್ಪಷ್ಟವಾಗಿದೆ.

ಔಪಶ್ಲೇಷಿಕ, ಅಭಿವ್ಯಾಪಕಗಳೆರಡನ್ನು ಬಿಟ್ಟು ಉಳಿದ ಎಲ್ಲ ಅಧಿಕರಣಗಳನ್ನೂ ವೈಷಯಿಕಾಧಿಕರಣವೆನ್ನಬಹುದು.

ಭಾವಲಕ್ಷಣಸಪ್ತಮೀ (ಸತಿಸಪ್ತಮೀ)

ಯಸ್ಯ ಚ ಭಾವೇನ ಭಾವಲಕ್ಷಣಮ್ (೨-೩-೩೭)

ಭಾವ = ಕ್ರಿಯೆ, ಲಕ್ಷಣ = ಜ್ಞಾಪನ. ಯಾವುದರ ಕ್ರಿಯೆಯಿಂದ ಇನ್ನೊಂದರ ಕ್ರಿಯೆಯು ಜ್ಞಾಪಿತವಾಗುವುದೋ ಆ ಜ್ಞಾಪಕಕ್ರಿಯಾಶ್ರಯವಾಚಕಕ್ಕೆ ಸಪ್ತಮೀವಿಭಕ್ತಿ ಬರುತ್ತದೆ. ಉದಾಃ

'ಗೋಷು ದುಹ್ಯಮಾನಾಸು ಗತಃ = ಹಸುಗಳು ಹಾಲುಕರೆಯಲ್ಪಡುತ್ತಿರುವಾಗ ಆತನು ಹೋದನು.' ಗೋವುಗಳಲ್ಲಿರುವ ದೋಹನಕ್ರಿಯೆಯು ಇನ್ನೊಬ್ಬನ ಗಮನಕ್ರಿಯೆಯನ್ನು ಜ್ಞಾಪಿಸುತ್ತದೆ. ಗಮನಕಾಲವನ್ನು ಸೂಚಿಸುವುದೇ ಇಲ್ಲಿ ಜ್ಞಾಪನ. ಅದೇ ಕಾಲಪರಿಚ್ಛೇದಕತ್ವ. ಈ ಜ್ಞಾಪನಕ್ರಿಯೆ ಗೋವುಗಳಲ್ಲಿದೆ. ವಿಶೇಷಣವಾದ ದುಹ್ಯಮಾನಶಬ್ದದಲ್ಲಿಯೂ ಇದೆ. ಆದ್ದರಿಂದ ಇವೆರಡರ ಮೇಲೂ ಸಪ್ತಮೀ ಬಂದಿದೆ. ಫಲವೂ ಧಾತ್ವರ್ಥಕ್ರಿಯೆಯಾದ್ದರಿಂದ ಗೋವು ಇಲ್ಲಿ ಕರ್ಮವಾಚಿ ಯಾದರೂ ದೋಹನವು ಕ್ರಿಯೆಯೆಂಬುದನ್ನು ಗಮನಿಸಬೇಕು.

'ಹಾಲನ್ನು ಕರೆಯುತ್ತಿರುವ ಕಾಲದಲ್ಲಿ ಅವನು ಹೋದನು' -ಎಂದು ಸಮಾನಕಾಲವು ಇಲ್ಲಿ ತಿಳಿಯುತ್ತದೆ. 'ಗೋಷು ದುಗ್ಧಾಸು ಗತಃ = ಹಸುಗಳನ್ನು ಕರೆದಾದ ಮೇಲೆ ಹೋದನು' -ಎಂದೂ ಹೇಳಬಹುದು. ಆಗ, ದೋಹನವಾದ ಮೇಲೆ ಹೋದನೆಂದು ತಿಳಿಯುತ್ತದೆ. ಇಲ್ಲಿ ಸಮಾನಕಾಲವು ತೋರುವುದಿಲ್ಲ. ಆದರೂ ದೋಹನವು ಗಮನದ ಜ್ಞಾಪಕವಾಗುತ್ತದೆ. 'ಗೋಷು ದುಗ್ಧಾಸು ಗಮಿಷ್ಯತಿ' -ಎಂದು ಭವಿಷ್ಯತ್ಕಾಲದಲ್ಲಿಯೂ ಪ್ರಯೋಗಿಸಬಹುದು. 'ಗೋಷು ಧೋಕ್ಷ್ಯಮಾಣಾಸು ಗಮಿಷ್ಯತಿ' -ಎಂದೂ ಹೇಳಬಹುದು. ಎರಡೂ ಭವಿಷ್ಯತ್ಕಾಲ ದವುಗಳಾದ್ದರಿಂದ ಅವುಗಳಿಗೆ ಸಮಾನಕಾಲವೇ ತೋರುತ್ತದೆ. ಕ್ರಿಯೆಯು ಕರ್ತೃನಿಷ್ಠ ವಾದಾಗಲೂ ಈ ಸಪ್ತಮೀ ಬರುತ್ತದೆ. ಉದಾಃ

ಮಯಿ ಭಾಷಮಾಣೇ ಸ ಆಗತಃ = ನಾನು ಮಾತಾಡುತ್ತಿರುವಾಗ ಅವನು ಬಂದನು.

ಮಯಿ ಭಾಷಮಾಣೇ ಸಃ ಕ್ರುದ್ಧಃ = ನಾನು ಮಾತಾಡುತ್ತಿರಲು ಅವನು ಕುಪಿತನಾದನು.

ಸಪ್ತಮ್ಯಂತದ ಜೊತೆಗೆ ಸ್ಪಷ್ಟಾರ್ಥವಾಗಿ 'ಸತಿ' ಶಬ್ದವನ್ನು ಬಳಸುತ್ತಾರೆ. 'ಮಯಿ ಭಾಷಮಾಣೇ ಸತಿ ಸಃ ಕ್ರುದ್ಧಃ.' ಈ ಕಾರಣದಿಂದ ಸೌಕರ್ಯಕ್ಕಾಗಿ 'ಸತಿಸಪ್ತಮೀ' ಎಂಬ ವ್ಯವಹಾರ ಬಂದಿದೆ. 'ಭಾವಲಕ್ಷಣ ಸಪ್ತಮೀ' ಎನ್ನುವುದೇ ಯುಕ್ತವಾದ ಹೆಸರು. 'ಸತಿ' ಎನ್ನುವ ಪ್ರಯೋಗವೂ ವಿಶೇಷ್ಯಾನುರೋಧವಾಗಿ ನಾನಾರೂಪಗಳನ್ನು ತಾಳುತ್ತದೆ. ಹೇಗೆಂದರೆ,

ಭಾಷಮಾಣೇ ಸತಿ, ಭಾಷಮಾಣಯೋಃ ಸತೋಃ, ಭಾಷಮಾಣೇಷು ಸತ್ಸು ಭಾಷಮಾಣಾಯಾಂ ಸತ್ಯಾಂ, ಭಾಷಮಾಣಾಸು ಸತೀಷು –ಇತ್ಯಾದಿ.

'ಸತಿಸಪ್ತಮಿ'ಯ ಸ್ವರೂಪವನ್ನು ತಿಳಿಸುವುದಕ್ಕಾಗಿ ಇಷ್ಟು ಬರೆಯಬೇಕಾಯಿತು. ಕನ್ನಡದಲ್ಲಿ ಇದರ ಸ್ವರೂಪವೇ ಬೇರೆ.

ಕನ್ನಡದಲ್ಲಿ ಸತಿ ಸಪ್ತಮಿಯ ಅರ್ಥವುಳ್ಳ ಪ್ರಯೋಗಗಳು ವಿಪುಲವಾಗಿವೆ. ಆದರೆ ಅಲ್ಲಿ ಸಪ್ತಮೀವಿಭಕ್ತಿಯೇ ಬಂದಿರುವುದಿಲ್ಲ. ಪ್ರಥಮಾವಿಭಕ್ತಿ ಬಂದಿರುತ್ತದೆ. ಇದನ್ನು ಸರಿಯಾಗಿ ವಿವರಿಸಿ ಹೇಳಿದವನು ಭಟ್ಟಾಕಳಂಕನೊಬ್ಬನೇ.

ಯಸ್ಯ ಭಾವೋ ಭಾವಲಕ್ಷಣಂ ॥ – (ಶಬ್ದಾನುಶಾಸನ, ಸೂ. ೨೨೯)

ಯಾವುದರ ಕ್ರಿಯೆಯು ಇನ್ನೊಂದು ಕ್ರಿಯೆಗೆ ಜ್ಞಾಪಕವಾಗಿರುತ್ತದೆಯೋ ಆ ಜ್ಞಾಪಕಕ್ರಿಯಾವಾಚಕಶಬ್ದಕ್ಕೆ 'ಮ್' ಎಂಬ ವಿಭಕ್ತಿ ಬರುತ್ತದೆ. 'ಮ್' ಎಂಬುದೇ ಪ್ರಥಮಾ ವಿಭಕ್ತಿ. ಉದಾಃ

ಪಶು ಕರೆಯಲ್ ಬಂದಂ.
ರಮಣಿ ನೋಡಲ್ ಬಂದಂ.

ಪಶು ಕರೆಯಲ್ ಎಂದರೆ 'ಹಸು ಹಾಲನ್ನು ಕೊಡುತ್ತಿರುವಾಗ' ಎಂದರ್ಥ.

ಕರೆಯಲ್, ನೋಡಲ್ –ಎಂಬಲ್ಲಿರುವ ಅಲ್ ಪ್ರತ್ಯಯವು ಧಾತುವಿನ ಮೇಲೆ ಬಂದದ್ದು. ಭಟ್ಟಾಕಳಂಕನೇ ಮುಂದೆ ಧಾತುಪ್ರಕರಣದಲ್ಲಿ ಹೇಳುತ್ತಾನೆ–

ಯೋ ಭಾವೋ ಭಾವಲಕ್ಷಕಃ ॥ – (ಸೂ. ೫೮೨)

ಯಾವ ಕ್ರಿಯೆಯು ಕ್ರಿಯಾಂತರವನ್ನು ಜ್ಞಾಪಿಸುತ್ತದೆಯೋ ಆ ಕ್ರಿಯೆಯ ವಾಚಕವಾದ ಧಾತುವಿಗೆ ಅಲ್ ಎಂಬ ಪ್ರತ್ಯಯ ಬರುತ್ತದೆ. ಮೇಲ್ಕಂಡ ಉದಾಹರಣೆಗಳಲ್ಲದೆ–

೧. ಗಾಯಕಂ ಪಾಡಲರಸಂ ಕೇಳ್ದಂ.

೨. ಅರ್ಥಿ ಬೇಡಲ್ ದಾನಿಯಿತ್ತಂ.

೩. ನೇಸರ್ ಮೂಡಲ್ ಕಳ್ತಲೆ ಪೋದುದು.

ಮುಂದಿನ ಸೂತ್ರಗಳಲ್ಲಿ ಇನ್ನೂ ಕೆಲವು ಧಾತುಪ್ರತ್ಯಯಗಳನ್ನು ಆತನೇ ಹೇಳಿದ್ದಾನೆ.

ವುದುಂ = ಪಾಡುವುದುಂ ಕೇಳ್ದಂ (ಗಾಯಕನು ಹಾಡಲು ಈತನು ಕೇಳಿದನು ಎಂದರ್ಥ).

ಎ = ಬರೆ ಕಂಡಂ
ವನ್ನಂ = ಪಾಡುವನ್ನಂ ಕೇಳ್ದಂ
ವನ್ನೆಗಂ = ಪಾಡುವನ್ನೆಗಂ ಕೇಳ್ದಂ
ವಿನಂ = ಬರ್ಪಿನಂ ಕಂಡಂ
ವಿನೆಗಂ = ಪಾಡುವಿನೆಗಂ ಕೇಳ್ದಂ
ಭೂತಕಾಲದಲ್ಲಿ ವಿಕಲ್ಪವಾಗಿ ದೊಡೆತ್ ಪ್ರತ್ಯಯ.
ಪಾಡಿದೊಡೆ ಕೇಳ್ದಂ; ಅಟ್ಟೊಡುಂಡಂ; ಪಾಡಲ್ ಕೇಳ್ದಂ
ವೊಡೆತ್ = ಪಾಡುವೊಡೆ ಬಂದಂ

ಇನ್ನೂ ಕೆಲವು ಪ್ರಯೋಗಗಳು.

ಮಾಡಲ್ಕೆ ಬಂದಂ, ಪಾಡಲೊಡನೆ ಮೆಚ್ಚಿದಂ, ಪಾಡಲೊಡಂ ಮೆಚ್ಚಿದಂ.

ಇವೆಲ್ಲವೂ ಕರ್ತ್ರರ್ಥದಲ್ಲಿ ಧಾತುವಿಗೆ ಬಂದಿರುವ ಅಪೂರ್ಣಾರ್ಥಕ ಪ್ರತ್ಯಯಗಳು. ಕರ್ತೃವಿಗೆ ಪ್ರಥಮೆಯು ಸಹಜವಾಗಿ ಬರುತ್ತಿತ್ತು. ಸಂಸ್ಕೃತದಂತೆ ಸಪ್ತಮೀ ಬರುವುದಿಲ್ಲವೆಂಬುದನ್ನು ಸ್ಫುಟಗೊಳಿಸುವುದಕ್ಕಾಗಿ ಭಟ್ಟಾಕಳಂಕನು ಪ್ರಥಮೆಯನ್ನು ಹೇಳಿದ್ದಾನೆ.

ಕೇಶಿರಾಜನು ಸತಿಸಪ್ತಮಿಯ ಅರ್ಥವನ್ನೇನೂ ವಿವರಿಸಿಲ್ಲ; ಶಬ್ದಮಣಿ ದರ್ಪಣದ ಸೂತ್ರ ೧೪೪ರ ಅಡಿಯಲ್ಲಿ,

ಸತ್ಯರ್ಥಕ್ಕೆ ಸಪ್ತಮೀ ಬರುತ್ತದೆಯೆಂದು–
ಬರೆ ಕಂಡಂ = ಬರ್ಪೆಡೆಯೊಳ್ ಕಂಡಂ –ಎಂದು ಉದಾಹರಿಸಿದ್ದಾನೆ.

ಮುಂದೆ ಆಖ್ಯಾತಪ್ರಕರಣದ ೨೬೦ನೆಯ ಸತ್ರಾರ್ಥವನ್ನು ವಿವರಿಸುತ್ತಾ,

"ಇರ್ಬರ್ ಕರ್ತೃಗಳ್ಗಪ್ಪ ಸತಿಸಪ್ತಮಿಗೆ ಎಕಾರಮಕ್ಕುಂ. ಆ ಎಕಾರಕ್ಕೆ ಅಲುವಂ ಕೆಲರಂಜದೆ ಪೇಳ್ವರ್; ಅಲೊಡಮೆಂದೊಡೆ ಶುದ್ಧಂ.

ಪ್ರಯೋಗಂ–

ಇರ್ಬರ್ ಕರ್ತೃಗಳ್ಗಪ್ಪ ಸತಿಸಪ್ತಮಿಗೆ–

"ಗಾಯಕಂ ಪಾಡೆ ದೇವಂ ಮೆಚ್ಚಿದಂ, ಪಾತ್ರವಾಡೆ ವಾದಕಂ ಬಾಜಿಸಿದಂ, ವಂದೆ ಪೊಗಳೆ ಚಾಗಿ ಕೊಟ್ಟಂ" ಎಂದು ಬರೆದಿದ್ದಾನೆ.

ಅಲೊಡಂ ಎಂಬುದಕ್ಕೆ–

'ವಸಂತಂ ಬರಲೊಡಂ ಕೋಗಿಲೆಯುಲಿಗುಂ, ಗಾಳಿ ಬೀಸಲೊಡಮೆಲೆ ಕಳಲ್ದುವು' –ಎಂದು ಉದಾಹರಿಸಿದ್ದಾನೆ.

ಇವೆಲ್ಲವೂ ಓದುಗರ ತಲೆ ಕೆಡಿಸುವ ಮಾತುಗಳು. ಸತಿಸಪ್ತಮಿಯ ಅರ್ಥವನ್ನೂ ತಿಳಿಸಿಲ್ಲ. ಉದಾಹರಣೆಗಳಲ್ಲಿ ಸಮನ್ವಯವನ್ನೂ ಮಾಡಿಲ್ಲ. ಬರ್ಪೆಡೆಯೊಳ್ ಕಂಡಂ –ಎಂಬ ಉದಾಹರಣೆಯಲ್ಲಿ ಒಳ್ ಎಂಬುದು ಸಪ್ತಮೀವಿಭಕ್ತಿ ಹೌದು. ಬರೆ ಕಂಡಂ, ಗಾಯಕಂ ಪಾಡೆ, ಬರಲೊಡಂ –ಇಲ್ಲಿ 'ಎ' ಮತ್ತು 'ಅಲೊಡಂ' ಸಪ್ತಮೀವಿಭಕ್ತಿಯೇ? ಧಾತುವಿನ ಮೇಲೆ ಸಪ್ತಮೀವಿಭಕ್ತಿ ಬರುತ್ತದೆಯೇ? ಬರೆ ಕಂಡು ಇತ್ಯಾದಿ ಉದಾಹರಣೆಗಳಲ್ಲಿ ಯಾವ ಧಾತುವಿನ ಮೇಲೆ 'ಎ', 'ಒಡಂ' ಬರುತ್ತದೆಯೆಂಬುದನ್ನು ತಿಳಿಸಿಲ್ಲ. ಬರ್ಪೆಡೆಯೊಳ್ ಕಂಡಂ (ಬರುವಾಗ ದಾರಿಯಲ್ಲಿ ಕಂಡನು.) –ಇದು ಸತಿಸಪ್ತಮಿಗೆ ಉದಾಹರಣೆಯಾದೀತೆ?

ಕೃದಂತಗಳೊಡನೆ ಕಾರಕಗಳು

ಇದುವರೆಗೆ ತಿಙಂತಗಳನ್ನು ಉದಾಹರಿಸಿ ಕಾರಕಗಳು ಕ್ರಿಯಾನ್ವಯಿಗಳೆಂಬುದನ್ನು ವಿವರಿಸಲಾಗಿದೆ. ಇವು ಕೃದಂತದ ಕ್ರಿಯಗಳಲ್ಲಿ ಅನ್ವಯಿಸಿದಾಗ ಯಾವ ರೂಪಗಳನ್ನು ತಳೆಯುತ್ತವೆಯೆಂಬುದನ್ನು ಈಗ ಪರಿಶೀಲಿಸಬಹುದು. ಕನ್ನಡದಲ್ಲಿ ಕರ್ತೃ, ಕರ್ಮಗಳೆರಡೇ ಪ್ರಕೃತದಲ್ಲಿ ಪರಿಶೀಲನಾರ್ಹವಾದವು.

ಕರ್ತೃಕರ್ಮಗಳು ತಿಙ್‌ಪ್ರತ್ಯಯಗಳಿಂದ ಅಭಿಹಿತವಾದಾಗ ಪ್ರಥಮಾವಿಭಕ್ತಿಯನ್ನು ಮಾತ್ರ ಪಡೆಯುತ್ತವೆ. ಅಭಿಹಿತವಾಗದಿದ್ದಾಗ ಕರ್ತೃವಿಗೆ ತೃತೀಯಾ ವಿಭಕ್ತಿಯೂ ಕರ್ಮಕ್ಕೆ ದ್ವಿತೀಯಾ ವಿಭಕ್ತಿಯೂ ಬರುತ್ತವೆ –ಎಂದು ಹೇಳಿದ್ದಾಗಿದೆ. ಉದಾಹರಣೆಗೆ–

೧. ಭೀಮನು ಗದೆಯನ್ನು ಎತ್ತುತ್ತಾನೆ.
೨. ಹರಿಯು ಪುಸ್ತಕವನ್ನು ಓದುತ್ತಾನೆ.
೩. ಆತನು ಮರವನ್ನು ಕಡಿದನು.

ಈ ಉದಾಹರಣೆಗಳಲ್ಲಿ ತಿಙ್‌ಪ್ರತ್ಯಯವು ಕರ್ತ್ರರ್ಥದಲ್ಲಿ ಬಂದಿದೆ. ಕರ್ತೃ ಎಂಬುದು ತಿಙ್‌ಪ್ರತ್ಯಯಗಳಿಂದ ಉಕ್ತವಾಗಿದೆ. ಆದ್ದರಿಂದ ಭೀಮ, ಹರಿ, ಆತ –ಎಂಬ ಕರ್ತೃವಾಚಕಗಳು ಪ್ರಥಮಾವಿಭಕ್ತಿಯನ್ನು ಪಡೆದಿವೆ. ಗದೆ, ಪುಸ್ತಕ, ಮರ –ಎಂಬ ಕರ್ಮಗಳು ತಿಙ್‌ಪ್ರತ್ಯಯದಿಂದ ಉಕ್ತವಾಗಿಲ್ಲವಾದ್ದರಿಂದ ಇವುಗಳ ಮೇಲೆ ದ್ವಿತೀಯಾ ಬಂದಿದೆ. ತಿಙರ್ಥವು ಕರ್ತೃವಾದ್ದರಿಂದ ಇವುಗಳಿಗೆ ಕರ್ತರಿಪ್ರಯೋಗಗಳೆಂದು ಹೆಸರು.

ಈ ವಾಕ್ಯಗಳನ್ನೇ ಕರ್ಮಣಿಪ್ರಯೋಗಕ್ಕೆ ತಿರುಗಿಸಬಹುದು.

೧. ಭೀಮನಿಂದ ಗದೆಯು ಎತ್ತಲ್ಪಡುತ್ತದೆ.
೨. ಹರಿಯಿಂದ ಪುಸ್ತಕವು ಓದಲ್ಪಡುತ್ತದೆ.
೩. ಆತನಿಂದ ಮರವು ಕಡಿಯಲ್ಪಡುತ್ತದೆ.

ಅಲ್ಪಡುತ್ತದೆ -ಎಂಬುದು ಕರ್ಮಾರ್ಥದಲ್ಲಿ ಬಂದಿದೆ. ಇವುಗಳಿಂದ ಕರ್ಮವು ಉಕ್ತವಾಗಿದೆ. ಆದ್ದರಿಂದ ಗದೆ ಮುಂತಾದ ಕರ್ಮಗಳ ಮೇಲೆ ಪ್ರಥಮಾವಿಭಕ್ತಿ ಬಂದಿದೆ. ದ್ವಿತೀಯಾ ಬಂದಿಲ್ಲ. ಈ ವಾಕ್ಯಗಳಲ್ಲಿಯೇ ಭೀಮ, ಹರಿ, ಆತ -ಎಂಬ ಕರ್ತೃಗಳ ಮೇಲೆ ತೃತೀಯಾ ವಿಭಕ್ತಿ ಬಂದಿರುವುದನ್ನು ಗಮನಿಸಬೇಕು. ಇವುಗಳಲ್ಲಿರುವ ಕರ್ತೃತ್ವಶಕ್ತಿಯು ತಿಜ್‌ಪ್ರತ್ಯಯದಿಂದ ಅಭಿಹಿತವಾಗಿಲ್ಲ. ಕಾರಕವು ಉಕ್ತವಾಗುವುದು, ಅಭಿಹಿತವಾಗುವುದು -ಎಂದರೆ ಅದರಲ್ಲಿರುವ ಕರ್ತೃತ್ವಶಕ್ತಿ, ಕರ್ಮತ್ವ ಶಕ್ತಿ ಮುಂತಾದ್ದನ್ನು ಬೇರೆ ಪ್ರತ್ಯಯವು ಹೇಳಿರುವುದು ಎಂದರ್ಥ. ಕರ್ತರಿಪ್ರಯೋಗದಲ್ಲಿ ಕರ್ತೃತ್ವಶಕ್ತಿಯನ್ನೂ ಕರ್ಮಣಿಪ್ರಯೋಗದಲ್ಲಿ ಕರ್ಮತ್ವ ಶಕ್ತಿಯನ್ನೂ ತಿಜ್‌ಪ್ರತ್ಯಯವು ಹೇಳಿರುತ್ತದೆ.

ಈಗ ಕೃದಂತಸ್ಥಳಗಳನ್ನು ನೋಡೋಣ. ಕಾರಕಗಳಿಗೆ ಸಂಬಂಧಿಸಿದಂತೆ ಮುಖ್ಯವಾಗಿ ಗಮನಿಸಬೇಕಾದ ಸೂತ್ರವಿದು.

ಕರ್ತೃಕರ್ಮಣೋಃ ಕೃತಿ ॥ (೨-೩-೬೫)

ಕೃದಂತಸಾಮಾನ್ಯವು ಇಲ್ಲಿ ಗೃಹೀತವಾಗಿದ್ದರೂ ಭಾವಕೃದಂತದ ಯೋಗ ದಲ್ಲೆಂದು ಪರ್ಯವಸಾನವಾಗುತ್ತದೆ. ಆದ್ದರಿಂದ ಭಟ್ಟಾಕಳಂಕನು ಕರ್ತೃಕರ್ಮಣೋಃ ಕೃತಿ ಭಾವೇ (ಸೂ.೨೨೬) ಎಂದೇ ಸೂತ್ರಿಸಿಬಿಟ್ಟಿದ್ದಾನೆ. ಭಾವಾರ್ಥಕಕೃದಂತಗಳ ಯೋಗವಿದ್ದಾಗ ಕರ್ತೃಕರ್ಮವಾಚಕಗಳಿಗೆ ಷಷ್ಠೀವಿಭಕ್ತಿಯು ಬರುತ್ತದೆ. ಭಾವವೆಂದರೆ ಕೇವಲಧಾತ್ವರ್ಥವಾದ ಕ್ರಿಯೆ. ಉದಾಃ

ಕರ್ತೃವಿಗೆ- ದೇವದತ್ತನ ಇರವು, ಅವಳ ಬರುವಿಕೆ, ಹುಡುಗನ ಓದು, ನರ್ತಕನ ಕುಣಿತ, ಹುಡುಗಿಯ ಮುನಿಸು, ಸೇವಕನ ಗೆಯ್ತು, ಕುಂಭಕರ್ಣನ ನಿದ್ರೆ, ಪಂಪನ ಕೃತಿ.

ಕರ್ಮಕ್ಕೆ- ಅಕ್ಕಿಯ ಆಯ್ಕೆ, ಹಣದ ಉಳಿಕೆ, ಕಾಂತೆಯ ನೆನಪು, ಕೊಬರಿಯ ಬೇಡಿಕೆ, ಪದ್ಯಗಳ ಬರೆಹ.

'ಇಕೆ' ಪ್ರತ್ಯಯವಿದ್ದಾಗ ವಿಕಲ್ಪವಾಗಿ ಕರ್ಮಣಿ ದ್ವಿತೀಯಾ ಬರುವುದುಂಟು-

ಹಣದ ಉಳಿಸುವಿಕೆ -ಹಣವನ್ನು ಉಳಿಸುವಿಕೆ, ಸತ್ಯದ ಹೇಳುವಿಕೆ- ಸತ್ಯವನ್ನು ಹೇಳುವಿಕೆ.

ಭಾವಾರ್ಥಕ 'ಉದು' ಪ್ರತ್ಯಯವಿದ್ದಾಗ ಕರ್ತೃಕರ್ಮವಾಚಿಗಳಿಗೆ ಷಷ್ಠೀ ಬರುವುದಿಲ್ಲ. ಉದಾ-

ಕರ್ತೃವಿಗೆ- ದೇವದತ್ತನು ಇರುವುದು, ಹುಡುಗನು ಓದುವುದು, ಕುಂಭಕರ್ಣನು ನಿದ್ರಿಸುವುದು.

ಕರ್ಮಕ್ಕೆ- ಅಕ್ಕಿಯನ್ನು ಆಯುವುದು, ಹಣವನ್ನು ಉಳಿಸುವುದು, ಪದ್ಯಗಳನ್ನು ಬರೆಯುವುದು.

ವಿಚಾರ

'ಇಕೆ' ಪ್ರತ್ಯಯವಿದ್ದಾಗ ಷಷ್ಠೀವಿಕಲ್ಪವನ್ನು 'ಉದು' ಪ್ರತ್ಯಯವಿದ್ದಾಗ ಷಷ್ಠೀ ಬರುವುದಿಲ್ಲವೆಂಬುದನ್ನು ಭಟ್ಟಾಕಳಂಕನು ಹೇಳಿಲ್ಲ. ಹೊಸಗನ್ನಡದಲ್ಲಿ ಇವೆರಡು ವಿಶೇಷಗಳೂ ಕಂಡುಬರುತ್ತವೆ. ಇಲ್ಲಿ ವಿಚಾರಿಸಬೇಕಾದ ಅಂಶವೇನೆಂದರೆ- 'ಉದು' ಪ್ರತ್ಯಯಾಂತದ ಯೋಗವಿದ್ದಾಗ ಕರ್ಮವಾಚಿಗೆ ಷಷ್ಠೀವಿಭಕ್ತಿ ಬಾರದಿದ್ದರೆ, ದ್ವಿತೀಯಾವಿಭಕ್ತಿ ಬರುವುದು ನ್ಯಾಯವಾಗಿದೆ. ಆದರೆ ದೇವದತ್ತನು ಇರುವುದು, ಹುಡುಗನು ಓದುವುದು, ಕುಂಭಕರ್ಣನು ನಿದ್ರಿಸುವುದು ಎಂಬಲ್ಲಿ ಕರ್ತರಿ ಪ್ರಥಮಾ ಬಂದದ್ದು ಹೇಗೆ?

ಪ್ರಥಮಾ ವಿಭಕ್ತಿಯು ಕರ್ತ್ರರ್ಥದಲ್ಲಿ ವಿಹಿತವಾಗಿಲ್ಲ; ಕರ್ತ್ರರ್ಥದಲ್ಲಿ ವಿಹಿತವಾಗಿರುವುದು ತೃತೀಯಾವಿಭಕ್ತಿ. ಕರ್ತರಿಪ್ರಯೋಗದಲ್ಲಿ ಕರ್ತೃವಿನ ಮೇಲೂ ಕರ್ಮಣಿಪ್ರಯೋಗದಲ್ಲಿ ಕರ್ಮದ ಮೇಲೂ ಪ್ರಥಮಾ ಬರುವುದು ಇನ್ನಾವ ವಿಭಕ್ತಿಗೂ ಅವಕಾಶವಿಲ್ಲದ್ದರಿಂದ. ಕೇವಲ ಪ್ರಾತಿಪದಿಕವನ್ನಾಗಲಿ ಧಾತುವನ್ನಾಗಲಿ ಕೇವಲ ಪ್ರತ್ಯಯವನ್ನಾಗಲಿ ಪ್ರಯೋಗಿಸಬಾರದೆಂದು ವ್ಯಾಕರಣಶಾಸ್ತ್ರದ ನಿಯಮ ವಿರುವುದರಿಂದ ಪ್ರಥಮಾವಿಭಕ್ತಿಗೆ ಅವಕಾಶವಾಗುತ್ತದೆ. 'ಅಪದಂ ನ ಪ್ರಯುಂಜೀತ' –ಪದವಲ್ಲದ್ದನ್ನು ಪ್ರಯೋಗಿಸಬಾರದು ಎಂದು ವೈಯಾಕರಣರ ನಿಯಮವಿದೆ. ಅಥವಾ ಪ್ರಾತಿಪದಿಕಾರ್ಥವೇ ಪ್ರಥಮಾವಿಭಕ್ತಿಯ ಅರ್ಥವೆಂದು ಪಕ್ಷಾಂತರ ವನ್ನವಲಂಬಿಸಿದರೂ ಇಲ್ಲಿ ದೋಷವಿದೆ.

'ಉದು' ಎಂಬ ಕೃತ್‌ಪ್ರತ್ಯಯದ ಯೋಗವಿದ್ದಾಗ ಕರ್ತೃವಿಗೆ ಷಷ್ಠೀ ಬರಬೇಕಾಗಿತ್ತು. ಷಷ್ಠಿಗೆ ಬದಲಾಗಿ ಪ್ರಥಮಾ ಬಂದಿದೆ. ಕರ್ತ್ರರ್ಥದಲ್ಲಿಯೇ ಪ್ರಥಮಾ ಬಂದಿದೆ ಎಂಬುದು ಸ್ಪಷ್ಟವಾಗಿದೆ. ಕರ್ತ್ರರ್ಥದಲ್ಲಿ ತೃತೀಯಾ ವಿಹಿತವಾಗಿದೆ. ಕರ್ತರಿಪ್ರಯೋಗದಲ್ಲಿ ಕರ್ತೃವು ತಿಙ್‌ಪ್ರತ್ಯಯದಿಂದ ಉಕ್ತವಾಗಿದ್ದರೆ ಪ್ರಥಮಾ ಬರುತ್ತದೆ. ದೇವದತ್ತನು ಇರುವುದು, ಹುಡುಗನು ಓದುವುದು, ಕುಂಭಕರ್ಣನು ನಿದ್ರಿಸುವುದು –ಎಂಬಲ್ಲಿ ತಿಙ್‌ಪ್ರತ್ಯಯವೇ ಇಲ್ಲ. ಕರ್ತೃ ಯಾವುದರಿಂದಲೂ ಅಭಿಹಿತವಾಗಿಲ್ಲ. ಆದ್ದರಿಂದ ಪ್ರಥಮಾವಿಭಕ್ತಿಗೆ ಅವಕಾಶವಿಲ್ಲ.

ಮತ್ತು ಪ್ರಥಮಾಂತಶಬ್ದವು ಇನ್ನೊಂದು ಶಬ್ದದೊಡನೆ ಅಥವಾ ಪ್ರತ್ಯಯ ದೊಡನೆ ಅಭೇದಸಂಬಂಧದಿಂದ ಮಾತ್ರ ಅನ್ವಯಹೊಂದುತ್ತದೆ. ಭೇದಸಂಬಂಧ ದಿಂದ ಅನ್ವಯ ಹೊಂದುವುದಿಲ್ಲ. ಹೇಗೆಂದರೆ, 'ರಾಮನು ಶೂರನು.' ಇಲ್ಲಿ ರಾಮನಿಗೆ ಶೂರನೊಡನೆ ಅಭೇದದಿಂದ ಅನ್ವಯ. ರಾಮಾಭಿನ್ನವಾದ ಶೂರ ಅಥವಾ ಶೂರಾಭಿನ್ನನಾದ ರಾಮ –ಎಂದರ್ಥ. ಸರ್ವತ್ರ ಹೀಗೆಯೇ ಅನ್ವಯವಿರುತ್ತದೆ. 'ರಾಮನು ಹೋಗುತ್ತಾನೆ' –ಎಂಬ ಪ್ರಯೋಗದಲ್ಲಿ ತಿಙರ್ಥವು ಕರ್ತೃ. ರಾಮನಿಗೆ ಅಭೇದದಿಂದ ತಿಙರ್ಥದಲ್ಲಿ ಅನ್ವಯ. ರಾಮಾಭಿನ್ನನಾದ ಕರ್ತೃ ಎಂದು ಬೋಧವಾಗುತ್ತದೆ. 'ರಾಮಾಭಿನ್ನನಾದ ಕರ್ತೃನಲ್ಲಿರುವ ಹೋಗುವ ಕ್ರಿಯೆ' ಎಂದು ಶಾಬ್ದಬೋಧ. ಇದನ್ನು ಹಿಂದೆಯೇ ಬರೆದದ್ದಾಗಿದೆ. ಏವಂ ಚ ಪ್ರಥಮಾಂತಕ್ಕೆ

ಇನ್ನಾವುದರಲ್ಲಿಯೂ ಭೇದಸಂಬಂಧವಾದ ಅನ್ವಯವಿಲ್ಲ, ಅಭೇದದಿಂದಲೇ ಅನ್ವಯ ಎಂಬುದು ವ್ಯುತ್ಪತ್ತಿ. ಪ್ರಕೃತದಲ್ಲಾದರೋ ಅವನು ಹೋಗುವುದು, ಹುಡುಗನು ಓದುವುದು –ಎಂಬಲ್ಲಿ ಅವನಲ್ಲಿರುವ ಹೋಗುವ ಕ್ರಿಯೆ, ಹುಡುಗನಲ್ಲಿರುವ ಓದುವ ಕ್ರಿಯೆ –ಎಂದೇ ಭೇದಸಂಬಂಧವನ್ನು ಹೇಳಬೇಕಾಗುತ್ತದೆ. ಇದು ಅವ್ಯುತ್ಪನ್ನ.

ಹೀಗೆ ಅನ್ವಯ ಮಾಡುವುದಾದರೆ ಅವನು ಹೋಗುವಿಕೆ, ಹುಡುಗನು ಓದುವಿಕೆ, ನರ್ತಕನು ಕುಣಿತ, ಕುಂಭಕರ್ಣನು ನಿದ್ರೆ –ಎಂಬಲ್ಲಿಯೂ ಹುಡುಗನಲ್ಲಿರುವ ಓದುವ ಕ್ರಿಯೆ, ನರ್ತಕನಲ್ಲಿರುವ ಕುಣಿತ, ಕುಂಭಕರ್ಣನಲ್ಲಿರುವ ನಿದ್ರೆ –ಎಂದೇಕೆ ಅರ್ಥವಾಗುವುದಿಲ್ಲ? ಅಲ್ಲಿ ಕರ್ತೃವಿಗೆ ಷಷ್ಠೀವಿಭಕ್ತಿ ಬಂದುಬಿಡುತ್ತದೆ –ಎನ್ನುವುದಾದರೆ, ಬಂದುಕೊಳ್ಳಲಿ. ನಿಮ್ಮ ವ್ಯಾಕರಣನಿಯಮವು ಗೊತ್ತಿಲ್ಲದಿರುವ ಮೂಢನು ಹಾಗೆ ಪ್ರಯೋಗಿಸಿದಾಗ ಅಭೇದಾನ್ವಯದ ಅರ್ಥವೇಕೆ ಬರುವುದಿಲ್ಲ? ಎಂಬುದು ಪ್ರಶ್ನೆ. ಈ ಪ್ರಶ್ನೆಗೆ ಷಷ್ಠೀ ಬರುತ್ತದೆ ಎನ್ನುವುದು ಉತ್ತರವಲ್ಲ. ಅಪಶಬ್ದವನ್ನು ಬಳಸಿದರೂ ಜನರಿಗೆ ಅರ್ಥವಾಗುತ್ತದೆ. 'ಹುಡುಗನು ಓದುವುದು' ಎಂಬಲ್ಲಿ 'ನಡೆದಿದೆ' ಎಂಬ ಕ್ರಿಯಾಪದವನ್ನು ಅಧ್ಯಾಹಾರ ಮಾಡಿಕೊಂಡರೂ ಈ ಸಮಸ್ಯೆ ಬಗೆಹರಿಯುವುದಿಲ್ಲ. ಓದುವುದು –ಎಂಬ ಪ್ರಥಮೆಗೆ ಸಮರ್ಥನೆಯಾದೀತೇ ಹೊರತು ಹುಡುಗನು ಎಂಬಲ್ಲಿರುವ ಪ್ರಥಮೆಗೆ ಸಮರ್ಥನೆಯಾಗುವುದಿಲ್ಲ. ಪ್ರಥಮಾ ವಿಭಕ್ತ್ಯಂತಶಬ್ದಕ್ಕೆ ಸರ್ವತ್ರ ಅಭೇದಸಂಬಂಧದಿಂದಲೇ ಅನ್ವಯ ಬರಬೇಕು. ಮೇಲ್ಕಂಡ ಅಧ್ಯಾಹೃತಪದವಿರುವ ವಾಕ್ಯದಲ್ಲಿ 'ಓದುವುದು ನಡೆದಿದೆ'ಯೇ ಹೊರತು ಹುಡುಗನಲ್ಲ.

ಬಹುಶಃ ಹೀಗಾಗಿರಬಹುದು: ನಪುಂಸಕಲಿಂಗದ ಪ್ರಥಮೈಕವಚನದಲ್ಲಿ 'ಉದು' ಎಂಬ ತಿಙ್‌ಪ್ರತ್ಯಯವಿದೆ. ಹಕ್ಕಿಯು ಮರದಿಂದ ಹಾರುವುದು, ಮೀನು ನೀರಲ್ಲಿ ಈಜುವುದು –ಇತ್ಯಾದಿ ಪ್ರಯೋಗಗಳಲ್ಲಿ ಕರ್ತೃವು ಪ್ರಥಮಾ ವಿಭಕ್ತಿಯಲ್ಲಿರುವುದು ಸ್ಪಷ್ಟವಾಗಿದೆ. 'ಉದು' ಎಂಬುದೇ ಭಾವಾರ್ಥಕಕೃತ್ ಪ್ರತ್ಯಯವೂ ಆಗಿದೆ. ಈ ಸಾದೃಶ್ಯದೋಷದಿಂದ ಅವನು ಹೋಗುವುದು, ಹುಡುಗನು ಓದುವುದು ಮುಂತಾದ ಪ್ರಯೋಗಗಳು ಭಾವಾರ್ಥಕಕೃದಂತದಲ್ಲಿಯೂ ಬಂದಿರಬಹುದು. ಇದು ಬರಿಯ ಊಹೆ. ವಿದ್ವಾಂಸರು ನಿಶ್ಚಯವೇನೆಂಬುದನ್ನು ಪರಿಶೀಲಿಸಲಿ.

ಭಾವಾರ್ಥಕ ಕೃತ್‌ಪ್ರತ್ಯಯಯೋಗದಲ್ಲಿ ಕರ್ತೃಕರ್ಮವಾಚಿಗಳಿಗೆ ಬರುವ ಷಷ್ಠಿ ಕಾರಕಷಷ್ಠಿಯೇ ಸರಿ. ಸಂಬಂಧಸಾಮಾನ್ಯಷಷ್ಠಿ ಬೇರೆಯದು. ಷಷ್ಠಿಯು ಕಾರಕ ವಿಭಕ್ತಿಯೇ ಅಲ್ಲವೆನ್ನುವುದು ಯುಕ್ತವಲ್ಲ. ಕಾರಕಷಷ್ಠಿ, ಸಂಬಂಧಸಾಮಾನ್ಯಷಷ್ಠಿ ಎಂದು ಷಷ್ಠೀವಿಭಕ್ತಿಯು ಎರಡು ವಿಧವಾಗಿದೆ.

ಭಾವಾರ್ಥಕ ಪ್ರತ್ಯಯಗಳು

ವ್ಯಾಕರಣಶಾಸ್ತ್ರದಲ್ಲಿ ಭಾವಶಬ್ದಕ್ಕೆ ಎರಡು ಅರ್ಥಗಳುಂಟು. ವಸ್ತುವಿನಲ್ಲಿರುವ ಪ್ರವೃತ್ತಿನಿಮಿತ್ತ ಅಥವಾ ಅಸಾಧಾರಣಧರ್ಮವು ಭಾವವೆನಿಸುತ್ತದೆ. ಸಂಸ್ಕೃತದಲ್ಲಿ ತ್ವ, ತಲ್, ಷ್ಯಞ್ ಮುಂತಾದ ಪ್ರತ್ಯಯಗಳು ಈ ಅರ್ಥದಲ್ಲಿ ಬರುತ್ತವೆ. ವೃಕ್ಷತ್ವ,

ಮನುಷ್ಯತ್ವ, ಮನುಷ್ಯತಾ, ಬ್ರಾಹ್ಮಣ್ಯ –ಮುಂತಾದವು ಭಾವಗಳು. ಇವು ತದ್ಧಿತ ಪ್ರತ್ಯಯಗಳು. ಕನ್ನಡದಲ್ಲಿ ಹುಡುಗತನ, ಹಠಮಾರಿತನ, ದೊಡ್ಡತನ, ಹಿರಿಯತನ –ಮೊದಲಾದವು ಭಾವಾರ್ಥಕಗಳು.

ಧಾತ್ವರ್ಥಃ ಕೇವಲಃ ಶುದ್ಧೋ ಭಾವ ಇತ್ಯಭಿಧೀಯತೇ ॥

ಎಂದು ವರ್ಣಿತವಾದ ಭಾವ ಇನ್ನೊಂದು. ಇದು ಶುದ್ಧಕ್ರಿಯಾರೂಪವಾದದ್ದು. ಕಾರಕಾರ್ಥವನ್ನು ಒಳಗೊಂಡದ್ದಲ್ಲ. ಕೃತಿ, ಸ್ತುತಿ, ಗಮನ, ಜಯ, ಹೋಗುವುದು, ಮಾಡುವುದು, ಕುಣಿತ, ಓದು, ತಿವಿತ, ಬರೆಹ –ಮೊದಲಾದವು ಕ್ರಿಯಾಸ್ವರೂಪದ ಭಾವಗಳು. ಕನ್ನಡದಲ್ಲಿ ಬಳಸುವ ಭಾವಾರ್ಥಕಶಬ್ದಗಳೆಲ್ಲವೂ ಕೃದಂತಗಳು. ಕನ್ನಡದಲ್ಲಿ ಭಾವೇ ಪ್ರಯೋಗವಿಲ್ಲವಾದ್ದರಿಂದ ಭಾವಾರ್ಥಕ ತಿಙ್ಪ್ರತ್ಯಯವಿಲ್ಲ.

ಕ್ರಿಯೆಯ ಸ್ವರೂಪ

ಕ್ರಿಯೆಯು ಯಾವಾಗಲೂ ಸಾಧ್ಯಸ್ವರೂಪವನ್ನು ತಳೆದಿರುತ್ತದೆ. ಸಾಧ್ಯತ್ವೇನ ಪ್ರತೀಯಮಾನಾ ಕ್ರಿಯಾ = ಸಾಧ್ಯಸ್ವರೂಪದಲ್ಲಿ ಪ್ರತೀತವಾಗತಕ್ಕದ್ದು ಕ್ರಿಯೆ. ಕ್ರಿಯೆಯು ಸಿದ್ಧವಾದ ಒಂದು ವಸ್ತುವಲ್ಲ. ಪ್ರತಿಯೊಂದು ಕ್ರಿಯೆಯೂ ಹಲವಾರು ವ್ಯಾಪಾರಗಳ ಸಮುದಾಯವಾಗಿರುತ್ತದೆ. 'ಪೇಟೆಗೆ ತಂದೆಯು ಹೋಗುತ್ತಾನೆ' –ಎಂದಾಗ ಹೋಗುವ ವ್ಯಾಪಾರವು ತಂದೆಯಲ್ಲಿ ಮನೆಯಿಂದ ಹೊರಟ ಕೂಡಲೇ ಹುಟ್ಟುತ್ತದೆ. ಒಂದೊಂದು ಹಜ್ಜೆಯನ್ನೆತ್ತಿ ಮುಂದೆ ಇಡುವುದೆಲ್ಲವೂ ಗಮನ ವ್ಯಾಪಾರವೇ. ಈ ವ್ಯಾಪಾರಗಳ ಸಮೂಹವೇ ಗಮನ. ಮನೆಯಿಂದ ಆರಂಭವಾದ ವ್ಯಾಪಾರವು ಪೇಟೆಯನ್ನು ಸೇರಿದಾಗ ಮುಗಿಯುತ್ತದೆ. ಒಂದೊಂದು ಹಜ್ಜೆ ಯಿಡುವಾಗಲೂ ಚಿಕ್ಕ ವ್ಯಾಪಾರಗಳಿರುತ್ತವೆ. ಆದ್ದರಿಂದ ಗಮನವೆಂಬ ಕ್ರಿಯೆ ಸಾಧ್ಯಸ್ವರೂಪವನ್ನು ತಳೆದಾಗಲೇ ಪ್ರತೀತವಾಗುತ್ತದೆ. ಆದ್ದರಿಂದ ಅದು ಒಂದು ವಾಕ್ಯದಲ್ಲಿ ಕಾರಕವಾಗುವುದೇ ಇಲ್ಲ. ಇತರ ಕಾರಕಗಳಿಂದ ಅದೇ ಜನ್ಯವಾಗುತ್ತದೆ. ಈ ಜನ್ಯತ್ವವೇ ಸಾಧ್ಯತ್ವ.

ಸಿದ್ಧಂ ಸಾಧ್ಯಾಯೋಪಯುಜ್ಯತೇ –ಎಂಬ ಒಂದು ನ್ಯಾಯ ಉಂಟು. ಸಿದ್ಧವಾದ ವಸ್ತು ಸಾಧ್ಯದ ಸಿದ್ಧಿಗೆ ಉಪಕರಿಸುತ್ತದೆ ಎಂದರ್ಥ. ಕಾರಕಗಳು ಮೊದಲು ಸಿದ್ಧವಾಗಿದ್ದು ಸಾಧ್ಯವಾದ ಕ್ರಿಯಗೆ ಉಪಕರಿಸುತ್ತವೆ. ತಿಙಂತವು ಭೂತಕಾಲ ದಲ್ಲಿದ್ದಾಗ ಆ ತಿಙಂತದಲ್ಲಿ ವಾಚ್ಯವಾದ ಕ್ರಿಯೆ ಸಿದ್ಧವಾಗಿಬಿಟ್ಟಿರುವುದರಿಂದ ಕ್ರಿಯೆಯು ಸದಾ ಸಾಧ್ಯತ್ವೇನ ಪ್ರತೀತವಾಗುತ್ತದೆ –ಎಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ? ಎಂದು ಯಾರಾದರೂ ಕೇಳಬಹುದು. ನಿಜ; ಕ್ರಿಯೆಯೂ ಭೂತಕಾಲ ದಲ್ಲಿ ನಡೆದುಹೋಗಿದ್ದರೂ ಆ ವಾಕ್ಯದಲ್ಲಿರುವ ಕಾರಕಗಳಿಂದ ಅದು ಕ್ರಮೇಣ ಸಾಧ್ಯವಾಯಿತೆಂಬುದು ಪ್ರತೀತವಾಗುತ್ತದೆ. ಕ್ರಿಯೆಯು ಹಲವಾರು ವ್ಯಾಪಾರಗಳ ಸಮುದಾಯವಾದ್ದರಿಂದ ಅದರ ನಿರ್ವರ್ತ್ಯತೆ ಮಾಸುವುದಿಲ್ಲ.

'ಗಡಿಗೆಯನ್ನು ಮಾಡುತ್ತಾನೆ' –ಎಂದಾಗ ಗಡಿಗೆಯು ಕ್ರಿಯೆಯಲ್ಲದಿದ್ದರೂ ದ್ರವ್ಯವಾಗಿದ್ದರೂ ಸಾಧ್ಯವಾದ್ದರಿಂದ ಸಾಧ್ಯಸ್ವರೂಪದಲ್ಲಿ ತೋರುತ್ತದೆ ಎಂದೇಕೆ

ಹೇಳಬಾರದು? ನಿಜ; ಅದು ಮುಂದೆ ನಿರ್ಮಾಣವಾಗಬೇಕಾಗಿದ್ದರೂ ಅದು ಹಂತಹಂತವಾಗಿ ನಿರ್ಮಾಣವಾಗುವ ಸಾಧ್ಯತಾಸ್ಥಿತಿಗಳೂ ಮಣ್ಣು ರೂಪಾಂತರ ಹೊಂದುವ ವಿಕಾರಾವಸ್ಥೆಗಳೂ ಪ್ರತೀತವಾಗುವುದಿಲ್ಲ. ಗಡಿಗೆಯ ಒಂದು ಸಿದ್ಧವಾದ ಮೂರ್ತಿಯೇ ಬುದ್ಧಿಗೋಚರವಾಗುತ್ತದೆ. ಇದೇ ಬೌದ್ಧಪದಾರ್ಥ. ಈ ಬೌದ್ಧ ಪದಾರ್ಥವು ಬಾಹ್ಯರೂಪವನ್ನು ತಳೆದಾಗ 'ಗಡಿಗೆಯನ್ನು ಮಾಡಿದನು' ಎಂಬ ವ್ಯವಹಾರ ಬರುತ್ತದೆ.

ಸಿದ್ಧವಸ್ತು ಮಾತ್ರ ಇನ್ನೊಂದು ಕ್ರಿಯೆಗೆ ಉಪಕರಿಸುವ ಶಕ್ತಿಯನ್ನು ಪಡೆದಿರುತ್ತದೆಯಾದ್ದರಿಂದ ಕಾರಕವಾಗಬಲ್ಲದು. ಸಾಧ್ಯವಾದ ತಿಙಂತಬೋಧ್ಯ ಕ್ರಿಯೆಯು ಯಾವುದಕ್ಕೂ ಕಾರಕವಾಗದು. ಆದ್ದರಿಂದ ಸಾಧ್ಯತ್ವವೆಂದರೆ '**ಕ್ರಿಯಾಂತರಾ ಕಾಂಕ್ಷಾನುತ್ಥಾಪಕತಾವಚ್ಛೇದಕತ್ವಂ ಸಾಧ್ಯತ್ವಂ**' ಎಂದು ಲಕ್ಷಣವನ್ನು ವೈಯಾಕರಣರು ಹೇಳುತ್ತಾರೆ. ಯಾವುದನ್ನು ಹೇಳಿದರೆ ಇನ್ನೊಂದು ಕ್ರಿಯೆಯ ಆಕಾಂಕ್ಷೆ ಹುಟ್ಟು ವುದಿಲ್ಲವೋ ಅಂತಹ ಪದಾರ್ಥದ ಧರ್ಮವೇ ಸಾಧ್ಯತ್ವವೆಂದು ಅಭಿಪ್ರಾಯ.

ಆದರೆ ಕೃದಂತದಲ್ಲಿ ಈ ಕ್ರಿಯೆಯ ಸ್ವರೂಪವು ಬದಲಾಗುತ್ತದೆ. '**ಕೃದಭಿ ಹಿತೋ ಭಾವಃ ದ್ರವ್ಯವತ್ ಪ್ರಕಾಶತೇ**' ಎಂದು ವ್ಯಾಕರಣಶಾಸ್ತ್ರದ ಇನ್ನೊಂದು ಪ್ರಮೇಯ. 'ಕೃತ್‌ಪ್ರತ್ಯಯದಿಂದ ಉಕ್ತವಾದ ಭಾವವು ದ್ರವ್ಯದಂತೆ ಪ್ರಕಾಶಗೊಳ್ಳು ತ್ತದೆ.' ದ್ರವ್ಯವಾದ ಘಟಪಟಗಳಂತೆ ಕಾರಕಧರ್ಮವನ್ನು ಪಡೆದು ಕ್ರಿಯಾಂತರದ ಉತ್ಪತ್ತಿಗೆ ಕಾರಣವಾಗಬಹುದು. ಉದಾ:

೧. ಶ್ರೀರಾಮನು ರಾವಣನನ್ನು ವಧಿಸಿದನು. ಈ **ವಧೆಯನ್ನು** ದೇವತೆಗಳು ಹೊಗಳಿದರು.
೨. ಆತನು ಧಾನ್ಯವನ್ನು ಮಾರುತ್ತಿದ್ದನು. **ಮಾರುವುದರಿಂದ** ಧನವನ್ನು ಸಂಪಾದಿಸಿದನು.
೩. ಅವಳೂ **ನರ್ತನದಿಂದ** ವಿಖ್ಯಾತಳಾದಳು.
೪. **ವಿದ್ಯಾರ್ಜನೆಗೆ** ಪ್ರಯತ್ನಿಸುತ್ತಾನೆ.
೫. **ಭಯದಿಂದ** ಹಕ್ಕಿಗಳು ಹಾರಿದವು.
೬. **ಜಯದ** ಹಾದಿಯಲ್ಲಿ ಆತನು ಮುನ್ನಡೆದನು.
೭. **ಓದುವುದರಲ್ಲಿ** ಅವಳು ಮಗ್ನಳಾದಳು.
೮. ಕಥೆಗಳ **ಬರಹದಲ್ಲಿ** ಈತನು ತೊಡಗಿದ್ದಾನೆ.

ಷಷ್ಠೀವಿಭಕ್ತಿ

ಷಷ್ಠೀಶೇಷೇ (೨-೩-೫೦)

ಹೇಳಿ ಉಳಿದದ್ದು ಶೇಷ. ಈ ಸೂತ್ರಕ್ಕಿಂತ ಹಿಂದೆ ವಿಭಕ್ತಿಗಳನ್ನು ಯಾವಯಾವ ಅರ್ಥಗಳಲ್ಲಿ ಹೇಳಲಾಗಿದೆಯೋ ಅವನ್ನು ಬಿಟ್ಟು ಉಳಿದ ಅರ್ಥವು ಶೇಷ. ಇನ್ನೊಂದು ಪದಾರ್ಥದೊಡನೆ ಇರುವ ಸಂಬಂಧವನ್ನು ತಿಳಿಸುವುದಕ್ಕಾಗಿ ವಿಭಕ್ತಿಗಳನ್ನು ಹೇಳಿರುವುದರಿಂದ ಅವುಗಳ ಅರ್ಥವು ಸಂಬಂಧ. ಹಿಂದೆ ಹೇಳಿದವು

ಕಾರಕವಿಭಕ್ತಿಗಳಾದ್ದರಿಂದ ಕ್ರಿಯಾನಿರೂಪಿತಕರ್ತೃತ್ವ, ಕ್ರಿಯಾನಿರೂಪಿತಕರ್ಮತ್ವಾದಿಗಳು ಕಾರಕವಿಭಕ್ತ್ಯರ್ಥಗಳು. ಪ್ರಥಮಾವಿಭಕ್ತಿಯು ಮಾತ್ರ ಪ್ರಾತಿಪದಿಕಾರ್ಥವನ್ನು ಅನುವಾದಿಸುತ್ತದೆ. 'ತಿಙ್‌ಸಮಾನಾಧಿಕರಣೇ ಪ್ರಥಮಾ' ಎಂಬ ವಾರ್ತಿಕದ ಪ್ರಕಾರ ತಿಙರ್ಥವೇ ಪ್ರಥಮಾವಿಭಕ್ತಿಯ ಅರ್ಥವಾಗುತ್ತದೆ. ಆಗ ಕರ್ತರಿಪ್ರಯೋಗದಲ್ಲಿ ಕರ್ತೃವೂ ಕರ್ಮಣಿಪ್ರಯೋಗದಲ್ಲಿ ಕರ್ಮವೂ ಪ್ರಥಮಾವಿಭಕ್ತ್ಯರ್ಥವಾಗುತ್ತದೆ. ಈ ಅರ್ಥಗಳೆಲ್ಲವೂ ಉಕ್ತವಾಗಿರುವುದರಿಂದ ಉಳಿದ ಸಂಬಂಧವನ್ನು ಸಂಬಂಧಸಾಮಾನ್ಯವೆನ್ನಬಹುದು. ಅದೇ ಶೇಷಪದದ ಅರ್ಥ. ಏವಂ ಚ ಸಂಬಂಧಸಾಮಾನ್ಯವನ್ನು ತಿಳಿಸುವಾಗ ಷಷ್ಠೀವಿಭಕ್ತಿಯು ಬರುತ್ತದೆ ಎಂದು ಸೂತ್ರಾರ್ಥ.

ಸಂಬಂಧಗಳು ನಾನಾ ಬಗೆಯಾದವು. **ಏಕಶತಂಸಂಬಂಧಾಃ** – ನೂರೊಂದು ಸಂಬಂಧಗಳಿವೆಯೆಂದು ಮಹಾಭಾಷ್ಯದಲ್ಲಿ ಹೇಳಿದೆ. ಸ್ವಸ್ವಾಮಿಭಾವ, ಜನ್ಯಜನಕಭಾವ, ಅವಯವಾವಯವಿಭಾವ, ವಾಚ್ಯವಾಚಕಭಾವ –ಮುಂತಾದ ಕೆಲವು ಸಂಬಂಧಗಳು ಪ್ರಸಿದ್ಧವಾದವು. ಉದಾ–

ಸ್ವಸ್ವಾಮಿಭಾವ : ದೇವದತ್ತನ ಮನೆ. ದೇವದತ್ತನು ಸ್ವಾಮಿ, ಮನೆಯು ಸ್ವ(ಅಧೀನವಾದ ಸ್ವತ್ತು)

ಜನ್ಯಜನಕಭಾವ : ಧೃತರಾಷ್ಟ್ರನ ಮಗ ದುರ್ಯೋಧನ. ಧೃತರಾಷ್ಟ್ರನು ಜನಕ, ದುರ್ಯೋಧನನು ಜನ್ಯ.

ಅವವಾವಯುವಿಭಾವ : ಮರದ ಕೊಂಬೆ. ಮರವು ಅವಯವಿ. ಕೊಂಬೆ ಅವಯವ.

ವಾಚ್ಯವಾಚಕಭಾವ : ಶಬ್ದದ ಅರ್ಥ. ಶಬ್ದವು ವಾಚಕ, ಅರ್ಥವು ವಾಚ್ಯ.

ಹೀಗೆಯೇ ಇತರ ಸಂಬಂಧಗಳನ್ನೂ ಊಹಿಸಿಕೊಳ್ಳಬೇಕು. ಉದಾ–

೧. ಬಾಟಲಿಯ ಹಾಲು ಬಾವಿಯ ನೀರು	ಸಂಯೋಗ ಸಂಬಂಧ.
೨. ಹೂವಿನ ಸೌಂದರ್ಯ ಹುಡುಗನ ಓಟ	ಸಮವಾಯಸಂಬಂಧ. ಗುಣ, ಕ್ರಿಯೆಗಳು ಯಾವಾಗಲೂ ದ್ರವ್ಯದಲ್ಲಿ ಸಮವಾಯಸಂಬಂಧದಿಂದ ಇರುತ್ತದೆ.
೩. ವಿದ್ಯುಚ್ಛಕ್ತಿಯ ಬೆಳಕು ಎಣ್ಣೆಯ ದೀಪ	ಕಾರ್ಯಕಾರಣಭಾವ ಸಂಬಂಧ.
೪. ಭೀಮನ ತಮ್ಮ ಅರ್ಜುನ	ಇಲ್ಲಿ ಯಾವ ಸಂಬಂಧ? 'ಸಮಾನೋದರಶಯಿತತ್ವ' ಸಂಬಂಧ. ಒಂದೇ ಗರ್ಭದಲ್ಲಿ ಇದ್ದುದು ಸಂಬಂಧ.

೫. ರಮೇಶನ ಮಡದಿ ನಳಿನಿ } ಇಲ್ಲಿ ಯಾವ ಸಂಬಂಧ? ಮದುವೆಯು ಈಗ ನಾನಾಪ್ರಕಾರದಲ್ಲಿ ನಡೆಯುವುದರಿಂದ ಸರ್ವತ್ರ ಇರುವ ಸಂಬಂಧವನ್ನೇ ಹೇಳುವುದು ಕಷ್ಟ. 'ಮದುವೆಯಿಂದ ಜನ್ಯವಾದ ಪತಿಪತ್ನೀರೂಪವಾದ ದಾಂಪತ್ಯಸಂಬಂಧ' ಎಂದಿಷ್ಟೇ ಹೇಳಬಹುದು.

ಸಂಬಂಧವು ಭೇದಗರ್ಭಿತವಾದ್ದರಿಂದ ಷಷ್ಠೀವಿಭಕ್ತಿಯು ಬಂದಾಗ ಎರಡು ವಸ್ತುಗಳೂ ಭಿನ್ನವಾಗಿರುತ್ತವೆ. ರಾಜನ ಸೇವಕ, ಮಗುವಿನ ಅಂಗಿ, ದಶರಥನ ಮಗ, ಎಣ್ಣೆಯ ದೀಪ –ಇತ್ಯಾದಿ ಸ್ಥಳಗಳಲ್ಲಿ ರಾಜ–ಸೇವಕ, ಮಗು–ಅಂಗಿ –ಇವು ಅನ್ಯೋನ್ಯಭಿನ್ನವಸ್ತುಗಳು ಎಂಬುದು ಸ್ಪಷ್ಟವಾಗಿದೆ. ಕಲ್ಲಿನ ಪ್ರತಿಮೆ, ಚಿನ್ನದ ಉಂಗುರ, ಹಿತ್ತಾಳೆಯ ಪಾತ್ರೆ, ಮರದ ಬಾಗಿಲು –ಮುಂತಾದ ಉದಾಹರಣೆಗಳಲ್ಲಿ ಭೇದವು ಸ್ಪಷ್ಟವಾಗಿ ತೋರುವುದಿಲ್ಲ. ಕಲ್ಲೇ ಪ್ರತಿಮೆಯಾಗಿದೆ, ಚಿನ್ನವೇ ಉಂಗುರವಾಗಿದೆ, ಮರವೇ ಬಾಗಿಲಾಗಿದೆ. ಆದ್ದರಿಂದ ಇಲ್ಲಿ ಷಷ್ಠೀ ಹೇಗೆ ಬರುತ್ತದೆ ಎಂಬ ಶಂಕೆ ಬರಬಹುದು. ಈ ಉದಾಹರಣೆಗಳಲ್ಲಿ ವಿಕಾರವಿಕಾರಿಭಾವಸಂಬಂಧ ಅಥವಾ ಪರಿಣಾಮಪರಿಣಾಮಿಭಾವಸಂಬಂಧವಿರುತ್ತದೆ. ಕಲ್ಲು ವಿಕಾರಿ, ಪ್ರತಿಮೆ ಅದರ ವಿಕಾರ; ಚಿನ್ನ ವಿಕಾರಿ, ಉಂಗುರ ಅದರ ವಿಕಾರ. ಒಂದು ವಸ್ತುವಿನ ರೂಪಾಂತರವು ವಿಕಾರವೆನಿಸುತ್ತದೆ. ಕೀಳು ಅರ್ಥದಲ್ಲಿ ಅದನ್ನು ಗ್ರಹಿಸಬಾರದು. ಕಲ್ಲು ಎಂದರೆ ಯಾವ ರೂಪಾಂತರವನ್ನೂ ಹೊಂದದ ಬಂಡೆ. ಅದನ್ನು ಶಿಲ್ಪಿಯು ಕೆತ್ತಿ ಒಂದು ಆಕೃತಿಯ ರೂಪಕ್ಕೆ ತಿರುಗಿಸುತ್ತಾನೆ. ಪ್ರಕೃತಿಯು ವಿಕೃತಿಯಾಗಿದೆ. ಅದು ಭಿನ್ನವಾದ್ದರಿಂದಲೇ ಪ್ರತಿಮೆ, ವಿಗ್ರಹ ಎನ್ನುತ್ತೇವೆ. ಬರಿಯ ಬಂಡೆಯನ್ನು ಯಾರೂ ಪ್ರತಿಮೆ ಎನ್ನುವುದಿಲ್ಲ. ರಾಜ–ಸೇವಕ, ಮಗು–ಅಂಗಿಗಳಿರುವಂತೆ ಅವು ಭಿನ್ನಪದಾರ್ಥಗಳಲ್ಲದಿದ್ದರೂ ಆಕೃತಿಭೇದ, ನಾಮಭೇದ, ಉಪಯೋಗಭೇದಗಳು ಇದ್ದೇ ಇವೆ. ಆದ್ದರಿಂದ ಷಷ್ಠೀವಿಭಕ್ತಿ ಬರುತ್ತದೆ. ವಸ್ತುಭೇದವೇ ಅವೆರಡಕ್ಕೂ ಇರಬೇಕಾಗಿಲ್ಲ. ಹೀಗೆಯೇ ಮಣ್ಣಿನ ಗಡಿಗೆ, ಹತ್ತಿಯ ಬಟ್ಟೆ, ಕಲ್ಲಿನ ಚೂರು –ಮುಂತಾದ ಸ್ಥಳಗಳಲ್ಲಿಯೂ ತಿಳಿಯಬೇಕು. 'ಶ್ರೀರಾಮನು ವಿಷ್ಣುವಿನ ಅವತಾರ' ಎಂಬಲ್ಲಿ ಮನುಷ್ಯಾಕೃತಿ, ಭುಜದ್ವಯ –ಮುಂತಾದ ಉಪಾಧಿಗಳಿಂದ ಭೇದವನ್ನು ಹೇಳುತ್ತೇವೆ. ಶ್ರೀರಾಮನು ಸಾಕ್ಷಾದ್‌ವಿಷ್ಣುವೇ ಎಂಬಲ್ಲಿ ಉಪಾಧಿಗಳನ್ನು ಗಣಿಸದೆ ಅಭೇದವನ್ನು ಹೇಳುತ್ತೇವೆ. ಇದು ದಿಗ್‌ದರ್ಶನ. ಹೀಗೆಯೇ ಅನ್ಯತ್ರ ಊಹಿಸಿಕೊಳ್ಳಬಹುದು.

ರಾಹೋಃ ಶಿರಃ –ರಾಹುವಿನ ತಲೆ ಎಂಬ ಪ್ರಯೋಗ ಹೇಗೆ? ಪೌರಾಣಿಕ ಕಥೆಯ ಪ್ರಕಾರ ಒಬ್ಬ ರಾಕ್ಷಸನ ಕತ್ತನ್ನು ವಿಷ್ಣುವು ಕತ್ತರಿಸಿದನು. ಆ ರಾಕ್ಷಸನು ಅಮೃತವನ್ನು ಕುಡಿದದ್ದರಿಂದ ಸಾಯಲಿಲ್ಲ. ಆತನ ತಲೆ ರಾಹುವೆನಿಸಿತು. ಉಳಿದ ದೇಹವೇ ಕೇತುವೆನಿಸಿತು. ಶಿರಸ್ಸೇ ರಾಹುವಾಗಿರುವಾಗ ರಾಹುವಿನ ತಲೆ ಎಂಬಲ್ಲಿ

ಭೇದವನ್ನು ಉಪಪಾದಿಸುವುದು ಹೇಗೆ? ಇಲ್ಲಿಯೂ ಉಪಾಧಿಯಿಂದ ಭೇದವನ್ನು ಹೇಳಬೇಕು. ಅನೇಕ ದೇಶಕಾಲಾವಸ್ಥೆಗಳನ್ನನುಭವಿಸಿರುವುದು ರಾಹು. ಆ ಉಪಾಧಿಗಳ ವಿವಕ್ಷೆಯಿಲ್ಲದೆ ಪ್ರಕೃತ ವಿವಕ್ಷಿತವಾದದ್ದು ತಲೆ. ಆದ್ದರಿಂದ ರಾಹು ಶಿರಸ್ಸುಗಳಿಗೆ ಉಪಾಧಿಕಲ್ಪಿತವಾದ ಭೇದ ಉಂಟು. ನನ್ನ ದೇಹ –ಎನ್ನುವಾಗ ದೇಹಸಹಿತವಾದ ಜೀವಾತ್ಮ ನಾನು. ಕೇವಲ ಭೌತಿಕವಾದ ಶರೀರವು ದೇಹ. ಜೀವಾತ್ಮನನ್ನೊಪ್ಪದ ನಾಸ್ತಿಕನ ಮತದಲ್ಲಿ 'ರಾಹೋಃ ಶಿರಃ' ಎಂಬಲ್ಲಿ ಹೇಳಿದಂತೆ ಕೇವಲ ಉಪಾಧಿಗಳಿಂದ ಭೇದವನ್ನು ಹೇಳಬಹುದು. ಆ ನಾಸ್ತಿಕನು ಇನ್ನೊಬ್ಬನ ಮಗನಾಗಿರುತ್ತಾನಷ್ಟೆ. ಆತನ ಪುತ್ರತ್ವ ಮತ್ತೊಬ್ಬನ ಪಿತೃತ್ವ, ಅಧಿಕಾರ, ಸ್ಥಳ –ಮುಂತಾದ ಉಪಾಧಿಗಳಿಂದ ಕೂಡಿದ ಶರೀರವೇ 'ನಾನು'. ಈ ಉಪಾಧಿರಹಿತವಾದ ಶರೀರವು 'ದೇಹ'.

ವಿಶೇಷಣದ ಮೇಲೆ ಷಷ್ಠಿ

ಈಗೊಂದು ಶಂಕೆ ಹುಟ್ಟುತ್ತದೆ. ಸಂಬಂಧವು ಉಭಯನಿಷ್ಠವಾದದ್ದು. ಎರಡು ವಸ್ತುಗಳಿಲ್ಲದೆ ಸಂಬಂಧವೇ ಘಟಿಸುವುದಿಲ್ಲ. 'ಚೈತ್ರನ ಮನೆ' ಎಂಬಲ್ಲಿ ಚೈತ್ರನು ಸ್ವಾಮಿ, ಮನೆಯು ಅವನ ಸ್ವತ್ತು. ಮರದ ಕೊಂಬೆ ಎಂಬಲ್ಲಿ ಮರವು ಅವಯವಿ, ಕೊಂಬೆ ಅವಯವ. ಹೀಗೆ ಸ್ವಸ್ವಾಮಿಭಾವ, ಅವಯವಾವಯವಿಭಾವ ಮುಂತಾದ ಎಲ್ಲ ಸಂಬಂಧಗಳಲ್ಲಿಯೂ ಎರಡು ವಸ್ತುಗಳಿದ್ದು ಅವೆರಡರಲ್ಲೂ ಆ ಸಂಬಂಧವಿರುತ್ತದೆ. ಹೀಗಿರುವಾಗ ಸಂಬಂಧಾರ್ಥದಲ್ಲಿ ಬರುವ ಷಷ್ಠಿಯು ಯಾವ ಶಬ್ದದ ಮೇಲೆ ಬರಬೇಕು? ಚೈತ್ರನ ಮನೆ ಎಂಬಲ್ಲಿ ಚೈತ್ರಶಬ್ದದ ಮೇಲೆ ಬಂದಂತೆ ಮನೆ ಶಬ್ದದ ಮೇಲೆ ಏಕೆ ಬರುವುದಿಲ್ಲ? ಮನೆಯ ಚೈತ್ರ, ಕೊಂಬೆಯ ಮರ, ಮಗನ ಧೃತರಾಷ್ಟ್ರ –ಎಂದು ವೈಪರೀತ್ಯವೇಕೆ ಆಗಬಾರದು?

ಹಾಗಲ್ಲ. ಎರಡು ವಸ್ತುಗಳಿಗೆ ಸಂಬಂಧವನ್ನು ಹೇಳುವಾಗ ಒಂದು ವಿಶೇಷಣವಾಗಿಯೂ ಇನ್ನೊಂದು ವಿಶೇಷ್ಯವಾಗಿಯೂ ಇರುತ್ತದೆ. ವಿಶೇಷಣವು ವಿಶೇಷ್ಯವನ್ನು ನಿಯತವಾಗಿ ಬಯಸುತ್ತದೆ. 'ಬಿಳಿಯ ಬಟ್ಟೆ' ಎಂಬಲ್ಲಿ ಬಿಳಿಯ ಎಂಬುದು ವಿಶೇಷಣ. ಅದಕ್ಕೆ ನಿಯತವಾಗಿ ವಿಶೇಷ್ಯದ ಅಪೇಕ್ಷೆ ಇದೆ. ಯಾವುದು ಬಿಳಿಯ? ಎಂಬ ಆಕಾಂಕ್ಷೆಗೆ ಉತ್ತರವಾಗಿ ವಿಶೇಷ್ಯವನ್ನು ಹೇಳಬೇಕಾಗುತ್ತದೆ. ವಸ್ತ್ರ ಎಂಬುದು ನಿಯತವಾಗಿ ವಿಶೇಷಣವನ್ನು ಬಯಸುವುದಿಲ್ಲ. ಬಿಳಿಯ ಎಂದು ಹೇಳದಿದ್ದರೂ ವಸ್ತ್ರವು ತನ್ನ ಅರ್ಥವನ್ನು ತಿಳಿಸಿ ವಿಶ್ರಾಂತವಾಗುತ್ತದೆ. ಆದುದರಿಂದ ಸಂಬಂಧದ ಆಕಾಂಕ್ಷೆ ವಿಶೇಷಣದಲ್ಲಿ ಸ್ಫುಟವಾಗಿ ಬರುವುದರಿಂದ ಅದನ್ನು ಪೂರೈಸುವುದಕ್ಕಾಗಿ ವಿಶೇಷಣವಾಚಕದ ಮೇಲೆ ಷಷ್ಠೀವಿಭಕ್ತಿ ಬರುತ್ತದೆ. ವಿಶೇಷಣವೆಂದರೆ ವ್ಯಾವರ್ತಕ. ಇನ್ನೊಂದರ ಸಂಬಂಧವನ್ನು ವ್ಯಾವರ್ತಿಸಿ–ದೂರಮಾಡಿ– ತನ್ನ ಸಂಬಂಧವನ್ನು ಮಾತ್ರ ಉಳಿಸಿಕೊಳ್ಳುವುದು ವ್ಯಾವರ್ತಕ. ಅದೇ ವಿಶೇಷಣ. ಚೈತ್ರನ ಮನೆ ಎಂದು ಹೇಳಿದಾಗ ದೇವದತ್ತ ಮೊದಲಾದವರ ಸಂಬಂಧವನ್ನು ವ್ಯಾವರ್ತಿಸಿ ತನ್ನ ಸಂಬಂಧವನ್ನು ಮಾತ್ರ ಮನೆಯಲ್ಲಿ ಉಳಿಸಿಕೊಳ್ಳುವುದರಿಂದ ಚೈತ್ರ ಎಂಬುದು ವಿಶೇಷಣ. ವಿಶೇಷಣವು ಸಮಾನಾಧಿಕರಣವಿಶೇಷಣ, ವ್ಯಧಿಕರಣವಿಶೇಷಣ –ಎಂದು

ಎರಡು ವಿಧ. ಸಮಾನಾಧಿಕರಣವಿಶೇಷಣವಿದ್ದಾಗ ವಸ್ತುಭೇದವಿರುವುದಿಲ್ಲವಾದ್ದರಿಂದ ಷಷ್ಠೀ ಬರುವುದಿಲ್ಲ. ವ್ಯಧಿಕರಣವಿಶೇಷಣವಾದಾಗ ವಸ್ತುಭೇದವಿರುವುದರಿಂದ ಷಷ್ಠೀ ಬರುತ್ತದೆ. ಈ ಎರಡು ಬಗೆಯ ವಿಶೇಷಣಗಳೂ ವ್ಯಾವರ್ತಕಗಳೇ.

(ವಿಶೇಷಣವು ವಿಶೇಷ್ಯದೊಡನೆ ಅಭೇದದಿಂದ ಅನ್ವಯಿಸುತ್ತಿದ್ದರೆ ಸಮಾನಾಧಿಕರಣ ವಿಶೇಷಣವೆಂದು ಹೆಸರು. ಉದಾ:

ಆಳವಾದ ಬಾವಿ, ಹಿರಿಯ ಸಹೋದರ; ಶುಕ್ಲವಸ್ತ್ರ, ಸುಂದರ ಚಂದ್ರ.
ಆಳವಾದದ್ದೇ ಭಾವಿ, ಹಿರಿಯನೇ ಸಹೋದರ;
ಶುಕ್ಲವೇ ವಸ್ತ್ರ; ಸುಂದರನೇ ಚಂದ್ರ.

ಈ ವಿಶೇಷಣಗಳು ವಿಶೇಷ್ಯದೊಡನೆ ಅಭೇದಸಂಬಂಧದಿಂದ ಸೇರಿ ಇತರ ವ್ಯಾವರ್ತಕಗಳಾಗಿವೆ.

ವಿಶೇಷಣವು ಭೇದಸಂಬಂಧದಿಂದ ವಿಶೇಷ್ಯದೊಡನೆ ಅನ್ವಯಿಸುತ್ತಿದ್ದರೆ ವ್ಯಧಿಕರಣ ವಿಶೇಷಣವೆಂದು ಹೆಸರು. ಉದಾ:

ಗೋಪಿಯ ಬೈಸಿಕಲ್, ಮಾವನ ಮನೆ, ಸಾಹುಕಾರನ ಹಣ, ನಿನ್ನ ಕಣ್ಣು. ಗೋಪಿ ಮೊದಲಾದವು ಬೈಸಿಕಲ್ ಮೊದಲಾದವಕ್ಕೆ ವ್ಯಧಿಕರಣವಿಶೇಷಣಗಳು. ಇಲ್ಲಿ ವಿಶೇಷಣವಿಶೇಷ್ಯಗಳಿಗೆ ಅಭೇದವಿಲ್ಲ. ಏಕೆಂದರೆ ಗೋಪಿಯೇ ಬೈಸಿಕಲ್ ಅಲ್ಲ, ಮಾವನೇ ಮನೆಯಲ್ಲ, ಸಾಹುಕಾರನೇ ಹಣವಲ್ಲ,. ನೀನೇ ಕಣ್ಣಲ್ಲ.

ಆದ್ದರಿಂದ ಚೈತ್ರಶಬ್ದದ ಮೇಲೆ ಷಷ್ಠೀ ಬಂದಿದೆ. ವಾಕ್ಯಪದೀಯದಲ್ಲಿ ಭರ್ತೃಹರಿಯು ಹೇಳುತ್ತಾನೆ:

ದ್ವಿಷ್ಠೋಽಪ್ಯಸೌ ಪರಾರ್ಥತ್ವಾತ್ ಗುಣೇಷು ವ್ಯತಿರಿಚ್ಯತೇ ।
ತತ್ರಾಭಿಧೀಯಮಾನಶ್ಚ ಪ್ರಧಾನೇಽಪ್ಯುಪಯುಜ್ಯತೇ ॥

ಇದರ ಅರ್ಥ–

ಅಸೌ = ಷಷ್ಠ್ಯರ್ಥವಾದ ಸಂಬಂಧವು. ದ್ವಿಷ್ಠೋಽಪಿ = ವಿಶೇಷಣವಿಶೇಷ್ಯಗಳೆಂಬ ಎರಡು ವಸ್ತುಗಳಲ್ಲಿದ್ದರೂ, ಪರಾರ್ಥತ್ವಾತ್ = ವಿಶೇಷಣತೆಯನ್ನು ದೃಢಪಡಿಸುವುದಕ್ಕಾಗಿರುವುದರಿಂದ, ಗುಣೇಷು = ವಿಶೇಷಣಗಳಲ್ಲಿ, ವ್ಯತಿರಿಚ್ಯತೇ = ಉದ್ಭೂತವಾಗಿ (ಸ್ಫುಟವಾಗಿ) ಗೋಚರಿಸುತ್ತದೆ. ಆದ್ದರಿಂದ, ತತ್ರ = ಆ ವಿಶೇಷಣಗಳಲ್ಲಿ, ಅಭಿಧೀಯಮಾನಃ = ಷಷ್ಠೀವಿಭಕ್ತಿಯಿಂದ ಬೋಧ್ಯವಾಗಿ, ಪ್ರಧಾನೇಽಪಿ = ವಿಶೇಷ್ಯದಲ್ಲಿಯೂ, ಉಪಯುಕ್ತವಾಗುತ್ತದೆ. ಸಂಬಂಧವು ದ್ವಿಷ್ಠವಾದ್ದರಿಂದ ಅದರಲ್ಲಿಯೂ ಈ ಸಂಬಂಧವು ತೋರುತ್ತದೆ ಎಂದರ್ಥ.

ಹಿಂದಿನ ಉದಾಹರಣೆಗಳಲ್ಲಿ ಇದನ್ನು ಅನ್ವಯಿಸಿ ನೋಡಬಹುದು.

೧. 'ದೇವದತ್ತನ ಮನೆ.' ಇಲ್ಲಿ ದೇವದತ್ತ ಶಬ್ದವು ಚೈತ್ರ, ಮೈತ್ರಾದಿಗಳ ಸ್ವಾಮಿತ್ವಸಂಬಂಧವನ್ನು ವ್ಯಾವರ್ತಿಸಿ ದೇವದತ್ತನಲ್ಲಿ ಸ್ವಾಮಿತ್ವವನ್ನು ಉಳಿಸುತ್ತದೆ.

ಆದ್ದರಿಂದ ದೇವದತ್ತನು ವಿಶೇಷಣ–ವ್ಯಾವರ್ತಕ. ಆದ್ದರಿಂದ ದೇವದತ್ತ ಶಬ್ದಕ್ಕೆ ಷಷ್ಠೀ ಬಂದಿದೆ.

೨. 'ಧೃತರಾಷ್ಟ್ರನ ಮಗ ದುರ್ಯೋಧನ.' ಇಲ್ಲಿ ಧೃತರಾಷ್ಟ್ರ ಶಬ್ದವು ಅನ್ಯರ ಜನಕತ್ವವನ್ನು ವ್ಯಾವರ್ತಿಸಿ ತನ್ನಲ್ಲಿ ಜನಕತ್ವವನ್ನು ಉಳಿಸಿಕೊಳ್ಳುತ್ತದೆ. ದುರ್ಯೋಧನ ನಲ್ಲಿ ಅನ್ಯಜನ್ಯತ್ವವನ್ನು ವ್ಯಾವರ್ತಿಸುತ್ತದೆ.

೩. 'ಮರದ ಕೊಂಬೆ.' ಮರವು ಬಳ್ಳಿಯ ಸಂಬಂಧವನ್ನು ವ್ಯಾವರ್ತಿಸುತ್ತದೆ.

೪. 'ಶಬ್ದದ ಅರ್ಥ.' ಚೇಷ್ಟೆಯಿಂದ ಸೂಚಿತವಾದ ಅರ್ಥವನ್ನು ವ್ಯಾವರ್ತಿಸುತ್ತದೆ. ಸಾಮಾನ್ಯವಾಗಿ ಮಿತ್ತು ಶಬ್ದದ ಅರ್ಥವೇನು? ಹಲ್ಲಣ ಶಬ್ದದ ಅರ್ಥವೇನು? ಎಂದೇ ಹೇಳುತ್ತೇವೆ. ಇತರ ಶಬ್ದಗಳ ವ್ಯಾವೃತ್ತಿ ಇಲ್ಲಿ ತೋರುತ್ತದೆ.

ಷಷ್ಠೀವಿಭಕ್ತಿಯು ಭೇದಗರ್ಭಿತವಾದ ಸಂಬಂಧವನ್ನು ಮಾತ್ರ ಬೋಧಿಸುತ್ತದೆ. ವಿಶೇಷಣವಿಶೇಷ್ಯಗಳಿಗೆ ಅಭೇದವಿದ್ದಾಗ ಇದು ಬರುವುದಿಲ್ಲ. 'ಬಿಳಿಯ ಬಟ್ಟೆ, ಹಸಿರು ಹುಲ್ಲು, ಉದ್ದನೆಯ ಹಗ್ಗ' –ಇತ್ಯಾದಿ ಸ್ಥಳಗಳಲ್ಲಿ ಷಷ್ಠೀವಿಭಕ್ತಿ ಇಲ್ಲ. 'ಬಿಳಿಯ' ಎಂದರೆ ಬಿಳುಪುಗುಣವುಳ್ಳ ಎಂದೇ ಅರ್ಥ. ಅದೇ ಬಟ್ಟೆಯಾಗಿದೆ. ಸಂಸ್ಕೃತದಲ್ಲಿಯೂ ಶುಕ್ಲಃ ಪಟಃ, ತೃಣಂ ಹರಿತ್, ದೀರ್ಘಾ ರಜ್ಜುಃ –ಇಂತಹ ಕಡೆ ಷಷ್ಠೀ ಬರುವುದಿಲ್ಲ. ಇಲ್ಲಿ ಅಭೇದಸಂಬಂಧದಿಂದ ವಿಶೇಷಣವಿಶೇಷ್ಯಭಾವವಿದೆ. ಯಾವುದು ಶುಕ್ಲವೋ ಅದೇ ಪಟ. ಯಾವುದು ದೀರ್ಘವೋ ಅದೇ ರಜ್ಜು. 'ದೇವದತ್ತನ ಮನೆ' –ಮುಂತಾದ ಉದಾಹರಣೆಗಳಲ್ಲಿ ಅಭೇದಸಂಬಂಧವಿಲ್ಲ. ದೇವದತ್ತನೇ ಮನೆಯಲ್ಲ. ಮರವೇ ಕೊಂಬೆಯಲ್ಲ. ಅಭೇದವು ಸಂಬಂಧವೇ ಅಲ್ಲವೆಂದೂ ಕೆಲವು ವೈಯಾಕರಣರ ಮತವಿದೆ.

ಶೇಷಷಷ್ಠಿಯು ಸಂಬಂಧಸಾಮಾನ್ಯದಲ್ಲಿ ಬರುವುದರಿಂದ ಕೆಲವು ಕಡೆ ಇತರ ವಿಭಕ್ತ್ಯರ್ಥದಲ್ಲಿಯೂ ಬರುತ್ತದೆ ಉದಾಃ

ಅವನಿಂದ ಹೇಳಿಕೆ ಆಗಿದೆ – ಅವನ ಹೇಳಿಕೆ ಆಗಿದೆ.
ಹುಲಿಯಿಂದ ಭಯ – ಹುಲಿಯ ಭಯ.
ಎಲೆಯಲ್ಲಿ ಊಟ – ಎಲೆಯ ಊಟ.
ತಣ್ಣೀರಿನಲ್ಲಿ ಸ್ನಾನ – ತಣ್ಣೀರಿನ ಸ್ನಾನ.

ಪಂಪನ ಕೃತಿ, ಭಾರತದ ಶ್ರವಣ – ಇದು ಕಾರಕಷಷ್ಠಿ. ಪಾಕ್ಷಿಕವಾಗಿ ಸಂಬಂಧ ಸಾಮಾನ್ಯಷಷ್ಠಿಯೂ ಇಲ್ಲಿ ಬರಬಹುದು. ಶಾಬ್ದಬೋಧದಲ್ಲಿ ವ್ಯತ್ಯಾಸವಿರುತ್ತದೆ. ಕಾರಕಷಷ್ಠಿಯೂ ಶೇಷಷಷ್ಠಿಯೂ ಒಂದೇ ರೂಪವನ್ನು ತಳೆದರೂ ಅರ್ಥದಲ್ಲಿ ಸ್ವಲ್ಪ ಭೇದವಿರುತ್ತದೆ. ಕಾರಕಷಷ್ಠಿಯಲ್ಲಿರುವ ದೃಢತೆ, ತೀವ್ರತೆ, ಆಸಕ್ತಿ –ಮುಂತಾದವು ಶೇಷಷಷ್ಠಿಯಲ್ಲಿ ನಿಯತವಾಗಿ ತೋರುವುದಿಲ್ಲ. ಇದ್ದರೂ ವ್ಯಕ್ತವಾಗುವುದಿಲ್ಲ. 'ಲಕ್ಷ್ಮಣನೂ ಶತ್ರುಘ್ನನೂ ಅಣ್ಣತಮ್ಮಂದಿರು' –ಎಂಬ ವಾಕ್ಯವನ್ನು ನೋಡಬಹುದು. ಅವರಿಬ್ಬರಿಗೂ ತಾಯಿತಂದೆಯರು ಒಬ್ಬ ವ್ಯಕ್ತಿಗಳೇ ಆದ್ದರಿಂದ ಅಣ್ಣತಮ್ಮಂದಿರೆಂಬ

ಸೋದರತ್ವವು ಘನಿಷ್ಠವಾಗಿದೆ. 'ರಾಮಲಕ್ಷ್ಮಣರು ಅಣ್ಣತಮ್ಮಂದಿರು' ಎಂದಾಗ ಸೋದರತ್ವದಲ್ಲಿ ಸ್ವಲ್ಪ ಶೈಥಿಲ್ಯವು ಗೋಚರಿಸುತ್ತದೆ. ಏಕೆಂದರೆ, ತಾಯಂದಿರು ಒಬ್ಬರೇ ಅಲ್ಲ. 'ರಾಮಲಕ್ಷ್ಮಣರು ಖಾಸಾ ಅಣ್ಣತಮ್ಮಂದಿರಲ್ಲ' –ಎಂದೂ ಹೇಳ ಬಹುದು. 'ಕೌರವರೂ ಪಾಂಡವರೂ ಅಣ್ಣತಮ್ಮಂದಿರು' –ಎಂದಾಗ ಸೋದರತ್ವವು ಇನ್ನೂ ಶಿಥಿಲವಾಗಿ ಬಿಡುತ್ತದೆ.

'ಭಾರತವು ವ್ಯಾಸರ ನಿರ್ಮಾಣ.' ಇಲ್ಲಿ ಕರ್ತರಿಷಷ್ಠೀ ಬಂದಾಗ ಕಾರಕಷಷ್ಠಿ. ನಿರ್ಮಾಣಕ್ರಿಯೆ ಪೂರ್ತಿಯಾಗಿ ವ್ಯಾಸರಲ್ಲಿದೆ. ಹದಿನೆಂಟು ಪರ್ವಗಳನ್ನು ಅವರೇ ಶ್ರದ್ಧೆಯಿಂದ ಬರೆದಿದ್ದಾರೆ –ಮುಂತಾದ ಅರ್ಥ ಅಲ್ಲಿ ತೋರುತ್ತದೆ. ಶೇಷಷಷ್ಠಿಯಾದರೆ ಅದೆಲ್ಲವೂ ತೋರುವುದಿಲ್ಲ. ಹದಿನೈದು ಪರ್ವಗಳನ್ನು ಅವರು ಬರೆದಿರಬಹುದು. ಇನ್ನೂ ಮೂರನ್ನು ಅವರ ಶಿಷ್ಯರು ಬರೆದಿರಬಹುದು. ಅಥವಾ ವ್ಯಾಸರೇ ಭಾರತವನ್ನು ಇನ್ನೊಬ್ಬರಿಂದ ಬರೆಸಿರಬಹುದು. ಪುಸ್ತಕದ ನಿರ್ಮಾಣಕ್ಕೆ ವ್ಯಾಸರ ಸಂಬಂಧ ದೂರದಲ್ಲಿರಬಹುದು –ಎಂಬ ಅರ್ಥಸಾಮಾನ್ಯವು ಶೇಷಷಷ್ಠಿಯಲ್ಲಿ ತೋರುತ್ತದೆ. ದೃಢವಾದ ಸಂಬಂಧ ಇರಬಹುದು ಅಥವಾ ಇಲ್ಲದಿರಬಹುದು. ಕಾರಕಷಷ್ಠಿಯೆಂದಾಗ ನಿಯತಸಂಬಂಧವಿದೆಯೆಂಬುದು ತೋರುತ್ತದೆ. ಇದು ಥಟ್ಟನೆ ಶ್ರೋತೃವಿಗೆ ತಿಳಿಯುವುದಿಲ್ಲ. ಸಂದರ್ಭವಶದಿಂದ ಗೊತ್ತಾಗುವ ಅರ್ಥ ಇದು. ಶೇಷಷಷ್ಠಿಯು ಬಂದಾಗ ಕರ್ತೃತ್ವ, ಕರ್ಮತ್ವಗಳು ತೋರುವುದಿಲ್ಲ. ರೂಪ ಒಂದೇ ಆದರೂ ಶಾಸ್ತ್ರಜಿಜ್ಞಾಸೆಯಲ್ಲಿ ಫಲಭೇದವಾಗುತ್ತದೆ. ಲೋಕವ್ಯವಹಾರದಲ್ಲಿ ಫಲಭೇದವೇನೂ ಇಲ್ಲ.

ಇನ್ನೊಂದು ವಿಷಯವನ್ನಿಲ್ಲಿ ಹೇಳುವುದು ಉತ್ತಮ. ಕೆಲವು ವಸ್ತುಗಳಿಗೆ ಪರಸ್ಪರ ಸಂಬಂಧವಿದ್ದರೂ ಷಷ್ಠೀವಿಭಕ್ತಿ ಬರುವುದಿಲ್ಲ. ಉದಾಹರಣೆಗೆ, ಸಮಾನಾಧಿ ಕರಣಸಂಬಂಧವಿದ್ದಾಗ ಷಷ್ಠೀ ಬರುವುದಿಲ್ಲ. ಘಟದಲ್ಲಿ ದ್ರವ್ಯತ್ವ, ಕಠಿನತ್ವಗಳೆಂಬ ಎರಡು ಧರ್ಮಗಳಿವೆ. ಈ ಧರ್ಮಗಳಿಗೆ ಅಧಿಕರಣವಾದ ಘಟ ಒಂದೇ. ಈ ಎರಡು ಧರ್ಮಗಳು ಸಮಾನವಾದ (ಒಂದೇ) ಅಧಿಕರಣದಲ್ಲಿರುವುದರಿಂದ ಇವುಗಳಿಗೆ ಸಾಮಾನಾಧಿಕರಣ್ಯಸಂಬಂಧವಿದೆ. ಆದರೆ ದ್ರವ್ಯತ್ವದ ಕಠಿನತ್ವವೆಂದೋ ಕಠಿನತ್ವದ ಅನ್ಯತ್ವವೆಂದೋ ಹೇಳಲಾಗದು. ಇಂತಹ ಸಂಬಂಧವನ್ನು ವೃತ್ತ್ಯನಿಯಾಮಕಸಂಬಂಧ ವೆಂದು ಹೇಳುತ್ತಾರೆ. ಷಷ್ಠೀ ಬಂದಿರುವ ಉದಾಹರಣೆಗಳಲ್ಲಿರುವ ಸ್ವಸ್ವಾಮಿಭಾವ ಸಂಬಂಧ ಮುಂತಾದವು ವೃತ್ತಿನಿಯಾಮಕಗಳು.

ಇಷ್ಟಾದರೂ ಕೆಲವು ಕಡೆ ನಿಯಮವನ್ನೇ ಹೇಳುವುದು ಅಶಕ್ಯ. ನೆಲದ ಮೇಲೆ ಗಡಿಗೆಯಿದೆ. ನೆಲ ಗಡಿಗೆಗೆ ಆಧಾರ. ಇವೆರಡಕ್ಕೂ ಸಂಯೋಗಸಂಬಂಧವಿದೆ. ಆದರೆ 'ನೆಲದ ಗಡಿಗೆ' ಎಂದು ಹೇಳಲಾಗುವುದಿಲ್ಲ. ಆದರೆ ಬಾಟಲಿಯ ನೀರು, ಕುದುರೆಯ ಸವಾರ –ಮುಂತಾದ ಕಡೆ ಷಷ್ಠೀ ಬರುತ್ತದೆ. ಲೌಕಿಕ ಪ್ರಯೋಗವೇ ಇಲ್ಲಿ ನಿಯಾಮಕ.

* * * *

ವಿಭಕ್ತಿ-ವಿಭಕ್ತಿಪಲ್ಲಟ

ಕಾರಕವೆಂದರೇನು, ಅದು ಎಷ್ಟು ವಿಧ, ಆಯಾ ಅರ್ಥವನ್ನು ಬೋಧಿಸುವ ಸಾಮರ್ಥ್ಯವುಳ್ಳ ವಿಭಕ್ತಿಗಳಾವುವು -ಎಂಬುದನ್ನು ತಕ್ಕಮಟ್ಟಿಗೆ ಪರಿಚಯಮಾಡಿ ಕೊಂಡದ್ದಾಯಿತು. ಸಂಸ್ಕೃತದಲ್ಲಿ ಆಯಾ ಕಾರಕಗಳ ಮೇಲೆ ಬರುವ ಪ್ರಥಮಾ ದ್ವಿತೀಯಾದಿ ವಿಭಕ್ತಿಗಳೇ ಕನ್ನಡದಲ್ಲಿಯೂ ಪ್ರಾಯೇಣ ಬರುತ್ತವೆ. ಭಾಷೆಯು ಬೇರೆಯೇ ಹೊರತು ಶಬ್ದಶಕ್ತಿಯನ್ನು ಅಭಿವ್ಯಂಜಿಸುವ ವಿಧಾನವು ಏಕರೂಪ ವಾಗಿದೆಯೆಂದೂ ಅರಿವಾಯಿತು. ಉಪಪದ ವಿಭಕ್ತಿಗಳೆಂಬ ಇನ್ನೊಂದು ಪ್ರಕಾರವು ಸಂಸ್ಕೃತದಲ್ಲಿರುವಂತೆ ಕನ್ನಡದಲ್ಲಿಯೂ ಇದೆ. ಅದನ್ನೀಗ ಪರಿಶೀಲಿಸಬೇಕಾಗಿದೆ. ಹಾಗೆಯೇ ವಿಭಕ್ತಿಪಲ್ಲಟವು ಏಕಾಗುತ್ತದೆ, ಅದು ಯಾವುದಾದರೊಂದು ತತ್ತ್ವಕ್ಕೆ ಒಳಪಟ್ಟಿದೆಯೆ ಅಥವಾ ತತ್ತ್ವಬಾಹಿರವಾಗಿ ನುಸುಳಿಬಿಡುತ್ತದೆಯೆ -ಎಂಬುದನ್ನೂ ಯಥಾಮತಿಯಾಗಿ ಪರೀಕ್ಷಿಸಬೇಕಾಗಿದೆ. ಪ್ರಥಮಾವಿಭಕ್ತಿಯಿಂದ ಆರಂಭಿಸಿ ವಿಚಾರಿಸುತ್ತ ಹೋದಾಗ ಇನ್ನು ಕೆಲವು ಅಂಶಗಳು ಬೆಳಕಿಗೆ ಬರಬಹುದು. ಸಮಗ್ರವಾಗಿ ಎಲ್ಲವಿಭಕ್ತಿಪ್ರತ್ಯಯಗಳ ಸ್ವರೂಪಸಾಮರ್ಥ್ಯಗಳೂ ತಿಳಿಯಬಹುದು.

ಪ್ರಥಮಾವಿಭಕ್ತಿ

ಕರ್ತರಿ ಪ್ರಯೋಗದಲ್ಲಿ ಪ್ರಥಮಾವಿಭಕ್ತಿಯು ಕರ್ತ್ರರ್ಥದಲ್ಲಿ ಇರುವುದೆಂದೂ ಕರ್ಮಣಿಪ್ರಯೋಗದಲ್ಲಿ ಕರ್ಮಾರ್ಥದಲ್ಲಿರುವುದೆಂದೂ ಹಿಂದೆ ತಿಳಿಸಿದೆ. ಈ ಕರ್ತೃಕರ್ಮಗಳೆರಡೂ ತಿಙ್ಪ್ರತ್ಯಯದಿಂದ ಅಭಿಹಿತವಾಗಿರುತ್ತವೆ. ಆದ್ದರಿಂದ ಕರ್ತರಿ ತೃತೀಯೆಯೂ ಕರ್ಮಣಿದ್ವಿತೀಯೆಯೂ ಬರುವುದಿಲ್ಲ. '**ತಿಙ್ಸಮಾನಾಧಿಕರಣೇ ಪ್ರಥಮಾ, ಅಭಿಹಿತೇ ಪ್ರಥಮಾ**' ಎಂಬ ವಾರ್ತಿಕಗಳಿಗೆ ಅನುಗುಣವಾಗಿಯೇ ಕನ್ನಡದಲ್ಲಿಯೂ ಪ್ರಥಮಾವಿಭಕ್ತಿ ಬರುತ್ತದೆ. ಆದರೆ ಕನ್ನಡದಲ್ಲಿ ತಿಙ್ಸಾಮಾನಾಧಿ ಕರಣ್ಯವಿಲ್ಲದಿದ್ದರೂ, ಕರ್ತೃವು ಕೃತ್ಪ್ರತ್ಯಯದಿಂದ ಅಭಿಹಿತವಾಗಿದ್ದರೆ ಪ್ರಥಮಾ ಬರುತ್ತದೆ. ಉದಾ: 'ಅವಂ ಪೇಳೆ -ಅವನು ಹೇಳಲು; ಸೇವಕನು ಹೋಗಲಾಗಿ.' ಇವು ಕರ್ತ್ರರ್ಥದಲ್ಲಿ ಬಂದ ಕೃತ್ಪ್ರತ್ಯಯಗಳು. ಸತಿಸಪ್ತಮಿಯ ಅರ್ಥದಲ್ಲಿ ಈ ಬಗೆಯ ಪ್ರಯೋಗ ಉಂಟು. ಕರ್ತೃಕರ್ಮಗಳ ಅರ್ಥವೇ ಇದಕ್ಕಿರುವುದರಿಂದ ಇದು ಕಾರಕವಿಭಕ್ತಿ ಎನ್ನಲಡ್ಡಿಯಿಲ್ಲ. ಕನ್ನಡದ ನಾಗವರ್ಮನೂ ಸಹ '**ಅಥ ಕಾರಕಂ ನಿರೂಪ್ಯತೇ**' (ಸೂತ್ರ ೭೫) ಎಂದು ಸೂತ್ರಿಸಿ ಪ್ರಥಮಾವಿಭಕ್ತಿಯನ್ನು ಹೇಳಿದ್ದಾನೆ. ಅದು ಹೇಗೆ ಕಾರಕವಿಭಕ್ತಿಯಾಗುತ್ತದೆ ಎಂಬುದನ್ನು ಮಾತ್ರ ಹೇಳಿಲ್ಲ.

ಅಪದಂ ನ ಪ್ರಯುಂಜೀತ -ಎಂದು ನಿಷೇಧವಿರುವುದರಿಂದ ಪ್ರಾತಿಪದಿಕಕ್ಕೆ ಪದತ್ವವನ್ನು ತರುವ ಉದ್ದೇಶಕ್ಕಾಗಿ ಪ್ರಥಮಾವಿಭಕ್ತಿ ಬರುತ್ತದೆ. ಶಬ್ದಸಾಧುತ್ವವೇ ಉದ್ದಿಷ್ಟವಾದದ್ದು -ಎಂಬ ಇನ್ನೊಂದು ಪಕ್ಷವೂ ಇದೆ. ನಾಗವರ್ಮನು-

ಲಿಂಗಾರ್ಥವಚನ ಮಾತ್ರೇ ಪ್ರಥಮಾ (೩೬) ಎಂದು ಸೂತ್ರಸಿದ್ದಾನೆ. ಲಿಂಗಕ್ಕೆ- ದೇವಂ, ನೃಪಂ, ನಲ್ಲಂ, ನಲ್ಲಳ್, ಆಲಂ, ಜಲಂ. ಅರ್ಥಕ್ಕೆ- ಉಚ್ಚಂ, ನೀಚಂ,

ಉದ್ದಂ, ಬಿದ್ದಂ. ವಚನಕ್ಕೆ- ಒಂದನುಂ, ಎರಡನುಂ -ಎಂದು ಉದಾಹರಿಸುತ್ತಾನೆ. ಕೇಶಿರಾಜನೂ ಇದೇ ಜಾಡನ್ನು ಹಿಡಿದಿದ್ದಾನೆ. ಪಾಣಿನಿಯ 'ಪ್ರಾತಿಪದಿಕಾರ್ಥಲಿಂಗ ಪರಿಮಾಣವಚನಮಾತ್ರೇ ಪ್ರಥಮಾ' ಎಂಬ ಸೂತ್ರದ ಅನುಕರಣವಿದು. ಇವರಿಬ್ಬರೂ ಪಾಣಿನಿಸೂತ್ರಾರ್ಥವನ್ನು ಸರಿಯಾಗಿ ಗ್ರಹಿಸಿಲ್ಲ.

ಅದಿರಲಿ. ಕೇಶಿರಾಜನು-

ಇಂತೀ ಪೇಳ್ದ ವಿಭಕ್ತಿಗ
ಳೆಂತುಂ ಪಲ್ಲಟಿಸುಗುಂ ಯಥೇಷ್ಟಂ ಪ್ರಥಮಾ
ರ್ಥಂ ತೋರೆಯುಂ ದ್ವಿತೀಯಾ
ರ್ಥಂ ತೋರೆಯುಮಲ್ಲಿ ಷಷ್ಠಿ ದೊರೆಕೊಂಡಿರ್ಕುಂ ॥ — (ಸೂ. ೧೪೫)

ಎಂದು ಹೇಳಿ ಅನೇಕವಿಭಕ್ತಿಪಲ್ಲಟಗಳನ್ನು ಉದಾಹರಿಸಿದ್ದಾನೆ. ಪಲ್ಲಟವೆಂದರೆ ಒಂದು ವಿಭಕ್ತಿಯ ಸ್ಥಾನದಲ್ಲಿ ಇನ್ನೊಂದು ವಿಭಕ್ತಿಯ ಪ್ರಾಪ್ತಿ. ಇದೇ ವಿಭಕ್ತಿವ್ಯತ್ಯಯ. ನ್ಯಾಯವಾಗಿ ಬರಬೇಕಾದ ವಿಭಕ್ತಿಯ ಸ್ಥಾನಕ್ಕೆ ಇನ್ನೊಂದು ವಿಭಕ್ತಿಯು ಬರಬೇಕಾದರೆ, ಇನ್ನೊಂದು ವಿಭಕ್ತಿಗೆ ಎರಡೂ ವಿಭಕ್ತಿಗಳ ಸ್ಥಾನವನ್ನೂ ನಿರ್ವಹಿಸುವ ಸಾಮರ್ಥ್ಯವು ಸ್ವಲ್ಪವಾದರೂ ಇರಬೇಕು.

ಪಲ್ಲಟಿಸಿ ಬಂದ ಈ ವಿಭಕ್ತಿಯನ್ನು ತನ್ನ ಅಧಿಕಾರದೊಡನೆ ಇನ್ನೊಬ್ಬರ ಅಧಿಕಾರವನ್ನೂ ವಹಿಸಿಕೊಂಡು ಪೂರ್ಣರೀತಿಯಲ್ಲಿ ನೆರವೇರಿಸಲಾರದ incharge ಅಧಿಕಾರಿಗೆ ಹೋಲಿಸಬಹುದು!

ಕೇಶಿರಾಜನು ಪ್ರಥಮಾರ್ಥದ ಷಷ್ಠಿಗೆ, 'ನಿಶ್ಶಂಕೆಯಿಂ ನೃಪನ ಪೇಳ್ವೆ, ಚಿತ್ತಭವಗ್ರಹದ ಸೋಂಕೆ' ಎಂದು ಎರಡು ಉದಾಹರಣೆಗಳನ್ನು ಕೊಡುತ್ತಾನೆ. ಇವು ಪ್ರಾಚೀನ ಕವಿಪ್ರಯೋಗಗಳಿಂದ ಆರಿಸಿಕೊಂಡವಾದ್ದರಿಂದ ಪ್ರಯೋಗದ ಪ್ರಾಮಾಣ್ಯ ದಲ್ಲಿ ಸಂದೇಹವಿಲ್ಲ. 'ನೃಪನ ಪೇಳ್ವೆ' ಎಂಬಲ್ಲಿ ನೃಪನು ಕರ್ತೃ. ಇಲ್ಲಿ ಪ್ರಥಮಾವಿಭಕ್ತಿ ಇದ್ದರೆ ಕ್ರಿಯಾಕಾರಕಭಾವಪೂರ್ವಕವಾದ ಕರ್ತೃತ್ವಸಂಬಂಧವು ತೋರುತ್ತಿತ್ತು. ಷಷ್ಠಿ ಇರುವುದರಿಂದ ಸಂಬಂಧಸಾಮಾನ್ಯವು ಮಾತ್ರ ನೃಪನಿಗೂ ಹೇಳುವ ಕ್ರಿಯೆಗೂ ತೋರುತ್ತದೆ. ಚಿತ್ತಭವಗ್ರಹದ ಸೋಂಕೆ -ಎಂಬಲ್ಲಿಯೂ ಹೀಗೆಯೇ ಷಷ್ಠೀ ಬಂದಿದೆ.

ಕೇಶಿರಾಜನು ಕಾಲವಾಚಿಗೂ ಅಧ್ವವಾಚಿಗೂ ದ್ವಿತೀಯಾವಿಭಕ್ತಿಯು ಬರುವು ದೆಂದು 'ಎಡೆಯುಡುಗದೆ ಕಾಲಾಧ್ವದೊಳ್ ದ್ವಿತೀಯೆಯೆ ಮತ್ತಂ' (ಸೂ. ೧೩೯) ಎಂಬ ಸೂತ್ರದಲ್ಲಿ ಹೇಳಿದ್ದಾನೆ. ವಿಭಕ್ತಿಪಲ್ಲಟ ಪ್ರಕರಣದಲ್ಲಿ ದ್ವಿತೀಯೆಗಾದ ಪ್ರಥಮೆಗೆ- 'ಒಂದು ವರ್ಷಮನಿರ್ದನೆಂಬಲ್ಲಿ ಒಂದು ವರ್ಷಮಿರ್ದಂ' -ಎಂದು ಉದಾ ಹರಿಸಿದ್ದಾನೆ. ಇಲ್ಲಿ ಚಿಂತನೀಯವಾದ ವಿಷಯ ಉಂಟು. ಒಂದು ವರ್ಷಮನಿರ್ದಂ -ಎಂದರೆ ನಿರಂತರವಾಗಿ ಒಂದು ವರ್ಷದ ವರೆಗೆ ಇದ್ದನೆಂಬ ಅರ್ಥವು ತೋರುತ್ತದೆ. 'ಸರ್ವಾಧಾರಃ ಕಾಲಃ' ಎಂಬ ಶಾಸ್ತ್ರಸಿದ್ಧಾಂತದಂತೆ ಕಾಲವು ಸರ್ವಕ್ಕೂ ಆಧಾರ ವಾದ್ದರಿಂದ ಅಧಿಕರಣಸಪ್ತಮಿಯನ್ನು ಬಳಸಬಹುದು. 'ಒಂದು ವರ್ಷದಲ್ಲಿ ಈ

ಗಿಡವು ಮರವಾಗುವುದು' ಎಂದು ಹೇಳಬಹುದಷ್ಟೆ? ಗುಣಕ್ರಿಯಗಳ ನೈರಂತರ್ಯವು ಕಾಲದಲ್ಲಿ ತೋರಿದಾಗ ಕಾಲವಾಚಿಗೆ ದ್ವಿತೀಯಾ ಬರುತ್ತದೆ. ಇದನ್ನು ಭಟ್ಟಾಕಳಂಕನೂ ಹೇಳಿದ್ದಾನೆ. ಆತನು ಕಾಲಾಧ್ವನೋರಮ್ ವ್ಯಾಪ್ತೌ (ಸೂ. ೨೦೭) ಎಂದು ಸೂತ್ರಿಸಿದ್ದಾನೆ. ಇದೆಲ್ಲವೂ 'ಕಾಲಾಧ್ವನೋರತ್ಯಂತಸಂಯೋಗೇ (೨-೩-೫) ಎಂಬ ಪಾಣಿನಿಸೂತ್ರದ ಅನುಕರಣೆ. ಪ್ರಕೃತವಾದದ್ದು ಪ್ರಥಮಾವಿಭಕ್ತಿ. ಹೊಸಗನ್ನಡ ದಲ್ಲಿ- ಈ ದಿನ ಬರುತ್ತಾನೆ, ನಿನ್ನೆ ಹೋದನು, ನಾಳೆ ಕೊಡುತ್ತೇನೆ, ನಾಡಿದ್ದು ವಿಚಾರಿಸೋಣ, ಈ ತಿಂಗಳು ಮಳೆ ಬಂದೀತು, ಈ ವರ್ಷ ಈ ಊರಲ್ಲಿ ಜಾತ್ರೆ ನಡೆಯುತ್ತದೆ -ಇತ್ಯಾದಿ ಪ್ರಯೋಗಗಳಿವೆ. ಕಾಲವಾಚಿಗಳ ಮೇಲೆ ಪ್ರಥಮೆಯೂ ಇಲ್ಲ, ದ್ವಿತೀಯೆಯೂ ಇಲ್ಲ, ಸಪ್ತಮಿಯೂ ಇಲ್ಲ.

ಈ ಪ್ರಸಂಗಗಳಲ್ಲಿ ಪ್ರಥಮಾವಿಭಕ್ತಿಯು ಬರುತ್ತದೆಯೆಂದು ಪೂರ್ವಪ್ರಯೋಗ ಗಳಿಂದ ದೃಢವಾಗುತ್ತದೆ.

ಉದಾ:-

೧. ಒಂದು ದಿವಸಂ ಸಂಜೆವಾರಿಸಲೆಂದು ಪೋದಲ್ಲಿ

— (ವಡ್ಡಾರಾಧನೆ- ಸುಕುಮಾರಸ್ವಾಮಿಯ ಕಥೆ)

೨. ಪಲಕಾಲಂ ದೇವಲೋಕದ ಭೋಗಮನನುಭವಿಸಿ — (ವಡ್ಡಾ. ಅದೇ)

೩. ಮತ್ತೊಂದು ದಿವಸಮೊರ್ವ ನೈಮಿತ್ತಿಕಂ — (ವಡ್ಡಾ. ಅದೇ)

೪. ಮತ್ತೊಂದು ದಿವಸಂ ಗಿಳಿಯಂ ಸಾಕ್ಷಿಮಾಡಿ

— (ವಡ್ಡಾ. ಸಿರಿದಿಣ್ಣನೆಂಬ ಭಟ್ಟಾರಕನ ಕಥೆ)

೫. ಕೆಲವು ದಿವಸಮಿರ್ದು ನಾರಾಯಣನಂ ದ್ವಾರಾವತಿಗೆ ಕಳಿಸಿ

— (ಪಂಪಭಾರತ- ಷಷ್ಠಾಶ್ವಾಸ -೧ -ಗದ್ಯ)

೬. ಆತನಲ್ಲಿ ಕಿರಿದು ದಿನಮಿರ್ಪುದುಂ

— (ಅಭಿನವದಶಕುಮಾರಚರಿತೆ- ದ್ವಿತೀಯಾಶ್ವಾಸ ೮೪ -ಗದ್ಯ)

ಕಾಲವಾಚಿಯ ಮೇಲೆ ತೃತೀಯೆಯೂ ಬರುತ್ತದೆ.

ಕತಿಪಯದಿವಸಂಗಳಿಂದಿಳಾ ಪಟ್ಟಣಕ್ಕೆ ಪೋಗಿ ಸುಖದಿಂದಿರೆ

— (ವಡ್ಡಾ. ಸಿರಿದಿಣ್ಣನೆಂಬ ಭಟ್ಟಾರಕನ ಕಥೆ)

ಚತುರ್ಥಿಯೂ ಬರುತ್ತದೆ-

ಪಲಕಾಲಕ್ಕೇಸುವೆತ್ತಂ ದಶಮುಖನೆನುತಂ ಮನ್ಮಥಂ ಮಾಣದೆಚ್ಚಂ

— (ರಾಮಚಂದ್ರಚರಿತಪುರಾಣಂ- ಪಂಪರಾಮಾಯಣ -೯-೮೩)

ವಿಭಕ್ತಿಪಲ್ಲಟದಿಂದ ಈ ಎಲ್ಲ ವಿಭಕ್ತಿಗಳನ್ನು ಸಾಧಿಸಬಹುದಾದರೂ ಪ್ರಥಮಾ ವಿಭಕ್ತಿಯು ಮಾತ್ರ ನುಂಗಲಾರದ ತುತ್ತಾಗಿದೆ. ಏಕೆಂದರೆ, ಪ್ರಥಮಾವಿಭಕ್ತಿಗೆ ಕರ್ತೃಕರ್ಮಗಳ ಹೊರತಾಗಿ ಇನ್ನಾವ ಅರ್ಥವನ್ನೂ ಬೋಧಿಸುವ ಶಕ್ತಿಯಿಲ್ಲ. ಪ್ರಥಮಾಂತವು ವಿಶೇಷಣವಾದಾಗ ಇನ್ನೊಂದು ವಸ್ತುವಿನೊಡನೆ ಅಭೇದಸಂಬಂಧ ದಿಂದ ಮಾತ್ರ ಅನ್ವಯಿಸುತ್ತದೆ. ಮೇಲ್ಕಂಡ ಉದಾಹರಣೆಗಳಲ್ಲಿ ಕಾಲವಾಚಿಗೆ

ಕ್ರಿಯೆಯಲ್ಲಿ ಅಭೇದಾನ್ವಯವು ಬಾಧಿತವಾಗುತ್ತದೆ. ದ್ವಿತೀಯಾವಿಭಕ್ತಿಯ ಪ್ರತ್ಯಯ ಅಮ್.

ವರ್ಷ+ಅಮ್ ದಿನ+ಅಮ್	ಇಲ್ಲಿ ನಡುವೆ ಮಕಾರಾಗಮವು ಬಾರದೆ, ಪೂರ್ವದಲ್ಲಿರುವ ಅಕಾರವು ಲೋಪವಾಗಿ ವರ್ಷಮ್, ದಿನಮ್ ಎಂಬುದು ದ್ವಿತೀಯಾಂತದಲ್ಲಿ ಆಗಿದ್ದಿರಬಹುದೇ? ಎಂಬ ಸಂದೇಹಕ್ಕೂ ಅವಕಾಶವಿದೆ.

ಕಾಲಾಂತರದಲ್ಲಿ ಅದು ಪ್ರಥಮಾಂತವೆಂಬ ಭ್ರಮೆಯಾಗಿರುವುದೂ ಸಾಧ್ಯವಿದೆ. ಬರವಣಿಗೆಯ ಸಾಹಿತ್ಯವು ಇಷ್ಟು ಅಧಿಕವಾಗಿ ಬೆಳೆದಿರುವಾಗಲೇ, ನಿಯಮಾತಿಕ್ರಮವು ಲೀಲೆಯಾಗಿರುವಾಗ ಹಿಂದಿನ ಕಾಲದಲ್ಲಿಯೂ ಒಂದು ಅತಿಕ್ರಮಣವು ನಡೆದಿದ್ದರೆ ಅಚ್ಚರಿಪಡಬೇಕಾಗಿಲ್ಲ.

ಈಗ ಪ್ರಥಮಾವಿಭಕ್ತಿಯನ್ನು ಬಳಸುವುದು ಬಿಟ್ಟುಹೋಗಿದೆ. ದ್ವಿತೀಯಾವಿಭಕ್ತಿಗೂ ಗ್ರಹಣ ಹಿಡಿಯುತ್ತಿದೆ. ಒಂದು ದಿನಪತ್ರಿಕೆಯಲ್ಲಿ 'ಕುರಿ ನುಂಗಿದ ಹೆಬ್ಬಾವು' ಎಂದು ದಪ್ಪ ಅಕ್ಷರದಲ್ಲಿ ಮುದ್ರಿತವಾಗಿತ್ತು. ಕುರಿಯು ಹೆಬ್ಬಾವನ್ನು ನುಂಗಿಬಿಟ್ಟಿತೆ –ಎಂದು ಅಚ್ಚರಿಯಿಂದ ಮುಂದೆ ಓದಿದಾಗ ಕುರಿಯನ್ನು ಹೆಬ್ಬಾವು ನುಂಗಿತ್ತು! 'ಹುಲಿ ಓಡಿಸಿದ ನಾಯಿ' ಎಂದು ಬರೆದಾಗ, ಕರ್ತೃ ಯಾವುದು ಕರ್ಮ ಯಾವುದು?

ಏವಂ ಚ ಕಾಲವಾಚಕದ ಮೇಲೆ ಪ್ರಥಮಾ, ದ್ವಿತೀಯಾ, ತೃತೀಯಾ, ಚತುರ್ಥೀ, ಸಪ್ತಮೀ –ಎಂಬ ಐದು ವಿಭಕ್ತಿಗಳ ಪ್ರಯೋಗಗಳಿವೆ. ಈ ವಿಭಿನ್ನಾರ್ಥಕ ವಿಭಕ್ತಿಗಳು ಸಮಾನಾರ್ಥದಲ್ಲಿ (ಅಧಿಕರಣಾರ್ಥದಲ್ಲಿ) ಬರುವುದಕ್ಕೆ ನಿಮಿತ್ತವೇನಾದರೂ ಇದ್ದೀತೇ? ನೋಡೋಣ.

ಪ್ರಥಮಾವಿಭಕ್ತಿ

ವರ್ಷಮಿರ್ದಂ, ಪಲಕಾಲಮಿರ್ದಂ. ಇದು ಪ್ರಥಮಾವಿಭಕ್ತಿಯೇ ಸರಿಯೆಂದು ನಿಶ್ಚಿತವಾದರೆ 'ಪ್ರಯೋಗಶರಣಾ ವೈಯಾಕರಣಾಃ' ಎಂಬುದೊಂದೇ ಸಮಾಧಾನ. ಅಥವಾ ಪ್ರಥಮಾಂತಕ್ಕೆ ಅಧಿಕರಣಾರ್ಥದಲ್ಲಿ ಲಕ್ಷಣಾ ಎಂದು ಹೇಳಬೇಕಾಗುತ್ತದೆ. ನಿನ್ನೆ, ನಾಳೆ, ನಾಡಿದ್ದು –ಎಂಬ ಶಬ್ದಗಳು ಅಧಿಕರಣಾರ್ಥದಲ್ಲಿರುವುದನ್ನು ಗಮನಿಸಬೇಕು.

ದ್ವಿತೀಯಾವಿಭಕ್ತಿ

ಅಱುದಿಂಗಳಂ ತಳ್ವಿದಂ, ಉಪವಾಸದಿಂ ತ್ರಿರಾತ್ರಮನಿರ್ದಂ, ಜಾವಮಂ ತೊಟಿಲ್ದಂ –ಇವು ಮೂರು ಕೇಶಿರಾಜನ ಉದಾಹರಣೆಗಳು. ತಳ್ವಿದಂ –ಎಂಬುದು ಸಕರ್ಮಕವಾದ್ದರಿಂದ 'ಅಱುದಿಂಗಳಂ' ಎಂಬುದು ಕರ್ಮವೇ ಆಗಿದೆ. ಇದು ಪ್ರಕೃತಕ್ಕೆ

ಉದಾಹರಣೆಯಲ್ಲ. ದ್ವಿತೀಯೆ ಬಂದಾಗ ನಿರಂತರವಾದ ಕ್ರಿಯಾವ್ಯಾಪ್ತಿ ತೋರುತ್ತದೆ. ತ್ರಿರಾತ್ರಮನಿರ್ದಂ –ಎಂಬಲ್ಲಿ ಒಂದೊಂದು ರಾತ್ರಿಯನ್ನೂ ವ್ಯಾಪಿಸಿ ಉಪವಾಸ ದಿಂದಿದ್ದನೆಂದರ್ಥ. ವ್ಯಾಪ್ತಿಪೂರ್ವಕವಾದ ಇರುವಿಕೆ ಧಾತ್ವರ್ಥ. ವ್ಯಾಪ್ತಿಗೆ ತ್ರಿರಾತ್ರವು ಕರ್ಮವಾಗುತ್ತದೆ. ಆದ್ದರಿಂದ ದ್ವಿತೀಯೆ ಬಂದಿದೆ.

ತೃತೀಯಾವಿಭಕ್ತಿ

ಕತಿಪಯದಿವಸಂಗಳಿಂದಳಾ ಪಟ್ಟಣಕ್ಕೆ ಪೋಗಿ, ಆರು ತಿಂಗಳಿಂದ ಈ ಮಗು ನಡೆಯುತ್ತಿದೆ. ಪೂರ್ವಾವಧಿಯಾದ ಮೊದಲನೆಯ ದಿವಸದ ಸಾಹಿತ್ಯವು ಇಲ್ಲಿ ತೋರುತ್ತದೆ. ಸಾಹಿತ್ಯಾರ್ಥದಲ್ಲಿ ತೃತೀಯೆ ಬರುತ್ತದೆ. ಉದಾ– ತಮ್ಮನಿಂದ ಸಹಿತನಾಗಿ, ಲಕ್ಷ್ಮಣನಿಂದೊಡಗೂಡಿ.

ಚತುರ್ಥೀವಿಭಕ್ತಿ

೧. ಪಲಕಾಲಕ್ಕೇಸುವೆತ್ತಂ ದಶಮುಖನೆನುತುಂ ಮನ್ಮಥಂ ಮಾಣದೆಚ್ಚಂ

— (ಪಂಪರಾಮಾಯಣ)

೨. ಇನ್ನು ಎರಡು ವರ್ಷಕ್ಕೆ ಈ ಕಟ್ಟಡ ಮುಗಿಯುತ್ತದೆ.

೩. ಇನ್ನು ಮೂರು ವರ್ಷಕ್ಕೆ ಇವನು ಪದವೀಧರನಾಗುತ್ತಾನೆ.

ಇಲ್ಲಿ ಉತ್ತರಾವಧಿಯು ತೋರುತ್ತದೆ. ಪಲಕಾಲದ ಮತ್ತು ವರ್ಷದ ಉತ್ತರಾವಧಿಯು ಕ್ರಿಯೆಗೆ ಉದ್ದಿಷ್ಟವಾಗಿದೆ. ಉದ್ದಿಷ್ಟವಾಚಿಗೆ ಚತುರ್ಥೀ ಬರುತ್ತದೆ. ಉದಾ: ಅವನು ಶಾಲೆಗೆ ಹೋಗುವುದಕ್ಕೆ ಇಚ್ಛಿಸುತ್ತಾನೆ. ಹಣ್ಣಿಗೆ ಆಸೆಪಡುತ್ತಾನೆ.

ಸಪ್ತಮೀವಿಭಕ್ತಿ

'ಒಂದುವರ್ಷದಲ್ಲಿ ಈ ಕಾರ್ಯವು ಮುಗಿಯುತ್ತದೆ.; ರಾತ್ರಿಯಲ್ಲಿ ಚಳಿ ಇರುತ್ತದೆ.' ಕಾಲವು ಆಧಾರವಾದ್ದರಿಂದ ಅಧಿಕರಣಾರ್ಥದಲ್ಲಿ ಸಪ್ತಮೀ ಬರುವುದು ಸಹಜವೇ.

ಹೀಗೆ ವಿಭಕ್ತಿಪಲ್ಲಟದಿಂದ ಬೇರೆಬೇರೆ ವಿಭಕ್ತಿಗಳು ಬಂದಾಗ, ಅವುಗಳ ಪ್ರಾಪ್ತಿಗೆ ನಿಮಿತ್ತಲೇಶವಾದರೂ ಇರುತ್ತದೆ. ತನ್ನ ಅಭಿಪ್ರಾಯವನ್ನು ಇನ್ನೊಬ್ಬರಿಗೆ ತಿಳಿಸು ವುದಕ್ಕಾಗಿಯೇ ಶಬ್ದವನ್ನು ಉಚ್ಚರಿಸುವುದರಿಮದ, ಆ ಅಭಿಪ್ರಾಯವನ್ನು ಸೂಚಿಸದ ಶಬ್ದವನ್ನು ಮನುಷ್ಯನು ಬಳಸಲಾರ.

ವಸ್ತುಸ್ಥಿತಿಯೇನೆಂದರೆ, ಕಾರಕಶಕ್ತಿಗಳೆಲ್ಲವೂ ಪ್ರಾತಿಪದಿಕದಲ್ಲಿಯೇ ಇರುತ್ತದೆ. ವಿಭಕ್ತಿಗಳು ಕಾರಕಶಕ್ತಿಯ ದ್ಯೋತಕಗಳು. ಈ ದ್ಯೋತಕವಿಭಕ್ತಿಗಳಿಲ್ಲದೆ ಇದ್ದರೆ, ವಾಕ್ಯದಲ್ಲಿ ನಮಗೆ ಬೇಕಾದ ಶಕ್ತಿ ಯಾವುದೆಂಬುದು ಸರಿಯಾಗಿ ತಿಳಿಯುವುದಿಲ್ಲ. ದ್ವಿತೀಯೆಯನ್ನು ಪ್ರಯೋಗಿಸಿದಾಗ ಪ್ರಾತಿಪದಿಕದಲ್ಲಿರುವ ಕರ್ಮತ್ವಶಕ್ತಿಯು ಉದ್ಬುದ್ಧವಾಗಿ ತೋರುತ್ತದೆ. ಚತುರ್ಥಿಯನ್ನು ಬಳಸಿದಾಗ ಸಂಪ್ರದಾನತ್ವಶಕ್ತಿಯು ಸ್ಫುಟವಾಗುತ್ತದೆ. ಸಪ್ತಮಿಯನ್ನು ಬಳಸಿದಾಗ ಅಧಿಕರಣತ್ವಶಕ್ತಿಯು ಸ್ಫುಟವಾಗುತ್ತದೆ.

ಕಾರಕವು ಪ್ರಾತಿಪದಿಕಾರ್ಥವಾದ್ದರಿಂದಲೇ 'ಕುರಿ ಮೇಯುತ್ತಿದೆ' –ಎಂಬಲ್ಲಿ ಕುರಿಯು ಕರ್ತೃವೆಂದು ಗೊತ್ತಾಗುತ್ತದೆ. 'ಕುರಿ ನುಂಗಿದ ಹೆಬ್ಬಾವು' –ಎಂಬಲ್ಲಿ ಕುರಿಯಲ್ಲಿ ಕರ್ಮತ್ವಶಕ್ತಿಯು ಇದೆಯೆಂದೂ ಅದು ನುಂಗುವ ಕ್ರಿಯೆಗೆ ಕರ್ಮವೆಂದೂ ಹೆಬ್ಬಾವು ಕರ್ತೃವೆಂದೂ ಸ್ವಲ್ಪ ವಿಮರ್ಶೆಯಾದ ಮೇಲೆ ತಿಳಿಯುತ್ತದೆ. ದ್ಯೋತಕವಿಭಕ್ತಿಯಿಲ್ಲದ್ದ ರಿಂದ ಇದು ಕರ್ತೃವೋ ಕರ್ಮವೋ ಎಂದು ಕೂಡಲೇ ತಿಳಿಯದೆ ತಡವರಿಸುತ್ತೇವೆ. ಈ ಕಾರಣದಿಂದ ಮಾತಾಡತಕ್ಕವನು ಯಾವುದೋ ಒಂದು ನಿಮಿತ್ತವನ್ನನುಸರಿಸಿ ಅದಕ್ಕೆ ಅನುಗುಣವಾದ ವಿಭಕ್ತಿಯನ್ನು ಪ್ರಯೋಗಿಸಿಬಿಡುತ್ತಾನೆ. ಇದೇ ವಿಭಕ್ತಿಪಲ್ಲಟಕ್ಕೆ ನಿಮಿತ್ತ. ವ್ಯಾಕರಣಶಾಸ್ತ್ರವಾದರೋ ಆ ಪ್ರಾತಿಪದಿಕದಲ್ಲಿರುವ, ಆಯಾ ಪ್ರಸಂಗದಲ್ಲಿ ಎದ್ದುತೋರಬೇಕಾದ ಶಕ್ತಿಯನ್ನು ಪ್ರಕಾಶಿಸುವುದಕ್ಕಾಗಿ, ಬೇರೆಬೇರೆ ಮಾರ್ಗಗಳಿಂದ ಸಮರ್ಥ ವಿಭಕ್ತಿಯನ್ನು ವಿಧಿಸುತ್ತದೆ. ಅಲ್ಪಶಕ್ತಿಯ ಬೇರೊಂದು ನಿಮಿತ್ತದಿಂದ ಬರುವ ವಿಭಕ್ತಿಯು ವಿಭಕ್ತಿಪಲ್ಲಟದಿಂದ ಬಂದದ್ದಾಗಿರುತ್ತದೆ. ಉಪಪದವಿಭಕ್ತಿಯೂ ಸಹ ದೂರದಲ್ಲಿ ತೋರುವ, ಉಪಪದ ಅರ್ಥದಲ್ಲಿ ಸೇರಿಕೊಂಡಿರುವ, ಕ್ರಿಯೆಗೆ ಅನುಗುಣವಾಗಿ ಬಂದ ವಿಭಕ್ತಿಯೇ ಆಗಿರುತ್ತದೆ. ಅಥವಾ ಸಂಬಂಧಸಾಮಾನ್ಯದಲ್ಲಿ ಬಂದ ಇನ್ನೊಂದು ವಿಭಕ್ತಿಯಾಗಿರುತ್ತದೆ. ಈಗ ಕೆಲವು ಉದಾಹರಣೆಗಳನ್ನು ನೋಡಬಹುದು.

ತೃತೀಯಾವಿಭಕ್ತಿ

ಸಹಾರ್ಥಕಶಬ್ದಗಳ ಯೋಗವಿದ್ದಲ್ಲಿ ತೃತೀಯಾ ವಿಭಕ್ತಿ ಬರುತ್ತದೆ. ಭಟ್ಟಾಕಳಂಕನು ಕೊಟ್ಟ ಉದಾಹರಣೆಗಳು (ಸೂತ್ರ ೨೧೧).

ಮಗನಿಂ ಕೂಡಿ ಬಂದಂ ತಂದೆ, ಲಕ್ಷ್ಮಿಯಿಂ ಬೆರಸಿ ಹರಿಯೊಪ್ಪಿದಂ, ಉಮೆಯಿಂ ಸಂಗಡಿಸಿ ಮೆರೆದನಾ ಪೆರೆದಲೆಯಂ.

ಕೂಡಿ, ಬೆರೆಸಿ, ಸಂಗಡಿಸಿ –ಇವು ಮೂರೂ ಕ್ರಿಯಾವಾಚಕಗಳು. ಮಗ, ಲಕ್ಷ್ಮಿ ಉಮೆ –ಈ ಮೂವರಿಗೂ ಉಕ್ತಕ್ರಿಯೆಯಲ್ಲಿ ಕರ್ತೃತ್ವವು ತೋರುವುದರಿಂದ ತೃತೀಯಾ ಬಂದಿದೆ. ಪೆರೆದಲೆಯ = ಚಂದ್ರಮೌಳಿಯಾದ ಶಿವ.

ಒಡನೆ, ಜೊತೆಗೆ –ಎಂಬ ಶಬ್ದಗಳು ಇದ್ದಾಗ ಸಂಬಂಧಸಾಮಾನ್ಯದ ಷಷ್ಠೀ ಬರುತ್ತದೆ. ಇವೆರಡೂ ಕ್ರಿಯಾವಾಚಕಗಳಲ್ಲ. ಉದಾಃ ಮಗನೊಡನೆ ಬಂದಂ, ಶಿಷ್ಯನ ಜೊತೆ ಗುರು ಹೋದನು.

ಚತುರ್ಥೀವಿಭಕ್ತಿ

ಸಂಪ್ರದಾನದ ಮೇಲೆ ಚತುರ್ಥೀ ವಿಭಕ್ತಿ ಬರುತ್ತದೆಯೆಂಬುದನ್ನು ಹಿಂದೆ ಬರೆದದ್ದಾಗಿದೆ. ಸಂಪ್ರದಾನವು ಅನೇಕ ವಿಧ. ಕನ್ನಡ ವ್ಯಾಕರಣಗಳಲ್ಲಿ ಬಂದಿರುವ ವಿವರಣೆ ಸಾಲದು. ಚತುರ್ಥಿಯು ಕನ್ನಡದಲ್ಲಿ ತುಂಬ ಗೊಂದಲವನ್ನುಂಟುಮಾಡುವ ವಿಭಕ್ತಿ. ಆದ್ದರಿಂದ ಕೆಲವು ವಿವರಣೆಗಳನ್ನು ಇಲ್ಲಿ ಬರೆಯಬಹುದು. ಹೊಸಗನ್ನಡವು ಇಲ್ಲಿ ಮುಖ್ಯವಾದ ಲಕ್ಷ್ಯ.

೧. ಕ್ರಿಯೆಯು ಯಾರ ಉದ್ದೇಶದಿಂದ ನಡೆಯುತ್ತದೆಯೋ ಅವರಿಗೆ ಸಂಪ್ರದಾನಸಂಜ್ಞೆ ಬರುತ್ತದೆ. ಉದಾ:

'ತಾಯಿಗೋಸ್ಕರ ಮನೆಯಲ್ಲಿರುತ್ತೇನೆ. ತಾಯಿಗಾಗಿ....., ತಾಯಿಗೋಸುಗ ಮನೆಯಲ್ಲಿರುತ್ತೇನೆ.' ಚತುರ್ಥೀವಿಭಕ್ತಿಯ ಮುಂದೆ ಇರುವ ಓಸ್ಕರ, ಓಸುಗ, ಆಗಿ –ಎಂಬಿವು ಪ್ರತ್ಯಯಗಳೆ? ಅವ್ಯಯಗಳೆ? ಎಂಬುದು ಸ್ಪಷ್ಟವಿಲ್ಲ. ಈ ಶಬ್ದಗಳ್ನು ಬಳಸದೆ 'ತಾಯಿಗೆ ಇರುತ್ತೇನೆ, ಮಲಗುತ್ತೇನೆ' ಎಂದು ಪ್ರಯೋಗಿಸುವ ಪದ್ಧತಿಯೂ ಇಲ್ಲ. ಕೇವಲ ತಾದರ್ಥ್ಯವನ್ನು ಒತ್ತಿ ಹೇಳುವಾಗ ಈ ರೀತಿಯ ಪ್ರಯೋಗಬರುತ್ತದೆ. 'ತಂದೆಯ ಮಾತನ್ನು ನಡೆಸುವುದಕ್ಕೋಸ್ಕರ' –ನಡೆಸುವುದಕ್ಕಾಗಿ ನಾನು ಹೋಗುತ್ತಿದ್ದೇನೆ.

೨. ರುಚ್ಯರ್ಥಕ ಧಾತುಗಳ ಯೋಗವಿದ್ದಾಗ ಸಂತೋಷಪಡುವ ವ್ಯಕ್ತಿಗೆ ಸಂಪ್ರದಾನಸಂಜ್ಞೆ ಬರುತ್ತದೆ.

1. ನನಗೆ ಜಿಲೇಬಿ ರುಚಿಸುತ್ತದೆ. 2. ಮಕ್ಕಳಿಗೆ ಕಥೆಗಳು ಹಿಡಿಸುತ್ತದೆ. 3. ಶಾರದೆಗೆ ಈ ಸೀರೆ ಪ್ರಿಯವಾಯಿತು.	ಅಭಿಲಾಷೆಗೆ ವಿಷಯವಾದದ್ದು ಕರ್ತೃವಾಗಿದೆ. ಅಭಿಲಾಷೆಯ ಕರ್ತನಿಗೆ ಚತುರ್ಥೀ ಬಂದಿದೆ.

ಅನ್ಯರ ಅಭಿಲಾಷೆಗೆ ಒಳಗಾದದ್ದು ಇಲ್ಲಿ ಕರ್ತೃವಾಗಿರುತ್ತದೆ. ಜಿಲೇಬಿ, ಕಥೆ, ಸೀರೆಗಳು ಇಲ್ಲಿ ಕರ್ತೃಗಳು. ಅಭಿಲಾಷೆಗೆ ವಿಷಯವಾಗುವುದು ಧಾತ್ವರ್ಥ.

೩. ಕ್ರೋಧ, ದ್ರೋಹ, ಹೊಟ್ಟೆಕಿಚ್ಚು ಈ ಬಗೆಯ ಅರ್ಥದ ಧಾತುಗಳಿದ್ದಾಗ ಯಾರ ವಿಷಯದಲ್ಲಿ ಅಸಮಾಧಾನವಿರುತ್ತದೆಯೋ ಅವರಿಗೆ ಸಂಪ್ರದಾನಸಂಜ್ಞೆ ಬರುತ್ತದೆ. ಉದಾ:

1. ಭೀಮನು ದುರ್ಯೋಧನನಿಗೆ ಮುಳಿಯುತ್ತಾನೆ.

ಹೊಸಗನ್ನಡದಲ್ಲಿ 'ಅವನ ಮೇಲೆ ಕೋಪಿಸುತ್ತಾನೆ, ಇವಳ ಮೇಲೆ ಸಿಟ್ಟು ಮಾಡುತ್ತಾನೆ' ಎಂಬ ಪ್ರಯೋಗಗಳು ಬರುತ್ತವೆ.

2. ವಾಲಿಯು ಸುಗ್ರೀವನಿಗೆ ದ್ರೋಹಮಾಡುತ್ತಾನೆ.
3. ಮಂಥರೆ ರಾಮನಿಗೆ ಹೊಟ್ಟೆಕಿಚ್ಚು ಪಡುತ್ತಾಳೆ.
4. ಹೊಟ್ಟೆನೋವು ಅವನಿಗೆ ತೊಂದರೆಕೊಡುತ್ತದೆ.

ಉದ್ದೇಶ್ಯತ್ವವೇ ಸಂಪ್ರದಾನಸಂಜ್ಞೆಗೆ ಮೂಲಭೂತವಾದ ನಿಮಿತ್ತ. ಕೆಲವು ಕಡೆ ಅದಕ್ಕೆ ವ್ಯತಿರಿಕ್ತವಾಗಿ ಹೇತುವಾಚಿಗೂ ಚತುರ್ಥೀ ಬರುತ್ತದೆ. 'ಹುಲಿಗೆ ಅಂಜುತ್ತಾನೆ; ದುರ್ಗಂಧಕ್ಕೆ ಹೇಸುತ್ತಾನೆ; ರೋಗಕ್ಕೆ ಹೆದರುತ್ತಾನೆ.'

ಚತುರ್ಥಿಯ ಕೆಲವು ವೈಶಿಷ್ಟ್ಯಗಳು

೧. ಗುರುವಿಗೆ ನಮಸ್ಕರಿಸಿದನು– ಗುರುವನ್ನು ನಮಸ್ಕರಿಸುವನು.

೨. ಗುರುವಿಗೆ ವಂದಿಸಿದನು– ಗುರುವನ್ನು ವಂದಿಸಿದನು.

೩. ಗುರುವಿಗೆ ನಮಸ್ಕಾರ– ವಂದನೆ–ನಮನ.

ಸ್ವಾವಧಿಕೋತ್ಕೃಷ್ಟತ್ವಪ್ರಕಾರಕಜ್ಞಾನಾನುಕೂಲವ್ಯಾಪಾರವು ಧಾತ್ವರ್ಥ. ತನಗಿಂತ ಅವನು ಉತ್ಕೃಷ್ಟನೆಂಬ ಜ್ಞಾನವನ್ನುಂಟುಮಾಡುವ ವ್ಯಾಪಾರವು ಧಾತುವಿನ ಅರ್ಥ. ಅಥವಾ ಸ್ವನಿಷ್ಠಾಪಕೃಷ್ಟತ್ವಪ್ರಕಾರಕಜ್ಞಾನಾನುಕೂಲವ್ಯಾಪಾರ –ಎಂದರೆ– ಆತನಿಗಿಂತ ತಾನು ಕನಿಷ್ಠನೆಂಬ ಜ್ಞಾನವನ್ನುಂಟುಮಾಡುವ ವ್ಯಾಪಾರವು ಧಾತ್ವರ್ಥ. ನಮಸ್ಕಾರವೆಂದು ಹೇಳುವುದು, ಕೈಮುಗಿಯುವುದು, ಅಡ್ಡಬೀಳುವುದು –ಇವೆಲ್ಲವೂ ಇಲ್ಲಿ ವ್ಯಾಪಾರ. ಈ ಜ್ಞಾನವು ಗುರುವಿನಲ್ಲಾಗಲೆಂದು ಗುರುವು ಉದ್ದಿಷ್ಟನಾದರೆ ಚತುರ್ಥೀವಿಭಕ್ತಿ ಬರುತ್ತದೆ. ಜ್ಞಾನವೆಂಬ ಫಲವು ಗುರುವಿನಲ್ಲಾಗಲೆಂದು ಆಶ್ರಿತತ್ವವು ವಿವಕ್ಷಿತವಾದರೆ ದ್ವಿತೀಯಾ ಬರುತ್ತದೆ. ಸಂಪ್ರದಾನಾರ್ಥದಲ್ಲಿ ಚತುರ್ಥೀ, ಕರ್ಮಾರ್ಥದಲ್ಲಿ ದ್ವಿತೀಯಾ ಬರುತ್ತದೆ. ನಮಸ್ಕಾರ, ವಂದನೆ, ನಮನ –ಈ ನಾಮ ಪದಗಳ ಯೋಗವಿದ್ದಾಗ 'ಆಗಲಿ' ಎಂಬುದು ಅಧ್ಯಾಹೃತ. ಅಲ್ಲಿ ತಾದರ್ಥ್ಯ (ಉದ್ದೇಶ್ಯತ್ವ) ಚತುರ್ಥೀ. ಸಕರ್ಮಕಕ್ರಿಯೆಯಿಲ್ಲವಾದ್ದರಿಂದ ದ್ವಿತೀಯೆಗೆ ಅವಕಾಶ ವಿಲ್ಲ. '**ವಿವಕ್ಷಾತಃ ಕಾರಕಾಣಿ ಭವಂತಿ**' ಎಂಬುದು ವ್ಯಾಕರಣಶಾಸ್ತ್ರದ ಪ್ರಮೇಯ. ಈ ವಿವಕ್ಷೆಗೆ ಸರಿಯಾದ ಶಾಸ್ತ್ರಸಂಮತಕಾರಣವಿರಬೇಕು. ಮನಸ್ಸಿಗೆ ತೋರಿದಂತೆ ವಿವಕ್ಷೆ ಮಾಡಲಾಗುವುದಿಲ್ಲ.

೪. ಇದು ದೇಹಶಕ್ತಿಗೆ ಔಷಧ (ದೇಹಶಕ್ತಿ ಹೆಚ್ಚುವುದಕ್ಕೆ)

೫. ಇದು ಹಸಿವಿಗೆ ಔಷಧ (ಹಸಿವು ಹೆಚ್ಚುವುದಕ್ಕೆ)

೬. ಇದು ಜ್ವರಕ್ಕೆ ಔಷಧ (ಜ್ವರ ಹೋಗುವುದಕ್ಕೆ, ಹೆಚ್ಚುವುದಕ್ಕಲ್ಲ!)

೭. ಇದು ನಿದ್ರೆಗೆ ಔಷಧ (ನಿದ್ರೆ ಬರುವುದಕ್ಕೆ)

ಷಷ್ಠ್ಯರ್ಥದಲ್ಲಿ ಚತುರ್ಥೀ

ಪ್ರತಿಯೊಂದು ವಾಕ್ಯದಲ್ಲಿಯೂ ಉದ್ದೇಶ(ಉದ್ದೇಶ್ಯ)ವಿಧೇಯಭಾವವಿರುತ್ತದೆ. ಸಿದ್ಧವಾದದ್ದು ಉದ್ದೇಶ. ಸಾಧ್ಯವಾದದ್ದು ವಿಧೇಯ. ವಿಧೇಯವೆಂದರೆ ಆಜ್ಞೆಗೆ ಒಳಪಟ್ಟದ್ದು ಎಂದರ್ಥವಲ್ಲ. ಸಾಧ್ಯವಾದದ್ದು, ಜ್ಞೇಯವಾದದ್ದು ಎಂದರ್ಥ. ಉದಾ: ಅವನು ಹೋದನು. ಅವನು ಉದ್ದೇಶ್ಯ. ಹೋಗುವ ಕ್ರಿಯೆ ವಿಧೇಯ. ವಿಧೇಯ ವಾದದ್ದು ಕ್ರಿಯೆ ಅಥವಾ ಗುಣವಾಗಿರುತ್ತದೆ. ಸಂಬಂಧವು ಗುಣದಲ್ಲಿಯೇ ಸೇರುತ್ತದೆ. 'ಗುಲಾಬಿಯ ಬಣ್ಣ ಕೆಂಪು.' ಗುಲಾಬಿಯ ಬಣ್ಣವು ಉದ್ದೇಶ್ಯ, ಕೆಂಪು ಎಂಬ ಗುಣ ವಿಧೇಯ. ಸಿದ್ಧವಾದ ಉದ್ದೇಶಕ್ಕೆ ಸಲ್ಲುವ ಪದಪುಂಜಕ್ಕೆ 'ಅನುವಾದ ಕೋಟಿ'ಯೆಂದೂ ಸಾಧ್ಯವಾದ ವಿಧೇಯಕ್ಕೆ ಸಲ್ಲುವ ಪದಪುಂಜಕ್ಕೆ ವಿಧೇಯಕೋಟಿ ಎಂದೂ ಹೆಸರು.

'ದಶರಥನ ನಾಲ್ವರು ಮಕ್ಕಳು ಶೂರರಾಗಿದ್ದರು' ಈ ವಾಕ್ಯದಲ್ಲಿ 'ದಶರಥನ ನಾಲ್ಕರು ಮಕ್ಕಳು' ಎಂಬ ಪದಪುಂಜವು ಅನುವಾದಕೋಟಿಗೆ ಸೇರುತ್ತದೆ. 'ಶೂರ ರಾಗಿದ್ದರು' ಎಂಬುದು ವಿಧೇಯಕೋಟಿಗೆ ಸೇರುತ್ತದೆ. ದಶರಥನ ನಾಲ್ವರು

ಮಕ್ಕಳನ್ನುದ್ದೇಶಿಸಿ ಶೌರ್ಯವು ವಿಧೇಯವಾಗಿದೆ. ದಶರಥನಿಗೂ ಅವನ ಮಕ್ಕಳಿಗೂ ಇರುವ ಜನ್ಯಜನಕಭಾವಸಂಬಂಧವು ಅನುವಾದಕೋಟಿಯಲ್ಲಿಯೇ ಸೇರಿಹೋಗಿದೆ.

ಈ ವಾಕ್ಯವನ್ನು ನೋಡಿ. 'ದಶರಥನಿಗೆ ಶೂರರಾದ ನಾಲ್ವರು ಮಕ್ಕಳಿದ್ದರು' ಇಲ್ಲಿ ದಶರಥಶಬ್ದಕ್ಕೆ ಚತುರ್ಥೀವಿಭಕ್ತಿ ಬಂದಿದೆ. ಹಿಂದಿನ ವಾಕ್ಯದಲ್ಲಿರುವಂತೆ ಷಷ್ಠೀವಿಭಕ್ತಿ ಬಂದಿಲ್ಲ. ಕಾರಣವೇನು? ಈ ವಾಕ್ಯದಲ್ಲಿ ದಶರಥನು ಮಾತ್ರ ಉದ್ದೇಶ ಕೋಟಿಯಲ್ಲಿ ಸೇರುತ್ತಾನೆ. ಶೂರರಾದ ನಾಲ್ವರು ಮಕ್ಕಳಿದ್ದರು -ಎಂಬುದಿಷ್ಟೂ ವಿಧೇಯಕೋಟಿಯಲ್ಲಿದೆ. 'ಮಕ್ಕಳು' ಎಂಬ ಶಬ್ದವು ವಿಧೇಯ ಕೋಟಿಯಲ್ಲಿರುವುದ ರಿಂದ ಈ ವಾಕ್ಯದಲ್ಲಿ ಜನ್ಯಜನಕಭಾವಸಂಬಂಧಸಹಿತವಾಗಿ ಶೂರರಾದ ನಾಲ್ವರು ಮಕ್ಕಳ ಅಸ್ತಿತ್ವವು ವಿಧೇಯವಾಗಿದೆ. ಇಲ್ಲಿ ಶೌರ್ಯವು ಮಕ್ಕಳಿಗೆ ಸಿದ್ಧರೂಪದಲ್ಲಿ ವಿಶೇಷಣವಾಗಿದೆ. ಆದ್ದರಿಂದ ಶೌರ್ಯವು ಮಕ್ಕಳಲ್ಲಿ ವಿಧೇಯರೂಪವಾಗಿ ತೋರು ವುದಿಲ್ಲ.

ಒಂದು ವಿಷಯವನ್ನು ತಿಳಿಸುವುದಕ್ಕಾಗಿ ವಾಕ್ಯರಚನೆ ಇರುತ್ತದೆ. ತಿಳಿಸುವುದು ಯಾವುದೋ ಒಂದು ವಸ್ತುವಿಗೆ ಸಂಬಂಧಿಸಿದ್ದು. ಆ ವಸ್ತುವಾದರೋ ಮೊದಲು ಸಿದ್ಧವಾದದ್ದು-ಜ್ಞಾತವಾದದ್ದು. ಹೊಸದಾಗಿ ತಿಳಿಸುವ ಅಂಶವು ಸಾಧ್ಯ ಅಥವಾ ಜ್ಞಾಪ್ಯ. ಯಾವುದು ಜ್ಞಾತವೋ ಅದನ್ನು ಹೇಳುವ ವಾಕ್ಯಖಂಡವು ಅನುವಾದ. ಅನು = ಜ್ಞಾತವಾದದ್ದನ್ನೇ, ಹೊಸದನ್ನು ತಿಳಿಸುವುದಕ್ಕಾಗಿ ವಾದ = ಹೇಳುವುದು ಅನುವಾದ. 'ರಾವಣನು ಲಂಕೆಯ ಅಧಿಪತಿ'. ಈ ವಾಕ್ಯದಲ್ಲಿ 'ರಾವಣನು' ಎಂಬ ಅಂಶ ಅನುವಾದಕೋಟಿಗೆ ಸೇರುತ್ತದೆ. ಶ್ರೋತೃವಿಗೆ ರಾವಣನ ಹೆಸರಾದರೂ ಜ್ಞಾತವಾಗಿರುತ್ತದೆ. 'ಲಂಕೆಯ ಅಧಿಪತಿ' ಎಂಬುದು ಯಾರಿಗೆ ಗೊತ್ತಿಲ್ಲವೋ ಅವರಿಗೆ ಹೇಳುವ ವಾಕ್ಯಖಂಡ 'ಲಂಕೆಯ ಅಧಿಪತಿ'. ಇದು ಜ್ಞಾಪ್ಯ. ಆದ್ದರಿಂದ ಇದು ವಿಧೇಯಾಂಶವಿರುವುದರಿಂದ ವಿಧೇಯಕೋಟಿಗೆ ಸೇರುತ್ತದೆ. ಎಲ್ಲ ವಾಕ್ಯಗಳಲ್ಲಿಯೂ ಇದನ್ನು ಸೂಕ್ಷ್ಮವಾಗಿ ಗ್ರಹಿಸಬಹುದು. 'ಆ ಹುಡುಗನು ಶಾಲೆಗೆ ಹೋದನು' -ಈ ವಾಕ್ಯದಲ್ಲಿ 'ಆ ಹುಡುಗನು' ಎಂಬುದು ಜ್ಞಾತವಾದ್ದರಿಂದ ಅನುವಾದ. 'ಶಾಲೆಗೆ ಹೋದನು' ಎಂಬುದು ವಿಧೇಯ. ವಿಧೇಯವೆಂದರೆ ಜ್ಞಾಪ್ಯ ಎಂದರ್ಥ.

ತಾತ್ಪರ್ಯವೇನೆಂದರೆ, 'ದಶರಥನಿಗೆ ಶೂರರಾದ ನಾಲ್ವರು ಮಕ್ಕಳಿದ್ದರು' ಎಂಬ ವಾಕ್ಯದಲ್ಲಿ ಉಕ್ತಸಂಬಂಧವಿಶಿಷ್ಟಪುತ್ರರು ವಿಧೇಯಕೋಟಿಗೆ ಸೇರಿದ್ದರಿಂದ ದಶರಥನು ಕೇವಲ ಉದ್ದೇಶ್ಯನಾಗುತ್ತಾನೆ. ಉದ್ದೇಶ್ಯತ್ವವಿರುವುದರಿಂದ ಚತುರ್ಥೀ ವಿಭಕ್ತಿ ಬಂದಿದೆ. 'ದಶರಥನ ನಾಲ್ವರು ಮಕ್ಕಳು' ಎಂದಾಗ ಉಕ್ತಸಂಬಂಧ ವಿಶಿಷ್ಟ ಪುತ್ರರು' ಅನುವಾದಕೋಟಿಯಲ್ಲಿರುತ್ತದೆ. ಇಲ್ಲಿ ಜನ್ಯಜನಕಭಾವಸಂಬಂಧವು ಸಿದ್ಧ ರೂಪದಲ್ಲಿ ತೋರುತ್ತದೆ. ಅದು ವಿಧೇಯಕೋಟಿಯಲ್ಲಿ ಸೇರುವುದಿಲ್ಲ. ದಶರಥ ನಿಗೆ ಉದ್ದೇಶ್ಯತ್ವವಿಲ್ಲ. ಆದ್ದರಿಂದ ಷಷ್ಠಿಯೇ ಬಂದಿದೆ. ಸಂಬಂಧವು ಸಿದ್ಧರೂಪದಲ್ಲಿ ಅನುವಾದಕೋಟಿಯಲ್ಲಿದ್ದಾಗ ಷಷ್ಠೀ. ಅದು ಸಾಧ್ಯರೂಪದಲ್ಲಿ ವಿಧೇಯಕೋಟಿಗೆ ಸೇರಿದಾಗ ಚತುರ್ಥೀ ಎಂದು ನಿಷ್ಕರ್ಷೆ. ಉದಾಹರಣೆಗೆ, ಈ ವಾಕ್ಯಗಳನ್ನು ನೋಡಿ.

೧. ಕುದುರೆಯ ನಾಲ್ಕು ಕಾಲುಗಳೂ ಬಲಶಾಲಿಯಾಗಿವೆ.
ಕುದುರೆಗೆ ಬಲಶಾಲಿಯಾಗಿರುವ ನಾಲ್ಕು ಕಾಲುಗಳಿವೆ.

೨. ಮರದ ಕೊಂಬೆಗಳು ಉದ್ದವಾಗಿವೆ.
ಮರಕ್ಕೆ ಉದ್ದವಾದ ಕೊಂಬೆಗಳಿವೆ.

೩. ನಿನ್ನ ಬುದ್ಧಿ ತೀಕ್ಷ್ಣವಾದದ್ದು.
ನಿನಗೆ ತೀಕ್ಷ್ಣವಾದ ಬುದ್ಧಿ ಇದೆ.

ಸಂಸ್ಕೃತದಲ್ಲಿ ಹೀಗಾಗುವುದಿಲ್ಲ. ಉಭಯತ್ರಷಷ್ಠೀವಿಭಕ್ತಿಯೇ ಇರುತ್ತದೆ. ಉದಾಃ

೧. ದಶರಥಸ್ಯ ಪುತ್ರಾಃ ಶೂರಾ ಆಸನ್.
ದಶರಥಸ್ಯ ಶೂರಾಃ ಪುತ್ರಾ ಆಸನ್.
ಶೂರಾಃ ಪುತ್ರಾ ದಶರಥಸ್ಯ ಆಸನ್.

೨. ಅಶ್ವಸ್ಯ ಚತ್ವಾರಃ ಪಾದಾಃ ಬಲಶಾಲಿನಃ.
ಬಲಶಾಲಿನಃ ಚತ್ವಾರಃ ಪಾದಾಃ ಅಶ್ವಸ್ಯ ಸಂತಿ.

೩. ತವ ಬುದ್ಧಿಃ ತೀಕ್ಷ್ಣಾ ಅಸ್ತಿ.
ತವ ತೀಕ್ಷ್ಣಾ ಬುದ್ಧಿರಸ್ತಿ.
ತೀಕ್ಷ್ಣಾ ಬುದ್ಧಿಸ್ತವಾಸ್ತಿ.

ಸಂಬಂಧವು ವಿಧೇಯಕೋಟಿಯಲ್ಲಿದ್ದರೂ ಸಂಸ್ಕೃತದಲ್ಲಿ ಷಷ್ಠೀ ಬರುತ್ತದೆ. ಕನ್ನಡದಲ್ಲಿ ಸಂಬಂಧವು ವಿಧೇಯಕೊಟಿಯಲ್ಲಿದ್ದಾಗ ಚತುರ್ಥೀ ಬರುತ್ತದೆ. ಇದು ಭಾಷೆಯ ಸ್ವಭಾವ –ಎಂದಿಷ್ಟೇ ಹೇಳಿ ಈ ಚರ್ಚೆಯನ್ನು ಮುಗಿಸಬಹುದು.

** ** **

ಕರ್ಮಣಿಪ್ರಯೋಗ

ಕನ್ನಡದಲ್ಲಿ ಕರ್ಮಣಿಪ್ರಯೋಗವಿಲ್ಲವೆಂದು ಭಾಷಾಶಾಸ್ತ್ರಜ್ಞರು ನಿರ್ಣಯಿಸಿದ್ದಾರಂತೆ. ಅವರಿಗಿಂತ ಪ್ರಾಚೀನರೂ ಕನ್ನಡದೇಶದಲ್ಲಿಯೇ ಹುಟ್ಟಿ ಬೆಳೆದವರೂ ಬಹುಶ್ರುತರೂ ಆದ ಕನ್ನಡ ವೈಯಾಕರಣರಿಗೆ ಕರ್ಮಣಿಪ್ರಯೋಗವಿದೆಯೆಂಬುದು ಸಂಮತ. ನಾಗವರ್ಮ, ಕೇಶಿರಾಜ, ಭಟ್ಟಾಕಳಂಕ –ಈ ಮೂವರು ಪ್ರಸಿದ್ಧರಾದ ಕನ್ನಡ ವೈಯಾಕರಣರು. ನಾಗವರ್ಮನು ಕ್ರಿ.ಶ. ೧೨ನೆಯ ಶತಮಾನದವನು. ಕೇಶಿರಾಜನು ೧೩ನೆಯ ಶತಕದವನು. ಭಟ್ಟಾಕಳಂಕನು ೧೭ನೆಯ ಶತಕದ ಆದಿಯಲ್ಲಿದ್ದವನು. ನಾಗವರ್ಮನೂ ಕೇಶಿರಾಜನೂ ಕರ್ಮಣಿಪ್ರಯೋಗದ ಪ್ರಕ್ರಿಯೆಯನ್ನೇ ಹೇಳದಿದ್ದರೂ ಅವರು ಕೊಟ್ಟ ಉದಾಹರಣೆ, ಪ್ರಯೋಗಗಳಿಂದ ಕರ್ಮಣಿಪ್ರಯೋಗವನ್ನವರು ಒಪ್ಪಿದ್ದರೆಂದು ಸ್ಫುಟವಾಗುತ್ತದೆ. ಭಟ್ಟಾಕಳಂಕನಂತೂ ಸ್ಪಷ್ಟವಾಗಿಯೇ

ಕರ್ಮಣಿಪ್ರಯೋಗವನ್ನು ಅಂಗೀಕರಿಸಿದ್ದಾನೆ. ನಾಗವರ್ಮನು ಭಾಷಾಭೂಷಣದ ೮೦ನೆಯ ಸೂತ್ರದಲ್ಲಿ ಕರ್ತ್ರರ್ಥದಲ್ಲಿ ತೃತೀಯಾವಿಭಕ್ತಿ ಬರುತ್ತದೆ ಎಂದು ಹೇಳಿ, "ದೇವದತ್ತನಿಂ ಮಾಡಲ್ಪಟ್ಟುದು, ಯಜ್ಞದತ್ತನಿಂ ಪೇಳಲ್ಪಟ್ಟುದು" ಎಂದು ಉದಾಹರಿಸಿದ್ದಾನೆ. ಇವೆರಡೂ ಕರ್ಮಣಿಪ್ರಯೋಗಗಳು. 'ಅಲ್ಪಡು' ಎಂಬ ಶಬ್ದರೂಪವನ್ನಿಲ್ಲಿ ಕಾಣಬಹುದು. ಕೇಶಿರಾಜನು **"ತೃತೀಯೆ ಪೇಳಲ್ಪಡೆಗುಂ ಸಲೆ ಕರ್ತೃಕರಣ ಹೇತುಸ್ಥಿತಿಯೊಳ್"** (ಸೂತ್ರ ೧೩೯) ಎಂದು ಸೂತ್ರಿಸಿ ತೃತೀಯೆಯ ಕರ್ತೃವಿಂಗೆ– 'ಪದಕಮಕ್ಕಸಾಲೆಯಿಂ ಮಾಡೆಪಟ್ಟುದು, ಕಾವ್ಯಮೆನ್ನಿಂ ಪೇಳೆಪಟ್ಟದು'–ಎಂದು ಉದಾಹರಸಿದ್ದಾನೆ. ಕರ್ತೃವು ತೃತೀಯಾಂತದಲ್ಲಿಯೂ ಕರ್ಮವು ಪ್ರಥಮಾಂತದಲ್ಲಿಯೂ ಇರುವುದನ್ನಿಲ್ಲಿ ಗುರುತಿಸಬಹುದು. 'ತೃತೀಯೆ ಪೇಳಲ್ಪಡೆಗುಂ' ಎಂದು ಮೇಲ್ಕಂಡ ಸೂತ್ರದಲ್ಲಿಯೇ ಕೇಶಿರಾಜನು ಕರ್ಮಣಿಪ್ರಯೋಗವನ್ನು ಮಾಡಿದ್ದಾನೆ. ಅಲ್ಲದೆ ಕೇಶಿರಾಜನ ಕರ್ಮಣಿಪ್ರಯೋಗಗಳು ಇತರ ಸ್ಥಳಗಳಲ್ಲಿಯೂ ಕಂಡು ಬರುತ್ತವೆ.

೧. ಪೇಳಲ್ಪಡೆಗುಂ ಧೀರರಿನಕ್ಷರಸಂಜ್ಞಾಕಾರಂ (ಸೂ. ೧೦)

೨. ಅವರ್ಣಂ ಪಿಂಗಿದಾ ಸ್ವರಂ ನಾಮಿಯೆಂದು ಪೇಳಲ್ಪಡೆಗುಂ ॥ (ಸೂ. ೧೯)

೩. ಸಾಕಲ್ಯಸಂಜ್ಞೆ........ಇಷ್ಟದಿಂ ಸಂಜ್ಞೆಯೊಡನೆ ಪೇಳಲ್ಪಡುಗುಂ ॥ (ಸೂ. ೬೧)

ಮೊದಲನೆಯ ಉದಾಹರಣೆಯಲ್ಲಿ 'ಧೀರರಿಂ' ಕರ್ತೃ; 'ಅಕ್ಷರಸಂಜ್ಞಾಕಾರಂ' ಕರ್ಮ. ಎರಡನೆಯದರಲ್ಲಿ ಮತ್ತು ಮೂರನೆಯದರಲ್ಲಿ 'ವೈಯಾಕರಣರಿಂದ' ಎಂದು ಕರ್ತೃಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. 'ಸ್ವರಂ, ಸಾಕಲ್ಯಸಂಜ್ಞೆ' ಎಂಬಿವು ಕ್ರಮವಾಗಿ ಕರ್ಮಗಳಾಗಿವೆ.

ನಾಗವರ್ಮನ ಭಾಷಾಭೂಷಣವು ಸಂಕ್ಷಿಪ್ತವಾದದ್ದು. ಯಾವುದನ್ನೂ ಅವನು ವಿಸ್ತಾರವಾಗಿಯೂ ಸಾಂಗವಾಗಿಯೂ ತಿಳಿಸಿಲ್ಲ. ಕನ್ನಡ ವ್ಯಾಕರಣಶಾಸ್ತ್ರದ ಇತಿಹಾಸದಲ್ಲಿ ಪ್ರಾಯಶಃ ಆತನದೇ ಪ್ರಥಮಪ್ರಯತ್ನವೆಂಬುದನ್ನು ಗಮನಿಸಬೇಕು. ಕೇಶಿರಾಜನದು ಎರಡನೆಯ ಬೆಳವಣಿಗೆ. ಕಂದಪದ್ಯಗಳಲ್ಲಿ ವ್ಯಾಕರಣಸೂತ್ರಗಳನ್ನು ರಚಿಸಲು ಪ್ರಯತ್ನಿಸಿರುವುದು ಅವನ ಪ್ರಮಾದ. ಆದ್ದರಿಂದ ಅವ್ಯಾಪ್ತಿ, ಅತಿವ್ಯಾಪ್ತಿ ದೋಷಗಳು ಸೇರಿಕೊಂಡವು. ಇದೆಲ್ಲವನ್ನೂ ಪರೀಕ್ಷಿಸಿ ಕನ್ನಡಕ್ಕೊಂದು ಶಾಸ್ತ್ರೀಯವೂ ವಿಸ್ತೃತವೂ ಆದ ವ್ಯಾಕರಣವನ್ನು ಬರೆಯಲು ಯತ್ನಿಸಿ ಸಾಕಷ್ಟು ಕೃತಕೃತ್ಯನಾದವನು ಭಟ್ಟಾಕಳಂಕ. ಶಬ್ದಾನುಶಾಸನಕ್ಕೆ ಆತನು ಬರೆದ ಮಂಜರೀಮಕರಂದವೆಂಬ ಸಂಸ್ಕೃತ ವ್ಯಾಖ್ಯಾನದಲ್ಲಿ ಅವನ ಘನಪಾಂಡಿತ್ಯವನ್ನು ಕಾಣಬಹುದು. ಸಂಸ್ಕೃತದಲ್ಲಿ ಬರೆದಿದ್ದಾನೆಂಬ ಕಾರಣದಿಂದ ಅಲ್ಪವಿದ್ಯಾಪ್ರಿಯರಾದ ಕನ್ನಡ ವೀರರಿಗೆ ಅದು ಪ್ರಿಯವಾಗಲಿಲ್ಲ. ಭಟ್ಟಾಕಳಂಕನು ಪ್ರಮಾದವನ್ನು ಮಾಡಿರಬಹುದು. ನಡೆಯುವವನಿಗೆ ಎಡಹುವುದು ಸಹಜ. ಜೈನಮತೀಯರು ಕನ್ನಡಕ್ಕಿತ್ತ ಬಹುಮೂಲ್ಯದ ಕಾಣಿಕೆ ಭಟ್ಟಾಕಳಂಕನ ಶಬ್ದಾನುಶಾಸನ, ಇರಲಿ.

ಶಬ್ದಾನುಶಾಸನದ ಪ್ರಕಾರ ಕರ್ಮಾರ್ಥದಲ್ಲಿಯೂ ತಿಜ್ (ಆಖ್ಯಾತ) ಪ್ರತ್ಯಯವು ಬರುತ್ತದೆ. ಅದು ಬಂದಾಗ–

ಕರ್ಮಣ್ಯನು ಪಡುಃ (ಸೂ. ೫೩೦)

ಕರ್ಮಾರ್ಥಕ ತಿಜ್ ಬಂದಾಗ ಪಡು ಎಂಬ ಧಾತುವಿಗೆ ಅನುಪ್ರಯೋಗ ಬರುತ್ತದೆ.

ತಸ್ಮಿನ್ನೆದಲೌ (ಸೂ. ೫೩೨)

'ಪಡು' ಪರವಾದಾಗ ಹಿಂದಿನ ಧಾತುವಿಗೆ ಹ್ರಸ್ವವಾದ 'ಎ' ಅಥವಾ 'ಅಲ್' ಎಂಬ ಆದೇಶ ಬರುತ್ತದೆ. ಉದಾಃ ಮಾಡೆಪಟ್ಟಂ, ಮಾಡಲ್‌ಪಟ್ಟಂ –ಇತ್ಯಾದಿ ಕರ್ತೃವು ತಿಜ್‌ಪ್ರತ್ಯಯದಿಂದ ಉಕ್ತವಾಗಿಲ್ಲವಾದ ಕಾರಣ ಕರ್ಮಣಿಪ್ರಯೋಗದಲ್ಲಿ ಕರ್ತೃವಾಚಿಗೆ ತೃತೀಯಾ ಬರುತ್ತದೆ. ಕರ್ಮವು ಉಕ್ತವಾದ್ದರಿಂದ ಕರ್ಮವಾಚಿಗೆ ದ್ವಿತೀಯಾ ಬರುವುದಿಲ್ಲ. ಪರಿಶೇಷವಾಗಿ ಪ್ರಥಮಾ ಬರುತ್ತದೆ. ಕರ್ತ್ರರ್ಥದಲ್ಲಿ ಪ್ರಥಮಾ ಬರುತ್ತದೆಯೆಂದು ಈ ಮೂವರು ವೈಯಾಕರಣರೂ ಹೇಳಿಲ್ಲ ಎಂಬುದು ಗಮನಾರ್ಹವಾದುದು. ದ್ವಿತೀಯಾವಿಭಕ್ತಿಗೂ ಪ್ರಾಪ್ತಿಯಿಲ್ಲದಾಗ ಪ್ರಥಮಾ ಬರುತ್ತದೆ. ಕೇಶಿರಾಜನ ಪ್ರಯೋಗಗಳಲ್ಲಿ 'ಪೇಳಲ್ಪಡೆಗುಂ' ಎಂದು 'ಪಡೆ' ಧಾತುವಿನ ಪ್ರಯೋಗವು ಕಂಡುಬರುತ್ತದೆ. ಭಟ್ಟಾಕಳಂಕನು ಹೇಳುವುದು 'ಪಡು' ಧಾತು.

ಧಾತುವಿನ ಮೇಲೆ ಇನ್ನೊಂದು ಧಾತುವಿನ ಅನುಪ್ರಯೋಗವು ಸಂಸ್ಕೃತ ದಲ್ಲಿಯೂ ಇದೆ. ಅವೆರಡರ ನಡುವೆ 'ಅಮ್' ಪ್ರತ್ಯಯ ಬರುತ್ತದೆ. ಉದಾಃ ಕಾರಯಾಮಾಸ, ಕಾರಯಾಂ ಚಕಾರ, ಕಾರಯಾಂ ಬಭೂವ. ಇಲ್ಲಿ ಅಸ್, ಕೃ, ಭೂ –ಎಂಬ ಮೂರು ಧಾತುಗಳ ಅನುಪ್ರಯೋಗವಿದೆ. ಮಾಡಿಸಿದನು ಎಂದು ಇವುಗಳ ಅರ್ಥ.

ಯಾವ ಭಾಷೆಯಲ್ಲಾದರೂ ಆಡುನುಡಿಯಲ್ಲಿ ಕರ್ಮಣಿಪ್ರಯೋಗವು ಅತ್ಯಂತ ವಿರಳವಾಗಿರುತ್ತದೆ. ಭಾಷೆಯು ಆಡುನುಡಿಯ ಮೆಟ್ಟಲನ್ನೇರಿ, ಲಿಖಿತ ಭಾಷೆಯ ಸ್ಥಾನಕ್ಕೆ ಬಂದಾಗ, ಕಾವ್ಯಸಾಹಿತ್ಯವೂ ಶಾಸ್ತ್ರಸಾಹಿತ್ಯವೂ ಬೆಳೆದಾಗ ಕರ್ಮಣಿ ಪ್ರಯೋಗದ ಆವಶ್ಯಕತೆ ಉಂಟಾಗುತ್ತದೆ. ಲೇಖಕನು ತನ್ನ ಪ್ರಬಂಧದಲ್ಲಿ 'ಗದಾಯುದ್ಧವು ರನ್ನನಿಂದ ವಿರಚಿತವಾಗಿದೆ' ಎಂದು ಬರೆಯಬಹುದು. ಆತನೇ ಮಾತಾಡುವಾಗ 'ಗದಾಯುದ್ಧ ರನ್ನ ಬರೆದಿದ್ದಾನೆ' ಎಂದೇ ಹೇಳುತ್ತಾನೆ. 'ಗದಾಯುದ್ಧವನ್ನು' ಎಂದು ದ್ವಿತೀಯಾ ವಿಭಕ್ತಿಯನ್ನು ಸಹ ಬಳಸುವುದಿಲ್ಲ. ವ್ಯಾಕರಣಶಾಸ್ತ್ರವು ಲಿಖಿತಭಾಷೆಯನ್ನು ಗಮನಿಸುತ್ತದೆ, ಆಡುಭಾಷೆಯನ್ನಲ್ಲ.

ರಚಿತ, ಲಿಖಿತ, ನಿರ್ಮಿತ, ಮುದ್ರಿತ, ಉಕ್ತ, ಉದಾಹೃತ, ಪರಿಷ್ಕೃತ, ಉಪಕೃತ, ಪಠಿತ, ಪರಿಹೃತ, ಹತ, ಸ್ತುತ –ಮುಂತಾದ ಸಂಸ್ಕೃತಶಬ್ದಗಳನ್ನು ಬಳಸುವ ಆವಶ್ಯಕತೆ ಒದಗಿದಾಗ, ಕರ್ಮಣಿಪ್ರಯೋಗಗಳು ಕನ್ನಡದಲ್ಲಿ ಹೆಚ್ಚಿದವು. 'ಅಲ್ಪಡು' ಪ್ರಯೋಗಗಳೂ ಅಧಿಕವಾಗಿ ಕಾಣಿಸಿಕೊಂಡವು. ಸಂವಿಧಾನದಿಂದ ಹಿಡಿದು ಗ್ರಾಮಪಂಚಾಯಿತಿ ಗುಮಾಸ್ತನ ಬರವಣಿಗೆಯ ವರೆಗೂ ಮಹಾಕಾವ್ಯದಿಂದ ದಿನದ

ಪತ್ರಿಕೆಯ ವರೆಗೂ ಹರಡಿದವು. ಈಗ ಕರ್ಮಣಿಪ್ರಯೋಗವನ್ನು ಯಾರೂ ನಿರಾಕರಿಸುವಂತಿಲ್ಲ.

ತೃತೀಯಾ ಪಂಚಮೀ ವಿಭಕ್ತಿಗಳು

ಕರ್ತೃ, ಕರಣ, ಹೇತು –ಈ ಮೂರು ಅರ್ಥದಲ್ಲಿ ತೃತೀಯಾ ವಿಭಕ್ತಿ ಬರುತ್ತದೆ. ಅಪಾದಾನಾರ್ಥದಲ್ಲಿ ಪಂಚಮೀವಿಭಕ್ತಿ ಬರುತ್ತದೆ. ಈ ವಿಷಯವು ಹಿಂದೆ ವಿಸ್ತೃತವಾಗಿ ಬಂದಿದೆ. ಇದಿಷ್ಟೂ ಸಂಸ್ಕೃತವ್ಯಾಕರಣವನ್ನನುಸರಿಸಿಯೇ ಬಂದದ್ದು. ಕನ್ನಡದಲ್ಲಿ ತೃತೀಯಾ ವಿಭಕ್ತಿಯೇ ಇಲ್ಲವೆಂದೂ ಅದರ ಕಾರ್ಯವನ್ನು ಪಂಚಮಿಯೇ ನಿರ್ವಹಿಸುತ್ತದೆಯೆಂದೂ ಕನ್ನಡದಲ್ಲಿ ವಿಖ್ಯಾತ ವಿದ್ವಾಂಸರಾದ ದಿ| ಶ್ರೀ ಸೇಡಿಯಾಪು ಕೃಷ್ಣಭಟ್ಟರು 'ಪಂಚಮೀವಿಭಕ್ತಿ' ಎಂಬ ಪ್ರಬಂಧದಲ್ಲಿ ವಾದಿಸಿದ್ದಾರೆ. ದೊಡ್ಡ ಪಂಡಿತರೆಂದು ಸರ್ವಮಾನ್ಯರಾದ ಶ್ರೀ ಸೇಡಿಯಾಪು ಅವರಿಂದ ಈ ವಾದವು ಮಂಡಿತವಾದ್ದರಿಂದಲೂ ಇದೊಂದು ಭಾಷಾವಿಚಾರದಲ್ಲಿ ಕ್ರಾಂತಿಕಾರಕವಾದ ಹೇಳಿಕೆಯಾದ್ದರಿಂದಲೂ ಪರಿಶೀಲಿಸಲು ಯೋಗ್ಯವಾಗಿದೆ. ಈ ವಿಷಯದಲ್ಲಿ ಪ್ರತ್ಯೇಕವಾಗಿ ನಾನೊಂದು ಲೇಖನವನ್ನೇ ಬರೆದಿರುವುದರಿಂದ ಪ್ರಕೃತದಲ್ಲಿ ಸಂಕ್ಷಿಪ್ತವಾಗಿ ಕೆಲವು ಮಾತುಗಳನ್ನು ಪ್ರಕರಣವಶದಿಂದ ಹೇಳಬೇಕಾಗಿ ಬಂದಿತು. ತೃತೀಯಾವಿಭಕ್ತಿಯೇ ಇಲ್ಲ ಎಂಬ ವಾದದ ಸಾರಾಂಶ ಇಷ್ಟು–

೧. ಅಪಾದಾನಾರ್ಥದಲ್ಲಿ ವಿಶೇಷವಾಗಿ ಬಳಕೆಯಲ್ಲಿರುವುದು ಇಂ–ಇಂದ –ಎಂಬ ವಿಭಕ್ತಿ. ಇದೇ ನಿಜವಾದ ಪಂಚಮೀವಿಭಕ್ತಿ. ಅತ್ತಣಿಂ, ದೆಸೆಯಿಂದ –ಎಂಬಿವು ಕೃತಕವಾದವು.

೨. ಮರದಿಂದ ಎಲೆ ಬಿದ್ದಿತು –ಇತ್ಯಾದಿ ಸ್ಥಳಗಳಲ್ಲಿ ಮರ–ಎಲೆಗಳಿಗೆ ವಿಶ್ಲೇಷವು ಸ್ಪಷ್ಟವಾಗಿ ತೋರುತ್ತದೆ. ಅಪಾದಾನವೇ ವಿಶ್ಲೇಷಮೂಲವಾದದ್ದು. ಇದರ ಅರ್ಥವನ್ನು ಇನ್ನು ಯಾವ ವಿಭಕ್ತಿಯೂ ಹೇಳಲಾರದಾದ್ದರಿಂದ 'ಇಂದ' ಎಂಬುದು ಪಂಚಮೀವಿಭಕ್ತಿ. ತೃತೀಯಾವಿಭಕ್ತಿಯಲ್ಲ.

೩. ಹೇತ್ವರ್ಥದಲ್ಲಿಯೂ ಪಂಚಮೀ ಬರುತ್ತದೆಯೆಂದು ವ್ಯಾಕರಣವೇ ಹೇಳುತ್ತದೆ. ಕನ್ನಡದಲ್ಲಿ ಕರ್ಮಣಿ ಪ್ರಯೋಗವು ಸಹಜವಲ್ಲ. ಒಂದು ವೇಳೆ ಪ್ರಯೋಗ ಮಾಡಿದರೂ 'ಹುಡುಗನಿಂದ ಪುಸ್ತಕವು ಓದಲ್ಪಡುತ್ತದೆ.' ಇತ್ಯಾದಿ ಸ್ಥಳಗಳಲ್ಲಿ ಹುಡುಗ ಶಬ್ದದ ಮೇಲೆ ಪಂಚಮೀ ಬಂದಿದೆ ಎನ್ನಬಹುದು. ಕರ್ತೃವೂ ಕ್ರಿಯೆಗೆ ಹೇತುವೇ. ಕರಣಕ್ಕೆ ಕನ್ನಡದಲ್ಲಿ ಹೆಚ್ಚಾಗಿ ಸಪ್ತಮೀ ಬರುತ್ತದೆ. 'ಕೈಯಲ್ಲಿ ಕೊಡುತ್ತಾನೆ, ಕಾಲಲ್ಲಿ ನಡೆಯುತ್ತಾನೆ. ಕತ್ತಿಯಲ್ಲಿ ಕೊಯ್ಯುತ್ತಾನೆ, ಕೊಡಲಿಯಲ್ಲಿ ಕಡಿಯುತ್ತಾನೆ' –ಇತ್ಯಾದಿ ಸ್ಥಳಗಳಲ್ಲಿ ಸಪ್ತಮಿಯನ್ನೇ ಕಾಣಬಹುದು. ಹವ್ಯಕದ ಭಾಷೆಯಲ್ಲಿ ಸಪ್ತಮಿಯೇ ಕರಣದ ಮೇಲೆ ಇರುತ್ತದೆ. ಕೈಯಿಂದ ಕೊಡುತ್ತಾನೆ, ಕೊಡಲಿಯಿಂದ ಕಡಿಯುತ್ತಾನೆ –ಎಂಬ ಪ್ರಯೋಗವಿದ್ದಲ್ಲಿ ಹೇತ್ವರ್ಥದಲ್ಲಿ ಪಂಚಮೀ ಬಂದಿದೆ ಎನ್ನಬಹುದು. ಆದ್ದರಿಂದ ತೃತೀಯಾ ವಿಭಕ್ತಿ ಕನ್ನಡದಲ್ಲಿಲ್ಲ.

ಈ ವಾದವು ಯುಕ್ತವಲ್ಲ. ವಾದಕ್ಕೆ ಪ್ರತ್ಯುತ್ತರ ಹೀಗಿದೆ:

ಕನ್ನಡದ ಎಲ್ಲ ವೈಯಾಕರಣರೂ ತೃತೀಯಾ ಪಂಚಮೀಗಳೆರಡನ್ನೂ ಅಂಗೀಕರಿಸಿದ್ದಾರೆ. ಕರ್ತೃಕರಣಗಳು ಕ್ರಿಯಾನಿಷ್ಪತ್ತಿಗೆ ಹೇತುಗಳೆನ್ನುವುದಾದರೆ ಎಲ್ಲ ಕಾರಕಗಳೂ ಕ್ರಿಯಾಜನಕಗಳಾದ್ದರಿಂದ ಹೇತುಗಳೆನ್ನಬೇಕಾಗುತ್ತದೆ. ಉಳಿದ ಕಾರಕಗಳಲ್ಲಿ ವೈಶಿಷ್ಟ್ಯವಿದೆಯಾದರೆ ಕರ್ತೃಕರಣಗಳಲ್ಲಿಯೂ ಇದೆ. ಧಾತ್ವರ್ಥ ಪ್ರಧಾನವ್ಯಾಪಾರವು ಕರ್ತೃವಿನಲ್ಲಿರುತ್ತದೆ. ಉಳಿದ ಸಮಸ್ತ ಕಾರಕಗಳೂ ಕರ್ತೃವಿಗೆ ಅಧೀನ. ಸ್ವತಂತ್ರಃ ಕರ್ತಾ. ಉಳಿದ ಕಾರಕಗಳಿಗೆ ಸ್ವಾತಂತ್ರ್ಯವಿಲ್ಲ. ಹೇತುವಿನಲ್ಲಿ ಧಾತ್ವರ್ಥಕ್ರಿಯೆ ಇರುವುದಿಲ್ಲ. ಉದಾಃ 'ಭೀಮನು ಸಿಟ್ಟಿನಿಂದ ಹಿಡಿಂಬನನ್ನು ಗುದ್ದಿದನು.' ಇಲ್ಲಿ ಗುದ್ದುವ ಕ್ರಿಯೆ ಕರ್ತೃವಾದ ಭೀಮನಲ್ಲಿದೆ. ಹೇತುವಾದ ಸಿಟ್ಟಿನಲ್ಲಿಲ್ಲ.

'ಹುಡುಗನು ಪಾಠವನ್ನು ಓದುತ್ತಾನೆ'–ಇಲ್ಲಿ ಹುಡುಗನು ಕರ್ತೃ.

'ಹುಡುಗನಿಂದ ಪಾಠವು ಓದಲ್ಪಡುತ್ತದೆ'– ಇಲ್ಲಿ ಇದ್ದಕಿದ್ದಂತೆ ಹುಡುಗನು ಹೇತುವಾಗಿಬಿಡುತ್ತಾನೋ? ಹಾಗಾದರೆ ಓದುವ ಕ್ರಿಯೆಗೆ ಕರ್ತೃ ಯಾರು? ಕರ್ತೃವಿಲ್ಲದೆ ಯಾವ ಕ್ರಿಯೆಯೂ ನಡೆಯುವುದೇ ಇಲ್ಲ.

'ಪಂಪನು ವಿಕ್ರಮಾರ್ಜುನವಿಜಯವನ್ನು ರಚಿಸಿದನು' –ಇಲ್ಲಿ ಪಂಪನು ಕರ್ತೃ.

'ವಿಕ್ರಮಾರ್ಜುನವಿಜಯವು ಪಂಪನಿಂದ ರಚಿತವಾಯಿತು' –ಇಲ್ಲಿ ಪಂಪನು ಹೇತುವಾದರೆ ಆ ಕಾವ್ಯದ ಕರ್ತೃ ಯಾರು? ರಚನಾಕ್ರಿಯೆ ಯಾರಲ್ಲಿದೆ?

ಪ್ರೇರಣಾರ್ಥದಲ್ಲಿ ಪ್ರಯೋಜ್ಯಕರ್ತೃವಾಚಿಗೆ ತೃತೀಯಾ ಬರುತ್ತದೆ. ಉದಾಃ

೧. ಸೇವಕನು ಮರವನ್ನು ಕಡಿಯುತ್ತಾನೆ.

೨. ಸಾಹುಕಾರನು ಸೇವಕನಿಂದ ಮರವನ್ನು ಕಡಿಸುತ್ತಾನೆ.

ಇಲ್ಲಿ ಕಡಿಸು ಧಾತು ಎರಡು ವ್ಯಾಪಾರಗಳನ್ನು ಬೋಧಿಸುತ್ತದೆ. ಮೂಲವಾದ ಕಡಿ ಧಾತುವಿಗೆ ತುಂಡು ಮಾಡುವ ಕ್ರಿಯೆ ಅರ್ಥ. ಇಸುವಿಗೆ ಪ್ರೇರಣೆ ಅರ್ಥ. ತುಂಡು ಮಾಡುವ ಕ್ರಿಯೆ ಸೇವಕನಲ್ಲಿರುವುದರಿಂದ ಅವನು ಪ್ರಯೋಜ್ಯ ಕರ್ತೃ. ಪ್ರೇರಣೆ ಸಾಹುಕಾರನಲ್ಲಿರುವುದರಿಂದ ಅವನು ಪ್ರಯೋಜಕ ಕರ್ತೃ. ಪ್ರಯೋಜನ ಕರ್ತೃತ್ವವು ತಿಙಂತದಿಂದ ಉಕ್ತವಾದ ಕಾರಣ ಪ್ರಥಮಾ ವಿಭಕ್ತಿ ಬಂದಿದೆ. ಪ್ರಯೋಜ್ಯ ಕರ್ತೃತ್ವವು ಉಕ್ತವಾಗಿಲ್ಲದ ಕಾರಣ ಕರ್ತರಿ ತೃತೀಯಾ ಬಂದಿದೆ. ಪ್ರಯೋಜ್ಯ ನಾದರೂ ತನ್ನ ವ್ಯಾಪಾರದಲ್ಲಿ ಸ್ವತಂತ್ರನಾದ್ದರಿಂದ ಆತನು ಕರ್ತೃವೇ ಆಗಿದ್ದಾನೆ –ಎಂದು ವ್ಯಾಕರಣದ ಪ್ರಕ್ರಿಯೆ. ಕಡಿಯುತಕ್ಕವನು ಪ್ರಯೋಜ್ಯನೇ. ತೃತೀಯಾ ಇಲ್ಲವೆನ್ನತಕ್ಕವರು ಸೇವಕಶಬ್ದಕ್ಕೆ ಹೇತ್ವರ್ಥದಲ್ಲಿ ಪಂಚಮೀ ಬಂದಿದೆ ಎನ್ನುತ್ತಾರೆ. ಹಾಗಾದರೆ ತುಂಡು ಮಾಡುವ ಕರ್ತೃ ಯಾರು? ಕರ್ತೃವಾಗಿದ್ದವನು ಇದ್ದಕ್ಕಿದ್ದಂತೆ ಹೇತುವಾಗಿಬಿಡುತ್ತಾನೋ? ತುಂಡು ಮಾಡುವ ಕ್ರಿಯೆ ಯಾರಲ್ಲಿದೆ? ಧಾತ್ವರ್ಥಕ್ರಿಯೆ ಹೇತುವಿನಲ್ಲಿರುವುದಿಲ್ಲ.

'ಸುಗ್ರೀವನಿಂದ ಶ್ರೀರಾಮನಿಗೆ ಉಪಕಾರವಾಯಿತು' –ಇಲ್ಲಿ ಸುಗ್ರೀವನು ಹೇತುವಾದರೆ ಉಪಕಾರದ ಕರ್ತೃ ಯಾರು? ಇಲ್ಲಿ ಉಪಕಾರವನ್ನು ಯಾರು ಮಾಡಿದರು? –ಎಂಬ ಪ್ರಶ್ನೆ ಏಕೆ ಹುಟ್ಟುವುದಿಲ್ಲ?

ಕರ್ತೃಕಾರಕವಾಚಿಗೆ ಹೇತ್ವರ್ಥದಲ್ಲಿ ಪಂಚಮೀ ಬರುತ್ತದೆ –ಎಂಬ ವಾದದಲ್ಲಿ, 'ಹುಡುಗನು ಶಾಲೆಗೆ ಹೋಗುತ್ತಾನೆ' –ಎಂಬ ವಾಕ್ಯದಲ್ಲಿ ಕರ್ತೃ ಯಾರು? ಎಂಬ ಪ್ರಶ್ನೆ ಹುಟ್ಟುತ್ತದೆ. ಹುಡುಗನು ಕರ್ತೃ ಎಂದರೆ, ಕರ್ತೃವು ನಿಮ್ಮ ವಾದದಂತೆ ಹೇತುವಾದ್ದರಿಂದ ಪಂಚಮೀವಿಭಕ್ತಿ ಏಕೆ ಬಂದಿಲ್ಲ? ಎಂಬ ಪ್ರಶ್ನೆ ಹುಟ್ಟುತ್ತದೆ. ಪ್ರಥಮೆಯೂ ಬರುತ್ತದೆ ಎಂದರೆ 'ಹುಡುಗನಿಂದ ಶಾಲೆಗೆ ಹೋಗುತ್ತಾನೆ' –ಎಂಬ ಪ್ರಯೋಗವು ಬರಲಿ, ಮೇಲ್ಕಂಡ ಸ್ಥಳಗಳಲ್ಲಿ ಪಂಚಮಿಗೆ ಬದಲಾಗಿ ಪಾಕ್ಷಿಕ ಪ್ರಥಮೆಯೂ ಬರಲಿ –ಎಂದು ಪ್ರತಿಬಂದಿಯಾಗಿ ಹೇಳಬೇಕಾಗುತ್ತದೆ. ಇಷ್ಟು ಸಾಕು.

ಇನ್ನು ಕರಣದ ಪರಿಸ್ಥಿತಿಯನ್ನು ನೋಡೋಣ. **ಸಾಧಕತಮಂ ಕರಣಂ.** ಧಾತ್ವರ್ಥ ಕ್ರಿಯೆಯನ್ನು ನಡೆಸಲು ಕರ್ತೃವಿಗೆ ವಿಶೇಷವಾಗಿ ಉಪಕರಿಸತಕ್ಕದ್ದು ಕರಣವೇ. ಕರಣವು ತನ್ನ ಕ್ರಿಯೆಯಿಂದಲೇ ಕರ್ತೃವಿಗೆ ಸಹಾಯ ಮಾಡುವುದರಿಂದ ಅದರಲ್ಲಿ ಕ್ರಿಯೆ ಇರಬೇಕಾದದ್ದು ನಿಯತ. ಕೆಲವು ಕಡೆ ಆ ಕ್ರಿಯೆ ಕರ್ತೃವಿನ ಕ್ರಿಯೆಯಂತೆಯೇ ಇದ್ದರೂ ಅದು ಧಾತ್ವರ್ಥಕ್ರಿಯೆಯಲ್ಲ. ಉದಾಹರಣೆಗೆ, 'ಕೈಯಿಂದ ಊಟ ಮಾಡುತ್ತಾನೆ.' ಇಲ್ಲಿ ಕರಣವಾಗಿರುವುದು ಕೈ. ಅದು ಆಹಾರವನ್ನು ಬಾಯಿಗೆ ತಲುಪಿಸುತ್ತದೆ. ತಲುಪಿಸುವುದೇ ಊಟಮಾಡುವ ಕ್ರಿಯೆಯಲ್ಲ. 'ಚಾಕುವಿನಿಂದ ಹಣ್ಣನ್ನು ಕತ್ತರಿಸುತ್ತಾನೆ.' ಇಲ್ಲಿ ಧಾತ್ವರ್ಥಕ್ರಿಯೆಯೇ ಚಾಕುವಿನಲ್ಲಿರುವಂತೆ ತೋರುತ್ತದೆ. ಕರ್ತೃವಿನ ಕ್ರಿಯೆ ಇನ್ನೂ ಅಧಿಕಾರ್ಥವನ್ನೊಳಗೊಂಡಿರುತ್ತದೆ. ಅದು ಸ್ವತಂತ್ರವಾಗಿ ತನ್ನ ಇಚ್ಛೆಯಂತೆ ಆವರ್ತಿಸುತ್ತದೆ. ಹಣ್ಣನ್ನು ಇನ್ನೊಂದು ಕೈಯಿಂದ ಹಿಡಿದುಕೊಂಡು ತನಗೆ ಇಷ್ಟವಾದಂತೆ ಚಾಕುವನ್ನು ಪ್ರೇರಿಸುವುದು ಧಾತ್ವರ್ಥಕ್ರಿಯೆ. ಅದು ಕರ್ತೃವಿನಲ್ಲಿರುತ್ತದೆ. ಕರ್ತೃವಿನ ಇಚ್ಛೆಯಂತೆ ಹಣ್ಣನ್ನು ಕತ್ತರಿಸುತ್ತ ಹೋಗುವುದು ಕರಣವಾದ ಚಾಕುವಿನ ಕ್ರಿಯೆ. ಯಾವುದರ ವ್ಯಾಪಾರವು (ಕ್ರಿಯೆ) ನಡೆಯುತ್ತಿರುವಾಗ ಕರ್ತೃವಿನ ವ್ಯಾಪಾರವು ನಡೆಯುತ್ತಿದೆಯೆಂದು ಪ್ರತೀತವಾಗುವುದೋ, ಯಾವುದರ ವ್ಯಾಪಾರವು ಮುಗಿದೊಡನೆ ಕರ್ತೃವಿನ ವ್ಯಾಪಾರವೂ ಮುಗಿಯಿತೆಂದು ಪ್ರತೀತವಾಗುವುದೋ ಅದು ಕರಣ. ಹೇತು(ಕಾರಣ)ವಾದರೋ ಪ್ರಾಯೇಣ ಗುಣವೋ ಕ್ರಿಯೆಯೋ ಆಗಿರುತ್ತದೆ. ಅದರಲ್ಲಿ ಯಾವ ವ್ಯಾಪಾರವೂ ಇರುವುದಿಲ್ಲ. ಉದಾಃ

೧. 'ನನ್ನ ಪುಣ್ಯದಿಂದ ನನಗೆ ಕಾಶಿಗೆ ಹೋಗಿ ಗಂಗಾಸ್ನಾನ ಮಾಡಲು ಸಾಧ್ಯವಾಯಿತು.' ಇಲ್ಲಿ ಪುಣ್ಯವು ಗುಣ. ಅದರಲ್ಲಿ ಯಾವ ಕ್ರಿಯೆಯೂ ಇಲ್ಲ.

೨. 'ಅವನು ಉದ್ಯೋಗದಿಂದ ಹಣವನ್ನು ಸಂಪಾದಿಸುತ್ತಾನೆ.' ಇಲ್ಲಿ ಉದ್ಯೋಗವು ಒಂದು ಕ್ರಿಯೆ. ಕ್ರಿಯೆಯಲ್ಲಿ ಇನ್ನೊಂದು ಕ್ರಿಯೆ ಇರುವುದಿಲ್ಲ.

ಕ್ವಚಿತ್ ದ್ರವ್ಯವೂ ಹೇತುವಾಗುತ್ತದೆ. ಉದಾಃ

೧. 'ಗೊಬ್ಬರದಿಂದ ಪೈರನ್ನು ಬೆಳೆಯುತ್ತಾನೆ.' ಗೊಬ್ಬರವು ದ್ರವ್ಯ. ಪೈರಿಗೆ ಪೋಷಕಾಂಶವನ್ನು ಕೊಡುವ ಕ್ರಿಯೆ ಅದರಲ್ಲಿದೆಯೆಂದು ಹೇಳಬಹುದು. ಅದು ನಡೆಯುತ್ತಿರುವಾಗ ಬೆಳೆಯುವ ಕ್ರಿಯೆ ಆಗುತ್ತಿದೆಯೆಂದೂ ಅದು ನಿಂತೊಡನೆ ಪೈರು ಬೆಳೆಯುವ ಕ್ರಿಯೆ ಮುಗಿದುಹೋಯಿತೆಂದೂ ಪ್ರತೀತವಾಗುವುದೇ ಇಲ್ಲ.

೨. 'ಹಣದಿಂದ ಮನೆಯನ್ನು ಕಟ್ಟುತ್ತಾನೆ.' ಹೇತುವಾದ ಹಣವು ಇಲ್ಲಿ ದ್ರವ್ಯ. ಹಣದ ಕ್ರಿಯೆಯಾಗಲಿ ಅದು ಮುಗಿದೊಡನೆ ಮನೆ ಕಟ್ಟುವ ಕೆಲಸ ಮುಗಿಯಿತೆಂದಾಗಲಿ ಪ್ರತೀತವಾಗುವುದಿಲ್ಲ. ಮನೆಕಟ್ಟುವುದಕ್ಕೆ ಇಟ್ಟಿಗೆ ಸಿಮೆಂಟು ಗಳಂತೆ ನೇರವಾಗಿ ಹಣವು ಸಾಧಕವೂ ಅಲ್ಲ.

ಹೇತುವೆಂದರೆ ಕಾರಣ (Reason, cause). ಕರಣವೆಂದರೆ ಸಾಧನ, ಉಪಕರಣ (Instrument). ಕರಣವು ಹೇತುವಲ್ಲವೆಂಬುದು ಸ್ಪಷ್ಟವಾಗಿದೆ. ಕರಣವೇ ಹೇತುವಾಗಬಹುದಾಗಿದ್ದರೆ, ಕರಣಕ್ಕೆ ಒಮ್ಮೆ ಹೇತುವಿಗೆ ಒಮ್ಮೆ ಎಂದು ಎರಡು ಸಲ ಪಾಣಿನಿಯಾಗಲಿ ಕನ್ನಡದ ವೈಯಾಕರಣರಾಗಲಿ ತೃತೀಯೆಯನ್ನು ವಿಧಿಸುತ್ತಿರಲಿಲ್ಲ. 'ಹುಡುಗನು ಲೇಖನಿಯಿಂದ ಬರೆಯುತ್ತಿದ್ದಾನೆ' ಎಂಬ ವಾಕ್ಯದಲ್ಲಿ ಲೇಖನಿಯು ಕರಣವಾಗಿದೆ. 'ಹುಡುಗನು ಯಾವ ಹೇತುವಿನಿಂದ ಬರೆಯುತ್ತಿದ್ದಾನೆ?' ಎಂಬ ಪ್ರಶ್ನೆಗೆ 'ಲೇಖನಿಯಿಂದ' ಎಂದು ಯಾರೂ ಉತ್ತರಿಸುವುದಿಲ್ಲ. ಕರ್ತೃವೂ ಕ್ರಿಯೆಗೆ ಹೇತುವಾಗುವುದಿಲ್ಲ. 'ಸಾಹುಕಾರನು ಸೇವಕನಿಂದ ತೆಂಗಿನಕಾಯಿಗಳನ್ನು ಕೀಳಿಸುತ್ತಿದ್ದಾನೆ' ಎಂಬ ವಾಕ್ಯದಲ್ಲಿ ಸೇವಕನು ಪ್ರಯೋಜ್ಯ ಕರ್ತೃ. ಯಾರಿಂದ? ಎಂಬ ಪ್ರಶ್ನೆಗೆ ಸೇವಕನಿಂದ ಎಂಬುದು ಉತ್ತರವಾಗುತ್ತದೆ. ಯಾವ ಹೇತುವಿನಿಂದ? ಎಂದು ಪ್ರಶ್ನಿಸಿದರೆ 'ಸೇವಕನಿಂದ' ಎಂದು ಯಾರೂ ಉತ್ತರಿಸುವುದಿಲ್ಲ.

ಇಷ್ಟಾಗಿ ಹೇತ್ವರ್ಥದಲ್ಲಿ ಪಂಚಮಿಯು ಬರುತ್ತದೆ ಎಂಬುದಕ್ಕೆ ಪ್ರಮಾಣವೇನು? ನಾಗವರ್ಮನು ಹೇಳಿಲ್ಲ. ಕೇಶಿರಾಜನು ಹೇತುವಿಗೆ ತೃತೀಯೆಯನ್ನೂ ಹೇಳಿ (ಸೂ. ೧೪೯) ಅನಂತರ ಪಂಚಮಿಯನ್ನು ಹೇಳಿದ್ದಾನೆ (ಸೂ. ೧೫೨). ಪಂಚಮಿಗೆ ಕೇಶಿರಾಜನು ಕೊಟ್ಟ ಉದಾಹರಣೆ ಇದು– ಉದ್ಯೋಗದತ್ತಣಿಂ ಸಿರಿ ಬಂದುದು.

ಭಟ್ಟಾಕಳಂಕನು 'ಹೇತಾವತ್ತಣಿಂ' (ಸೂ. ೨೨೦) ಎಂದು ಸೂತ್ರಿಸಿ ದಾನದತ್ತಣಿಂ ಭೋಗಂ, ಜ್ಞಾನದತ್ತಣಿಂ ಮೋಕ್ಷಂ, ಉಜ್ಜುಗದತ್ತಣಿಂ ಸಿರಿ, ಕಿಚ್ಚಿನತ್ತಣಿಂ ಪೊಗೆ –ಎಂದು ನಾಲ್ಕು ಉದಾಹರಣೆಗಳನ್ನು ಕೊಟ್ಟಿದ್ದಾನೆ.

ಇವುಗಳಲ್ಲಿ ಕಿಚ್ಚು ಎಂಬುದನ್ನು ಬಿಟ್ಟು ಉಳಿದ ಯಾವ ಹೇತುಗಳಲ್ಲಿಯೂ ಕ್ರಿಯೆಯಿಲ್ಲ. ಅವು ದ್ರವ್ಯಗಳೂ ಅಲ್ಲ ಎಂಬುದನ್ನು ಗಮನಿಸಬೇಕು. ಕಿಚ್ಚು ಹೊಗೆಗೆ ಕಾರಣವೆನಿಸಿದರೂ ಹೊಗೆಯೆಂಬ ದ್ರವ್ಯಕ್ಕೆ ಕಾರಣವಾಗಬಹುದು, ಕ್ರಿಯೆಗಲ್ಲ. ಕ್ರಿಯೆಗೆ ಕಾರಣವಾದದ್ದು ಪ್ರಕೃತವಾಗಿದೆ. ಈ ಕನ್ನಡ ವೈಯಾಕರಣರಿಗೆ ಮೂಲ ಭೂತವಾದದ್ದು 'ವಿಭಾಷಾ ಗುಣೇಽಸ್ತ್ರಿಯಾಂ' ಎಂಬ ಪಾಣಿನಿಸೂತ್ರ (೨–೩–೨೫).

ಹೇತ್ವರ್ಥದಲ್ಲಿರುವ ಗುಣವಾಚಿಯ ಮೇಲೆ ಪಂಚಮೀವಿಭಕ್ತಿಯು ವಿಕಲ್ಪವಾಗಿ ಬರುತ್ತದೆ, ಗುಣವಾಚಿಯು ಸ್ತ್ರೀಲಿಂಗದಲ್ಲಿರಬಾರದು –ಎಂದು ಸೂತ್ರಾರ್ಥ. ಪಂಚಮೀ ಬಾರದಾಗ ತೃತೀಯೆಯೇ ಬರುತ್ತದೆ. 'ಜಾಡ್ಯೇನ ಜಾಡ್ಯಾದ್ವಾ ಬದ್ಧಃ' ಎಂಬ ಒಂದೇ ಉದಾಹರಣೆಯನ್ನು ಸಿದ್ಧಾಂತಕೌಮುದಿಯಲ್ಲಿ ಕೊಟ್ಟಿದ್ದಾರೆ. ಜಾಡ್ಯದ ನಿಮಿತ್ತದಿಂದ ಬಂಧನಕ್ಕೆ ಒಳಗಾದನು ಎಂದು ಅದರ ಅರ್ಥ. ಈ ಅಪ್ರಸಿದ್ಧ ಉದಾಹರಣೆಯೇ ಹೇತ್ವರ್ಥದಲ್ಲಿ ಪಂಚಮಿಯ ಬಳಕೆ ವಿರಳವೆಂಬುದನ್ನು ಸೂಚಿಸುತ್ತದೆ. ಹೇತುವು ಗುಣವಾಚಿಯಾದಾಗ ಮಾತ್ರ ಪಂಚಮೀ. ಇಲ್ಲದಿದ್ದರೆ ತೃತೀಯೆಯೇ ಬರಬೇಕು. ಕ್ವಚಿತ್ ದ್ರವ್ಯವಾದರೂ ಬರುತ್ತದೆ ಎಂದು ಹೇಳಿ 'ಪರ್ವತೋ ವಹ್ನಿಮಾನ್ ಧೂಮಾತ್' ಎಂದು ಭಟ್ಟೋಜಿದೀಕ್ಷಿತರು ಉದಾಹರಿಸಿದ್ದಾರೆ. ವಸ್ತುತಃ ಇದು ಸರಿಯಾದ ಉದಾಹರಣೆಯಲ್ಲ. ಧೂಮವು ವಹ್ನಿಗೆ ಕಾರಣವಲ್ಲ. ಧೂಮದಿಂದ ವಹ್ನಿ ಹುಟ್ಟುವುದೂ ಇಲ್ಲ. ಧೂಮಜ್ಞಾನದಿಂದ ವಹ್ನಿಜ್ಞಾನವಾಗುತ್ತದೆ. ಧೂಮಜ್ಞಾನವು ವಹ್ನಿಜ್ಞಾನಕ್ಕೆ ನಿಮಿತ್ತ. ಧೂಮಶಬ್ದಕ್ಕೆ ಧೂಮಜ್ಞಾನವು ಲಕ್ಷ್ಯಾರ್ಥ. ವಾಚ್ಯಾರ್ಥವು ದ್ರವ್ಯವಾಗಿದ್ದರೂ ಪಂಚಮೀ ಬರುತ್ತದೆ, ಲಕ್ಷ್ಯಾರ್ಥವು ಗುಣವಾದರೂ ಅಡ್ಡಿಯಿಲ್ಲ ಎಂದು ದೀಕ್ಷಿತರ ಅಭಿಪ್ರಾಯ. ಕರ್ತೃ, ಕರಣ, ಹೇತುಗಳು ದ್ರವ್ಯವಾಚಿಗಳಾಗಿದ್ದರೂ ಹೇತ್ವರ್ಥದಲ್ಲಿ ಪಂಚಮೀ –ಎಂಬ ವಾದವೇ ಇದರಿಂದ ತಳಹದಿಯಿಲ್ಲದೆ ಕುಸಿದುಬೀಳುತ್ತದೆ. ಜ್ಞಾನವು ಗುಣ.

ಮತ್ತು ಕರಣವನ್ನು ಹೇತುವೆಂದು ತಿಳಿಯುವುದಾದರೆ, ಕನ್ನಡದಲ್ಲಿ ಕರಣವೆಂಬ ಕಾರಕವೇ ಇಲ್ಲವೆಂದೂ ಹೇಳಬೇಕಾಗುತ್ತದೆ. ಕರ್ತ್ರರ್ಥದಲ್ಲಿ ಪ್ರಥಮಾ ಬರುತ್ತದೆಯೆಂದು ವ್ಯಾಕರಣದಲ್ಲಿ ಹೇಳಿಲ್ಲವಾದ್ದರಿಂದ ಕರ್ತೃಸಂಜ್ಞೆಗೆ ಉಪಯೋಗವೇನೆಂಬ ಪ್ರಶ್ನೆಯೂ ಹುಟ್ಟುತ್ತದೆ.

ಇಷ್ಟು ಗೊಂದಲವನ್ನೆಬ್ಬಿಸುವುದಕ್ಕಿಂತ, 'ಇಂದ' ಎನ್ನುವುದು ತೃತೀಯಾವಿಭಕ್ತಿಯೆಂದು ಶಾಸ್ತ್ರಕಾರರು ಹೇಳಿರುವುದರಿಂದ, ಕನ್ನಡದಲ್ಲಿ ತೃತೀಯಾವಿಭಕ್ತಿ ಇದೆ. ಪಂಚಮಿಯೇ ಇಲ್ಲವೆಂದರೆ ಏನಾಗುತ್ತದೆ? ವಿಶ್ಲೇಷಮೂಲವಾದ ಅಪಾದಾನಕ್ಕೆ ಪಂಚಮೀ ಬರುವುದರಿಂದ ಪಂಚಮೀ ಬೇಕು –ಎನ್ನುವುದಾದರೆ, ಅಪಾದಾನದ ಮೇಲೂ ತೃತೀಯೆಯೇ ಬರುತ್ತದೆ ಎಂದು ಉತ್ತರಿಸಬಹುದು. ವಿಶ್ಲೇಷವಿಲ್ಲದ ಕರ್ತೃ, ಕರಣ, ಹೇತುವಾಚಿಗಳಿಗೆ ನಿಮ್ಮ ಮತದಲ್ಲಿ ಪಂಚಮೀ ಬರುವುದಾದರೆ, ವಿಶ್ಲೇಷವಿರುವ ಅಪಾದಾನಕ್ಕೆ ತೃತೀಯೆ ಏಕೆ ಬರಬಾರದು? ಪಂಚಮ್ಯರ್ಥದಲ್ಲಿ ತೃತೀಯೆ ಬರುತ್ತದೆಯೆಂದು ಕನ್ನಡದ ವೈಯಾಕರಣರು ಒಪ್ಪಿಯೇ ಇದ್ದಾರೆ. ಹಿಂದೆ ಹೇಳಿದ ಯಾವ ತೊಡರುಗಳೂ ಈ ಪಕ್ಷದಲ್ಲಿ ಬರುವುದಿಲ್ಲ.

ವಸ್ತುತಸ್ತು ತೃತೀಯಾ, ಪಂಚಮೀ –ಎಂಬ ಎರಡು ಪ್ರತ್ಯಯಗಳೂ ಕನ್ನಡದಲ್ಲಿವೆ. 'ಇಂದ' ಎಂಬ ಏಕಾಕೃತಿಯ ಪ್ರತ್ಯಯಗಳು ಎರಡು ಇವೆ. ಆಕೃತಿಯು ಒಂದೇ ಆದ ಮಾತ್ರದಿಂದ ವಿಭಕ್ತಿಯೂ ಒಂದೇ ಆಗಬೇಕಾಗಿಲ್ಲ. ಸಂಸ್ಕೃತದಲ್ಲಿಯೂ 'ಅಸ್, ಓಸ್, ಭ್ಯಾಂ' ಎಂಬಿವು ಏಕಾಕೃತಿಯಲ್ಲಿರುವ ಬೇರೆಬೇರೆ ವಿಭಕ್ತಿಗಳು.

ಪ್ರಾಚೀನ ಕನ್ನಡದಲ್ಲಿ "ಅತ್ತಣಿಂ" ಎಂಬ ಇನ್ನೊಂದು ಪಂಚಮಿಯ ಪ್ರತ್ಯಯವೂ ಇದ್ದಿರಬೇಕು. ದೆಸೆಯಿಂದ ಎಂಬುದು ಪಂಚಮ್ಯರ್ಥವನ್ನು ವಿವರಿಸುವ ನಾಮಪದ ಅದು ಪ್ರತ್ಯಯವಲ್ಲ.

ಕರಣಾರ್ಥದಲ್ಲಿ ಸಪ್ತಮೀ

ತೃತೀಯಾ ವಿಭಕ್ತಿ ಇಲ್ಲವೆಂಬ ವಾದದಲ್ಲಿ ಇನ್ನೊಂದು ಅಭಿಪ್ರಾಯವಿರಬಹುದು. ಕನ್ನಡದಲ್ಲಿ ಕರಣಕಾರಕವಿದೆ. ಅದು ಇಲ್ಲ ಎನ್ನುವುದಿಲ್ಲ. ಅದಕ್ಕೆ ಸ್ವತಂತ್ರವಾದ ವಿಭಕ್ತಿ ಇಲ್ಲ. ಆದ್ದರಿಂದ ಒಮ್ಮೆ ಪಂಚಮಿಯನ್ನೂ ಒಮ್ಮೆ ಸಪ್ತಮಿಯನ್ನೂ ಆಶ್ರಯಿಸುತ್ತದೆ. ಕರಣವು ಹೇತುವಲ್ಲದಿದ್ದರೂ ಹೇತುಸದೃಶವಾದ್ದರಿಂದ ಪಂಚಮಿಗೆ ಶರಣಾಗುತ್ತದೆ. ಕರ್ತೃವೂ ಸಹ ಕರ್ಮಣಿಪ್ರಯೋಗದಲ್ಲಿ, ಪ್ರಯೋಜ್ಯ ಕರ್ತೃವಾದಾಗ ಹೇತುಸದೃಶವಾದ್ದರಿಂದ ಪಂಚಮಿಯನ್ನು ಪಡೆಯುತ್ತದೆ. ವಸ್ತುತಃ ಕರಣವಾಚಿಗೆ ಸಪ್ತಮೀ ಬರುತ್ತದೆಯೆಂಬುದೇ ಪ್ರಯೋಗಾಧಿಕ್ಯದಿಂದ ದೃಢಪಡುತ್ತದೆ. ಉದಾ–

'ಕೈಯಿಂದ ಕೊಡುತ್ತಾನೆ– ಕೈಯಲ್ಲಿ ಕೊಡುತ್ತಾನೆ, ಚಾಕುವಿನಿಂದ ಕತ್ತರಿಸುತ್ತಾನೆ– ಚಾಕುವಿನಲ್ಲಿ ಕತ್ತರಿಸುತ್ತಾನೆ, ಕೊಡಲಿಯಿಂದ ಕಡಿಯುತ್ತಾನೆ– ಕೊಡಲಿಯಲ್ಲಿ ಕಡಿಯುತ್ತಾನೆ, ಕಣ್ಣಿಂದ ನೋಡುತ್ತಾನೆ– ಕಣ್ಣಲ್ಲಿ ನೋಡುತ್ತಾನೆ. ಲೇಖನಿಯಲ್ಲಿ ಬರೆಯುತ್ತಾನೆ, ಶಾಯಿಯಲ್ಲಿ ಬರೆಯುತ್ತಾನೆ' –ಇತ್ಯಾದಿ. ಇವುಗಳಲ್ಲಿ ಸಪ್ತಮೀ ಪ್ರಯೋಗವೇ ಅಧಿಕ. ಹವ್ಯಕಭಾಷೆಯಲ್ಲಿ ಸಪ್ತಮಿಯೇ ಕಂಡುಬರುತ್ತದೆ –ಎಂದು ಅಭಿಪ್ರಾಯ. ಈ ಪಕ್ಷದಲ್ಲಿ ಮೊದಲನೆಯದಾಗಿ, ಕರ್ಮಣಿ ಪ್ರಯೋಗದಲ್ಲಿ ಕರ್ತೃವಾಚಿಗೂ ಪ್ರೇರಣಾರ್ಥದಲ್ಲಿ ಪ್ರಯೋಜ್ಯಕರ್ತೃವಿಗೂ ಸಪ್ತಮೀ ಏಕೆ ಬರಬಾರದು? ಎಂಬ ಪ್ರಶ್ನೆಗೆ ಉತ್ತರವಿಲ್ಲ. ಕರ್ತೃವಾದ್ದರಿಂದ ಪ್ರಥಮಾ ಏಕೆ ಬರುವುದಿಲ್ಲ? ಎಂಬ ಪ್ರಶ್ನೆಗೂ ಉತ್ತರವಿಲ್ಲ.

ಕರಣವಾಚಿಗೆ ಸಪ್ತಮೀ ಬರಲು ಕಾರಣವನ್ನೀಗ ಹೇಳಬೇಕಾಗಿದೆ. ವಿಹಿತವಾದ ತೃತೀಯೆ ಬರದಾಗ ಸಪ್ತಮಿಯೇ ಏಕೆ ಬರಬೇಕು? ಮತ್ತೊಂದು ವಿಭಕ್ತಿಯು ಏಕೆ ಬರುವುದಿಲ್ಲ?

'ವಿವಕ್ಷಾತಃ ಕಾರಕಾಣಿ ಭವಂತಿ' – ಎಂಬ ವ್ಯಾಕರಣಶಾಸ್ತ್ರದ ಪ್ರಮೇಯವನ್ನಿಲ್ಲಿ ಸ್ಮರಿಸಿಕೊಳ್ಳಬೇಕು. ವಕ್ತಾರನು ಯಾವ ವಸ್ತು ಯಾವ ಕಾರಕಸ್ವರೂಪದಲ್ಲಿ ಕ್ರಿಯಾ ನಿಷ್ಪತ್ತಿಯನ್ನು ಮಾಡಲೆಂದು ಬಯಸುತ್ತಾನೋ ಆ ವಸ್ತು ಆ ಕಾರಕಸ್ವರೂಪವನ್ನು ತಳೆಯುತ್ತದೆ. ಪ್ರಕೃತ ಕಾರಕದ ಶಕ್ತಿಯು ಇನ್ನೊಂದು ರೂಪದಲ್ಲಾದರೂ ಬದಲಾದ ಕಾರಕದಲ್ಲಿರಬೇಕು ಎಂದರೆ ಬದಲಾಗಿ ಬರುವ ಕಾರಕದಲ್ಲಿ ಮೂಲ ಕಾರಕದ ಶಕ್ತಿಯನ್ನು ಭರಿಸುವ ಸಾಮರ್ಥ್ಯವಿರಬೇಕು. ಅಂತಹ ಸಾಮರ್ಥ್ಯವಿಲ್ಲದ ಯಾವುದೋ ಕಾರಕವನ್ನು ವಿವಕ್ಷೆ ಮಾಡಕೂಡದು. ಲೋಕದಲ್ಲಿಯೂ ಬಡಗಿಯ ಕೆಲಸಕ್ಕೆ ಇನ್ನೊಬ್ಬನನ್ನು ಆರಿಸಿಕೊಳ್ಳುವಾಗ ಬಡಗಿಯ ಕೆಲಸ ಮಾಡಬಲ್ಲವನನ್ನೇ ಆರಿಸಿಕೊಳ್ಳುತ್ತಾರೆ. ವಿಭಕ್ತಿಪಲ್ಲಟವಾಗುವುದು ಸಹ ಈ ವಿವಕ್ಷಾಭೇದದಿಂದ. ಈ ವಾಕ್ಯಗಳನ್ನು ನೋಡಿ–

ಕತ್ತಿಯು ಕತ್ತರಿಸುತ್ತದೆ
ಕೊಡಲಿಯು ಕಡಿಯುತ್ತದೆ
ಲೇಖನಿಯು ಬರೆಯುತ್ತದೆ
} ಕರಣವು ಕರ್ತೃವೆಂದು ವಿವಕ್ಷೆ.

ಕುಕ್ಕರ್ ಪಾತ್ರೆ ಅಡುಗೆ ಮಾಡುತ್ತದೆ
ಈ ಕೊಳಗ ೨ ಕೆ.ಜಿ. ಅಕ್ಕಿಯನ್ನು ಬೇಯಿಸುತ್ತದೆ.
ಈ ಹಂಡೆ ಸಾಕಷ್ಟು ನೀರನ್ನು ಕಾಯಿಸುತ್ತದೆ.
} ಅಧಿಕರಣವು ಕರ್ತೃವಾಗಿದೆ.

ಪ್ರತಿಯೊಂದು ಕಾರಕಕ್ಕೂ ತನ್ನ ಕ್ರಿಯೆಯನ್ನು ಮಾಡಲು ಸ್ವಾತಂತ್ರ್ಯವಿರುತ್ತದೆ. ಆದ್ದರಿಂದ ಇಲ್ಲಿ ಕರ್ತೃಸಂಜ್ಞೆ ಬಂದಿದೆ. ಒಂದೇ ಧಾತ್ವರ್ಥಕ್ರಿಯೆಯನ್ನು ನಿರ್ವಹಿಸುವಾಗ ಪರಾಧೀನತೆ ತೋರಿದಾಗ ಅದು ಕರ್ತೃವಾಗುವುದಿಲ್ಲ. ಕರ್ತೃವಿಗೆ ಅಧೀನವಾಗಿಬಿಡುತ್ತದೆ.

ಕರಣವು ಪ್ರಬಲವಾದ ಕಾರಕ. ಕರ್ತೃವಿಗೆ ಎರಡನೆಯ ಸ್ಥಾನದಲ್ಲಿ ಇರತಕ್ಕದ್ದು ಅದರ ಶಕ್ತಿಯು ಸಾಧಕವಾದ ಕರಣದಲ್ಲಿ ಸಾಧನರೂಪದಲ್ಲಿದ್ದಾಗ ತೃತೀಯಾವಿಭಕ್ತಿ ಬರುತ್ತದೆ– 'ಕೊಡಲಿಯಿಂದ ಮರವನ್ನು ಕಡಿಯುತ್ತಾನೆ.' ಕರಣದಲ್ಲಿಯೇ ಆಶ್ರಿತರೂಪ ದಲ್ಲಿ ವಿವಕ್ಷಿತವಾದಾಗ ಅಧಿಕರಣಸಪ್ತಮೀ ಬರುತ್ತದೆ– 'ಕೊಡಲಿಯಲ್ಲಿ ಮರವನ್ನು ಕಡಿಯುತ್ತಾನೆ.'

ಈ ಕಾರಣದಿಂದಲೇ 'ಕೈಯಿಂದ ಕೊಡುತ್ತಾನೆ. ಕೈಯಲ್ಲಿ ಕೊಡುತ್ತಾನೆ, ಲೇಖನಿಯಿಂದ ಬರೆಯುತ್ತಾನೆ–ಲೇಖನಿಯಲ್ಲಿ ಬರೆಯುತ್ತಾನೆ, ಕಣ್ಣಿಂದ ನೋಡುತ್ತಾನೆ–ಕಣ್ಣಲ್ಲಿ ನೋಡುತ್ತಾನೆ' –ಇತ್ಯಾದಿ ಪ್ರಯೋಗಗಳು ಬರುತ್ತವೆ. ಕನ್ನಡದ ವೈಯಾಕರಣರು ವಿಭಕ್ತಿಪಲ್ಲಟದಿಂದ ತೃತೀಯೆಗೆ ಸಪ್ತಮೀ ಬರುತ್ತದೆ ಎಂದಿರುವುದು ಈ ಕಾರಣದಿಂದ.

'ಶಾಯಿಯಿಂದ ಬರೆಯುತ್ತಾನೆ'– ಇಲ್ಲಿ ಬರೆಯುವುದಕ್ಕೆ ಶಾಯಿ ಹೇತು. 'ಶಾಯಿಯಲ್ಲಿ ಬರೆಯುತ್ತಾನೆ' –ಇಲ್ಲಿ ಬರೆಯುವ ಅಕ್ಷರಕ್ಕೆ ಶಾಯಿ ಅಧಿಕರಣ. 'ಕಪ್ಪು ಶಾಯಿಯಲ್ಲಿರುವ ಅಕ್ಷರಗಳು ಚೆನ್ನಾಗಿ ಕಾಣುತ್ತವೆ' ಎಂಬಲ್ಲಿ ಶಾಯಿಯ ಅಧಿಕರಣತ್ವವು ಸ್ಪಷ್ಟವಾಗುತ್ತದೆ. 'ಕಾಗದದಲ್ಲಿ ಬರೆಯುತ್ತಾನೆ'– ಬರೆಯುವ ಅಕ್ಷರಗಳಿಗೆ ಕಾಗದವು ಅಧಿಕರಣ. 'ಪಾತ್ರೆಯಲ್ಲಿ ಬೇಯಿಸುತ್ತಾನೆ' ಎಂಬಂತೆಯೇ ಇದು ಬೇಯಿಸುವ ಅನ್ನಕ್ಕೆ ಪಾತ್ರೆ ಅಧಿಕರಣವಾಗಿರುತ್ತದೆ.

ಕರಣಾರ್ಥದಲ್ಲಿ ತೃತೀಯೆಯೇ ಹೆಚ್ಚು ಸಮರ್ಥವಾದ ವಿಭಕ್ತಿ. ಕರಣದ ಶಕ್ತಿ ಸಾಧಕತ್ವರೂಪದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಸಪ್ತಮೀ ಬಂದಾಗ ಆ ಶಕ್ತಿಗೆ ಹೆಚ್ಚು ಒತ್ತು ಇರುವುದಿಲ್ಲ. ಅರುವತ್ತು ಕ್ಯಾಂಡಲಿನ ದೀಪದ ಶಕ್ತಿ ಇದ್ದಂತೆ ತೃತೀಯೆಯ ಶಕ್ತಿ. ನಲವತ್ತು ಕ್ಯಾಂಡಲಿನ ದೀಪದ ಶಕ್ತಿಯಂತೆ ಸಪ್ತಮಿಯ ಶಕ್ತಿ. ಬೆಳಕು ಬರುತ್ತದೆ. ಓದುವ ಕ್ರಿಯೆಯೂ ಸಾಗುತ್ತದೆ. ಕರಣವು ಕ್ರಿಯೆಯನ್ನು ಮಾತ್ರ ನಿರ್ವಹಿಸುತ್ತದೆ.

ಕರ್ಮಕರ್ತರಿಪ್ರಯೋಗ

ಕರ್ಮವನ್ನು ಕರ್ತೃವೆಂದು ವಿವಕ್ಷೆಮಾಡಬಹುದು. ಫಲಾನುಕೂಲುವ್ಯಾಪಾರವು ಧಾತ್ವರ್ಥವಷ್ಟೆ. ವ್ಯಾಪಾರಾಶ್ರಯನಾದವನು ಕರ್ತ. ವ್ಯಾಪಾರವನ್ನು ಕೈಬಿಟ್ಟು ಫಲವು ಮಾತ್ರ ಧಾತ್ವರ್ಥವೆಂದು ವಿವಕ್ಷೆ ಮಾಡಿದಾಗ ಕರ್ಮನು ಕರ್ತೃವಾಗಿಬಿಡುತ್ತದೆ. ಈ ವಿಚಾರವು 'ಕರ್ಮವತ್ ಕರ್ಮಣಾ ತುಲ್ಯಕ್ರಿಯಃ' ಎಂಬ ಪಾಣಿನಿಸೂತ್ರದಲ್ಲಿ (೩–೧–೮೭) ವಿವೃತವಾಗಿದೆ. ವಿಶೇಷವೇನೆಂದರೆ, ಆಗ ಕರ್ತೃವಾಗಿದ್ದರೂ ಕರ್ಮವು ಕರ್ಮಣಿಪ್ರಯೋಗದ ರೂಪವನ್ನೇ ಪಡೆಯುತ್ತದೆ. ಉದಾ:

ಪಚ್ಯತೇ ಓದನಃ = ಅನ್ನವು ತಾನಾಗಿ ಆಗುತ್ತದೆ ಎಂದರ್ಥ. ಅನ್ನ ಮಾಡಲು ಹೆಚ್ಚು ಶ್ರಮಿಸಬೇಕಾಗಿಲ್ಲ ಎಂದು ಅಭಿಪ್ರಾಯ.

ಭಿದ್ಯತೇ ಕಾಷ್ಠಂ = ಕಟ್ಟಿಗೆಯು ಒಡೆಯುತ್ತದೆ. ಕಟ್ಟಿಯನ್ನು ಒಡೆಯುವುದು ಸುಲಭವೆಂದರ್ಥ.

ಇದನ್ನು ಕರ್ಮಕರ್ತರಿ ಪ್ರಯೋಗವೆನ್ನುತ್ತಾರೆ.

ಕನ್ನಡದಲ್ಲಿಯೂ ಹೀಗಿರಬಹುದೆ? –ಎಂಬುದು ವಿಚಾರಾರ್ಹವಾದದ್ದು. ಈ ಪ್ರಯೋಗಗಳನ್ನು ನೋಡಬಹದು:

೧. ಕಟ್ಟಿಗೆಯನ್ನು ಒಡೆಯುತ್ತಾನೆ –ಕಟ್ಟಿಗೆ ಒಡೆಯುತ್ತದೆ.
೨. ಕಲ್ಲನ್ನು ಒಡೆಯುತ್ತಾನೆ– ಕಲ್ಲು ತುಂಡಾಗುತ್ತದೆ. (ಕಲ್ಲು ಒಡೆಯುತ್ತದೆ.)
೩. ಮರವನ್ನು ಸೀಳುತ್ತಾನೆ– ಮರವು ಸೀಳುತ್ತದೆ.
೪. ನೇಗಿಲನ್ನು ಉಳುತ್ತಾನೆ– ನೇಗಿಲು ಉಳುತ್ತದೆ.

ಸಂಸ್ಕೃತದಲ್ಲಿರುವಂತೆ ಕರ್ಮಣಿ ಪ್ರಯೋಗದ ರೂಪವು ಇಲ್ಲಿ ಕರ್ಮಕ್ಕಿಲ್ಲ. ಈ ಪ್ರಯೋಗಗಳಿಗೆ ಎರಡು ಸಮಾಧಾನಗಳನ್ನು ಹೇಳಬಹುದು.

೧. ಈ ಧಾತುಗಳಿಗೆ ಎರಡೆರಡು ಅರ್ಥಗಳಿವೆ. ಧಾತುವಿಗೆ ಒಡೆದು ತುಂಡಾಗುವುದು –ಒಡೆದು ತುಂಡುಮಾಡುವುದು, ಸೀಳಿಕೊಳ್ಳುವುದು– ಸೀಳು ಮಾಡುವುದು, ಮಣ್ಣನ್ನು ಕೆರೆಯುವುದು, ಕೆರೆಸುವುದು –ಇತ್ಯಾದಿ. ಅಕರ್ಮಕ ವಾದಾಗ ಒಂದು ರೀತಿಯ ಪ್ರಯೋಗ, ಸಕರ್ಮಕವಾದಾಗ ಇನ್ನೊಂದು ರೀತಿಯ ಪ್ರಯೋಗ.

೨. ಕನ್ನಡದಲ್ಲಿಯೂ ಕರ್ಮಕರ್ತರಿ ಪ್ರಯೋಗವಿದೆಯೇ ಎಂಬುದನ್ನು ವಿದ್ವಾಂಸರು ವಿಚಾರಮಾಡಬಹುದು.

* * * *

ಕ್ರಿಯಾನಿಷೇಧವಿದ್ದಾಗ ಕಾರಕಸಂಜ್ಞೆ

ಕುತೂಹಲಕರವಾದ ಒಂದು ವಿಷಯವನ್ನಿಲ್ಲಿ ಬರೆಯಬೇಕಾಗಿದೆ. ವಾಕ್ಯದಲ್ಲಿ ಪ್ರತಿಪಾದಿತವಾದ ಕ್ರಿಯೆಯನ್ನನುಸರಿಸಿ ಅದರ ನಿಷ್ಪತ್ತಿಗಾಗಿ ಕರ್ತೃ, ಕರ್ಮ, ಕರಣ –ಮುಂತಾದ ಕಾರಕಸಂಜ್ಞೆಗಳು ಬರುತ್ತವೆ. ಸಂಜ್ಞಾನುಸಾರವಾಗಿ ಬೇರೆಬೇರೆ ವಿಭಕ್ತಿಗಳು ಬರುತ್ತವೆ. ವಾಕ್ಯದಲ್ಲಿ ಕ್ರಿಯಾನಿಷೇಧವೇ ಇದ್ದಾಗ ಅವನು ಹೋಗುವುದಿಲ್ಲ, ಹೋಗಲಿಲ್ಲ, ಹೋಗನು –ಇತ್ಯಾದಿ ಸ್ಥಳದಲ್ಲಿ, ಕ್ರಿಯೆಯೇ ನಡೆಯದಿದ್ದಾಗ, ಕರ್ತ್ರಾದಿ ಸಂಜ್ಞೆಗಳು ಬರುವುದು ಹೇಗೆ? ಉದಾಹರಣೆಗೆ–

೧. 'ದೇವದತ್ತನು ಕತ್ತಿಯಿಂದ ಕೊಂಬೆಯನ್ನು ಕತ್ತರಿಸಲಿಲ್ಲ.'

ಕತ್ತರಿಸುವ ಧಾತ್ವರ್ಥಕ್ರಿಯೆ ದೇವದತ್ತನಲ್ಲಿಲ್ಲ. ಅವನು ಕರ್ತೃವಾಗುವುದು ಹೇಗೆ? ಯಾವ ಕ್ರಿಯೆಯೂ ಇಲ್ಲದಿರುವ ಕತ್ತಿ ಕರಣವಾಗುವುದು ಹೇಗೆ? ತುಂಡಾಗುವುದೆಂಬ ಫಲವು ಕೊಂಬೆಯಲ್ಲಿಲ್ಲದಿರುವಾಗ ಅದು ಕರ್ಮವಾಗುವುದು ಹೇಗೆ?

೨. 'ಅವನು ಭಿಕ್ಷುಕನಿಗೆ ಅಕ್ಕಿಯನ್ನು ನೀಡಲಿಲ್ಲ.'

ಅಕ್ಕಿಯು ಭಿಕ್ಷುಕನಿಗೆ ಸಲ್ಲದಿರುವಾಗ ಅವನು ಸಂಪ್ರದಾನ ಹೇಗೆ?

೩. 'ಮರದಿಂದ ಎಲೆ ಉದುರಲಿಲ್ಲ.'

ಮರವು ಯಾವುದಕ್ಕೆ ಅವಧಿ? ವಿಶ್ಲೇಷವೇ ಇಲ್ಲದಾಗ ಅವಧಿಯಾಗುವುದು ಹೇಗೆ?

೪. 'ಅದು ಚೈತ್ರನ ಮನೆಯಲ್ಲ.'

ಯಾವ ಸಂಬಂಧದಿಂದ ಚೈತ್ರಶಬ್ದದ ಮೇಲೆ ಷಷ್ಠಿ ಬಂದಿದೆ? ಷಷ್ಠಿಗೆ ನಿಮಿತ್ತವೇ ಇಲ್ಲ.

೫. ಆ ಪಾತ್ರೆಯಲ್ಲಿ ನೀರನ್ನಿಟ್ಟಿಲ್ಲ.

ಪಾತ್ರೆ ಯಾವುದಕ್ಕೆ ಅಧಿಕರಣ?

ಆಯಾ ಕಾರಕಸಂಜ್ಞೆಯಿಲ್ಲದೆ ವಿಭಕ್ತಿಗಳು ಬರುವುದಿಲ್ಲ.

ಶಾಸ್ತ್ರಜ್ಞರು ಕೆಲವು ಸಮಾಧಾನಗಳನ್ನು ಹೇಳಿದ್ದಾರೆ. ಬಹುಜನಸಂಮತವಾದ ಸಮಾಧಾನ ಹೀಗಿದೆ–

ಕಾರಕಗಳು ತಮ್ಮಲ್ಲಿರುವ ಕಾರಕತ್ವಶಕ್ತಿಗಳನ್ನು ಪ್ರದರ್ಶಿಸಿದ ಮೇಲೆಯೇ ಆಯಾ ಸಂಜ್ಞೆಗಳು ಬರುತ್ತವೆಯೆಂಬ ನಿಯಮವೇನೂ ಇಲ್ಲ. ಹಾಗೆ ನಿಯಮವಿದ್ದರೆ ಭವಿಷ್ಯತ್ಕಾಲದಲ್ಲಿ ಯಾವ ಸಂಜ್ಞೆಯೂ ಬರದೆ ಹೋದೀತು. 'ನಾನು ಮುಂದಿನ ವರ್ಷ ಈ ಸ್ಥಳದಲ್ಲಿ ಮನೆಯನ್ನು ಕಟ್ಟುವೆನು' –ಈ ವಾಕ್ಯದಲ್ಲಿ ಕ್ರಿಯೆಯೇ ನಿಷ್ಪನ್ನ ವಾಗದಿದ್ದಾಗ ಯಾವ ಕಾರಕಕ್ಕೂ ಅವಕಾಶವೇ ಇಲ್ಲದೆ ಹೋದೀತು. ಆದ್ದರಿಂದ ಕಾರಕತ್ವಶಕ್ತಿಯು ಆಯಾ ಕಾರಕದಲ್ಲಿ ಇರಲೆಂಬ ಉದ್ದೇಶ್ಯತ್ವವೇ ಕಾರಕಸಂಜ್ಞೆಗೆ

ನಿಮಿತ್ತ. ಆದ್ದರಿಂದ ಎಲ್ಲ ಕಾರಕಲಕ್ಷಣಗಳಲ್ಲಿಯೂ 'ಉದ್ದೇಶ್ಯತ್ವ' ಎಂಬುದನ್ನು ಸೇರಿಸಿಕೊಳ್ಳಬೇಕು. 'ಧಾತ್ವರ್ಥವ್ಯಾಪಾರಜನ್ಯಫಲಾಶ್ರಯತ್ವಂ ಕರ್ಮತ್ವಂ' –ಎಂಬ ಲಕ್ಷಣವು ಧಾತ್ವರ್ಥವ್ಯಾಪಾರಜನ್ಯಫಲಾಶ್ರಯತ್ವೇನ ಉದ್ದೇಶ್ಯತ್ವಂ - ಎಂದಾಗುತ್ತದೆ. ಭವಿಷ್ಯತ್ಕಾಲದಲ್ಲಿಯೂ ಈ ಉದ್ದೇಶ್ಯತ್ವವಿರುವುದರಿಂದ ಯಾವ ದೋಷವೂ ಇಲ್ಲ.

ಇದು ಭವಿಷ್ಯತ್ಕಾಲದ ವಿಷಯದಲ್ಲಿ ಸಮಾಧಾನವಾಗುತ್ತದೆ. ನಿಷೇಧಸ್ಥಳದಲ್ಲಿ ಇದು ಸಮಾಧಾನವಾಗದು. ಅವನು ಮರವನ್ನು ಹತ್ತುವುದಿಲ್ಲ, ಹುಡುಗನು ಔಷಧ ವನ್ನು ಕುಡಿಯುವುದಿಲ್ಲ –ಮುಂತಾದ ಎಲ್ಲ ನಿಷೇಧಸ್ಥಳಗಳಲ್ಲಿ ಉದ್ದೇಶ್ಯತ್ವವಿರು ವುದಿಲ್ಲ –ಎಂಬ ಶಂಕೆ ಹುಟ್ಟುತ್ತದೆ. ನಿಜ, ನಿಷೇಧಸ್ಥಳದಲ್ಲಿ ಉದ್ದೇಶ್ಯತ್ವವು ಆರೋಪಿತವಾಗಿರುತ್ತದೆ. ಆರೋಪಿತವಾದ ಉದ್ದೇಶ್ಯತ್ವವಿದ್ದರೂ ಕಾರಕಸಂಜ್ಞೆ ಬರುತ್ತದೆ; ಕಾರಕಸಂಜ್ಞಾಪ್ರಯುಕ್ತವಿಭಕ್ತಿಯೂ ಬರುತ್ತದೆ. ಅನಂತರ 'ಇಲ್ಲ' ಎಂಬ ನಿಷೇಧದ ಪ್ರತೀತಿ. ನಿಷೇಧಿಸಬೇಕಾದರೆ, ಯಾವುದನ್ನು ನಿಷೇಧಿಸುತ್ತೇವೋ ಆ ಪ್ರತಿಯೋಗಿ ಇರಬೇಕಷ್ಟೆ. ಆ ಪ್ರತಿಯೋಗಿಯೇ ಕಾರಕಸಹಿತವಾದ ಕ್ರಿಯೆ. ವಿಭಕ್ತಿಯು ಪ್ರವೃತ್ತವಾಗಿಬಿಟ್ಟಿರುವುದರಿಂದ ಅದನ್ನು ಹಿಂದಕ್ಕೆ ತಳ್ಳಲು ಯಾವ ವಿಧಿಯೂ ಇಲ್ಲ. "ಇದು ನನ್ನ ಮನೆಯಲ್ಲ, ಈತನು ನನ್ನ ಸೇವಕನಲ್ಲ" ಎಂಬಲ್ಲಿ ನಿಷೇಧಕ್ಕೆ ಪ್ರತಿಯೋಗಿಯಾದದ್ದು ಸಂಬಂಧ. ಸಂಬಂಧವನ್ನು ಆರೋಪಿಸಿ, ಅನಂತರ ನಿಷೇಧವೆಂದು ಹೇಳಬೇಕು.

ಸಾಮಾನ್ಯವಾಗಿ ಆರೋಪದಿಂದಲೇ ಲೋಕವ್ಯವಹಾರವು ನಡೆಯುತ್ತದೆ. ಅದರಲ್ಲಿಲ್ಲದ ಧರ್ಮವು ಅದರಲ್ಲಿದೆಯೆಂದು ಹೇಳುವುದು ಆರೋಪ. ಕರೆನ್ಸಿ ನೋಟನ್ನು ತೋರಿಸಿ 'ಇದು ಹತ್ತು ರೂಪಾಯಿ'ಯೆಂದು ಹೇಳುವುದು ಆರೋಪ. ಚಿತ್ರಗಳನ್ನು ನೋಡಿ 'ಇದು ಕಪಿ, ಇದು ನವಿಲು' –ಎನ್ನುವುದು ಆರೋಪ. ಈ ಆರೋಪವನ್ನು ಒಪ್ಪುವುದರಿಂದಲೇ 'ಅವಳು ಬಟ್ಟೆಯನ್ನು ತೊಳೆಯುವುದಿಲ್ಲ,; ಅವನಿಗೆ ಪುಸ್ತಕವನ್ನು ಕೊಡುವುದಿಲ್ಲ; ಬೀರುವಿನಲ್ಲಿ ಪುಸ್ತಕಗಳನ್ನು ಇಡಲಿಲ್ಲ' –ಮುಂತಾದ ನಿಷೇಧಘಟಿತ ವಾಕ್ಯಗಳಲ್ಲಿ ಬೇರೆಬೇರೆ ವಿಭಕ್ತಿಗಳು ಉಪಪನ್ನ ವಾಗುತ್ತವೆ.

ವಸ್ತುತಃ ಇದೊಂದು ಪಾಕ್ಷಿಕವಾದ ಸಮಾಧಾನ. 'ಬಾಲಕಃ ಶಾಲಾಂ ನ ಗಚ್ಛತಿ = ಹುಡುಗನು ಶಾಲೆ ಹೋಗುವುದಿಲ್ಲ' . ಇವೇ ಮೊದಲಾದ ನಿಷೇಧಘಟಿತವಾಕ್ಯ ದಲ್ಲಿ 'ಆರೋಪಿತಂ ಗಮನಂ = ಆರೋಪಿತವಾದ ಹೋಗುವ ವ್ಯಾಪಾರ' ಈ ರೀತಿಯಲ್ಲಿ ಅರ್ಥವನ್ನು ಹೇಳಿದರೆ, ಕರ್ತೃ, ಕರ್ಮ ಮುಂತಾದ ಕಾರಕಗಳು ಸಿದ್ಧಿಸುತ್ತವೆಯೆಂಬುದೇನೋ ಸರಿ. ಆದರೆ ಈ ಬಗೆಯ ಅರ್ಥವು ಲೋಕದಲ್ಲಿ ಯಾರಿಗೂ ಆಗುವುದಿಲ್ಲ. ಅನುಭವವಿರುದ್ಧವಾದದ್ದನ್ನು ಹೇಳುವುದು ಯುಕ್ತವಲ್ಲ.

'ನ' ಶಬ್ದಕ್ಕೆ ಪ್ರಸಜ್ಯಪ್ರತಿಷೇಧ, ಪರ್ಯುದಾಸ ಎಂಬ ಎರಡು ಅರ್ಥ ಗಳುಂಟು. ವಾಕ್ಯಪದೀಯವು ಹೇಳುತ್ತದೆ–

ಪ್ರಸಜ್ಯಪ್ರತಿಷೇಧೋಽಯಂ ಕ್ರಿಯಯಾ ಸಹ ಯತ್ರ ನಞ್ ।
ಪರ್ಯುದಾಸಃ ಸ ವಿಜ್ಞೇಯೋ ಯತ್ರೋತ್ತರಪದೇನ ನಞ್ ॥

"ಯಾವ ವಾಕ್ಯದಲ್ಲಿ ನ ಶಬ್ದಕ್ಕೆ ಕ್ರಿಯೆಯೊಡನೆ ಅನ್ವಯವಿರುತ್ತದೆಯೋ ಅಲ್ಲಿ ನ ಶಬ್ದಕ್ಕೆ ಪ್ರಸಜ್ಯಪ್ರತಿಷೇಧವು ಅರ್ಥ. ಎಲ್ಲಿ ಸಮಾಸದ ಉತ್ತರಪದದೊಡನೆ ಅನ್ವಯವಿರುತ್ತದೆಯೋ ಅಲ್ಲಿ ನ ಶಬ್ದಕ್ಕೆ ಪರ್ಯುದಾಸವು ಅರ್ಥ."

ಪ್ರಸಜ್ಯಸ್ಯ ಪ್ರತಿಷೇಧಃ ಪ್ರಸಜ್ಯಪ್ರತಿಷೇಧಃ = ಪ್ರಸಜ್ಯವೆಂದರೆ ಪ್ರಸಂಜಿತವಾದದ್ದು- ಆಪಾದ್ಯವಾದದ್ದು- ಆರೋಪಿತವಾದದ್ದು ಎಂದರ್ಥ. ಅದಕ್ಕೆ ನಿಷೇಧವನ್ನು ಹೇಳುವುದೇ ಪ್ರಸಜ್ಯಪ್ರತಿಷೇಧ. ಆರೋಪಿತವಾದುದರ ನಿವೃತ್ತಿ- ಅಭಾವವೆಂದು ತಾತ್ಪರ್ಯ.

ಪರ್ಯುದಾಸವೆಂದರೆ ಅನ್ವಿತವಾದದ್ದನ್ನು ಬಿಡುವುದು- ತ್ಯಜಿಸುವುದು ಎಂದರ್ಥ. ಉತ್ತರಪದವೆಂದರೆ ನಞ್‌ಸಮಾಸದಲ್ಲಿ ನ ಶಬ್ದದ ಉತ್ತರದಲ್ಲಿರುವ ಪದ. ಉದಾ: ನ ಬ್ರಾಹ್ಮಣಃ = ಅಬ್ರಾಹ್ಮಣಃ, ನಶಬ್ದದ ನಕಾರಕ್ಕೆ 'ನ ಲೋಪೋ ನಞಃ' (೬-೩-೭೩) ಎಂಬ ಸೂತ್ರದಿಂದ ಲೋಪಬಂದಿದೆ. ಉತ್ತರಪದವಾದ ಬ್ರಾಹ್ಮಣನನ್ನು ತ್ಯಜಿಸಿ ಅನ್ಯ ಎಂದರ್ಥ. ಬ್ರಾಹ್ಮಣೇತರ ಎಂದು ತಾತ್ಪರ್ಯ. ಹೀಗೆಯೇ ಅಧರ್ಮ, ಅಕ್ರಮ, ಅಯುಕ್ತ -ಮುಂತಾದ ಶಬ್ದಗಳಲ್ಲಿಯೂ ಧರ್ಮೇತರ, ಕ್ರಮೇತರ -ಇತ್ಯಾದಿಗಳು ಶಬ್ದಾರ್ಥಗಳು. ಆಗ ನಶಬ್ದಕ್ಕೆ ಭೇದವೆಂದರ್ಥ. ಭೇದವನ್ನೇ ಅನ್ಯೋನ್ಯಾಭಾವ ಎಂದು ತಿಳಿಯಬೇಕು. ಇದು ಪರ್ಯುದಾಸದ ಉದಾಹರಣೆ.

ಈಗ ಪ್ರಸಕ್ತವಾದದ್ದು ಪ್ರಸಜ್ಯಪ್ರತಿಷೇಧ. ನಞ್‌ಸೂತ್ರದಲ್ಲಿ (೨-೨-೬) ಮಹಾಭಾಷ್ಯಕಾರರು ನಶಬ್ದದ ಅರ್ಥವನ್ನು ವಿವರಿಸುತ್ತಾ "**ಪ್ರಸಜ್ಯಾಸೌ ಕ್ರಿಯಾಗುಣೌ ತತೋ ನಿವೃತ್ತಿಂ ಕರೋತಿ**" ಎಂದು ಬರೆದಿದ್ದಾರೆ. ಅಸೌ = ಈ ನಶಬ್ದವು ಕ್ರಿಯಾಗುಣಗಳನ್ನು ಮೊದಲು ಆಪಾದಿಸಿ- ಆರೋಪಿಸಿ ಅನಂತರ ಅವುಗಳನ್ನು ನಿವೃತ್ತಿಗೊಳಿಸುತ್ತದೆ ಎಂದರ್ಥ. ನಿವೃತ್ತಿಗೊಳಿಸುವುದೆಂದರೆ ನಿಷೇಧಿಸುವುದು. ಇದೇ ಪ್ರಸಜ್ಯಪ್ರತಿಷೇಧ.

ಭಾಷ್ಯದಲ್ಲಿ 'ಕ್ರಿಯಾಗುಣೌ' ಎಂದು ಗುಣವನ್ನೂ ಸೇರಿಸಿರುವುದರಿಂದ, ಹಿಂದೆ ಹೇಳಿದ ವಾಕ್ಯಪದೀಯ ಕಾರಿಕೆಯಲ್ಲಿ 'ಕ್ರಿಯಯಾ ಸಹ ಯತ್ರ ನಞ್' ಎನ್ನುವಾಗ 'ಗುಣೇನ' ಎಂಬುದನ್ನು ಉಪಲಕ್ಷಣವಾಗಿ ಸೇರಿಸಿಕೊಳ್ಳಬೇಕು. ಮುಂದೆ ಉದಾಹರಣೆಗಳಲ್ಲಿ ಇದು ಸ್ಪಷ್ಟವಾಗುತ್ತದೆ. ಈ ಪ್ರಸಜ್ಯಪ್ರತಿಷೇಧವು ಆರೋಪಿತ ಗುಣಕ್ರಿಯೆಗಳಿಗೆ ಸಂಬಂಧಿಸಿರುತ್ತದೆ. ನಿಷೇಧಘಟಿತವಾಕ್ಯದಲ್ಲಿ ಕರ್ತೃಕರ್ಮಾದಿಗಳ ಸಿದ್ಧಿಗಾಗಿ ಮಾಡಿಕೊಂಡಿರುವ ನೂತನಕಲ್ಪನೆ ಇದಲ್ಲ. ವಸ್ತುಸ್ಥಿತಿಯೇ ಆಗಿದೆ. ನಶಬ್ದದ ಶಕ್ತಿಯೇ ಅಂತಹದು. ಹೇಗೆಂದರೆ, ನಿಷೇಧಿಸುವುದು ಯಾವುದನ್ನು? ಇರುವುದನ್ನೋ? ಇಲ್ಲದ್ದನ್ನೋ? ಇರುವುದು ಸತ್ಯವಾದ್ದರಿಂದ ಅದನ್ನು ನಿಷೇಧಿಸುವುದಕ್ಕಾಗುವುದಿಲ್ಲ. ಸತ್ಯವನ್ನು ನಿಷೇಧಿಸಿದರೆ ನಿಷೇಧವೇ ಸುಳ್ಳಾಗಿ ಬಿಡುತ್ತದೆ. ಇಲ್ಲದ್ದನ್ನು ನಿಷೇಧಿಸಿದರೆ,

ನಿಷೇಧವೇ ವ್ಯರ್ಥವಾಗುತ್ತದೆ. ಇಲ್ಲದ್ದನ್ನು ಮತ್ತೆ ನಿಷೇಧಿಸಬೇಕಾಗಿಯೇ ಇಲ್ಲ. ಇದನ್ನು ಶಾಸ್ತ್ರಕಾರರು ಹೀಗೆ ಹೇಳುತ್ತಾರೆ. ''ಸತೋ ನಿಷೇಧಾಯೋಗಾತ್, ಅಸತೋ ನಿಷೇಧಸ್ಯ ವೈಯರ್ಥ್ಯಾತ್ = ಸತ್ ಆದದ್ದನ್ನು ನಿಷೇಧಿಸುವುದಕ್ಕಾಗುವುದಿಲ್ಲ. ಅಸತ್ತನ್ನು ನಿಷೇಧಿಸುವುದು ವ್ಯರ್ಥ''. ಆದ್ದರಿಂದ ಸರ್ವತ್ರ ಕಲ್ಪಿತವಾದ್ದನ್ನೇ ನಿಷೇಧಿಸಬೇಕಾಗುತ್ತದೆ. ಪ್ರಾಪ್ತವಾದದ್ದನ್ನು ನಿಷೇಧಿಸಬೇಕಾಗುತ್ತದೆ. ಅಪ್ರಾಪ್ತವಾದದ್ದನ್ನಲ್ಲ.

'ಈ ಮಾವಿನ ಹಣ್ಣು ಸಿಹಿಯಾಗಿಲ್ಲ.' ಈ ವಾಕ್ಯದಲ್ಲಿ ಸಿಹಿಯನ್ನು ನಿಷೇಧಿಸಲಾಗಿದೆ. ಯಾಕಾಗಿ ಈ ನಿಷೇಧ? 'ಆ ಮಾವಿನ ಹಣ್ಣು ಸಿಹಿಯಾಗಿದೆ' –ಎಂದು ಯಾರೋ ಹೇಳಿರಬೇಕು. ಅಥವಾ ಸ್ವತಃ ಸಿಹಿಯೆಂದು ತಾನೇ ಕಲ್ಪಿಸಿಕೊಂಡಿರಬೇಕು. ಏವಂ ಚ ಆರೋಪಿತವಾದದ್ದು ಸಿಹಿಯೆಂಬ ಗುಣ. ಈ ಗುಣವನ್ನು ಮಾವಿನ ಹಣ್ಣಿನಲ್ಲಿ ಆರೋಪಿಸಿ ಅನಂತರ ನಿಷೇಧಿಸಲಾಗಿದೆ. 'ಈ ಬಟ್ಟೆ ಬಿಳಿಯದಲ್ಲ.' ಇಲ್ಲಿ ಯಾರೋ ಆ ಬಟ್ಟೆಯು ಬಿಳಿಯದೆಂದು ಹೇಳಿರಬೇಕು ಅಥವಾ ತಾನು ಮೊದಲು ಕಲ್ಪಿಸಿಕೊಂಡಿರಬೇಕು. ಒಟ್ಟಿನಲ್ಲಿ ಬಟ್ಟೆಯಲ್ಲಿ ಬಿಳಿಪು ಗುಣ ಇಲ್ಲದ್ದು. ಕಲ್ಪಿತವಾದ ಆ ಗುಣವನ್ನಿಲ್ಲಿ ನಿಷೇಧಿಸಲಾಗಿದೆ. ಕಲ್ಪಿತವೇ ಆರೋಪಿತ.

ಸಂದೇಹದಿಂದ ಪ್ರಶ್ನಿಸಿದಾಗಲೂ ಈ ಪ್ರಸಜ್ಯಪ್ರತಿಷೇಧ ಬರುತ್ತದೆ. ಸಂದೇಹವು ಕೋಟಿದ್ವಯಾವಗಾಹಿಯಾದ ಜ್ಞಾನ. 'ದೂರದಲ್ಲಿ ಕಾಣಿಸತಕ್ಕ ವಸ್ತು ಮನುಷ್ಯನೋ ಅಥವಾ ಪೊದೆಯೋ?' ಎಂಬುದು ಸಂದೇಹದ ಆಕಾರ. ಮನುಷ್ಯ ಎಂಬುದು ಒಂದು ಕೋಟಿ(ಸಂದೇಹದ ಒಂದು ಅಂಶ); ಪೊದೆಯೆಂಬುದು ಸಂದೇಹದ ಇನ್ನೊಂದು ಕೋಟಿ (ಅಂಶ). ಇವುಗಳಲ್ಲಿ ಒಂದು ಸತ್ಯ; ಇನ್ನೊಂದು ಅಸತ್ಯ. ಹತ್ತಿರ ಹೋಗಿ ನೋಡಿದವನು ಹೇಳುತ್ತಾನೆ– 'ಇದು ಮನುಷ್ಯನಲ್ಲ' ಎಂದು. ಆ ವಸ್ತುವಿನಲ್ಲಿ ಮನುಷ್ಯತ್ವವು ಆರೋಪಿತವಾಗಿತ್ತು. ಅದನ್ನು ನಿಷೇಧಿಸುವುದಕ್ಕಾಗಿ 'ಮನುಷ್ಯನಲ್ಲ' ಎಂದು ಹೇಳಬೇಕಾಯಿತು. ಏವಂ ಚ ನಿಷೇಧವು ಪ್ರಾಪ್ತವಾದದ್ದಕ್ಕೆ ಬರುತ್ತದೆ. ಪ್ರಾಪ್ತಿಯು ಅಜ್ಞಾನದಿಂದಲೋ ಸಂದೇಹದಿಂದಲೋ ಬಂದದ್ದಾಗಿರುತ್ತದೆ.

ಇದೇ ಪರಿಸ್ಥಿತಿ ಕ್ರಿಯೆಗೂ ಅನ್ವಯಿಸುತ್ತದೆ–

೧. 'ಕೇಶವಃ ಔಷಧಂ ನಾಪಿಬತ್ = ಕೇಶವನು ಔಷಧವನ್ನು ಕುಡಿಯಲಿಲ್ಲ.' 'ಕೇಶವನು ಔಷಧವನ್ನು ಕುಡಿದಿದ್ದಾನೆ' –ಎಂದು ಯಾರೋ ಹೇಳಿದಾಗ, ಅಥವಾ, 'ಅವನು ಔಷಧವನ್ನು ಕುಡಿದನೆ?' ಎಂದು ಕೇಳಿದಾಗ ಮೇಲ್ಕಂಡ ವಾಕ್ಯವು ಉತ್ತರವಾಗಿ ಬರುತ್ತದೆ. ಕೇಶವನಲ್ಲಿ ಔಷಧಪಾನವನ್ನು ಆರೋಪಿಸಿ ಅನಂತರ ನಿಷೇಧಿಸಲಾಗಿದೆ. ಆರೋಪಿತವಾದ ಪಾನಕ್ರಿಯೆ ಕೇಶವನಲ್ಲಿ ಮೊದಲು ತೋರುತ್ತದೆ. ಆಗ ಕರ್ತೃಕರ್ಮಕಾರಕಗಳು ಬರಲು ಅಡ್ಡಿ ಇಲ್ಲ. ಅನಂತರ ಆ ಕ್ರಿಯೆಯ ನಿಷೇಧ ತೋರುತ್ತದೆ.

೨. 'ಅಧ್ಯಾಪಕಃ ಪುಸ್ತಕಂ ಮಹ್ಯಂ ನಾಯಚ್ಛತ್ = ಉಪಾಧ್ಯಾಯನು ಪುಸ್ತಕವನ್ನು ನನಗೆ ಕೊಡಲಿಲ್ಲ.' ಅಧ್ಯಾಪಕನಲ್ಲಿ ಕೊಡುವ ವ್ಯಾಪಾರವನ್ನು ಆರೋಪಿಸಿ ಅನಂತರ ನಿಷೇಧಿಸಲಾಗಿದೆ. ಆರೋಪಿತವಾದ ವ್ಯಾಪಾರವು ಅಧ್ಯಾಪಕನಲ್ಲಿ

ರುವುದರಿಂದ ಕರ್ತೃತ್ವ, ಕರ್ಮತ್ವ, ಸಂಪ್ರದಾನತ್ವಗಳು ಕ್ರಮವಾಗಿ ಬಂದಿವೆ. ಅನಂತರ ನಿಷೇಧಿಸಲಾಗಿದೆ.

೩. 'ಭೂತಲೇ ಘಟೋ ನಾಸ್ತಿ= ನೆಲದ ಮೇಲೆ ಗಡಿಗೆ ಇಲ್ಲ.' ಇಲ್ಲಿ ಆರೋಪಿತವಾದ ಘಟದ ಅಸ್ತಿತ್ವಕ್ಕೆ ಭೂತಳವು ಅಧಿಕರಣವಾಗಿದೆ.

೪. 'ಇದಂ ಚೈತ್ರಸ್ಯ ಗೃಹಂ ನ = ಇದು ಚೈತ್ರನ ಮನೆಯಲ್ಲ.' ಚೈತ್ರನಿಗೂ ಮನೆಗೂ ಸ್ವಸ್ವಾಮಿಭಾವಸಂಂಧವು ಆರೋಪಿತವಾಗಿ ನಿಷಿದ್ಧವಾಗಿದೆ. ಶಾಬ್ದಭೇದವು ಈ ಪ್ರಕಾರ–

೧. ಕೇಶವಕರ್ತೃಕಸ್ಯ ಔಷಧಕರ್ಮಕಪಾನಸ್ಯ ಅಭಾವಃ= ಕೇಶವನು ಕರ್ತೃವಾದ ಔಷಧವು ಕರ್ಮವಾದ ಪಾನವ್ಯಾಪಾರವು ನಡೆದಿಲ್ಲ.

೨. ಅಧ್ಯಾಪಕ ಕರ್ತೃಕಸ್ಯ ಪುಸ್ತಕಕರ್ಮಕಸ್ಯ ಮತ್‌ಸಂಪ್ರದಾನಕಸ್ಯ ದಾನ ವ್ಯಾಪಾರಸ್ಯ ಅಭಾವಃ –ಇತ್ಯಾದಿ.

ಜನರಿಗೆ ಯಾವ ರೀತಿ ಅರ್ಥವಾಗುತ್ತದೆಯೆಂಬುದನ್ನು ಆಯಾ ವಾಕ್ಯದ ಮುಂದೆ ಬರೆದಿದೆ. ಅದನ್ನು ಶಾಸ್ತ್ರೀಯವಾಗಿ ಬಿಡಿಸಿ ಮೇಲ್ಕಂಡಂತೆ ಶಾಬ್ದ ಬೋಧವನ್ನು ತೋರಿಸಿದೆ. ಇನ್ನೂ ವಿಸ್ತಾರವಾಗಿ ಪರಿಷ್ಕರಿಸಿ ಶಾಸ್ತ್ರಕಾರರು ಹೇಳುತ್ತಾರೆ. ಅದು ಪ್ರಕೃತದಲ್ಲಿ ಅನಾವಶ್ಯಕ. ಈ ಸ್ಥಳಗಳಲ್ಲಿ ಅಭಾವವು ವಿಧೇಯರೂಪದಲ್ಲಿ ತೋರುವುದರಿಂದ 'ಔಷಧಕರ್ಮಕಪಾನಸ್ಯ ಅಭಾವಃ' ಎನ್ನುವುದಕ್ಕಿಂತಲೂ 'ಔಷಧಕರ್ಮಕಂ ಪಾನಂ ಅಭಾವಪ್ರತಿಯೋಗಿ' ಎಂದು ಹೇಳುವುದು ಉತ್ತಮ.

ಹಿಂದೆ ಹೇಳಿದ ಸಮಾಧಾನದಲ್ಲಿ ಆರೋಪವು ಮಾತ್ರ ನಶಬ್ದಾರ್ಥವೆಂದು ನಿರೂಪಿತವಾಗಿತ್ತು. ಈಗ ಹೇಳಿದ ಸಮಾಧಾನದಲ್ಲಿ ಆರೋಪಪೂರ್ವಕ ನಿಷೇಧವು ನಶಬ್ದಾರ್ಥವೆಂದು ತಿಳಿಸಿದೆ.

ನಿಷೇಧಕ್ಕೆ ಸಂಬಂಧಿಸಿದಂತೆ ಇನ್ನೂ ಹೇಳಬಹುದಾದ ಅಂಶಗಳಿವೆ. ಸಂಸ್ಕೃತದಲ್ಲಿ 'ನ' 'ನೋ' ಎಂಬೆರಡು ಅವ್ಯಯಗಳು ನಿಷೇಧಾರ್ಥದಲ್ಲಿ ಪ್ರಸಿದ್ಧವಾದವು. ಇವುಗಳಲ್ಲಿ 'ನ' ಶಬ್ದದ ಬಳಕೆ ಹೆಚ್ಚು. ಇದಕ್ಕೆ ಞಕಾರವೆಂಬ ಅನುಬಂಧವನ್ನು ಸೇರಿಸಿ 'ನಞ್' ಎಂದು ವ್ಯಾಕರಣದಲ್ಲಿ ವ್ಯವಹರಿಸುತ್ತಾರೆ. ಸ್ಥೂಲವಾಗಿ ನಿಷೇಧವು ಇದರ ಅರ್ಥವಾದರೂ ಸೂಚ್ಯಾರ್ಥಗಳು ಅಧಿಕವಾಗಿವೆ. ಒಟ್ಟು ನಶಬ್ದಕ್ಕೆ ಆರು ಅರ್ಥಗಳಿವೆಯೆಂದು ಭರ್ತೃಹರಿಯ ಈ ಶ್ಲೋಕವು ಹೇಳುತ್ತದೆ. ಇವು ನೇರವಾದ ಅರ್ಥಗಳಲ್ಲ. ಸಂದರ್ಭವಶದಿಂದ ಪ್ರತೀತವಾಗತಕ್ಕವು.

ತತ್ಸಾದೃಶ್ಯಮಭಾವಶ್ಚ ತದನ್ಯತ್ವಂ ತದಲ್ಪತಾ ।
ಅಪ್ರಾಶಸ್ತ್ಯಂ ವಿರೋಧಶ್ಚ ನಞರ್ಥಾಃ ಷಟ್ ಪ್ರಕೀರ್ತಿತಾಃ ॥

ಸಾದೃಶ್ಯ, ಅಭಾವ, ಅನ್ಯತ್ವ, ಅಲ್ಪತ್ವ, ಅಪ್ರಾಶಸ್ತ್ಯ, ವಿರೋಧ –ಇವು ಆರು ನಶಬ್ದದ ಅರ್ಥಗಳು.

ನಞ್‌ಸಮಾಸದಲ್ಲಿ ಈ ಅರ್ಥಗಳು ಸ್ಫುಟವಾಗಿ ತೋರುತ್ತವೆ. ಸಮಾಸದಲ್ಲಿ 'ನ' ಶಬ್ದದ ನಕಾರವು ಲೋಪವಾಗಿ 'ಅ' ಎಂಬುದು ಉಳಿಯುತ್ತದೆ. ಸ್ವರವು ಪರವಾದರೆ ನಕಾರವು ಸೇರಿ ಅದು 'ಅನ್' ಆಗುತ್ತದೆ. ಸಮಾಸದಲ್ಲಿ ಸಹಚರಿತವಾದ ಶಬ್ದದ ಅರ್ಥದೊಡನೆ ಸಾದೃಶ್ಯಗಳು ತೋರುತ್ತವೆ. ಉದಾಃ

೧. ಸಾದೃಶ್ಯ = ಅಬ್ರಾಹ್ಮಣ. ಬ್ರಾಹ್ಮಣನಲ್ಲದ, ಬ್ರಾಹ್ಮಣನಿಗೆ ಸದೃಶನಾದ ಮನುಷ್ಯನೆಂದರ್ಥ. ಬ್ರಾಹ್ಮಣೇತರ ಎಂದಿಷ್ಟೇ ಅರ್ಥವಾದರೆ ಬ್ರಾಹ್ಮಣನಲ್ಲದ್ದು ಕುದುರೆಯೂ ಆದೀತು, ಕಲ್ಲೂ ಆದೀತು! ಹೀಗೆಯೇ ಅಹಿಂದು, ಅಕ್ರೈಸ್ತ –ಮುಂತಾದವು.

೨. ಅಭಾವ = ಅಸಂಶಯ. ಸಂಶಯಾಭಾವ. ಸಂಶಯವಿಲ್ಲ ಎಂದರ್ಥ. ಹೀಗೆಯೇ ಅನುಪಸ್ಥಿತಿ, ಅದರ್ಶನ, ಅಜ್ಞಾನ.

೩. ಅನ್ಯತ್ವ = ಅಸತ್ಯ, ಅವರ್ಗೀಯವರ್ಣ, ಅಸುವರ್ಣಲೋಹ– ವರ್ಗೀಯ ವರ್ಣಕ್ಕೆ ಭಿನ್ನವಾದ ವರ್ಣ; ಸುವರ್ಣವಲ್ಲದ ಲೋಹ ಎಂದರ್ಥ.

೪. ಅಲ್ಪತ್ವ = ಅಶಕ್ತ, ಅಲ್ಪಶಕ್ತಿಯುಳ್ಳವನು. ಶಕ್ತಿಯೇ ಇಲ್ಲದೆ ಯಾವನೂ ಇರುವುದಿಲ್ಲ. ಅಬುದ್ಧಿ = ಅಲ್ಪಬುದ್ಧಿಯುಳ್ಳವನು.

೫. ಅಪ್ರಾಶಸ್ತ್ಯ = ಚಳಿಗೆ ಹತ್ತಿಯ ಬಟ್ಟೆ ಅವಸ್ತ್ರ. ಜ್ವರಕ್ಕೆ ಅವರು ಕೊಟ್ಟದ್ದು ಅನೌಷಧ. ಉತ್ತಮವಾದ ಔಷಧವಲ್ಲ.

೬. ವಿರೋಧ = ಅಧರ್ಮ– ಧರ್ಮವಿರುದ್ಧ, ಅನ್ಯಾಯ– ನ್ಯಾಯವಿರುದ್ಧ.

ನಿಷೇಧಾರ್ಥಕ ಕ್ರಿಯಾಪದಗಳು

ಕ್ರಿಯಾಪದದ ಜೊತೆಗೆ ನಿಷೇಧಾರ್ಥಕವಾದ ಇನ್ನೊಂದು ಪದವನ್ನು ಸೇರಿಸಿದರೆ, ಕ್ರಿಯಾನಿಷೇಧವು ತೋರುತ್ತದೆಯೆಂಬುದು ಸಹಜ. ಸಂಸ್ಕೃತದಲ್ಲಿ ನಞ್‌ಪದವನ್ನು ಕ್ರಿಯಾಪದದೊಡನೆ ಸೇರಿಸುತ್ತಾರೆ. ಆಗ ಕ್ರಿಯಾಪದದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಕನ್ನಡದಲ್ಲಿ ಹಾಗಿಲ್ಲ. ಕ್ರಿಯಾಪದರೂಪವೇ ಮಾರ್ಪಡುತ್ತದೆ. ಮತ್ತು ಅನೇಕ ರೂಪಗಳು ಪ್ರಾಪ್ತವಾಗುತ್ತದೆ.

ಮೊದಲನೆಯದಾಗಿ ಧಾತುವಿಗೂ ಆಖ್ಯಾತಪ್ರತ್ಯಯಕ್ಕೂ ನಡುವೆ 'ಅ' ಎಂಬ ಅಕ್ಷರವನ್ನು ಸೇರಿಸಿದರೆ ಪ್ರತಿಷೇಧಾರ್ಥಕ ರೂಪಗಳಾಗುತ್ತವೆ. ಉದಾ–

ಪ್ರ.ಪು.	ಹೇಳನು	ಹೇಳರು	ಹೋಗನು	ಹೋಗರು
	ಹೇಳಳು	ಹೇಳರು	ಹೋಗಳು	ಹೋಗರು
	ಹೇಳದು	ಹೇಳವು	ಹೋಗದು	ಹೋಗವು
ಉ.ಪು.	ಹೇಳೆನು	ಹೇಳೆವು	ಹೋಗೆನು	ಹೋಗೆವು

ಮಧ್ಯಮ ಪು.ರುಷ ರೂಪಗಳು ಹೇಗೆ? ಹಳಗನ್ನಡದಲ್ಲಿ ಪೇಳಯ್-ಪೇಳಿರ್ ಎಂದು ರೂಪವಾಗಬೇಕು. ಆಗ ಕ್ರಿಯಾನಿಷೇಧವು ತೋರುತ್ತದೆಯೆ? ಹಾಗೆ ಪ್ರಯೋಗ ಉಂಟೆ? –ಎಂಬುದು ವಿಚಾರಣೀಯ. ಹೊಸಗನ್ನಡದ ಏಕವಚನದಲ್ಲಿ ನೀನು ಹೇಳೆ, ನೀನು ಹೋಗೆ –ಎಂಬ ಪ್ರಯೋಗಗಳು ಕಂಡುಬರುವುದುಂಟು. ಈ ಬಗೆಯಲ್ಲಿ ಭೂತಕಾಲದ ರೂಪಗಳುಂಟೆ?

ಒಟ್ಟಿನಲ್ಲಿ ನಿಷೇಧಗರ್ಭಿತವಾದ ಕ್ರಿಯಾಪದವಿರುವುದು ಕನ್ನಡದ ಒಂದು ವೈಶಿಷ್ಟ್ಯವೇ ಸರಿ.

ಇತರ ಪ್ರಕಾರದ ನಿಷೇಧರೂಪಗಳು

ಆಗ, ಹೋಗ, ಹೇಳ – ಪ್ರಥಮ ಪು.ರುಷ ಏಕವಚನ
ಉಸಿರಲ್ – ಮಾತಾಡಬೇಡ
ಉಸಿರಲಿಂ – ಮಾತಾಡಬೇಡಿರಿ
ನೋಡಬೇಡಂ, ನೋಡಲ್ವೇಡಂ, ನೋಡಲಿಂ ಬೇಡಂ, ನೋಡಲಿಂ.
ಪೇಳ್ವುದಿಲ್ಲಂ, ಪೇಳ್ವುದಿಲ್ಲ–
ಆಂ ಪೋದೆನಿಲ್ಲಂ, ಆಂ ಪೇಳ್ದೆನಿಲ್ಲ.

ಇತ್ಯಾದಿ ರೂಪಭೇದಗಳುಂಟು. ಇವುಗಳಿಗೆ ಎಲ್ಲ ಪುರುಷಗಳಲ್ಲಿಯೂ ಕಾಲ ತ್ರಯದಲ್ಲಿಯೂ ರೂಪಗಳುಂಟೆ? ಲಿಂಗಭೇದದಿಂದ ರೂಪಭೇದಗಳಾಗುತ್ತವೆಯೆ? –ಎಂಬುದು ವಿಚಾರಣೀಯ. ಅಚ್ಚರಿಯೇನೆಂದರೆ, ಆಗ ಹೋಗ– ಇತ್ಯಾದಿ. ಕೆಲವು ನಿಷೇಧರೂಪಗಳಲ್ಲಿ ಆಖ್ಯಾತಪ್ರತ್ಯಯವೇ ಇರುವುದಿಲ್ಲ. ಅದಕ್ಕೆ ಲೋಪ ಬಂದಿದೆಯೆ? ಆದೇಶದಿಂದ ಇನ್ನೊಂದು ರೂಪವನ್ನು ತಾಳಿದೆಯೆ? ಅಥವಾ ಅದರ ಪ್ರಯೋಗವೇ ಇಲ್ಲವೆ? –ಎಂಬುದೂ ಸ್ಫುಟವಾಗುವುದಿಲ್ಲ. ಹೊಸಗನ್ನಡದಲ್ಲಂತೂ ಇದು ಪರಾಕಾಷ್ಠೆಯನ್ನಡರಿದೆ. ಎಲ್ಲ ಲಿಂಗ, ವಚನ, ಪುರುಷಗಳಲ್ಲಿಯೂ ಏಕರೂಪವನ್ನು ತಳೆದು ನಿಷೇಧಾರ್ಥಕಕ್ರಿಯಾಪದವು ಅವ್ಯಯವಾಗಿಬಿಡುತ್ತದೆ. ವರ್ತಮಾನ ಭವಿಷ್ಯತ್ತುಗಳ ರೂಪ ಒಂದೇ ಆದರೂ ಭೂತಕಾಲದ ರೂಪದಲ್ಲಿ ಭೇದವಿನ್ನು ಉಳಿದಿರುವುದು ನಮ್ಮ ಪುಣ್ಯ.

'ನೀನು ಹೋಗುವುದಿಲ್ಲ. ನೀವು ಹೊಗುವುದಿಲ್ಲ. ನಾನು ಹೋಗುವುದಿಲ್ಲ. ನಾವೂ ಹೋಗುವುದಿಲ್ಲ. ಅವನು, ಅವನು, ಅವಳು, ಅದು ಯಾವುದೂ ಹೋಗುವುದಿಲ್ಲ.'

ಹೀಗೆಯೇ ಭೂತಕಾಲದಲ್ಲಿ– 'ನೀನು ಹೋಗಲಿಲ್ಲ; ನೀವು ಹೋಗಲಿಲ್ಲ' –ಇತ್ಯಾದಿ.

ಈ ರೂಪಗಳು ಹೇಗಾದರೂ ಇದ್ದುಕೊಳ್ಳಲಿ. ನಮಗೆ ಬಂದಿರುವ ತಲೆನೋವು ಏನೆಂದರೆ, ಪ್ರಥಮಾಂತದಲ್ಲಿರುವ ಕರ್ತೃವನ್ನು ಆಖ್ಯಾತಾರ್ಥವಾದ ಕರ್ತೃವಿನೊಡನೆ ಅನ್ವಯಿಸಬೇಕಾಗಿದೆ, ಆಖ್ಯಾತವೇ ಕಾಣುವುದಿಲ್ಲ –ಎನ್ನುವುದು. ಹೋಗೆನು,

ಕಾಣೆನು –ಎಂಬ ಮೊದಲನೆಯ ಪ್ರಕರಣದಲ್ಲಿ ಆಖ್ಯಾತಪ್ರತ್ಯಯವಿರುವುದರಿಂದ ತೊಂದರೆ ಇಲ್ಲ. ಉಳಿದೆಡೆಯಲ್ಲಿ ಪರಿಹಾರಕ್ಕೆ ಒಂದು ಮಾರ್ಗವಿದೆ. "**ಶಿಷ್ಯಮಾಣಃ ಶಬ್ದಃ ಲುಪ್ಯಮಾನಾರ್ಥಾಭಿಧಾಯೀ**" ಎಂಬ ನ್ಯಾಯವು ವೈಯಾಕರಣರಲ್ಲಿ ಪ್ರಸಿದ್ಧವಾದದ್ದು. ಯಾವುದು ಲೋಪವಾಗದೆ ಉಳಿದಿದೆಯೋ ಅದು ಲುಪ್ತವಾದ ಶಬ್ದಾರ್ಥವನ್ನು ಹೇಳುತ್ತದೆ –ಎಂದು ಈ ನ್ಯಾಯದ ಆಶಯ. ಆದ್ದರಿಂದ ಎಲ್ಲಿ ಆಖ್ಯಾತಪ್ರತ್ಯಯವಿಲ್ಲವೋ ಅಲ್ಲಿ ಉಳಿದ ಶಬ್ದವೇ ಆಖ್ಯಾತಾರ್ಥವನ್ನು ಬೋಧಿಸುತ್ತದೆ ಎಂದು ತಿಳಿಯಬೇಕು.

* * * * *

ಪಂಚಮೀವಿಭಕ್ತಿಯ ಪರಾಮರ್ಶೆ

ಕನ್ನಡನಾಡಿನಲ್ಲಿ ದಿ। ಶ್ರೀ ಸೇಡಿಯಾಪು ಕೃಷ್ಣಭಟ್ಟರು ದೊಡ್ಡವಿದ್ವಾಂಸರೆಂದೂ ಸಂಶೋಧಕರೆಂದೂ ಉತ್ತಮಕವಿಗಳೆಂದೂ ವಿಖ್ಯಾತರಾಗಿದ್ದಾರೆ. ಅವರು ರಚಿಸಿದ 'ತಥ್ಯದರ್ಶನ', 'ಕನ್ನಡ ಛಂದಸ್ಸು' 'ಛಂದೋಗತಿ', 'ವಿಚಾರಪ್ರಪಂಚ', 'ಚಂದ್ರಖಂಡ ಮತ್ತು ಕೆಲವು ಸಣ್ಣಕಾವ್ಯಗಳು', 'ಪಳಮೆಗಳು' ಎಂಬ ಕಥಾಸಂಕಲನ ಮುಂತಾದವು ಆ ಮಹನೀಯರ ಪಾಂಡಿತ್ಯಕ್ಕೆ ಸೂಕ್ಷ್ಮಮತಿಗೆ, ವಿಶ್ರುತವಿಚಾರಬಾಹುಲ್ಯಕ್ಕೆ ಕವಿತಾ ನಿರ್ಮಾಣಶಕ್ತಿಗೆ ನಿಕಷೋಪಲಗಳಾಗಿ ನಿಲ್ಲುತ್ತವೆ. ಅವರ ಸೌಮ್ಯಸ್ವಭಾವ, ವೈದುಷ್ಯಗಳಿಂದ ಆಕೃಷ್ಟನಾದ ನಾನು ಹಲವು ಬಾರಿ ಹೋಗಿ ಸಂದರ್ಶಿಸಿ, ನನ್ನ ಕೆಲವು ಸಂದೇಹಗಳಿಗೆ ಅವರಿಂದ ಬೆಳಕನ್ನು ಕಂಡಿದ್ದೇನೆ. ಒಂದು ಸಲ ಶ್ರೀ ಸೇಡಿಯಾಪು ಅವರು "ನಾನು ಬರೆದ ಪಂಚಮೀವಿಭಕ್ತಿ" ಎಂಬ ಲೇಖನವನ್ನು ಓದಿ ನೋಡಿರಿ" ಎಂದು ಹೇಳಿದರು. ನಾನು ಆ ಲೇಖನವನ್ನು ಓದಿ ನೋಡಿದ ಮೇಲೆ– ಇದರಲ್ಲಿ ಚರ್ಚಿಸಬೇಕಾದ ವಿಷಯವಿದೆ– ಎಂದು ಅನ್ನಿಸಿತು. ಅಂತೆಯೇ ಚರ್ಚಿಸುವ ಉದ್ದೇಶದಿಂದ ಅವರ ಮನೆಗೆ ಹೋದಾಗ ಶ್ರೀ ಸೇಡಿಯಾಪು ಅವರು ಆಯಾಸಗೊಂಡಿದ್ದರು. ಕುಶಲಪ್ರಶ್ನೆ ಯಾಗುವಷ್ಟರಲ್ಲಿ ಅವರು ದಣಿದುಹೋದದ್ದು ಕಾಣಿಸಿತು. ಪಂಚಮೀವಿಭಕ್ತಿಯ ವಿಷಯವಾಗಿ ಮಾತನಾಡಲು ಅದು ಸಮಯ ವಲ್ಲವೆಂದು ನಾನು ಸುಮ್ಮನಾದೆ. ಆ ವಿಚಾರವನ್ನು ಇನ್ನೊಮ್ಮೆ ಎತ್ತಲು ಸಾಧ್ಯವಾಗಲೇ ಇಲ್ಲ. ಶ್ರೀ ಸೇಡಿಯಾಪು ಕೃಷ್ಣ ಭಟ್ಟರು ಸ್ವಲ್ಪ ದಿನಗಳಲ್ಲಿಯೇ ಅಸ್ತಂಗತರಾದರು. ಅದು ನನ್ನ ದೌರ್ಭಾಗ್ಯ. ಕನ್ನಡನಾಡಿನಲ್ಲಿ ಉಜ್ಜ್ವಲವಾಗಿ ಪ್ರಕಾಶಿಸುತ್ತಿದ್ದ ಒಂದು ಜ್ಯೋತಿ ಆರಿಹೋಯಿತು.

"ನಾನು ಹೆಚ್ಚು ಬರೆದವನಲ್ಲ" ಎಂದು ಶ್ರೀ ಸೇಡಿಯಾಪು ಅವರು ತಮ್ಮ ನಮ್ರತೆಯನ್ನು ಸೂಚಿಸಿದ್ದುಂಟು. ಆದರೆ ಅವರಂತೆ 'ತಿದ್ದಿ ತೀಡಿ' ಬರೆಯತಕ್ಕವರು ವಿರಳ. ಕಲ್ಲಿದ್ದಲುಗಣಿಯಿಂದ ಕಲ್ಲಿದ್ದಲು ದೊರಕುವ ಪ್ರಮಾಣದಲ್ಲಿ ಚಿನ್ನದ ಗಣಿಯಿಂದ ಚಿನ್ನ ದೊರಕುವುದಿಲ್ಲ.

ಇರಲಿ; ಪಂಚಮೀವಿಭಕ್ತಿಯ ವಿಚಾರವಾಗಿ ನಾನು ಚರ್ಚಿಸಬೇಕೆಂದಿದ್ದುದನ್ನು ವಿದ್ವಜ್ಜನರ ಪರಾಮರ್ಶೆಗಾಗಿ ಈಗ ಲೇಖನರೂಪದಲ್ಲಿ ಮಂಡಿಸುತ್ತಿದ್ದೇನೆ. ಇದು ಸಾಧುವೆ–ಅಸಾಧುವೆ ಎಂಬುದನ್ನು ವಿದ್ವಾಂಸರು ವಿವೇಚಿಸಲಿ.

ಹಳಗನ್ನಡವ್ಯಾಕರಣದಲ್ಲಿ 'ಅತ್ತಣಿಂ' ಎಂಬುದು ಪಂಚಮೀವಿಭಕ್ತಿಪ್ರತ್ಯಯ ವೆಂದೂ ಹೊಸಗನ್ನಡದಲ್ಲಿ 'ದೆಸೆಯಿಂದ' ಎಂಬುದು ಪಂಚಮೀವಿಭಕ್ತಿಪ್ರತ್ಯಯ ವೆಂದೂ ಹೇಳುವುದುಂಟು. ಇವೆರಡೂ ಪ್ರತ್ಯಯರೂಪಗಳಾಗದೆ ಪ್ರತ್ಯಯಾಂತರೂಪ ಗಳಾಗಿ ಕಾಣುತ್ತವೆಯಾದ್ದರಿಂದ ಕನ್ನಡದಲ್ಲಿ ಪಂಚಮೀವಿಭಕ್ತಿಯಿಲ್ಲವೆಂದೂ ಅದರ ಕಾರ್ಯವನ್ನು 'ಇಂದ' ಎಂಬ ತೃತೀಯಾ ವಿಭಕ್ತಿಯೇ ನಿರ್ವಹಿಸುತ್ತದೆ ಎಂದೂ ಆಧುನಿಕಪಂಡಿತರು ಹೇಳುತ್ತಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಕನ್ನಡದಲ್ಲಿ ತೃತೀಯಾ ವಿಭಕ್ತಿ ಇಲ್ಲ, ಪಂಚಮೀವಿಭಕ್ತಿಯೇ ಇದೆ, 'ಇಂದ' ಎನ್ನುವುದೇ ಪಂಚಮೀವಿಭಕ್ತಿ, ತೃತೀಯಾವಿಭಕ್ತಿಯ ಕಾರ್ಯವನ್ನು 'ಇಂದ' ಎಂಬ ಪಂಚಮಿಯೇ ನಿರ್ವಹಿಸುತ್ತದೆ ಯೆಂಬುದು ಶ್ರೀ ಸೇಡಿಯಾಪು ಅವರ ಸಿದ್ಧಾಂತವಾಗಿದೆ. ಇದನ್ನು ಡಾ| ರಂ.ಶ್ರೀ. ಮುಗಳಿಯವರೂ ಡಾ| ಪಿ. ಶ್ರೀಕೃಷ್ಣಭಟ್ ಅವರೂ ಅಂಗೀಕರಿಸಿ ಶ್ರೀ ಸೇಡಿಯಾಪು ಅವರ ವಿಚಾರಸರಣಿಯನ್ನು ಪ್ರಶಂಸೆ ಮಾಡಿದ್ದಾರೆ. (ಪುತ್ತೂರು ಕರ್ನಾಟಕ ಸಂಘವು ಪ್ರಕಟಿಸಿದ 'ವಿಚಾರಪ್ರಪಂಚ'ದ 'ಪಂಚಮೀವಿಭಕ್ತಿ' ಎಂಬ ಲೇಖನ.) ಹೀಗೆ ವಿಖ್ಯಾತ ವಿದ್ವಾಂಸರಿಂದ ನಿರ್ಣೀತವಾದ ವಿಷಯವನ್ನು ಪರಾಮರ್ಶಿಸಲು ಹೊರಟ ನಾನು ಜೇನುಗೂಡಿಗೆ ಕೈಹಾಕುತ್ತಿದ್ದೇನೆ.

ಕನ್ನಡದ ವಿಭಕ್ತಿವಿಚಾರವು ಸಂಸ್ಕೃತದಿಂದಲೇ ಮೊದಲಾಯಿತೆಂದೂ ದ್ವಿತೀಯಾ ತೃತೀಯಾ –ಮುಂತಾಗಿ ಮಾಡುವ ವ್ಯವಹಾರಕ್ಕೆ ಸಂಸ್ಕೃತವ್ಯಾಕರಣವೇ ಮೂಲಾ ಧಾರವೆಂದೂ ಆದ್ದರಿಂದ ತೃತೀಯಾ ಪಂಚಮೀಗಳ ವೈಶಿಷ್ಟ್ಯವೇನೆಂಬುದನ್ನು ತಿಳಿಯಬೇಕಾದರೆ ಸಂಸ್ಕೃತವ್ಯಾಕರಣವನ್ನೇ ಅವಲೋಕಿಸಬೇಕೆಂಬುದು ಸಹಜವೆಂದೂ ಶ್ರೀ ಸೇಡಿಯಾಪು ಕೃಷ್ಣಭಟ್ಟರು ಈ ಪ್ರಬಂಧದಲ್ಲಿ ಹೇಳಿದ್ದಾರೆ. ವಿಭಕ್ತಿಗಳ ಹೆಸರು ಮಾತ್ರವಲ್ಲದೆ, ಸ್ವರ, ವ್ಯಂಜನ, ಸಂಧಿ, ಸಮಾಸ, ಕಾರಕ, ಕರ್ತೃ, ಕರ್ಮ, ಕರಣ, ಕೃತ್, ತದ್ಧಿತ, ಪ್ರಾತಿಪದಿಕ, ಧಾತು, ಪುಲ್ಲಿಂಗ, ಸ್ತ್ರೀಲಿಂಗ –ಮುಂತಾದ ವ್ಯಾಕರಣ ಶಾಸ್ತ್ರಸಂಬಂಧಿ ಶಬ್ದಗಳೆಲ್ಲವೂ ಸಂಸ್ಕೃತವ್ಯಾಕರಣಸಂಬಂಧಿಶಬ್ದಗಳೇ ಆಗಿರುವುದ ರಿಂದ ಕನ್ನಡ ವ್ಯಾಕರಣವು ಸಂಸ್ಕೃತವ್ಯಾಕರಣವನ್ನೇ ಪೂರ್ತಿಯಾಗಿ ಅವಲಂಬಿಸಿದೆ. 'ವ್ಯಾಕರಣ' ಎಂಬ ಶಬ್ದಕ್ಕೆ ಪರ್ಯಾಯವಾಗಿ ಇನ್ನೊಂದು ಶಬ್ದವೂ ಕನ್ನಡದಲ್ಲಿಲ್ಲ ಎಂಬುದನ್ನು ಗಮನಿಸಬೇಕು. ಆದರೆ ಕನ್ನಡಪದಗಳ ಸ್ವರೂಪವೂ ಪ್ರಯೋಗ ವಿಧಾನವೂ ಕನ್ನಡದಲ್ಲಿ ಸಂಸ್ಕೃತದಲ್ಲಿರುವುದಕ್ಕಿಂತ ಭಿನ್ನವಾಗಿರುತ್ತದೆ. ಆದ್ದರಿಂದ ಸಂಸ್ಕೃತದ ಕೆಲವು ನಿಯಮಗಳು ಕನ್ನಡಕ್ಕೆ ಅನ್ವಯಿಸುವುದಿಲ್ಲವೆಂಬುದು ದಿಟವಾಗಿದೆ. ಈ ಎರಡು ಭಾಷೆಗಳಿಗೂ ಹೊಂದಾಣಿಕೆಯೇ ಅಧಿಕವಾಗಿರುವುದರಿಂದ ಸಂಸ್ಕೃತಶಬ್ದ ಗಳು ಕನ್ನಡದಲ್ಲಿ ಧಾರಾಳವಾಗಿ ಪ್ರವೇಶಿಸಿಬಿಟ್ಟಿವೆ.

ಶಬ್ದಾರ್ಥಗಳಿಗೆ ತಾದಾತ್ಮ್ಯವಿರುವುದರಿಂದ ವ್ಯಾಕರಣಶಾಸ್ತ್ರದಲ್ಲಿ ಅವೆರಡನ್ನು ಅಭೇದದಿಂದ ವ್ಯವಹರಿಸುವುದುಂಟು. ಕರ್ತೃವಿನ ಮೇಲೆ ತೃತೀಯಾ ಬರುತ್ತದೆ ಎಂದರೆ ಕರ್ತೃವಾಚಕಶಬ್ದದ ಮೇಲೆ ತೃತೀಯಾವಿಭಕ್ತಿ ಬರುತ್ತದೆ ಎಂದರ್ಥ. ಈ

ಶಬ್ದಕ್ಕೆ ಕ್ರಿಯಾಪದದಲ್ಲಿ ಅನ್ವಯವೆಂದರೆ- ಈ ಶಬ್ದದ ಅರ್ಥಕ್ಕೆ ಕ್ರಿಯಾಪದದ ಅರ್ಥವಾದ ಕ್ರಿಯೆಯಲ್ಲಿ ಅನ್ವಯವೆಂದರ್ಥ.

ಒಂದು ವಾಕ್ಯವು ಕ್ರಿಯಾಪದವಿಲ್ಲದೆ ಪೂರ್ಣವಾಗುವುದಿಲ್ಲ. ಎಲ್ಲ ಶಬ್ದಗಳಿಗೂ ಕಡೆಯಲ್ಲಿ ಕ್ರಿಯಾನ್ವಯವಾಗಲೇಬೇಕು. ಇಲ್ಲದಿದ್ದರೆ ಆಕಾಂಕ್ಷೆ ಪೂರ್ಣವಾಗುವುದಿಲ್ಲ. "ನದೀನಾಂ ಸಾಗರೋ ಗತಿಃ". ನದಿಗಳು ಸಮುದ್ರವನ್ನು ಸೇರಿದ ಮೇಲೆ ಹರಿಯುವುದನ್ನು ನಿಲ್ಲಿಸುವಂತೆ, ಪದಗಳಿಂದ ಹುಟ್ಟುವ ಆಕಾಂಕ್ಷೆಯು ಕ್ರಿಯೆಯಲ್ಲಿ ಅನ್ವಿತವಾದ ಮೇಲೆ ಶಾಂತವಾಗುತ್ತದೆ. ಮಹಾನದಿಗಳು ನೇರವಾಗಿ ಸಮುದ್ರವನ್ನು ಸೇರಿದರೆ, ಉಪನದಿಗಳು ಮಹಾನದಿಯನ್ನು ಸೇರಿ ಅವುಗಳ ಮೂಲಕ ಸಮುದ್ರವನ್ನು ಸೇರುತ್ತವೆ. ಹಾಗೆಯೇ ಕೆಲವು ಶಬ್ದಗಳಿಗೆ ನೇರವಾಗಿ ಕ್ರಿಯೆಯಲ್ಲಿ ಅನ್ವಯವಿಲ್ಲದಿದ್ದರೂ ಇನ್ನೊಂದು ಶಬ್ದದ ಮೂಲಕ ಪರಂಪರೆಯಾಗಿ ಕ್ರಿಯಾನ್ವಯವಿರುತ್ತದೆ. ಉಪನದಿಗೆ ಇನ್ನೊಂದು ಉಪನದಿ ಇರುವುದೂ ಉಂಟು. 'ಈ ಗಡಿಗೆ ಚಿಕ್ಕದು', 'ಅದು ಎತ್ತರವಾದ ಮರ' -ಇತ್ಯಾದಿ ವಾಕ್ಯಗಳಲ್ಲಿ ಕ್ರಿಯಾಪದವಿಲ್ಲದಿದ್ದರೂ 'ಆಗಿದೆ', 'ಇದೆ' ಎಂಬ ಸಾಮಾನ್ಯಕ್ರಿಯಾವಾಚಿಯ ಅಧ್ಯಾಹಾರವಿದ್ದೇ ಇರುತ್ತದೆಯೆಂದೂ ಇವು ಪ್ರಸಿದ್ಧ ಪ್ರಯೋಗಗಳಾದ್ದರಿಂದ ಕ್ರಿಯಾಪದವನ್ನು ಬಳಸುವುದಿಲ್ಲವೆಂದೂ ವ್ಯಾಕರಣಶಾಸ್ತ್ರದ ಸಿದ್ಧಾಂತ.

ವಾಕ್ಯದಲ್ಲಿ ಕ್ರಿಯಾಪದವು ಪ್ರಧಾನವಾದ್ದರಿಂದ ಕ್ರಿಯೆಯಲ್ಲಿ ಅನ್ವಯಿಸುವ ಕಾರಕಗಳಿಗೆ ವ್ಯಾಕರಣದಲ್ಲಿ ಪ್ರಮುಖಸ್ಥಾನವು ಸಂದಿದೆ. ಕಾರಕಗಳಿಗೆ ಅನುಗುಣವಾಗಿ ವಿಭಕ್ತಿಗಳು ಬರುವುದರಿಂದ ಕಾರಕಗಳ ಸ್ವರೂಪವನ್ನರಿತುಕೊಳ್ಳುವುದು ಭಾಷಾಧ್ಯಯನಕ್ಕೆ ಅತ್ಯಾವಶ್ಯಕ.

ಕಾರಕಗಳು

ಕಾರಕವೆಂದರೆ ಕ್ರಿಯಾಜನಕವೆಂದರ್ಥ. ಕಾರಕತ್ವವೆಂದರೆ ಕ್ರಿಯಾಜನಕತ್ವ. ಅದೇ ಕ್ರಿಯಾನಿರ್ವರ್ತಕತ್ವ. **ಕರೋತೀತಿ ಕಾರಕಂ** ಎಂದು ಕಾರಕಶಬ್ದದ ನಿಷ್ಪತ್ತಿ. ಕ್ರಿಯೆಯೆಂದರೇನು? ಧಾತ್ವರ್ಥವು ಕ್ರಿಯೆಯೆಂಬುದನ್ನು ಎಲ್ಲರೂ ಬಲ್ಲರು. ಕ್ರಿಯೆಯೆಂದರೆ ಮಾಡುವುದು, ಕೆಲಸ -ಎಂದಿಷ್ಟೇ ಜನರು ಹೇಳಬಲ್ಲರು. ಇದನ್ನು ವಿಶ್ಲೇಷಿಸಿ ತಿಳಿದುಕೊಳ್ಳಬೇಕು. 'ಫಲವ್ಯಾಪಾರಯೋರ್ಧಾತುಃ' ಎಂದು ವ್ಯಾಕರಣ ಶಾಸ್ತ್ರವು ಹೇಳುತ್ತದೆ. ಫಲ ಮತ್ತು ವ್ಯಾಪಾರ -ಇವೆರಡೂ ಧಾತ್ವರ್ಥಗಳು. ವ್ಯಾಪಾರವೆಂದರೆ ಸಾಮಾನ್ಯಕ್ರಿಯೆ. ಅದನ್ನೇ ಮಾಡುವುದು, ಕೆಲಸ ಎಂದು ಹೇಳಬಹುದು. ಆದರೆ ಧಾತ್ವರ್ಥಕ್ರಿಯೆಯು ಫಲವನ್ನೊಳಗೊಂಡಿದೆ. ವ್ಯಾಪಾರದಿಂದ ಫಲವು ಹುಟ್ಟುತ್ತದೆ. ಆದ್ದರಿಂದ ಕ್ರಿಯೆಯೆಂದರೆ ಫಲಾನುಕೂಲವ್ಯಾಪಾರ, ಬರಿಯ ವ್ಯಾಪಾರವಲ್ಲ. ವ್ಯಾಪಾರದಿಂದ ಹುಟ್ಟುವ ಫಲವು ಬೇರೆಬೇರೆಯಾದ್ದರಿಂದ ಧಾತ್ವರ್ಥವೂ ಬೇರೆಬೇರೆಯಾಗುತ್ತದೆ. ಬರಿಯ ವ್ಯಾಪಾರವೇ ಧಾತ್ವರ್ಥವಾದರೆ ಎಲ್ಲ ಧಾತುಗಳೂ ಸಮಾನಾರ್ಥಕಗಳಾಗಿ ಪರ್ಯಾಯಪದಗಳಾಗಿಬಿಡುತ್ತಿದ್ದವು. ಉದಾಹರಣೆಗಳಿಂದ ಇದನ್ನು ಸ್ಪಷ್ಟಪಡಿಸಬಹುದು-

೧. ಚೈತ್ರನು ಅಕ್ಕಿಯನ್ನು ಬೇಯಿಸುತ್ತಾನೆ.

ಬೇಯಿಸುವುದರಿಂದ ಅಕ್ಕಿಯು ಅರಳಿ ಅನ್ನವಾಗುತ್ತದೆ. ಅಕ್ಕಿಯಲ್ಲಾಗುವ ಅರಳುವಿಕೆ ಬೇಯಿಸುವುದರ ಫಲ. ಬೇಯಿಸುವುದರಿಂದಾಗುವ ಎಲ್ಲ ಬಗೆಯ ಫಲವನ್ನೂ ಸಂಸ್ಕೃತದಲ್ಲಿ 'ವಿಕ್ಲಿತ್ತಿ' ಎನ್ನುತ್ತಾರೆ. ಏವಂ ಚ ವಿಕ್ಲಿತ್ತ್ಯನುಕೂಲವ್ಯಾಪಾರವು ಬೇಯಿಸುವುದೆಂಬ ಕ್ರಿಯೆಯ ಅರ್ಥ. ಇದೇ ಧಾತ್ವರ್ಥ. ಅನುಕೂಲ = ಜನಕ. ವಿಕ್ಲಿತ್ತಿ ಜನಕವ್ಯಾಪಾರವೆನ್ನಬಹುದು.

೨. ರಾಮನು ಕಾಡಿಗೆ ಹೋಗುತ್ತಾನೆ.

ಹೋಗುವುದೆಂದರೆ ಮುಂದಿನ ಸ್ಥಳವನ್ನು ಸೇರುವುದು. ರಾಮನು ಕಾಡಿಗೆ ಹೋದಾಗ ರಾಮನಿಗೂ ಕಾಡಿಗೂ ಸಂಯೋಗವಾಗುತ್ತದೆ. 'ಮುಂದಿನ ಸ್ಥಳ'ವನ್ನು 'ಉತ್ತರದೇಶ'(ಸ್ಥಳ) ಎನ್ನುತ್ತಾರೆ. ರಾಮನಿಗೂ ಉತ್ತರದೇಶವಾದ ಕಾಡಿಗೂ ಆಗುವ ಸಂಯೋಗವೇ ಫಲ. ಉತ್ತರದೇಶಸಂಯೋಗಾನುಕೂಲವ್ಯಾಪಾರವು ಹೋಗು ಧಾತುವಿನ ಅರ್ಥ.

೩. ಹುಡುನು ತನ್ನ ಗುರುವಿಗೆ ಹಣ್ಣನ್ನು ಕೊಡುತ್ತಾನೆ.

ಹಣ್ಣನ್ನು ಕೊಟ್ಟಾಗ ಹಣ್ಣು ಗುರುವಿನ ಅಧೀನವಾಗುತ್ತದೆ. ಈ 'ಅಧೀನತೆ'ಯೇ ಕೊಡುವ ವ್ಯಾಪಾರದ ಫಲ. ಪರಾಧೀನತಾನುಕೂಲವ್ಯಾಪಾರವು ಕೊಡು ಧಾತುವಿನ ಅರ್ಥ.

ಹೀಗೆಯೇ ಅನ್ಯತ್ರ ಊಹಿಸಿಕೊಳ್ಳಬೇಕು. ಮೇಲೆ ಉದಾಹೃತವಾದವುಗಳೆಲ್ಲ ಸಕರ್ಮಕಧಾತುಗಳು. ಫಲವು ಕರ್ಮದಲ್ಲಿರುತ್ತದೆ, ಫಲಾನುಕೂಲವ್ಯಾಪಾರವು ಕರ್ತೃವಿನಲ್ಲಿರುತ್ತದೆ. 'ರಾಮನು ಕಾಡಿಗೆ ಹೋಗುತ್ತಾನೆ' ಎಂಬಲ್ಲಿ 'ಕಾಡು' ಕರ್ಮಪದ. ಹೋಗು ಧಾತುವಿದ್ದಾಗ ಕನ್ನಡದಲ್ಲಿ ಕರ್ಮಕ್ಕೆ ಚತುರ್ಥೀವಿಭಕ್ತಿ ಬರುತ್ತದೆ. 'ಕಾಡನ್ನು ಸೇರುತ್ತಾನೆ' ಎಂಬಾಗ ದ್ವಿತೀಯಾವಿಭಕ್ತಿಯೇ ಬಂದಿದೆ ಎಂಬು ದನ್ನು ಗಮನಿಸಬೇಕು. ಸಕರ್ಮಕಧಾತುವನ್ನು ಬಳಸಿದಾಗ ಫಲವು ಕರ್ಮದಲ್ಲಿಯೂ ಫಲಾನುಕೂಲವ್ಯಾಪಾರವು ಕರ್ತೃವಿನಲ್ಲಿಯೂ ಇರುತ್ತದೆ. ಆದ್ದರಿಂದ ಸಕರ್ಮಕ ವೆಂದರೆ ಫಲವ್ಯಧಿಕರಣವ್ಯಾಪಾರವಾಚಕವೆಂದರ್ಥ.

ಅಕರ್ಮಕಧಾತುಗಳಿಗೂ ಫಲವ್ಯಾಪಾರಗಳು ಅರ್ಥ.

೧. ಹುಡುಗಿಯು ನಗುತ್ತಾಳೆ.

ನಕ್ಕಾಗ ಮುಖದಲ್ಲಿ ಬದಲಾವಣೆಯಾಗುತ್ತದೆ. ಮುಖವು ಪ್ರಸನ್ನವಾಗಿ ಅರಳುತ್ತದೆ. ಇದೇ ಮುಖವಿಕಸನವೆಂಬ ಫಲ. ಮುಖವಿಕಸನಾನುಕೂಲವ್ಯಾಪಾರವು ನಗು ಧಾತುವಿನ ಅರ್ಥ.

೨. ಮರದಿಂದ ಎಲೆ ಬೀಳುತ್ತದೆ.

ಕೆಳಗಿರುವ ಸ್ಥಳದೊಡನೆ ಸಂಯೋಗವಾಗುವದು ಫಲ. ಆದ್ದರಿಂದ ಅಧೋದೇಶಸಂಯೋಗಾನುಕೂಲವ್ಯಾಪಾರವು ಬೀಳು ಧಾತುವಿನ ಅರ್ಥ.

ಅಕರ್ಮಕಸ್ಥಳದಲ್ಲಿ ಫಲವ್ಯಾಪಾರಗಳೆರಡೂ ಕರ್ತೃವಿನಲ್ಲಿ ಇರುತ್ತವೆ. ಮುಖವಿಕಸನವು ಹುಡುಗಿಯಲ್ಲಿದೆ. ಅಧೋದೇಶಸಂಯೋಗವು ಕರ್ತೃವಾದ ಎಲೆಯಲ್ಲಿದೆ. ಭೂಮಿಯಲ್ಲಾಗುವ ಸಂಯೋಗವು ಇಲ್ಲಿ ವಿವಕ್ಷಿತವಲ್ಲ. ಆದ್ದರಿಂದ ಅಕರ್ಮಕವೆಂದರೆ ಫಲಸಮಾನಾಧಿಕರಣವ್ಯಾಪಾರವಾಚಕವೆಂದರ್ಥ. ಸರ್ವತ್ರ ಧಾತ್ವರ್ಥವಾದ ಫಲವು ವ್ಯಾಪಾರಜನ್ಯವಾಗಿ ಇದ್ದೇ ಇರುತ್ತದೆ.

ಧಾತ್ವರ್ಥವಾದ ಕ್ರಿಯೆಯನ್ನು ನಿರ್ವಹಿಸುವ ಕಾರಕಗಳು ಆರು–ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ ಮತ್ತು ಅಧಿಕರಣ. ವ್ಯಾಕರಣಸೂತ್ರಗಳನ್ನು ಬರೆದು ವಿಷಯವನ್ನು ಜಟಿಲಗೊಳಿಸದೆ ಸರಳವಾದ ರೀತಿಯಲ್ಲಿ ಇವುಗಳ ಸ್ವರೂಪವನ್ನು ನಿರೂಪಿಸಲು ಯತ್ನಿಸುತ್ತೇನೆ.

೧. ಕರ್ತೃ: ಕರ್ತೃವೆಂದರೆ ಕೆಲಸ ಮಾಡತಕ್ಕವನು. ಲೋಕಪ್ರಸಿದ್ಧವಾದ ಈ ಶಬ್ದವನ್ನೇ ವ್ಯಾಕರಣದಲ್ಲಿ ಸಂಜ್ಞೆಯೆಂದು ಸ್ವೀಕರಿಸಲಾಗಿದೆ. ಧಾತ್ವರ್ಥದಲ್ಲಿ ಸೇರಿದ ವ್ಯಾಪಾರವು ಈತನಲ್ಲಿರುತ್ತದೆ. ಅದನ್ನು ನಡೆಸಲು ಇವನು ಸ್ವತಂತ್ರ. ಇತರ ಕಾರಕಗಳಿಗೆ ಇವನು ಅಧೀನನಲ್ಲ. ಇತರ ಕಾರಕಗಳು ಕರ್ತೃವಿಗೆ ಅಧೀನವಾಗಿ ಕ್ರಿಯಾಸಿದ್ಧಿಗೆ ನೆರವನ್ನು ನೀಡುತ್ತವೆ.

೨. ಕರ್ಮ: ಹಿಂದೆ ಹೇಳಿದಂತೆ ವ್ಯಾಪಾರಜನ್ಯವಾದ ಧಾತ್ವರ್ಥಫಲಕ್ಕೆ ಆಶ್ರಯವಾದದ್ದು ಕರ್ಮ. ಅಕರ್ಮಕಸ್ಥಳದಲ್ಲಿ ಫಲವು ಕರ್ತೃವಿನಲ್ಲಿಯೇ ಇದ್ದರೂ ಕರ್ಮಸಂಜ್ಞೆಯನ್ನು ಬಾಧಿಸಿ ಕರ್ತೃಸಂಜ್ಞೆ ಬರುತ್ತದೆ. 'ಹುಡುಗಿಯು ನಗುತ್ತಾಳೆ' ಎಂಬಲ್ಲಿ ಮುಖವಿಕಸನವೆಂಬ ಫಲವು ಹುಡುಗಿಯಲ್ಲಿದ್ದರೂ ಅವಳೇ ನಗುವ ವ್ಯಾಪಾರಕ್ಕೆ ಆಶ್ರಯಳಾದ್ದರಿಂದ ಕರ್ತೃಸಂಜ್ಞೆಯು ಕರ್ಮಸಂಜ್ಞೆಯನ್ನು ಬಾಧಿಸಿ ಬಂದಿದೆ. ಕಾರಕಗಳಲ್ಲಿ ಪರಸ್ಪರ ಬಾಧ್ಯಬಾಧಕಭಾವ ಉಂಟು.

೩. ಕರಣ: ಕ್ರಿಯೆಯನ್ನು ನಡೆಸಲು ಆವಶ್ಯಕವಾದ ಸಲಕರಣೆಗೆ ಕರಣವೆಂದು ಹೆಸರು. ಇದನ್ನು ಅಸಾಧಾರಣ ಕಾರಣವೆನ್ನುವುದುಂಟು. 'ಅಸಾಧಾರಣತ್ವ'ವೇನೆಂದರೆ ಇದು ಕರ್ತೃವಿಗೆ ಅಧೀನನಾಗಿ ತಾನೂ ಒಂದು ಕ್ರಿಯೆಯನ್ನೇ ನಡೆಸುತ್ತದೆ. ಫಲವು ಹುಟ್ಟುವುದಕ್ಕೆ ಅವ್ಯವಹಿತಪೂರ್ವದಲ್ಲಿ ಇದರ ಕ್ರಿಯೆ ನಡೆದೇ ಇರಬೇಕು. ಚೈತ್ರನು ಚಾಕುವಿನಿಂದ ಹಣ್ಣನ್ನು ಕತ್ತರಿಸುತ್ತಾನೆ –ಎಂಬಲ್ಲಿ ಚಾಕುವನ್ನು ತನ್ನ ಇಷ್ಟದಂತೆ ತಳ್ಳುತ್ತಿರುವವನು ಕರ್ತೃವಾದ ಚೈತ್ರ. ಚಾಕು ಕತ್ತರಿಸುವ ಕೆಲಸವನ್ನು ಮಾಡುತ್ತ ಹಣ್ಣನ್ನು ಹೋಳು ಮಾಡುತ್ತದೆ. ಹೋಳು ಫಲ. ಈ ಫಲವು ನಿಷ್ಪತ್ತಿಯಾಗುವವರೆಗೆ ಕರಣವು ಇದ್ದೇ ಇರುತ್ತದೆ.

೪. ಸಂಪ್ರದಾನ: ಕರ್ಮವನ್ನು ಯಾರಿಗೆ ಸೇರಿಸಬೇಕೆಂದು ಕರ್ತೃವಿನ ಉದ್ದೇಶವಿದೆಯೋ ಆ ಉದ್ದೇಶ್ಯವು ಸಂಪ್ರದಾನ. 'ಉಪಾಧ್ಯಾಯನು ಹುಡುಗನಿಗೆ ಪುಸ್ತಕವನ್ನು ಕೊಡುತ್ತಾನೆ.' ಇಲ್ಲಿ ಕರ್ಮವಾದ ಪುಸ್ತಕವನ್ನು ಹುಡುಗನಿಗೆ ಸೇರಿಸಬೇಕೆಂದು ಕರ್ತೃವಾದ ಉಪಾಧ್ಯಾಯನ ಉದ್ದೇಶವಾಗಿದೆ. ಸಂಪ್ರದಾನದ ವಿಷಯವಾಗಿ ಹೇಳಬೇಕಾದದ್ದು ಬಹಳ ಇದೆ. ಪ್ರಕೃತಲೇಖನಕ್ಕೆ ಅದರ ವಿವರಣೆ ಅನಪೇಕ್ಷಿತ.

೬. ಅಪಾದಾನ: ವಿಭಾಗಜನಕಕ್ರಿಯೆಯು ನಡೆದಾಗ ವಿಭಾಗಕ್ಕೆ ಪೂರ್ವಾವಧಿ ಯಾದದ್ದು ಅಪಾದಾನ. ಉದಾ: 'ಮರದಿಂದ ಎಲೆ ನೆಲಕ್ಕೆ ಬೀಳುತ್ತದೆ.' ಇಲ್ಲಿ ಬೀಳುವುದು ವಿಭಾಗಜನಕಕ್ರಿಯೆ. ಮರದಿಂದ ಎಲೆಗೆ ವಿಭಾಗ(ವಿಶ್ಲೇಷ)ವಾಗುತ್ತದೆ. ಈ ವಿಶ್ಲೇಷಕ್ಕೆ ಪೂರ್ವಾವಧಿ ಮರ. ನೆಲವು ಉತ್ತರಾವಧಿ. ಮರವು ಅಲ್ಲಾಡದಿದ್ದರೂ ಎಲೆ ಬೀಳಬಹುದು. ಬಂಡೆಯಿಂದ ಕೆಳಗೆ ಹಾರುತ್ತಾನೆ –ಎಂಬಲ್ಲಿಯೂ ಬಂಡೆ ಅಪಾದಾನವೇ. ಇಲ್ಲಿ ಬಂಡೆ ಅಲ್ಲಾಡುವುದಿಲ್ಲವೆಂಬುದು ಸ್ಪಷ್ಟ. ಅಪಾದಾನವು ಕಾರಕವೆನಿಸಿದೆಯಷ್ಟೆ. ಕ್ರಿಯಾಜನಕವೇ ಕಾರಕವಾದ್ದರಿಂದ ಅಪಾದಾನವು ಹೇಗೆ ಕಾರಕ ಎಂಬ ಪ್ರಶ್ನೆ ಹುಟ್ಟಬಹುದು. ವಿಭಾಗಜನಕಕ್ರಿಯೆಗೆ ಅವಧಿಭಾವವನ್ನು ಹೊಂದುವುದೇ ಅದು ಕಾರಕವೆನಿಸಲು ಕಾರಣವೆಂದು ವ್ಯಾಕರಣಶಾಸ್ತ್ರವು ಹೇಳುತ್ತದೆ. ಬೀಳುವುದಕ್ಕೆ ಅಥವಾ ಹಾರುವುದಕ್ಕೆ ಅವ್ಯವಹಿತಪೂರ್ವದಲ್ಲಿ ಅಪಾದಾನವು ಇಲ್ಲದಿದ್ದರೆ ಬೀಳುವ ಕ್ರಿಯೆಯಾಗಲಿ ಹಾರುವ ಕ್ರಿಯೆಯಾಗಲಿ ನಡೆಯುತ್ತಲೇ ಇರಲಿಲ್ಲ. ಆದ್ದರಿಂದ ಅಪಾದಾನವೂ ಕ್ರಿಯಾಜನಕವಾಗುತ್ತದೆ. ಅಪಾದಾನಕ್ಕೆ ನೇರವಾಗಿ ಕ್ರಿಯೆಯಲ್ಲಿ ಅನ್ವಯ, ಎಲೆಯಲ್ಲಲ್ಲ. ಎಲೆಯಲ್ಲಿ ಅನ್ವಯವು ವಿವಕ್ಷಿತವಾದರೆ, 'ಮರದ ಎಲೆ ಬೀಳುತ್ತದೆ' ಎಂದು ಪ್ರಯೋಗಿಸಬೇಕು.

೭. ಅಧಿಕರಣ: ಆಧಾರವಾದದ್ದಕ್ಕೆ ಅಧಿಕರಣವೆಂದು ಸಂಜ್ಞೆ. ಯಾವುದಕ್ಕೆ ಆಧಾರ? ಇದು ಕಾರಕವಾದ್ದರಿಂದ ಕ್ರಿಯೆಗೆ ಆಧಾರವೆನ್ನಬೇಕು. ಇಲ್ಲೊಂದು ವಿಚಾರ ಉಂಟು. ಫಲವ್ಯಾಪಾರಗಳೆರಡೂ ಧಾತ್ವರ್ಥವಾದ್ದರಿಂದ ಅವೆರಡೂ ಕ್ರಿಯೆ ಎಂದು ಹಿಂದೆ ಹೇಳಿದೆ. ಅವುಗಳಲ್ಲಿ ಫಲಕ್ಕೆ ಆಧಾರವಾದದ್ದು ಕರ್ಮ. ವ್ಯಾಪಾರಕ್ಕೆ ಆದದ್ದು ಕರ್ತೃ. ಆದ್ದರಿಂದ ಕ್ರಿಯೆಗೆ ನೇರವಾಗಿ ಆಧಾರವಾಗದಿದ್ದರೂ ಕರ್ತೃಕರ್ಮಗಳ ದ್ವಾರಾ ಆಧಾರವಾದದ್ದು ಅಧಿಕರಣವೆಂದು ತಿಳಿಯಬೇಕು. ಉದಾ: 'ಮಗು ತೊಟ್ಟಿಲಲ್ಲಿ ಆಡುತ್ತಿದೆ.' ಆಡುವ ಕ್ರಿಯೆ(ವ್ಯಾಪಾರ) ಮಗುವಿನಲ್ಲಿದೆಯಾದ್ದರಿಂದ ಮಗು ಕರ್ತೃ. ಮಗುವಿಗೆ ಆಧಾರವಾದದ್ದು ತೊಟ್ಟಿಲು. ಆಡುವ ಕ್ರಿಯೆಗೆ ಕರ್ತೃವಿನ ಮೂಲಕ ತೊಟ್ಟಿಲು ಆಧಾರವಾಗಿದೆಯಾದ್ದರಿಂದ ತೊಟ್ಟಿಲು ಅಧಿಕರಣ. 'ಪಾತ್ರೆಯಲ್ಲಿ ಅನ್ನವನ್ನು ಬೇಯಿಸುತ್ತಾನೆ.' ಇಲ್ಲಿ ವಿಕ್ಲಿತ್ತಿಯೆಂಬ ಫಲವು ಕ್ರಿಯೆ. ಫಲಕ್ಕೆ ಆಶ್ರಯ ವಾದ ಅನ್ನವು ಕರ್ಮ. ಕರ್ಮಕ್ಕೆ ಆಶ್ರಯವಾದದ್ದು ಪಾತ್ರೆ. ಇಲ್ಲಿ ಕರ್ಮದ ಮೂಲಕ ಪಾತ್ರೆ ಕ್ರಿಯೆಗೆ ಆಧಾರವಾಗಿದೆ.

ಈ ಪ್ರಕಾರ ಆರು ಕಾರಕಗಳಂತೆ ಅವುಗಳಿಗೆ ಆಯಾ ವಿಭಕ್ತಿಗಳು ಬರುತ್ತವೆ. ಷಷ್ಠೀವಿಭಕ್ತಿಯ ವಿಚಾರ ಉಳಿಯಿತು. ಸಂಬಂಧಸಾಮಾನ್ಯವನ್ನು ತಿಳಿಸುವಾಗ ಷಷ್ಠೀವಿಭಕ್ತಿ ಬರುತ್ತದೆ –ಎಂದು ನಿಯಮ. 'ನನ್ನ ಮನೆ, ಮರದ ಕೊಂಬೆ, ದಶರಥನ ಮಗ, ನಳರಾಜನ ಹೆಂಡತಿ' –ಮುಂತಾದವು ಉದಾಹರಣೆಗಳು. ಸಂಬಂಧವು ಉಭಯನಿಷ್ಠವಾದ್ದರಿಂದ ಎರಡು ಪದಾರ್ಥಗಳಿಗಿರುವ ಅನ್ಯೋನ್ಯಸಂಬಂಧವನ್ನು ಹೇಳಬೇಕಾಗುತ್ತದೆ.

ನನ್ನ ಮನೆ = ಸ್ವಸ್ವಾಮಿಭಾವ ಸಂಬಂಧ. 'ನಾನು' ಮನೆಯ ಸ್ವಾಮಿ, ಮನೆ (ಸ್ವ–ಸ್ವಕೀಯ). ಉಭಯಕ್ಕಿರುವ ಸಂಬಂಧವು ಸ್ವಸ್ವಾಮಿಭಾವ. ಮರದ ಕೊಂಬೆ = ಅವಯವಾವಯವಿಭಾವಸಂಬಂಧ. ಮರವು ಅವಯವಿ, ಕೊಂಬೆ ಅವಯವ. ಉಭಯಸಂಬಂಧವು ಅವಯವಾವಯವಿಭಾವ. ದಶರಥನ ಮಗ = ಜನ್ಯಜನಕ ಭಾವಸಂಬಂಧ. ದಶರಥನು ಜನಕ. ಮಗನು ಜನ್ಯ. ಉಭಯ ಸಂಬಂಧವು ಜನ್ಯ ಜನಕಭಾವ. ಇಲ್ಲಿ ಜನನಕ್ರಿಯೆ ಸೂಚ್ಯವಾಗಿದ್ದರೂ ಕ್ರಿಯಾವಾಚಕಶಬ್ದವಿಲ್ಲದ್ದರಿಂದ ಇದು ಸಂಬಂಧಸಾಮಾನ್ಯವೆನಿಸಿದೆ. ಈ ರೀತಿ ಸಂಬಂಧಗಳು ವಿಪುಲವಾಗಿವೆ. '**ಏಕಶತಂ ಸಂಬಂಧಾಃ** = ನೂರೊಂದು ಸಂಬಂಧಗಳಿವೆ.' ಎಂದು ವ್ಯಾಕರಣಮಹಾ ಭಾಷ್ಯಕಾರನಾದ ಪತಂಜಲಿ ಹೇಳಿದ್ದಾನೆ.

ಈ ಪ್ರಕರಣದಲ್ಲಿ 'ನನ್ನ ಮನೆ, ಮರದ ಕೊಂಬೆ' –ಮೊದಲಾದ ಸ್ಥಳಗಳಲ್ಲಿ ಷಷ್ಠ್ಯಂತಕ್ಕೆ ಕ್ರಿಯೆಯಲ್ಲಿ ಅನ್ವಯವಿಲ್ಲದ್ದರಿಂದಲೂ ಕರ್ತೃ, ಕರ್ಮ ಮುಂತಾದ ಕಾರಕಸಂಜ್ಞೆಯು ಷಷ್ಠ್ಯಂತಕ್ಕೆ ಇಲ್ಲವಾದ್ದರಿಂದಲೂ ಷಷ್ಠಿಯು ಕಾರಕವಿಭಕ್ತಿಯಲ್ಲ ಎನ್ನುತ್ತಾರೆ. ಇದು ಸರಿಯೇ. ಆದರೆ ಕಾರಕಗಳ ಮೇಲೂ ಷಷ್ಠೀವಿಭಕ್ತಿಯು ಬರುವು ದುಂಟು. ಧಾತುವು ಕೃದಂತವಾದಾಗ ಇದಕ್ಕೆ ಉದಾಹರಣೆ ಸಿಗುತ್ತದೆ. ಹೇಗೆಂದರೆ, 'ವಿದ್ಯಾರ್ಥಿಯು ಬರೆಯುತ್ತಾನೆ'. ಇಲ್ಲಿ ವಿದ್ಯಾರ್ಥಿಯು ಕರ್ತೃ. 'ಇದು ವಿದ್ಯಾರ್ಥಿಯ ಬರೆಹ'. ಇಲ್ಲಿಯೂ ವಿದ್ಯಾರ್ಥಿಯು ಕರ್ತೃವೇ. ಇದು ಕರ್ತರಿಷಷ್ಠಿಯಾದ್ದರಿಂದ ಕಾರಕಷಷ್ಠಿ. 'ಕಪಿವೀರರು ಲಂಕೆಯನ್ನು ಮುತ್ತುತ್ತಾರೆ.' ಇಲ್ಲಿ ಲಂಕೆ ಕರ್ಮಕಾರಕ. 'ಕಪಿವೀರರಿಂದ ಲಂಕೆಯ ಮುತ್ತಿಗೆ'. ಇಲ್ಲಿ ಕರ್ಮಣಿ ಷಷ್ಠೀ. ಇದು ಕಾರಕವಿಭಕ್ತಿಯೇ. ಕಾರಕವಿಭಕ್ತಿಯಾದ ಷಷ್ಠಿಯು ಕರ್ತೃಕರ್ಮವಾಚಕಗಳ ಮೇಲೆ ಮಾತ್ರ ಕಂಡುಬರುತ್ತದೆ. ಈ ವಿಷಯವನ್ನು ಕೇಶಿರಾಜನು ಶಬ್ದಮಣಿದರ್ಪಣದಲ್ಲಿ ವಿವರಿಸಿಲ್ಲ. ಭಟ್ಟಾಕಳಂಕನು ತನ್ನ ಶಬ್ದಾನುಶಾಸನದಲ್ಲಿ ತಿಳಿಸಿದ್ದಾನೆ. (ನೋಡಿ– **ಕರ್ತೃಕರ್ಮಣೋಃ ಕೃತಿ ಭಾವೇ** –ಸೂತ್ರ. ೨೨೬). ಸಂಸ್ಕೃತದಲ್ಲಿಯೂ ಇವೆರಡೂ ಕಾರಕಷಷ್ಠಿಗಳೆಂದೇ ವ್ಯವಹಾರವಿದೆ. ಯಾರು ಹೇಳಲಿ ಹೇಳದಿರಲಿ, ವಸ್ತುಧರ್ಮವನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಕನ್ನಡದಲ್ಲಿಯೂ ಇದಕ್ಕೆ ಬೇಕಾದಷ್ಟು ಉದಾಹರಣೆ ಗಳನ್ನು ಕೊಡಬಹುದು. ಇನ್ನೊಂದು ಮಾತು– 'ಕಪಿವೀರರಿಂದ ಲಂಕೆಯ ಮುತ್ತಿಗೆ' ಎಂಬ ಉದಾಹರಣೆಯಲ್ಲಿ 'ಕಪಿವೀರರಿಂದ' ಎಂಬಲ್ಲಿ ಕರ್ತರಿತೃತೀಯಾ ಬಂದಿದೆ ಎಂಬುದನ್ನೂ ಲಕ್ಷ್ಯದಲ್ಲಿಡಬೇಕು. ಪ್ರಥಮವಾಕ್ಯದಲ್ಲಿ ಕರ್ತೃವಾದದ್ದು ದ್ವಿತೀಯ

ವಾಕ್ಯದಲ್ಲಿ ಇದ್ದಕ್ಕಿದ್ದಂತೆ ಹೇತುವಾಗಿಬಿಡುವುದಿಲ್ಲ. ಸಂಬಂಧಸಾಮಾನ್ಯಾರ್ಥದಲ್ಲಿ ಬರುವ ಷಷ್ಠಿಯು ಕಾರಕವಿಭಕ್ತಿಯಲ್ಲ. ಕರ್ತೃಕರ್ಮವಾಚಕಗಳಿಗೆ ಕೃದಂತಯೋಗ ವಿದ್ದಾಗ ಬರುವ ಷಷ್ಠಿಯು ಕಾರಕವಿಭಕ್ತಿ. ಏವಂ ಚ 'ಕಾರಕಗಳಾರು.......... ವಿಭಕ್ತಿ ಗಳೇಳು' ಎಂಬ ಕವಿರಾಜಮಾರ್ಗದ ಹೇಳಿಕೆಗೆ ವಿರೋಧವೇನೂ ಇಲ್ಲ. ಮತ್ತು ಸಹ, ವಿನಾ, ಕೂಡಿ, ಬೇರೆ, ಅನ್ಯ ಮುಂತಾದ ಶಬ್ದಗಳ ಯೋಗವಿದ್ದಾಗ ಬರುವ ವಿಭಕ್ತಿಗಳೂ ಕಾರಕವಿಭಕ್ತಿಗಳಲ್ಲ. ಅವು ಉಪಪದವಿಭಕ್ತಿಗಳು. ಸಾರಾಸಗಟಾಗಿ **ಯಾವುದೂ ಕಾರಕವಿಭಕ್ತಿಯಲ್ಲ. ಕಾರಕಾರ್ಥದಲ್ಲಿ ಬಂದಾಗ ಮಾತ್ರ ಅದು ಕಾರಕವಿಭಕ್ತಿ ಎನಿಸುತ್ತದೆ.**

ಇನ್ನು ಪ್ರಥಮಾವಿಭಕ್ತಿಯ ವಿಚಾರವಾಗಿಯೂ ಹೇಳತಕ್ಕದ್ದಿದೆ. ನಾಮಪದದಿಂದ ಪ್ರಕೃತಿಗೆ ಪ್ರಾತಿಪದಿಕವೆಂದು ಸಂಜ್ಞೆ. ಕನ್ನಡದಲ್ಲಿ ದರ್ಪಣಕಾರನೂ ಶಬ್ದಾನುಶಾಸನ ಕಾರನೂ ಇದಕ್ಕೆ 'ಲಿಂಗ' ಎಂಬ ಸಂಜ್ಞೆಯ್ನು ಇಟ್ಟಿದ್ದಾರೆ. ಗಂಡು, ಹೆಣ್ಣು, ನಪುಂಸಕ –ಎಂಬ ಭೇದವನ್ನೂ 'ಲಿಂಗ'ವೆಂದು ವ್ಯವಹರಿಸಿದ್ದಾರೆ. ಈ ತೊಡಕನ್ನು ತಪ್ಪಿಸುವುದಕ್ಕಾಗಿ ಪ್ರಾತಿಪದಿಕವೆಂಬ ಶಬ್ದವನ್ನು ಈ ಲೇಖನದಲ್ಲಿ ಬಳಸುತ್ತಿದ್ದೇನೆ. ಪ್ರಥಮಾವಿಭಕ್ತಿಯು ಯಾವ ಅರ್ಥದಲ್ಲಿ ಬರುತ್ತದೆ?

ಕೇಶಿರಾಜನು–

ಅಭಿರೂಪದಿನಾ ಪ್ರಥಮಾ
ವಿಭಕ್ತಿ ಲಿಂಗಾರ್ಥವಚನಸಂಬೋಧನದೊಳ್ ।
ಪ್ರಭವಿಪ್ಪುದು...

ಎಂದು ಸೂತ್ರಿಸಿದ್ದಾನೆ. (ಸೂ. ೧೩೭). ಮುಂದೆ ವಿಭಕ್ತಿಪಲ್ಲಟವನ್ನು ಹೇಳುವಾಗ, **'ಪ್ರಥಮಾರ್ಥಂ ತೋರೆಯುಂ ದ್ವಿತೀಯಾರ್ಥಂ ತೋರೆಯುಮಲ್ಲಿ ಷಷ್ಠಿ ದೊರೆ ಕೊಂಡಿರ್ಕುಂ'** (ಸೂ. ೧೪೫) ಎಂದಿದ್ದಾನೆ. ಪ್ರಥಮಾರ್ಥದಲ್ಲಿ ಷಷ್ಠಿಯೂ ಬರುವು ದುಂಟೆಂದು ಅಭಿಪ್ರಾಯ. ಪ್ರಕೃತಕ್ಕೆ ಅದೆಲ್ಲವೂ ಅನಾವಶ್ಯಕವಾದ್ದರಿಂದ ಆ ವಿಚಾರವನ್ನು ಕೈಬಿಡಬಹುದು. 'ಲಿಂಗಾರ್ಥವಚನಸಂಬೋಧನದೊಳ್ ಪ್ರಥಮಾ ವಿಭಕ್ತಿ' ಎಂಬ ಹೇಳಿಕೆ ಪ್ರಕೃತೋಪಯೋಗಿ.

ಭಟ್ಟಾಕಳಂಕನು– ಮುಕ್ತೇ (ದ್ವಿತೀಯಪಾದ, ಸೂ. ೨೨೭) ಎಂದು ಸೂತ್ರಿಸಿ ದ್ದಾನೆ. ಮ್ ಉಕ್ತೇ– ಎಂದು ಪದವಿಭಾಗ. ತಿಙ್ (ಆಖ್ಯಾತಪ್ರತ್ಯಯ) ಮುಂತಾ ದ್ದರಿಂದ ಕರ್ತೃ, ಕರ್ಮಗಳು ಅಭಿಹಿತವಾದಾಗ ಪ್ರಥಮಾವಿಭಕ್ತಿ ಬರುತ್ತದೆಯೆಂದು ತಾತ್ಪರ್ಯ. ಅನಂತರ ಆಮಂತ್ರಣ(ಸಂಬೋಧನ)ದಲ್ಲಿಯೂ ಪ್ರಥಮಾ ಬರುತ್ತದೆ ಎಂದಿದ್ದಾನೆ. ವಿಭಕ್ತಿಪಲ್ಲಟವಂತೂ ವಿಚಿತ್ರಾಕಾರವನ್ನು ತಾಳಿದೆ.

ಸಂಬೋಧನದಲ್ಲಿಯೂ ಪ್ರಥಮಾ ಬರುತ್ತದೆ. ಸಂಬೋಧನೆಯೆಂದರೆ ಆಮಂ ತ್ರಣ–ಕರೆಯುವುದು. ಅದರ ಅರ್ಥ ಅಭಿಮುಖೀಕರಣ. ಯಾರನ್ನು ಕರೆಯುತ್ತಾನೋ ಆತನು, ತನ್ನ ಕಡೆಗೆ ಗಮನವಿಡುವಂತೆ ಮಾಡುವುದು. ಅದು 'ರಾಮಾ' ಇತ್ಯಾದಿ ಶಬ್ದವನ್ನೂ ಪ್ರಯೋಗಿಸುವುದೇ ಆಗಿದೆ. 'ರಾಮ, ನೀನು ಇಲ್ಲಿ ಬಾ' ಎಂಬ

ವಾಕ್ಯದಲ್ಲಿ 'ರಾಮ' ಎಂಬ ಸಂಬೋಧನಪದಕ್ಕೆ 'ಬಾ' ಎಂಬ ಕ್ರಿಯಾಪದದಲ್ಲಿ ಅನ್ವಯ. 'ಸಂಬೋಧನೆಗೆ ಉದ್ದೇಶ್ಯನಾದ ನೀನು ಬಾ' ಎಂದರ್ಥ. ಏವಂ ಚ ಸಂಬೋಧನದ ಪದಕ್ಕೂ ಕ್ರಿಯೆಯಲ್ಲಿಯೇ ಅನ್ವಯವಾಗುತ್ತದೆ. ಇಲ್ಲದಿದ್ದರೆ ಅದು ಅನನ್ವಿತಶಬ್ದವಾದೀತು. ಅದು ಕ್ರಿಯೆಯಲ್ಲಿ ಅನ್ವಯಿಸುವುದರಿಂದಲೇ- **'ಸಂಬೋಧನ ಪದಂ ಯಚ್ಚ ತತ್‌ಕ್ರಿಯಾಯಾಂ ವಿಶೇಷಣಂ'** ಎಂದು ಮಹಾವೈಯಾಕರಣನಾದ ಭರ್ತೃಹರಿಯು ವಾಕ್ಯಪದೀಯದಲ್ಲಿ ಹೇಳಿದ್ದಾನೆ.

ಕಾರಕಗಳಿಗೂ ಕ್ರಿಯೆಗೂ ಇರುವ ಸಂಬಂಧಕ್ಕೆ ಕ್ರಿಯಾಕಾರಕಭಾವಸಂಬಂಧ ವೆಂದು ಹೆಸರು. ಪ್ರತಿಯೊಂದು ಕಾರಕದಲ್ಲಿಯೂ ಒಂದೊಂದು ಶಕ್ತಿವಿಶೇಷವಿರುತ್ತದೆ. ಕರ್ತೃಕಾರಕದಲ್ಲಿ ಕರ್ತೃತ್ವಶಕ್ತಿ, ಕರ್ಮದಲ್ಲಿ ಕರ್ಮತ್ವಶಕ್ತಿ, ಕರಣದಲ್ಲಿ ಕರಣತ್ವಶಕ್ತಿ -ಹೀಗೆ ಊಹಿಸಿಕೊಳ್ಳಬಹುದು. ಆಯಾ ಕಾರಕದ ಲಕ್ಷಣದಿಂದ ಈ ಶಕ್ತಿಯನ್ನು ಗುರುತಿಸಿಕೊಳ್ಳಬಹುದು. ಕರ್ತೃತ್ವಶಕ್ತಿ ಎಂದರೆ ಧಾತ್ವರ್ಥವಾದ ಪ್ರಧಾನಕ್ರಿಯೆಯನ್ನು ನಿರ್ವಹಿಸುವುದು. ಕ್ರಿಯಾಸ್ವಾತಂತ್ರ್ಯ, ಇತರ ಕಾರಕಗಳನ್ನು ತನ್ನ ಸ್ವಾಧೀನದಲ್ಲಿಟ್ಟು ಕೊಳ್ಳುವುದು. ಈ ಶಕ್ತಿವಿಶೇಷವನ್ನೂ ಕ್ರಿಯಾಕಾರಕಭಾವಸಂಬಂಧವನ್ನೂ ಕರ್ತೃವಿಗೆ ವಿಹಿತವಾದ ತೃತೀಯಾವಿಭಕ್ತಿಯು ಅಭಿವ್ಯಂಜಿಸುತ್ತದೆ. ಹೀಗೆ ಇತರ ಕಾರಕ ಗಳಲ್ಲಿಯೂ ಊಹಿಸಿಕೊಳ್ಳಬೇಕು. ಉಪಪದವಿಭಕ್ತಿಯಲ್ಲಾದರೋ ಪ್ರಾತಿಪದಿಕ ಗಳೆರಡರ ಸಂಬಂಧವನ್ನು ಮಾತ್ರ ವಿಭಕ್ತಿಯು ತಿಳಿಸುತ್ತದೆ. ಶಕ್ತಿವಿಶೇಷವನ್ನು ತಿಳಿಸುವುದಿಲ್ಲ.

ಕರ್ತರಿಪ್ರಯೋಗವೆಂದರೆ ಕರ್ತ್ರರ್ಥದಲ್ಲಿ ಆಖ್ಯಾತಪ್ರತ್ಯಯವನ್ನಾಗಲಿ ಕೃತ್ ಪ್ರತ್ಯಯವನ್ನಾಗಲಿ ಪ್ರಯೋಗಿಸುವುದು. ಕರ್ಮಣಿಪ್ರಯೋಗವೆಂದರೆ ಕರ್ಮಾರ್ಥದಲ್ಲಿ ಆ ಪ್ರತ್ಯಯಗಳನ್ನು ಪ್ರಯೋಗಿಸುವುದು. ಆಗ ಕರ್ತೃತ್ವಕರ್ಮತ್ವಗಳು ಆಯಾ ಪ್ರತ್ಯಯಗಳಿಂದಲೇ ಉಕ್ತವಾಗಿರುವುದರಿಂದ ಕರ್ತೃವಾಚಕದ ಮೇಲೆ ತೃತೀಯೆಯೂ ಕರ್ಮವಾಚಕದ ಮೇಲೆ ದ್ವಿತೀಯೆಯೂ ಬರುವುದಿಲ್ಲ. ಪರಿಶೇಷವಾಗಿ ಪ್ರಾತಿಪದಿಕಾರ್ಥದಲ್ಲಿ ಪ್ರಥಮಾವಿಭಕ್ತಿ ಬಂದು ಬಿಡುತ್ತದೆ. ಭಟ್ಟಾಕಳಂಕನು **ಮುಕ್ತೇ** (೨-೨೨೭), **ಕರ್ಮಣ್ಯಮ್** (೨-೨೦೪) -ಈ ಸೂತ್ರಗಳ ವ್ಯಾಖ್ಯಾನದಲ್ಲಿ ಈ ವಿಚಾರವನ್ನು ಸ್ಪಷ್ಟವಾಗಿ ತಿಳಿಸಿದ್ದಾನೆ. ಪಾಣಿನಿಯ **'ಅನಭಿಹಿತೇ'** ಎಂಬ ಸೂತ್ರವು ಈ ವಿಚಾರವನ್ನೇ ಹೇಳಿದೆ.

ಪಂಪನು ಆದಿಪುರಾಣವನ್ನು ರಚಿಸಿದನು.
ಪಂಪನಿಂದ ಆದಿಪುರಾಣವು ರಚಿಸಲ್ಪಟ್ಟಿತು.
ಪಂಪನು ಆದಿಪುರಾಣವನ್ನು ರಚಿಸಿದವನಾದನು.
ಪಂಪನಿಂದ ಆದಿಪುರಾಣವು ರಚಿತವಾಯಿತು.

ಎಂಬ ಉದಾಹರಣೆಗಳಲ್ಲಿ ಇದನ್ನು ಸಮನ್ವಯಮಾಡಿಕೊಳ್ಳಬಹುದು.

ಇಷ್ಟು ಮೊದಲು ಹೇಳಬೇಕಾದ ಪೂರ್ವರಂಗ. ಇನ್ನು ರಂಗಸ್ಥಳಕ್ಕೆ ಬರೋಣ.

"ಭಾಷೆಯ ಸಹಜಸ್ವರೂಪವನ್ನು ತಿಳಿಯುವುದಕ್ಕೆ ಅಕೃತ್ರಿಮವಾದ ಆಡುನುಡಿಯೇ ಪ್ರಬಲಪ್ರಮಾಣವೆಂಬುದು ಭಾಷಾವಿಜ್ಞಾನಿಗಳ ಮತವೂ ಯುಕ್ತಿಸಂಮತವೂ ಆಗಿದೆ. ಈ ದೃಷ್ಟಿಯಿಂದ ನೋಡಿದರೆ ಕನ್ನಡಕ್ಕೆ ಕರ್ಮಣಿಪ್ರಯೋಗವು ಸಹಜವಲ್ಲವೆಂಬುದರಲ್ಲಿ ಮತಭೇದವಿರಲಾರದು" ಎಂದು ಸೇಡಿಯಾಪು ಅವರು ಹೇಳಿದ್ದಾರೆ. ('ವಿಚಾರಪ್ರಪಂಚ' –ಪು. ೧೬೫). ಹೌದು, ಆಡುನುಡಿಯಲ್ಲಿ ಕರ್ಮಣಿಪ್ರಯೋಗವು ಕಂಡುಬರುವುದಿಲ್ಲ. ಆದರೆ ಆಡುನುಡಿಯೊಂದನ್ನೇ ಅವಲಂಬಿಸಿ ವ್ಯಾಕರಣಶಾಸ್ತ್ರವನ್ನು ಬರೆದಿರುವುದಿಲ್ಲ. ಆಡುನುಡಿ ಭಾಷೆಯ ಶೈಶವಾವಸ್ಥೆಯಲ್ಲಿರುತ್ತದೆ. ಅದಕ್ಕೆ ವ್ಯಾಕರಣವು ಬೇಕಾಗಿರುವುದಿಲ್ಲ. ವ್ಯಾಕರಣದ ನಿಯಮವನ್ನು ಅದು ಸಂಪೂರ್ಣವಾಗಿ ಪಾಲಿಸುವುದೂ ಇಲ್ಲ. ಚಿಕ್ಕ ಬಾಲಕರಿಗಾಗಿ ಸರ್ಕಾರವು ಕಾನೂನುಗಳನ್ನು ರಚಿಸುವುದಿಲ್ಲ. ಧರ್ಮಶಾಸ್ತ್ರವೂ ಅವರಿಗೆ ಅನ್ವಯಿಸುವುದಿಲ್ಲ. ಭಾಷೆಯು ಬೆಳೆದು ಯುವಾವಸ್ಥೆಯನ್ನು ತಳೆದು ಗ್ರಂಥರೂಪದಲ್ಲಿ ಪ್ರಕಟವಾಗತೊಡಗುತ್ತದೆ. ಮನುಷ್ಯನ ನಾನಾ ಬಗೆಯ ಅಭಿಪ್ರಾಯಗಳನ್ನೂ ಮನೋಭಾವಗಳನ್ನೂ ಅಭಿವ್ಯಂಜಿಸುವ ಸಾಮರ್ಥ್ಯವು ಭಾಷೆಗೆ ಬಂದಾಗ ಅದನ್ನು ಪ್ರೌಢಭಾಷೆಯೆನ್ನಬಹುದು. ಆಗ ಕಾವ್ಯಗಳೂ ಶಾಸ್ತ್ರಗಳೂ ತಲೆದೋರುತ್ತವೆ. ಸಾಕಷ್ಟು ಬೆಳವಣಿಗೆಯಾಯಿತೆಂದು ನಿಶ್ಚಯವಾದಾಗ, ಅದರ ಸ್ವರೂಪವನ್ನು ರಕ್ಷಿಸುವುದಕ್ಕಾಗಿ ವ್ಯಾಕರಣಶಾಸ್ತ್ರವು ಹುಟ್ಟುತ್ತದೆ. ಭಾಷೆಯ ಸ್ವರೂಪವನ್ನು ರಕ್ಷಿಸುವುದೇ ವ್ಯಾಕರಣಕ್ಕೆ ಸಲ್ಲುವ ಮುಖ್ಯವಾದ ಪ್ರಯೋಜನ. ಇಂತಹ ವ್ಯಾಕರಣವನ್ನು ಬರೆಯಬಲ್ಲವರು ವಿದ್ವಾಂಸರೇ ಹೊರತು ಸಾಮಾನ್ಯರಲ್ಲವೆಂದು ಸ್ಪಷ್ಟವಾಗಿದೆ. ಅವರು ಆ ಭಾಷೆಯ ನಾನಾ ಗ್ರಂಥಗಳನ್ನೂ ಜನತೆಯ ಆಡುನುಡಿಗಳನ್ನೂ ಗಮನಿಸಿ ತೂಗಿನೋಡಿ, ಭಾಷೆಯ ನಿಜಸ್ವರೂಪ ಹೀಗಿದೆಯೆಂದು ನಿಶ್ಚಯಿಸಿ ಗ್ರಂಥರೂಪದಲ್ಲಿ ಉದಾಹರಣೆಗಳೊಡನೆ ವಿವರಿಸುತ್ತಾರೆ. ಈ ವಿವರಣೆಯೇ ವ್ಯಾಕರಣ. ವ್ಯಾಕರಣಶಾಸ್ತ್ರವನ್ನು ಆಧರಿಸಿ ಭಾಷಾಶಾಸ್ತ್ರವು ಹುಟ್ಟುತ್ತದೆ. ವ್ಯಾಕರಣವು ಭಾಷಾಶಾಸ್ತ್ರವನ್ನು ಅವಲಂಬಿಸಿಲ್ಲ. ಜನರು ಮಾಡುವ ಶಬ್ದಪ್ರಯೋಗವನ್ನವಲಂಬಿಸಿದೆ. ಆಡುನುಡಿಯಲ್ಲಿಯೋ ಅಥವಾ ಗ್ರಂಥದಲ್ಲಿಯೋ ಕರ್ಮಣಿಪ್ರಯೋಗವಿರುವುದರಿಂದಲೇ ಕನ್ನಡದ ವೈಯಾಕರಣರು ಕರ್ಮಣಿಪ್ರಯೋಗದ ವಿಧಾನವನ್ನು ಸೂಚಿಸಿದ್ದಾರೆ. ಸ್ವತಃ ಕೇಶಿರಾಜನೇ ಶಬ್ದಮಣಿದರ್ಪಣದಲ್ಲಿ ಕರ್ಮಣಿಪ್ರಯೋಗವನ್ನು ಮಾಡಿದ್ದಾನೆ. ಉದಾ– ನಾಮಿಯೆಂದು ಪೇಳಲ್ಪಡೆಗುಂ (ಸೂ. ೧೯), ಇಷ್ಟದಿಂ ಸಂಜ್ಞೆಯೊಡನೆ ಪೇಳಲ್ಪಡೆಗುಂ (ಸೂ. ೬೧).

ಕರ್ಮಣಿಪ್ರಯೋಗದಲ್ಲಿ ಸಕರ್ಮಕಧಾತುವಿನ ಮೇಲೆ 'ಅಲ್ಪಡು' ಎಂಬುದನ್ನು ಬಳಸಿರುವುದು ಪ್ರಯೋಗದಲ್ಲಿ ಕಂಡುಬಂದದ್ದರಿಂದ ವ್ಯಾಕರಣದಲ್ಲಿ ಅದನ್ನು ಹೇಳಿದ್ದಾರೆ. ವೈಯಾಕರಣರೇ 'ಅಲ್ಪಡು' ಎಂಬುದನ್ನು ಕಲ್ಪಿಸಿದ್ದಾರೆಂದು ಹೇಳುವುದು ಸಾಹಸಮಾತ್ರವಾದೀತು. 'ಅಲ್ಪಡು' ಎಂಬಲ್ಲಿ 'ಪಡು' ಎನ್ನುವ ಅಂಶ ಧಾತುವೇ. ಧಾತುವಿನ ಮೇಲೆ ಇನ್ನೊಂದು ಧಾತುವಿನ ಪ್ರಯೋಗವು ಸಂಸ್ಕೃತದಲ್ಲಿಯೂ ಇದೆ.

ಇದನ್ನು ಅನುಪ್ರಯೋಗವೆನ್ನುತ್ತಾರೆ. ಉದಾ: ಪಾತಯಾಮಾಸ, ರಚಯಾಂಚಕಾರ, ಬಿಭರಾಂಬಭೂವೇ.

ಪ್ರಯುಕ್ತಾನಾಮಿದಮನ್ವಾಖ್ಯಾನಂ –ಎಂದು ವ್ಯಾಕರಣಮಹಾಭಾಷ್ಯಕಾರ ಪತಂಜಲಿಯೇ ಹೇಳಿದ್ದಾನೆ. ಈ ವ್ಯಾಕರಣವು ಲೋಕದಲ್ಲಿ ಪ್ರಯುಕ್ತವಾಗಿರುವ ಪದಗಳ ಸ್ವರೂಪವಿವರಣೆ ಎಂದು ಅದರ ತಾತ್ಪರ್ಯ. ಇನ್ನೊಂದು ಮಾತಿನಲ್ಲಿ ಇದನ್ನು ವಿವರಿಸಿಯೂ ಇದ್ದಾನೆ– "ಒಬ್ಬನು ಕುಂಬಾರನ ಬಳಿಗೆ ಹೋಗಿ 'ಅಯ್ಯಾ, ಈ ರೀತಿಯಾದ ಒಂದು ಗಡಿಗೆಯನ್ನು ಮಾಡಿಕೊಡು. ಅದನ್ನು ಉಪಯೋಗಿಸ ಬೇಕಾಗಿದೆ" ಎಂದು ಹೇಳುವುದುಂಟು. ಹಾಗೆ ಒಬ್ಬನು ವೈಯಾಕರಣನ ಮನೆಗೆ ಹೋಗಿ 'ಅಯ್ಯಾ, ನನಗೊಂದು ಶಬ್ದವನ್ನು ಮಾಡಿಕೊಡು! ಅದನ್ನು ನಾನು ಪ್ರಯೋಗಿಸಬೇಕಾಗಿದೆ' –ಎಂದು ಹೇಳುವುದಿಲ್ಲ!" ವ್ಯಾಕರಣವು ಹೊಸದಾಗಿ ಶಬ್ದವನ್ನಾಗಲಿ ಪ್ರಯೋಗವನ್ನಾಗಲಿ ನಿರ್ಮಿಸುವುದಿಲ್ಲ. ಇದ್ದುದನ್ನು ತಿಳಿಸುತ್ತದೆ.

ಆಡುನುಡಿಯಲ್ಲಿ ಕರ್ಮಣಿಪ್ರಯೋಗವು ಎಲ್ಲ ಭಾಷೆಗಳಲ್ಲಿಯೂ ವಿರಳವೇ. ಕರ್ಮಣಿಪ್ರಯೋಗವು ಅಧಿಕವಾಗಿರುವ ಸಂಸ್ಕೃತದ ಪ್ರಾಚೀನಸ್ವರೂಪವೂ ಇದನ್ನೇ ಸೂಚಿಸುತ್ತದೆ. ವೇದೋಪನಿಷತ್ತುಗಳಲ್ಲಿಯೂ ರಾಮಾಯಣಮಹಾಭಾರತ ಪುರಾಣಗಳಲ್ಲಿಯೂ ಕರ್ಮಣಿಪ್ರಯೋಗವು ವಿರಳವಾಗಿಯೇ ಕಂಡುಬರುತ್ತದೆ. ಅಲ್ಲದೆ ಕನ್ನಡಭಾಷೆಗೆ ಸಂಸ್ಕೃತಶಬ್ದಗಳ ಸಂಪರ್ಕವು ಅತಿಪ್ರಾಚೀನಕಾಲದಲ್ಲಿಯೇ ಆಗಿಬಿಟ್ಟಿದೆ. ಸಂಸ್ಕೃತಪದಗಳ ಪ್ರಯೋಗವಿಲ್ಲದ ಒಂದೇ ಒಂದು ಶಾಸನವಾಗಲಿ, ಗ್ರಂಥವಾಗಲಿ ಕನ್ನಡದಲ್ಲಿ ಕಂಡುಬಂದಿಲ್ಲ. ಆಂಡಯ್ಯನು ಅಚ್ಚಗನ್ನಡದಲ್ಲಿ ಬರೆಯತ್ತೇನೆಂಬ ಹಠದಿಂದ 'ಕಬ್ಬಿಗರ ಕಾವ'ವನ್ನು ಬರೆದರೂ ಸಂಸ್ಕೃತಜನ್ಯವಾದ ತದ್ಭವಗಳನ್ನು ಬಿಡಲು ಅವನಿಂದಾಗಲಿಲ್ಲ. ಕಬ್ಬಿಗ, ಕಾವ –ಎಂಬ ಕಾವ್ಯನಾಮವೂ ಸಹ ತದ್ಭವ ಪದವಾಗಿದೆ!

ಸಂಸ್ಕೃತದ ತಿಙಂತಕ್ರಿಯಾಪದಗಳು (ಆಖ್ಯಾತಪ್ರತ್ಯಯಾಂತಗಳು) ಕನ್ನಡದಲ್ಲಿಲ್ಲ. ಆದರೆ ಕೃದಂತನಾಮಗಳು ವಿಪುಲವಾಗಿವೆ. ಕರ್ಮಾರ್ಥಕ 'ಕ್ತ' ಪ್ರತ್ಯಯಾಂತವೇ ಮೊದಲಾದ ಕ್ರಿಯಾವಾಚಕಶಬ್ದಗಳಿರುವಾಗ ಕನ್ನಡದಲ್ಲಿ ಕರ್ಮಣಿಪ್ರಯೋಗವು ಪ್ರಚುರವಾಗಿ ಕಾಣಿಸುತ್ತದೆ. ಆಗ ಕರ್ತರಿ ತೃತೀಯಾಪ್ರಯೋಗವಿದ್ದೇ ಇರುತ್ತದೆ. ಉದಾ:

೧. ಪಂಪನು ವಿಕ್ರಮಾರ್ಜುನ ವಿಜಯವನ್ನು ರಚಿಸಿದ್ದಾನೆ.
ಪಂಪನಿಂದ ವಿಕ್ರಮಾರ್ಜುನವಿಜಯವು ರಚಿತವಾಗಿದೆ.

ಇಲ್ಲಿ 'ಪಂಪನಿಂದ' ಎಂಬಲ್ಲಿ ಕರ್ತರಿತೃತೀಯಾ ಬಂದಿದೆ.

೨. ವಿಶ್ವೇಶ್ವರಯ್ಯನವರಿಂದ ಕೃಷ್ಣರಾಜಸಾಗರವು ನಿರ್ಮಿತವಾಗಿದೆ.

೩. ಇವು ಮಕ್ಕಳಿಂದ ಲಿಖಿತವಾದ ಕಥೆಗಳು.

೪. ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿತವಾದ ಕಾವ್ಯ.

ಈ ಬಗೆಯ ಪ್ರಯೋಗಗಳು ಕನ್ನಡ ವಾಙ್ಮಯದಲ್ಲಿ ವಿಪುಲವಾಗಿ ದೊರೆಯುತ್ತವೆ. ಇವೆಲ್ಲವೂ ಕರ್ಮಣಿಪ್ರಯೋಗಗಳಾಗಿದ್ದು ಕರ್ತರಿ ತೃತೀಯೆ ಬಂದಿರುವುದು ಸ್ಫುಟವಾಗಿದೆ. ಇದೆಲ್ಲ ಹೇತ್ವರ್ಥದಲ್ಲಿ ಬಂದ ಪಂಚಮೀವಿಭಕ್ತಿಯೆಂದು ಶ್ರೀ ಸೇಡಿಯಾಪು ಅವರು ಹೇಳುತ್ತಾರೆ. 'ಪಂಪನು ವಿಕ್ರಮಾರ್ಜುನವಿಜಯವನ್ನು ರಚಿಸಿದ್ದಾನೆ' ಎಂಬ ವಾಕ್ಯದಲ್ಲಿ ಕರ್ತೃವಾಗಿದ್ದ ಪಂಪನು ದ್ವಿತೀಯವಾಕ್ಯದಲ್ಲಿ ಕರ್ತೃತ್ವ ಶಕ್ತಿಯನ್ನು ಕಳೆದುಕೊಂಡು ಹೇತುವಾಗಿಬಿಡುತ್ತಾನೆಯೇ? ಹೇತುವೆಂದರೆ ಕಾರಣ. ಎಲ್ಲ ಕಾರಕಗಳು ಕ್ರಿಯೆ ಹುಟ್ಟುವುದಕ್ಕೆ ಕಾರಣಗಳೇ ಆಗಿವೆ. ಕ್ರಿಯೆಗೆ ಕರ್ತೃವೂ ಕಾರಣನಾದ್ದರಿಂದ ಕರ್ತೃಕಾರಕವೇ ಇಲ್ಲವೆಂದು ಹೇಳಬೇಕಾದೀತು. ಕರ್ತೃತ್ವ, ಕರ್ಮತ್ವ, ಕರಣತ್ವ –ಮುಂತಾದ ಶಕ್ತಿವಿಶೇಷಗಳಿರುವುದರಿಂದಲೇ ಕಾರಕಗಳನ್ನು ಅನೇಕ ವಿಧವಾಗಿ ವಿಂಗಡಿಸಿದ್ದಾರೆ. **ಶಕ್ತಿಃಕಾರಕಂ** = ಕಾರಕವೆಂದರೆ ಒಂದು ಶಕ್ತಿವಿಶೇಷ.

ಮೇಲ್ಕಂಡ ವಾಕ್ಯಗಳಲ್ಲಿ ತೃತೀಯಾಂತವು ಕರ್ತೃತ್ವಶಕ್ತಿಯನ್ನು ವಿಶೇಷವಾಗಿ ವ್ಯಂಜಿಸುತ್ತದೆ. ಇದನ್ನು ಹೀಗೆ ಪರೀಕ್ಷಿಸಿ ನೋಡಬಹುದು: 'ವಿಕ್ರಮಾರ್ಜುನವಿಜಯವೆಂಬ ಕಾವ್ಯವನ್ನು ರಚಿಸಿದವನು ಯಾರು?' –ಎಂದು ಒಬ್ಬನು ಪ್ರಶ್ನೆ ಹಾಕುತ್ತಾನೆಂದು ತಿಳಿಯೋಣ. ಹೀಗೆ ಕೇಳತಕ್ಕವನಿಗೆ ಕರ್ತೃವನ್ನು ತಿಳಿಯುವ ಜಿಜ್ಞಾಸೆ ಇದೆ. ಆಗ ಇನ್ನೊಬ್ಬನು 'ಪಂಪನಿಂದ ಆ ಕಾವ್ಯವು ರಚಿತವಾಗಿದೆ' ಎಂದು ಉತ್ತರ ಹೇಳುತ್ತಾನೆ. ಕೇಳಿದವನ ಜಿಜ್ಞಾಸೆ ಶಾಂತವಾಗುತ್ತದೆ. ಆ ಕಾವ್ಯದ ಕರ್ತೃ ಯಾರು? ಎಂದು ಅವನೆಂದಿಗೂ ಮತ್ತೆ ಪ್ರಶ್ನಿಸುವುದಿಲ್ಲ. ಏಕೆಂದರೆ, ಉತ್ತರದಲ್ಲಿ 'ಪಂಪನಿಂದ' ಎಂಬುದು ಕರ್ತೃವಾಚಿಯೇ ಆಗಿದೆ. 'ಆ ಕಾವ್ಯದ ರಚನೆಗೆ ಹೇತುವೇನು?' ಎಂಬ ಪ್ರಶ್ನೆಗೆ 'ಪಂಪನಿಂದ' ಎಂಬುದು ಎಂದಿಗೂ ಉತ್ತರವಾಗದು. ಆ ಪ್ರಶ್ನೆಗೆ 'ಕೀರ್ತಿಲಾಭ' ಅಥವಾ 'ಧನಲಾಭ' ಎಂಬುದು ಉತ್ತರವಾದೀತು.

'ಗಾಯತ್ರಿಯು ವಿಶ್ವಾಮಿತ್ರನಿಂದ ದೃಷ್ಟವಾದ ಮಂತ್ರ, ರಾವಣನಿಂದ ಸೀತೆಯು ಅಪಹೃತಳಾದಳು, ವಾಲಿಯು ಶ್ರೀರಾಮನಿಂದ ಹತನಾದನು, ಇದು ಯಾರಿಂದಲೋ ಕಲ್ಪಿತವಾದ ಸುದ್ದಿ' –ಮುಂತಾದವು ಕರ್ಮಣಿಪ್ರಯೋಗಗಳಾಗಿದ್ದು ಕರ್ತರಿ ತೃತೀಯೆಗೆ ಉದಾಹರಣೆಗಳಾಗಿವೆ. ಇನ್ನು ಕರ್ಮಣಿಪ್ರಯೋಗದಲ್ಲಿಯೇ ಕರ್ತೃವಾಚಕಕ್ಕೆ ತೃತೀಯಾವಿಭಕ್ತಿ ಬರುತ್ತದೆಯೆಂಬುದೂ ಭ್ರಮೆ. ಕರ್ತರಿ ತೃತೀಯೆಗೆ ಕರ್ಮಣಿಪ್ರಯೋಗವು ಕಾರಣವಲ್ಲ, ಕರ್ತೃವು ಇನ್ನೊಂದು ಪ್ರತ್ಯಯದಿಂದ ಅನುಕ್ತವಾಗುವುದು –ಅನಭಿಹಿತವಾಗುವುದು ಕಾರಣ. ಈ ವಿಷಯವನ್ನು ಇದನ್ನು ಕೇಶಿರಾಜನು ಹೇಳಿಲ್ಲ. ಭಟ್ಟಾಕಳಂಕನು ಕಾರಕವಿಭಕ್ತಿಗಳ ವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾನೆ. ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ 'ಅನಭಿಹಿತೇ' ಎಂದು ಹೇಳಿದ್ದರೆ, ಭಟ್ಟಾಕಳಂಕನ ಶಬ್ದಾನುಶಾಸನದಲ್ಲಿ 'ಅನುಕ್ತೇ' ಎಂದು ಹೇಳಿದೆ. ಈ ವಿಚಾರವನ್ನು ಹಿಂದೆ ತಿಳಿಸಿದ್ದಾಗಿದೆ. ಈ ವಾಕ್ಯಗಳನ್ನು ನೋಡಿ–

೧. 'ನೀನು ನನಗೆ ಉಪಕಾರವನ್ನು ಮಾಡಿದೆ'. ಇದು ಕರ್ತರಿಪ್ರಯೋಗ. ನೀನು ಎಂಬುದರ ಕರ್ತೃತ್ವವು 'ಮಾಡಿದೆ' ಎಂಬ ಕ್ರಿಯಾಪದದ ಮಧ್ಯಮ ಪುರುಷವಾದ

ಆಖ್ಯಾತದಿಂದ ಉಕ್ತವಾಗಿದೆ. ಆದ್ದರಿಂದ ತೃತೀಯೆ ಬಂದಿಲ್ಲ. 'ನಿನ್ನಿಂದ ನನಗೆ ಉಪಕಾರವಾಯಿತು'. ಇದೂ ಕರ್ತರಿಪ್ರಯೋಗವೇ. ಆಯಿತು ಎಂಬುದು ಅಕರ್ಮಕ ವಾದ್ದರಿಂದ ಉಪಕಾರಪದವು ಕರ್ತೃವಾಚಕವಾಗಿ ಪರಿಣಮಿಸಿದೆ. ಉಪಕಾರಕ್ರಿಯೆಗೆ 'ನಿನ್ನಿಂದ' ಎಂಬುದು ಕರ್ತೃವಾದ್ದರಿಂದ ತೃತೀಯಾ ಬಂದಿದೆ. ಇಲ್ಲಿಯೂ 'ಉಪಕಾರ ವನ್ನು ಯಾರು ಮಾಡಿದರು?' –ಎಂಬ ಕರ್ತೃಜಿಜ್ಞಾಸೆಯು ಈ ವಾಕ್ಯದಿಂದ ಶಾಂತವಾಗುವುದರಿಂದ 'ನೀನು' ಕರ್ತೃವೆಂದು ಸಿದ್ಧವಾಗುತ್ತದೆ.

೨. ತನ್ನರೇಂದ್ರನಿಂ ಧರಣಿ ಸನಾಥೆ

ಇದು ನೃಪತುಂಗನ ಕವಿರಾಜಮಾರ್ಗದ ಪ್ರಥಮಪರಿಚ್ಛೇದದಲ್ಲಿರುವ ೧೧೫ನೆಯ ಪದ್ಯದ ಒಂದು ವಾಕ್ಯ. ಇದು ಕರಣಕಾರಕದ ಮತ್ತು ಕರ್ತೃಕಾರಕದ ತೃತೀಯಾವಿಭಕ್ತಿಗೆ ಉದಾಹರಣೆಯಾಗಿ ಬಂದಿದೆ. ಈ ವಾಕ್ಯವು ಕರ್ಮಣಿ ಪ್ರಯೊಗದಲ್ಲಿಲ್ಲವೆಂಬುದನ್ನು ಗಮನಿಸಬೇಕು. 'ಆದಳ್' ಎಂಬ ಕ್ರಿಯಾಪದವು ಅಧ್ಯಾಹೃತ.

೩. ಸಭೆಯ ಉದ್ಘಾಟನೆಯು ಆತನಿಂದ ನಡೆಯಿತು.

೪. ಕಡೆಯಲ್ಲಿ ಶ್ರೀಶ್ರೀಗಳವರಿಂದ ಅನುಗ್ರಹಭಾಷಣವಾಯಿತು.

ಈ ನಾಲ್ಕೂ ಉದಾಹರಣೆಗಳಲ್ಲಿಯೂ ಕರ್ತರಿತೃತೀಯಾ ಬಂದಿರುವುದನ್ನು ಕಾಣಬಹುದು. ಅಲ್ಲಿ ಕರ್ತೃವಾಚಕವಾದ ತಿಙ್‌ಪ್ರತ್ಯಯವಾಗಲಿ, ಕೃತ್‌ಪ್ರತ್ಯಯ ವಾಗಲಿ ಇಲ್ಲದಿರುವುದೇ ಅದಕ್ಕೆ ಕಾರಣ.

ಕರ್ಮಣಿಪ್ರಯೋಗವಲ್ಲದಿದ್ದರೂ ಕರ್ತರಿ ತೃತೀಯಾ ಬರುತ್ತದೆಯೆನ್ನುವುದಕ್ಕೆ ಇನ್ನೊಂದು ಪ್ರಬಲಪ್ರಮಾಣವನ್ನು ಕೊಡಬಹುದು. ಪ್ರೇರಣಾರ್ಥವು ತೋರಿದಾಗ ಕನ್ನಡದಲ್ಲಿ ಧಾತುವಿನ ಮೇಲೆ 'ಇಸು' ಪ್ರತ್ಯಯ ಬರುತ್ತದೆ. ಸಂಸ್ಕೃತದಲ್ಲಿ 'ಣಿಚ್' ಪ್ರತ್ಯಯ ಬರುತ್ತದೆ. ಪ್ರೇರಿಸತಕ್ಕವನನ್ನು ಪ್ರಯೋಜ್ಯನೆಂದೂ ಹೇಳುತ್ತಾರೆ. ಇಬ್ಬರಿಗೂ ಕರ್ತೃ ಸಂಜ್ಞೆ ಇದೆ. ಒಬ್ಬನು ಪ್ರಯೋಜಕಕರ್ತ. ಇನ್ನೊಬ್ಬನು ಪ್ರಯೋಜ್ಯಕರ್ತ. ಕರ್ತರಿಪ್ರಯೋಗದಲ್ಲಿಯೂ ಪ್ರಯೋಜ್ಯಕರ್ತೃವಿನ ಮೇಲೆ ತೃತೀಯೆ ಬರುತ್ತದೆ. ಉದಾ:

೧. ಉಪಾಧ್ಯಾಯನು ಹುಡುಗನಿಂದ ಓದಿಸುತ್ತಾನೆ.

ಇಲ್ಲಿ ಹುಡುಗನು ಓದತಕ್ಕವನಾದ್ದರಿಂದ ಪ್ರಯೋಜ್ಯಕರ್ತೃ. ತೃತೀಯಾ ಬಂದಿದೆ. 'ಓದಿಸುತ್ತಾನೆ' ಎಂಬಲ್ಲಿರುವ ಆಖ್ಯಾತದಿಂದ ಪ್ರೇರಕನಾದ ಉಪಾಧ್ಯಾ ಯನ ಕರ್ತೃತ್ವವು ಉಕ್ತವಾಗಿದೆ. ಆದ್ದರಿಂದ ಉಪಾಧ್ಯಾಯ ಶಬ್ದದ ಮೇಲೆ ತೃತೀಯಾ ಬಂದಿಲ್ಲ. ಹುಡುಗನು ಕರ್ತೃ ಎನ್ನುವುದು 'ಇಂದ' ಪ್ರತ್ಯಯದಿಂದಲೇ ಗೊತ್ತಾಗಬೇಕಾಗಿದೆ.

ಪ್ರೇರಣಾರ್ಥದಲ್ಲಿ 'ಇಸು' ಬಂದಾಗ ಇಸು ಪ್ರತ್ಯಯಾಂತವಾದ ಧಾತು ಎರಡು ಕ್ರಿಯೆಗಳನ್ನು ಬೋಧಿಸುತ್ತದೆ. 'ಓದಿಸು' ಎಂಬಲ್ಲಿ ಓದುವ ಕ್ರಿಯೆ. ಇದು 'ಓದು'

ಎಂಬುದರ ಅರ್ಥ. ಪ್ರೇರಣೆ ಇನ್ನೊಂದು ಕ್ರಿಯೆ. ಅದು 'ಇಸು' ಪ್ರತ್ಯಯದ ಅರ್ಥ. ಎರಡು ಕ್ರಿಯೆಗಳಿಗೆ ಪ್ರತ್ಯೇಕ ಆಶ್ರಯರಾದ ಇಬ್ಬರು ಇರುವುದರಿಂದ ಒಂದೇ ಧಾತ್ವರ್ಥಕ್ಕೆ ಇಬ್ಬರು ಕರ್ತೃಗಳಾಗುತ್ತಾರೆ.

೨. ಆತನು ಕೆಲಸಗಾರರಿಂದ ಮನೆಯನ್ನು ಕಟ್ಟಿಸುತ್ತಾನೆ.

೩. ಅವಳು ಅಕ್ಕಸಾಲಿಗನಿಂದ ಒಡವೆಯನ್ನು ಮಾಡಿಸುತ್ತಾಳೆ.

೪. ಚೈತ್ರನು ಸೇವಕನಿಂದ ತೆಂಗಿನಕಾಯಿಗಳನ್ನು ಕೀಳಿಸುತ್ತಾನೆ.

ಈ ಉದಾಹರಣೆಗಳಲ್ಲಿ ತೃತೀಯಾಂತಗಳೆಲ್ಲವೂ ಪ್ರಯೋಜ್ಯಕರ್ತೃಗಳು.

ಈ ಶಬ್ದಗಳ ಮೇಲೆ ಹೇತ್ವರ್ಥದಲ್ಲಿ ತೃತೀಯಾ ಬಂದಿದೆಯೆನ್ನುವುದು ಯುಕ್ತವಲ್ಲ. 'ಸೇವಕನು ತೆಂಗಿನಕಾಯಿಗಳನ್ನು ಕೀಳುತ್ತಾನೆ'. ಇಲ್ಲಿ ಸೇವಕನು ಕರ್ತೃವೆಂಬುದು ನಿರ್ವಿವಾದ. ತೆಂಗಿನ ಮರವನ್ನು ಹತ್ತಿ ತೆಂಗಿನಕಾಯಿಗಳನ್ನು ತಿರುಚಿ ಬೀಳಿಸತಕ್ಕವನು ಆತನೇ. 'ಸೇವಕನಿಂದ' ಎಂಬಲ್ಲಿ ಪ್ರಯೋಜ್ಯನಾದರೂ ಆ ಸಮಸ್ತ ಕ್ರಿಯೆಗಳನ್ನು ಮಾಡತಕ್ಕವನು ಆತನೇ. ಆದ್ದರಿಂದಲೇ ವ್ಯಾಕರಣಶಾಸ್ತ್ರವು ಆತನನ್ನು ಕರ್ತನೆಂದೇ ಹೇಳಿ ತೃತೀಯಾವಿಭಕ್ತಿಯನ್ನು ವಿಧಿಸುತ್ತದೆ. ಆತನೇ ಮರವನ್ನು ಹತ್ತಿ ತೆಂಗಿನಕಾಯಿಯನ್ನು ತಿರುಚಿ ಬೀಳಿಸುತ್ತಿರುವಾಗ, ಅವನು ಕರ್ತೃವಲ್ಲ –ಹೇತು ಎಂಬುದನ್ನು ಯಾರೂ ಒಪ್ಪಲಾರರು. ಅಲ್ಲದೆ ಹೇತು ಗುಣವಾಚಿಯಾಗಿದ್ದರೆ ಮಾತ್ರ ಪಂಚಮೀ ವಿಹಿತವಾಗಿದೆ, ದ್ರವ್ಯವಾಚಿಯಾದರೆ ಬರುವುದಿಲ್ಲ.

ಕರ್ಮಣಿಪ್ರಯೋಗವಲ್ಲದಿದ್ದರೂ ಕರ್ತರಿತೃತೀಯಾ ಬರುತ್ತದೆ ಎನ್ನುವುದನ್ನು ಸಪ್ರಮಾಣವಾಗಿ ಇದುವರೆಗೂ ತೋರಿಸಿದ್ದೇನೆ. ಕರ್ಮಣಿಪ್ರಯೋಗದ ವಿಷಯದಲ್ಲಿ ಶ್ರೀ ಸೇಡಿಯಾಪು ಅವರು ಇನ್ನೊಂದು ಮಾತನ್ನು ಬರೆಯುತ್ತಾರೆ. ಅದು ಬರವಣಿಗೆಯಲ್ಲಿ ಉಪನ್ಯಾಸಗಳಲ್ಲಿ ಮಾತ್ರ ಅಲ್ಲಲ್ಲಿ ಗೋಚರಿಸುವುದೇ ಹೊರತು ಆಡುನುಡಿಯಲ್ಲಿ ಎಲ್ಲಿಯೂ ಇಲ್ಲವಾದ್ದರಿಂದ ತೃತೀಯಾವಿಭಕ್ತಿಯ ಅರ್ಥಗಳೊಳಗೆ ಕರ್ತ್ರರ್ಥವನ್ನು ಇಂದಿನ ಪ್ರತಿಪಾದನೆಯಲ್ಲಿ ತೆಗೆದುಹಾಕಬಹುದು –ಎಂದು. (ಪು.೧೬೫) ಕರ್ಮಣಿಪ್ರಯೋಗವು ಅಲ್ಲಲ್ಲಿ ವಿರಳವಾಗಿ ಗೋಚರಿಸಿದರೂ ಅದಕ್ಕೊಂದು ಲಕ್ಷಣವನ್ನು ವ್ಯಾಕರಣವು ಹೇಳಲೇಬೇಕಲ್ಲವೇ? ಆನೆಕಾಲು ರೋಗದಂತಹ ಯಾವುದೋ ಒಂದು ರೋಗವು ವಿರಳವಾಗಿ ಕಾಣಿಸಿಕೊಂಡರೂ ವೈದ್ಯಶಾಸ್ತ್ರವು ಅದರ ಲಕ್ಷಣವನ್ನೂ ಚಿಕಿತ್ಸೆಯನ್ನೂ ಹೇಳುತ್ತದೆ, ಹೇಳಲೇಬೇಕು. ಆಡುನುಡಿಗೆ ವ್ಯಾಕರಣವು ಸಂಪೂರ್ಣವಾಗಿ ಅನ್ವಯಿಸುವುದಿಲ್ಲವೆಂದು ಹಿಂದೆ ಹೇಳಿದ್ದಾಗಿದೆ. ಈಗಲೂ ವಿದ್ಯಾವಂತನಾದವನು ಸಹ ಬರವಣಿಗೆಯಲ್ಲಿ, ಉಪನ್ಯಾಸದಲ್ಲಿ ಬಳಸುವ ಶಬ್ದರೂಪಗಳನ್ನು ಮನೆಯಲ್ಲಿ, ಸ್ನೇಹಿತರೊಡನೆ ಮಾತಾಡುವಾಗ ಬಳಸುವುದಿಲ್ಲ. ಕನ್ನಡವು ಮಾತ್ರವಲ್ಲ, ಎಲ್ಲ ಭಾಷೆಗಳೂ ಹೀಗೆಯೇ. ಯಾವ ಭಾಷೆಯ ವ್ಯಾಕರಣವೂ ಪೂರ್ತಿಯಾಗಿ ಆಡುನುಡಿಗೆ ಅನ್ವಯಿಸುವುದಿಲ್ಲ. ವ್ಯಾಕರಣವನ್ನು ಜಗ್ಗಿ ಆಡುನುಡಿಗೆ ಗಂಟುಹಾಕುವುದೇಕೆ? "ಅವನಿಂದ ಈ ಕೆಲಸ ಆಗೋದಿಲ್ಲ, ಆ ಹುಡುಗಿಯಿಂದ ಬಟ್ಟೆ ಒಗೆಯಿಸಿದೆ, ಅವಳಿಂದ ಈ ಮಾತು ಹೇಳಿಸಿದೆ"

ಮುಂತಾದವು ಮನೆಯಲ್ಲಾಡುವ ಮಾತುಗಳೇ. ಇಲ್ಲಿ ತೃತೀಯಾವಿಭಕ್ತಿಯ ಅರ್ಥ ಕರ್ತೃವೆಂಬುದು ಎದ್ದುಕಾಣುತ್ತದೆ.

ಇನ್ನು ಕರಣದ ವಿಷಯಕ್ಕೆ ಬರೋಣ. ಈ ಸಂದರ್ಭದಲ್ಲಿ ಶ್ರೀ ಸೇಡಿಯಾಪು ಅವರು ಭಾಷಾಶಾಸ್ತ್ರದ ಹಲವಾರು ವಿಷಯಗಳನ್ನು ಎತ್ತಿದ್ದಾರೆ. ಕಾಲ್ಡ್‌ವೆಲ್ ಸಾಹೇಬರ ಅಭಿಪ್ರಾಯಗಳನ್ನು ಉದಾಹರಿಸಿದ್ದಾರೆ. ಭಾಷಾಶಾಸ್ತ್ರವು ತನ್ನ ಪರಿಧಿಯಲ್ಲಿ ಏನಾದರೂ ಹೇಳಲಿ, ಎಷ್ಟು ತಳಕ್ಕಾದರೂ ಹೋಗಲಿ, ಅದು ಯಾವುದನ್ನೂ ತುದಿಗಾಣಿಸುವುದಿಲ್ಲ. ಭಾಷೆಯ ವಾಸ್ತವಸ್ಥಿತಿಯನ್ನಾಗಲಿ ಪ್ರಯೋಗವಿಧಾನವನ್ನಾಗಲಿ ಬದಲಿಸುವುದಿಲ್ಲ. ಯಾವುದೋ ಊಹಾಪ್ರಪಂಚಕ್ಕೆ ತಳ್ಳಿ ಕಣ್ಣುಮುಚ್ಚಾಲೆಯಾಡಿದರೆ, ಭಾಷೆಯ ಸ್ವರೂಪವಾಗಲಿ ವಸ್ತುಧರ್ಮವಾಗಲಿ ಅಲ್ಲಾಡಲಾರದು. ವ್ಯಾಕರಣವಾದರೋ ಅದ್ಯತನಭಾಷಾಸ್ವರೂಪವನ್ನೂ ವಸ್ತುಧರ್ಮವನ್ನೂ ಯಥಾರ್ಥವಾಗಿ ತಿಳಿಸಿಕೊಡುತ್ತದೆ. ಅದನ್ನು ಯಥಾಮತಿಯಾಗಿ ಬಿಡಿಸಿ, ಇರುವುದನ್ನು ಇರುವಂತೆ ಪರಾಮರ್ಶಿಸುವುದು ಈ ಪ್ರಬಂಧದ ಉದ್ದೇಶವಾಗಿದೆ. ಭಾಷಾಶಾಸ್ತ್ರದ ವಿಷಯದಲ್ಲಿ ನನಗೆ ಗೌರವವಿದೆ. ಅದನ್ನು ನಿಂದಿಸುತ್ತಿದ್ದೇನೆಂದು ಸರ್ವಥಾ ತಿಳಿಯಬಾರದು. ಪ್ರಕೃತವಿಚಾರಕ್ಕೆ ಅದು ಬೇಕಾಗಿಲ್ಲವೆಂದಿಷ್ಟೇ ನನ್ನ ಅಭಿಪ್ರಾಯವಾಗಿದೆ.

"ಹವೀಕರ ಮಾತಿನಲ್ಲಿ 'ಇಂದ' ಎಂಬ ಪ್ರತ್ಯಯವು ಕೇವಲ ಪಂಚಮ್ಯರ್ಥದಲ್ಲಿಯೇ ಪ್ರಯುಕ್ತವಾಗುತ್ತದೆ..... ತೃತೀಯಾರ್ಥದಲ್ಲಿ ಸರ್ವತ್ರ ಸಪ್ತಮಿಯೇ ಪ್ರಯೋಗಿಸಲ್ಪಡುತ್ತದೆ.* ಇಂದಿನ ಕನ್ನಡದಲ್ಲಿ ಮತ್ತು ಹಳೆಯ ಕಾವ್ಯಗಳಲ್ಲಿ, ಹೀಗೆ ಕರಣಾರ್ಥದಲ್ಲಿ ಸಪ್ತಮಿಯನ್ನು ಪ್ರಯೋಗಿಸುವುದು ಮಾತಿನಲ್ಲಿಯೂ ಬರವಣಿಗೆಯಲ್ಲಿಯೂ ಇದೆ. ಆದರೆ ವಿಕಲ್ಪವಾಗಿ 'ಇಂದ'ವನ್ನು ಬರೆಯುತ್ತಾರೆ. ಹವೀಕರ ಮಾತಿನಲ್ಲಿ ಈ ತೃತೀಯಾರ್ಥದ ಸಪ್ತಮಿಗೆ ಪಲ್ಲಟವಾಗಲಿ ಅಪವಾದವಾಗಲಿ ಒಂದೂ ಇಲ್ಲ." (ಪಂಚಮೀವಿಭಕ್ತಿ, ಪು.೧೬೯). ಇದು ಶ್ರೀ ಸೇಡಿಯಾಪು ಅವರ ಹೇಳಿಕೆ.

ದಕ್ಷಿಣ ಕನ್ನಡ ಪ್ರಾಂತ್ಯದ ಹವೀಕರಲ್ಲಿ ಈ ರೀತಿ ಇದ್ದಿರಬಹುದು. ಘಟ್ಟದ ಮೇಲೆ ಸಾಗರ, ಸೊರಬ, ಸಿರಸಿ, ಸಿದ್ದಾಪುರ ಮುಂತಾದ ಸ್ಥಳಗಳಲ್ಲಿರುವ ಹವೀಕರು, ಕರಣಾರ್ಥದಲ್ಲಿ 'ಇಂದ' ಎಂಬ ತೃತೀಯೆಯನ್ನೂ 'ಅಲ್ಲಿ' ಎಂಬ ಸಪ್ತಮಿಯನ್ನೂ ಸಮಸಮವಾಗಿ ಬಳಸುತ್ತಾರೆ. ಕೈಯಿಂದ ಕೊಟ್ಟೆ-ಕೈಯಲ್ಲಿ ಕೊಟ್ಟೆ, ಕತ್ತಿಯಿಂದ ಕಡಿದ-ಕತ್ತಿಯಲ್ಲಿ ಕಡಿದ -ಎಂಬ ಪ್ರಯೋಗಗಳು ಯಥೇಷ್ಟವಾಗಿವೆ. ಇವೆರಡಲ್ಲದೆ 'ಕೈಯಾಗೆ ಕೊಟ್ಟೆ, ಕತ್ತಿಯಾಗೆ ಕಡಿದ' ಎಂದು ಕರಣಾರ್ಥದಲ್ಲಿ 'ಆಗೆ-ಯಾಗೆ' ಎಂಬ ಪ್ರತ್ಯಯಗಳನ್ನು ಬಳಸುವುದೂ ಉಂಟು. ಕತ್ತಿಯಲ್ಲಿ, ಕೈಯಲ್ಲಿ -ಎಂದಾಗಲೂ 'ಅಲ್ಲಿ' ಎಂಬುದು ಸ್ವತಂತ್ರ ಅವ್ಯಯವಾಗಿದ್ದು ಷಷ್ಠ್ಯಂತದ ಮೇಲೆ ಬಂದಿದೆಯೆಂದೇಕೆ ಹೇಳಬಾರದು? ಕೈಯೊಳ್ -ಎಂಬಾಗಲೂ 'ಒಳ್' ಎನ್ನುವುದು 'ಒಳಗೆ' ಶಬ್ದದ ಏಕದೇಶವೆಂದು ವಾದಿಸಬಹುದು. ಅತ್ತಣಿಂ, ದೆಸೆಯಿಂದ -ಎಂಬವುಗಳ ಗತಿಯೇ

* ಈ ಎರಡು ವಾಕ್ಯಗಳೂ ಕರ್ಮಣಿಪ್ರಯೋಗದಲ್ಲಿವೆ.

ಇವುಗಳಿಗೂ ಪ್ರಾಪ್ತವಾಗುತ್ತಾ ಇದೆ. ನನ್ನ ನಮ್ರ ನಿವೇದನೆ ಏನೆಂದರೆ, ಬಹುಸಂಖ್ಯೆಯಲ್ಲಿರುವ ಕನ್ನಡಿಗರಿಗೆ ಹೋಲಿಸಿದಾಗ ಅತ್ಯಲ್ಪಸಂಖ್ಯೆಯಲ್ಲಿರುವ ಹವೀಕರ ಮಾತು ಕನ್ನಡದ ಮಾನದಂಡವಾಗಲಾರದು. (ನಾನು ಹಳ್ಳಿಯಲ್ಲಿ ಹುಟ್ಟಿ ಬೆಳೆದ ಹವ್ಯಕನೇ.) ಹವ್ಯಕರ ಮಾತು ಹಳಗನ್ನಡಕ್ಕೆ ಹತ್ತಿರದಲ್ಲಿರುವುದು ದಿಟ. ಅನ್ಯತ್ರ ಲುಪ್ತವಾದ ಕೆಲವು ಕನ್ನಡಪದಗಳನ್ನೂ ಅದು ಇನ್ನೂ ಉಳಿಸಿಕೊಂಡಿದೆ. ಕರಣಾರ್ಥದಲ್ಲಿ ಕಾಣುವ ಸಪ್ತಮಿಯ ವಿಚಾರವನ್ನು ಮುಂದೆ ಪ್ರಸ್ತಾವಿಸಲಾಗುವುದು.

ಕರಣಕಾರಕ

ಕರಣಾರ್ಥದಲ್ಲಿ ತೃತೀಯೆ ಬರುತ್ತದೆ ಎನ್ನುವಾಗ ಕರಣವೆಂದರೇನೆಂಬುದನ್ನು ಮೊದಲು ತಿಳಿದಿರಬೇಕು. ನಮ್ಮ ಕನ್ನಡದ ವೈಯಾಕರಣರು ಆಯಾ ಕಾರಕಗಳ ಮೇಲೆ ಯಾವ ವಿಭಕ್ತಿಗಳು ಬರುತ್ತವೆಯೆಂಬುದನ್ನು ಹೇಳುತ್ತಾರೆಯೇ ಹೊರತು ಕರ್ತೃ, ಕರ್ಮ, ಕರಣ ಮುಂತಾದ ಕಾರಕಗಳ ಲಕ್ಷಣವನ್ನು ಸರಿಯಾಗಿ ಹೇಳುವುದೇ ಇಲ್ಲ. ಭಟ್ಟಾಕಳಂಕನೊಬ್ಬನು ಮಾತ್ರ ಶಬ್ದಾನುಶಾಸನದ ವ್ಯಾಖ್ಯಾನದಲ್ಲಿ ಕಾರಕಲಕ್ಷಣಗಳನ್ನು ವಿಮರ್ಶಿಸಿ ಹೇಳುತ್ತಾನೆ. ಅದಕ್ಕೆ ಪಾಣಿನಿಯ ಸೂತ್ರಗಳನ್ನು ವ್ಯಾಖ್ಯಾನಗಳನ್ನೂ ಆಧಾರವಾಗಿ ಇಟ್ಟುಕೊಂಡಿದ್ದಾನೆ. ಕಾರಕಸ್ವರೂಪಗಳನ್ನು ನಿರ್ಧರಿಸಲು ಬೇರೆ ಆಧಾರವೇ ಇಲ್ಲದ್ದರಿಂದ ಸಂಸ್ಕೃತವ್ಯಾಕರಣವನ್ನು ಅವಲಂಬಿಸಬೇಕಾದದ್ದು ಅವನಿಗೆ ಅನಿವಾರ್ಯವಾಯಿತು.

ಸಾಧಕತಮಂ ಕರಣಂ –ಎಂದು ಪಾಣಿನಿಸೂತ್ರ. ಕರ್ತೃವಿನ ಕ್ರಿಯಾಸಿದ್ಧಿಗೆ ಅತಿಶಯವಾಗಿ ಉಪಕರಿಸುವ ಕಾರಕವು ಕರಣವೆನಿಸುತ್ತದೆ. ಯಾವ ಕಾರಕದ ಕ್ರಿಯೆ ಮುಗಿದೊಡನೆ ವ್ಯವಧಾನವಿಲ್ಲದೆ ಕರ್ತೃವಿನ ಕ್ರಿಯೆ ಪೂರ್ತಿಯಾಗುವುದೋ ಆ ಕಾರಕವು ಕರಣವೆಂದು ತಾತ್ಪರ್ಯ. ಕ್ರಿಯಾಸಿದ್ಧಿಗೆ ಉಪಯುಕ್ತವಾದ ಕ್ರಿಯೆ ಕರಣದಲ್ಲಿರಬೇಕು. ಮತ್ತು ಆ ಕರಣವು ಕ್ರಿಯೆಯಲ್ಲಿ ಮಾತ್ರ ಅನ್ವಿತವಾಗಬೇಕು. ಈ ಅತಿಶಯವಿಲ್ಲದ ಕಾರಣವು ಹೇತು ಅಥವಾ ನಿಮಿತ್ತವೆನಿಸುತ್ತದೆ. ಕ್ರಿಯಾನ್ವಿತವಾಗಿ ತಾನೂ ಒಂದು ಕ್ರಿಯೆಯನ್ನು ಮಾಡುವುದರಿಂದ ಕರಣಕ್ಕೆ ಕಾರಕಸಂಜ್ಞೆ ಇದೆ. ನಿಮಿತ್ತಕ್ಕೆ ಕಾರಕಸಂಜ್ಞೆ ಇಲ್ಲ. ಇದನ್ನು ಸ್ಪಷ್ಟಪಡಿಸುವುದಕ್ಕಾಗಿ ಭಟ್ಟೋಜಿದೀಕ್ಷಿತರು ಸಿದ್ಧಾಂತಕೌಮುದಿಯ 'ಹೇತೌ' ಎಂಬ ಸೂತ್ರವ್ಯಾಖ್ಯಾನದಲ್ಲಿ ಹೀಗೆ ಬರೆದಿದ್ದಾರೆ–

"ದ್ರವ್ಯಾದಿಸಾಧಾರಣಂ ನಿರ್ವ್ಯಾಪಾರಸಾಧಾರಣಂ ಚ ಹೇತುತ್ವಂ. ಕರಣತ್ವಂ ತು ಕ್ರಿಯಾಮಾತ್ರವಿಷಯಂ ವ್ಯಾಪಾರನಿಯತಂ ಚ". ದ್ರವ್ಯಾದಿ ಎಂಬಲ್ಲಿ ಆದಿಪದದಿಂದ ಗುಣಕ್ರಿಯೆಗಳಿಗೆ ಗ್ರಹಣ. ನಿಮಿತ್ತದಲ್ಲಿ ಕ್ರಿಯೆ ಇಲ್ಲದೆಯೂ ಇರಬಹುದು; ಇದ್ದರೂ ಪ್ರಕೃತೋಪಯೋಗಿಯಲ್ಲ. ಕ್ರಿಯಾಪ್ರಾಪ್ತಿಗೆ ಬೇಕಾಗಿರುವುದಿಲ್ಲ. ಕರಣದಲ್ಲಿ ಕ್ರಿಯೆ ಇರಲೇಬೇಕು. ಕ್ರಿಯಾಸಿದ್ಧಿಗೆ ಉಪಯುಕ್ತವಾಗಿ ಧಾತ್ವರ್ಥದಲ್ಲಿ ಕರಣವು ಅನ್ವಿತವಾಗಲೇಬೇಕು. ವಾಕ್ಯಪದೀಯದಲ್ಲಿ ಭರ್ತೃಹರಿ ಹೇಳುತ್ತಾನೆ–

ಅನಾಶ್ರಿತೇ ತು ವ್ಯಾಪಾರೇ ಕಾರಣಂ ಹೇತುರಿಷ್ಯತೇ ।
ದ್ರವ್ಯಾದಿ ವಿಷಯೋ ಹೇತುಃ ಕಾರಣಂ ನಿಯತಕ್ರಿಯಮ್ ॥

ಕ್ರಿಯಾಸಿದ್ಧಿಯೆಂದರೆ ಕ್ರಿಯಾಜನ್ಯವಾದ ಫಲದ ಉತ್ಪತ್ತಿ. ಈಗ ಉದಾಹರಣೆಗಳನ್ನು ನೋಡಬಹುದು.

ಹೇತು–ನಿಮಿತ್ತ

೧. 'ಇಟ್ಟಿಗೆಯಿಂದ ಗೋಡೆಯಾಗುತ್ತದೆ.' ಇಟ್ಟಿಗೆಯು ಗೋಡೆಯೆಂಬ ದ್ರವ್ಯಕ್ಕೆ ಕಾರಣ. ಅದಕ್ಕೆ ಆಗುವ ಕ್ರಿಯೆಯಲ್ಲಿ ಅನ್ವಯವಿಲ್ಲ. ಆಗುವ ಗೋಡೆಯಲ್ಲಿ ಅನ್ವಯವಿದೆ. ಆಗುವುದೆಂದರೆ ಸ್ವಸ್ವರೂಪವನ್ನು ಪಡೆಯುವುದು. ಸ್ವಸ್ವರೂಪವೆಂಬ ಫಲವೇ ಗೋಡೆಯಾಗಿದೆ. ಇಲ್ಲಿ ಕ್ರಿಯಾನ್ವಯವಿಲ್ಲದ್ದರಿಂದ ಇದು ಕರಣವಲ್ಲ. ಇಟ್ಟಿಗೆಯಿಂದ ಗೋಡೆಯನ್ನು ಕಟ್ಟುತ್ತಾನೆ –ಎನ್ನುವಲ್ಲಿ ವಿವಕ್ಷೆಯನ್ನನುಸರಿಸಿ ಇಟ್ಟಿಗೆಯು ಕಾರಣವೂ ಆಗಬಹುದು, ಕರಣವೂ ಆಗಬಹುದು.

ಇದರಲ್ಲಿ ವಿರೋಧವೇನೂ ಇಲ್ಲ. ಪ್ರತಿಯೊಂದು ವಸ್ತುವಿನಲ್ಲಿಯೂ ವಿಭಿನ್ನಶಕ್ತಿಗಳಿರುತ್ತವೆ. ಪ್ರಯೋಗಭೇದದಿಂದ ಆಯಾಶಕ್ತಿಗಳು ಅಭಿವ್ಯಕ್ತವಾಗುತ್ತವೆ.

'ಗಡಿಗೆಯು ಮನೆಯಲ್ಲಿದೆ' –ಎಂಬ ವಾಕ್ಯದಲ್ಲಿ ಗಡಿಗೆಯು ಕರ್ತೃವಾದರೆ 'ಗಡಿಗೆಯನ್ನು ನೋಡು' –ಎಂಬ ವಾಕ್ಯದಲ್ಲಿ ಅದು ಕರ್ಮವಾಗಿ ಕರ್ಮತ್ವಶಕ್ತಿಯನ್ನು ಅಭಿವ್ಯಂಜಿಸುತ್ತದೆ.

ಗಡಿಗೆಯಿಂದ ನೀರನ್ನು ತರುತ್ತಾನೆ –ಇಲ್ಲಿ ಕರಣತ್ವಶಕ್ತಿ.

ಗಡಿಗೆಗೆ ಬಣ್ಣವನ್ನು ಹಚ್ಚುತ್ತಾನೆ –ಗಡಿಗೆಯು ಉದ್ದೇಶ್ಯವಾದ್ದರಿಂದ ಸಂಪ್ರದಾನತ್ವಶಕ್ತಿ.

ಗಡಿಗೆಯಿಂದ ನೀರು ಸೋರುತ್ತದೆ –ಅಪಾದಾನತ್ವಶಕ್ತಿ.

ಗಡಿಗೆಯ ನೀರು –ಸಂಯೋಗಸಂಬಂಧ. ಇದು ಶಕ್ತಿ ಎನಿಸುವುದಿಲ್ಲ.

ಗಡಿಗೆಯ ಕಪ್ಪು ಬಣ್ಣ –ಸಮವಾಯಸಂಬಂಧ. ಬಣ್ಣವು ಗುಣವಾದ್ದರಿಂದ ಸಮವಾಯ ಸಂಬಂಧದಿಂದ ಗಡಿಗೆಯಲ್ಲಿದೆ.

ಗಡಿಗೆಯಲ್ಲಿ ನೀರು ಇದೆ –ಅಧಿಕರಣತ್ವಶಕ್ತಿಯಿರುವುದರಿಂದ ಗಡಿಗೆ ಇಲ್ಲಿ ಕಾರಕ.

ಗಡಿಗೆಯ ನೀರು –ಎಂದಾಗ ಸಂಬಂಧವು ಮಾತ್ರ ತೋರುತ್ತದೆ. 'ಗಡಿಗೆಯಲ್ಲಿ ನೀರು ಇದೆ' ಎಂದಾಗ ಅಧಿಕರಣತ್ವಶಕ್ತಿಯು ತೋರುತ್ತದೆ.

ಆದ್ದರಿಂದಲೇ ಮಹಾವೈಯಾಕರಣನಾದ ಭರ್ತೃಹರಿಯು–

> ವಸ್ತುತಸ್ತದನಿರ್ದೇಶ್ಯಂ ನ ಹಿ ವಸ್ತು ವ್ಯವಸ್ಥಿತಮ್ ।
> ಸ್ಥಾಲ್ಯಾಂ ಪಚ್ಯತ ಇತ್ಯೇಷಾ ವಿವಕ್ಷಾ ದೃಶ್ಯತೇ ಯತಃ ॥

ಎಂದು ವಾಕ್ಯಪದೀಯದಲ್ಲಿ ನಿರ್ಣಯಿಸಿ ಹೇಳಿದ್ದಾನೆ.

ವಸ್ತುತಃ ಒಂದೊಂದು ವಸ್ತುವನ್ನೇ ತೆಗೆದುಕೊಂಡು, ಆ ಶಕ್ತಿಯನ್ನು ಗೊತ್ತು ಮಾಡಿ ಹೇಳಕೂಡದು. ಏಕೆಂದರೆ ಯಾವ ವಸ್ತುವೂ ಇಂತಹ ಶಕ್ತಿಯನ್ನೇ ಪಡೆದಿದೆಯೆಂದು ಹೇಳಲಾಗುವುದಿಲ್ಲ. ಸ್ಥಾಲ್ಯಾಂ ಪಚತಿ –ಪಾತ್ರೆಯಲ್ಲಿ ಅಡುಗೆ ಮಾಡುತ್ತಾನೆ –ಎಂದಾಗ ಸ್ಥಾಲಿಯಲ್ಲಿ ಅಧಿಕರಣತ್ವಶಕ್ತಿ ತೋರುತ್ತದೆ. 'ಪಾತ್ರೆಯಿಂದ ಪಾಕಕ್ರಿಯೆ

ನಡೆಯುತ್ತದೆ' ಎಂದಾಗ ಅಥವಾ ಸ್ಥಾಲೀ ಪಚತಿ =ಪಾತ್ರೆಯು ಅಡುಗೆ ಮಾಡುತ್ತದೆ ಎಂದಾಗ ಪಾತ್ರೆಯಲ್ಲಿ ಕರ್ತೃತ್ವಶಕ್ತಿ ತೋರುತ್ತದೆ ಎಂದು ಆ ಶ್ಲೋಕದ ತಾತ್ಪರ್ಯವಾಗಿದೆ.

೨. 'ಸೋಪಿನಿಂದ ಬಟ್ಟೆಗೆ ಸ್ವಚ್ಛತೆ ಬರುತ್ತದೆ. ನಿಂದೆಯಿಂದ ದ್ವೇಷ ಹುಟ್ಟುತ್ತದೆ.' ಸ್ವಚ್ಛತೆ, ದ್ವೇಷ –ಇವೆರಡೂ ಗುಣಗಳು. ಸೋಪು ಮತ್ತು ನಿಂದೆ ಕಾರಣಗಳು.

೩. 'ಆಯಾಸದಿಂದ ಅವನು ಮಲಗಿದ್ದಾನೆ. ಹಸಿವಿನಿಂದ ಮಗು ಅಳುತ್ತದೆ.' ಮಲಗುವುದು, ಅಳುವುದು –ಇವೆರಡೂ ಕ್ರಿಯೆಗಳು. ಕರಣದಲ್ಲಿರುವಂತೆ, ಆಯಾಸ ಮತ್ತು ಹಸಿವುಗಳಲ್ಲಿ ಮತ್ತೊಂದು ಕ್ರಿಯೆ ಇಲ್ಲ.

೪. 'ಸಿಟ್ಟಿನಿಂದ ಕಳ್ಳನನ್ನು ಹೊಡೆದನು.' ಹೊಡೆಯುವ ಕ್ರಿಯೆಗೆ ಸಿಟ್ಟು ಕಾರಣ. ಸಿಟ್ಟಿನಲ್ಲಿ ಯಾವ ಕ್ರಿಯೆಯೂ ಇಲ್ಲ. ಸಿಟ್ಟು ಮನುಷ್ಯನ ಒಂದು ಗುಣ. ಗುಣದಲ್ಲಿ ಕ್ರಿಯೆ ಇರುವುದಿಲ್ಲ.

ಆದ್ದರಿಂದ ಕರಣವೂ ನಿಮಿತ್ತವೂ ಭಿನ್ನಸ್ವರೂಪದವು. ಏವಂ ಚ ತೃತೀಯಾ ವಿಭಕ್ತಿಯು ಕರ್ತೃ, ಕರಣ, ಕಾರಣ (ನಿಮಿತ್ತ, ಹೇತು) –ಈ ಮೂರನ್ನು ಹೇಳುವ ಶಬ್ದಗಳ ಮೇಲೆ ಬರುತ್ತದೆ. ಇವುಗಳಲ್ಲಿ ಪ್ರಧಾನವಾದ ಧಾತ್ವರ್ಥವ್ಯಾಪಾರವನ್ನು ಆಶ್ರಯಿಸಿಕೊಂಡು ಸ್ವತಂತ್ರವಾದ ಕರ್ತೃವು ಪ್ರಧಾನವಾದದ್ದು. ಕರ್ತೃವಿಗೆ ಉಪಕಾರ ಮಾಡುವುದರಿಂದ ಕರಣವು ಎರಡನೆಯ ಸ್ಥಾನದಲ್ಲಿರುತ್ತದೆ. ಕ್ರಿಯೆಗೆ ನಿಮಿತ್ತಮಾತ್ರವಾದ್ದರಿಂದ ಕಾರಣಕ್ಕೆ ಮೂರನೆಯ ಸ್ಥಾನ.

ಕಾರಣವು (ಹೇತು) ಸಮವಾಯಿಕಾರಣ, ಅಸಮವಾಯಿಕಾರಣ, ನಿಮಿತ್ತಕಾರಣ –ಎಂದು ಮೂರು ವಿಧವಾಗಿದೆಯೆಂದು ತಾರ್ಕಿಕರು ಹೇಳುತ್ತಾರೆ. ಅಸಮವಾಯಿಕಾರಣದ ವಿಚಾರವು ಪ್ರಕೃತಕ್ಕೆ ಉಪಯೋಗಿಯಲ್ಲ. ವೇದಾಂತಿಗಳು ಸಮವಾಯಿಕಾರಣವನ್ನು ಉಪಾದಾನಕಾರಣವೆನ್ನುತ್ತಾರೆ. ಏಕೆಂದರೆ, ಅವರು ಸಮವಾಯಸಂಬಂಧವನ್ನು ಒಪ್ಪುವುದಿಲ್ಲ. ಪ್ರಕೃತಿಯಲ್ಲಿಯೇ ಒಂದು ಪರಿಣಾಮವಾಗಿ ವಿಕೃತಿಯ ರೂಪವನ್ನು ತಳೆದಾಗ ವಿಕೃತಿಯು ಕಾರ್ಯವೆನಿಸುತ್ತದೆ. ಅದಕ್ಕೆ ಪ್ರಕೃತಿಯು ಉಪಾದಾನಕಾರಣ. ಅಲ್ಲಿ ಕಾರಣವೇ ಕಾರ್ಯರೂಪವನ್ನು ತಳೆದಿರುತ್ತದೆ. ನೂಲಿನಿಂದ ಬಟ್ಟೆಯಾಗುತ್ತದೆ. ಬಟ್ಟೆಗೆ ನೂಲು ಉಪಾದಾನಕಾರಣ. ಚಿನ್ನದಿಂದ ಉಂಗುರವಾಗುತ್ತದೆ. ಚಿನ್ನವು ಉಪಾದಾನಕಾರಣ. ಮಣ್ಣಿನಿಂದ ಗಡಿಗೆಯಾಗುತ್ತದೆ. ಮಣ್ಣು ಗಡಿಗೆಗೆ ಉಪಾದಾನಕಾರಣ. ಹೀಗೆ ಅನ್ಯತ್ರ ಊಹಿಸಿಕೊಳ್ಳಬಹುದು. ಇಂತಹ ಸ್ಥಳದಲ್ಲಿ ಮಾತ್ರ ಕಾರಣವು ಉತ್ಪತ್ತಿಯ ಮೂಲ, ಕಾರ್ಯದ ಜನ್ಮಭೂಮಿ ಎನ್ನಬಹುದು. ಚಿನ್ನವೇ ಸ್ವಲ್ಪ ವಿಕಾರವನ್ನು (ಪರಿಣಾಮವನ್ನು) ಹೊಂದಿದಾಗ ಉಂಗುರವಾಗಿ ಬಿಡುತ್ತದೆ. ಆದ್ದರಿಂದ ಚಿನ್ನವು ಉಂಗುರಕ್ಕೆ ಆಶ್ರಯವೆನ್ನಬಹುದು. ಗಡಿಗೆಗೆ ಮಣ್ಣು ಆಶ್ರಯಸ್ಥಾನ. 'ಮೊಸರಿನಲ್ಲಿ ಬೆಣ್ಣೆ ಇದೆ; ಬೆಣ್ಣೆಯಲ್ಲಿ ತುಪ್ಪವಿದೆ' ಎಂದು ಹೇಳಿದಂತೆ ಈ ವ್ಯವಹಾರವು ಬರುವುದು ಸಹಜ. ಆದ್ದರಿಂದಲೇ 'ಚಿನ್ನದಲ್ಲಿ

ಒಡವೆಯನ್ನು ಮಾಡಿಸುತ್ತಾನೆ; ಬೆಳ್ಳಿಯಲ್ಲಿ ತಟ್ಟೆಯನ್ನು ಮಾಡಿಸಿದನು' –ಎನ್ನುವುದು ರೂಢಿಗೆ ಬಂದಿದೆ. ಉಪಾದಾನಕಾರಣವು ಅಧಿಕರಣವಾಗಿಯೂ ಪ್ರತೀತವಾಗುವುದರಿಂದ ಸಪ್ತಮಿಯೂ ಬರಬಹುದು. ಹಾಗಲ್ಲದೆ ಕಾರಣರೂಪದಲ್ಲಿಯೇ ಪ್ರತೀತವಾದರೆ 'ಚಿನ್ನದಿಂದ ಒಡವೆಯನ್ನು ಮಾಡಿಸುತ್ತಾನೆ, ಬೆಳ್ಳಿಯಿಂದ ತಟ್ಟೆಯನ್ನು ಮಾಡಿಸುತ್ತಾನೆ' –ಇತ್ಯಾದಿ ವ್ಯವಹಾರವು ಬರುತ್ತದೆ. ಇತರ ದಾರ್ಶನಿಕರ ಮತದಲ್ಲಿ ಕರ್ತೃಕರಣಾದಿಗಳು ನಿಮಿತ್ತಕಾರಣಗಳಾದ್ದರಿಂದ ವ್ಯಾಕರಣಶಾಸ್ತ್ರವು ಇಷ್ಟರೂಪಸಿದ್ಧಿಗಾಗಿ ಕಾರಣದ ಲಕ್ಷಣವನ್ನು ಪ್ರತ್ಯೇಕವಾಗಿ ಮಾಡಿಕೊಂಡಿದೆ. ಕಾರಕಗಳೆಲ್ಲವೂ ಕ್ರಿಯೋತ್ಪತ್ತಿಗೆ ಕಾರಣಗಳೇ. ಕರ್ತೃ, ಕರಣ –ಮೊದಲಾದವು ಕಾರಣದ ಒಳಭೇದಗಳು. ಬೇರೆಬೇರೆ ವಿಭಕ್ತಿಗಳ ಉತ್ಪತ್ತಿಗಾಗಿ ಈ ಒಳಭೇದಗಳು ಅತ್ಯಾವಶ್ಯಕ.

'ದಿಲೀಪನಿಂದ ರಘುವೂ ರಘುವಿನಿಂದ ಅಜನೂ ಅಜನಿಂದ ದಶರಥನೂ ಜನಿಸಿದರು.' ಇಲ್ಲಿ ದಿಲೀಪ ಮೊದಲಾದವರು ತಮ್ಮ ಮಕ್ಕಳಿಗೆ ಉಪಾದಾನ ಕಾರಣರು. ದಿಲೀಪಾದಿ ಶಬ್ದಗಳ ಮೇಲೆ ಸಂಸ್ಕೃತದಲ್ಲಿ ಪಂಚಮೀವಿಭಕ್ತಿ ಬರುತ್ತದೆಯೇ ಹೊರತು ತೃತೀಯೆ ಬರುವುದಿಲ್ಲ. 'ಬೀಜದಿಂದ ಮೊಳಕೆ ಹುಟ್ಟುತ್ತದೆ' ಎಂಬಲ್ಲಿಯೂ ಪಂಚಮಿಯೇ. ಪಾಣಿನಿಯು ಈ ಸಂದರ್ಭದಲ್ಲಿ 'ಭುವಃ ಪ್ರಭವಃ, ಜನಿಕರ್ತುಃ ಪ್ರಕೃತಿಃ' ಎಂದು ಸೂತ್ರಿಸಿ ಅಪಾದಾನಸಂಜ್ಞೆಯನ್ನು ಹೇಳಿ ಪಂಚಮಿಯನ್ನು ವಿಧಿಸಿದ್ದಾನೆ. ವಿಶ್ಲೇಷವಿರುವುದರಿಂದ ಅಪಾದಾನಸಂಜ್ಞೆ ತಾನಾಗಿ ಬರುತ್ತದೆಯಾದ್ದರಿಂದ ಈ ಸೂತ್ರಗಳು ಬೇಕಾಗಿಲ್ಲವೆಂದು ಪತಂಜಲಿಯ ಆಶಯ. 'ಉಪಾಧ್ಯಾಯನಿಂದ ವೇದವನ್ನು ಕಲಿಯುತ್ತಾನೆ' ಎಂಬಲ್ಲಿ 'ಉಪಾಧ್ಯಾಯಾತ್' ಎಂದು ಪಂಚಮೀವಿಭಕ್ತಿಯೇ ಬರುತ್ತದೆ. ಉಪಾಧ್ಯಾಯನ ಜ್ಞಾನವು ಶಬ್ದರೂಪದಿಂದ ವಿಶ್ಲೇಷಹೊಂದಿ, ಶಿಷ್ಯನಲ್ಲಿ ಸೇರುತ್ತದೆಯಾದ್ದರಿಂದ ಉಪಾಧ್ಯಾಯನಿಗೆ ಅಪಾದಾನಸಂಜ್ಞೆ ಬರುತ್ತದೆ ಎಂದು ಸಹ ಭಾಷ್ಯಕಾರ ಪತಂಜಲಿಯು ಹೇಳಿದ್ದಾನೆ. ಇದೆಲ್ಲವೂ ಸಂಸ್ಕೃತವ್ಯಾಕರಣದ ವಿಷಯವಾದರೂ ಅದೇ ಬಗೆಯಲ್ಲಿ ಕನ್ನಡದಲ್ಲಿಯೂ ವಿಭಕ್ತಿಗಳು ಬರುವುದರಿಂದ ಇಷ್ಟನ್ನು ಬರೆಯಬೇಕಾಯಿತು. ಕನ್ನಡದ ವ್ಯಾಕರಣಗಳೂ ಈ ಮಾರ್ಗವನ್ನೇ ಅನುಸರಿಸಿವೆ.

"ನಿಮಿತ್ತವು ಕಾರ್ಯದ ಉತ್ಪತ್ತಿಗೆ ಮೂಲ ಹೊರತು ಕರಣವಲ್ಲ. ಉತ್ಪತ್ತಿಯನ್ನು ಪಂಚಮಿಯೇ ಸ್ಫುಟಗೊಳಿಸುವುದು. ಉದಾ: 'ಆಕಾಶಾದ್ವಾಯುಃ, ವಾಯೋರಗ್ನಿಃ' ಇತ್ಯಾದಿ" ಎಂದು ಶ್ರೀ ಸೇಡಿಯಾಪು ಕೃಷ್ಣಭಟ್ಟರು ಬರೆದಿದ್ದಾರೆ. (ಪುಟ ೧೭೬). ಕಾರ್ಯದ ಉತ್ಪತ್ತಿಗೆ ಮೂಲವೆಂದರೆ 'ಉತ್ಪತ್ತಿಭೂಮಿ' ಎಂದು ಅರ್ಥವಿರಬೇಕು. ಉತ್ಪತ್ತಿಭೂಮಿಯಾಗತಕ್ಕದ್ದು ಉಪಾದಾನಕಾರಣವೇ ಹೊರತು ನಿಮಿತ್ತಕಾರಣವಲ್ಲ. "ಆಕಾಶಾದ್ವಾಯುಃ" ಇತ್ಯಾದಿ ಸ್ಥಳಗಳಲ್ಲಿ ಉತ್ಪತ್ತಿಯನ್ನು ಪಂಚಮಿಯೇ ಸ್ಫುಟಗೊಳಿಸುವುದು –ಎಂಬುದು ಚಿಂತನೀಯ. 'ಆತ್ಮನ ಆಕಾಶಃ ಸಂಭೂತಃ' ಎಂದು ಹಿಂದಿರುವ ಉಪನಿಷದ್ವಾಕ್ಯದಿಂದ 'ಸಂಭೂತಃ' ಎಂಬುದನ್ನು ಅನುವೃತ್ತಿಮಾಡಿಕೊಂಡಾಗಲೇ ಉತ್ಪತ್ತಿಯು ಸ್ಫುಟವಾಗುತ್ತದೆ. "ವಾಯೋರಗ್ನಿಃ

ವರ್ಧತೇ'' ಎಂಬ ವಾಕ್ಯದಲ್ಲಿ ಪಂಚಮಿಯು ಉತ್ಪತ್ತಿಯನ್ನು ಬೋಧಿಸುವುದೇ ಇಲ್ಲ. ನಿಮಿತ್ತಕಾರಣಕ್ಕಿಂತಲೂ ಕರಣವು ಕಾರ್ಯೋತ್ಪತ್ತಿಗೆ ನಿಕಟದಲ್ಲಿದ್ದು ಕಾರ್ಯೋತ್ಪತ್ತಿಗೆ ಪ್ರಬಲವಾದ ಕಾರಣವಾಗಿರುತ್ತದೆ. ನಿಮಿತ್ತವು ದೂರದಲ್ಲಿದ್ದು ಹೇತುವಾಗಿರುತ್ತದೆ.

"ಕರಣವೂ ಒಂದು ಕಾರಣವೇ. ಆದುದರಿಂದ (ಅಸಾಧಾರಣಂ ಕಾರಣಂ ಕರಣಂ) ಪ್ರಾಮುಖ್ಯವನ್ನು ಕೊಡುವ ರೀತಿಯಿಂದ ವಿವಕ್ಷಾಭೇದದಿಂದ ಹೇತುವನ್ನು ತೃತೀಯೆಯೂ ಹೇಳಲು ಸಮರ್ಥವಾಗುತ್ತದೆ. ಆಗ ಪಂಚಮಿಯ ತೃತೀಯೆಯೂ ಸಮಾನಾರ್ಥಕವೆಂಬಂತೆ ತೋರಲು ತೊಡಗುತ್ತವೆ'' (ಪುಟ ೧೭೬). ಹೇತ್ವರ್ಥದಲ್ಲಿ ಬರಬೇಕಾದದ್ದು ಪಂಚಮೀವಿಭಕ್ತಿಯೇ ಎಂಬ ಗ್ರಹಿಕೆಯಿಂದ ಹೇಳಿದ ಮಾತಿದು. ಉಪಾದಾನಕಾರಣಕ್ಕೆ ಪಂಚಮಿಯು ಬರಲು ವಿಶ್ಲೇಷವೆಂಬ ಅಪಾದಾನದ ಅಂಶವು ಇರುವುದೇ ಕಾರಣವೆಂದು ಹಿಂದೆ ವಿವರಿಸಿದ್ದೇನೆ. 'ಆಕಾಶಾದ್ವಾಯುಃ, ವಾಯೋರಗ್ನಿಃ' ಎಂಬಲ್ಲಿ ಆಕಾಶ ಮುಂತಾದವು ಅಪಾದಾನಗಳಾದ್ದರಿಂದ ಪಂಚಮೀ ವಿಭಕ್ತಿ ಬಂದಿದೆಯೆಂಬುದು ಪಾಣಿನಿವ್ಯಾಕರಣಸಂಮತ. ಅಪಾದಾನವೂ ಕಾರಕವಾದ್ದರಿಂದ ಹೇತ್ವಂಶವು ಆಕಾಶಾದಿಗಳಲ್ಲಿದ್ದು ಉಪಾದಾನಕಾರಣವೆಂಬ ವ್ಯವಹಾರವು ಬಂದಿರುವುದರಿಂದ ಬಾಧೆ ಏನೂ ಇಲ್ಲ. ಕರಣ ನಿಮಿತ್ತಗಳೆರಡೂ ಕಾರ್ಯಜನಕಗಳೇ ಆದ್ದರಿಂದ ತೃತೀಯಾ ವಿಭಕ್ತಿಯು ಅವೆರಡರ ಮೇಲೂ ಬರುವುದು ಯುಕ್ತವಾಗಿಯೇ ಇದೆ. ನಿಮಿತ್ತವು ಕರಣಕ್ಕೆ ಪ್ರಾಮುಖ್ಯವನ್ನಿತ್ತು ವಿಧೇಯವಾಗಿ ವರ್ತಿಸಬೇಕಾದದ್ದೇನೂ ಇಲ್ಲ. ಹೇತ್ವರ್ಥದಲ್ಲಿ ಪಂಚಮಿಯನ್ನು ವಿಕಲ್ಪವಾಗಿ ವಿಧಿಸಿರುವುದರಿಂದ ಅದೇ ತನ್ನ ಪ್ರಾಮುಖ್ಯವನ್ನು ಕಳೆದುಕೊಳ್ಳುತ್ತದೆ. ಮುಖ್ಯಾಧಿಕಾರಿಯಿಲ್ಲದಾಗ ಸಹಾಯಕನಾದವನು ಆ ಅಧಿಕಾರವನ್ನು ನಿರ್ವಹಿಸುವಂತೆ, ತೃತೀಯೆ ಬರದಾಗ ಪಂಚಮೀ ಬರುತ್ತದೆ. ಅಪಾದಾನವು ಇತರ ಎಲ್ಲ ಕಾರಕಗಳಿಗಿಂತ ದುರ್ಬಲ. ತಮಗೆ ಪ್ರಾಪ್ತಿ ಇದ್ದಾಗ ಇತರ ಎಲ್ಲ ಕಾರಕಗಳೂ ಅಪಾದಾನವನ್ನು ಬಾಧಿಸುತ್ತವೆ. "**ಅಪಾದಾನಮುತ್ತರಾಣಿ ಕಾರಕಾಣಿ ಬಾಧಂತೇ**'' ಎಂಬುದೊಂದು ಪರಿಭಾಷೆ ಇದೆ. ಕರಣ ಕಾರಕವು ಅಪಾದಾನವನ್ನು ಬಾಧಿಸುತ್ತದೆ.

"ಕರ್ಮಣಿಪ್ರಯೋಗವೆಂದರೆ ಕರ್ತೃವಿಗೆ ಅಪ್ರಾಧಾನ್ಯವನ್ನುಂಟುಮಾಡುವುದು. ಉಪಕರಣದ ಸ್ಥಾನವನ್ನು ಕೊಡುವುದು'' ಎಂದು ಲೇಖಕರ ಅಭಿಪ್ರಾಯವಿದೆ. (ಪುಟ ೧೭೭). ಸಂಸ್ಕಾರಾನುರೋಧವಾಗಿ ಕೆಲವರಿಗೆ ಹಾಗೆ ತೋರಬಹುದು, ಎಲ್ಲರಿಗೂ ಅಲ್ಲ. ಕರ್ಮಣಿಪ್ರಯೋಗವು ವಿಪುಲವಾಗಿರುವ ಸಂಸ್ಕೃತದಲ್ಲಾಗಲಿ ಇಂಗ್ಲಿಷ್‌ನಲ್ಲಾಗಲಿ ಕರ್ಮಣಿಪ್ರಯೋಗವನ್ನು ಮಾಡತಕ್ಕವರಿಗೆ ಅಪ್ರಾಧಾನ್ಯದ ವಿವಕ್ಷೆಯೂ ಇರುವುದಿಲ್ಲ. ಶ್ರೋತೃವಿಗೂ ಅದು ತೋಱುವುದಿಲ್ಲ. ಯಾವ ವೈಯಾಕರಣನೂ ಹಾಗೆ ಹೇಳಿಯೂ ಇಲ್ಲ. ಕರ್ತೃವಾಚಕದ ಮೇಲೆಯೇ ನೇರವಾಗಿ ಕರ್ತೃತ್ವಶಕ್ತಿಯನ್ನು ಬೋಧಿಸುವ ತೃತೀಯಾವಿಭಕ್ತಿ ಇರುವಾಗ ಕರ್ತೃವಿಗೆ ಅಪ್ರಾಧಾನ್ಯವು ಪ್ರಾಪ್ತವಾಗುತ್ತದೆಯೆನ್ನುವುದು ಒಪ್ಪತಕ್ಕ ಮಾತಲ್ಲ. 'ಪಂಪನು ವಿಕ್ರಮಾರ್ಜುನವಿಜಯವನ್ನು ಬರೆದನು' ಎಂಬ ಕರ್ತರಿಪ್ರಯೋಗದಲ್ಲಿಯೇ ಕರ್ತೃವಿಗೆ ಅಪ್ರಾಧಾನ್ಯವೂ ತೋರು

ತ್ತದೆಯೆಂದು ವಾದಕ್ಕಾಗಿ ಹೇಳಿದರೆ ತಪ್ಪಲ್ಲ. ಏಕೆಂದರೆ, 'ಪಂಪನು' ಎಂಬಲ್ಲಿರುವ ಪ್ರಥಮಾವಿಭಕ್ತಿಯು ಕರ್ತೃವಾಚಕವೆಂದು ಯಾವ ವೈಯಾಕರಣನೂ ಹೇಳಿಲ್ಲ. "ಕ್ರಿಯಾಪದದಲ್ಲಿರುವ ಕರ್ತೃವಾಚಿಯಾದ ಆಖ್ಯಾತಪ್ರತ್ಯಯವು ದೂರದಲ್ಲಿದೆ." –ಎಂಬ ಯುಕ್ತಿಯಾದರೂ ಈ ವಾದದಲ್ಲಿದೆ.

"ಈ ಕೆಲಸವನ್ನು ನಾನು ಮಾಡಿದೆನು" ಎಂಬುದನ್ನೇ ನಿರಹಂಕಾರತೆಯಿಂದ ಹೇಳುವಾಗ, ಎಂದರೆ ನಿಮಿತ್ತ ಮಾತ್ರತ್ವವನ್ನು ಆರೋಪಿಸುವಾಗ "ಈ ಕೆಲಸ ನನ್ನಿಂದಾಯಿತು" ಎಂದಾಗುತ್ತದೆ ಎಂದು ಶ್ರೀ ಸೇಡಿಯಾಪು ಅವರು ಮತ್ತೆ ಹೇಳಿದ್ದಾರೆ. ಈ ಪ್ರಯೋಗದಲ್ಲಿ ನಿರಹಂಕಾರತೆಯು ಅಂತಹ ಸಂಸ್ಕಾರವಿರುವ ಕೆಲವರಿಗೆ ತೋರಬಹುದು. ನಮಗಂತೂ ತೋರುವುದಿಲ್ಲ. ಅಹಂಕಾರವೇ ನಮಗೆ ಎದ್ದು ಕಾಣುತ್ತದೆ. "ಈ ಕೆಲಸ ನನ್ನಿಂದಾಯಿತು' ಎಂಬಲ್ಲಿ ನಿರಪವಾದವಾಗಿ ಕರ್ತೃತ್ವವೇ ಸಿದ್ಧವಾಗಿರುವಾಗ ನಿಮಿತ್ತಮಾತ್ರತ್ವವನ್ನು ಏಕೆ ಆರೋಪಿಸಬೇಕು? 'ಆರೋಪ' ಎಂಬ ಶಬ್ದವೇ 'ನನ್ನಿಂದ' ಎಂಬಲ್ಲಿ ಸ್ವತಃ ನಿಮಿತ್ತತ್ವವಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. 'ಈ ಕೆಲಸವನ್ನು ಮಾಡಿದವರು ಯಾರು?' ಎಂಬ ಕರ್ತೃ ಜಿಜ್ಞಾಸೆಯ ಪ್ರಶ್ನೆಗೆ 'ನನ್ನಿಂದ ಈ ಕೆಲಸವಾಯಿತು' ಎಂಬುದು ಉತ್ತರವಾದೀತೇ ಹೊರತು 'ಈ ಕೆಲಸವಾಗಲು ನಿಮಿತ್ತ ಯಾವುದು?' ಎಂಬ ಪ್ರಶ್ನೆಗೆ ಅದು ಉತ್ತರವಾಗುವುದಿಲ್ಲ. "ಕೀರ್ತಿಯ ಆಸೆಯಿಂದ ವಿಕ್ರಮಾರ್ಜುನವಿಜಯವು ಪಂಪನಿಂದ ರಚಿತವಾಯಿತು" ಎಂಬ ವಾಕ್ಯದಲ್ಲಿ ಕೀರ್ತಿಯ ಆಸೆ ನಿಮಿತ್ತವೆಂಬುದು ಸ್ಪಷ್ಟವಾಗಿದೆ. ಆ ವಾಕ್ಯವನ್ನು ಕೇಳಿದ ಮೇಲೆ– "ಕಾವ್ಯದ ರಚನೆಗೆ ನಿಮಿತ್ತ ಯಾವುದು?" ಎಂಬ ಪ್ರಶ್ನೆಯೇ ಹುಟ್ಟುವುದಿಲ್ಲ. ಆಗ 'ಪಂಪನಿಂದ' ಎಂಬುದನ್ನು ಹೇಳದೆ ಗತ್ಯಂತರವೇ ಇಲ್ಲ. ಅಲ್ಲದೆ ಇತರ ವಿಭಕ್ತಿಗಳಿಗಿಂತ ಕಾರಕವಿಭಕ್ತಿಯು ಬಲಿಷ್ಠವಾದದ್ದು –ಎಂದು ಶಬ್ದಾರ್ಥತತ್ತ್ವಜ್ಞರಾದ ವೈಯಾಕರಣರು ನಿರ್ಧರಿಸಿದ್ದಾರೆ. ನಿಮಿತ್ತಾರ್ಥದ ತೃತೀಯೆಯು ಕಾರಕವಿಭಕ್ತಿಯಲ್ಲ.

"ಪ್ರೇರ್ಯಕರ್ತೃವೂ ಅಪ್ರಾಧಾನ್ಯವನ್ನು ಪಡೆಯುವುದರಿಂದ 'ಇಂ' ಪ್ರತ್ಯಯವೇ ಅದಕ್ಕೂ ಬರುವುದು" ಎಂದು ಶ್ರೀ ಸೇಡಿಯಾಪು ಅವರ ಇನ್ನೊಂದು ಹೇಳಿಕೆ ಇದೆ. (ಪು. ೧೭೪). ಇದನ್ನು ವಿಶದಪಡಿಸದೆ ಸಂಕ್ಷಿಪ್ತವಾಗಿ ನುಡಿದಿದ್ದಾರೆ. ಅವರ ಆಶಯ ಹೀಗೆ– ಧಾತುವಿಗೆ 'ಇಸು' ಪ್ರತ್ಯಯವನ್ನು ಪ್ರೇರಣಾರ್ಥದಲ್ಲಿ ಸೇರಿಸಿದಾಗ ಪ್ರಯೋಜಕಕರ್ತೃ, ಪ್ರಯೋಜ್ಯಕರ್ತೃ (ಪ್ರೇರ್ಯಕರ್ತೃ) ಎಂದು ಇಬ್ಬರಿಗೆ ಕರ್ತೃಸಂಜ್ಞೆ ಬರುತ್ತದೆ. ಇದಕ್ಕೆ ಉದಾಹರಣೆಯಾಗಿ ಕೆಲವು ವಾಕ್ಯಗಳನ್ನು ಈ ಲೇಖನದಲ್ಲಿ ಹಿಂದೆ ತೋರಿಸಿದ್ದೇವೆ. "ಚೈತ್ರನು ಸೇವಕನಿಂದ ತೆಂಗಿನ ಕಾಯಿಗಳನ್ನು ಕೀಳಿಸುತ್ತಾನೆ" ಎಂಬ ಉದಾಹರಣೆಯಲ್ಲಿ ವಿಶದಪಡಿಸಿ ಇದನ್ನು ತೋರಿಸಲಾಗಿದೆ. ಇಲ್ಲಿ ಸೇವಕನು ಪ್ರಯೋಜ್ಯಕರ್ತೃ (ಪ್ರೇರ್ಯಕರ್ತೃ). ಈ ಶಬ್ದಕ್ಕೆ ಕರ್ತರಿತೃತೀಯಾ ಬಂದಿದೆ ಎಂದು ಹೇಳಿದ್ದೇನೆ. ಸೇವಕನು ಪ್ರೇರ್ಯನಾದ್ದರಿಂದ ಅವನು ಪ್ರಧಾನನಲ್ಲವೆಂದೂ ಅವನ ಅಪ್ರಾಧಾನ್ಯವನ್ನು ಸೂಚಿಸುವುದಕ್ಕಾಗಿ ಅವನಲ್ಲಿ

ನಿಮಿತ್ತತ್ವವನ್ನು ಆರೋಪಮಾಡಿ ನಿಮಿತ್ತಾರ್ಥದಲ್ಲಿ (ಹೇತ್ವರ್ಥದಲ್ಲಿ) 'ಇಂ' ಪ್ರತ್ಯಯವನ್ನು ಸೇರಿಸುತ್ತೇವೆಂದೂ 'ಇಂ' ಪ್ರತ್ಯಯವು ಹೇತ್ವರ್ಥದಲ್ಲಿ ಬರುವ ಪಂಚಮಿಯೆಂದೂ ಶ್ರೀ ಸೇಡಿಯಾಪು ಅವರ ಅಭಿಪ್ರಾಯವಾಗಿರುತ್ತದೆ.

ವ್ಯಾಕರಣಶಾಸ್ತ್ರವು ಲೌಕಿಕವಾದ ಪ್ರಾಧಾನ್ಯವನ್ನಾಗಲಿ ಅಪ್ರಾಧಾನ್ಯವನ್ನಾಗಲಿ ಎಣಿಕೆಗೇ ತೆಗೆದುಕೊಳ್ಳುವುದಿಲ್ಲ. ಧಾತ್ವರ್ಥವ್ಯಾಪಾರವನ್ನು ನಡೆಸತಕ್ಕವನು ಕರ್ತೃ, ನಡೆಸದವನು ಕರ್ತೃವಲ್ಲ –ಎಂಬುದೊಂದೇ ಅದರ ನಿರ್ಣಯ. 'ತೆಂಗಿನಕಾಯಿಗಳನ್ನು ಕೀಳು' ಎಂದು ಸೇವಕನಿಗೆ ತಿಳಿಸಿ ಸ್ವಾಮಿಯಾದವನು ಮಲಗಿಕೊಳ್ಳಬಹುದು. ಮರವನ್ನು ಹತ್ತಿ ಕಾಯಿಗಳನ್ನು ಎಳೆದು ಕೀಳತಕ್ಕವನು ಸೇವಕ. ಈತನು ತೆಂಗಿನ ಕಾಯಿಗಳನ್ನು ಕೀಳುವ ಕರ್ತೃವಲ್ಲ, ಕೇವಲ ನಿಮಿತ್ತಮಾತ್ರನು –ಎಂದು ಹೇಳ ಬಹುದೆ? ಹಾಗಾದರೆ ಕರ್ತೃ ಯಾರು? ಮಲಗಿ ನಿದ್ರಿಸುತ್ತಿರುವ ಯಜಮಾನನೇ ಕರ್ತೃವೆ?

ವಸ್ತುಸ್ಥಿತಿಯನ್ನು ಹಿಂದೆ ತಿಳಿಸಿದ್ದೇನೆ. 'ಕೀಳಿಸು' ಎಂಬ ಇಸು ಪ್ರತ್ಯಯಾಂತ ವಾದ ಧಾತುವಿನ ಅರ್ಥ ಎರಡು ಕ್ರಿಯೆಗಳು. ಕೀಳುವುದು ಮೂಲಧಾತುವಿನ ಅರ್ಥ. ಪ್ರೇರಣೆ ಎಂಬ ಕ್ರಿಯೆ ಇಸು ಪ್ರತ್ಯಯದ ಅರ್ಥ. ಆದ್ದರಿಂದ ಇಲ್ಲಿ ಪ್ರಯೋಜಕ ಪ್ರಯೋಜ್ಯ ಎಂಬ ಇಬ್ಬರು ಕರ್ತೃಗಳಾಗುತ್ತಾರೆ. ಕೀಳುವ ಕ್ರಿಯೆಯೇ ಪ್ರಧಾನವಾಗಿ ನಡೆಯುವ ಕ್ರಿಯೆ. ಕೀಳಿಸುವುದು ಕೇವಲ ಆಜ್ಞಾರೂಪವಾದದ್ದು. ಕೀಳುವ ಯಾವ ಕ್ರಿಯೆಯನ್ನೂ ಪ್ರಯೋಜಕನು ಮಾಡುವುದಿಲ್ಲ. ಅವನು ನಿಮಿತ್ತ ಮಾತ್ರನೆಂದರೂ ಸಲ್ಲುವುದು. ಆದ್ದರಿಂದಲೇ **'ತತ್ಪ್ರಯೋಜಕೋ ಹೇತುಶ್ಚ'** ಎಂಬ ಸೂತ್ರದಿಂದ ಪಾಣಿನಿಯು ಪ್ರಯೋಜಕ ಕರ್ತೃವಿಗೆ ಹೇತುಸಂಜ್ಞೆಯನ್ನು ವಿಧಿಸಿದ್ದಾನೆ. ಪ್ರಯೋಜ್ಯಕರ್ತೃವು ಸಾಕ್ಷಾತ್ ಕರ್ತನಾಗಿದ್ದಾನೆ. ಪ್ರಯೋಜಕನು ಆಜ್ಞೆ ಮಾಡು ವುದರಿಂದ ಕರ್ತೃ, ಸಾಕ್ಷಾತ್‌ಕ್ರಿಯೆಗೆ ನಿಮಿತ್ತ. ಆದ್ದರಿಂದಲೇ ಹೇತುಸಂಜ್ಞೆಯೂ ಪ್ರಯೋಜಕನಿಗೆ ಪ್ರಾಪ್ತವಾಗುತ್ತದೆ. ವೈಯಾಕರಣರು ಬಹುಶ್ರುತರೂ ಬಹುಜ್ಞರೂ ಆಗಿ ಭಾಷಾತತ್ತ್ವವನ್ನೂ ಶಬ್ದಶಕ್ತಿಯ ರಹಸ್ಯವನ್ನೂ ಚೆನ್ನಾಗಿ ಪರ್ಯಾಲೋಚಿ ಸುತ್ತಾರೆಂದು ಒಪ್ಪಿಕೊಳ್ಳುವುದು ಉತ್ತಮ ಪಕ್ಷ.

ವಿಭಕ್ತಿಪಲ್ಲಟ

ಕೇಶಿರಾಜನು ನಾಮಪ್ರಕರಣದಲ್ಲಿ **'ಇಂತೀ ಪೇಳ್ದ ವಿಭಕ್ತಿಗ । ಳೆಂತುಂ ಪಲ್ಲಟಿಸುಗುಂ ಯಥೇಷ್ಟಂ ....** ಎಂದು ನುಡಿದು–

'ತೃತೀಯಾರ್ಥದೊಳ್ ಸಪ್ತಮಿಗೆ–

ಕೊಡಲಿಯಿಂ ಕಡಿದನೆಂಬಲ್ಲಿ ಕೊಡಲಿಯೊಳ್ ಕಡಿದನೆಂದಾಯ್ತು; ಗದೆಯಿಂ ಪೊಯ್ದನೆಂಬಲ್ಲಿ ಗದೆಯೊಳ್ ಪೊಯ್ದನೆಂದಾಯ್ತು, ಕಿವಿಯಿಂ ಕೇಳ್ದನೆಂಬಲ್ಲಿ ಕಿವಿ ಯೊಳ್ ಕೇಳ್ದನೆಂದಾಯ್ತು' –ಎಂದು ಬರೆದಿದ್ದಾನೆ. ಕರಣಾರ್ಥದಲ್ಲಿ ತೃತೀಯೆಗೆ ಬದಲಾಗಿ ಅಧಿಕರಣಾರ್ಥದ ಸಪ್ತಮಿಯು ಬರುತ್ತದೆಯೆಂಬುದಕ್ಕೆ ಉದಾಹರಣೆ

ಗಳಿವು. ಪಲ್ಲಟವೆಂಬ ಮಾತು ಸಂಸ್ಕೃತವ್ಯಾಕರಣದಲ್ಲಿಲ್ಲ. ವ್ಯತ್ಯಯ ಎಂಬುದುಂಟು. ವಿಭಕ್ತಿಪಲ್ಲಟವೆಂದರೆ ವಿಭಕ್ತಿವ್ಯತ್ಯಯವೇ. ಭಟ್ಟಾಕಳಂಕನೂ ಈ ವಿಭಕ್ತಿವ್ಯತ್ಯಯವನ್ನು ವಿಸ್ತಾರವಾಗಿ ಉದಾಹರಿಸುತ್ತ ತೃತೀಯಾರ್ಥದ ಸಪ್ತಮಿಗೆ 'ಕುಡುಗೋಲಿಂ ಕೊಯ್ದಂ, ಕುಡುಗೋಲೊಳ್ ಕೊಯ್ದಂ' ಎಂದು ಉದಾಹರಿಸಿದ್ದಾನೆ.

ವಿಭಕ್ತಿಪಲ್ಲಟವಾಗಲು ಕಾರಣವಾದರೂ ಏನು? ಯಾವ ವಿಭಕ್ತಿಯಾದರೂ ಕಾರಣವಿಲ್ಲದೆ ಬರಲಾರದು. ವಿಭಕ್ತಿಪಲ್ಲಟದ ನೆವದಿಂದ ಯಾವ ಯಾವುದೋ ಪ್ರತ್ಯಯವನ್ನು ಸೇರಿಸತೊಡಗಿದರೆ ಭಾಷೆಯು ಅವ್ಯವಸ್ಥಿತವಾಗಿ ಕುಲಗೆಟ್ಟು ಹೋಗುತ್ತದೆ. ಏಳು ವಿಭಕ್ತಿಗಳು ಬರುವ ಸ್ಥಳನನ್ನು ಯಾವ ಕಾರಣವಿದ್ದಾಗ ಯಾವ ವಿಭಕ್ತಿಯು ಬರುತ್ತದೆಂಬುದನ್ನು ವ್ಯಾಕರಣಶಾಸ್ತ್ರವು ತೋರಿಸಿಕೊಟ್ಟಿದೆ. ಒಂದು ಕ್ರಿಯೆಯಲ್ಲಿ ಅನ್ವಯಿಸುವಾಗ ಆ ಪದಾರ್ಥದಲ್ಲಿ ಎರಡು ಮೂರು ಕಾರಣಗಳು –ಎಂದರೆ ವಿಭಕ್ತಿಪ್ರಯೋಜಕಧರ್ಮಗಳು ಸೇರಿಕೊಂಡಿರಬಹುದು. ಲೋಕಪ್ರಸಿದ್ಧಿಯು ಯಾವುದೋ ಒಂದು ಕಾರಣಧರ್ಮಕ್ಕಿರುತ್ತದೆ. ಪ್ರಯೋಗಿಸತಕ್ಕವನು ಇನ್ನೊಂದು ಕಾರಣಧರ್ಮವನ್ನು ಪುರಸ್ಕರಿಸಿ ಅದಕ್ಕೆ ಯೋಗ್ಯವಾದ ವಿಭಕ್ತಿಯನ್ನು ಸೇರಿಸುತ್ತಾನೆ. ಆಗ ವಿಭಕ್ತಿಪಲ್ಲಟವಾಗುತ್ತದೆ. ಇದನ್ನೇ ಸಂಸ್ಕೃತವ್ಯಾಕರಣದಲ್ಲಿ "ವಿವಕ್ಷಾತಃ ಕಾರಕಾಣಿ ಭವಂತಿ" ಎನ್ನುತ್ತಾರೆ. ವಕ್ತೃವಿನ ಇಚ್ಛೆಗನುಗುಣವಾಗಿ ಕಾರಕಗಳು ಬೇರೆಬೇರೆಯಾಗ ಬಹುದು –ಎಂದು ಅದರ ತಾತ್ಪರ್ಯ. ಒಂದೆರಡು ಉದಾಹರಣೆಗಳಲ್ಲಿ ಇದನ್ನು ಸ್ಪಷ್ಟಪಡಿಸಬಹುದು–

೧. 'ಕೊಡಲಿಯಿಂದ ಮರವನ್ನು ಕಡಿಯುತ್ತಾನೆ.' ಕೊಡಲಿಯು ಕಡಿಯುವ ಕ್ರಿಯೆಗೆ ಕರಣವೆಂಬುದು ಪ್ರಸಿದ್ಧವಾದದ್ದು. ಕೊಡಲಿಯಲ್ಲಿರುವ ಕ್ರಿಯೆಯನ್ನೇ ಪ್ರಧಾನವಾಗಿ ಭಾವಿಸಿ ಅದನ್ನೇ ಧಾತ್ವರ್ಥವ್ಯಾಪಾರವೆಂದು ವಿವಕ್ಷೆ ಮಾಡಬಹುದು. ಆಗ ಕೊಡಲಿಯು ಕರ್ತೃವಾಗಿ 'ಕೊಡಲಿಯು ಮರವನ್ನು ಕಡಿಯುತ್ತದೆ' ಎಂಬ ಪ್ರಯೋಗ ಬರುತ್ತದೆ. ಇಲ್ಲಿ ತೃತೀಯೆಗೆ ಬದಲಾಗಿ ಪ್ರಥಮಾ ಬಂದಂತಾಯಿತು.

೨. ಕೊಡಲಿಯಲ್ಲಿರುವ ಕ್ರಿಯೆಗೆ ಕೊಡಲಿಯು ಅಧಿಕರಣ. ಕೊಡಲಿಯ ಸಾಧಕತಮತ್ವವನ್ನು ಕಡೆಗಣಿಸಿ ಅಧಿಕರಣತ್ವವನ್ನು ಮುಂದಿಟ್ಟುಕೊಂಡಾಗ ಕೊಡಲಿಯಲ್ಲಿ ಕಡಿಯುತ್ತಾನೆ ಎಂದು ಸಪ್ತಮೀ ಬರುತ್ತದೆ.

ಈಗ ಕುಕ್ಕರ್ ಎಂಬ ಪಾತ್ರೆ ಬಂದಿರುವುದರಿಂದ ಅಡುಗೆ ಮಾಡುವುದು ಸುಲಭವೆನಿಸಿದೆ. ಬೇಯಿಸಬೇಕಾದ ಅಕ್ಕಿ, ಬೇಳೆ –ಮೊದಲಾದುದಕ್ಕೆ ಅದು ಅಧಿಕರಣವೆಂದು ಪ್ರಸಿದ್ಧಿ ಇದೆ. ಆದ್ದರಿಂದ 'ಪಾತ್ರೆಯಲ್ಲಿ ಅಡುಗೆ ಮಾಡುತ್ತಾನೆ ಅಥವಾ ಬೇಯಿಸುತ್ತಾನೆ' ಎಂದು ಹೇಳುವುದು ಸಹಜವಾದ ಪ್ರಯೋಗ. ಕುಕ್ಕರ್ ಪಾತ್ರೆಗೇ ಕರ್ತೃತ್ವವನ್ನು ಆರೋಪಿಸಿದಾಗ 'ಕುಕ್ಕರ್ ಪಾತ್ರೆಯು ಅಡುಗೆ ಮಾಡುತ್ತದೆ ಅಥವಾ ಬೇಯಿಸುತ್ತದೆ' ಎಂಬ ಪ್ರಯೋಗವೂ ಬರಬಹುದು. ಇಲ್ಲಿ ಸಪ್ತಮಿಗೆ ಬದಲಾಗಿ ಪ್ರಥಮಾ ಬಂದಿದೆ.

ಸಂಸ್ಕೃತದಲ್ಲಿ ಕರ್ಮವೂ ಕರ್ತೃವಾಗುವುದುಂಟು. 'ಓದನಃ ಪಚ್ಯತೇ' ಎನ್ನುವುದು ಕರ್ಮಕರ್ತರಿ ಪ್ರಯೋಗ. ಒಲೆಯ ಮೇಲಿಟ್ಟರೆ ಅಕ್ಕಿಯು ತಾನಾಗಿ ಅನ್ನವಾಗಿ ಬಿಡುತ್ತದೆ, ಕಷ್ಟವೇನೂ ಇಲ್ಲ –ಎಂದು ಅಭಿಪ್ರಾಯ. ಕನ್ನಡದಲ್ಲಿ ಈ ಬಗೆಯ ಪ್ರಯೋಗವಿರಲಾರದು. ಸಂಪ್ರದಾನವೂ ಅಪಾದಾನವೂ ತಮ್ಮ ಸ್ವರೂಪ ವನ್ನು ಬದಲಾಯಿಸಿ ಕಾರಕಾಂತರವಾಗುವುದಿಲ್ಲ.

ತೃತೀಯಾರ್ಥದಲ್ಲಿ ಸಪ್ತಮಿಯ ಬಳಕೆ ವಿಶೇಷವಾಗಿ ಕಂಡುಬರುವುದು ನಿಜವಾದರೂ, ಅಷ್ಟೇ ಪ್ರಮಾಣದಲ್ಲಿ ತೃತೀಯೆಯ ಬಳಕೆಯೂ ಇದೆಯೆಂಬುದೂ ನಿಜವೇ. ಅಧಿಕರಣಾರ್ಥದಲ್ಲಿ ಸಪ್ತಮಿಯೇ ಸರ್ವತ್ರ ಪ್ರಯುಕ್ತವಾಗುತ್ತದೆ. ವಿವಕ್ಷಾವಶದಿಂದ 'ಪಾತ್ರೆಯು ಅಡುಗೆ ಮಾಡುತ್ತದೆ' ಎಂಬ ಪ್ರಯೋಗದಲ್ಲಿ ಪಾತ್ರೆಯು ಕರ್ತೃವೇ ಹೊರತು ಅಧಿಕರಣವಲ್ಲ. ಆಗ ಅಧಿಕರಣಾರ್ಥವು ತೋರುವುದೇ ಇಲ್ಲ. ವಿಭಕ್ತಿಪಲ್ಲಟವಾದಾಗಲೂ ಅಧಿಕರಣಾರ್ಥದಲ್ಲಿ ಇನ್ನಾವ ವಿಭಕ್ತಿಯೂ ಬರುವುದಿಲ್ಲ. ಏವಂ ಚ ಅಧಿಕರಣಾರ್ಥವು ಸಪ್ತಮಿಗೆ ಮೀಸಲಾಗಿ ಸಪ್ತಮಿಯೇ ಅದನ್ನು ತಿಳಿಸಲು ಸಮರ್ಥವೆಂದಾಗ ಸಪ್ತಮಿಗೆ ಸಹಜವಾದ ಅರ್ಥ ಅಧಿಕರಣವೇ ಹೊರತು ಕರಣವಲ್ಲ, ತೃತೀಯಾರ್ಥವಲ್ಲ ಎಂದು ನಿರಾಬಾಧವಾಗಿ ಸಿದ್ಧವಾಗುತ್ತದೆ. ತೃತೀಯಾರ್ಥವು ಸಹಜವಾಗಿ ಒಂದು ಕಾಲದಲ್ಲಿ ಸಪ್ತಮಿಗೆ ಸೇರಿತ್ತು ಎಂಬ ಮಾತು ಕಲ್ಪನಾಪ್ರಪಂಚಕ್ಕೆ ಸೇರಿಹೋಗುತ್ತದೆ.

"ಕನ್ನಡದಲ್ಲಿ ಪಂಚಮೀವಿಭಕ್ತಿ ಇದೆಯೇ ಹೊರತು ತೃತೀಯಾವಿಭಕ್ತಿ ಇಲ್ಲ. ತೃತೀಯಾವಿಭಕ್ತಿಯ ಅರ್ಥವನ್ನು ಹೇತ್ವರ್ಥದಲ್ಲಿ ಬರುವ ಪಂಚಮಿಯೇ ನಿರ್ವಹಿಸಬಲ್ಲುದು" ಎಂಬುದು ಶ್ರೀ ಸೇಡಿಯಾಪು ಕೃಷ್ಣಭಟ್ಟರ ಪ್ರಬಂಧದ ಸಾರವಾಗಿದೆ. ಅದಕ್ಕಾಗಿ ಹುಟ್ಟಿದ ಈ ವಾದದ ಗೊಂದಲಕ್ಕೆ ಉಭಯತ್ರ ಬರುವ 'ಇಂದ' ಎಂಬ ಪ್ರತ್ಯಯವು ಏಕಾಕೃತಿಯಲ್ಲಿರುವುದೇ ಕಾರಣವಾಗಿರುತ್ತದೆ. ವಿಭಿನ್ನಾಕೃತಿಯ ಎರಡು ಪ್ರತ್ಯಯಗಳಿದ್ದಿದ್ದರೆ ಈ ವಾದವು ಹುಟ್ಟುತ್ತಲೇ ಇರಲಿಲ್ಲ. ಆದರೆ ಒಂದೇ ಆಕೃತಿಯ ಎರಡು ಪ್ರತ್ಯಯಗಳಿದ್ದು ಒಂದು ಪಂಚಮಿಯೂ ಇನ್ನೊಂದು ತೃತೀಯೆಯೂ ಆಗಬಾರದೆ? ಆಕೃತಿ ಒಂದೇ ಆದ್ದರಿಂದ ಪ್ರತ್ಯಯವಿರುವುದೂ ಒಂದೇ ಎಂಬ ಆಗ್ರಹಕ್ಕೆ ಕಾರಣವೇನು? ಸಂಸ್ಕೃತದಲ್ಲಿ ಒಂದೇ ಆಕೃತಿಯಲ್ಲಿ ಅನೇಕವಿಭಿನ್ನ ಪ್ರತ್ಯಯಗಳಿವೆ. ಪ್ರಥಮಾ ದ್ವಿತೀಯಾಗಳ ಬಹುವಚನ ಪ್ರತ್ಯಯಗಳೂ ಪಂಚಮೀ ಷಷ್ಠೀವಿಭಕ್ತಿಗಳ ಏಕವಚನವೂ 'ಅಸ್' ಎಂಬ ಒಂದೇ ಆಕೃತಿಯಲ್ಲಿವೆ. ಒಂದೇ ಪ್ರತ್ಯಯವೆಂದಾದರೆ ಅದಕ್ಕೆ ಇಷ್ಟು ಅರ್ಥಗಳಿವೆ ಎಂದು ಹೇಳಬೇಕಾದೀತು. 'ರಾಮಯೋಃ' ಇದು ಷಷ್ಠೀ ದ್ವಿವಚನಾಂತವೂ, ಸಪ್ತಮೀ ದ್ವಿವಚನಾಂತವೂ ಆಗಿದೆ. ಓಸ್ ಎಂಬುದು ಒಂದೇ ಆಕೃತಿಯ ಪ್ರತ್ಯಯ.

ಒಂದು ಶಬ್ದಕ್ಕೆ ಅನೇಕಾರ್ಥಗಳಿವೆಯೆಂದು ಅಮರಕೋಶ ಮುಂತಾದ ಕೋಶಗಳು ತಿಳಿಸುತ್ತವೆ. ಕನ್ನಡದಲ್ಲಿ ಐದು ಅರ್ಥಗಳ ವರೆಗಿರುವ ಶಬ್ದಗಳನ್ನು ಕೇಶಿರಾಜನು ಸಂಗ್ರಹಿಸಿ ಹೇಳಿದ್ದಾನೆ. ಅಲ್ಲಿಯೂ ಸಹ ಅರ್ಥಭೇದದಿಂದ ಶಬ್ದಗಳೂ

ವಿಭಿನ್ನವಾದವೆಂದು ತಿಳಿಯಬೇಕು. 'ಅರ್ಥಭೇದಾತ್ ಶಬ್ದಭೇದಃ' ಎಂಬ ನ್ಯಾಯವು ಸರ್ವತ್ರ ಅನ್ವಯಿಸತಕ್ಕದ್ದು.

ಯುವತಿ –ಇಲ್ಲಿ 'ತಿ'ಯು ತದ್ಧಿತಪ್ರತ್ಯಯ.
ಸ್ತುತಿ, ಮತಿ –ಇಲ್ಲಿ 'ತಿ'ಯು ಕೃತ್‌ಪ್ರತ್ಯಯ.
ತಾರುಣ್ಯ –ಇಲ್ಲಿ ಭಾವಾರ್ಥದ ಷ್ಯಞ್.
ಕಾರುಣ್ಯ –ಇಲ್ಲಿ ಸ್ವಾರ್ಥದಲ್ಲಿಯೇ ಬಂದ ಷ್ಯಞ್.

ಭವಿತಾ, ಭವಿತಾರೌ, ಭವಿತಾರಃ –ಇವು ಭವಿತೃಶಬ್ದದ ಸುಬಂತಗಳೂ ಹೌದು, ಭೂಧಾತುವಿಗೆ ಲುಟ್ ಬಂದಾಗಿನ ತಿಙಂತಗಳೂ ಹೌದು. ಇದೇ ನ್ಯಾಯವೇ ಕನ್ನಡಕ್ಕೂ ಅನ್ವಯಿಸುತ್ತದೆ. 'ಇಂ' ಎಂಬುದು ಸ್ವತಂತ್ರವಾದ ಪಂಚಮೀವಿಭಕ್ತಿಯೂ ಹೌದು; ಸ್ವತಂತ್ರವಾದ ತೃತೀಯಾವಿಭಕ್ತಿಯೂ ಹೌದು ಎಂದು ಅಂಗೀಕರಿಸುವುದು ನ್ಯಾಯಸಂಮತವಾಗಿದೆ.

ನೃಪತುಂಗನು ಕ್ರಿ.ಶ. ೯ನೆಯ ಶತಮಾನದವನು. ಅವನು ತನ್ನ ಕವಿರಾಜ ಮಾರ್ಗದಲ್ಲಿ 'ಕಾರಕಗಳಾರು....... ವಿಭಕ್ತಿಗಳೇಳು' ಎಂದು ನುಡಿದು ತೃತೀಯಾ ವಿಭಕ್ತಿಯನ್ನು ಅಂಗೀಕರಿಸಿದ್ದಾನೆ. ಅವನಿಗಿಂತ ಬಹುಕಾಲ ಪೂರ್ವದಲ್ಲಿಯೇ ತೃತೀಯಾ ಮತ್ತು ಪಂಚಮೀವಿಭಕ್ತಿಗಳ ಅಸ್ತಿತ್ವವು ಸ್ಥಿರವಾಗಿ ನೆಲೆಸಿತ್ತೆಂಬುದು ಅದರಿಂದ ಗೊತ್ತಾಗುತ್ತದೆ. ಕೇಶಿರಾಜನ ಮತದಂತೆ ಇಂ, ಇಂದಂ, ಇಂದೆ, ದೆ –ಇವಿಷ್ಟು ತೃತೀಯಾವಿಭಕ್ತಿಗಳು. ಪಂಚಮೀವಿಭಕ್ತಿ ಅತ್(ಅ), ಎರಡರಿಂ, ಮೂರರಿಂ –ಎಂಬಲ್ಲಿ 'ಇಂ' ಪ್ರತ್ಯಯಕ್ಕೆ 'ಅರ್' ಆಗಮವು ಬರುವಂತೆ, ಪಂಚಮಿಯಲ್ಲಿ 'ಅ' ಪ್ರತ್ಯಯಕ್ಕೆ 'ಅತ್ತಣ್' ಎಂಬ ಆಗಮವು ಬಂದು 'ಇಂ' ಎಂಬುದು ಸೇರಿ 'ಅತ್ತಣಿಂ' ಎಂದಾಗುವುದೆಂದು ಆತನು ಬರೆದಿದ್ದಾನೆ. ನೋಡಿ–

ಅತ್ತಣಿನೆಂದು ನಿಮಿರ್ಚುವ
ರತ್ತೆಂದಾಗಿರ್ದ ಪಂಚಮಿಯನಲ್ಲಿ ಕೆಲರ್ ।
ಪತ್ತಿಸುವರ್ ಮೂದೆರನಂ
ಪೆತ್ತ ತೃತೀಯೆಯನೆಕಾರನುಂ ಪರಿಹರಿಪರ್ ॥ – (ಸೂ. ೧೨೬)

ಈ ಸೂತ್ರದ ಪ್ರಕಾರ 'ಅತ್ತಣಿಂ, ಅತ್ತಣಿಂದಂ, ಅತ್ತಣಿಂದೆ' ಎಂಬ ಮೂರು ರೂಪಗಳೂ ಪಂಚಮಿಗುಂಟು. 'ಅತ್ತಣೆ' ಎಂಬ ರೂಪವು ಮಾತ್ರ ಪಂಚಮಿಗಿಲ್ಲ. ಒಟ್ಟಿನಲ್ಲಿ 'ಅ' ಎಂಬ ಪಂಚಮಿಗೆ ತೃತೀಯಾಪ್ರತ್ಯಯಗಳೇ ಪರದಲ್ಲಿ ಆಗಮಗಳಾಗಿ ಬರುತ್ತವೆಯೆಂದು ಹೇಳಿದಂತಾಯಿತು. ಕೇಶಿರಾಜನ ಈ ಹೇಳಿಕೆಯಲ್ಲಿ ತೃತೀಯೆ ಯಿಂದಲೇ ಪಂಚಮೀ ಹುಟ್ಟಿದೆಯೆಂಬ ವಾದಕ್ಕೆ ಬೀಜ ಉಂಟು. ಈ ವಾದಗಳ ಗೊಂದಲವನ್ನು ಭಾಷಾಶಾಸ್ತ್ರವು ಹುಟ್ಟಿಹಾಕುತ್ತದೆ. ವ್ಯಾಕರಣಶಾಸ್ತ್ರವು ವಸ್ತುಸ್ಥಿತಿ ಯನ್ನು ಯಥಾರ್ಥವಾಗಿ ತಿಳಿಸಿ ಶಾಂತವಾಗುತ್ತದೆ.

'ಸಹಭಾವವಿದ್ದಾಗ ತೃತೀಯೆ, ವಿಶ್ಲೇಷವಿದ್ದಾಗ ಪಂಚಮಿ' ಎಂಬ ಹೇಳಿಕೆಯೂ ನಿರಪವಾದವಲ್ಲ. 'ತನ್ನ ಕೈಯಿಂದ ಹಣವನ್ನು ಕೊಟ್ಟನು, ಕಾಲಿಂದ ಚೆಂಡನ್ನು

ಹಾರಿಸಿದನು, ಕಾಲಿಂದ ಕಲ್ಲನ್ನು ಮೀಟಿದನು, ಕೈಯಿಂದ ಎಸೆದನು' –ಮುಂತಾದ ಕಡೆ ಸಹಭಾವವಿಲ್ಲದಿದ್ದರೂ ತೃತೀಯೆ ಬಂದಿದೆ. ವಿಶ್ಲೇಷವಿದ್ದರೂ ಪಂಚಮೀ ಬಂದಿಲ್ಲ. 'ಗ್ರಾಮವನ್ನು ತ್ಯಜಿಸಿದನು, ಮನೆಯನ್ನು ಬಿಟ್ಟನು, ಮಡದಿಯನ್ನು ತೊರೆದನು' –ಮುಂತಾದ ಕಡೆ ವಿಶ್ಲೇಷವಿದ್ದರೂ ಪಂಚಮೀ ಬಂದಿಲ್ಲ. ದ್ವಿತೀಯಾವಿಭಕ್ತಿ ಬಂದಿದೆ. ಈ ಸಮಸ್ಯೆಗಳನ್ನು ವ್ಯಾಕರಣಶಾಸ್ತ್ರವು ಮಾತ್ರ ಪರಿಹರಿಸಬಲ್ಲದು.

ಒಂದು ವಾಕ್ಯದಲ್ಲಿ ಕ್ರಿಯೆಯು ಪ್ರಧಾನವಾದದ್ದು. ಕ್ರಿಯೆಯಿಲ್ಲದೆ ವಾಕ್ಯವಿಲ್ಲ. ಕ್ರಿಯೆಯನ್ನು ನಡೆಸತಕ್ಕವನು ಕರ್ತೃ. ನಡೆಸುವಲ್ಲಿ ಇತರ ಕಾರಕಗಳಿಗಿಂತ ಅಧಿಕವಾಗಿ ನೆರವಾಗತಕ್ಕದ್ದು ಕರಣ. ಕರ್ತೃವು ರಾಜನಿದ್ದಂತೆ, ಕರಣವು ಮಂತ್ರಿ ಇದ್ದಂತೆ. ಕನ್ನಡದಲ್ಲಿ ತೃತೀಯಾವಿಭಕ್ತಿಯೇ ಇಲ್ಲವೆಂದಾದರೆ ಕರ್ತೃಕರಣಗಳನ್ನು ಬೋಧಿಸುವ ವಿಭಕ್ತಿಯೇ ಇಲ್ಲವೆಂದಾಗುತ್ತದೆ. ಕರ್ತೃತ್ವಶಕ್ತಿಯನ್ನೂ ಕರಣತ್ವಶಕ್ತಿಯನ್ನೂ ಅಭಿವ್ಯಕ್ತಿಗೊಳಿಸುವ ಬೇರೆ ಯಾವ ವಿಭಕ್ತಿಪ್ರತ್ಯಯವೂ (ಸುಪ್) ಇಲ್ಲ. ಕರ್ತರಿಪ್ರಯೋಗದಲ್ಲಿ ಆಖ್ಯಾತಪ್ರತ್ಯಯವು ದೂರದಲ್ಲಿದ್ದು ಕರ್ತೃವನ್ನು ಸೂಚಿಸಬಲ್ಲುದೆಂದು ಒಪ್ಪಿದರೂ ಕರಣತ್ವವನ್ನು ಸೂಚಿಸುವ ದೂರದ ಪ್ರತ್ಯಯವಂತೂ ಇರುವುದಿಲ್ಲ. ಕರ್ತೃಕರಣಗಳೆರಡನ್ನೂ ಕಾರಕಗಳ ಪಟ್ಟಿಯಿಂದ ಅಳಿಸಿದಾಗ ಕಾರಕಗಳ ಸಂಖ್ಯೆ ಮೂರಕ್ಕೆ ಇಳಿಯುತ್ತದೆ. ಕನ್ನಡವು ಪ್ರಭು ಮಂತ್ರಿಗಳಿಲ್ಲದ ಭಾಷಾರಾಜ್ಯವಾಗುತ್ತದೆ!

ಬೆಳೆಯುವ ಸ್ವಭಾವದ ಭಾಷೆಯಲ್ಲಿ ನೂತನಾರ್ಥದ ಅಭಿವ್ಯಕ್ತಿಗಾಗಿ ಹೊಸದು ಹುಟ್ಟುವುದೇ ಹೊರತು ಹಳೆಯದು ನಾಶವಾಗದು. ಪಂಚಮಿಯು ಕ್ರಮವಾಗಿ ತೃತೀಯೆಯ ಸ್ಥಾನವನ್ನು ಆಕ್ರಮಿಸಿಕೊಂಡಿತು ಎಂದಾಗ ಮೊದಲು ತೃತೀಯೆ ಇತ್ತು ಎಂಬುದನ್ನು ಒಪ್ಪಿಕೊಂಡಂತೆಯೇ ಆಗುತ್ತದೆ.

ಕನ್ನಡದ ಖ್ಯಾತವಿದ್ವಾಂಸರಾದ ದಿ। ಶ್ರೀ ಮುಳಿಯ ತಿಮ್ಮಪ್ಪಯ್ಯನವರು ತಮ್ಮ ಕವಿರಾಜಮಾರ್ಗವಿವೇಕದಲ್ಲಿ ಕಾರಕವಿಭಕ್ತಿಗಳ ವಿಷಯವಾಗಿ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕವಿರಾಜಮಾರ್ಗವನ್ನು ಬರೆದವನು ನೃಪತುಂಗನೋ ಶ್ರೀವಿಜಯನೋ ಆಗಿರಬಹುದು. ಪ್ರಕೃತದಲ್ಲಿ ನೃಪತುಂಗನೆಂದು ತಿಳಿಯೋಣ. ಅವನದು ಅಲಂಕಾರಗ್ರಂಥ, ವ್ಯಾಕರಣಶಾಸ್ತ್ರವಲ್ಲ. ತನ್ನ ಗ್ರಂಥದಲ್ಲಿ ಕಾರಕದೋಷಗಳನ್ನು ಹೇಳುವ ಪ್ರಸಂಗದಲ್ಲಿ ಮೊದಲು ಕಾರಕಗಳನ್ನೂ ವಿಭಕ್ತಿಗಳನ್ನು ಅನುವಾದಿಸುವಾಗ ಈ ಪದ್ಯ ಬಂದಿದೆ–

> ಕಾರಕಮಾರು ಕರ್ಮಕರಣಾದಿಕದಿಂ ಪ್ರಥಮಾದಿ ಭೇದ ನಿ
> ರ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇಳೆನಿಕ್ಕುಮಾ ।
> ಚಾರುಗುಣೋದಯುಂ ವಚನಮೇಕ ಬಹುಕ್ರಮದಿಂದೆರಳ್ತೆರ
> ಕ್ಕಾರಯೆ ಪೇಳ್ವೆನಿಂತವರ ಜಾತಿವಿಭಾಗಗುಣಂಗಳಂ ॥ – (೧ - ೧೧೩)

ಇದಕ್ಕೆ ಉದಾಹರಣೆಯಾಗಿ ಮುಂದಿನ ಪದ್ಯವಿದೆ–

> ನರಪತಿ ಬಂದನಾ ನೃಪನನಳ್ತಿಯೆ ಕಾಣ್ಬುದು ತನ್ನರೇಂದ್ರನಿಂ
> ಧರಣಿ ಸನಾಥೆ ಭೂಪತಿಗೆ ಕಪ್ಪವನೀಗವನೀಶನತ್ತಣಂ ।

ಪರಿಭವಮಂ ಕಳಲ್ಚುವುದಧೀಶ್ವರನಾ ದಯೆ ಸಾಲ್ಗುಮಾ ಮಹೀ
ಶ್ವರನೊಳಿದಪ್ಪದೆಂಬುದಿದು ಕಾರಕಯುಕ್ತವಿಭಕ್ತ್ಯನುಕ್ರಮಂ ॥

— (೧ - ೧೧೪)

ಆರು ಕಾರಕಗಳು, ಏಳು ವಿಭಕ್ತಿಗಳು –ಎಂದಾಗ ಒಂದು ಕಾರಕವಿಭಕ್ತಿಯಲ್ಲವೆಂಬುದು ಸ್ಪಷ್ಟವಾಗುತ್ತದೆ. ಅದು ಯಾವುದು? –ಎಂಬುದನ್ನು ನಿರ್ಧರಿಸುವುದಕ್ಕಾಗಿ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಒಂದು ವಾದವನ್ನೇ ಸೃಷ್ಟಿಸಿದ್ದಾರೆ. ಅವರ ಅಭಿಪ್ರಾಯ (ಕವಿರಾಜಮಾರ್ಗವಿವೇಕ, ಪು. ೧೪೧–೧೪೯) ಹೀಗಿದೆ– ಮಾರ್ಗಕಾರನು ಮೊದಲು ಹೇಳಬೇಕಾಗಿದ್ದ ಕರ್ತೃವನ್ನೇ ಬಿಟ್ಟು 'ಕರ್ಮಕರಣಾದಿಕದಿಂ' ಎಂದು ಹೇಳಿರುವುದರಿಂದ ಕರ್ತೃವು ಕಾರಕವಲ್ಲವೆಂದು ಆತನ ಅಭಿಪ್ರಾಯ. (ಪು. ೧೪೫) ಆದ್ದರಿಂದ ಕರ್ತೃವನ್ನು ಹೇಳುವ ಪ್ರಥಮೆಯು ಕಾರಕ ವಿಭಕ್ತಿಯಲ್ಲ. 'ನರಪತಿ ಬಂದನ್' ಎಂಬಲ್ಲಿ ನರಪತಿ ಕರ್ತೃ. ಆದರೆ ಕಾರಕವಲ್ಲ. ಇದಕ್ಕೆ ಇನ್ನೊಂದು ಯುಕ್ತಿ– 'ಕರೋತೀತಿ ಕರ್ತಾ' ಎಂದು ಕರ್ತೃಶಬ್ದದ ನಿಷ್ಪತ್ತಿ. (ಪು. ೧೪೫) 'ಕಾರಯತೀತಿ ಕಾರಕಂ' ಎಂದು ಕಾರಕಶಬ್ದದ ವ್ಯುತ್ಪತ್ತಿ. (ಪು. ೧೪೨) ಆದ್ದರಿಂದ ಮಾಡತಕ್ಕವನು ಕಾರಕನಲ್ಲ, ಮಾಡಿಸತಕ್ಕವನು ಕಾರಕ. 'ನರಪತಿ ಬಂದನ್' ಎಂಬಲ್ಲಿ ಬರುವ ಕ್ರಿಯೆಯನ್ನು ನರಪತಿ ಮಾಡುತ್ತಾನೆಯೇ ಹೊರತು ಮಾಡಿಸುವುದಿಲ್ಲ. ಕರ್ತನು ಕಾರಕನಲ್ಲವಾದ್ದರಿಂದ ಅಲ್ಲಿ ಬಂದಿರುವ ಪ್ರಥಮಾ ಕಾರಕ ವಿಭಕ್ತಿಯಲ್ಲ. (ಪು. ೧೪೫)

ಕನ್ನಡ ವೈಯಾಕರಣರು ಕರ್ತೃವನ್ನು ಕಾರಕವೆಂದು ಗಣಿಸಿದ್ದಾರಲ್ಲ –ಎಂಬ ಶಂಕೆಗೆ ಅವರೆಲ್ಲರೂ ಸಂಸ್ಕೃತವ್ಯಾಕರಣವನ್ನು ಅನುಸರಿಸಿ ಹಾಗೆ ಹೇಳಿದ್ದಾರೆ ಎಂದು ಉತ್ತರ. ಕರ್ತೃವು ಕಾರಕವಲ್ಲವೆಂದು ಕನ್ನಡದಲ್ಲಿ ಯಾರು ಹೇಳಿದ್ದಾರೆ? ಎಂಬ ಪ್ರಶ್ನೆಗೆ ನೃಪತುಂಗನು ಕರ್ತೃವನ್ನು ಮೇಲ್ಕಂಡ ಪದ್ಯದಲ್ಲಿ ಹೇಳದೆ ಬಿಟ್ಟಿರುವುದೇ ಪ್ರಮಾಣ ಎನ್ನಬೇಕಾಗುತ್ತದೆ. 'ಕಾರಯತೀತಿ ಕಾರಕಂ' (ಮಾಡಿಸತಕ್ಕವನು ಕಾರಕ) ಎಂಬ ತೀರ್ಪಿಗೆ ಆ ರೀತಿಯಲ್ಲಿ ಕಾರಕವೆಂಬ ರೂಪಸಿದ್ಧಿಯಾಗುತ್ತದೆಯೆಂಬದೇ ಪ್ರಮಾಣ.

ಆರು ಕಾರಕಗಳೆಂದು ಮಾರ್ಗಕಾರನು ಹೇಳಿರುವುದರಿಂದ ಸಂಖ್ಯಾಪೂರ್ತಿಗಾಗಿ ಷಷ್ಠಿಯು ಕಾರಕವಿಭಕ್ತಿಯೆಂದು ಒಪ್ಪಬೇಕು.

'ಅಧೀಶ್ವರನಾ ದಯೆ ಸಾಲ್ಗುಂ' ಎಂಬಲ್ಲಿ ಷಷ್ಠಿಗೆ ಕಾರಕತ್ವವನ್ನು ಹೀಗೆ ಸಾಧಿಸುತ್ತಾರೆ:

"ಅಧೀಶ್ವರನಾ ಎಂಬ ಪದವು ಆ ಸ್ವಸಂಬಂಧಿಯಾದ 'ದಯೆ' ಎಂಬ ಕರ್ತೃವಿನ ಮೂಲಕವಾಗಿ 'ಸಾಲ್ಗುಂ' ಎಂಬ ಭಾವನಾತ್ಮಕ ಕ್ರಿಯೆಯನ್ನು ಮಾಡಿಸುವುದಲ್ಲವೇ? ಇನ್ನೊಬ್ಬನ ದಯೆಯಾದರೆ, ಅದು 'ಸಾಲ್ಗುಂ' ಎಂಬುದಕ್ಕೆ ಕರ್ತೃವಾಗಲಾರದು" ಇತ್ಯಾದಿ. (ಪು. ೧೪೬)

ಪಂಡಿತರಾದವರು ಹೀಗೆ ಬರೆಯುವುದೂ ಉಂಟು –ಎನ್ನುವುದೇ ಅಚ್ಚರಿಯ ಸಂಗತಿ! ಈ ತಕರಾರಿಗೆ ನಾನು ಹಿಂದೆಯೇ ಉತ್ತರವನ್ನು ಬರೆದಂತಾಗಿದೆ. ಆದರೂ ವಿಷಯಶುದ್ಧಿಗಾಗಿ ಸಂಕ್ಷೇಪದಿಂದ ನಾಲ್ಕು ಮಾತುಗಳನ್ನು ಬರೆಯಬೇಕಾಯಿತು.

ಪ್ರಥಮಾ ದ್ವಿತೀಯಾ –ಎಂಬ ಸಂಖ್ಯಾನುಕ್ರಮವನ್ನು ಪಾಲಿಸುವುದಕ್ಕಾಗಿ ನೃಪತುಂಗನು ಏಳು ವಿಭಕ್ತಿಗಳನ್ನು ಹೇಳಿ ಅವುಗಳಿಗೆ ಕಾರಕಾನುಸಾರವಾಗಿ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಪ್ರಥಮಾವಿಭಕ್ತಿಯನ್ನು ಯಾವ ಕಾರಕಾರ್ಥ ದಲ್ಲಿಯೂ ವಿಧಿಸಿಲ್ಲವಾದ್ದರಿಂದ ಅದರ ಕಾರಕವನ್ನು ಹೆಸರಿಸದೆ, ದ್ವಿತೀಯಾ ವಿಭಕ್ತಿಯು ಬರುವ ಕಾರಕವಾದ ಕರ್ಮದಿಂದ ಆರಂಭಿಸಿ, ಕರ್ಮಕರಣಾದಿಕದಿಂ ಎಂದು ನುಡಿದಿದ್ದಾನೆ. ಹಾಗೆ ಹೇಳಿರುವುದೇ ಸಮಂಜಸ. ಮೊದಲು ಕರ್ತೃವನ್ನು ಏಕೆ ಹೇಳಬೇಕು? ಕರ್ತ್ರರ್ಥದಲ್ಲಿ ಪ್ರಥಮಾ ಬರುತ್ತದೆಯೆಂದು ಯಾವ ವೈಯಾಕರಣನೂ ಹೇಳಿಲ್ಲ. ಪ್ರಾತಿಪದಿಕಾರ್ಥದಲ್ಲಿ ಪ್ರಥಮಾ ಬರುತ್ತದೆ. ಕರ್ತ್ರರ್ಥದಲ್ಲಿ ತೃತೀಯಾ ವಿಭಕ್ತಿಯನ್ನು ಸಮಸ್ತ ವೈಯಾಕರಣರೂ ಹೇಳಿದ್ದಾರೆ. ಕರಣಾರ್ಥದಲ್ಲಿಯೂ ತೃತೀಯಾ ಬರುತ್ತದೆ. 'ತನ್ನರೇಂದ್ರನಿಂ ಧರಣಿ ಸನಾಥೆ' ಎಂಬಲ್ಲಿ 'ನರೇಂದ್ರನಿಂ' ಎಂಬ ತೃತೀಯಾಂತವು ವಿವಕ್ಷಾಭೇದದಿಂದ ಕರಣವೂ ಆಗಬಹುದು. ಕರ್ತೃವೂ ಆಗಬಹುದು. ಇದನ್ನು ಹಿಂದೆ ಉಪಪಾದಿಸಿದ್ದಾಗಿದೆ. ಅಲ್ಲದೆ 'ಅಧೀಶ್ವರನಾ ದಯೆ ಸಾಲ್ಗುಂ' ಎಂಬಲ್ಲಿ ಕರ್ತ್ರರ್ಥದಲ್ಲಿ ಷಷ್ಠೀ ಬಂದಿದೆ. ಸಂಬಂಧಸಾಮಾನ್ಯಷಷ್ಠಿಗೂ ಅದೇ ಉದಾಹರಣೆ. ಇದನ್ನು ಮುಂದೆ ವಿವರಿಸಲಾಗುವುದು.

'ಕರೋತೀತಿ ಕಾರಕಂ' ಎಂದು ವ್ಯಾಕರಣಸಂಮತವಾದ ವ್ಯುತ್ಪತ್ತಿ. 'ಣ್ವುಲ್ ತೃಚೌ' ಎಂಬ ಸೂತ್ರದಿಂದ ಣ್ವುಲ್ ಬಂದರೆ ಕಾರಕ ಎಂದೂ ತೃಚ್ ಬಂದರೆ ಕರ್ತೃವೆಂದೂ ಎರಡು ರೂಪಗಳಾಗುತ್ತವೆ. ಇವೆರಡೂ ಸಮಾನಾರ್ಥಕ ಶಬ್ದಗಳು. 'ಕಾರಯತೀತಿ ಕಾರಕಂ' ಎಂದು ಣಿಜಂತದಲ್ಲಿಯೂ ಕಾರಕಶಬ್ದವಿದೆ. ಆದರೆ ಅಷ್ಟೊ ದೂರ ಧಾವಿಸಲು ನಿಮಿತ್ತವೇನು? ಕರ್ತೃವೇ ಪ್ರಧಾನಕಾರಕವೆಂದೂ ಕರ್ಮಕರಣಾದಿ ಗಳು ಕರ್ತೃವಿಗೆ ಉಪಕರಿಸುವುದರಿಂದ ಔಪಚಾರಿಕವಾಗಿ ಕಾರಕವೆಂಬ ಹೆಸರನ್ನು ಪಡೆಯುತ್ತವೆಯೆಂದೂ ವ್ಯಾಕರಣಶಾಸ್ತ್ರದ ಸಿದ್ಧಾಂತ. ಇಂತಹ ಕರ್ತೃವೆಂಬ ಪ್ರಧಾನಕಾರಕವನ್ನೇ ನಿರಾಕರಿಸಿ, ಅದು ಸಂಸ್ಕೃತದಲ್ಲಿ ಕಾರಕ, ಕನ್ನಡದಲ್ಲಿ ಕಾರಕವಲ್ಲ ಎನ್ನವುದು ಯಾವ ಮಾತು? ಭಾಷೆ ಬೇರೆಯಾದರೆ ವಸ್ತುಧರ್ಮವು ಬೇರೆಯಾಗು ತ್ತದೆಯೆ? ಸಂಸ್ಕೃತದ ಕ್ಷೀರವು ಬೆಳ್ಳಗಿದ್ದರೆ ಕನ್ನಡದ ಹಾಲು ಕಪ್ಪಾಗಿಬಿಡುತ್ತದೆಯೇ?

'ಉಪಾಧ್ಯಾಯನು ಹುಡುಗನಿಂದ ಪಾಠವನ್ನು ಓದಿಸುತ್ತಾನೆ' ಎಂಬ ವಾಕ್ಯದಲ್ಲಿ ಉಪಾಧ್ಯಾಯನು ಓದುವ ಕೆಲಸವನ್ನು ಮಾಡಿಸುವುದರಿಂದ ಅವನು ಕಾರಕನಾಗುತ್ತಾನೆ. ಯಾವ ಕಾರಕ? ಕರ್ತರಿಪ್ರಯೋಗವಾದ್ದರಿಂದಲೂ ಪ್ರಥಮಾವಿಭಕ್ತಿ ಇರುವುದರಿಂದಲೂ ಉಪಾಧ್ಯಾಯನು ಕರ್ತೃವಾಗುತ್ತಾನೆ. ಇಲ್ಲಿ ಕರ್ತೃವು ಕಾರಕನಾಗಿದ್ದಾನೆ. ಪ್ರಥಮಾವಿಭಕ್ತಿಯು ಕಾರಕವಿಭಕ್ತಿ ಆಯಿತಲ್ಲವೇ? ವ್ಯಾಕರಣವು ಶಾಸ್ತ್ರ, ಕಾವ್ಯವಲ್ಲ, ಪುರಾಣವಲ್ಲ. ಮನಸ್ಸಿಗೆ ಬಂದಂತೆ ಎಳೆದರೆ ಅದು ಜಗ್ಗುವುದಿಲ್ಲ. ಕೈನೋಯುತ್ತದೆ.

'ಅಧೀಶ್ವರನಾ ದಯೆ ಸಾಲ್ಗುಂ'. ಇಲ್ಲಿ ಷಷ್ಠಿಗೆ ಕಾರಕವಿಭಕ್ತಿತ್ವವನ್ನು ತರ ಬೇಕಾಗಿದೆ. ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಅದಕ್ಕಾಗಿ "'ಅಧೀಶ್ವರನಾ' ಎಂಬ

ಪದವು ದಯೆಯೆಂಬ ಕರ್ತೃವಿನ ಮೂಲಕ ಸಾಲ್ಗುಂ ಎಂಬ ಭಾವನಾತ್ಮಕ ಕ್ರಿಯೆಯನ್ನು ಮಾಡಿಸುತ್ತದೆ''ಯಾದ್ದರಿಂದ ಕಾರಕವೆಂದು ಹೇಳುತ್ತಾರೆ (ಪು. ೧೪೬). ಇನ್ನೊಬ್ಬನ ದಯೆಯಾದರೆ ಸಾಲ್ಗುಂ ಎಂಬುದಕ್ಕೆ ಕರ್ತೃವಾಗಲಾರದು –ಎನ್ನುತ್ತಾರೆ. ಅಧೀಶ್ವರನು ಸರ್ವಶಕ್ತನಾದ್ದರಿಂದ ಅವನ ದಯೆ ಭಾವನಾತ್ಮಕವಾದ ಯಾವ ಉಪಕಾರವನ್ನೂ ಮಾಡಲು ಸಮರ್ಥವಾಗಿದೆ ಎಂದು ಅಭಿಪ್ರಾಯವಿರಬಹುದು. ಬಡವನ ದಯೆ ಕಾರಕವಾಗುವುದಿಲ್ಲವೆಂದಾಯಿತು. 'ನನ್ನ ಗುಡಿಸಲು ಸುಟ್ಟು ಹೋಯಿತು' ಎಂಬ ವಾಕ್ಯದಲ್ಲಿ ನಾನು ಬಡವನಾದ್ದರಿಂದ 'ನನ್ನ' ಎಂಬಲ್ಲಿರುವ ಷಷ್ಠೀಸಂಬಂಧವು ಬೆಂಕಿಹಚ್ಚುವ ಭಾವನಾತ್ಮಕಕ್ರಿಯೆಯನ್ನು ಯಾರಿಗೋ ಪ್ರೋತ್ಸಾಹಿಸಿ ಮಾಡಿಸಿರುವುದರಿಂದ ಕಾರಕವಾದೀತು!

ವಸ್ತುಸ್ಥಿತಿ ಇದು– ದಯೆಯೆಂಬ ಶಬ್ದವು ಭಾವಕೃದಂತ. ದಯ ಧಾತುವಿನಿಂದ ನಿಷ್ಪನ್ನವಾದ್ದರಿಂದ ದಯೆಯೆನ್ನುವುದೊಂದು ವ್ಯಾಪಾರ, ಕ್ರಿಯೆ. ಅಧೀಶ್ವರನು ಆ ಕ್ರಿಯೆಗೆ ಕರ್ತೃವಾದ್ದರಿಂದ ಕರ್ತರಿ ಷಷ್ಠಿ ಬಂದಿದೆ. '**ಕರ್ತೃಕರ್ಮಣೋಃ ಕೃತಿ**' ಎಂಬ ಪಾಣಿನಿಸೂತ್ರದಿಂದ ಕರ್ತರಿಷಷ್ಠಿ. ಇದನ್ನೇ ಭಟ್ಟಾಕಳಂಕನು '**ಕರ್ತೃಕರ್ಮಯೋಃ ಕೃತಿ ಭಾವೇ**' ಎಂಬ ಸೂತ್ರದಿಂದ ಹೇಳಿದ್ದಾನೆ. ಈ ವಿಷಯವನ್ನು ಹಿಂದೆ ಪ್ರಸ್ತಾವಿಸಿ ದ್ದಾಗಿದೆ.

ಆದರೆ ದಯೆ, ಜ್ಞಾನ, ಅಸೂಯೆ, ಕ್ರೋಧ –ಇವು ಗುಣಗಳೆಂದು ಪ್ರಸಿದ್ಧಿ ಇದೆ. ಇವು ಕ್ರಿಯೆಗಳಾಗುವುದು ಹೇಗೆ? ಎಂಬ ಪ್ರಶ್ನೆಗೆ ಉತ್ತರವನ್ನು ಶಾಸ್ತ್ರಕಾರರು ಹೇಳಿದ್ದಾರೆ. ಜ್ಞಾನವೆಂದರೆ ತಿಳಿವು. ತಿಳಿಯುತ್ತಾನೆ, ತಿಳಿದವನು –ಈ ರೀತಿ ಪ್ರಯೋಗಗಳಿವೆ. ಇವು ಕ್ರಿಯಾಪದಗಳು. ಜಾನಾತಿ, ಅಜಾನಾತ್, ಜ್ಞಾಸ್ಯತಿ –ಇತ್ಯಾದಿ ಪ್ರಯೋಗಗಳು ಸಂಸ್ಕೃತದಲ್ಲಿವೆ. ಜ್ಞಾನವನ್ನು ಕ್ರಿಯೆಯೆನ್ನುವುದು ಹೇಗೆ? ಜ್ಞಾ ಎಂಬುದು ಹೇಗೆ ಧಾತುವೆನಿಸುತ್ತದೆ? ಎಂದರೆ, ಜ್ಞಾಧಾತುವಿನ ಅರ್ಥ ಜ್ಞಾನವೆಂಬ ಗುಣವಲ್ಲ. ಜ್ಞಾನಾನುಕೂಲವ್ಯಾಪಾರವೆಂಬ ಕ್ರಿಯೆ. ಆತ್ಮಮನಃ ಸಂಯೋಗವಾದಾಗ ಜ್ಞಾನ ಹುಟ್ಟುತ್ತದೆ. ಮನಸ್ಸು ಆತ್ಮನಲ್ಲಿ ಕೂಡುವುದು ಕ್ರಿಯೆ. ಹೀಗೆಯೇ ದಯೆಯೆಂಬ ಶಬ್ದಕ್ಕೆ ಕಾರುಣ್ಯಾನುಕೂಲವ್ಯಾಪಾರ ಎಂದರ್ಥವಾದ್ದರಿಂದ ಕ್ರಿಯೆಯಾಗಬಹುದು. ಜ್ಞಾನ, ದಯೆ ಮೊದಲಾದವು ವ್ಯಾಪಾರಜನ್ಯಫಲಗಳು.

ದಯೆ ಮುಂತಾದವು ರೂಢಶಬ್ದಗಳಾದ್ದರಿಂದ ಅಧೀಶ್ವರನ ದಯೆ ಎನ್ನುವಲ್ಲಿ ಸಂಬಂಧಸಾಮಾನ್ಯ ಷಷ್ಠಿ ಎಂದೂ ಹೇಳಬಹುದು. ಮಾರ್ಗಕಾರನಿಗೆ ಉಭಯವೂ ಸಂಮತವಾಗಿರಬಹುದು. ಪ್ರಥಮಾಂತವು ಕರ್ತರಿ ಪ್ರಯೋಗದಲ್ಲಿ ಕರ್ತೃವೂ ಕರ್ಮಣಿಪ್ರಯೋಗದಲ್ಲಿ ಕರ್ಮವೂ ಆಗಿರುತ್ತದೆಯೆಂದು ಹಿಂದೆ ತೋರಿಸಲಾಗಿದೆ. ಆದರೆ ಕರ್ತೃ, ಕರ್ಮ ಎಂಬ ಪದಗಳನ್ನುಚ್ಚರಿಸಿ ಕಾರಕಾಧಿಕಾರದಲ್ಲಿ ಪ್ರಥಮೆಯನ್ನು ಹೇಳಿಲ್ಲವಾದ್ದರಿಂದ ಅದು ಕಾರಕವಿಭಕ್ತಿಯಲ್ಲವೆಂದು ಅಭಿಪ್ರಾಯ. ಪರಿಶೇಷವಾಗಿ ಕರ್ತೃಕರ್ಮಗಳನ್ನು ಬೋಧಿಸುವುದರಿಂದ ಪ್ರಥಮೆಯು ಕಾರಕವಿಭಕ್ತಿಯೆಂದೂ

ಹೇಳಿದ್ದುಂಟು. ಷಷ್ಠಿಯು ಕೃದಂತದ ಭಾವನಾಮದ ಯೋಗದಲ್ಲಿ ಕಾರಕವಿಭಕ್ತಿಯೇ. ಅನ್ಯತ್ರ ಕಾರಕವಿಭಕ್ತಿಯಲ್ಲ. ನೃಪತುಂಗನ ಹೇಳಿಕೆ ಸಮಂಜಸವಾಗಿಯೇ ಇದೆ.

ಕನ್ನಡದಲ್ಲಿ ಭಾವೇಪ್ರಯೋಗವಿಲ್ಲವೆಂಬುದು ದಿಟ. ಕನ್ನಡವೈಯಾಕರಣರು ಅದನ್ನು ಹೇಳಿಯೂ ಇಲ್ಲ. ಸಂಭಾಷಣೆಯಲ್ಲಿ ವಿರಳವಾಗಿ "ನಿಮ್ಮಿಂದ ನಗೋಣ ವಾಯಿತು, ಬರೋಣವಾಗಲಿ, ಕುಳಿತುಕೊಳ್ಳೋಣವಾಗಲಿ" ಎಂದು ಹೇಳುವು ದುಂಟು. ಇವು ಭಾವೇಪ್ರಯೋಗಗಳಲ್ಲ. ಧಾತುವಿನ ಮೇಲೆ ಭಾವಾರ್ಥದಲ್ಲಿ ಆಖ್ಯಾತಪ್ರತ್ಯಯವು (ತಿಙ್) ಬಂದರೆ ಭಾವೇ ಪ್ರಯೋಗವೆನಿಸುತ್ತದೆ. ಇವು ಕರ್ತರಿ ಪ್ರಯೋಗಗಳು. ಮೊದಲನೆಯ ಉದಾಹೃತವಾಕ್ಯದಲ್ಲಿ 'ನಗೋಣ'ವೆಂಬ ಹೊಸ ಗನ್ನಡದ ಕೃದಂತನಾಮಪದವು ಕರ್ತೃಪದ. 'ಆಯಿತು' ಎಂಬ ಕ್ರಿಯಾಪದದ ಆಗುವ ಕ್ರಿಯೆಗೆ ಅದು ಕರ್ತೃ. ಈ ಕರ್ತೃವು ಆಖ್ಯಾತದಿಂದ ಉಕ್ತವಾದ್ದರಿಂದ ಪ್ರಥಮಾ ವಿಭಕ್ತಿಯಲ್ಲಿದೆ. ನಿಮ್ಮಿಂದ ಎನ್ನುವುದು ಕರ್ತರಿ ತೃತೀಯಾಂತ. 'ನೀವು' ನಗುವ ಕ್ರಿಯೆಗೆ ಕರ್ತೃ. ಅದು ಅನುಕ್ತವಾದ್ದರಿಂದ ತೃತೀಯಾ ಬಂದಿದೆ. 'ನಗೋಣ' ಎಂಬ ಪದದಲ್ಲಿರುವ ಕೃತ್ ಪ್ರತ್ಯಯವು ಭಾವಾರ್ಥಕ. ಭಾವಾರ್ಥದಲ್ಲಿ ಕೃತ್‌ಪ್ರತ್ಯಯ ಕನ್ನಡದಲ್ಲಿ ವಿಪುಲವಾಗಿದೆ. ಭಾವೇಪ್ರಯೋಗವಿಲ್ಲವೆಂದರೆ ಭಾವಾರ್ಥದಲ್ಲಿ ತಿಙಂತ ಪ್ರಯೋಗವಿಲ್ಲ ಎಂದರ್ಥ. ಸಂಸ್ಕೃತದಲ್ಲಿದ್ದರೂ ಅದರ ಪ್ರಯೋಗವು ವಿರಳವೇ.

ಈ ಪರಾಮರ್ಶದ ಮಥಿತಾರ್ಥವು ಇಷ್ಟು-

೧. ಕನ್ನಡದಲ್ಲಿ ಕರ್ಮಣಿ ಪ್ರಯೋಗವಿದೆ. ಇದು ಕನ್ನಡ ವೈಯಾಕರಣರಿಗೆ ಸಂಮತವಾದದ್ದು. 'ಅಲ್ಪಡು' ಎಂಬ ಅನುಪ್ರಯೋಗವಿರುವಂತಹದು ಅಲ್ಪವಾದರೂ ಅದರ ಅಸ್ತಿತ್ವವನ್ನು ತಪ್ಪಿಸಲಾಗದು. ಸ್ವತಃ ಶ್ರೀ ಸೇಡಿಯಾಪು ಅವರೇ ತಮ್ಮ ಪ್ರಬಂಧದಲ್ಲಿ ಭಾವಿಸಲ್ಪಟ್ಟಿತು (ಪು. ೧೭೭), ಪ್ರಯೋಗಿ ಸಲ್ಪಡುತ್ತದೆ (ಪು. ೧೬೯) -ಎಂದು ಪ್ರಯೋಗಿಸಿದ್ದಾರೆ. ಕರ್ಮಾರ್ಥದ ಕೃದಂತಗಳಾದ ವಿರಚಿತ, ನಿರ್ಮಿತ, ಕೃತ, ಉಕ್ತ ಮುಂತಾದ ಸಂಸ್ಕೃತ ಪದಗಳ ಯೋಗವಿದ್ದಾಗ ಕರ್ಮಣಿಪ್ರಯೋಗಗಳು ಹಳಗನ್ನಡಕಾವ್ಯ ಗಳಲ್ಲಿಯೂ ನಡುಗನ್ನಡಕಾವ್ಯಗಳಲ್ಲಿಯೂ ಆಧುನಿಕಪ್ರಬಂಧಗಳಲ್ಲಿಯೂ ಬಹುಸಂಖ್ಯೆಯಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಕರ್ತರಿತೃತೀಯೆ ಸಹಜ ವಾಗಿಯೇ ಬಂದಿರುತ್ತದೆ.

೨. ಕರ್ಮಣಿಪ್ರಯೋಗದಲ್ಲಿಯೇ ಕರ್ತರಿತೃತೀಯೆ ಬರುತ್ತದೆಯೆಂಬುದು ಭ್ರಮೆ. ನಿನ್ನಿಂದ ಉಪಕಾರವಾಯಿತು -ಮುಂತಾದ ಕರ್ತರಿಪ್ರಯೋಗದಲ್ಲಿಯೂ ಕರ್ತರಿ ತೃತೀಯೆ ಬರುತ್ತದೆಯೆಂಬುದನ್ನು ಹಿಂದೆ ಪ್ರತಿಪಾದಿಸಿದ್ದಾಗಿದೆ. ಆದ್ದರಿಂದಲೇ

ಯಾದವಕಟಕಾಚಾರ್ಯನಿ
ನಾದುದು ಕರ್ಣಾಟಧಾತು ಕವಿಕೇಶವನಿಂ ॥

ಎಂದು ಕೇಶಿರಾಜನೇ ಪ್ರಯೋಗಿಸದ್ದಾನೆ. ಇಲ್ಲಿ ಕವಿಕೇಶವನು ಕರ್ತೃ ವೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಕರ್ಣಾಟಧಾತುವೆಂದರೆ ಕರ್ಣಾಟ ಧಾತುಪಾಠವೆಂದರ್ಥ.

೩. 'ಇಸು' ಪ್ರತ್ಯಯಾಂತವಾದ ಪ್ರಯೋಜಕಕ್ರಿಯೆಯಲ್ಲಿ ಪ್ರಯೋಜ್ಯಕರ್ತೃ (ಪ್ರೇರ್ಯಕರ್ತೃ)ವಾಚಕದ ಮೇಲೆ ತೃತೀಯೆ ಬರುತ್ತದೆಯಂಬುದನ್ನು ತೋರಿಸಿಕೊಟ್ಟದ್ದಾಗಿದೆ. 'ಅಮ್ಮ ನನ್ನಿಂದ ಬಟ್ಟೆ ಒಗೆಸ್ತಾಳೆ' ಎಂಬ ಆಡುನುಡಿಯಲ್ಲಿ ಸಹ ಕರ್ತರಿ ತೃತೀಯೆಯನ್ನು ಕಾಣಬಹುದು.

೪. ಕರ್ತೃತ್ವ, ಕರಣತ್ವ –ಮುಂತಾದ ಕಾರಕಶಕ್ತಿಗಳ ಅಭಿವ್ಯಕ್ತಿ ಸಾಮರ್ಥ್ಯವನ್ನು ಭಾಷಾತತ್ತ್ವವಿದರು ಮಾತ್ರ ಬಲ್ಲರು. ಆದ್ದರಿಂದಲೇ ಕಾರಕ, ಕರ್ತೃ, ಕರಣ –ಇತ್ಯಾದಿ ಸಂಜ್ಞಾವಿಶೇಷಗಳನ್ನು ಕನ್ನಡದಲ್ಲಿಯೂ ಬಳಸಿ ವಿಭಕ್ತಿಗಳನ್ನು ವಿಧಿಸಿದ್ದಾರೆ. ಇದು ಕಾರಕವಿಭಕ್ತಿ, ಇದು ಉಪಪದವಿಭಕ್ತಿ –ಎಂಬ ವಿಂಗಡಣೆಗೆ ಶಕ್ತಿವಿಶೇಷವೇ ನಿಮಿತ್ತ. ಇಲ್ಲದಿದ್ದರೆ ಷಷ್ಠಿಗೆ ಹೇಳಿದಂತೆ ಅರ್ಥವಿಶೇಷವನ್ನು ಮಾತ್ರ ಹೇಳಿ ವಿಭಕ್ತಿಗಳನ್ನು ವಿಧಿಸಬಹುದಾಗಿತ್ತು. ಆಧಾರಾರ್ಥದಲ್ಲಿ ಸಪ್ತಮಿ, ಉದ್ದೇಶ್ಯವನ್ನು ಗುರುತಿಸುವಾಗ ಚತುರ್ಥೀ –ಈ ಪ್ರಕಾರ ಹೇಳಲು ಬರುವುದಿಲ್ಲವೇ? ಅಧಿಕರಣ, ಸಂಪ್ರದಾನ –ಎಂಬ ಸಂಜ್ಞೆಗಳನ್ನು ಹೇಳಿ ಅವುಗಳಿಗೆ ಕಾರಕ ಎಂಬ ಮತ್ತೊಂದು ಸಂಜ್ಞೆಯನ್ನು ಹೇಳುವ ಆವಶ್ಯಕತೆಯಾದರೂ ಏನು? ಕಾರಕವಿಭಕ್ತಿಯು ಎಲ್ಲ ವಿಭಕ್ತಿ ಗಳಿಗಿಂತ ಪ್ರಬಲವೆಂಬ ನಿರ್ಣಯವಾದರೂ ಏಕೆ? ಹೇತುವು (ನಿಮಿತ್ತ) ಏಕೆ ಕಾರಕವಲ್ಲ. ಹೀಗಿರುವಾಗ ಕರ್ತರಿ ತೃತೀಯೆ, ಕರಣತೃತೀಯೆಗಳನ್ನು ಅಲ್ಲಗಳೆದು ನಿಮಿತ್ತತ್ವವನ್ನು ಆರೋಪಿಸಿ ಪಂಚಮಿ ಬಂದಿದೆ ಎನ್ನುವುದು ಅಯುಕ್ತ. 'ಕಣ್ಣಿಂದ ನೋಡುತ್ತಾನೆ; ಕಿವಿಯಿಂದ ಕೇಳುತ್ತಾನೆ' ಎಂಬಲ್ಲಿ ಕಣ್ಣು, ಕಿವಿಗಳು ಕ್ರಿಯಾಸಾಧನಗಳೋ? ಕ್ರಿಯೆಗೆ ನಿಮಿತ್ತಗಳೋ? ಆದ್ದರಿಂದ ಕನ್ನಡದಲ್ಲಿ ಕರ್ತೃಕರಣವಾಚಕಗಳ ಮೇಲೆ ತೃತೀಯಾವಿಭಕ್ತಿಯೇ ಬರುತ್ತದೆ. ಸಂಸ್ಕೃತದಲ್ಲಿ ಹೇತ್ವರ್ಥಪಂಚಮಿಯ ಜೊತೆಗೆ ಹೇತ್ವರ್ಥದಲ್ಲಿ ತೃತೀಯೆ ಯನ್ನು ವಿಧಿಸಿರುವುದು ಗಮನಾರ್ಹ. ಹೇತು ತೃತೀಯೆ ಇದ್ದರೂ ಕರ್ತೃ ಕರಣಗಳಿಗೆ ಪ್ರತ್ಯೇಕವಾಗಿ ತೃತೀಯೆಯನ್ನು ಹೇಳಿರುವುದೂ ಗಮನಾರ್ಹ. ಆದ್ದರಿಂದ ಕನ್ನಡದಲ್ಲಿ ಪಂಚಮಿಗೆ ಅತಿರಿಕ್ತವಾದ ತೃತೀಯೆ ಇದೆ. ಪಂಚಮಿಯೂ ಇದೆ. ಇಂದು ಬಳಸುವ ಕನ್ನಡದಲ್ಲಿ 'ಇಂದ' ಎಂಬ ಸಮಾನಾಕೃತಿಯ ಎರಡು ಪ್ರತ್ಯಯಗಳುಂಟು.

೫. 'ಕಾರಕಗಳಾರು ವಿಭಕ್ತಿಗಳೇಳು' ಎಂಬ ಕನ್ನಡ ವೈಯಾಕರಣರ ಹೇಳಿಕೆ ಸಮಂಜಸವಾದದ್ದು. ಯಾವ ಭಾಷೆಯಲ್ಲಾದರೂ ಆರು ಕಾರಕಗಳಿದ್ದೇ ಇರುತ್ತವೆ. ಇವು ಅರ್ಥಧರ್ಮಗಳು, ಶಬ್ದಧರ್ಮಗಳಲ್ಲ. ಕಾರಕಗಳು ಕ್ರಿಯಾನಿರ್ವಾಹಕಗಳು. ಈ ನಿರ್ವಾಹಕಶಕ್ತಿಗಳು ಆರು ವಿಧಗಳಾಗಿವೆ ಯೆಂದೂ ಅರ್ಥನಿಷ್ಠವಾಗಿವೆಯೆಂದೂ ಸಂಸ್ಕೃತಶಬ್ದವಿದರು ನಿಶ್ಚಯಿಸಿದ್ದಾರೆ. ಈ ಶಕ್ತಿವಿಶೇಷಗಳು ಪ್ರತಿಯೊಂದು ಭಾಷಾವ್ಯವಹಾರದಲ್ಲಿಯೂ ಅಭಿವ್ಯಕ್ತ ವಾಗಲೇಬೇಕು. ಜೇನುತುಪ್ಪವು ಸಂಸ್ಕೃತದಲ್ಲಿ ಸಿಹಿಯಾದರೆ ಇತರ ಭಾಷೆಗಳಲ್ಲಿ ಕಹಿಯಾಗಿಬಿಡುವುದಿಲ್ಲ! ಈ ಶಕ್ತಿವಿಶೇಷಗಳನ್ನು ಅಭಿವ್ಯಕ್ತಿ ಗೊಳಿಸುವ ವಿಭಕ್ತಿಗಳು ಏಳಿರಬಹುದು. ವಿಭಕ್ತಿಗಳೇ ಇಲ್ಲದೆ By, with, from, of ಮುಂತಾದ ಶಬ್ದಗಳಾಗಿರಬಹುದು. ವಾಕ್ಯದಲ್ಲಿ ಬಳಸುವ ಸ್ಥಾನವಿಶೇಷಗಳಾಗಿರಬಹುದು. ಉದಾಹರಣೆಗೆ, Krishna told Arjuna. ಇಲ್ಲಿ ಕೃಷ್ಣನು ಕರ್ತೃವೆಂದೂ ಅರ್ಜುನನು ಕರ್ಮವೆಂದೂ ಸ್ಥಾನಬಲದಿಂದ ಗೊತ್ತಾಗುತ್ತದೆ. Arjuna asked Krishna ಎಂದರೆ ಈ ಶಕ್ತಿವಿಶೇಷಗಳೇ ವ್ಯತ್ಯಸ್ತವಾಗಿ ತೋರುತ್ತವೆ. ಇವೆಲ್ಲ ಆಯಾ ಭಾಷಾಮರ್ಯಾದೆಗಳಿಗೆ ಸೇರಿದವು. ಆದ್ದರಿಂದ ಜಗತ್ತಿನಲ್ಲಿರುವ **ಸಕಲಭಾಷೆಗಳಲ್ಲಿಯೂ ಆರು ಕಾರಕ ಗಳಿವೆ. ಒಂದು ಹೆಚ್ಚಲ್ಲ, ಒಂದು ಕಡಮೆ ಇಲ್ಲ -ಎಂದು ಘೋಷಿಸಬಹುದು.** ಯಾವ ಭಾಷೆಯನ್ನಾಡಿದರೂ ಅರ್ಥಧರ್ಮವು ಏಕರೂಪವಾಗಿರುತ್ತದೆ. ಶಬ್ದಸ್ವರೂಪವು ವಿಭಿನ್ನವಾಗಬಹುದು.

೬. ಆಡುನುಡಿಯನ್ನು ಶಿಷ್ಟಪ್ರಯೋಗವೆಂದು ಗಣಿಸಿ ವ್ಯಾಕರಣಶಾಸ್ತ್ರವು ನಿಯಮ ಗಳನ್ನು ರಚಿಸುವುದಿಲ್ಲ. ಆಡುನುಡಿ ಬಹುಪ್ರಕಾರವಾಗಿರುವುದರಿಂದ ನಿಯಮಗಳ ರಚನೆ ಶಕ್ಯವಲ್ಲ. ಯುಕ್ತವೂ ಅಲ್ಲ. "ನನ್ನ ಕೈಲಿ ಅಷ್ಟು ದೂರ ಹೋಗಲು ಸಾಧ್ಯವಿಲ್ಲ, ಅವನ ಕೈಲಿ ಅಷ್ಟು ಹೇಳಲಿಕ್ಕೆ ಆಗುವುದಿಲ್ಲ" ಎಂದು ಹೇಳುತ್ತಾರೆ. 'ಕೈಲಿ-ಕೈಯಲ್ಲಿ' ಎಂಬ ಪ್ರಯೋಗವು ಹವ್ಯಕರಲ್ಲಿಯೂ ಇದೆ, ಇತರ ಕನ್ನಡಿಗರಲ್ಲಿಯೂ ಇದೆ. ಕೈಯಲ್ಲಿ ಯಾರೂ ಹೋಗುವುದಿಲ್ಲ. ಕಾಲಿಂದ ಹೋಗುತ್ತಾರೆ. ಕೈಯಲ್ಲಿ ಯಾರೂ ಹೇಳುವುದಿಲ್ಲ. ಬಾಯಿಯಿಂದ ಹೇಳುತ್ತಾರೆ! ಇಂತಹ ಪ್ರಸಂಗದಲ್ಲಿ ಕೈಲಿ, ಕೈಯಲ್ಲಿ -ಎಂಬ ಒಂದು ತೃತೀಯಾಪ್ರತ್ಯಯವೋ ಸಪ್ತಮೀಪ್ರತ್ಯಯವೋ ಇದೆಯೆಂದು ವ್ಯಾಕರಣದಲ್ಲಿ ಹೇಳಬೇಕಾದೀತು.

ಉಪಸಂಹಾರ

ಕನ್ನಡದಲ್ಲಿ ಕರ್ಮಣಿಪ್ರಯೋಗ, ಭಾವೇಪ್ರಯೋಗ, ಕಾರಕ, ವಿಭಕ್ತಿ -ಇವು ಗಳನ್ನು ಕುರಿತು ವಿದ್ವಜ್ಜನರು ಆಗಾಗ ಲೇಖನಗಳನ್ನು ಬರೆಯುತ್ತಾರೆ. ಅವುಗಳನ್ನು

ನೋಡಿ ನನಗಾದ ಒಂದು ಚೋದನೆಯಿಂದ ಈ ಪರಾಮರ್ಶಲೇಖನವನ್ನು ಬರೆಯಬೇಕಾಯಿತು.

ಶಾಸ್ತ್ರವಿಷಯದಲ್ಲಿ ಹೀಗೆ ಮತಭೇದವಿರುವುದು ಸಹಜ. ನನಗೆ ತಥ್ಯವೆಂದು ತೋರಿದ್ದನ್ನು ಇಲ್ಲಿ ನಿರೂಪಿಸಿದ್ದೇನೆ. ಶ್ರೀ ಸೇಡಿಯಾಪು ಕೃಷ್ಣಭಟ್ಟರು ಅಪಾರವಾದ ಧೀಶಕ್ತಿಯುಳ್ಳವರು. ಅವರ ವಿಚಾರಲಹರಿಯು ಭಾಷಾಶಾಸ್ತ್ರ-ವ್ಯಾಕರಣಶಾಸ್ತ್ರಗಳೆಂಬ ಎರಡು ತೀರಗಳ ನಡುವೆ ಹರಿದಿದೆ. ಯಾವುದನ್ನೂ ಗಟ್ಟಿಯಾಗಿ ಅವಲಂಬಿಸಿಲ್ಲ. ಆದ್ದರಿಂದ ಮೇಲ್ಕಂಡ ಅಂಶಗಳು ಶ್ರೀ ಸೇಡಿಯಾಪು ಅವರ ತೀವ್ರ ಪರ್ಯಾಲೋಚನೆಗೆ ಒಳಪಡಲಿಲ್ಲವೆಂದು ಭಾವಿಸಿದ್ದೇನೆ. ಇಷ್ಟನ್ನು ಅವರ ಪವಿತ್ರಾತ್ಮಕ್ಕೆ ವಿನಯದಿಂದ ನಿವೇದಿಸಿ ವಿರಮಿಸುತ್ತೇನೆ.

* * * * *

ವರ್ತಮಾನಕಾಲ

ನಮ್ಮ ಸರ್ವವ್ಯವಹಾರವೂ ಕಾಲವನ್ನಾಶ್ರಯಿಸಿಕೊಂಡಿದೆ. ಹಗಲು, ರಾತ್ರಿ, ದಿನ, ವಾರ, ತಿಂಗಳು, ವರ್ಷ –ಇವೆಲ್ಲವೂ ಕಾಲವಿಭಾಗಗಳು. ಇಂದು, ನಾಳೆ, ನಾಡಿದ್ದುಗಳೂ ಕಾಲವಿಭಾಗಗಳು. ಹತ್ತಿರ, ದೂರ, ಮೆಲ್ಲಗೆ, ಬೇಗನೆ ಇವನ್ನೂ ಕಾಲದ ಗಣನೆಯಿಂದಲೇ ವಿಂಗಡಿಸಬೇಕಾಗುತ್ತದೆ. ಆತನ ವಯಸ್ಸು ೩೦ ವರ್ಷ ಎನ್ನುತ್ತೇವೆ. ವಯಸ್ಸು ಎಂದರೇನು? ದೇಹಕ್ಕೆ ಅವಸ್ಥಾವಿಶೇಷವನ್ನುಂಟುಮಾಡುವ ಕಾಲಪರಿಮಾಣವೇ ವಯಸ್ಸು. ಬಾಲ್ಯ, ತಾರುಣ್ಯ, ಮುಪ್ಪು –ಇವು ಕಾಲ ಪರಿಣಾಮದಿಂದ ಆದ ಅವಸ್ಥಾವಿಶೇಷಗಳು. ಸಮಸ್ತ ಪದಾರ್ಥಗಳ ಉತ್ಪತ್ತಿ ಸ್ಥಿತಿನಾಶಗಳಿಗೆ ಕಾರಣವಾದದ್ದು ಕಾಲ. ಬೀಜ ಮೊಳೆಯಿತು, ಬಳ್ಳಿ ಚಿಗುರಿತು, ಹೂವಾಯಿತು, ಹಣ್ಣಾಯಿತು –ಎಂಬಲ್ಲಿ ಒಂದು ಕ್ರಮವು ಕಂಡುಬರುತ್ತದೆ. ಹಾಗೆಯೇ ಮಗು ಹುಟ್ಟಿತು, ಬೆಳೆಯಿತು, ಯೌವನ ಬಂದಿತು –ಇತ್ಯಾದಿ ವ್ಯವಹಾರ ಗಳಲ್ಲಿಯೂ ಕ್ರಮ ಉಂಟು. ಈ ಕ್ರಮವು ಕಾಲಕೃತವಾದದ್ದು. ಕ್ರಮರಹಿತವಾದ ಲೋಕಕ್ಕೆ ಒಂದು ಕ್ರಮವನ್ನು ಕಲ್ಪಿಸಿಕೊಡುವುದೇ ಕಾಲ. ವಾಕ್ಯಪದೀಯದಲ್ಲಿ ಭರ್ತೃಹರಿ ಹೇಳುತ್ತಾನೆ–

ನಿರ್ಭಾಸೋಪಗಮೋ ಯೋऽಯಂ ಕ್ರಮವಾನಿವ ದೃಶ್ಯತೇ ।
ಅಕ್ರಮಸ್ಯಾಪಿ ವಿಶ್ವಸ್ಯ ತತ್ಕಾಲಸ್ಯ ವಿಚೇಷ್ಟಿತಮ್ ॥

— ಕಾಲಸಮುದ್ದೇಶ, ೪೬

"ವಿಶ್ವದ ಪ್ರತಿಯೊಂದು ವಸ್ತುವೂ ಪ್ರಕಾಶಕ್ಕೆ ಬಂದು ತನ್ನ ಸ್ವರೂಪವನ್ನು ಕಾಣಿಸಿಕೊಂಡಾಗ ಸರ್ವವೂ ಒಂದು ಕ್ರಮಕ್ಕೆ ಒಳಪಟ್ಟಿರುವಂತೆ ಕಾಣುತ್ತದೆ. ಕ್ರಮವಿರುವಂತೆ ತೋರಿಸಿಕೊಡುವುದು ಕಾಲದ ಚೇಷ್ಟೆ."

ಈ ಕಾಲವು ಶರತ್ಕಾಲಾದಿ ರೂಪದಿಂದ ವಿಭಿನ್ನ ತರುಲತೆಗಳ ಫಲಪುಷ್ಪಾದಿ ಪ್ರಸವಶಕ್ತಿಯನ್ನು ತಡೆಯುತ್ತದೆ; ವಸಂತಾದಿ ರೂಪದಿಂದ ಅವನ್ನು ಚಿಗುರಿಸಿ ಅವುಗಳಲ್ಲಿರುವ ಶಕ್ತಿಯನ್ನು ಅನುಗ್ರಹಿಸುತ್ತದೆ. ಬಾಲ್ಯದಲ್ಲಿ ಪ್ರಾಣಿಗಳ ಕಾಮ ವಾಸನೆಯು ಪ್ರಬುದ್ಧವಾಗದಂತೆ ತಡೆಯುತ್ತದೆ; ಯೌವನದಲ್ಲಿ ಅದನ್ನು ಕೆರಳಿಸುತ್ತದೆ; ಮುಪ್ಪಿನಲ್ಲಿ ಅದುಮುತ್ತದೆ. ಸಕಲ ಸ್ಥಾವರಜಂಗಮಗಳ ಆಕೃತಿ, ಶಕ್ತಿ, ಅಧಿಕಾರಗಳ ಉತ್ಪತ್ತಿ, ಸ್ಥಿತಿ, ವೃದ್ಧಿ, ಕ್ಷಯ, ನಾಶಗಳು ಕಾಲಕ್ಕೆ ಅಧೀನವಾದವು. **'ಕಲಯತೀತಿ ಕಾಲಃ'** ಸಕಲ ಪದಾರ್ಥಗಳನ್ನು ತನ್ನ ಸಾಮರ್ಥ್ಯದಿಂದ ಪರಿಣಾಮಗೊಳಿಸತಕ್ಕದ್ದು

ಕಾಲ. ಶಾಸ್ತ್ರಕಾರರು 'ಸರ್ವಾಧಾರಃ ಕಾಲಃ' ಎನ್ನುತ್ತಾರೆ. ಪದಾರ್ಥಮಾತ್ರಕ್ಕೆ ಆಧಾರವಾದದ್ದು ಕಾಲ.

ಹೀಗೆ ನಮ್ಮ ವ್ಯವಹಾರದಲ್ಲಿ ಕಾಲವು ಹಾಸುಹೊಕ್ಕಾಗಿ ಸೇರಿಕೊಂಡು ಬಿಟ್ಟಿದೆ. ಇಷ್ಟು ಪರಿಚಿತವಾಗಿದ್ದರೂ ಕಾಲವೆಂದರೆ ಯಾವುದು? ಅದರ ಸ್ವರೂಪವೇನು? ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಕಠಿನ! ಮನಸ್ಸಿಗೆ ತಿಳಿಯುತ್ತದೆ, ಮಾತಿನಿಂದ ಹೇಳಲು ಬರುವುದಿಲ್ಲ- ಎಂಬಂತಾಗಿದೆ. ಕಣ್ಣು- ಮುಂತಾದ ಇಂದ್ರಿಯಗಳಿಗೆ ಗೋಚರವಲ್ಲವಾದ್ದರಿಂದ ಕಾಲವನ್ನು ಪ್ರತ್ಯಕ್ಷವೆನ್ನಲಾಗುವುದಿಲ್ಲ. ನೈಯಾಯಿಕರು ಹೇಳುವುದೇನೆಂದರೆ–

ಅತೀತಾದಿ ವ್ಯವಹಾರಹೇತುಃ ಕಾಲಃ । ಸ ಚೈಕೋ ವಿಭುರ್ನಿತ್ಯಶ್ಚ ॥

— ತರ್ಕ ಸಂಗ್ರಹ

"ಅತೀತ–ಆಗಾಮಿ–ವರ್ತಮಾನ ಮುಂತಾದ ವ್ಯವಹಾರಕ್ಕೆ ಯಾವುದು ಕಾರಣವೋ ಅದು ಕಾಲ. ಕಾಲವಿರುವುದು ಒಂದೇ. ಅದು ವಿಭುವೂ ನಿತ್ಯವೂ ಆಗಿದೆ."

ಒಂದು ಕ್ರಿಯೆ ನಡೆದುಹೋಯಿತು, ಮುಂದೆ ನಡೆಯುವುದು, ಈಗ ನಡೆಯುತ್ತಿದೆ ಎಂದು ಜನರು ಹೇಳುತ್ತಾರಲ್ಲವೆ? ಈ ರೀತಿಯಲ್ಲಿ ಭೂತ ಭವಿಷ್ಯದ್ ವರ್ತಮಾನಗಳ ವ್ಯವಹಾರಕ್ಕೆ ನಿಮಿತ್ತವೇನು? ನಿಮಿತ್ತವಿಲ್ಲದೆ ವ್ಯವಹಾರವು ಬರಲು ಶಕ್ಯವಿಲ್ಲ. ಇದಕ್ಕೆ ಮೂಲಭೂತವಾದ ನಿಮಿತ್ತ ಯಾವುದೋ ಅದು ಕಾಲ. ಅದು ಅಖಂಡವಾದ ಒಂದೇ ವಸ್ತು. ಸರ್ವವ್ಯಾಪಿಯಾದ್ದರಿಂದ ವಿಭು. ಅಂತ್ಯವೇ ಇಲ್ಲವಾದ್ದರಿಂದ ನಿತ್ಯವೆಂದು ಒಪ್ಪಬೇಕು.

ಕಾಲವು ವಿಭುವೆಂದೂ ನಿತ್ಯವೆಂದೂ ಒಪ್ಪಬಹುದು. ಆದರೆ ಅದು ಅಖಂಡವಾದ ಒಂದೇ ವಸ್ತುವೆಂದು ಹೇಳುವುದು ಹೇಗೆ? ಅದು ಅಖಂಡವಾದಲ್ಲಿ ಭೂತ ಭವಿಷ್ಯದ್ ವರ್ತಮಾನಗಳೆಂಬ ಭೇದವಿರುವುದು ಹೇಗೆ? ಇಂದು, ನಾಳೆ –ಮುಂತಾದ ವ್ಯವಹಾರವೂ ಕೂಡದೆ ಹೋಗುತ್ತವೆಯೆಂಬ ಆಕ್ಷೇಪ ಮೊದಲಿನಂತೆ ಉಳಿದುಕೊಳ್ಳುತ್ತದೆ. ಇದಕ್ಕಾಗಿ ದಾರ್ಶನಿಕರು ಹೇಳುವುದೇನೆಂದರೆ –ಉಪಾಧಿಭೇದದಿಂದ ಕಾಲವೂ ಸಖಂಡವಾಗಿ ಬೇರೆ ಬೇರೆ ಇರುವಂತೆ ತೋರುತ್ತದೆ. ವ್ಯವಹಾರಕ್ಕೆ ಉಪಾಧಿಭೇದವೇ ನಿಮಿತ್ತ ಎಂದು.

ಉಪಾಧಿ ಎಂದರೇನು? ಉಪ = ಸಮೀಪದಲ್ಲಿದ್ದುಕೊಂಡು, ಅಧಿ = ತನ್ನ ಸ್ವರೂಪವನ್ನು ಇನ್ನೊಂದರಲ್ಲಿ ಆಧಾನ ಮಾಡತಕ್ಕದ್ದು ಉಪಾಧಿ. ಗಾಜಿನ ಹಲಗೆಯ ಕೆಳಗಿರುವ ಕೆಂಪು ಬಣ್ಣದ ಕಾಗದ ಗಾಜಿಗೆ ಉಪಾಧಿ. ಅದು ತನ್ನ ಕೆಂಪು ಬಣ್ಣವನ್ನು ಗಾಜಿನ ಹಲಗೆಯಲ್ಲಿರುವಂತೆ ಮಾಡುತ್ತದೆ. ಹಳದಿಯ ಕಾಗದದಿಂದ ಗಾಜು ಹಳದಿಯಾಗಿರುವಂತೆಯೂ ಕಪ್ಪು ಕಾಗದದಿಂದ ಗಾಜು ಕಪ್ಪಾಗಿರುವಂತೆಯೂ ಕಾಣುತ್ತದೆ. ಕಾಗದವು ಗಾಜಿಗೆ ಉಪಾಧಿ. ತನ್ನ ಧರ್ಮವನ್ನು ಇನ್ನೊಂದರಲ್ಲಿ ಅಭಿವ್ಯಂಜಿಸತಕ್ಕದ್ದು, ಅದಕ್ಕೆ ಉಪಾಧಿ. ಹಾಗಾದರೆ ಕಾಲಕ್ಕೆ ಉಪಾಧಿ ಯಾವುದು?

ಕ್ರಿಯೆಯೇ ಕಾಲಕ್ಕೆ ಉಪಾಧಿ. ಇದು ನಾವು ಮಾಡುವ ಯಾವುದೇ ಕ್ರಿಯೆಯಾದರೂ ಆಗಬಹುದು. ಆದರೆ ಸರ್ವದಾ ಸರ್ವತ್ರ ಇದ್ದು ಸರ್ವಜನರ ವ್ಯವಹಾರಕ್ಕೂ ಕಾರಣವಾದ ಒಂದು ಕ್ರಿಯೆಯನ್ನು ಆಶ್ರಯಿಸುವುದು ಉತ್ತಮ. ಅದೇ ಸೂರ್ಯನ ಕ್ರಿಯೆ, ಸೂರ್ಯಗತಿ, ಸೂರ್ಯಸ್ಪಂದ. ಭೂಮಿಯು ತಿರುಗುತ್ತದೆಯೆಂಬ ವೈಜ್ಞಾನಿಕ ಸಿದ್ಧಾಂತದಲ್ಲಿಯೂ ಸೂರ್ಯನಿಗೆ ಚಲನೆಯುಂಟು.[1] ಒಂದು ವೇಳೆ ಆತನಿಗೆ ಚಲನೆಯಿಲ್ಲದಿದ್ದರೂ ಚಲನೆಯಿರುವಂತೆ ನಮಗೆ ಕಾಣುವುದರಿಂದ ಲೋಕವ್ಯವಹಾರವು ನಡೆಯಲೇನೂ ಅಡ್ಡಿಯಿಲ್ಲ. ವಿಜ್ಞಾನಿಗಳೂ ವ್ಯವಹಾರಕ್ಕಾಗಿ ಸೂರ್ಯೋದಯ, ಸೂರ್ಯಾಸ್ತಗಳನ್ನೊಪ್ಪುತ್ತಾರಲ್ಲವೆ? ಸೂರ್ಯನ ಚಲನಕ್ರಿಯೆಯಲ್ಲಿ ಅನಂತಸ್ಪಂದಗಳು ನಡೆಯುತ್ತಲೇ ಇರುತ್ತವೆ. ದರ್ಶನಯೋಗ್ಯನಾದ ಸೂರ್ಯನ ಸ್ಪಂದನಗಳಿಗೆ ಆಶ್ರಯವಾದ ಕಾಲ ಹಗಲು. ದರ್ಶನಯೋಗ್ಯನಾಗದಿರುವ ಸೂರ್ಯನ ಸ್ಪಂದನಗಳಿಗೆ ಆಶ್ರಯವಾದ ಕಾಲ ರಾತ್ರಿ. ಹಗಲುರಾತ್ರಿಗಳ ಸಮುದಾಯ ಒಂದು ದಿನ. ಹೀಗೆಯೇ ದಿನಗಳ ಸಮುದಾಯವನ್ನು ವಾರ, ಪಕ್ಷ, ತಿಂಗಳು, ವರ್ಷಗಳೆಂದು ವಿಂಗಡಿಸಿಕೊಳ್ಳಬಹುದು. ದಿನದ ಅಂತರ್ವಿಭಾಗವನ್ನು ಪೂರ್ವಾಹ್ಣ, ಅಪರಾಹ್ಣ, ಘಂಟೆ, ನಿಮಿಷ, ಸೆಕೆಂಡ್ ಇತ್ಯಾದಿಯಾಗಿ ವಿಭಜಿಸಿಕೊಳ್ಳಬಹುದು. ಸಾರ್ವತ್ರಿಕವಾದ ಲೋಕವ್ಯವಹಾರಕ್ಕೆ ಸೂರ್ಯಸ್ಪಂದವು ಕಾಲೋಪಾಧಿಯಾಗುತ್ತದೆ.

ವೈಯಕ್ತಿಕವಾದ ವ್ಯವಹಾರಕ್ಕೆ ನಮ್ಮ ನಮ್ಮ ಕ್ರಿಯೆಯೂ ಉಪಾಧಿಯಾಗಬಹುದು. 'ನಾನು ಬರೆಯುವಾಗ ಮಾತಾಡಿಸಬಾರದು' ಎಂಬಲ್ಲಿ ಬರೆಯುವ ಕ್ರಿಯೆಯೇ ಕಾಲೋಪಾಧಿಯಾಗಬಹುದು. ದೈಹಿಕವಾದ ಯಾವ ಚೇಷ್ಟೆಯನ್ನೂ ಮಾಡದೆ ಸುಮ್ಮನೆ ಕುಳಿತಿದ್ದಾಗ ಉಸಿರಾಟದ ಕ್ರಿಯೆಯಿಂದ ಅಥವಾ ಮಾನಸ ಕ್ರಿಯೆಯಿಂದ ಕಾಲವನ್ನು ಸಖಂಡವಾಗಿ ಮಾಡಿಕೊಳ್ಳುತ್ತೇವೆ. ಗಡಿಯಾರದ ಮುಳ್ಳಿನ ಚಲನೆಯೂ ಕಾಲಕ್ಕೆ ಉಪಾಧಿಯಾಗುತ್ತದೆ. ಸಾರಾಂಶವೇನೆಂದರೆ: ಕಾಲವು ಸಖಂಡವಾಗಿ ಅಳತೆಗೆ ಸಿಕ್ಕುವುದು ಕ್ರಿಯೆಯಿಂದ ಮಾತ್ರ. ಹೀಗೆ ಕ್ರಿಯೆಯಿಂದ ಪರಿಚ್ಛಿನ್ನವಾದ ಕಾಲವು ಇನ್ನೊಂದು ಕ್ರಿಯೆಗೆ ನೇರವಾಗಿ ಅನ್ವಯಿಸುತ್ತದೆ. ಆದ್ದರಿಂದ ಕಾಲವಾಚಕಶಬ್ದಗಳು ಕ್ರಿಯೆಗೆ ವಿಶೇಷಣವಾಗಿರುವುದು ಸಹಜ. ಕ್ರಿಯೆಯ ಮೂಲಕ ಇತರ ದ್ರವ್ಯಗಳಿಗೆ ವಿಶೇಷವಾಗಬಹುದು. ಉದಾಹರಣೆಗೆ, 'ರಾಮನು ಹಗಲು ಊಟ ಮಾಡುತ್ತಾನೆ' –ಎಂಬ ವಾಕ್ಯವನ್ನು ಪರಿಶೀಲಿಸಬಹುದು. ಸೂರ್ಯಕ್ರಿಯಾ ಪರಿಚ್ಛಿನ್ನವಾದ ಕಾಲ ಹಗಲು. ಇದು ಭೋಜನಕ್ರಿಯೆಗೆ ಆಧಾರವಾಗಿ ವಿಶೇಷಣವಾಗಿದೆ. ಭೋಜನಕ್ರಿಯೆಯ ಮೂಲಕ ರಾಮನಿಗೂ ಆಧಾರವಾಗಿದೆ. ಆದ್ದರಿಂದ ಕಾಲವನ್ನು ಸರ್ವಾಧಾರವೆಂದೂ ಸರ್ವಕ್ರಿಯೆಗಳಿಗೆ ನಿಮಿತ್ತ ಕಾರಣವೆಂದೂ

---

1. It is found that the SUN is travelling, with reference to the stars in its neighbourhood, with a speed of approximately 12 miles per second nearly in the direction of the bright star VEGA.
— The origin of the earth by W M. Smart (Page 181)

ಹೇಳುತ್ತಾರೆ. ಕ್ರಿಯೆಯೊಡನೆ ಕಾಲಕ್ಕೆ ನಿಕಟವಾದ ಸಂಬಂಧ ಉಂಟು. ಕ್ರಿಯೆಯಿಂದ ಅಳತೆಗೊಳಪಟ್ಟು ಸಖಂಡವಾದ ಕಾಲವು ಕ್ರಿಯೆಗೂ ವಿಶೇಷಣವಾಗಿ ಭೇದಕವಾಗ ಬಲ್ಲುದು. ಭರ್ತೃಹರಿಯು ವಾಕ್ಯಪದೀಯದಲ್ಲಿ-

ಕ್ರಿಯಾಭೇದಾಯ ಕಾಲಸ್ತು ಸಂಖ್ಯಾ ಸರ್ವಸ್ಯ ಭೇದಿಕಾ ।

— ಕಾಲಸಮುದ್ದೇಶ- ೨

-ಎಂದು ಹೇಳಿದ್ದಾನೆ. ಕಾಲವು ಕ್ರಿಯೆಗೆ ವಿಶೇಷಣ. ಸಂಖ್ಯೆಯು ಸರ್ವಪದಾರ್ಥ ಗಳಿಗೂ ವಿಶೇಷಣ. ವಿಶೇಷಣವೆಂದರೆ ಭೇದಕ. ಒಂದನ್ನು ಇನ್ನೊಂದರಿಂದ ವ್ಯಾವೃತ್ತಿ ಗೊಳಿಸತಕ್ಕದ್ದು ಭೇದಕ. ಪಕ್ಷ, ಮಾಸ, ಸಂವತ್ಸರ -ಮೊದಲಾದ ಕಾಲವಾಚಕಗಳು ಸೂರ್ಯಕ್ರಿಯೆಗಳನ್ನು ಅಳತೆಮಾಡುವುದರಿಂದ ಭೇದಕಗಳಾಗುತ್ತವೆ. ಸಂಖ್ಯೆಯು ಕ್ರಿಯೆಗೂ ಸಹ ವಿಶೇಷಣವಾಗಿ ಭೇದಕವೆನಿಸಬಲ್ಲದು. ಎರಡು ಕ್ರಿಯೆ, ಮೂರು ಕ್ರಿಯೆ ಎಂದು ವ್ಯವಹಾರ ಉಂಟಷ್ಟೆ.

ಪ್ರತಿಯೊಂದು ಪದಾರ್ಥದಲ್ಲಿರುವ ಸ್ವಾಭಾವಿಕ ಶಕ್ತಿಯನ್ನು ಅರಳಿಸಿ, ಉಳಿಸಿ, ಅಳಿಸಿಹಾಕತಕ್ಕದ್ದು ಕಾಲ. ಚಿಗುರೆಲೆ ಹಸಿರುಬಣ್ಣಕ್ಕೆ ತಿರುಗುವುದು ಕಾಲದ ಮಹಿಮೆ ಯಿಂದ. ಕೆಲವು ಸಮಯ ಅದೇ ಹಸಿರನ್ನು ಉಳಿಸಿಕೊಳ್ಳುವುದು, ಅನಂತರ ಬಾಡಿ ಬಣ್ಣಗೆಟ್ಟು ಉದುರಿಹೋಗುವುದೂ ಕಾಲದ ಮಹಿಮೆಯಿಂದ. ಬೀಜಗಳಿಗೆ ಮಣ್ಣು, ನೀರು, ಗಾಳಿಗಳನ್ನು ಒದಗಿಸಿದರೂ ಕೂಡಲೇ ಮೊಳಕೆಯಾಗುವುದಿಲ್ಲ. ಅದಕ್ಕೆ ಗೊತ್ತಾದ ಕಾಲವು ಬಂದು ನೆರವು ನೀಡದ ಹೊರತು ಮೊಳೆಯುವುದಿಲ್ಲ. ಕಾಲದಲ್ಲಿ ಅಸಾಧಾರಣವಾದ ಸಾಮರ್ಥ್ಯ ಉಂಟು. ಕಾಲಕ್ಕೆ ಅನುಗ್ರಹ, ಪ್ರತಿಬಂಧ -ಎಂಬ ಎರಡು ಶಕ್ತಿಗಳಿವೆಯೆಂದೂ ಸಮಸ್ತವಿಶ್ವದ ಸೂತ್ರಧಾರನೇ ಕಾಲವೆಂದೂ ಭರ್ತೃಹರಿ ಹೇಳಿದ್ದಾನೆ- 'ಕಾಲಯತಿ ಸಮಸ್ತ ಭೂತಾನೀತಿ ಕಾಲಃ' -ಸಮಸ್ತ ಪದಾರ್ಥಗಳನ್ನೂ ಅನುಗ್ರಹಪ್ರತಿಬಂಧಗಳಿಂದ ನಿಯಮಿಸತಕ್ಕದ್ದು ಕಾಲವೆಂದು ಕಾಲ ಶಬ್ದಕ್ಕೆ ಇನ್ನೊಂದು ವ್ಯುತ್ಪತ್ತಿಯನ್ನು ಆತನು ಹೇಳಿದ್ದಾನೆ. ಮಾವಿನ ಮರವು ಚಿಗುರುವಂತೆ ವಸಂತಕಾಲವು ಅನುಗ್ರಹಿಸುತ್ತದೆ. ಹಲಸಿನ ಮರವು ಫಲವನ್ನು ನೀಡದಂತೆ ಚಳಿಗಾಲವು ಪ್ರತಿಬಂಧಿಸುತ್ತದೆ.

ಕಾಲವು ಈಶ್ವರನ ಒಂದು ಸ್ವಾತಂತ್ರ್ಯಶಕ್ತಿಯೆಂದು ಭರ್ತೃಹರಿಯ ಸಿದ್ಧಾಂತವಿದೆ. ಇದರ ವಿವರವನ್ನೂ ಇತರ ಪಕ್ಷಭೇದಗಳನ್ನೂ ವಾಕ್ಯಪದೀಯದ ಬ್ರಹ್ಮಕಾಂಡ ದಲ್ಲಿಯೂ ಪ್ರಕೀರ್ಣಕಾಂಡದ ಕಾಲಸಮುದ್ದೇಶದಲ್ಲಿಯೂ ನೋಡಬಹುದು. ಕಾಲವು ಪರಬ್ರಹ್ಮನ ಅವಿದ್ಯಾಶಕ್ತಿಯೆಂದೂ ಮಾಯೆಯೆಂದೂ ವ್ಯಾಖ್ಯಾನಕಾರನಾದ ಹೇಲಾ ರಾಜನು ವಿವರಿಸಿದ್ದಾನೆ (ನೋಡಿ: ಕಾಲಸಮುದ್ದೇಶ, ಶ್ಲೋಕ ೧೪-೪೬-೬೨). ಈ ಸಂದರ್ಭದಲ್ಲಿ ವಾಲ್ಮೀಕಿ ರಾಮಾಯಣದ ಈ ಶ್ಲೋಕವು ಗಮನಾರ್ಹವಾದದ್ದು. ಕಾಲಪುರುಷನು ಶ್ರೀರಾಮನಿಗೆ ಹೇಳುತ್ತಾನೆ-

ತವಾಹಂ ಪೂರ್ವಸದ್ಭಾವೇ ಪುತ್ರಃ ಪರಪುರಂಜಯ ।
ಮಾಯಾಸಂಭಾವಿತೋ ವೀರ ಕಾಲಃ ಸರ್ವಸಮಾಹರಃ ॥

— ಉತ್ತರಕಾಂಡ, ೧೦೪ -೨

"ಹೇ ವೀರಾಗ್ರಣಿ, ನಿನ್ನ ಪೂರ್ವಾವಸ್ಥೆಯಲ್ಲಿ ನೀನು ಪರಬ್ರಹ್ಮವೆನಿಸಿ ಸತ್ತಾಮಾತ್ರಸ್ಥಿತಿಯಲ್ಲಿದ್ದಾಗ, ನಿನ್ನ ಮಾಯೆಯಿಂದ ಜನಿಸಿದ ನಿನ್ನ ಪುತ್ರನು ನಾನು! ಸರ್ವಕೃತ್ಯನಿರ್ವಾಹಕನಾದ ಕಾಲಪುರುಷನೇ ನಾನು!"

'ಬೆಂಗಳೂರಿಗೆ ಮೈಸೂರು ಹತ್ತಿರ, ಡೆಲ್ಲಿ ದೂರ' ಎನ್ನುತ್ತೇವೆ. ಹತ್ತಿರ, ದೂರ ಎಂದರೇನು? ಅಲ್ಪಕ್ರಿಯಾಧಾರವಾದ ಕಾಲದಲ್ಲಿ ಸೇರಬಹುದಾದ ಸ್ಥಳ ಹತ್ತಿರ. ಬಹುಕ್ರಿಯಾಧಾರವಾದ ಕಾಲದಲ್ಲಿ ಸೇರಬಹುದಾದ ಸ್ಥಳ ದೂರ. ಒಳ್ಳೆಯದು; 'ರೈಲು ಪ್ರಯಾಣಕ್ಕೆ ಡೆಲ್ಲಿ ದೂರ, ವಿಮಾನ ಪ್ರಯಾಣಕ್ಕೆ ಹತ್ತಿರ' –ಇಲ್ಲಿ ಹೇಗೆ? ಇಲ್ಲಿಯೂ ಕ್ರಿಯಾಧಾರಕಾಲದಿಂದಲೇ ವ್ಯವಸ್ಥೆಯನ್ನು ಹೇಳಬೇಕು. ಗಡಿಯಾರದ ಮುಳ್ಳಿನ ಅಲ್ಪಕ್ರಿಯೆಗೆ ಆಧಾರವಾದ ಕಾಲದಲ್ಲಿ ಸೇರಬಹುದಾದ್ದರಿಂದ ವಿಮಾನ ಪ್ರಯಾಣಕ್ಕೆ ಡೆಲ್ಲಿ ಹತ್ತಿರ; ಅದರ ಬಹುಕ್ರಿಯೆಗೆ ಆಧಾರವಾದ ಕಾಲದಲ್ಲಿ ಸೇರ ಬೇಕಾದ್ದರಿಂದ ರೈಲು ಪ್ರಯಾಣಕ್ಕೆ ದೂರ. ಸೂರ್ಯಸ್ಪಂದನವನ್ನೂ ಇಲ್ಲಿ ಪರಿಚ್ಛೇದಕ ವಾಗಿ ಹೇಳಬಹುದು. ಇದೇ ರೀತಿಯಲ್ಲಿ ಬೇಗನೆ–ತಡವಾಗಿ, ಹಿಂದೆ–ಮುಂದೆ, ಬಾಲಕ– ಯುವಕ–ಮುದುಕ ಇತ್ಯಾದಿ ವ್ಯವಹಾರಗಳೆಲ್ಲವೂ ಕ್ರಿಯಾಧಾರವಾದ ಕಾಲದಿಂದಲೇ ನಡೆಯುತ್ತವೆಯೆಂದು ತಿಳಿಯಬಹುದು.

ಅಖಂಡವಾದ ಕಾಲದಿಂದ ವ್ಯವಹಾರ ನಡೆಯುವುದಿಲ್ಲ. ಅದು ಉಪಾಧಿ ಯಿಂದ ಸಖಂಡವಾದಾಗ ಮಾತ್ರ ವ್ಯವಹಾರ ನಡೆಯುತ್ತದೆ. ಕಾಲವನ್ನು ಸಖಂಡ ವಾಗಿ ಮಾಡತಕ್ಕ ಉಪಾಧಿ ಕ್ರಿಯೆಯೆಂದು ಸಿದ್ಧವಾಗುತ್ತದೆ. ಹಾಗಿದ್ದರೆ ಅವಶ್ಯವಾದ ಕ್ರಿಯೆಗಳಿಂದಲೇ ವ್ಯವಹಾರವನ್ನು ಸಾಗಿಸಬಹುದಲ್ಲವೆ? ಕಾಲವನ್ನೇಕೆ ಒಪ್ಪಬೇಕು? ಎಂಬ ಪ್ರಶ್ನೆಯೂ ಹುಟ್ಟುತ್ತದೆ. ಆದ್ದರಿಂದಲೇ ಕೆಲವು ದಾರ್ಶನಿಕರು ಕಾಲವೆಂಬ ಪದಾರ್ಥವನ್ನೊಪ್ಪುವುದಿಲ್ಲ. ಜಯಂತ ಭಟ್ಟನ ನ್ಯಾಯಮಂಜರಿ, ಕುಮಾರಿಲಭಟ್ಟರ ಶ್ಲೋಕವಾರ್ತಿಕ –ಮೊದಲಾದ ಗ್ರಂಥಗಳಲ್ಲಿ ಈ ವಿಷಯದಲ್ಲಿ ವಿಪುಲವಾದ ಚರ್ಚೆ ಇದೆ. ಒಟ್ಟು ಮಥಿತಾರ್ಥ ಇಷ್ಟು–

೧. ಪರಬ್ರಹ್ಮದ ಒಂದು ಸ್ವಾತಂತ್ರ್ಯಶಕ್ತಿಯೇ ಕಾಲ. ಇದನ್ನು ಅವಿದ್ಯೆ ಎನ್ನ ಬಹುದು. ಪ್ರಕೃತಿಪರಿಣಾಮವೂ ವಿಭುವೂ ಅವಿಚ್ಛಿನ್ನಕ್ಷಣಧಾರಾರೂಪವೂ ಆಗಿದೆ. — ವೈಯಾಕರಣರು

೨. ವಿಭುವೂ ನಿತ್ಯವೂ ಏಕವೂ ಅಖಂಡವೂ ಆಗಿದ್ದು ಅತೀತಾದಿ ವ್ಯವಹಾರಕ್ಕೆ ಹೇತುವಾದ ದ್ರವ್ಯವೇ ಕಾಲ. — ನೈಯಾಯಿಕರು

೩. ಶಬ್ದತನ್ಮಾತ್ರದ ಪರಿಣಾಮವೇ ಕಾಲ. ಇದು ಕ್ರಿಯೋಪಾಧಿಯುಳ್ಳ ಆಕಾಶವೇ ಹೊರತು ಬೇರೊಂದು ವಸ್ತುವಲ್ಲ ಅಥವಾ ಸೂರ್ಯಕ್ರಿಯೆಯೇ ಕಾಲ. — ಸಾಂಖ್ಯರು

೪. ಕ್ರಿಯೋಪಾಧಿಯುಳ್ಳ ಆಕಾಶವೇ ಕಾಲ. — ಮೀಮಾಂಸಕರು

೫. ಪ್ರತಿಯೊಂದು ವಸ್ತುವಿನ ಪರಿವರ್ತನೆಗೆ ಸಹಾಯಕವಾಗಿ ಅದರ ರೂಪಾಂತರಕ್ಕೆ ನೆರವಾಗತಕ್ಕದ್ದು ಕಾಲದ್ರವ್ಯ. ಇದು ಅನಾದಿ ಅನಂತ. ಇದು ಪ್ರದೇಶವನ್ನು ವ್ಯಾಪಿಸದೇ ಇರುವುದರಿಂದ ಅನಸ್ತಿಕೀಯವೂ ಅಮೂರ್ತವೂ ಆಗಿದೆ.

— ಜೈನಸಿದ್ಧಾಂತ

೬. ವ್ಯವಹಾರಕ್ಕಾಗಿ ಕಲ್ಪಿತವಾದ ಸಾಪೇಕ್ಷಜ್ಞಾನವೇ ಕಾಲ. — ಬೌದ್ಧಸಿದ್ಧಾಂತ

ಸಮಸ್ತಪದಾರ್ಥಗಳಿಗೂ ಕಾಲವು ಆಧಾರವಾಗಿರುವುದು ಕಾಲಿಕಸಂಬಂಧದಿಂದ. ಅದು ಕ್ರಿಯೆಯಿಂದ ಅಳತೆಗೆ ಸಿಗುತ್ತದೆ. ಕ್ರಿಯಾಪರಿಚ್ಛಿನ್ನವಾಗುತ್ತದೆ. ಸ್ವತಃ ಕಾಲದಲ್ಲಿ ಯಾವ ಕ್ರಿಯೆಯೂ ಇಲ್ಲ. ವರ್ತಮಾನ, ಭೂತ, ಭವಿಷ್ಯತ್ತುಗಳು ಕ್ರಿಯಾಸಂಬಂಧದಿಂದ ಆಗತಕ್ಕವು. ಇವುಗಳಲ್ಲಿ ವರ್ತಮಾನಕಾಲವು ಪರಿಶೀಲನಾರ್ಹವಾದದ್ದು.

ವರ್ತಮಾನಕಾಲವೆಂದರೇನು? 'ಈಗ ನಡೆಯುತ್ತಿರುವ ಕಾಲ ವರ್ತಮಾನಕಾಲ' ಎಂದು ಸಾಮಾನ್ಯವಾಗಿ ಹೇಳುವುದುಂಟು. ಬಾಲಕರಿಗೆ ಸ್ಥೂಲವಾದ ಪರಿಚಯವನ್ನು ಮಾಡಿಕೊಡುವುದಕ್ಕಾಗಿ ಹೇಳುವ ಮಾತೇ ಹೊರತು, ಇದು ಶಾಸ್ತ್ರೀಯವಾದ ಹೇಳಿಕೆಯಲ್ಲ. ಕಾಲವು ಕಣ್ಣಿಗೆ ಕಾಣದು. ಅದರಲ್ಲಿ ಯಾವ ಕ್ರಿಯೆಯೂ ಇಲ್ಲ. ಈಗ ನಡೆಯುತ್ತಿರುವ ವಿವಕ್ಷಿತವಾದ ಯಾವ ಕ್ರಿಯೆಯುಂಟೋ ಅದಕ್ಕೆ ಆಧಾರವಾದ ಕಾಲವನ್ನು ವರ್ತಮಾನಕಾಲವೆನ್ನಬಹುದು. ಈಗ ಎಂದರೆ ಕ್ರಿಯಾಪದವನ್ನು ಒಬ್ಬನು ಪ್ರಯೋಗಿಸುವ ಕಾಲದಲ್ಲಿ ಎಂದರ್ಥ. ಏವಂ ಚ ಶಬ್ದಪ್ರಯೋಗಾಧಿಕರಣಕಾಲದಲ್ಲಿ ವಿವಕ್ಷಿತವಾದ ಕ್ರಿಯೆಗೆ ಅಧಿಕರಣವಾದ ಕಾಲ ವರ್ತಮಾನಕಾಲವೆನಿಸುತ್ತದೆ. ಉದಾಃ 'ಹುಡುಗನು ಓದುತ್ತಾನೆ.' ಈ ವಾಕ್ಯವನ್ನು ಪ್ರಯೋಗಿಸುವ ಕಾಲದಲ್ಲಿ ಹುಡುಗನ ಓದುವ ಕ್ರಿಯೆ ನಡೆಯುತ್ತಿದೆಯೆಂದು ಇದರಿಂದ ತಿಳಿದುಬರುತ್ತದೆ. ಈ ಸಂದರ್ಭದಲ್ಲಿ ಕ್ರಿಯೆಯೆಂದರೆ ಯಾವುದೆಂದು ಪರಿಶೀಲಿಸಬೇಕಾಗಿದೆ. ಕ್ರಿಯೆಯನ್ನು ಬಿಟ್ಟು ಉಳಿದ ಸಮಸ್ತ ಪದಾರ್ಥಗಳೂ ಸಿದ್ಧಸ್ವರೂಪದಲ್ಲಿರುತ್ತವೆ. ಕ್ರಿಯೆಯು ಮಾತ್ರ ಸಾಧ್ಯಸ್ವರೂಪದಲ್ಲಿ ಪ್ರತೀತವಾಗುತ್ತದೆ. ಸಾಧ್ಯವೆಂದರೆ ಕ್ರಮಜನ್ಯವೆಂದರ್ಥ. 'ಹುಡುಗನು ಓದುತ್ತಾನೆ' ಎಂಬ ವಾಕ್ಯದಲ್ಲಿ ಹುಡುಗನು ಸಿದ್ಧಪದಾರ್ಥ. ಓದುವ ಕ್ರಿಯೆ ಮಾತ್ರ ಕ್ರಮವಾಗಿ ಜರುಗುತ್ತಿದೆ ಎಂದು ಪ್ರತೀತವಾಗುವುದರಿಂದ ಅದರ ಸ್ವಭಾವವು ಸಾಧ್ಯ. 'ಓದಿದನು' ಎಂದು ಭೂತಕಾಲವನ್ನು ಪ್ರಯೋಗಿಸಿದಾಗಲೂ ಓದುವ ಕ್ರಿಯೆ ಕ್ರಮವಾಗಿ ಕೆಲವು ಕಾಲದವರೆಗೆ ಜರುಗಿತು ಎಂದೇ ಪ್ರತೀತವಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಕ್ರಿಯೆಯು ಘಟಪಟಗಳಂತೆ ಸಿದ್ಧವಸ್ತುವಲ್ಲ. ಹಲವಾರು ಕ್ರಿಯಾವಯವಗಳ ಸಂತಾನವನ್ನೇ ನಾವು ಒಂದು ಕ್ರಿಯೆಯೆಂದು ಕರೆಯುತ್ತಿದ್ದೇವೆ. ಘಟಪಟಗಳಲ್ಲಿಯೂ ಸೂಕ್ಷ್ಮಾವಯವಗಳಿದ್ದರೂ ಅವೆಲ್ಲವೂ ಘಟದಲ್ಲಿ ಸಿದ್ಧವಾಗಿ ಕುಳಿತಿರುತ್ತವೆ. ಕ್ರಿಯಾವಯವಗಳು ಹಾಗಲ್ಲ. ಒಂದೊಂದು ಅವಯವವೂ ಹುಟ್ಟಿ ನಾಶವಾಗಿಬಿಡುತ್ತದೆ. ಕ್ರಿಯಾವಯವಗಳ ಸಮುದಾಯ ಒಟ್ಟಿಗೆ ಇರುವುದೇ ಇಲ್ಲ.

'ಮನೆಯಿಂದ ಪೇಟೆಗೆ ಹೋಗುತ್ತಾನೆ' ಎಂಬಲ್ಲಿ ಹೋಗುವುದೆಂದರೇನು? ಮನೆಯ ಹೊರಗೆ ಮೊದಲನೆಯ ಹೆಜ್ಜೆಯಿಡುವುದನ್ನಾರಂಭಿಸಿ ಪೇಟೆಯನ್ನು ಮುಟ್ಟುವ ಕಡೆಯ ಹೆಜ್ಜೆಯನ್ನಿಡುವುದೇ ಹೋಗುವುದು. ಅಲ್ಲಿಯ ವರೆಗೆ ಸಾವಿರಾರು ಹೆಜ್ಜೆಗಳನ್ನಿಡುವುದು ಹೋಗುವ ಕ್ರಿಯೆಯ ಅವಯವಗಳು. ಒಂದು ಹಜ್ಜೆಯನ್ನಿಡು ವುದರಲ್ಲಿ ಸಹ ಕಾಲನ್ನೆತ್ತುವುದೇ ಮೊದಲಾದ ಅವಾಂತರ ಕ್ರಿಯೆಗಳಿರುತ್ತವೆ. ಈ ಎಲ್ಲ ಕ್ರಿಯೆಗಳ ಸಮುದಾಯವೇ ಹೋಗುವ ಕ್ರಿಯೆ.

'ಪಾಠವನ್ನು ಓದುತ್ತಾನೆ' ಎಂದಾಗ ಹಲವಾರು ಅಕ್ಷರಗಳ ಹಲವಾರು ಉಚ್ಚಾರಣಕ್ರಿಯೆಗಳ ಸಂತತಿ ಇರುತ್ತದೆ. ಈ ಕ್ರಿಯೆಗಳು ಕ್ರಮಜನ್ಯವಾದವು. ಯಾವ ಅಕ್ಷರದ ಉಚ್ಚಾರಣಕ್ರಿಯೆಯನ್ನು ಗಮನಿಸಿ 'ಓದುತ್ತಾನೆ' ಎಂಬ ಶಬ್ದವನ್ನು ಪ್ರಯೋಗಿಸುತ್ತೇವೋ ಆ ಸಮಯದಲ್ಲಿ ಆ ಕ್ರಿಯೆಯು ಭೂತವಾಗಿರುತ್ತದೆ! ಉಳಿದ ಕ್ರಿಯೆಗಳು ಭವಿಷ್ಯತ್ತಿಗೆ ಸೇರತಕ್ಕವು! ವರ್ತಮಾನಕ್ರಿಯೆ ಯಾವುದು? ಈ ವಿಚಾರ ವನ್ನು ಕುರಿತು ಪತಂಜಲಿಯ ವ್ಯಾಕರಣಮಹಾಭಾಷ್ಯದಲ್ಲಿ ರೋಚಕವಾದ ವಿಚಾರವು ಪ್ರವೃತ್ತವಾಗಿದೆ. 'ವರ್ತಮಾನೇ ಲಟ್' ಎಂಬ ಪಾಣಿನಿಸೂತ್ರವನ್ನು ವ್ಯಾಖ್ಯಾನಿಸು ವಾಗ ವರ್ತಮಾನಕಾಲವೇ ಇಲ್ಲವೆಂದು ಪೂರ್ವಪಕ್ಷಿ ಹೇಳುತ್ತಾನೆ–

ಮೀಮಾಂಸಕಂ ಮನ್ಯಮಾನೋ ಯುವಾ ಮೇಧಾವಿಸಂಮತಃ ।
ಕಾಕಂ ಸ್ಮೇಹಾನುಪೃಚ್ಛತಿ ಕಿಂ ತೇ ಪತಿತ ಲಕ್ಷಣಮ್ ॥
ಅನಾಗತೇ ನ ಪತಸಿ ಅತಿಕ್ರಾಂತೇ ಚ ಕಾಕ ನ ।
ಯದಿ ಸಂಪ್ರತಿ ಪತಸಿ ಸರ್ವೋ ಲೋಕಃ ಪತತ್ಯಯಮ್ ॥
ಹಿಮವಾನಪಿ ಗಚ್ಛತಿ ॥

ತಾನು ವಿಚಾರಶೀಲನೆಂದು ತಿಳಿದುಕೊಂಡಿರತಕ್ಕವನೂ ವಿದ್ವನ್ಮಾನ್ಯನೂ ಆದ ಒಬ್ಬ ಯುವಕನು ಕಾಗೆಯನ್ನು ಕುರಿತು ಹೀಗೆ ಪ್ರಶ್ನೆ ಮಾಡಿದನಂತೆ– 'ಎಲೈ ಕಾಗೆ, ನೀನು ಹಾರುತ್ತೀಯೆ' ಎನ್ನುತ್ತಾರಲ್ಲ, ಅದು ಹೇಗೆ? ಭವಿಷ್ಯತ್ಕಾಲದಲ್ಲಿ 'ಹಾರು ತ್ತೀಯೆ' ಎನ್ನಲಾಗುವುದಿಲ್ಲ. ಭೂತಕಾಲದಲ್ಲಿಯೂ ಹಾಗೆ ಹೇಳಲಾಗುವುದಿಲ್ಲ. ಹೀಗಿದ್ದರೂ ನೀನು 'ಈಗ ಹಾರುತ್ತೀಯೆ' ಎಂದು ಹೇಳಬಹುದಾದರೆ, 'ಸಮಸ್ತ ಜನರೂ ಹಾರುತ್ತಿದ್ದಾರೆ' ಎಂದು ಹೇಳಬಹುದು. 'ಹಿಮಾಲಯಪರ್ವತವೂ ಹೋಗುತ್ತಿದೆ' ಎಂದು ಹೇಳಬಹುದು!

ವಿವರಣೆ: ಈ ಶ್ಲೋಕದಲ್ಲಿ 'ಪತ' ಧಾತು ಹಾರು ಎಂಬ ಅರ್ಥದಲ್ಲಿ ಪ್ರಯುಕ್ತ ವಾಗಿದೆ. 'ಪತಿತ'=ಹಾರುವಕ್ರಿಯೆ. 'ಕಾಗೆ ಹಾರುತ್ತದೆ' ಎಂಬ ಪ್ರಯೋಗ ಉಂಟಷ್ಟೆ. ಈ ಹಾರುವ ಕ್ರಿಯೆ ಅಸಂಖ್ಯಾತ ಹಾರುವ ಕ್ರಿಯೆಗಳ ಸಮುದಾಯ. ಯಾವ ಕ್ರಿಯೆಯನ್ನು ವಕ್ತಾರನು ಗುರುತಿಸಿ ಶಬ್ದಪ್ರಯೋಗ ಮಾಡುತ್ತಾನೋ ಆ ಕ್ರಿಯೆಯು 'ಕಾಗೆ ಹಾರುತ್ತದೆ' ಎಂದು ಪ್ರಯೋಗ ಮಾಡುವಷ್ಟರಲ್ಲಿ ಗತಿಸಿ ಹೋಗಿರುತ್ತದೆ. ಆದ್ದರಿಂದ ಅದನ್ನು ಕುರಿತು ಹೇಳುವುದಾದರೆ 'ಹಾರಿತು' ಎಂದು ಭೂತಕಾಲವನ್ನು ಬಳಸಬೇಕು. ಮುಂದೆ ನಡೆಯುವ ಕ್ರಿಯೆಯನ್ನು ಗಮನಿಸಿ ಹೇಳುವುದಾದರೆ

'ಹಾರುವುದು' ಎಂದು ಭವಿಷ್ಯತ್ಕಾಲದಲ್ಲಿ ನಿರ್ದೇಶಿಸಬೇಕು. ಆದ್ದರಿಂದ 'ಹಾರುತ್ತದೆ' ಎಂಬ ವರ್ತಮಾನಕಾಲದ ಪ್ರಯೋಗಕ್ಕೆ ಅವಕಾಶವೇ ಇಲ್ಲ. ಹಾರುವ ಕ್ರಿಯೆ ವರ್ತಮಾನವಲ್ಲದಿದ್ದರೂ 'ಹಾರುತ್ತದೆ' ಎಂದು ಪ್ರಯೋಗಿಸಬಹುದಾದರೆ, 'ಸಮಸ್ತ ಜನರೂ ಹಾರುತ್ತಿದ್ದಾರೆ, ಹಿಮಾಲಯವು ನಡೆಯುತ್ತಿದೆ' –ಎಂದೂ ಪ್ರಯೋಗಿಸ ಬಹುದಷ್ಟೆ! ಎಂದು ಆಕ್ಷೇಪ. ನಿಷ್ಪನ್ನವಾದದ್ದು ಭೂತಕಾಲಕ್ಕೆ ಸೇರುತ್ತದೆ. ಅನಿಷ್ಪನ್ನ ವಾದದ್ದು ಭವಿಷ್ಯತ್ ಕಾಲಕ್ಕೆ ಸೇರುತ್ತದೆ. ನಿಷ್ಪನ್ನ–ಅನಿಷ್ಪನ್ನಗಳಿಗೆ ವ್ಯತಿರಿಕ್ತವಾದ ಕ್ರಿಯೆ ಇಲ್ಲ –ಎಂದು ಅಭಿಪ್ರಾಯ.

ಈ ಆಕ್ಷೇಪಕ್ಕೆ ಸಮಾಧಾನ ಹೀಗೆ: 'ಓದು' ಎಂಬ ಧಾತುವಿನಿಂದ ವಾಚ್ಯವಾದ ಎಲ್ಲ ವರ್ಣೋಚ್ಚಾರಣಗಳ ಕ್ರಿಯೆಗಳ ಸಮುದಾಯವನ್ನು ಇಲ್ಲಿ ಓದುವ ಕ್ರಿಯೆ ಯೆಂದು ತಿಳಿಯಬೇಕು. ಈ ಕ್ರಿಯೆಗಳು ಕ್ರಮಜನ್ಯಗಳೂ ಶೀಘ್ರವಿನಾಶಿಗಳೂ ಆದ್ದರಿಂದ ಇವುಗಳ ಸಮುದಾಯವೇ ಇಲ್ಲವೆಂಬುದೇನೋ ದಿಟ. ಆದರೆ ಸಂಕಲ ನಾತ್ಮಕ ಬುದ್ಧಿಯಿಂದ ಈ ಕ್ರಿಯೆಗಳೆಲ್ಲವನ್ನೂ ಸೇರಿಸಿ ಸಮುದಾಯವನ್ನು ಕಲ್ಪಿಸಿ ಕೊಳ್ಳಲು ಸಾಧ್ಯವಿದೆ. ಈ ಕಲ್ಪಿತ ಸಮುದಾಯವೇ 'ಓದು' ಧಾತುವಿನ ಅರ್ಥ. ಭರ್ತೃಹರಿ ಹೀಗೆ ವಿವರಿಸಿದ್ದಾನೆ–

> ಗುಣಭೂತೈರವಯವೈಃ ಸಮೂಹಃ ಕ್ರಮಜನ್ಮನಾಂ ।
> ಬುದ್ಧ್ಯಾ ಪ್ರಕಲ್ಪಿತಾಭೇದಃ ಕ್ರಿಯೇತಿ ವ್ಯಪದಿಶ್ಯತೇ ॥
>
> – ವಾಕ್ಯಪದೀಯ, ಕ್ರಿಯಾಸಮುದ್ದೇಶ -೪

ಕ್ರಮಜನ್ಯವಾದ ವ್ಯಾಪಾರಗಳ ಸಮುದಾಯವೇ ಕ್ರಿಯೆಯೆನಿಸುತ್ತದೆ. ಸಮುದಾಯದಿಂದ ಉಂಟಾಗುವ ಫಲಕ್ಕೆ ಅದರ ಅವಯವ ಕ್ರಿಯೆಗಳು ನೆರವು ನೀಡುವುದರಿಂದ ಗುಣಭೂತಗಳೆನಿಸುತ್ತವೆ. ಗುಣಭೂತಗಳಾದ್ದರಿಂದ ಅವುಗಳಿಗೆ ಪ್ರಾಧಾನ್ಯವಿಲ್ಲ, ಸಮುದಾಯಕ್ಕೆ ಮಾತ್ರ ಪ್ರಾಧಾನ್ಯವಿರುತ್ತದೆ. ಸಮುದಾಯವು ಒಂದೆಂದು ಸಂಕಲನಾತ್ಮಕ ಬುದ್ಧಿಯಿಂದ ಕಲ್ಪಿತವಾಗಿರುತ್ತದೆ.

ಈ ಸಮೂಹದ ಅವಯವಕ್ರಿಯೆಗಳಲ್ಲಿ ಮೊದಲನೆಯದು ಆರಂಭವಾಗಿ, ಕಡೆಯದು ಮುಗಿಯದೆ ಇದ್ದಾಗ ವರ್ತಮಾನಕಾಲ– ಪ್ರಾರಬ್ಧ+ ಅಪರಿಸಮಾಪ್ತತ್ವಂ ವರ್ತಮಾನತ್ವಮ್! ಈ ಅವಯವಕ್ರಿಯೆಗಳಲ್ಲಿ ಅಂತ್ಯವಾದ ಕ್ರಿಯೆಯು ಮುಗಿದಾಗ ಭೂತಕಾಲ. ಆದಿಕ್ರಿಯೆಯು ಆರಂಭವಾಗದಿದ್ದಾಗ ಭವಿಷ್ಯತ್ಕಾಲ. ಎಲ್ಲ ಕ್ರಿಯಾಪದ ಗಳಲ್ಲಿಯೂ ಈ ಲಕ್ಷಣಗಳನ್ನು ಅನುಗತವಾಗಿ ಕಂಡುಕೊಳ್ಳಬಹುದು.

ಈ ಪ್ರಯೋಗಗಳನ್ನು ನೋಡಿ: "ದೇವರು ಹಿಂದೆ ಇದ್ದನು, ಮುಂದೆಯೂ ಇರುವನು, ಈಗಲೂ ಇದ್ದಾನೆ. ಹಿಮಾಲಯವು ಹಿಂದೆ ಇದ್ದಿತು, ಮುಂದೆಯೂ ಇರುವುದು, ಈಗಲೂ ಇದೆ. ಬೆಂಕಿಯಲ್ಲಿ ಸುಡುವ ಶಕ್ತಿ ಹಿಂದೆ ಇದ್ದಿತು, ಮುಂದೆಯೂ ಇರುವುದು, ಈಗಲೂ ಇದೆ." ಇಲ್ಲಿ ಇರುವ ಕ್ರಿಯೆ ನಿತ್ಯ ಪ್ರವೃತ್ತವಾದದ್ದು. ಇದಕ್ಕೆ ಪ್ರಾರಂಭವೂ ಇಲ್ಲ. ಪರಿಸಮಾಪ್ತಿಯೂ ಇಲ್ಲ. ಆದರೆ ಮೂರು ಕಾಲಗಳಲ್ಲಿಯೂ 'ಇರು' ಧಾತುವಿಗೆ ಪ್ರಯೋಗ ಬಂದಿದೆ. ಇರುವಿಕೆ ಎಂಬ

ಕ್ರಿಯೆ ಪರಿಸಮಾಪ್ತವಾಗಿಲ್ಲವಾದ್ದರಿಂದ ಭೂತಕಾಲ ಹೇಗೆ? ಈ 'ಇರುವ' ಕ್ರಿಯೆ ಈಗಲೂ ನಡೆಯುತ್ತಿರುವಾಗ ಭವಿಷ್ಯತ್ಕಾಲ ಹೇಗೆ? ವರ್ತಮಾನ ಕಾಲವು ಭೂತ ಭವಿಷ್ಯತ್ತುಗಳಿಗೆ ಪ್ರತಿದ್ವಂದ್ವಿಯಾದದ್ದು. ಯಾವುದಕ್ಕೆ ಭೂತಭವಿಷ್ಯತ್ತುಗಳಿಲ್ಲವೋ ಅದನ್ನು ವರ್ತಮಾನವೆನ್ನಲಾಗದು. ಏಕೆಂದರೆ, ಇದು ಸಾಪೇಕ್ಷವಾದದ್ದು. 'ದೊಡ್ಡದು' ಇದ್ದಾಗ 'ಚಿಕ್ಕದು' ಪ್ರಯೋಗ ಸಾಧ್ಯ. ದೊಡ್ಡದೇ ಇಲ್ಲದಾಗ ಚಿಕ್ಕದು ಎಂಬುದು ಅರ್ಥಶೂನ್ಯವಾಗುತ್ತದೆ. ಅಲ್ಲದೆ ಅವಯವಕ್ರಿಯೆಗಳಲ್ಲಿ ಮೊದಲನೆಯದು ಪ್ರಾರಂಭ ವಾದಾಗ ವರ್ತಮಾನಕಾಲ ಎಂದು ಹೇಳಿದ್ದೇವೆ. ಮೇಲ್ಕಂಡ ಉದಾಹರಣೆಗಳಲ್ಲಿ ಇರುವ ಕ್ರಿಯೆ ನಿತ್ಯಪ್ರವೃತ್ತವಾದ್ದರಿಂದ ಅವಯವಕ್ರಿಯೆಯ ಪ್ರಾರಂಭವೇ ಇಲ್ಲ. ಆದ ಕಾರಣ ವರ್ತಮಾನಕಾಲದ ಪ್ರಯೋಗವೂ ಸಾಧುವಾಗಲಾರದು.

ಈ ಆಕ್ಷೇಪಗಳಿಗೆ ಸಮಾಧಾನ ಹೀಗೆ: ಸಮಸ್ತ ಭಾವಪದಾರ್ಥಗಳು ಅನ್ಯೋಪಾಧಿಯಿಂದ ಭೇದವನ್ನು ತಳೆಯುತ್ತವೆ. ಸ್ವತಃ ಅವುಗಳಲ್ಲಿ ಯಾವ ಭೇದವೂ ಗೋಚರಿಸಲಾರದು. ನಮ್ಮ ವ್ಯವಹಾರವೆಲ್ಲವೂ ಸಾಪೇಕ್ಷವಾಗಿಯೇ ಪ್ರವೃತ್ತವಾಗಿರು ತ್ತವೆ. ಹೇಗೆಂದರೆ, 'ಚಿನ್ನವು ಬೆಲೆಬಾಳುವ ಲೋಹ' ಈ ವಾಕ್ಯದಲ್ಲಿ ಇತರ ಲೋಹಗಳಿರುವುದರಿಂದ ಚಿನ್ನದ ಪೃಥಕ್ಕರಣ ಸಾಧ್ಯವಾಗಿದೆ. ಕಡಮೆ ಬೆಲೆಯ ಲೋಹವಿರುವುದರಿಂದಲೇ 'ಬೆಲೆಬಾಳುವ' ಎನ್ನುವ ವಿಶೇಷಣವು ಸಾರ್ಥಕವಾಗು ತ್ತದೆ. ಲೋಹೇತರ ವಸ್ತುವಿರುವುದರಿಂದಲೇ ಚಿನ್ನವನ್ನು ಲೋಹವೆಂದು ಹೇಳ ಬೇಕಾಗಿದೆ. 'ಅವನು ಓದುತ್ತಿದ್ದಾನೆ' –ಎಂಬ ವಾಕ್ಯದಲ್ಲಿ ಓದಿಗಿಂತ ಇತರ ಕ್ರಿಯೆ ಸಾಧ್ಯವಾದ್ದರಿಂದಲೇ ಆ ಕ್ರಿಯೆಯಲ್ಲದ ಓದುವ ಕ್ರಿಯೆ ನಡೆಯುತ್ತಿದೆ– ಎಂದು ಹೇಳಲು ಸಾಧ್ಯ. ಹಿಂದೆ ಈ ವಿಚಾರವನ್ನು ಪ್ರಸ್ತಾವಿಸಿದ್ದಾಗಿದೆ. ಭರ್ತೃಹರಿ ಹೇಳುತ್ತಾನೆ–

> ಪರತೋ ಭಿದ್ಯತೇ ಸರ್ವಮಾತ್ಮಾ ತು ನ ವಿಕಲ್ಪ್ಯತೇ ।
> ಪರ್ವತಾದಿಸ್ಥಿತಿಸ್ತಸ್ಮಾತ್ ಪರರೂಪೇಣ ಭಿದ್ಯತೇ ॥

— ವಾಕ್ಯ, ಕಾಲಸಮುದ್ದೇಶ- ೮೦

'ಸಮಸ್ತ ಭಾವಪದಾರ್ಥವೂ ಅನ್ಯನಿಮಿತ್ತದಿಂದ ನಾನಾಭೇದವನ್ನು ಪಡೆಯು ತ್ತದೆ. ಸ್ವಯಂ ತಾನಾದರೋ (ಅನ್ಯೋಪಾಧಿ ಇಲ್ಲದಿದ್ದಾಗ) ಯಾವ ಭೇದವಿಕಲ್ಪ ವನ್ನೂ ಪಡೆಯುವುದಿಲ್ಲ. ಆದ್ದರಿಂದ ಪರ್ವತಾದಿ ನಿತ್ಯವಸ್ತುಗಳ ಸತ್ತೆಯೂ ಅನ್ಯಸತ್ತಾರೂಪನಿಮಿತ್ತದಿಂದ ಭೇದವನ್ನು ಪಡೆಯುತ್ತದೆ.'

ಪ್ರಕೃತ, ನಿತ್ಯವಸ್ತುಗಳಾದ ದೇವರು, ಹಿಮಾಲಯ –ಮೊದಲಾದವುಗಳ ಇರು ವಿಕೆಯೇ ಸತ್ತಾ. ಈ ಸತ್ತೆಗೆ ಸ್ವತಃ ಕಾಲಭೇದವಿಲ್ಲವಾದರೂ ಸಹಚರಿತವಾದ ಇತರ ವಸ್ತುಗಳಾದ ಅನಿತ್ಯಸತ್ತಾನಿಮಿತ್ತದಿಂದ ಕಾಲಭೇದವು ಬರುತ್ತದೆ. 'ದೇವರು ಹಿಂದೆಯೂ ಇದ್ದನು' –ಎಂಬ ವಾಕ್ಯವನ್ನು ತೆಗೆದುಕೊಳ್ಳೋಣ. ಈ ವಾಕ್ಯದಲ್ಲಿ 'ಹಿಂದೆಯೂ' ಎಂದರೆ ಯಾವಾಗ? 'ಲಕ್ಷವರ್ಷಗಳ ಹಿಂದೆ' ಎನ್ನಬಹುದು. ಲಕ್ಷ ವರ್ಷಗಳ ಹಿಂದೆ ಎಂಬುದನ್ನು ಅನ್ಯೋಪಾಧಿಯಿಂದಲೇ ಹೇಳಬೇಕಾಗುತ್ತದೆಯೆಂದು

ಪೂರ್ವದಲ್ಲಿಯೇ ತೋರಿಸಿಕೊಟ್ಟಿದ್ದೇವೆ. 'ಲಕ್ಷವರ್ಷಗಳ ಹಿಂದೆ ಇದ್ದ ಮಾನವನ ಸತ್ತಾಕಾಲದಲ್ಲಿ' ಅಥವಾ 'ಲಕ್ಷವರ್ಷಗಳ ಹಿಂದೆ ಸೂರ್ಯನು ಸಂಚರಿಸುತ್ತಿದ್ದ ಕಾಲದಲ್ಲಿ' –ಎಂದೇ 'ಹಿಂದೆಯೂ' ಎಂಬುದರ ಅರ್ಥವನ್ನು ವಿವರಿಸಬೇಕು. ಇಲ್ಲಿ ಆ ಮಾನವನ ಸತ್ತೆ, ಸೂರ್ಯನ ಆ ಸಂಚಾರಭೂತವಾಗಿದೆ. ಈ ಬಗೆಯ ಭೂತತ್ವ ವಿಶಿಷ್ಟ ಕಾಲದಲ್ಲಿ ದೇವರು ಇದ್ದನು –ಎಂದು ಹಿಂದೆ ಹೇಳಿದ ವಾಕ್ಯದ ಅರ್ಥ. ಈ ಭೂತತ್ವವು ದೇವರ ಸತ್ತೆಗೆ ಉಪಾಧಿ ವಿಶೇಷಣ. ವಿಶೇಷಣದತ್ತವಾದ ಭೂತತ್ವವನ್ನು ದೇವರ ಸತ್ತೆಯಲ್ಲಿ ಆರೋಪಿಸಿ 'ದೇವರು ಹಿಂದೆಯೂ ಇದ್ದನು' ಎಂದು ಭೂತ ಕಾಲದ ನಿರ್ದೇಶನ ಬಂದಿದೆ.

'ಚೀನಯಾತ್ರಿಕನು ಭಾರತದೇಶಕ್ಕೆ ಬರುವಾಗ ಹಿಮಾಲಯ ಪರ್ವತವು ನಡುವೆ ಇದ್ದಿತು.' ಇಲ್ಲಿ ಚೀನ ಯಾತ್ರಿಕನ ಆಗಮನವು ಭೂತವಾದುದು. ಈ ಭೂತತ್ವವನ್ನು ಹಿಮಾಲಯ ಸತ್ತೆಯಲ್ಲಿಯೂ ಆರೋಪಿಸಿದ್ದೇವೆ. ಲೋಕವ್ಯವಹಾರವಿರುವುದೆಲ್ಲವೂ ಹೀಗೆಯೇ. 'ಶ್ರೀರಾಮನಿದ್ದಾಗ ರಾಜನಾದ ವಿಶ್ವಾಮಿತ್ರನಿರಲಿಲ್ಲ' –ಎಂದು ಹೇಳಬಹುದಷ್ಟೆ. ವಿಶ್ವಾಮಿತ್ರಮುನಿ ಇದ್ದಾಗ ಈ ಮಾತು ಹೇಗೆ ಯುಕ್ತವಾಗುತ್ತದೆ? ರಾಜತ್ವವಿಶಿಷ್ಟನಾದ ವಿಶ್ವಾಮಿತ್ರನಿರಲಿಲ್ಲ ಎಂದರೆ ವಿಶ್ವಾಮಿತ್ರನಲ್ಲಿ ಆಗ ರಾಜತ್ವ ಇರಲಿಲ್ಲ. ರಾಜತ್ವದ ಅಭಾವವನ್ನು ವಿಶ್ವಾಮಿತ್ರ ಮುನಿಯ ಸತ್ತೆಯಲ್ಲಿ ಆರೋಪಿಸಿ 'ವಿಶ್ವಾಮಿತ್ರನಿರಲಿಲ್ಲ' ಎಂದು ಪ್ರಯೋಗಿಸಿದ್ದೇವೆ. ವಿಶೇಷಣಾಭಾವಪ್ರಯುಕ್ತವಾಗಿ ವಿಶಿಷ್ಟಾಭಾವವನ್ನು ಹೇಳಬಹುದೆಂದು ಶಾಸ್ತ್ರೀಯ ಸಿದ್ಧಾಂತವಿದೆ.

ನಮ್ಮ ಬಳಿ ಹತ್ತಿಯ ಬಟ್ಟೆಯೊಂದೇ ಇದ್ದಾಗ ರೇಷ್ಮೆ ಬಟ್ಟೆ ಇಲ್ಲ ಎನ್ನ ಬಹುದಷ್ಟೆ? ಮರ್ಫಿ ರೇಡಿಯೊ ಇದ್ದಾಗ ಫಿಲಿಪ್ಸ್ ರೇಡಿಯೊ ಇಲ್ಲ –ಎನ್ನ ಬಹುದಷ್ಟೆ. ನಮ್ಮ ಬಳಿ ಬಟ್ಟೆಯೂ ಇದೆ, ರೇಡಿಯೊ ಕೂಡ ಇದೆ. ವಿಶೇಷಣಾ ಭಾವಪ್ರಯುಕ್ತ ವಿಶಿಷ್ಟಾಭಾವ –ಎನ್ನುವುದಕ್ಕೆ ಇದು ಉದಾಹರಣೆ. ಇದೇ ರೀತಿಯಲ್ಲಿ ನಿತ್ಯಪ್ರವೃತ್ತಕ್ರಿಯಾಸ್ಥಳದಲ್ಲಿ ಭವಿಷ್ಯತ್ಕಾಲವನ್ನೂ ವರ್ತಮಾನಕಾಲವನ್ನೂ ಊಹಿಸಿ ಕೊಳ್ಳಬಹುದು.

ಕನ್ನಡದಲ್ಲಿ ವರ್ತಮಾನಕಾಲ:

ವ್ಯವಹಾರದಲ್ಲಿ ಈ ಮೂರು ಕಾಲಗಳನ್ನು ಸೂಚಿಸುವ ಆವಶ್ಯಕತೆಯಿರು ವುದರಿಂದ ಕ್ರಿಯಾಪದಗಳಲ್ಲಿ ಮೂರು ಬಗೆಯ ರೂಪಗಳಿರುವುದು ಸಹಜವಾಗಿದೆ. ಇದು ಎಲ್ಲ ಭಾಷೆಗಳಿಗೂ ಅನ್ವಯಿಸುತ್ತದೆಯಾದುದರಿಂದ ಕನ್ನಡದಲ್ಲಿಯೂ ಕಾಲತ್ರಯದ ರೂಪಗಳುಂಟು.

ಕೇಶಿರಾಜನು–

ದ ದಪ ವಕಾರಂಗಳ್ ತ-

ಪ್ಪದೆ ಕಾಲತ್ರಯವಿಭಕ್ತಿಮೂಲದೊಳಕ್ಕುಂ ॥ — ಶಬ್ದಮಣಿದರ್ಪಣ, ೨೩೨

ಎಂದು ಸೂತ್ರಿಸಿದ್ದಾನೆ. ಉದಾಹರಣೆಯಾಗಿ,

ಭೂತಕಾಲಕ್ಕೆ- ಪಡೆದಂ, ಇಡಿದಂ, ಗೆಲ್ದಂ
ವರ್ತಮಾನಕಾಲಕ್ಕೆ- ಎತ್ತಿದಪಂ, ಒತ್ತಿದಪಂ, ಮಾಡಿದಪಂ
ಭವಿಷ್ಯತ್ಕಾಲಕ್ಕೆ- ಕುಡುವಂ, ಉಡುವಂ, ಮಾಡುವಂ

ಎಂದು ವಿಭಿನ್ನ ರೂಪಗಳನ್ನು ವೃತ್ತಿಯಲ್ಲಿ ತೋರಿಸಲಾಗಿದೆ. ಹೀಗೆಯೇ ನಾಗವರ್ಮನೂ ಭಟ್ಟಾಕಳಂಕನೂ ಕಾಲತ್ರಯವನ್ನೂ ವಿಭಿನ್ನಕ್ರಿಯಾರೂಪಗಳನ್ನೂ ಒಪ್ಪಿದ್ದಾರೆ. ಆಧುನಿಕ ಭಾಷಾವಿಜ್ಞಾನಿಗಳು ಮಾತ್ರ ಕನ್ನಡದಲ್ಲಿ ವರ್ತಮಾನಕಾಲವಿಲ್ಲ -ಎಂದು ಹೇಳಿದ್ದಾರೆ. ವರ್ತಮಾನಕಾಲ ಮತ್ತು ಭವಿಷ್ಯತ್ಕಾಲದ ಕ್ರಿಯಾರೂಪಗಳು ಒಂದೇ ಬಗೆಯವಾದ್ದರಿಂದ ಭೂತ-ಅಭೂತ ಎಂದು ಕಾಲದ್ವಯವನ್ನು ಮಾತ್ರ ಒಪ್ಪಬೇಕೆಂದು ಅವರ ಅಭಿಪ್ರಾಯವಿರುತ್ತದೆ. ಆದರೆ, ಕೇಶಿರಾಜನೇ ಮೊದಲಾದ ಸುಪ್ರಸಿದ್ಧ ವೈಯಾಕರಣರ ನಿರೂಪಣೆಯನ್ನು ಒಪ್ಪದಿರಲು ಸಾಕಷ್ಟು ಆಧಾರಗಳಿವೆಯೇ? ಈ ವೈಯಾಕರಣರು ವಿಪುಲವಾಗಿ ಪ್ರಾಚೀನಕಾವ್ಯಗಳನ್ನು ಅಭ್ಯಾಸ ಮಾಡಿದವರು; ತಮ್ಮ ಕಾಲದಲ್ಲಿದ್ದ ಶಿಷ್ಟಪ್ರಯೋಗಗಳನ್ನು ಸೂಕ್ಷ್ಮವಾಗಿ ಗಮನಿಸಿದವರು. ಅರೆಬರೆಯ ಭಾಷಾಜ್ಞಾನವಿದ್ದವರು ವ್ಯಾಕರಣಶಾಸ್ತ್ರವನ್ನು ರಚಿಸಲು ಎಂದಿಗೂ ಕೈಹಾಕಲಾರರು. ವರ್ತಮಾನಕಾಲ-ಭವಿಷ್ಯತ್ಕಾಲಗಳ ರೂಪಗಳನ್ನು ಸ್ಪಷ್ಟವಾಗಿ ತೋರಿಸಿರುವಾಗ, ಸಾರಾಸಗಟಾಗಿ ಅವೆಲ್ಲವನ್ನೂ ತಳ್ಳಿಹಾಕುವುದು ಸಾಹಸ ಕಾರ್ಯವೇ ಸರಿ. ಈ ವೈಯಾಕರಣರ ಕಾಲದಲ್ಲಿ ಆ ರೂಪಗಳಿಗೆ ಸಾಂಕರ್ಯವಿಲ್ಲದೆ ಪೃಥಕ್ ಪ್ರಯೋಗವಿದ್ದೇ ಇರಬೇಕು.

ಹೊಸಗನ್ನಡದಲ್ಲಿ 'ಹೋಗುತ್ತಾನೆ, ಬರುತ್ತಾಳೆ' ಮೊದಲಾದವು ವರ್ತಮಾನ ಕಾಲವನ್ನೂ 'ಹೋಗುವನು, ಬರುವರು' ಮೊದಲಾದವು ಭವಿಷ್ಯತ್ಕಾಲವನ್ನೂ ಸೂಚಿಸುತ್ತವೆಯೆಂದು ಹೊಸಗನ್ನಡ ವ್ಯಾಕರಣದಲ್ಲಿ ಹೇಳಿದ್ದುಂಟು. 'ಹೋಗುವನು, ಬರುವಳು' ಮುಂತಾದ ಪ್ರಯೋಗಗಳು ಈಗ ಆಡುಮಾತಿನಲ್ಲಿ ಲುಪ್ತವಾಗಿದ್ದರೂ ಬರೆವಣಿಗೆಯ ಭಾಷೆಯಲ್ಲಿ ವಿಪುಲವಾಗಿಯೇ ಕಂಡುಬರುತ್ತಿವೆ. ಆದರೆ ವರ್ತಮಾನ ಕಾಲದ 'ಹೋಗುತ್ತಾನೆ, ಬರುತ್ತಾಳೆ' ಮೊದಲಾದುವನ್ನು ಭವಿಷ್ಯತ್ಕಾಲದಲ್ಲಿಯೂ ಪ್ರಯೋಗಿಸುತ್ತಿದ್ದೇವೆ. ಈ ಬಗೆಯ ರೂಪಗಳನ್ನು ಉಭಯಕಾಲಗಳಲ್ಲಿಯೂ ಪ್ರಯೋಗಿಸುತ್ತಿರುವುದೇ ಭಾಷಾವಿಜ್ಞಾನಿಗಳ ಮೇಲ್ಕಂಡ ಹೇಳಿಕೆಗೆ ಕಾರಣವಾಗಿರಬಹುದು. ಆದರೆ 'ಹೋಗುತ್ತಿದ್ದಾನೆ, ಹೇಳುತ್ತಿದ್ದಾಳೆ' ಎಂಬ ಕ್ರಿಯಾಪದಗಳಲ್ಲಿಯೂ ಇದ್ದಾನೆ, ಇದ್ದಾಳೆ ಇದೆ ಎಂಬ ಕ್ರಿಯಾಪದಗಳಲ್ಲಿಯೂ ಭವಿಷ್ಯತ್ಕಾಲದ ಸೂಚನೆ ಲೇಶವೂ ಇಲ್ಲ. ಈ ವಿಷಯವನ್ನು ಡಾ। ಸಿ. ಓಂಕಾರಪ್ಪನವರು 'ಕನ್ನಡದಲ್ಲಿ ವರ್ತಮಾನಕಾಲ ಇದೆ' -ಎಂಬ ಲೇಖನದಲ್ಲಿ ದೀರ್ಘವಾಗಿ ವಿವರಿಸಿ, ಕನ್ನಡದಲ್ಲಿ ವರ್ತಮಾನಕಾಲವೂ ಇದೆ ಎಂಬುದನ್ನು ಸಮರ್ಥವಾಗಿ ಪ್ರತಿಪಾದಿಸಿದ್ದಾರೆ. (ನೋಡಿ: ಲೋಚನ, ಸಂಪುಟ ೨, ಜೂನ್ ೧೯೮೯ -ಸಂಚಿಕೆ ೨). 'ಇರು' ಎಂಬ ಧಾತುವಿನ ಮೇಲ್ಕಂಡ ಪ್ರಯೋಗಗಳ ಆಧಾರದಿಂದ ಭಾಷಾವಿಜ್ಞಾನಿಗಳ ಅಭಿಪ್ರಾಯವನ್ನು ವಿವರವಾಗಿ ಆ ಲೇಖನದಲ್ಲಿ ನಿರಾಕರಿಸಿರುವುದರಿಂದ ಇಲ್ಲಿ ಮತ್ತೆ ಅದನ್ನು ಬರೆಯಬೇಕಿದ್ದಿಲ್ಲ. ಅವರ ನಿರೂಪಣೆಗೆ ಪೋಷಕವಾಗಿ ಮಾತ್ರ ಈ ಇನ್ನೊಂದು ಅಂಶವನ್ನು

ಸೇರಿಸಿಕೊಳ್ಳಬಹುದು. ಏನೆಂದರೆ: ಉಂಟು, ಬಲ್ಲನು –ಎಂಬ ಕ್ರಿಯಾಪದಗಳೂ ವರ್ತಮಾನಕಾಲವನ್ನೇ ಬೋಧಿಸುತ್ತವೆ. ಮತ್ತು ಈಗ, ಇಂದು –ಎಂಬ ಕ್ರಿಯಾ ವಿಶೇಷಣಗಳೂ ಸಹ ವರ್ತಮಾನಕಾಲವನ್ನು ಮಾತ್ರ ಬೋಧಿಸುತ್ತವೆ. ಆದುದರಿಂದ ಭೂತ–ಅಭೂತ ಎಂದು ಕಾಲವನ್ನು ವಿಂಗಡಿಸುವುದು ಶಾಸ್ತ್ರೀಯವಾಗುವುದಿಲ್ಲ.

ಇಂದು ವರ್ತಮಾನಕಾಲದ ಕ್ರಿಯಾಪದಗಳನ್ನು ಭವಿಷ್ಯತ್ಕಾಲದಲ್ಲಿ ಪ್ರಯೋಗಿಸುತ್ತಿರುವುದು ದಿಟ. ಭವಿಷ್ಯತ್ಕಾಲದ ಕ್ರಿಯಾರೂಪಗಳು ಆಡುಮಾತಿನಲ್ಲಿ ಲುಪ್ತವಾಗಿರುವುದೂ ದಿಟ. ಇದು ಪ್ರಯೋಗಸಾಂಕರ್ಯ. ಈ ಬಗೆಯ ಸಾಂಕರ್ಯ ಎಲ್ಲ ಭಾಷೆಗಳಲ್ಲಿಯೂ ಕಂಡುಬರುತ್ತವೆ. ವ್ಯವಸ್ಥಿತವಾದ ಸಂಸ್ಕೃತ ಭಾಷೆಯಲ್ಲಿಯೂ ಉಂಟು. ಪಾಣಿನಿಯೇ ಇದನ್ನು ಮನಗಂಡು "ವರ್ತಮಾನಸಾಮೀಪ್ಯೇ ವರ್ತಮಾನ ವದ್ವಾ" (ಅಷ್ಟಾ. ೩–೩–೧೩೧) ಎಂಬ ಸೂತ್ರವನ್ನು ರಚಿಸಿ ಸಮೀಪದ ಭವಿಷ್ಯತ್ತಿನಲ್ಲಿ ವರ್ತಮಾನಕಾಲದ ಪ್ರತ್ಯಯಗಳನ್ನು ವಿಧಿಸಿದ್ದಾನೆ. ಹೀಗಿರುವಾಗ ಜನಸಾಮಾನ್ಯರೂ ಬಳಸತಕ್ಕ ಕನ್ನಡದಲ್ಲಿ ಪ್ರಯೋಗಸಾಂಕರ್ಯವುಂಟಾಗುವುದರಲ್ಲಿ ಆಶ್ಚರ್ಯವಿಲ್ಲ. ಇದಕ್ಕೆ ಪ್ರಾಚೀನ ವೈಯಾಕರಣರು ಹೊಣೆಯಲ್ಲ. ಯಾವ ಕ್ರಿಯಾಪದಗಳು ವರ್ತಮಾನಕಾಲವನ್ನು ಮಾತ್ರ ಬೋಧಿಸುತ್ತವೆಯೆಂದೂ ಭವಿಷ್ಯತ್ ಕಾಲದ ಸೂಚನೆಯೂ ಅವುಗಳಲ್ಲಿಲ್ಲವೆಂದೂ ತಿಳಿದಿದ್ದೇವೋ ಅವನ್ನು ಸಹ ಭವಿಷ್ಯತ್ಕಾಲದಲ್ಲಿ ಪ್ರಯೋಗಿಸಲಾಗುತ್ತಿದೆ! ಈ ಪ್ರಯೋಗಗಳನ್ನು ನೋಡಿ– "ಈ ಛತ್ರದಲ್ಲಿ ನಾಳೆ ಮದುವೆ ಉಂಟು, ಮುಂದಿನ ತಿಂಗಳು ರಥೋತ್ಸವ ಇದೆ, (ಬೆಂಗಳೂರಿಗೆ ಬರುವವನು ಹೇಳುತ್ತಾನೆ) ಮುಂದಿನ ವಾರ ನಾನು ಬೆಂಗಳೂರಿನಲ್ಲಿದ್ದೇನೆ!"

ಈ ಉದಾಹರಣೆಗಳನ್ನು ನೋಡಿ:

೧. ಭವಿಷ್ಯತ್ಕಾಲದಲ್ಲಿ ಭೂತಕಾಲದ ರೂಪ ಬರುತ್ತದೆ.
ನಾನು ಎದ್ದು ಬಂದೆ ಎಂದರೆ ನೀನು ಸತ್ತೆ!
ನೀವು ಹೋಗಿ, ನಾನೀಗ ಬಂದೆ.
ಮುಂದಿನ ಮಳೆಗಾಲ ಚೆನ್ನಾಗಿ ನಡೆದರೆ ಒಳ್ಳೆಯ ಬೆಳೆ ಬರುತ್ತಿತ್ತು.

೨. ಭೂತಕಾಲದಲ್ಲಿ ವರ್ತಮಾನಕಾಲದ ರೂಪ ಬರುತ್ತದೆ.

ಭೀಮನು ಅರ್ಜುನನಿಗೆ ಹೇಳುತ್ತಾನೆ–
"ದುರ್ಯೋಧನನು ಶಾಂತಿಗೆ ಒಪ್ಪುವುದಿಲ್ಲ."
"ದಮನಕನು ಪಿಂಗಳಕನ ಬಳಿಗೆ ಹೋಗುತ್ತಾನೆ".
"ಅದಕ್ಕೆ ಗಾಂಧೀಜಿ ಉತ್ತರ ಕೊಡುತ್ತಾರೆ."

ಇವುಗಳಿಗೆಲ್ಲ ಉಪಪತ್ತಿಯುಂಟು. ಶಾಸ್ತ್ರದ ನೆರಳಲ್ಲಿ ಉಪಪತ್ತಿಮಾರ್ಗವನ್ನು ಚಿಂತಿಸಬೇಕೆ ಹೊರತು ಜನಸಾಮಾನ್ಯರ ಪ್ರಯೋಗವನ್ನು ಕಂಡು ಶಾಸ್ತ್ರದ ತಾತ್ತ್ವಿಕ ಸಿದ್ಧಾಂತವನ್ನೇ ಅಲ್ಲಗಳೆಯುವುದು ಯುಕ್ತವಲ್ಲ.

* * *

ಗಮಕಸಮಾಸ – ಒಂದು ಸಮೀಕ್ಷೆ

ಗಮಕಸಮಾಸವೆಂಬ ಒಂದು ಸಮಾಸಭೇದವನ್ನು ಕೇಶಿರಾಜನು ಅಂಗೀಕರಿಸಿದ್ದಾನೆ. ಈ ವಿಷಯದಲ್ಲಿ ವಿದ್ವಾಂಸರು ಹಲವಾರು ಲೇಖನಗಳನ್ನು ಬರೆದಿದ್ದಾರೆ. ಅವರ ಪ್ರತಿಪಾದನೆ ಏನೆಂಬುದರ ಸ್ಮರಣೆ ನನಗಿಲ್ಲ.* ಆದರೆ ಇತ್ತೀಚೆಗೆ ಡಾ। ಎಚ್. ಎಸ್. ಬಿಳಿಗಿರಿಯವರು 'ಗಮಕಸಮಾಸವು ಸಮಾಸವೆ?' ಎಂಬ ಪ್ರಬಂಧವನ್ನು ಬರೆದಿದ್ದಾರೆ. ಬೆಂಗಳೂರಿನ ಬಿ. ಎಂ. ಶ್ರೀ ಪ್ರತಿಷ್ಠಾನವು 'ಮೂರು ದತ್ತಿ ಉಪನ್ಯಾಸಗಳು' ಎಂಬ ಹೊತ್ತಿಗೆಯಲ್ಲಿ ಈ ಪ್ರಬಂಧವನ್ನು ಪ್ರಕಟಿಸಿದೆ. ಅದನ್ನೋದಿದ ಮೇಲೆ ನನ್ನ ಕೆಲವು ವಿಚಾರಗಳನ್ನು ವಿದ್ವಾಂಸರ ಪರಿಶೀಲನೆಗಾಗಿ ಮಂಡಿಸಬೇಕೆಂದು ಮನಸ್ಸಾಯಿತು. ಅದರಿಂದ ಪ್ರಸ್ತುತವಾದದ್ದು ಈ ಲೇಖನ.

ಡಾ। ಬಿಳಿಗಿರಿಯವರು 'ಗಮಕಸಮಾಸ' ಎಂದು ಕರೆಸಿಕೊಳ್ಳುವ ರೂಪಗಳನ್ನು ವರ್ಣನಾತ್ಮಕ ಭಾಷಾವಿಜ್ಞಾನದ ದೃಷ್ಟಿಯಿಂದ ಪರಿಶೀಲಿಸಿ "ಅವುಗಳು ಸಮಾಸಗಳೇ ಅಲ್ಲ ಎಂಬ ನಿಲುವಿಗೆ ನಾನು ಬಂದಿದ್ದೇನೆ" ಎಂದು ಹೇಳಿ, "ನಮ್ಮ ಪ್ರಾಚೀನ ವ್ಯಾಕರಣಗಳಿಗೂ ವರ್ಣನಾತ್ಮಕ ಭಾಷಾವಿಜ್ಞಾನಕ್ಕೂ ಯಾವ ಪೈಪೋಟಿಯೂ ಇಲ್ಲ" ಎಂದಿದ್ದಾರೆ. ಪೈಪೋಟಿಗೆ ನಿಲ್ಲದ ಭಾಷಾವಿಜ್ಞಾನವೇ ಕೇಶಿರಾಜನ ವ್ಯಾಕರಣ ಶಾಸ್ತ್ರದ ಸಿದ್ಧಾಂತವನ್ನು ಖಂಡಿಸುತ್ತದೆಯೆಂಬುದು ವಿಚಿತ್ರ. "ವ್ಯಾಕರಣಶಾಸ್ತ್ರ ಎಂಬುದು ವರ್ಣನಾತ್ಮಕ ಭಾಷಾವಿಜ್ಞಾನದ ಒಂದು ಶಾಖೆ" ಎಂದಿದ್ದಾರೆ ಡಾ। ಬಿಳಿಗಿರಿಯವರು. ಪ್ರಾಚೀನಕಾಲದಲ್ಲಿಯೇ ಹುಟ್ಟಿ ಬೆಳೆದು ಹೆಮ್ಮರವಾಗಿ ನಿಂತಿರುವ ವ್ಯಾಕರಣಶಾಸ್ತ್ರವು ಈಚೆಗೆ ಹುಟ್ಟಿ ಚಿಗುರುತ್ತಿರುವ ಭಾಷಾಶಾಸ್ತ್ರದ ಶಾಖೆಯೆನ್ನುವುದೂ ವಿಚಿತ್ರವೇ. ಪ್ರತಿಯಾಗಿ ಭಾಷಾಶಾಸ್ತ್ರವೇ ವ್ಯಾಕರಣಶಾಸ್ತ್ರದ ಅನುಬಂಧ ಅಥವಾ ಪರಿಶಿಷ್ಟ ಎನ್ನುವುದು ಸರಿ. ಇದು ಹೇಗಾದರೂ ಇರಲಿ. ನಮಗೆ ಪ್ರಕೃತವಾದದ್ದು ಗಮಕಸಮಾಸ. ವ್ಯಾಕರಣಶಾಸ್ತ್ರದ ದೃಷ್ಟಿಯಿಂದ ಇದು ಸಮಾಸವೆನಿಸಿಕೊಳ್ಳಲು ಅರ್ಹವೆ–ಅಲ್ಲವೆ? ಎಂಬುದೀಗ ಪರಿಶೀಲನೀಯ.

---

* 'ಗಮಕಸಮಾಸ'ದ ವಿಷಯವಾಗಿ ವಿದ್ವಾಂಸರು ಪ್ರತಿಪಾದಿಸಿರುವ ವಾದ-ವಿವಾದಗಳ ಸಂಕ್ಷಿಪ್ತ ಸಮೀಕ್ಷೆಯನ್ನು ಪ್ರೊ। ಎಂ. ವಿ. ಸೀತಾರಾಮಯ್ಯನವರ 'ಪ್ರಾಚೀನ ಕನ್ನಡ ವ್ಯಾಕರಣಗಳು' (ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆ) ಗ್ರಂಥದಲ್ಲಿ ಕಾಣಬಹುದು. (ಲೋಚನ ಪತ್ರಿಕೆಯ ಸಂಪಾದಕರ ಟಿಪ್ಪಣಿ.)

ವೈಯಾಕರಣರು ಶಬ್ದಗಳನ್ನು ಹೊಸದಾಗಿ ಸೃಷ್ಟಿಸುವುದಿಲ್ಲ. ಕುಂಬಾರನು ಮಡಕೆಗಳನ್ನು ಮಾಡಿಕೊಡುವಂತೆ ಇವರು ಪದಗಳನ್ನು ಬೇಕಾದ ರೀತಿಯಲ್ಲಿ ನಿರ್ಮಿಸುವುದಿಲ್ಲ. ಮತ್ತೇನೆಂದರೆ, ಲೋಕದಲ್ಲಿ ಮೊದಲೇ ಬಳಕೆಯಲ್ಲಿರುವ ಶಬ್ದಗಳ ಸ್ವರೂಪವನ್ನು-ಸಾಧುತ್ವವನನ್ನು ತೋರಿಸಿಕೊಡುತ್ತಾರೆ. ಲೋಕದಲ್ಲಾದರೋ ಶಬ್ದ-ಅಪಶಬ್ದಗಳೆರಡರ ಬಳಕೆಯೂ ಉಂಟು. ವ್ಯಾಕರಣಶಾಸ್ತ್ರವು ಶಬ್ದಗಳನ್ನು ಎಂದರೆ ಸಾಧುಶಬ್ದಗಳನ್ನು ವಿವೇಚಿಸುತ್ತದೆ. ಸಾಧುಶಬ್ದವೆಂದರೆ ಶಿಷ್ಟಪ್ರಯುಕ್ತವಾದ ಶಬ್ದ. ಶಿಷ್ಟರೆಂದರೆ ಯಾರು? ಸಂಸ್ಕೃತ ವ್ಯಾಕರಣದ ಶಿಷ್ಟಲಕ್ಷಣ ಜನಪದ ಭಾಷೆಗೆ ಸಲ್ಲದು. ಪ್ರಕೃತದಲ್ಲಿ ಕವಿಗಳನ್ನೂ ಶಾಸ್ತ್ರಕಾರರನ್ನೂ ಸಮಾಜದಲ್ಲಿ ಗಣ್ಯರೆನಿಸಿದ ವಿದ್ಯಾವಂತರನ್ನೂ ಶಿಷ್ಟರೆಂದಿಟ್ಟುಕೊಳ್ಳಬಹುದು.

ಶಬ್ದಗಳಾದರೋ ಅನಂತ. ಅವುಗಳನ್ನು ಎಣಿಸಿ ಪಟ್ಟಿಮಾಡಲು ಯಾರಿಂದೂ ಸಾಧ್ಯವಿಲ್ಲ. ಆದ್ದರಿಂದ ವ್ಯಾಕರಣಶಾಸ್ತ್ರವು ಒಂದು ಲಘುವಾದ ಉಪಾಯವನ್ನು ಹುಡುಕಿ ತೆಗೆದು ಲಕ್ಷಣಗಳ ಮೂಲಕ ಲಕ್ಷ್ಯಗಳನ್ನು ಸೆರೆಹಿಡಿಯುವ ತಂತ್ರವನ್ನು ರೂಪಿಸಿಕೊಂಡಿದೆ. ವ್ಯಾಕರಣಕಾರನು ವಿಶಾಲವಾದ ಶಬ್ದರಾಶಿಯನ್ನು ಬಲ್ಲವನಾಗಿರಲೇಬೇಕು. ಅವೆಲ್ಲವನ್ನೂ ಒಂದು ಕಟ್ಟುಪಾಡಿಗೆ ಅಳವಡಿಸಿ ಹೇಳಬಲ್ಲ ಮಹತ್ತರವಾದ ಕೌಶಲವೂ ಅವನಲ್ಲಿರಬೇಕು.

ಸಾಮಾನ್ಯಸೂತ್ರ (ಉತ್ಸರ್ಗ), ವಿಶೇಷಸೂತ್ರ(ಅಪವಾದ)ಗಳ ಮೂಲಕ ವಿಧಿನಿಷೇಧಗಳಿಂದ ವ್ಯಾಕರಣ ರಚನೆ. ಸಂಜ್ಞೆ, ಪರಿಭಾಷೆ, ನಿಯಮ, ಅಧಿಕಾರಗಳು ವಿಭಿನ್ನ ತಂತ್ರಗಳು. ಇವುಗಳಲ್ಲಿ ಸಂಜ್ಞೆಯೇ ಮುಖ್ಯ ಪಾತ್ರವನ್ನು ನಿರ್ವಹಿಸುತ್ತದೆ. ಧಾತು, ಪ್ರಾತಿಪದಿಕ, ಪ್ರತ್ಯಯ, ಕೃತ್, ತದ್ಧಿತ, ಸಮಾಸ -ಮೊದಲಾದ ಸಂಜ್ಞೆಗಳು ಸಂಸ್ಕೃತ ವ್ಯಾಕರಣದಿಂದ ನೇರವಾಗಿ ತೆಗೆದುಕೊಂಡವೆಂಬುದು ಸ್ಪಷ್ಟವಾಗಿದೆ. ಬಹುಶಃ ಸಂಸ್ಕೃತ ವ್ಯಾಕರಣವೇ ಕನ್ನಡದಲ್ಲಿ ವ್ಯಾಕರಣ ರಚನೆಗೆ ಉದ್ಬೋಧಕವಾಗಿದೆ. ಸಮಾಸ ಭೇದಗಳಾದ ಅವ್ಯಯೀಭಾವ, ತತ್ಪುರುಷ, ದ್ವಂದ್ವ, ಬಹುವ್ರೀಹಿಗಳು ಸಂಸ್ಕೃತ ಪದಗಳೇ. ದ್ವಿಗುಸಮಾಸ ಕರ್ಮಧಾರಯದ ಭೇದ. ಕರ್ಮಧಾರಯ ತತ್ಪುರುಷದ ಒಳಭೇದ. ಕೇಶಿರಾಜನು ಅವ್ಯಯೀಭಾವವೆಂದು ಹೆಸರಿಸುವ ಅಂಗಯ್, ಅಂಗಾಲ್, ಮುಂಗಾಲ್ ಮೊದಲಾದವು ಅವ್ಯಯಗಳಲ್ಲ. ಇವುಗಳಿಗೆ ಅವ್ಯಯೀಭಾವವೆಂಬ ಹೆಸರು ಅಷ್ಟು ಸಮಂಜಸವಲ್ಲವಾದರೂ ಅವನ ಪ್ರಕಾರ ಅವ್ಯಯಗಳೊಡನೆ ಸಮಾಸವಾದ್ದರಿಂದ ಈ ಹೆಸರನ್ನಿಟ್ಟಿದ್ದಾನೆಂದು ಹೇಳಬೇಕಾಗಿದೆ. ತತ್ಪುರುಷಭೇದವಾದ ಅಂಶಿಸಮಾಸವೇ ಇದು ಎನ್ನುವುದು ಯುಕ್ತ. 'ಗಮಕಸಮಾಸ' ಎಂಬ ಸಂಜ್ಞೆ ಸಂಸ್ಕೃತ ವ್ಯಾಕರಣದಲ್ಲಿಲ್ಲ ಎಂಬುದೊಂದು ವಿಶೇಷ. 'ಗಮಕತ್ವಾತ್ ಸಮಾಸಃ' ಎಂದು ಕೆಲವೆಡೆ ಹೇಳುತ್ತಾರಾದರೂ ಕೇಶಿರಾಜನು ಹೇಳುವ ಗಮಕಸಮಾಸಕ್ಕೂ ಅದಕ್ಕೂ ಯಾವ ಸಂಬಂಧವೂ ಇಲ್ಲ. 'ಸಮಾಸ' ಮುಂತಾದ ಸಾಮಾನ್ಯ ಸಂಜ್ಞೆಗಳೂ 'ಬಹುವ್ರೀಹಿ' ಮುಂತಾದ ವಿಶೇಷ ಸಂಜ್ಞೆಗಳೂ ಇಷ್ಟರೂಪಸಿದ್ಧಿಗಾಗಿಯೇ ಹೊರತು ಆಡಂಬರಕ್ಕಾಗಿ ಅಲ್ಲ ಎಂಬುದನ್ನು ನೆನಪಿನಲ್ಲಿಡಬೇಕು.

ಕೇಶಿರಾಜನು ಶಬ್ದಮಣಿದರ್ಪಣದಲ್ಲಿ ಹೇಳಿರುವ ಗಮಕಸಮಾಸದ ಲಕ್ಷಣ ಹೀಗಿದೆ–

ಜನಿಯಿಸುಗುಂ ಸಂಖ್ಯಾಸ-
ರ್ವನಾಮ ಗುಣವಚನ ಕೃತ್‌ಪ್ರಪೂರ್ವಂ ಗಮಕಂ ।
ತನಗತ್ತಂ ಪೆಱಗಿತ್ತಂ
ತನಗರಿಪದನಿಲ್ಲ ಕರ್ಮಧಾರಯಮದುವುಂ ॥ — (ಸೂ. ೧೭೯)

ಈ ಸೂತ್ರದ ವೃತ್ತಿ ಹೀಗಿದೆ– "ಪರಪದದೊಳ್ ಕಾರಕಮುಂ ಪೂರ್ವಪದದೊಳ್ ಸಂಖ್ಯಾಸರ್ವನಾಮಗುಣವಚನಕೃತ್‌ಪದಂಗಳಾವುವಿರ್ದೊಡಂ ಗಮಕ ಸಮಾಸಮಕ್ಕುಂ. ಇದಱೊಳ್ ಅರಿಸಮಾಸದೋಷವಿಲ್ಲ. ಅದು ಕರ್ಮಧಾರಯದ ಭೇದಂ. ಎತ್ತಾನುಂ ತತ್ಪುರುಷಮಪ್ಪುದು."

ಇದಕ್ಕೆ ಕೊಟ್ಟಿರುವ ಉದಾಹರಣೆಗಳನ್ನು ಪರಿಶೀಲಿಸುವುದಕ್ಕೆ ಮೊದಲು, ಈ ಸೂತ್ರವೃತ್ತಿಗಳ ಅಭಿಪ್ರಾಯವೇನೆಂದು ಗಟ್ಟಿಮಾಡಿಕೊಳ್ಳಬೇಕಾಗಿದೆ. ಸಂಖ್ಯೆ, ಸರ್ವನಾಮ, ಗುಣವಚನ, ಕೃದಂತ– ಇವುಗಳಲ್ಲಿ ಯಾವುದಾದರೂ ಪೂರ್ವಪದವಾಗಿರುವ ಸಮಾಸಕ್ಕೆ ಗಮಕಸಮಾಸವೆಂದು ಸಂಜ್ಞೆ –ಎಂಬುದಾಗಿ ಸೂತ್ರದ ಪೂರ್ವಾರ್ಧದ ಅರ್ಥವಾಗುತ್ತದೆ. ಸಂಖ್ಯಾದಿ ಶಬ್ದಗಳು ಯಾವ ವಿಭಕ್ತಿಯಲ್ಲಿರಬೇಕೆಂದಾಗಲಿ ಸಮಾಸವು ಯಾವ ಅರ್ಥದಲ್ಲಿ ಬರುತ್ತದೆಯೆಂದಾಗಲಿ ಹೇಳಿಲ್ಲವಾದ್ದರಿಂದ ಸಮಾಸ ಸ್ವರೂಪದ ನಿರ್ಧಾರಣೆಯೇ ಆಗುವುದಿಲ್ಲ. ಆದರೆ 'ಕರ್ಮಧಾರಯಮದುವುಂ' ಎಂದು ಸೂತ್ರದಲ್ಲಿಯೂ 'ಎತ್ತಾನುಂ ತತ್ಪುರುಷಮಪ್ಪುದು' ಎಂದು ವೃತ್ತಿಯಲ್ಲಿಯೂ ಹೇಳಿರುವುದರಿಂದ ಸಮಾಸದ ಸ್ವರೂಪವನ್ನು ಊಹಿಸಿಕೊಳ್ಳಬಹುದು. ಸಂಖ್ಯಾ ಪೂರ್ವಪದವಾದ ಕರ್ಮಧಾರಯಕ್ಕೆ ದ್ವಿಗು ಸಂಜ್ಞೆಯಿರುವುದರಿಂದ ದ್ವಿಗುವನ್ನೂ ಇದರಲ್ಲಿ ಸಮಾವೇಶಮಾಡಿಕೊಳ್ಳುವುದು ಸಮಂಜಸ.

ಇದು ಸಂಜ್ಞಾಸೂತ್ರವೊ ಅಥವಾ ವಿಧಿಸೂತ್ರವೊ? ವಿಧಿಸೂತ್ರವಾಗಬೇಕಾದರೆ ಅಜ್ಞಾತಜ್ಞಾಪಕವಾಗಬೇಕು; ಎಂದರೆ ಸೂತ್ರಾಂತರದಿಂದ ಅಪ್ರಾಪ್ತವಾದದ್ದನ್ನು ವಿಧಿಸಿದರೆ ವಿಧಿಯಾಗುತ್ತದೆ. ತತ್ಪುರುಷ, ಕರ್ಮಧಾರಯಗಳೆರಡನ್ನೂ ಬೇರೆ ಸೂತ್ರ ಗಳಿಂದ ವಿಧಿಸಿರುವ ಪ್ರಯುಕ್ತ ಆ ಸಮಾಸಗಳು ಪ್ರಾಪ್ತವಾಗಿಯೇ ಇವೆ. ಈ ಸೂತ್ರ ವಿಲ್ಲದಿದ್ದರೂ ಸಂಖ್ಯಾದಿ ಪೂರ್ವಪದಗಳಿಗಿರುವ ತತ್ಪುರುಷವೂ ಕರ್ಮಧಾರಯವೂ ಸಿದ್ಧವಾಗುತ್ತವೆ. ಗಮಕಸಮಾಸಕ್ಕೆ ಕೊಟ್ಟಿರುವ ಉದಾಹರಣೆಗಳೆಲ್ಲವೂ ಸಮಾಸ ವಿಧಾಯಕಗಳಾದ ಸೂತ್ರಾಂತರಗಳಿಂದಲೇ ಸಿದ್ಧವಾಗುತ್ತದೆ. ಆದ್ದರಿಂದ ಇದು ಸಂಜ್ಞಾಸೂತ್ರವೇ ಹೊರತು ವಿಧಿಸೂತ್ರವಲ್ಲ. ತಾತ್ಪರ್ಯವೇನಾಯಿತೆದರೆ –ಸಂಖ್ಯಾ ಸರ್ವನಾಮಾದಿಗಳಲ್ಲಿ ಯಾವುದಾದರೊಂದು ಪೂರ್ವಪದವಾಗಿರುವ ತತ್ಪುರುಷ, ಕರ್ಮಧಾರಯ, ದ್ವಿಗುಸಮಾಸಗಳಿಗೆ 'ಗಮಕಸಮಾಸ' ಎಂಬ ಇನ್ನೊಂದು ಹೆಸರೂ ಉಂಟು.

ಈ ಸೂತ್ರದ ಅಡಿಯಲ್ಲಿ ಗ್ರಂಥಕಾರನು ವಿಶಿಷ್ಟವಾದ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾನೆ. ಅವಲ್ಲದೆ ತತ್ಸದೃಶವಾದ ಕೆಲವೇ ಉದಾಹರಣೆಗಳು ಮಾತ್ರ ಗಮಕವೆಂದು ಕೆಲವರು ಭಾವಿಸಿದಂತೆ ಕಾಣುತ್ತದೆ. ಸೂತ್ರದ ಪ್ರಕಾರ ತೂಗುಂ ಜೊಡರ್, ಬೆಳ್ನೊರೆ, ನಾಲ್ವೆರಲ್, ನೂರ್ಮಡಿ, ಕೆಂಜಡೆ, ಕಟ್ಬಾಳ್– ಮೊದಲಾದವೂ ಗಮಕಸಮಾಸಗಳೇ ಎಂದು ಹೇಳಬೇಕಾಗುತ್ತದೆ. ಆದರೆ ಸೂತ್ರದಲ್ಲಿ 'ತನಗತ್ವಂ ಪೆಱಗಿತ್ವಂ' ಎಂದು ಹೇಳಿದೆ. ಹಾಗೆಂದರೇನು? ವೃತ್ತಿಯಲ್ಲಿ 'ಗುಣವಚನದೊಳಂತರಾಳಕ್ಕೆ ಒಂದಕಾರಂ, ಪಿಂತಣ ಮೆಯ್ಯೊಳ್ ಇಕಾರಮಕ್ಕುಂ' ಎಂಬ ಅರ್ಥವನ್ನು ಬರೆದಿದೆ. ಉದಾಹರಣೆಯಾಗಿ ಅಸಿಯ ನಡು, ಪಸಿಯ ಬಣ್ಣಂ, ಬಿಳಿಯ ಕರ್ಬು– ಮುಂತಾದವನ್ನು ತೋರಿಸಲಾಗಿದೆ.

ಪ್ರಕೃತ, 'ತನಗತ್ವಂ' ಎಂಬಲ್ಲಿ ತನಗೆ ಎಂದರೆ ಗುಣವಚನವೆಂಬ ಅರ್ಥ ದೊರೆಯುವುದು ಹೇಗೆ? ತನಗೆ ಎಂಬ ಸರ್ವನಾಮದಿಂದ ಪ್ರಕೃತವಾದ ಗಮಕ ಸಮಾಸವನ್ನೋ ಅಥವಾ ಪೂರ್ವಪದಗಳಾಗುವ ಸಂಖ್ಯಾಸರ್ವನಾಮಾದಿಗಳನ್ನೋ ಗ್ರಹಿಸಬಹುದೇ ಹೊರತು ಬರಿಯ ಗುಣವಚನವನ್ನು ಗ್ರಹಿಸುವುದು ಶಕ್ಯವಲ್ಲ. ವೃತ್ತಿಯಲ್ಲಿ ಹಾಗೆ ಬರೆದಿರುವುದರಿಂದ 'ಆಗಲಿ' ಎನ್ನಬೇಕಾಗಿದೆ. ಅತ್ವ, ಇತ್ವಗಳ ವಿಧಿಯಂತೂ ತುಂಬ ವಿಚಿತ್ರವಾದದ್ದು.

ಅಸಿದು+ನಡು = ಅಸಿಯ ನಡು. ಪಸಿದು+ಬಣ್ಣಂ = ಪಸಿಯ ಬಣ್ಣಂ.

ಬಿಳಿದು+ಕರ್ಬು = ಬಿಳಿಯ ಕರ್ಬು, ಇಲ್ಲಿ 'ದು' ಶಬ್ದಕ್ಕೆ ಅತ್ವ ಬಂದಿದೆ.

ಈ ಅಕಾರ ಗುಣವಚನದ ಅಂತ್ಯದಲ್ಲಿರುವ 'ದು' ಎಂಬುದಕ್ಕೆ ಬಂದಿದೆ. ವೃತ್ತಿಕಾರನು ಅಂತರಾಳಕ್ಕೆ ಎಂದು ಬರೆದಿದ್ದಾನೆ! 'ಗುಣವಚನಸಹಿತವಾದ ಗಮಕದ ಅಂತರಾಳಕ್ಕೆ' ಎಂದರೆ ಪೂರ್ವಪದದ ಅಂತ್ಯ 'ದು' ಶಬ್ದಕ್ಕೆ ಎಂದು ಅರ್ಥಮಾಡಿಕೊಂಡು ಸಮಾಧಾನಪಟ್ಟುಕೊಳ್ಳಬೇಕಾಗಿದೆ. ಇನ್ನು ಇತ್ವ ವಿಧಿ ವ್ಯರ್ಥವೇ. ಉದಾಹೃತ ಗುಣವಚನದಲ್ಲಿ ಇಕಾರ ಇದ್ದೇ ಇದೆ. ಕೇಶಿರಾಜನ ಶಾಸ್ತ್ರದ 'ಧಾಟಿ' ಯನ್ನರಿಯುವುದು ತುಂಬ ಕಷ್ಟ. ಇಕಾರ–ಅಕಾರಗಳ ನಡುವೆ ಯಕಾರಾಗಮ ಬಂದಿದೆ. ಗುಣವಚನಪೂರ್ವಸಮಾಸದಲ್ಲಿ 'ತನಗತ್ವಂ ಪೆಱಗಿತ್ವಂ' ಎಂಬುದಕ್ಕೆ ಯಾವುದು ಲಕ್ಷ್ಯವೋ ('ಅಸಿಯ ನಡು, ಪಸಿಯ ಬಣ್ಣಂ' ಮುಂತಾದದ್ದು) ಅದು ಗಮಕಸಮಾಸವೆಂದೂ ಕೆಂಜಡೆ, ಕಟ್ಬಾಳ್ ಮೊದಲಾದದ್ದು ಗುಣವಚನಪೂರ್ವವಾದರೂ ಗಮಕಸಮಾಸವಲ್ಲವೆಂದೂ ಕೇಶಿರಾಜನ ಆಶಯವಿದ್ದರೂ ಇರಬಹುದು.

ಹೀಗೆ ಒಪ್ಪುವುದಾದರೆ ಎಳೆಯ ಬಳ್ಳಿ, ಹಳೆಯ ಕನ್ನಡ –ಇವು ಗಮಕ ಸಮಾಸಗಳಾಗುವುದಿಲ್ಲ. ಅತ್ವ ಇಲ್ಲಿ ಬಂದಿದ್ದರೂ ಇತ್ವ ಬಂದಿಲ್ಲ; 'ಪಸಿಯ ಬಣ್ಣಂ' ಎಂಬಲ್ಲಿರುವಂತೆ ಇಕಾರವೂ ಇಲ್ಲ. ಮೊದಲೇ ಹೇಳಿದಂತೆ ಈ ಸೂತ್ರವು ಅಪೂರ್ವ ವಿಧಿಯಲ್ಲ. ಇದನ್ನು ಹೇಳದಿದ್ದರೂ ಸಮಾಸ ಬರಲಡ್ಡಿಯಿಲ್ಲ. ಆದರೆ ಈ ಸೂತ್ರದಿಂದ ಹೊಸದಾಗಿ ಗೊತ್ತಾಗತಕ್ಕ ಅಂಶಗಳು ಮೂರು–

೧. ಕರ್ಮಧಾರಯದಲ್ಲಿ ಗುಣವಚನದ 'ದು' ಶಬ್ದಕ್ಕೆ ಅಕಾರಾದೇಶ ಬರುತ್ತದೆ.

೨. ಇದಕ್ಕೆ ಅರಿಸಮಾಸ ದೋಷವಿಲ್ಲ (ಇದಕರಿಪದನಿಲ್ಲ).

೩. ಈ ಸಮಾಸಕ್ಕೆ ಗಮಕ ಎಂದು ಸಂಜ್ಞೆ.

ಶಬ್ದಾನುಶಾಸನವನ್ನು ರಚಿಸಿದ ಭಟ್ಟಾಕಳಂಕನು ಕೇಶಿರಾಜನ ತರುವಾಯದವನು. ಈತನು ಶಬ್ದಮಣಿದರ್ಪಣವನ್ನು ನೋಡಿಯೇ ಇದ್ದಾನೆ. ಇವನು ದೊಡ್ಡ ವಿದ್ವಾಂಸ. ವಿಧಿನಿಯಮಗಳಿಗೆ ಯಾವ ದೋಷವೂ ಬರದಂತೆ ಶಾಸ್ತ್ರಶುದ್ಧವಾಗಿ ಬರೆಯುತ್ತಾನೆ. ಪ್ರಕೃತ ಭಟ್ಟಾಕಳಂಕನ ಈ ಸೂತ್ರ ಗಮನಾರ್ಹವಾದದ್ದು–

ಕೃತ್‌ಸಂಖ್ಯಾದ್ವಾದಿಗುಣೋಕ್ತಿಃ ಸಂಸ್ಕೃತೇನ ಚ ॥ – (ಸೂ. ೨೯೪)

"ಕೃದಂತ, ಸಂಖ್ಯಾವಾಚಕ, ಅದ್ವಾದಿ ಗಣಪಠಿತವಾದ ಶಬ್ದ, ಗುಣವಾಚಕ– ಇವು ಪ್ರಕೃತಿಯಾಗಿರುವ ಸುಬಂತ ಶಬ್ದವು ಕನ್ನಡಪದದೊಡನೆಯೂ ಸಂಸ್ಕೃತಪದದೊಡನೆಯೂ ಸಮಾಸ ಹೊಂದುತ್ತದೆ."

ಸುಬಂತವೆಂದರೆ ನಾಮಪದ. ಸಮಾಸಪ್ರಕರಣದ ಆದಿಯಲ್ಲೇ ಈ ಸೂತ್ರ ಇದೆ. ಭಟ್ಟಾಕಳಂಕನ ಪ್ರಕಾರ ಇದು ಅಧಿಕಾರಸೂತ್ರ, ವಿಧಿಸೂತ್ರವಲ್ಲ. ಇದರಿಂದ ಯಾವ ಸಮಾಸವನ್ನೂ ವಿಧಿಸುವುದಿಲ್ಲ. ಮುಂದಿನ ಎಲ್ಲ ಸಮಾಸವಿಧಿಸೂತ್ರಗಳಲ್ಲಿಯೂ ಇದಕ್ಕೆ ಅನುವೃತ್ತಿಯುಂಟು. ಮುಂದಿನ ಎಲ್ಲ ವಿಧಿಗಳಲ್ಲಿಯೂ ಕೃದಂತ ಸಂಖ್ಯಾದಿಗಳು ಸಂಸ್ಕೃತ ಶಬ್ದದೊಡನೆಯೂ ಸಹ ಸಮಾಸ ಹೊಂದುತ್ತವೆ ಎಂದರ್ಥ. ಇವುಗಳೊಡನೆ ಸಮಾಸವಾದಾಗ ಅರಿಸಮಾಸದೋಷವಿಲ್ಲವೆಂದು ಮುಖ್ಯ ತಾತ್ಪರ್ಯ. ಈ ಸೂತ್ರದಲ್ಲಿ ಅದ್ವಾದಿಯೆಂದರೆ ಅದು, ಇದು, ಉದು, ಯಾವುದು– ಮುಂತಾದ ಸರ್ವನಾಮ. ಈಗ–

ಜನಿಯಿಸುಗುಂ ಸಂಖ್ಯಾಸ-
ರ್ವನಾಮ ಗುಣವಚನ ಕೃತ್‌ಪ್ರಪೂರ್ವಂ ಗಮಕಂ ॥

ಎಂಬ ಕೇಶಿರಾಜನ ಸೂತ್ರಕ್ಕೂ ಮೇಲ್ಕಂಡ ಭಟ್ಟಕಳಂಕನ ಸೂತ್ರಕ್ಕೂ ಅರ್ಥದಲ್ಲಿ ಯಾವ ವ್ಯತ್ಯಾಸವಿದೆ? ಇಲ್ಲಿ ಅರಿಪದದೋಷವಿಲ್ಲವೆಂಬುದನ್ನು ಈರ್ವರೂ ಒಪ್ಪಿದ್ದಾರೆ. ಕೇಶಿರಾಜನು ತತ್ಪುರುಷ, ಕರ್ಮಧಾರಯಗಳಿಗೆ ಮಾತ್ರ ಈ ನಿಯಮವನ್ನು ಅನ್ವಯಿಸಿದರೆ, ಭಟ್ಟಾಕಳಂಕನು ಎಲ್ಲ ಸಮಾಸಗಳಿಗೂ ಸಾಮಾನ್ಯವಾಗಿ ಈ ನಿಯಮವನ್ನು ಒಪ್ಪಿದ್ದಾನೆ. ಇದರಿಂದ ನಾಲ್ಕು ಭುಜಗಳು ಯಾರಿಗೋ ಅವನು ನಾಲ್ಬುಜನ್, ಪಿರಿಯ ಗುಣನ್– ಮುಂತಾದ ಬಹುವ್ರೀಹಿಯೂ ಭಟ್ಟಾಕಳಂಕನ ಮತದಲ್ಲಿ ಸಿದ್ಧಿಸುತ್ತದೆ. ಹಿಂದೆ ಹೇಳಿದಂತೆ ಗಮಕಸಮಾಸವು ನೂತನ ಸಮಾಸವಲ್ಲವೆಂಬುದು ಇದರಿಂದ ನಿಶ್ಚಿತವಾಯಿತು. ನಾಲ್ಬುಜನ್– ಮೊದಲಾದ ಬಹುವ್ರೀಹಿಯನ್ನು ಕೇಶಿರಾಜನು ಒಪ್ಪುವುದಾದರೆ, ಕರ್ಮಧಾರಯಮದುವುಂ' ಎಂದು ಅವನು ಹೇಳಿದ್ದು ಬಹುವ್ರೀಹಿಗೂ ಉಪಲಕ್ಷಣ ಎಂದು ತಿಳಿಯಬೇಕಾಗುತ್ತದೆ. ಪರಿಸ್ಥಿತಿ ಹೀಗಿರುವಾಗ 'ಗಮಕಸಮಾಸವು ಸಮಾಸವೆ?' ಎಂಬ ಪ್ರಶ್ನೆಯೇ ಅಸಂಗತ; 'ಸಂಖ್ಯಾಸರ್ವನಾಮ ಗುಣವಚನ ಕೃದಂತಪೂರ್ವಕವಾದ ಸಮಾಸವು ಸಮಾಸವೆ?' ಎಂದಿಷ್ಟೇ ಪ್ರಶ್ನೆಯಾಗಿ ಉಳಿಯುತ್ತದೆ.

ಇಷ್ಟರೂಪದ ಸಿದ್ಧಿಯಂತೂ ವ್ಯಾಕರಣದ ಪ್ರಯೋಜನವಾಯಿತಷ್ಟೆ. ಅದರ ಜೊತೆಗೆ ಅನಿಷ್ಟರೂಪದ ನಿವೃತ್ತಿಯೂ ಪ್ರಯೋಜನವೆಂದು ನೆನಪಿನಲ್ಲಿಡಬೇಕು. ಇಷ್ಟೇ ಅಲ್ಲ. ಇನ್ನೊಂದು ಮುಖ್ಯವಾದ ಅಂಶವಿದೆ. ವ್ಯಾಕರಣದಲ್ಲಿ ಸಮಾಸವನ್ನು ಸಮಾಸವೃತ್ತಿಯೆನ್ನುತ್ತಾರೆ. 'ಪರಾರ್ಥಾಭಿಧಾನಂ ವೃತ್ತಿಃ'. ಸಮಾಸಾವಯವ ಶಬ್ದಗಳ ಅರ್ಥವೇ ಅಲ್ಲದೆ ಇನ್ನೊಂದು ಹೊಸ ಅರ್ಥವೂ ಅದರಲ್ಲಿ ಸೇರಿರುತ್ತದೆ. ಈ ಅರ್ಥವಿಶೇಷವನ್ನು ವಿಗ್ರಹವಾಕ್ಯದಿಂದ ತೋರಿಸಲಾಗುತ್ತದೆ. ಅವಯವ ಶಬ್ದಗಳಿಗಿಂತ ಹೆಚ್ಚಿನ ಅರ್ಥ ಎಲ್ಲಿ ತೋರುತ್ತದೆಯೋ ಅದು ಸಮಾಸದಿಂದಲೇ ತೋರುತ್ತದೆ ಯೆಂದು ವೈಯಾಕರಣರ ಸಿದ್ಧಾಂತ.

ಕೇಶಿರಾಜನು ಗಮಕಸಮಾಸಕ್ಕೆ ಕೊಟ್ಟ ಉದಾಹರಣೆಗಳನ್ನು ಈಗ ಪರೀಕ್ಷಿಸ ಬಹುದು. (ಸೂತ್ರ ೧೭೯)

೧. ಪ್ರಯೋಗಂ– ಸಂಖ್ಯೆಗೆ

ಇರ್ಪತ್ತೈದು, ನೂಱುಪತ್ತು, ಮೂವತ್ತಾರು

'ಮೂವತ್ತಾರುಂ ಗುಣಂಗಳ್ ತಮಗಮರ್ದಿರೆ'

ಇಲ್ಲಿ ವಿಗ್ರಹವಾಕ್ಯ ಹೇಗೆ? ಇದು ಯಾವ ಸಮಾಸ? ಕೇಶಿರಾಜನ ಪ್ರಕಾರ ಇದು ಕರ್ಮಧಾರಯವಾಗಬೇಕು. ಇರ್ಪತ್ತು ಸಹಿತವಾದ ಅಥವಾ ಇಪ್ಪತ್ತು ಅಧಿಕವಾದ ಐದು ಇರ್ಪತ್ತೈದು –ಎಂದು ವಿಗ್ರಹ ಹೇಳಬೇಕಾಗುತ್ತದೆ. ಮಧ್ಯಮಪದ ಲೋಪವಾಗುವ ಕರ್ಮಧಾರಯ. 'ಸಹಿತ' ಅಥವಾ 'ಅಧಿಕ' ಶಬ್ದ ಲುಪ್ತವಾಗಿದೆ. ಹಾಗಲ್ಲದೆ ಇರ್ಪತ್ತು ಮೇಣ್ ಐದು– ಎಂದು ದ್ವಂದ್ವಸಮಾಸವನ್ನೂ ಮಾಡಬಹುದು. ಸಂಸ್ಕೃತದಲ್ಲಿಯೂ 'ದ್ವಾದಶ, ಪಂಚವಿಂಶತಿ' ಮೊದಲಾದವು ಮೇಲ್ಕಂಡಂತೆ ಕರ್ಮಧಾರಯವೆಂದೂ ದ್ವಂದ್ವವೆಂದೂ ಎರಡು ಪಕ್ಷಗಳಿವೆ. 'ಪಂಚಾಧಿಕಾ ವಿಂಶತಿಃ ಪಂಚವಿಶಂತಿಃ' ಎಂದು ಹೇಳಿ 'ಅಧಿಕ' ಶಬ್ದವನ್ನು ಲೋಪಮಾಡುವುದು ಉಂಟು. ಆಗ ಮಧ್ಯಮಪದ ಲೋಪ ಕರ್ಮಧಾರಯಸಮಾಸವಾಗುತ್ತದೆ. ಭಟ್ಟಾಕಳಂಕನ ಮತದಲ್ಲಿ ಇರ್ಪತ್ತೈದು ಮೊದಲಾದವು ದ್ವಂದ್ವಸಮಾಸಗಳು.

ಇವು ಸಮಾಸಗಳೆನ್ನುವುದಕ್ಕೆ ಗಮಕಗಳೇನು?

ಅ) ನಡುವೆ ಇನ್ನೊಂದು ಶಬ್ದವನ್ನು ತುರುಕಲಾಗುವುದಿಲ್ಲ.
ಇರ್ಪತ್ತು ನನಗೆ ಐದು ಹಣ್ಣುಗಳು ಬೇಕು ಎನ್ನಲಾಗದು.

ಆ) ಪೂರ್ವಪದದ ಮೇಲೆ ವಿಭಕ್ತಿಪ್ರತ್ಯಯ ಬರುವುದಿಲ್ಲ.
ಇಪ್ಪತ್ತೈದನ್ನು ಕೊಡುತ್ತಾನೆ ಎನ್ನುತ್ತೇವೆಯೇ ಹೊರತು ಇಪ್ಪತ್ತನ್ನೂ ಐದನ್ನೂ ಕೊಡುತ್ತಾನೆ ಎನ್ನುವುದಿಲ್ಲ. ಹೂಹಣ್ಣುಗಳನ್ನು ಕೊಡುತ್ತಾನೆ ಎಂಬಲ್ಲಿ ಸಮಾಸ ವಾಗದಿದ್ದಾಗ ಹೂವನ್ನೂ ಹಣ್ಣನ್ನೂ ಕೊಡುತ್ತಾನೆ ಎಂದಾಗುತ್ತದೆಯಲ್ಲವೆ?

ಇ) ಇಲ್ಲಿ ಇಪ್ಪತ್ತು ಐದು– ಇವುಗಳ ಸಂಕಲನದಿಂದಾದ ಸಮುದಾಯಸಂಖ್ಯೆ ತೋರುತ್ತದೆಯೇ ಹೊರತು ಬಿಡಿಬಿಡಿಯಾಗಿ ಎರಡು ಸಂಖ್ಯೆಗಳು ತೋರು

ವುದಿಲ್ಲ. ಸಂಕಲನರೂಪವಾದ ಹೊಸ ಅರ್ಥ ಸಮಾಸದಿಂದ ಬಂದದ್ದು. ಸಮಾಸವಾಗದಿದ್ದರೆ ಈ ಸಮುದಾಯಾರ್ಥವು ಪ್ರತೀತವಾಗುವುದು ಹೇಗೆ? ಆದ್ದರಿಂದಲೇ 'ಪರಾರ್ಥಾಭಿಧಾನಂ ವೃತ್ತಿಃ' ಎಂದು ಹೇಳಿದ್ದು. ಎರಡು ಸಲ ಪತ್ತು ಇರ್ಪತ್ತು. ಇರ್ಪತ್ತು ಅಧಿಕವಾದ ಐದು ಅಥವಾ ಇರ್ಪತ್ತು ಮತ್ತು ಐದು ಇರ್ಪತ್ತೈದು ಎಂದು ವಿಗ್ರಹ. ಇರ್ಪತ್ತರ ಐದು ನೂರರ ಪತ್ತು– ಎಂಬ ವಿಗ್ರಹ ತಪ್ಪು. ಆಗ ವಿವಕ್ಷಿತವಾದ ಸಂಖ್ಯಾಸಮುದಾಯ ತೋರುವುದಿಲ್ಲ.

ಈ) 'ಮೂವತ್ತಾರುಂ ಗುಣಂಗಳ್' ಎಂಬಲ್ಲಿ ಸಮುಚ್ಚಯಬೋಧಕವಾದ 'ಉಂ' ಸಮುದಾಯಸಂಖ್ಯೆಯಲ್ಲಿ ಅನ್ವಿತ. ಸಮಾಸವಲ್ಲದಿದ್ದರೆ 'ಮೂವತ್ತುಂ ಆರುಂ' ಎಂದು ಎರಡು ಕಡೆ ಇದರ ಪ್ರಯೋಗವಾಗಬೇಕಾಗುತ್ತದೆ, ರಾಮನುಂ–ಕೃಷ್ಣನುಂ ಎಂಬಂತೆ.

ಕೇಶಿರಾಜನು ಕೊಟ್ಟ ಉದಾಹರಣೆಗಳು ದಿಕ್‌ಪ್ರದರ್ಶನ ಮಾತ್ರ. ಪನ್ನೊಂದು, ಪದಿನೆಂಟು, ಎಂಬಯ್‌ಸಾಸಿರಂ– ಮೊದಲಾದವೆಲ್ಲ ಉದಾಹರಣೆಗಳೇ. ಇವು ಸಮಾಸವಲ್ಲದಿದ್ದರೆ ಪೂರ್ವಪದಕ್ಕೆ ಪನ್, ಪದಿ, ಎಂಬಯ್ ಮುಂತಾದ ಆದೇಶಗಳು ಬರುವುದೆಂತು? ಪದಿನಾಲ್ಕು, ಇರ್ಪತ್ತು, ಈರಯ್ದು– ಮುಂತಾದವೂ ಈ ಸೂತ್ರಕ್ಕೆ ಉದಾಹರಣೆಗಳೇ. ಡಾ। ಬಿಳಿಗಿರಿಯವರು ನಿಷ್ಕಾರಣವಾಗಿ ಎತ್ತೆತ್ತಲೋ ಸುತ್ತಾಡಿದ್ದಾರೆ. ಅಲ್ಲದೆ ಕೇಶಿರಾಜನು ಉದಾಹರಿಸಿದ ಇರ್ಪತ್ತೈದು, ನೂಱುಪತ್ತು, ಮೂವತ್ತಾರು– ಈ ಶಬ್ದಗಳು ಸಮಾಸವಲ್ಲವೆಂಬುದಕ್ಕೆ ಯಾವ ಉಪಪತ್ತಿಯನ್ನೂ ತಿಳಿಸಿಲ್ಲ. ಏಕಪಕ್ಷೀಯವಾಗಿ ಇವು ಸಮಾಸವಲ್ಲವೆಂದು ತೀರ್ಪನ್ನಿತ್ತು ಹತ್ತುಸಾವಿರ, ಎಂಟುನೂರು –ಇವು ಸಮಾಸಗಳೇ ಎಂದು ಒಪ್ಪಿಕೊಂಡಿರುವುದು ತುಂಬ ವಿಚಿತ್ರವಾಗಿದೆ.

ಇರ್ಪತ್ತು ಎಂಬಲ್ಲಿ ಯಾವ ಸಮಾಸ? ಎರಡು ಸಲ ಪತ್ತು ಇರ್ಪತ್ತು ಎಂದು ವಿಗ್ರಹ. ಭಟ್ಟಾಕಳಂಕನ ಪ್ರಕಾರ ಇದು ಬಹುವ್ರೀಹಿ. ಸಂಸ್ಕೃತ ವ್ಯಾಕರಣಕ್ಕೆ ಇದು ಸಂಮತ. ಕೇಶಿರಾಜನು ಏನನ್ನೂ ಹೇಳಿಲ್ಲ. ಅವನ ಲಕ್ಷಣ ಅಪೂರ್ಣ. ಸಂಖ್ಯಾಪೂರ್ವವಾದ್ದರಿಂದ ಗಮಕಸಮಾಸ ಎನ್ನಬೇಕು. ಆದರೆ ಕರ್ಮಧಾರಯದ ಲಕ್ಷಣ ಇದರಲ್ಲಿಲ್ಲ. 'ಏಕಾಶ್ರಯ'ವಾದರೆ ಎಂದರೆ ಅಭೇದಾನ್ವಯವಿದ್ದರೆ ಕರ್ಮಧಾರಯ. ಇರ್ಪತ್ತು ಎಂಬಲ್ಲಿ ಅಭೇದಾನ್ವಯವಿಲ್ಲ. ಅದಿರಲಿ, 'ಎತ್ತಾನುಂ ತತ್ಪುರುಷಮಪ್ಪುದು' ಎಂದು ಗ್ರಂಥಕಾರನು ಹೇಳುತ್ತಾನಲ್ಲ. ಅದಕ್ಕೆ ಉದಾಹರಣೆ ಯಾವುದು? ವಿದ್ವಾಂಸರು ಇದನ್ನು ಪರೀಕ್ಷಿಸಿಲ್ಲವೆಂದು ಹೇಳಬೇಕಾಗಿದೆ. ಕರ್ಮಧಾರಯವಲ್ಲದ ತತ್ಪುರುಷ ಗಮಕಸಮಾಸದಲ್ಲಿ ಯಾವುದು? ಸರ್ವನಾಮ, ಗುಣವಚನ, ಕೃದಂತ ಪೂರ್ವವಾದಾಗ ಕರ್ಮಧಾರಯವೇ ಆಗಿರುತ್ತದೆ. ಆದ್ದರಿಂದ ಸಂಖ್ಯಾಪೂರ್ವವಾದ ಇರ್ಪತ್ತೈದು, ಮೂವತ್ತಾರು– ಮೊದಲಾದವುಗಳಲ್ಲೇ ಇದನ್ನು ಕಂಡುಕೊಳ್ಳಬೇಕಾಗುತ್ತದೆ. ಇರ್ಪತ್ತು ಅಧಿಕವಾದ ಐದು ಇರ್ಪತ್ತೈದು ಎಂದು ವಿಗ್ರಹವನ್ನು

ಹೇಳಬೇಕಾದ್ದರಿಂದ, ಇಲ್ಲಿ ಅಭೇದಾನ್ವಯವಿಲ್ಲವೆಂದೂ ಇದೇ ತತ್ಪುರುಷವೆಂದೂ ಕೇಶಿರಾಜನ ಅಭಿಪ್ರಾಯವಿರಬೇಕು.

೨. ಸರ್ವನಾಮಕ್ಕೆ- ಆವ ಮಾತು, ಆವ ಕಾರ್ಯಂ, ಆವ ನಾಯಕಂ, ಆವ ಕಾಂತೆ.

ಡಾ। ಬಿಳಿಗಿರಿಯವರು ಈ ಉದಾಹರಣೆಗಳನ್ನು ಪರಿಶೀಲಿಸಿಲ್ಲ. ಸಮಾಸದಲ್ಲಿ 'ಆವುದು' ಶಬ್ದದ 'ದು'ವಿಗೆ ಅಕಾರಾದೇಶ ಬಂದು ಹಿಂದಿನ ಉಕಾರಲೋಪವಾಗಿ 'ಆವ' ಆಗಿದೆಯೆಂದು ವ್ಯಾಕರಣದ ಪ್ರಕ್ರಿಯೆ. 'ದು' ಶಬ್ದಕ್ಕೆ ಲೋಪವೆನ್ನುವುದು ಇನ್ನೊಂದು ಪ್ರಕಾರ. ಲಿಂಗವಚನದ ಭೇದವಿಲ್ಲದೆ ಈ ರೂಪವಾಗುತ್ತದೆ. ಉದಾ: ಆವ ಕಾರ್ಯಂ- ಆವ ಕಾರ್ಯಂಗಳ್, ಆವ ಪೆಣ್- ಆವ ಪೆಣ್ಗಳ್, ಆವ ಪುರುಷನ್- ಆವ ಪುರುಷರ್ ಸಮಾಸವಲ್ಲದಿದ್ದರೆ ಈ ರೂಪಗಳನ್ನು ಸಾಧಿಸುವುದು ಹೇಗೆ? 'ಆವುದು' ಶಬ್ದಕ್ಕೆ ಆದೇಶ ಬಂದಿಲ್ಲವೆಂದೂ 'ಆವ' ಎಂಬ ಸ್ವತಂತ್ರ ಶಬ್ದವಿದೆಯೆಂದೂ ಹೇಳುತ್ತೀರೇನು? ಹಾಗಿದ್ದರೆ 'ಮರಂ' 'ಮರಂಗಳ್' ಎಂಬಂತೆ ನಪುಂಸಕದಲ್ಲಿ 'ಆವಂ' 'ಆವಂಗಳ್' ಎಂದೂ ಉಳಿದ ಬಹುವಚನದಲ್ಲಿ 'ಆವರ್' ಎಂದೂ ವಿಭಿನ್ನ ರೂಪಗಳು ಈ ಶಬ್ದಕ್ಕೆ ಪ್ರಾಪ್ತವಾಗುತ್ತವಲ್ಲ, ಇದನ್ನು ತಪ್ಪಿಸುವುದು ಹೇಗೆ? ಅಷ್ಟೇ ಅಲ್ಲ. 'ಆವುದು' ಶಬ್ದಕ್ಕೇ ಸಮಾಸವಾದಾಗ 'ಆವುದು ಪುರುಷನ್' ಇತ್ಯಾದಿ ರೂಪಗಳು ಪ್ರಾಪ್ತವಾಗುತ್ತವೆ. ಸಮಾಸವನ್ನೊಪ್ಪದ ವಿದ್ವಾಂಸರು ಈ ಶಂಕೆಗಳಿಗೆ ಕೃಪೆಯಿಟ್ಟು ಸಮಾಧಾನ ಹೇಳಿದ್ದರೆ, ನಮ್ಮ ಜ್ಞಾನದ ಮಟ್ಟವನ್ನು ಹೆಚ್ಚಿಸಿಕೊಳ್ಳಬಹುದಾಗಿತ್ತು. ಅನಿಷ್ಟರೂಪದ ವ್ಯಾವೃತ್ತಿಯೂ ಸಹ 'ಸಮಾಸ' ಸಂಜ್ಞೆಯ ಪ್ರಯೋಜನ.

ಅದುವಿದುವುದುಗಾಯೀಯೂ
ವೊದವುಗುಮಾದೇಶಮಾಗಿ ಗಮಕದೊಳಾಯೆಂ
ಬುದು ಪೂರ್ವಪರಾಮರ್ಶೆಗ-
ವೊದವುಗುಮಾ ರೂಢಿಗಂ ಕವೀಶ್ವರಮತದಿಂ ॥ — (ಸೂ. ೧೮೦)

ಉದಾ: ಅದು ಮನೆ=ಆ ಮನೆ, ಈ ಮರ, ಊ ಪೆಣ್.

ಡಾ। ಬಿಳಿಗಿರಿಯವರು ಇವು ಸಮಾಸಗಳಲ್ಲವೆನ್ನುತ್ತಾರೆ. ಅವರು

ಆ ಕರಿಯ ನೆಯ್ದಿಲ್
ಆ ನೆರೆದ ಗುರುಜನಂಗಳ್
ಈ ಅಸಿಯ ನೂಲ್

–ಇತ್ಯಾದಿ ಪ್ರಯೋಗಗಳನ್ನುದಾಹರಿಸಿ, ಇಲ್ಲಿ ಸಮಾಸವನ್ನೊಪ್ಪಿದರೆ ಕರಿಯನೆಯ್ದಿಲ್ ಎಂಬುದು ಗಮಕಸಮಾಸವಾಗಿ ಅನಂತರ ಆ ಕರಿಯನೆಯ್ದಿಲ್ ಎಂಬುದೂ ಗಮಕ ಸಮಾಸವೆನ್ನಬೇಕಾಗುತ್ತದೆ ಎಂದಿದ್ದಾರೆ. ಇವುಗಳನ್ನೂ ಸಮಾಸವೆಂದರೆ ಸೂತ್ರಕ್ಕಾಗಿ ಆತ್ಮವನ್ನು ಮಾರಿಕೊಂಡಂತಾಗುತ್ತದೆಯೆಂದೂ ಇದು ಹಾಸ್ಯಾಸ್ಪದವೆಂದೂ ಹೇಳುತ್ತಾರೆ (ಪು. ೮೬, ೮೭).

ಆಲಂಕಾರಿಕವಾದ ಈ ಹೇಳಿಕೆ ಕೇಳಲು ಚೆನ್ನಾಗಿದೆ. ಇಷ್ಟು ಹೇಳಿ ಕೈತೊಳೆದು ಕೊಳ್ಳಲಾಗುವುದಿಲ್ಲ. ಮೇಲ್ಕಂಡ ಪ್ರಯೋಗಗಳನ್ನು ನೀವು ಹೇಗೆ ಸಾಧಿಸುತ್ತೀರಿ? ಸಮಾಸವಾಗದಿದ್ದರೂ ಆ, ಈ ಆದೇಶಗಳು ಬರುತ್ತವೆಂದು ಹೇಳುತ್ತೀರೊ? ಹಾಗೆದ್ದರೆ, ಕರಿಯ ನೆಯ್ದಿಲ್ ಆ, ನೆರೆದ ಗುರುಜನಂಗಳ್ ಈ– ಮುಂತಾದ ಪ್ರಯೋಗಗಳೇಕೆ ಬರುವುದಿಲ್ಲ? ವಿಶೇಷ್ಯವು ಮುಂದೆ ಇದ್ದಾಗ ಮಾತ್ರ ಹಿಂದೆ ಇರುವ 'ಅದು ಇದು'ಗಳಿಗೆ ಆ, ಈಗಳು ಆದೇಶವಾಗಿ ಬರುತ್ತವೆಯೆಂದು ಸೂತ್ರವನ್ನು ರಚಿಸುತ್ತೀರೊ? ಹಾಗೆ ಹೊಸ ನಿಯಮವನ್ನು ರಚಿಸುವುದಕ್ಕಿಂತ ಸಿದ್ಧವೇ ಆಗಿರುವ ಸಮಾಸವನ್ನೊಪ್ಪಿದರೆ ಬಾಧಕವೇನು? ಹಾಸ್ಯಕ್ಕೆ ವಿಷಯವೇನಿದೆ? ನಗು ಬರಲು ಕಾರಣವೇನು? ಹಾಗಲ್ಲದೆ ಆ, ಈ ಎಂಬ ಸ್ವತಂತ್ರವಾದ ಪ್ರತ್ಯೇಕ ಶಬ್ದಗಳಿವೆಯೆಂದು ಒಪ್ಪುವುದಾದರೆ ಸಮಾಸವಾಗದ ಇನ್ನೊಂದು ಪ್ರಯೋಗವನ್ನು ತೋರಿಸಬೇಕಾಗುತ್ತದೆ. ರಾಮನು ಯಾರು? ಎಂಬ ಪ್ರಶ್ನೆಗೆ 'ಅವನು' ಎಂದು ಉತ್ತರಿಸುವಂತೆ, 'ಆ' ಎಂದು ಉತ್ತರಿಸುವುದುಂಟೊ? ಮತ್ತು ಈ ಪಕ್ಷದಲ್ಲಿ 'ಅದು' ಶಬ್ದಕ್ಕೆ 'ಪುರುಷ' ಶಬ್ದದೊಡನೆ ಸಮಾಸವಾದಾಗ 'ಅದು ಪುರುಷ' ಎಂಬ ರೂಪ ಪ್ರಾಪ್ತವಾಗುತ್ತದೆ. ಇದನ್ನು ತಪ್ಪಿಸಲು ಸಾಧ್ಯವಿಲ್ಲ.

ಕೇಶಿರಾಜನ ಮೇಲ್ಕಂಡ ಸೂತ್ರದ ದ್ವಿತೀಯಾರ್ಧವನ್ನು ಸೂಕ್ಷ್ಮವಾಗಿ ಪರಿಕಿಸಿದರೆ ಇನ್ನೊಂದು ಅಭಿಪ್ರಾಯ ಹೊರಡುತ್ತದೆಯೆಂದು ನಮ್ಮ ಎಣಿಕೆ. ಆ, ಈ ಎಂಬ ಆದೇಶಗಳೇ ಅಲ್ಲದೆ ಸ್ವತಂತ್ರವಾದ ಆ, ಈ ಶಬ್ದಗಳು ಇವೆಯೆಂದೂ ಸ್ಮರಣೆ, ಪ್ರಸಿದ್ಧಿ– ಇವೆರಡು ಅರ್ಥಗಳಲ್ಲಿ ಮಾತ್ರ ಇವಕ್ಕೆ ಪ್ರಯೋಗವೆಂದೂ ಆತನು ಹೇಳುವಂತೆ ಕಾಣುತ್ತದೆ. 'ಆ ನಿನ್ನ ಮಗ' ಮುಂತಾದವು ಪ್ರಾಮಾಣಿಕ ಪ್ರಯೋಗವಾದರೆ, ಸ್ಮರಣೆ ಅಥವಾ ಪ್ರಸಿದ್ಧಿಯ ಅರ್ಥದಲ್ಲಿ ಬಂದಿದೆಯೆಂದು ಹೇಳಬೇಕಾಗುತ್ತದೆ. ಸ್ವತಂತ್ರಶಬ್ದಗಳೆಂದು ಒಪ್ಪಿದರೂ ಅದು ಇದುಗಳಿಗೆ ಸಮಾಸವನ್ನೂ ಆದೇಶವನ್ನೂ ಹೇಳುವುದು ಅನಿವಾರ್ಯ. ಹಾಗೆಯೇ ಎಲ್ಲದು ಧನಂ = ಎಲ್ಲ ಧನಂ, ಎಲ್ಲಾ ಧನಂ ಎಂಬ ರೂಪಗಳನ್ನು ಸಾಧಿಸುವುದಕ್ಕೆ ಇದು ಸಮಾಸವೆಂದು ಒಪ್ಪಬೇಕಾಗುತ್ತದೆ.

೩. ಕೃತ್ತಿಂಗೆ–

ಪಾಡುವ ತುಂಬಿ, ಕೋಡುವ ಪುಟಿಲ್, ಆಡಿದ ಪೊಲನ್, ಕಂಡ ವಿಚಾರಂ.

ಇವು ಸಮಾಸಗಳೆಂದು ಹೇಳುವ ಕೇಶಿರಾಜನ ಅಭಿಪ್ರಾಯ ಹೀಗೆ– ಪಾಡುವ, ಕೋಡುವ, ಆಡಿದ, ಕಂಡ ಮೊದಲಾದವು ಕೃದಂತಗಳು. ಇವುಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರಿ ಪಾಡುವನ್, ಪಾಡುವನಿಂ, ಪಾಡುವಂಗೆ, ಪಾಡುವರ ಮುಂತಾದ ನಾಮಪದಗಳಾಗುತ್ತವೆ. ಅರ್ಥಾನುಸಾರವಾಗಿ ವಿಭಕ್ತಿಪ್ರತ್ಯಯಗಳು ಹತ್ತಲೇಬೇಕು. ಮೇಲ್ಕಂಡ ಶಬ್ದಗಳು ಸಮಾಸವಲ್ಲವಾದರೆ, ಪಾಡುವ ತುಂಬಿಗೆ, ಪಾಡುವ ತುಂಬಿಗಳಂ, ಪಾಡುವ ತುಂಬಿಗಳ –ಮೊದಲಾದ ಸ್ಥಳದಲ್ಲಿ ಕೃದಂತದ ಮುಂದೆ ವಿಭಕ್ತಿಪ್ರತ್ಯಯವೇಕೆ ಬಂದಿಲ್ಲ? –ಎಂಬ ಪ್ರಶ್ನೆ ಹುಟ್ಟುತ್ತದೆ.

ವಿದಿತ ವಿಶೇಷಣಪದಮವು
ಮೊದಲ ವಿಭಕ್ತಿಗಳನಾಂತು ವಾಕ್ಯದ ಮೊದಲೊಳ್ ।
ಪದವೆತ್ತುವಗ್ರಕಾರಕ
ಪದದ ವಿಭಕ್ತಿಯನೆ ತಳೆವುವನ್ವಯಮುಖದೊಳ್ ॥ — (ಸೂ. ೧೫೧)

ಪ್ರಯೋಗಂ– ವೀರನುದಾರಂ ಶುಚಿಗಂ–
ಭೀರಂ ನಯಶಾಲಿ ಕೈದುವೊತ್ತರದೇವಂ– ।
ಗಾರೆಱಿಗರ್ನೃಪತುಂಗಂಗೆ.... ॥

ವಿಶೇಷ್ಯದ ಮೇಲೆ ಯಾವ ವಿಭಕ್ತಿಯಿದ್ದರೂ ವಿಶೇಷಣದ ಮೇಲೆ ಪ್ರಥಮಾವಿಭಕ್ತಿ ಬರಬಹುದೆಂದು ವಿಶೇಷವಿಧಿ ಇದು. ಇದು ವಿಕಲ್ಪವಾದ್ದರಿಂದ–

'ವೀರಂಗೆ ಉದಾರಂಗೆ ಶುಚಿಗಂಭೀರಂಗೆ ನೃಪತುಂಗಂಗೆ' ಎಂದು ವಿಶೇಷ್ಯದ ಚತುರ್ಥಿಯೂ ಬರಬಹುದು. ಅಂತೂ ವಿಶೇಷಣದ ಮೇಲೆ ವಿಭಕ್ತಿ ಬರಲೇಬೇಕು. ಆದ್ದರಿಂದ ಪಾಡುವ ತುಂಬಿ, ಪಾಂಡುವಂಗನೆಗೆ, ಪಾಡುವ ಪುರುಷರ ಮೊದಲಾದ ಸ್ಥಳದಲ್ಲಿ ವಿಶೇಷಣದ ವಿಭಕ್ತಿಗೆ ಲೋಪವನ್ನು ಸಾಧಿಸಲು ಸಮಾಸವನ್ನೊಪ್ಪಬೇಕು ಎಂದು.

ವಿಚಾರ– ಪಾಡುವ, ತೀಡುವ, ಬೇಡುವ, ಕಾಣುವ ಮೊದಲಾದವು ವರ್ತಮಾನ ಕ್ರಿಯಾಬೋಧಕಗಳು. ಪಾಡಿದ, ತೀಡಿದ, ಬೇಡಿದ, ಕಂಡ ಮೊದಲಾದವು ಭೂತ ಕ್ರಿಯಾಬೋಧಕಗಳು. ಇವು ಯಾವಾಗಲೂ ವಿಶೇಷಣಗಳೇ. ಈ ಕೃದಂತಗಳಿಗೆ ವಿಶೇಷ್ಯದೊಡನೆ ಸಮಾಸ ಮಾಡಿದಾಗ ನಡುವೆ ಇನ್ನೊಂದು ಶಬ್ದದ ಪ್ರವೇಶಕ್ಕೆ ಅವಕಾಶವಿರಬಾರದು. ಆದರೆ ಈ ಪ್ರಯೋಗಗಳನ್ನು ನೋಡಿ–

೧. ತೀವಿದ ಕಮ್ಮನಪ್ಪ ತುಪ್ಪದ ಕೊಡದೊಳ್

೨. ಮೆಟ್ಟಿದ ಕಾಲೊಳ್ ಪಾವುಗೆ
ಕಟ್ಟಿದ ಕೊರಳಲ್ಲಿ ಮುತ್ತಿನೆಕ್ಕಾವಳಿ ತ– ।
ನ್ನಿಟ್ಟ ನೊಸಲಲ್ಲಿ ಕತ್ತುರಿ
ಬೊಟ್ಟು ಕರಂ ಸೊಬಗುವಡೆದುದಾ ನೃಪಸುತನಾ ॥

೩. ಮಾಡುವ ನಿನ್ನೊಟೆಗಮಂ
ಪಾಡುವ ನಿನ್ನೊಳ್ಗುಣಂಗಳಂ ಸಂತಸದಿಂ– ।
ದಾಡುವ ನಿನ್ನೊಡನಮರರ
ಗಾಡಿಯೆ ಪೇಳ್ವಪುದು ನಿನ್ನ ಪೆಂಪಂ ಜಿನಪಾ ॥

ಇಂತಹ ನೂರಾರು ಪ್ರಯೋಗಗಳನ್ನು ತೋರಿಸಬಹುದು. ಇಲ್ಲಿ ವಿಶೇಷಣ ವಿಶೇಷ್ಯಗಳ ನಡುವೆ ಇತರ ಶಬ್ದಗಳು ಸೇರಿವೆ. ಆದ್ದರಿಂದ ಇವನ್ನು ಸಮಾಸವೆನ್ನುವುದು ಹೇಗೆ? ಅಲ್ಲದೆ ಈ ಕೃದಂತಗಳು ವಿಶೇಷ್ಯದ ಹಿಂದೆ ಇರಬೇಕೆಂಬ ನಿಯಮವನ್ನೂ ಮಾಡಲಾಗುವುದಿಲ್ಲ. ವಿಶೇಷ್ಯದ ಮುಂದೆಯೂ ಇರಬಹುದು. ಜಗನ್ನಾಥವಿಜಯದ ಈ ಪದ್ಯವನ್ನು ನೋಡಿ–

ಶ್ರೀರಾಮಾನಟಿ ಕೌಸ್ತುಭದ್ಯುತಿಕಿರತ್‌ಪುಷ್ಪಾಂಜಲಿಕ್ಷೇಪವ-
ಕ್ಷೋರಂಗಸ್ಥಿತೆಯಾದ ಪಾದನಖರೋಚಿರ್ಗ಼ಂಗೆ ಪೃಥ್ವೀಶಕೋ ।
ಟೀರವ್ಯಾಪ್ತಿಗೆ ಸಂದ ಚಕ್ರರವಿ ದೈತ್ಯಧ್ವಾಂತಮಂ ಗೆಲ್ದ ಭೂ
ಭಾರಚ್ಛೇದವಿನೋದಿ ಕೃಷ್ಣನೆಮಗೀಗಾನಂದಸಂದೋಹಮಂ ॥

ಈ ಪದ್ಯದಲ್ಲಿ 'ಆದ ಶ್ರೀರಾಮಾನಟಿ, ಸಂದ ಪಾದನಖರೋಚಿರ್ಗ಼ಂಗೆ, ಗೆಲ್ದ ಚಕ್ರರವಿ' ಎಂಬುದಾಗಿ ಅನ್ವಯವಷ್ಟೆ. ಪದ್ಯದಲ್ಲಿ ವಿಶೇಷ್ಯಗಳು ಮೊದಲಿದ್ದು ವಿಶೇಷಣಗಳು ಅನಂತರ ಬಂದಿವೆ. ಹೀಗಿರುವಾಗ ಸಮಾಸವಾಗಿದೆಯೆಂಬ ಶಂಕೆಗೆ ಸಹ ಅವಕಾಶವಿಲ್ಲ. ಇವುಗಳ ಉಪಪತ್ತಿ ಹೇಗೆ? ಈ ವಿಷಯದಲ್ಲಿ ಕೇಶಿರಾಜನು ಮೌನವನ್ನವಲಂಬಿಸಿದ್ದಾನೆ. ಭಟ್ಟಾಕಳಂಕನು ಶಬ್ದಾನುಶಾಸನದಲ್ಲಿ **'ಅಗ್‌ಬಹುಲಂ'** (ಸೂ. ೩೪೫) ಎಂದು ಸೂತ್ರಿಸಿ ಬಹುಲಗ್ರಹಣದಿಂದ ಇವೆಲ್ಲವನ್ನೂ ಸೂಚಿಸಿದ್ದಾನೆ. ವಿಧಿಸೂತ್ರದ ಪ್ರಾಪ್ತಿ, ನಿವೃತ್ತಿ, ವಿಕಲ್ಪ ಅಥವಾ ಇನ್ನಾವುದೋ ವಿಧಿಸೂತ್ರದ ಪ್ರಾಪ್ತಿ- ಇವುಗಳನ್ನು ವೈಯಾಕರಣರು 'ಬಹುಲ' ಶಬ್ದದಿಂದ ಸಾಧಿಸುತ್ತಾರೆ. **'ಕ್ವಚಿತ್ ಪ್ರವೃತ್ತಿಃ ಕ್ವಚಿದಪ್ರವೃತ್ತಿಃ ಕ್ವಚಿದ್ವಿಭಾಷಾ ಕ್ವಚಿದನ್ಯದೇವ'** ಎಂದು ಪ್ರಾಚೀನರ ವಚನವಿದೆ. ಕುತೂಹಲವುಳ್ಳವರು ಶಬ್ದಾನುಶಾಸನದ ಸೂ. ೩೪೫ ಮತ್ತು ೯೬೮ರ ಸಂಸ್ಕೃತ ವ್ಯಾಖ್ಯಾನವನ್ನೂ ಶ್ರೀ ಕುಂಡಲಗಿರ್ಯಾಚಾರ್ಯರ ಕನ್ನಡ ವ್ಯಾಖ್ಯಾನವನ್ನೂ (ಶಿ. ಶಿ. ಬಸವನಾಳರಿಂದ ಸಂಪಾದಿತ) ನೋಡಬಹುದು. ತಾತ್ಪರ್ಯವಿಷ್ಟು-

೧. ಯಾವುದೇ ಒಂದು ಪದವು ಪರವಾದಾಗಲೂ ಧಾತುಗಳಿಗೆ ಪಾಡುವ, ತೂಗುವ, ಕಂಡ, ಆದ ಮುಂತಾದ ಕೃದಂತರೂಪಗಳಾಗಬಹುದು. ಸಮಾಸ ವಾಗಬೇಕೆಂಬ ನಿಯಮವೇನೂ ಇಲ್ಲ.

೨. ಕರ್ಮಧಾರಯವು ವಿಕಲ್ಪವಾದ್ದರಿಂದ ಸಮಾಸ ಬರದಾಗ ಈ ಎರಡು ಶಬ್ದಗಳ ನಡುವೆ ಹೊರತಾದ ಇನ್ನೊಂದು ಶಬ್ದದ ಪ್ರವೇಶವಾಗಲು ಅಡ್ಡಿಯೇನೂ ಇಲ್ಲ.

೩. ಸಮಾಸ ಬರದೆ ಇದ್ದಾಗ ಮೇಲ್ಕಂಡ ಕೃದಂತಗಳು ಅವ್ಯಯಗಳಾಗುತ್ತವೆ. ಆದ್ದರಿಂದ ವ್ಯಸ್ತದಲ್ಲಿ ನಾಮಪ್ರತ್ಯಯದ ಶ್ರವಣವಿಲ್ಲ. ಈ ಅವ್ಯಯಸಂಜ್ಞೆ ವಿಕಲ್ಪವಾದ್ದರಿಂದ ಪಾಡುವನಿಂ, ಪಾಡುವಂಗೆ- ಮುಂತಾದ ರೂಪಗಳೂ ಆಗಬಹುದು.

ಹಾಗಾದರೆ ಪಾಡುವ ತುಂಬಿ ಮುಂತಾದ ಗಮಕಸಮಾಸೋದಾಹರಣೆಗಳಲ್ಲಿ (ಕೃದಂತಪೂರ್ವವಾದಾಗ) ಸಮಾಸವಾಗಿದೆಯೆಂದು ಹೇಳುವುದೇಕೆ, ಪಾಡುವ ಮೊದಲಾದವು ಅವ್ಯಯಗಳಾದ್ದರಿಂದ ನಾಮಪ್ರತ್ಯಯದ ಶ್ರವಣವಿಲ್ಲ- ಎಂಬ ಶಂಕೆ ಗಟ್ಟಿಯಾಗಿ ಉಳಿಯುತ್ತದೆ. ಇದಕ್ಕೆ ಸಮಾಧಾನವಿಷ್ಟೆ: ವಿಶೇಷಣವಿಶೇಷ್ಯಭಾವ ಇರುವುದರಿಂದ ಇಲ್ಲಿ ಕರ್ಮಧಾರಯಸಮಾಸ ಬರಲು ಅಡ್ಡಿಯೇನೂ ಇಲ್ಲ. ಎತ್ತುಂಗೋಲ್, ಚರ್ಚುಂಗೊಳ್ಳಿ ಮೊದಲಾದ ಕಡೆ ಕೃದಂತಗಳಿಗೆ ಸಮಾಸ ಬರುತ್ತಿರುವಾಗ 'ಪಾಡುವ ತುಂಬಿ' ಎಂಬಲ್ಲಿ ಸಮಾಸವನ್ನು ತಡೆಯುವುದು ಹೇಗೆ?

ವಿಕಲ್ಪವಾದ್ದರಿಂದ ಸಮಾಸ ಬಂದಿಲ್ಲ ಎಂಬುದು ಬೇರೆ ಮಾತು. ಸಮಾಸವಾದ್ದಕ್ಕೆ ನಿರ್ದಿಷ್ಟ ಪ್ರಯೋಜನವಿಲ್ಲವೆಂಬುದೇನೂ ದಿಟ. ಸಮಾಸವಾದರೂ ಆಗದಿದ್ದರೂ ರೂಪ ಒಂದೇ ಎನ್ನಲಡ್ಡಿಯಿಲ್ಲ. ನೀಲಾಭ್ರಶ್ರೇಣಿಃ ಎಂಬ ಶಬ್ದವನ್ನು ಪರೀಕ್ಷಿಸಬಹುದು. ನೀಲಾ+ಅಭ್ರಶ್ರೇಣಿಃ ಎಂದು ಪದಚ್ಛೇದ. ಇದು ಕರ್ಮಧಾರಯವಾಗಿ ಸಮಸ್ತ ವಾಗಿದೆಯೊ? ವ್ಯಸ್ತವೊ? ಎರಡೂ ಸಾಧ್ಯ.

ಏವಂಚ ಕೃದಂತಪೂರ್ವಕ ಗಮಕಸಮಾಸಕ್ಕೆ ಕೇಶಿರಾಜನು ಕೊಟ್ಟಿರುವ ಉದಾಹರಣೆ ಗಟ್ಟಿಯಾದ್ದಲ್ಲ. ಇಷ್ಟುಮಾತ್ರದಿಂದ ಉಳಿದ ಸಂಖ್ಯಾಗುಣವಚನಸರ್ವನಾಮ ಪೂರ್ವಕವಾದ ಉದಾಹರಣೆಗಳಲ್ಲಿಯೂ ಸಮಾಸವಾಗಿಲ್ಲ ಎಂಬುದು ಸಾಹಸದ ಮಾತು. ಒಟ್ಟಿನಲ್ಲಿ ನಿರ್ಗಳಿತವಾದ ಅರ್ಥ ಹೀಗೆ–

೧. ಗಮಕಸಮಾಸವು ಸಮಾಸವೇ ಹೌದು.

೨. ಇದು ಉಳಿದ ಸಮಾಸಗಳಲ್ಲಿ ಅಂತರ್ಗತವಾಗುತ್ತದೆ. ಪ್ರತ್ಯೇಕವಾಗಿ ಇದಕ್ಕೆ ಅಸ್ತಿತ್ವವಿಲ್ಲ.

೩. ಇದರಲ್ಲಿ ಅರಿಸಮಾಸದೋಷವಿಲ್ಲವೆಂಬುದೊಂದೇ ವೈಶಿಷ್ಟ್ಯ.

ಗಮಕಸಮಾಸವು ಪ್ರತ್ಯೇಕವಾದ ಸಮಾಸವಾಗದೆ ಇತರ ಸಮಾಸಗಳಲ್ಲಿ ಅಂತರ್ಗತವಾಗುವುದರಿಂದಲೇ ನಾಗವರ್ಮನಾಗಲಿ ಭಟ್ಟಾಕಳಂಕನಾಗಲಿ ಇದನ್ನು ಹೆಸರಿಸಿಲ್ಲ. ಕೇಶಿರಾಜನ ಗಮಕಸಮಾಸದ ಸೂತ್ರಕ್ಕೆ ಸಂವಾದಿಯಾದ ಭಟ್ಟಾಕಲಂಕನ ಸೂತ್ರವನ್ನು ನಾವು ಹಿಂದೆ ತೋರಿಸಿದ್ದೇವೆ. ಆ ಸೂತ್ರದಲ್ಲಿ 'ಸಂಸ್ಕೃತೇನ ಚ' ಎಂದು ಹೇಳಿ ಅರಿಸಮಾಸವಾಗುವುದೆಂದು ಭಟ್ಟಾಕಲಂಕನೂ ಒಪ್ಪಿಕೊಂಡಿದ್ದಾನೆ. 'ಗಮಕ ಸಮಾಸದಿಂ..... ಅರಿದಲ್ತೆ ಕನ್ನಡಂ' ಎನ್ನುವ ಕೇಶಿರಾಜನಿಗೆ ಈ ಒಂದು ವೈಶಿಷ್ಟ್ಯವು ಕಣ್ಣೆದುರಿಗಿರಬಹುದೇ ಹೊರತು ಬೇರೆ ಏನೂ ಇಲ್ಲವೆಂದೇ ಹೇಳಬೇಕಾಗಿದೆ. ಈತನ ಗಮಕಸಮಾಸದ ಲಕ್ಷಣವೇ ಅವ್ಯವಸ್ಥಿತ.

ಪ್ರಾಸಂಗಿಕವಾಗಿ ಡಾ। ಬಿಳಿಗಿರಿಯವರ ಕೆಲವು ಹೇಳಿಕೆಗಳನ್ನಿಲ್ಲಿ ಪರಿಶೀಲಿಸ ಬೇಕಾಗಿದೆ. ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಯಾವುದೋ ಅಭಿಪ್ರಾಯವನ್ನಿಟ್ಟುಕೊಂಡು ಮಾತುಗಳನ್ನವರು ಹಣೆಯುತ್ತಾರೆ. ನಮಗೆ ಅರ್ಥವಾಗುವುದಿಲ್ಲ. ವ್ಯಾಕರಣ ಶಾಸ್ತ್ರದಲ್ಲಿ ಮಾತಾಡುವಾಗ ವ್ಯಾಕರಣದ ಪರಿಭಾಷೆಯನ್ನು ಬಳಸಿದರೆ ಅರ್ಥ ವಾದೀತು. ಋಣಾತ್ಮಕವಾದ ಉಪಾಯ, ಧನಾತ್ಮಕವಾದ ತತ್ತ್ವ– ಇತ್ಯಾದಿ ಶಬ್ದ ಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ. "ಸೀತೆ ಗಾಜಿನ ಬಳೆ ಒಡೆದುಹಾಕಿದಳು' ಎಂಬ ವಾಕ್ಯದಲ್ಲಿ 'ಸೀತೆ ಗಾಜಿನ' ಎಂಬುದು ಈ ವಾಕ್ಯದ ಅಂಗವೇ ಅಲ್ಲ" ಎಂದು ಬರೆದಿದ್ದಾರೆ (ಪು. ೭೫). ವ್ಯಾಕರಣಶಾಸ್ತ್ರದ ಪ್ರಕಾರ ಎಲ್ಲ ಶಬ್ದಗಳೂ ಆಯಾ ವಾಕ್ಯದ ಅಂಗಗಳೇ. 'ಸೀತೆ ಗಾಜಿನ' ಎಂಬುದು 'ನಾನು ಮಲಗಿದೆ' ಎಂಬ ವಾಕ್ಯದ ಅಂಗವಾದೀತೇನು?

"ಪ್ರಕೃತಿಗಳ ಆನುಪೂರ್ವಿ ಕೇವಲ ಆನುಪೂರ್ವಿಯೋ ಅಥವಾ ಸಮಾಸವೋ ಎಂದು ತಿಳಿದುಕೊಳ್ಳಲು ವರ್ಣನಾತ್ಮಕ ಭಾಷಾವಿಜ್ಞಾನಿಗಳು ಕೆಲವು ಉಪಾಯ

ಗಳನ್ನು ಅಥವಾ ತತ್ತ್ವಗಳನ್ನು" ಬಳಸುತ್ತಾರಂತೆ (ಪು. ೭೫, ೭೬). ಈ ದೃಷ್ಟಿಯೇ ವ್ಯಾಕರಣಶಾಸ್ತ್ರಕ್ಕೆ ಸಂಮತವಲ್ಲ. ಭೂಮಿಯಲ್ಲಿ ಕಬ್ಬಿಣವೋ ತಾಮ್ರವೋ ಹುದುಗಿ ಕೊಂಡಿರುವಂತೆ ಸಮಾಸ ಎಂಬ ಒಂದು ವಸ್ತು ಭಾಷೆಯಲ್ಲಿ ಹುದುಗಿಕೊಂಡಿರು ವುದಿಲ್ಲ. ಸಮಾಸ ಎಂಬುದು ಒಂದಾನೊಂದು ಸಂಜ್ಞೆಯೆಂದು ಹಿಂದೆ ಹೇಳಿದ್ದಾಗಿದೆ. ವ್ಯಾಕರಣಶಾಸ್ತ್ರವು ಇದು ಸಮಾಸವೆಂದರೆ ಸಮಾಸ, ಅಲ್ಲವೆಂದರೆ ಅಲ್ಲ. ಈ ಸಂಜ್ಞೆ ಯನ್ನಿಟ್ಟದ್ದಕ್ಕೆ ಪ್ರಯೋಜನವೇನೆಂದು ಮಾತ್ರ ಯಾರು ಬೇಕಾದರೂ ಪರೀಕ್ಷಿಸ ಬಹುದು.

'ದೇವದತ್ತಸ್ಯ ಗುರುಕುಲಂ' ಮುಂತಾದ ಕಡೆ ಏಕದೇಶಾನ್ವಯವಿದ್ದರೂ ಸಮಾಸ ಬಂದಿರುತ್ತದೆ. ಇಂತಹ ಕಡೆ ಮಹಾಕವಿಪ್ರಯೋಗದಿಂದ ಸಾಧುವೆಂದು ಮನ್ನಿಸಿಬಿಡು ತ್ತಾರೆಂದೂ ಈ ಮನ್ನಿಸುವಿಕೆಯಿಂದ ಇಂಥ ಸಮಾಸಗಳಿಗೆ ಸಾಧುತ್ವ ಬಂದೊದಗು ವುದಿಲ್ಲವೆಂದೂ ಹೇಳಿದ್ದಾರೆ (ಪು. ೭೭). ಇದು ಭ್ರಮೆಯಿಂದಾದ ಹೇಳಿಕೆ. 'ಸಾಪೇಕ್ಷತ್ವೇಽಪಿ ಗಮಕತ್ವಾತ್ ಸಮಾಸಃ' ಎಂದು ವೈಯಾಕರಣರು ಹೇಳುವುದುಂಟು. ಇಂತಹ ಸ್ಥಳದಲ್ಲಿ ಸಮಾಸ ಬರುತ್ತದೆಯೆಂದು ಅವರೇ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಇದು ಸಾಧುವೇ. ಮಹಾಕವಿಪ್ರಯೋಗದಿಂದ ಇದಕ್ಕೆ ಸಾಧುತ್ವವನ್ನು ಹೇಳಿಲ್ಲ. ವೈಯಾಕರಣರೇ ಇಂತಹ ಸಂದರ್ಭಗಳಲ್ಲಿಯೂ ಸಮಾಸ ಬರುತ್ತದೆಯೆಂದು ಘೋಷಿಸುತ್ತಿರುವಾಗ ಸಮಾಸ ಬರುವುದಿಲ್ಲವೆಂದು ಹೇಳುವುದಕ್ಕೆ ನಾವು ಯಾರು? ಇಂತಹ ಪ್ರಯೋಗ ಎಲ್ಲ ಭಾಷೆಗಳಲ್ಲೂ ಉಂಟು. ಏಕದೇಶಾನ್ವಯವಿರುವ ಸಮಾಸ ಕನ್ನಡದಲ್ಲಿಲ್ಲ ಎಂದಿರುವುದೂ ಸರಿಯಲ್ಲ. ಈ ಉದಾಹರಣೆಗಳನ್ನು ನೋಡಿ: ಅರಸಿನ ಮನೆ = ಅರಮನೆ. 'ಇದು ಪುಲಿಕೇಶಿಯ ಅರಮನೆ'– ಪುಲಿಕೇಶಿಯೆಂಬ ಅರಸಿನ ಮನೆಯೆಂದರ್ಥ. ಇಲ್ಲಿ ಏಕದೇಶಾನ್ವಯ ಇಲ್ಲವೆ? ಇದು ಅಸಾಧುಪ್ರಯೋಗವೆಂದು ಡಾ। ಬಿಳಿಗಿರಿಯವರು ಹೇಳುತ್ತಾರೇನು? ತಲೆನೋವು, ಕಾಲುಬಳೆ– ಇವು ಸಮಾಸ ಗಳೆಂದು ಲೇಖಕರೇ ಒಪ್ಪಿಕೊಂಡಿದ್ದಾರೆ. ನನ್ನ ತಲೆನೋವು ವಾಸಿಯಾಯಿತು. ಇದು ಆ ಹುಡುಗಿಯ ಕಾಲುಬಳೆ– ಇಲ್ಲಿ ಏಕದೇಶಾನ್ವಯವಿಲ್ಲವೆ? 'ಅವನಿಗೆ ಹರ್ಷ ದಾಯಕವಾದ, ಇವಳಿಗೆ ದುಃಖಜನಕವಾದ' ಎಂಬ ಪ್ರಯೋಗಗಳಲ್ಲಿಯೂ ಏಕದೇಶಾನ್ವಯ ಇದ್ದೇ ಇದೆ. ಇವೆಲ್ಲ ಅಸಾಧುಪ್ರಯೋಗಗಳೇನು?

"ಹಣೆಗಣ್ಣ ಎಂಬುದು ಸಮಾಸವಲ್ಲ. ಹಣೆಗಣ್ಣು ಎಂಬ ಸಮಾಸಕ್ಕೆ ಅ ಪ್ರತ್ಯಯ ಹತ್ತಿ ಆಗಿರುವ ತದ್ಧಿತರೂಪ" ಎಂದಿದ್ದಾರೆ (ಪು. ೭೮). ನಿಜ. ಹಾಗೆ ರೂಪಸಿದ್ಧಿ ಯನ್ನು ಹೇಳಲೂ ಸಾಧ್ಯ. ಆದರೆ ಅಪಕ್ಷದಲ್ಲಿ ಸಮಾಸ ಮತ್ತು ತದ್ಧಿತವೆಂದು ಎರಡು ವೃತ್ತಿಗಳನ್ನು ಆಶ್ರಯಿಸಬೇಕಾಗುತ್ತದೆ. ವೈಯಾಕರಣರಾದರೋ ಬಹುವ್ರೀಹಿ ಸಮಾಸ ವೆಂಬ ಒಂದೇ ವೃತ್ತಿಯಿಂದ ಈ ಬಗೆಯ ರೂಪಗಳನ್ನು ಸಾಧಿಸುತ್ತಾರೆ. ಈ ಪಕ್ಷದಲ್ಲಿ ಲಾಘವ ಉಂಟು. ನಿಡಿಮೂಗ, ಮುಕ್ಕಣ್ಣ, ನಿಡು ದಲೆಯ, ಬಟ್ಟದೊಡೆಯಳ್– ಮೊದಲಾದ ಬಹುವ್ರೀಹಿಗಳಲ್ಲಿ ಸಮಾಸಾಂತವಾಗಿ 'ಅ' ಪ್ರತ್ಯಯ ಕಂಡುಬರುತ್ತದೆ. ಇದು ಮತ್ವರ್ಥೀಯ 'ಅ' ಎಂಬ ತದ್ಧಿತವಾದರೆ, ಸಮಾಸದ ಮೇಲೆ ಮಾತ್ರ ಇಂತಹ ತದ್ಧಿತ ಬರುತ್ತದೆಯೆಂದು ನಿಯಮ ಮಾಡ

ಬೇಕಾದೀತು. ಇಲ್ಲದಿದ್ದರೆ ತಲೆಯುಳ್ಳವನು ತಲೆಯ, ಕಣ್ಣುಳ್ಳವನು ಕಣ್ಣ- ಎಂಬ ರೂಪಗಳನ್ನು ಒಪ್ಪಬೇಕಾಗುತ್ತದೆ. ವಸ್ತುತಃ ಅಂತಹ 'ಅ' ಎಂಬ ಮತ್ವರ್ಥೀಯ ಪ್ರತ್ಯಯ ಕನ್ನಡದಲ್ಲಿಲ್ಲ. ಕೇಶಿರಾಜನಾಗಲಿ ಭಟ್ಟಾಕಳಂಕನಾಗಲಿ ಅದನ್ನು ಹೇಳಿಯೇ ಇಲ್ಲ. ಕಿವುಡ, ಕುರುಡ, ಕುಳ್ಳ ಮೊದಲಾದವು ಸ್ವತಃಸಿದ್ಧ ಶಬ್ದಗಳು. ಈ ಶಬ್ದಗಳ ಮೇಲೆ ಭಾವಾರ್ಥದಲ್ಲಿ 'ಉ' ಪ್ರತ್ಯಯ ಬಂದು ಕಿವುಡು, ಕುರುಡು, ಕುಳ್ಳು -ಮೊದಲಾದವು ಸಿದ್ಧವಾಗಿವೆ. ಕಿವುಡ ಶಬ್ದದಿಂದ ಕಿವುಡು ಹುಟ್ಟಿದೆ. ಹಾಗೆಯೇ ಕುರುಡ, ಕುಳ್ಳ ಮೊದಲಾದವು.

ಗಮಕಸಮಾಸವನ್ನೊಪ್ಪದಿದ್ದರೆ 'ಪಾಡುವ, ಆಡಿದ, ಬಿಳಿಯ, ನಿಡಿಯ, ಆ, ಈ, ಆವ' ಮುಂತಾದ ಶಬ್ದಗಳಿಗೆ ಪದತ್ವಸಿದ್ಧಿ ಹೇಗೆ? ಎಂಬ ಪ್ರಶ್ನೆ ಡಾ। ಬಿಳಿಗಿರಿಯವರನ್ನು ಕಾಡಿಸುತ್ತದೆ. ಆದರೆ 'ಬಿಳಿಯ, ನಿಡಿಯ, ಆ, ಈ, ಆವ' ಎಂಬ ರೂಪಗಳ ಸಿದ್ಧಿ ಹೇಗೆ- ಎಂಬ ಪ್ರಶ್ನೆ ಅವರನ್ನು ಕಾಡಿಸುವುದೇ ಇಲ್ಲ! ಇವುಗಳಿಗೆ ಪದತ್ವವಿಲ್ಲದೆ ಹೋದರೆ ಭಾಷಾಶಾಸ್ತ್ರದವರಿಗೆ ಬರುವ ವಿಪತ್ತು ಏನು ಎಂದು ನಮ್ಮ ಪ್ರಶ್ನೆ! ತಮ್ಮ ಪ್ರಶ್ನೆಗೆ ಉತ್ತರವಾಗಿ 'ಮಾಡುತೆ, ಮಾಡಿ, ಮಾಡಿದೊಡೆ, ಮಾಡಲ್' ಮುಂತಾದ 'ಅಪೂರ್ಣ' ರೂಪಗಳಿಗೆ ಹೇಗೆ ಪದತ್ವ ಸಿದ್ಧಿಸುತ್ತದೆಯೋ ಹಾಗೆಯೇ" ಎಂದು ಹೇಳಿದ್ದಾರೆ (ಪು. ೯೦).

ವ್ಯಾಕರಣಶಾಸ್ತ್ರವು ಇಷ್ಟು ಹಗುರವಾಗಿದ್ದರೆ ಆನಂದವರ್ಧನನು ವೈಯಾಕರಣ ರನ್ನು 'ಪ್ರಥಮೇ ವಿದ್ವಾಂಸಃ' ಎಂದು ಹೊಗಳುತ್ತಿರಲಿಲ್ಲ. 'ವಿಭಕ್ತಿಪ್ರತ್ಯಯಾಂತ ವಾದದ್ದು ಪದ. ಪದವನ್ನು ಮಾತ್ರ ಪ್ರಯೋಗಿಸಬೇಕು. ಕೇವಲ ಪ್ರಕೃತಿಯನ್ನಾಗಲಿ ಕೇವಲ ಪ್ರತ್ಯಯವನ್ನಾಗಲಿ ಪ್ರಯೋಗಿಸಬಾರದು' ಎಂದು ವ್ಯಾಕರಣಶಾಸ್ತ್ರದ ಸಿದ್ಧಾಂತ. ಈ ಸಿದ್ಧಾಂತದ ಬುಡಕ್ಕೇ ಕೊಡಲಿಯನ್ನು ಹಾಕುತ್ತಿದ್ದಾರೇನು? ಇದಕ್ಕೆ ಉತ್ತರ ಹೇಳುವುದು ಬಹಳ ವಿಸ್ತಾರವಾದೀತು. ಅತಿ ಸಂಕ್ಷೇಪವಾಗಿ ನಾಲ್ಕು ಮಾತುಗಳನ್ನಿಲ್ಲಿ ಬರೆಯಬಹುದು.

ಅವ್ಯಯಗಳು ಲಿಂಗ(ಪ್ರಾತಿಪದಿಕ)ಗಳಾದ್ದರಿಂದ ಅವುಗಳ ಮೇಲೆ ವಿಭಕ್ತಿ ಪ್ರತ್ಯಯವೇಕೆ ಹುಟ್ಟುವುದಿಲ್ಲವೆಂಬುದಕ್ಕೆ ಭಾಷಾಶಾಸ್ತ್ರದವರು ಸರಿಯಾದ ಕಾರಣ ವನ್ನು ಹೇಳಬೇಕು. ಅಲ್ಲಂ, ಇಲ್ಲಂ, ಬಟೆಕೆ, ಬಟೆಯಂ, ವಲಂ -ಮುಂತಾದ ಅವ್ಯಯಗಳ ಮೇಲೆ ಪ್ರತ್ಯಯ ಹುಟ್ಟಿರುವುದನ್ನು ಕಾಣಬಹುದು. ಆದ್ದರಿಂದ ಪ್ರತ್ಯಯ ಹುಟ್ಟುತ್ತದೆಯೆಂದೂ ಬಹಳ ಸ್ಥಳಗಳಲ್ಲಿ ಲೋಪವಾಗುತ್ತದೆಯೆಂದೂ ಹೇಳುವುದು ಶಾಸ್ತ್ರೀಯವಾದ ಉತ್ತರ.

ಸಮಾಸವು ಪದಗಳಿಗೆ ಬರುತ್ತದೆಯೇ ಹೊರತು ಪ್ರಕೃತಿಗಳಿಗಲ್ಲ. ಇದನ್ನೊಪ್ಪಲೇಬೇಕಾಗುತ್ತದೆ. ಇಲ್ಲದಿದ್ದರೆ, ಮಳೆಗಾಲ ಎಂಬಲ್ಲಿ ಮಳೆ ಶಬ್ದದಲ್ಲಿ ಸಂಬಂಧಾರ್ಥವೂ 'ಸತ್ಯ ಹೇಳು' ಎಂಬ ಕ್ರಿಯಾಸಮಾಸದ 'ಸತ್ಯ' ಶಬ್ದದಲ್ಲಿ ಕರ್ಮಾರ್ಥವೂ 'ಹಣೆಗಣ್ಣು' ಎಂಬಲ್ಲಿ 'ಹಣೆ' ಶಬ್ದದಲ್ಲಿ ಅಧಿಕರಣಾರ್ಥವೂ ಯಾವುದರಿಂದ ತೋರುತ್ತದೆ ಎಂಬ ಪ್ರಶ್ನೆಗೆ ಉತ್ತರವಿಲ್ಲದೆ ಹೋಗುತ್ತದೆ. ಆದ್ದರಿಂದ ತಲೆಯ ಮುಂದು 'ಮುಂದಲೆ', ಮೆಯ್ಯ ಹೊರಗು ಹೊರಮೆಯ್' ಎಂಬ ಅಂಶಿ

ಸಮಾಸಗಳಲ್ಲಿ ಮುಂದು, ಹೊರಗು –ಮೊದಲಾದವು ಪದಗಳೆಂಬುದು ನಿಶ್ಚಿತ. ಇವುಗಳಿಗೆ ಪದತ್ವಸಿದ್ಧಿ ಹೇಗೆ? 'ಅವ್ಯಯಗಳಿಗೆ ಪದಸಂಜ್ಞೆ ಬರುತ್ತದೆ' ಎಂದು ಸೂತ್ರಾಂತರವನ್ನು ರಚಿಸುವುದು ಭಾಷಾಶಾಸ್ತ್ರದವರ ಪ್ರಕಾರ ಅವಶ್ಯಕವೇ ಆಗುತ್ತದೆ. ಮತ್ತು ಅವ್ಯಯಗಳಿಗೆ ಪ್ರತ್ಯಯಗಳು ಹತ್ತುವುದಿಲ್ಲ ಎಂಬ ಸೂತ್ರವನ್ನೂ ರಚಿಸ ಬೇಕಾಗುತ್ತದೆ. ಮೇಲ್ಕಂಡ ಸ್ಥಳಗಳಲ್ಲಿ ಪ್ರತ್ಯಯವಿರುವುದರಿಂದ ಕೆಲವು ಅವ್ಯಯಗಳಿಗೆ ಪ್ರತ್ಯಯ ಹತ್ತುತ್ತದೆಯೆಂದೂ ಹೇಳಬೇಕಾಗುತ್ತದೆ! ಈ ತಲೆನೋವಿನ ಪ್ರಯಾಸಕ್ಕಿಂತ ಸಿದ್ಧವಾಗಿರುವ ಪ್ರತ್ಯಯಗಳು ಕೆಲವೆಡೆ ಲೋಪಹೊಂದುತ್ತವೆಯೆನ್ನುವುದು ಸರಳ ವಾದ ಮತ್ತು ವೈಜ್ಞಾನಿಕವಾದ ಮಾರ್ಗ.

ಕನ್ನಡದವರು ಸಂಸ್ಕೃತ ವ್ಯಾಕರಣದ ಮೂಲತತ್ತ್ವಗಳನ್ನು ಅನುಸರಿಸಿದ್ದಾರೆಂಬು ದನ್ನು ಗಮನದಲ್ಲಿಟ್ಟಿರಬೇಕು. ಭಾಷಾಶಾಸ್ತ್ರದವರ ಆಕ್ಷೇಪಗಳಿಗೆ ಸಂಸ್ಕೃತ ವ್ಯಾಕರಣ ದಲ್ಲಿ ಹಲವಾರು ಉತ್ತರಗಳುಂಟು. ವಿಸ್ತಾರಭೀತಿಯಿಂದ ಇಲ್ಲಿ ಪ್ರಸ್ತಾವಿಸಿಲ್ಲ. ವ್ಯಾಕರಣಶಾಸ್ತ್ರವು ಒಂದು ಮಹಾಯಂತ್ರ. ಸೂಕ್ಷ್ಮಾತಿಸೂಕ್ಷ್ಮಗಳಾದ ನಿಯಮಗಳಿಂದ ರಚಿತವಾಗಿರುವ ಈ ಶಾಸ್ತ್ರದಲ್ಲಿ ಮನಬಂದಂತೆ ಕೈಯಾಡಿಸಿದರೆ 'ಷಾಕ್' ಹೊಡೆಯು ವುದು ನಿಶ್ಚಿತ. ಸಂಸ್ಕೃತದಲ್ಲಿ ಸಮಾಸವೆನ್ನುವುದಕ್ಕೆ ಇನ್ನೂ ಒಂದು ಪ್ರಯೋಜನ ಉಂಟು. ಉದಾತ್ತ, ಅನುದಾತ್ತ, ಸ್ವರಿತ –ಈ ಸ್ವರಗಳು ಸಮಾಸಸ್ವರಗಳಾಗಿ ಬರುತ್ತವೆ. ತತ್ಪುರುಷ, ಬಹುವ್ರೀಹಿ –ಮೊದಲಾದವುಗಳಿಗೆ ವಿಭಿನ್ನಸ್ವರಗಳು ಬರುತ್ತವೆ. 'ಸ್ತೋಕಾನ್ಮುಕ್ತಃ' ಎಂಬ ಶಬ್ದದಲ್ಲಿ ಪಂಚಮೀವಿಭಕ್ತಿ ಇದೆ. ಇದು ಸಮಾಸ ವಲ್ಲವೆಂದು ಭಾಷಾಶಾಸ್ತ್ರಿಗಳು ಸುಲಭವಾಗಿ ಹೇಳಿಬಿಡಬಹುದು. ಇದು 'ಅಲುಕ್ ಸಮಾಸ' ಎಂದು ವ್ಯಾಕರಣಶಾಸ್ತ್ರ ಹೇಳುತ್ತದೆ. ಈ ಅಲುಕ್ ಸಮಾಸದಲ್ಲಿ ಸ್ವರವೇ ಮುಖ್ಯ ಪ್ರಯೋಜನ. ಇದರ ಮೇಲೆ ತದ್ಧಿತ ಬಂದರೆ 'ಸ್ತೌಕಾನ್ಮುಕ್ತಿಃ' ಇತ್ಯಾದಿ ರೂಪಸಿದ್ಧಿಗಳೂ ಸಮಾಸದಿಂದಲೇ ಆಗತಕ್ಕವು. ಭಾಷಾಶಾಸ್ತ್ರದವರ 'ಋಣತತ್ತ್ವ', 'ಧನತತ್ತ್ವ'ಗಳ ಆಟವೇನೂ ಇಲ್ಲಿ ಸಾಗದು.*

* * *

ಪರಿಶಿಷ್ಟ

ಗಮಕಸಮಾಸಕ್ಕೆ ಸಂಬಂಧಿಸಿದ ಮೇಲ್ಕಂಡ ಲೇಖನವು ಕೆಲವು ವರ್ಷಗಳ ಹಿಂದೆ 'ಲೋಚನ' ಎಂಬ ವಿದ್ವತ್ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅದಕ್ಕೆ ಪರಿಶಿಷ್ಟವಾಗಿ ಈಗ ಎರಡು ವಿಷಯಗಳನ್ನು ಸೇರಿಸುತ್ತಿದ್ದೇನೆ. ಯಾವುದೆಂದರೆ–

೧. ಸಂಖ್ಯಾಪೂರ್ವಕವಾದ ಗಮಕಸಮಾಸದ ವಿಗ್ರಹವಾಕ್ಯ.

೨. ಗಮಕಸಮಾಸವೆಂದು ಹೆಸರಿಟ್ಟಿರುವ ಕೇಶಿರಾಜನ ಅಭಿಪ್ರಾಯ.

---

* 'ಲೋಚನ' ಪತ್ರಿಕೆಯ ಸಂ. ೩ ಸಂಚಿಕೆ ೧೭ರಲ್ಲಿ (ಜೂನ್ ೧೯೮೫) ಪ್ರಕಟಗೊಂಡ ಲೇಖನ. ಪರಿಶಿಷ್ಟವು ೨೦೦೨ರಲ್ಲಿ ಸೇರಿಸಲಾದುದು.

ವಿಗ್ರಹವಾಕ್ಯವೆಂದರೇನು? ಸಮಾಸದ ಅರ್ಥವನ್ನು ವಿಗ್ರಹಿಸಿ (ವಿಂಗಡಿಸಿ) ಹೇಳುವ ವಾಕ್ಯ. ಗಮಕಸಮಾಸಕ್ಕೆ ಕೇಶಿರಾಜನು ಕೊಟ್ಟಿರುವ ಉದಾಹರಣೆಗಳು ಇವು- ಇರ್ಪತ್ತೈದು, ನೂರಪತ್ತು, ಮೂವತ್ತಾರು. ಇವುಗಳಿಗೆ ಇರ್ಪತ್ತರ ಐದು, ನೂರರ ಪತ್ತು, ಮೂವತ್ತರ ಆರು -ಎಂದು ಕ್ರಮವಾಗಿ ವಿಗ್ರಹಗಳನ್ನು ಪಂಡಿತರು ತಮ್ಮ ಬೇರೆಬೇರೆ ಗ್ರಂಥಗಳಲ್ಲಿ ಬರೆದಿರುವುದುಂಟು. ಈ ಬಗೆಯ ವಿಗ್ರಹವಾಕ್ಯವು ಸಮಾಸದ ಅರ್ಥವನ್ನು ಬೋಧಿಸುತ್ತದೆಯೆ? ಇಪ್ಪತ್ತರ ಐದು ಎಂದರೆ ಇಪ್ಪತ್ತರ ಅಂಶವಾದ ಐದು (೫/೨೦) ಎಂದೂ ನೂರರ ಪತ್ತು ಎಂದರೆ ನೂರರ ಹತ್ತು ಅಂಶವೆಂದೂ (೧೦/೧೦೦) ಮೂವತ್ತಾರು ಎಂದರೆ ಮೂವತ್ತರಲ್ಲಿ ಆರು ಭಾಗ ವೆಂದೂ (೬/೩೦) ಅರ್ಥವಾಗುತ್ತದೆ. ಇಪ್ಪತ್ತಕ್ಕೆ ಅಧಿಕವಾದ ಐದು (೨೫), ನೂರಕ್ಕೆ ಅಧಿಕವಾದ ಹತ್ತು (೧೧೦), ಮೂವತ್ತಕ್ಕೆ ಅಧಿಕವಾದ ಆರು (೩೬) ಎಂದೂ ಕ್ರಮವಾಗಿ ಅರ್ಥಗಳು ವಿವಕ್ಷಿತವಾಗಿವೆ.

ಸಂಸ್ಕೃತದಲ್ಲಿಯೂ ಪಂಚವಿಂಶತಿಃ, ಷಟ್‌ತ್ರಿಂಶತ್ ಮೊದಲಾದವು ಈ ಬಗೆಯ ಸಮಾಸಗಳು. ಸಂಸ್ಕೃತದಲ್ಲಿ ಪಂಚಾಧಿಕವಿಂಶತಿಃ = ಪಂಚವಿಂಶತಿಃ, ಷಡಧಿಕತ್ರಿಂಶತ್ = ಷಟ್‌ತ್ರಿಂಶತ್ ಎಂದೇ ವಿಗ್ರಹಿಸುತ್ತಾರೆ. "ಶಾಕಪಾರ್ಥಿವಾದೀನಾಂ ಸಿದ್ಧಯೇ ಉತ್ತರಪದಲೋಪಸ್ಯ ಉಪಸಂಖ್ಯಾನಂ" ಎಂಬ ವಾರ್ತಿಕದಿಂದ ಅಧಿಕಶಬ್ದಕ್ಕೆ ಲೋಪ ಬರುತ್ತದೆ. "ಶಾಕಪ್ರಿಯಃ ಪಾರ್ಥಿವಃ = ಶಾಕಪಾರ್ಥಿವಃ" ಎಂಬುದೂ ಉದಾಹರಣೆ. ಇಲ್ಲಿ ಪ್ರಿಯಶಬ್ದಕ್ಕೆ ಲೋಪ ಬಂದಿದೆ.

ಹಾಗೆಯೇ ಕನ್ನಡದಲ್ಲಿಯೂ ಇಪ್ಪತ್ತರ ಮೇಲಿರುವ ಐದು- ಇಪ್ಪತ್ತು ಅಧಿಕವಾದ ಐದು, ನೂರರ ಮೇಲಿರುವ ಹತ್ತು- ನೂರು ಅಧಿಕವಾದ ಹತ್ತು, ಮೂವತ್ತರ ಮೇಲಿರುವ ಆರು- ಮೂವತ್ತು ಅಧಿಕವಾದ ಆರು ಎಂದು ವಿಗ್ರಹವಾಕ್ಯಗಳನ್ನು ಹೇಳುವುದೇ ಯುಕ್ತವಾದದ್ದು. ಕನ್ನಡದಲ್ಲಿಯೂ ಉತ್ತರಪದವು -ಎಂದರೆ- ಪ್ರಕೃತದಲ್ಲಿ ಮಧ್ಯಮಪದವು ಲುಪ್ತವಾಗಿದೆ ಎನ್ನುವುದೇ ಉಚಿತ.

ಸಾವಿರದ ನೂರು, ಸಾವಿರದ ಐನೂರು -ಎಂಬಲ್ಲಿ ಸಮಾಸವಾಗಿಲ್ಲ. ಈ ಕರ್ಮಧಾರಯ -ಮುಂತಾದ ಸಮಾಸಗಳಾವುವೂ ನಿತ್ಯಸಮಾಸಗಳಲ್ಲ. ಸಮಾಸ ವಾಗದೆಯೂ ಇರಬಹುದು. ಸಾವಿರದ ಮೇಲೆ ನೂರು, ಸಾವಿರದ ಮೇಲೆ ಐನೂರು ಎಂದು 'ಮೇಲೆ' ಶಬ್ದವನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಹೇಳುವ ಸೌಕರ್ಯಕ್ಕಾಗಿ 'ಮೇಲೆ' ಶಬ್ದವು ಬಿಟ್ಟುಹೋಗಿದೆಯೆಂದು ಊಹಿಸಬಹುದು. ರೈತರು ಬತ್ತವನ್ನು ಅಳೆಯುವಾಗ 'ಇಪ್ಪತ್ತರ ಒಂದು, ಇಪ್ಪತ್ತರ ಎರಡು' ಎಂದು ಹೇಳುತ್ತಾರೆ. ಅಲ್ಲಿಯೂ 'ಇಪ್ಪತ್ತರ ಮೇಲೆ ಒಂದು' ಎಂದೇ ಹೇಳಬೇಕಾದರೂ ಸೌಕರ್ಯಕ್ಕಾಗಿ 'ಮೇಲೆ' ಶಬ್ದವನ್ನು ಬಿಟ್ಟುಬಿಡುತ್ತಾರೆಂದು ಹೇಳುವುದು ಯುಕ್ತವಾಗಿದೆ.

ಕೇಶಿರಾಜನು 'ಇಪ್ಪತ್ತು ಅಧಿಕವಾದ ಐದು' ಎಂದು ವಿಗ್ರಹಿಸಿದಾಗ ಸಮಾನಾಧಿಕರಣವಿಶೇಷಣವಿಶೇಷ್ಯಗಳಿರುವುದರಿಂದ 'ಕರ್ಮಧಾರಯಮದುವುಂ' ಎಂದಿದ್ದಾನೆ. ಇಪ್ಪತ್ತರ ಐದು ಎಂದು ವಿಗ್ರಹಿಸಿದರೆ ಕರ್ಮಧಾರಯ ಹೇಗಾಗುತ್ತದೆ?

'ಎಂತಾನುಂ ತತ್ಪುರುಷಮಪ್ಪುದು' ಎಂದು ವೃತ್ತಿಯಲ್ಲಿ ಬರೆದಿರುವುದೂ ಸರಿಯಾದದ್ದೇ. ಕರ್ಮಧಾರಯವು ತತ್ಪುರುಷದ ಒಂದು ಒಳಭೇದ. ಕರ್ಮಧಾರಯವೆಲ್ಲವೂ ತತ್ಪುರುಷಸಮಾಸದಲ್ಲಿಯೇ ಸೇರುತ್ತದೆ. ಆದರೆ ತತ್ಪುರುಷವೆಲ್ಲವೂ ಕರ್ಮಧಾರಯದಲ್ಲಿ ಸೇರುವುದಿಲ್ಲ. "ತತ್ಪುರುಷಃ ಸಮಾನಾಧಿಕರಣ ಕರ್ಮಧಾರಯಃ" ಎಂದು ಪಾಣಿನಿಸೂತ್ರ (೧-೨-೪೨). ಇಪ್ಪತ್ತರ ಐದು, ನೂರರ ಹತ್ತು ಎಂದು ವಿಗ್ರಹಿಸಿದರೆ ಸಮಾಸದ ಅರ್ಥವು ತೋರುವುದಿಲ್ಲವಾದ್ದರಿಂದ ಆ ವಿಗ್ರಹವು ತಪ್ಪು ಎನ್ನಲಡ್ಡಿಯಿಲ್ಲ. ಅಲ್ಲದೆ ಆ ವಿಗ್ರಹವು 'ಕರ್ಮಧಾರಯಮದುವುಂ' ಎಂಬ ಕೇಶಿರಾಜನ ಸ್ಪಷ್ಟವಾದ ಹೇಳಿಕೆಗೆ ವಿರುದ್ಧವೂ ಆಗಿದೆ. ಸಂಸ್ಕೃತದಲ್ಲಿ ಇದು ದ್ವಂದ್ವಸಮಾಸವೆಂಬ ಪಕ್ಷವೂ ಉಂಟು. 'ಪಂಚ ಚ ವಿಂಶತಿಶ್ಚ = ಪಂಚವಿಂಶತಿಃ, ದ್ವಾ ಚ ವಿಂಶತಿಶ್ಚ = ದ್ವಾವಿಂಶತಿಃ, ಷಟ್ ಚ ತ್ರಿಂಶಚ್ಚ = ಷಟ್‌ತ್ರಿಂಶತ್' ಈ ಶಬ್ದಗಳು ನಿತ್ಯೈಕವಚನಗಳು. ಕನ್ನಡದಲ್ಲಿಯೂ ಇಪ್ಪತ್ತೈದು -ಮುಂತಾದ್ದರಲ್ಲಿ ದ್ವಂದ್ವಸಮಾಸವನ್ನು ಹೇಳಬಹುದು.

ಇನ್ನು ಗಮಕಸಮಾಸವೆಂದು ಹೆಸರಿಡಲು ಕಾರಣವೇನು? ಗಮಕಶಬ್ದಕ್ಕೆ ಸೂಚಕ, ಬೋಧಕ ಎಂದರ್ಥ. ಗಮ್‌ಧಾತುವಿನ ಅರ್ಥ ಗತಿ. **'ಯೇ ಗತ್ಯರ್ಥಕಾಃ ತೇ ಜ್ಞಾನಾರ್ಥಕಾಃ'** ಎಂದು ಶಾಸ್ತ್ರವಚನ. ಗತ್ಯರ್ಥಕಗಳೆಲ್ಲವೂ ಜ್ಞಾನಾರ್ಥಕಗಳಾಗುತ್ತವೆ. ಆದ್ದರಿಂದ ಗಮಕಶಬ್ದಕ್ಕೆ ಸೂಚಕ, ಬೋಧಕ ಎಂದು ಅರ್ಥವನ್ನೂ ಹೇಳಬಹುದು. ಮೇಲ್ಕಂಡ ಸಂಖ್ಯಾಪೂರ್ವಕ ಸಮಾಸಗಳಲ್ಲಿ "ಅಧಿಕ, ಮೇಲಿರುವ" ಎಂಬ ಶಬ್ದಗಳಿಲ್ಲದಿದ್ದರೂ ಆ ಅರ್ಥಗಳು ಸರ್ವರಿಗೂ ಹೊಳೆಯುತ್ತದೆ. ಇಪ್ಪತ್ತೈದು ಎಂದರೆ ಇಪ್ಪತ್ತರ ಮೇಲೆ ಐದು ಎಂದೂ, ನೂರಹತ್ತು ಎಂದರೆ ನೂರಕ್ಕಿಂತ ಅಧಿಕವಾಗಿರುವ ಹತ್ತು ಎಂದೂ ಅರ್ಥವಿಶೇಷವು ಸುಲಭವಾಗಿ ಎಲ್ಲರಿಗೂ ತೋರುತ್ತದೆ. ಆ ಅರ್ಥವು ಸಮಾಸದಿಂದ ಗಮ್ಯವಾಗಿದೆ. ಸುಲಭವಾಗಿ ಅರ್ಥವಿಶೇಷವು ಗಮ್ಯವಾಗುವುದರಿಂದ ಸಮಾಸವು ಗಮಕವಾಯಿತು ಎಂದು ಹೇಳುವುದು ಅನುಚಿತವಾಗಲಾರದು.

ಇನ್ನು ಇತರ ಗಮಕಸಮಾಸಗಳಲ್ಲಿ ಹೇಗೆಂಬುದನ್ನು ನೋಡೋಣ.

ಸರ್ವನಾಮಕ್ಕೆ-

ಆವ ಮಾತು, ಆವ ಕಾರ್ಯಂ, ಆವ ನಾಯಕಂ, ಆವ ಕಾಂತೆ.

ಗುಣವಚನಕ್ಕೆ-

ಮಿಸುಪರದಂ, ಬಿಳಿಯ ಕರ್ಬು, ಕಿರಿಯ ಮಗಂ.

ಕೃತ್ತಿಗೆ-

ಪಾಡುವ ತುಂಬಿ, ಆಡುವ ರಾಜಹಂಸಿ, ಕೂಡುವ ನಲ್ಲರ್.

ಅರಿಸಮಾಸದಲ್ಲಿ ದೋಷವೂ ಇಲ್ಲ.

ಬೀಸುವ ಚಾಮರಂ, ಹೊಡೆವ ಭೇರಿ, ಪೂರೈಸುವ ಶಂಖಂ.

ಅದು, ಇದು, ಉದುಗಳಿಗೆ ಸಮಾಸದಲ್ಲಿ ಆ, ಈ, ಊ ಎಂಬ ಆದೇಶಗಳು ಕ್ರಮವಾಗಿ ಬರುತ್ತವೆ. ಉದಾ:

ಅದು ಮನೆ=ಆ ಮನೆ, ಈ ಮರ, ಊ ಬನ.

–ಇತ್ಯಾದಿ.

ಇವಿಷ್ಟು ಗಮಕಸಮಾಸದ ಭೇದಗಳು. ಈ ಎಲ್ಲ ಸಮಾಸಗಳಿಗೂ ವಿಗ್ರಹದ ಮೂಲಕ ಅರ್ಥವನ್ನು ಬಿಡಿಸಿ ಹೇಳಬೇಕಾಗಿಲ್ಲ. ಸಮಾಸಗಳೇ ವಿಗ್ರಹದಿಂದ ತೋರುವ ಅರ್ಥಗಳನ್ನು ತಿಳಿಸುತ್ತವೆ. ಇವು ಸಮಾಸಗಳಂತೆ ಮೇಲ್ನೋಟಕ್ಕೆ ಕಾಣುವುದೂ ಇಲ್ಲ. ವಿಗ್ರಹದಂತೆ ಅರ್ಥವೂ ಸ್ವತಃ ಗಮ್ಯವಾಗಿರುವುದರಿಂದ ಗಮಕಸಮಾಸವೆಂಬ ಹೆಸರು ಅನ್ವರ್ಥವಾಗಿದೆ.

ಆದರೆ ಇತರ ಕರ್ಮಧಾರಯಗಳಲ್ಲಿ ಹೀಗಿಲ್ಲ. ಉದಾಃ ಗುಣವಚನ. ಕಾರಿರುಳ್ (ಕರಿದು ಇರುಳ್), ಕಿತ್ತೀಳೆ (ಕಿರಿದು ಈಳೆ), ನಿಟ್ಟುಸಿರ್ (ನಿಡಿದು ಉಸಿರ್), ಕೆಂದೆಂಗು (ಕೆಚ್ಚನೆ ತೆಂಗು), ಕೇಸಕ್ಕಿ (ಕೆಚ್ಚನೆ ಅಕ್ಕಿ) –ಇತ್ಯಾದಿ. ಇಲ್ಲಿ ಪೂರ್ವಪದಗಳಿಗೆ ವಿಭಿನ್ನಾಕೃತಿಯ ಆದೇಶಗಳು ಬರುವುದರಿಂದ ವಿಗ್ರಹವಾಗಲಿ ಅರ್ಥವಾಗಲಿ ಥಟ್ಟನೆ ಸ್ಫುರಿಸುವುದಿಲ್ಲ. ಆ ಮನೆ, ಈ ವನ –ಎಂಬಲ್ಲಿ ಅದು, ಇದು –ಎಂಬ ಪೂರ್ವಪದವು ಹೊಳೆಯದಿದ್ದರೂ ಅರ್ಥಸ್ಫೂರ್ತಿಗೆ ಬಾಧೆ ಇಲ್ಲ. ವಿವಕ್ಷಿತವಾದ ಅರ್ಥವು ಗಮ್ಯ, ಅದನ್ನು ಕ್ಲೇಶವಾಗದಂತೆ ತಿಳಿಸತಕ್ಕ ಸಮಾಸ ಗಮಕ.

ಗಮಕಸಮಾಸವೆಂಬ ಸಂಜ್ಞೆಗೆ ಯಾವ ಪ್ರಯೋಜನವೂ ಇಲ್ಲ. ಈ ಸಂಜ್ಞೆಯುಳ್ಳ ಸಮಾಸವು ಸಂಸ್ಕೃತದಲ್ಲಿಯೂ ಇಲ್ಲ. ಇತರ ಕನ್ನಡ ವೈಯಾಕರಣರೂ ಹೇಳಿಲ್ಲ. ಸುಲಭವಾಗಿ ಅರ್ಥಬೋಧಕವಾದ ಸಮಾಸವೆಂಬ ಒಂದೇ ವೈಶಿಷ್ಟ್ಯದಿಂದ ಕೇಶಿರಾಜನು ಇದನ್ನೇ ಗಮಕಸಮಾಸವೆಂದು ಕರೆದಿದ್ದಾನೆಂದು ನನಗೆ ತೋರುತ್ತದೆ. ಇದು ಒಂದು ಊಹೆ. ಈ ಹೆಸರಿಗೆ ಇನ್ನೂ ಉಚಿತತರವಾದ ಕಲ್ಪನೆಯನ್ನು ಯಾರಾದರೂ ಮಂಡಿಸುವ ವರೆಗೆ ಈ ಊಹೆ ನಿಂತಿರುತ್ತದೆ.

* * * * *

ಕವಿರಾಜಮಾರ್ಗದ ನೂತನ ಸಂಸ್ಕರಣ*

(ಗ್ರಂಥಸಮೀಕ್ಷೆ)

ಇದುವರೆಗೆ ದೊರಕಿರುವ ಕನ್ನಡ ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದದ್ದು ಕವಿರಾಜಮಾರ್ಗ. ಕಾವ್ಯಸಾಹಿತ್ಯಕ್ಕೆ ಸಂಬಂಧಿಸಿದ ಈ ಲಕ್ಷಣಗ್ರಂಥ ಕ್ರಿ. ಶ. ಒಂಬತ್ತನೆಯ ಶತಕದಲ್ಲಿ ರಚಿತವಾದದ್ದು. ಪ್ರಾಚೀನ ಕನ್ನಡ ವಾಙ್ಮಯ, ಛಂದಸ್ಸು, ವ್ಯಾಕರಣ –ಮುಂತಾದ ಅನೇಕ ವಿಷಯಗಳ ಮೇಲೆ ಬೆಳಕುಚೆಲ್ಲುವ ಈ ಗ್ರಂಥ ಅಮೂಲ್ಯವಾದದ್ದು. ಅಂತೆಯೇ ಇದು ಕನ್ನಡ ವಿದ್ವಜ್ಜನರ ಗಮನವನ್ನು ವಿಶೇಷವಾಗಿ ಸೆಳೆದದ್ದು ಸಹಜ. ವಿಖ್ಯಾತ ವಿದ್ವಾಂಸರು ಇದರ ವಿಷಯವಾಗಿ ಅಭ್ಯಾಸಪೂರ್ಣ ಪ್ರಬಂಧಗಳನ್ನು ಬರೆದಿದ್ದಾರೆ. ನಾವೀಗ ಸಮೀಕ್ಷಿಸಲಿರುವ ಗ್ರಂಥವೂ ಸೇರಿ ಕವಿರಾಜಮಾರ್ಗದ ಐದು ಸಂಸ್ಕರಣಗಳು ಹೊರಬಂದಿವೆ. ಹಸ್ತಪ್ರತಿಗಳಲ್ಲಿದ್ದ ಅಪಪಾಠಗಳ ಬಾಹುಲ್ಯದಿಂದಾಗಿ ಈ ಗ್ರಂಥದ ಪರಿಷ್ಕರಣಕಾರ್ಯ ಕಠಿನವಾಗಿ ಪರಿಣಮಿಸಿದೆ; ಹಲವಾರು ಸಮಸ್ಯೆಗಳನ್ನು ತಂದೊಡ್ಡಿದೆ.

ಹಿಂದಿನ ಸಂಸ್ಕರಣಗಳಲ್ಲಿ ಪ್ರೊ| ಎಂ. ವಿ. ಸೀತಾರಾಮಯ್ಯನವರು ಸಂಪಾದಿಸಿದ್ದ ಮೂರನೆಯ ಸಂಸ್ಕರಣ ವಿಶೇಷ ಗಮನಾರ್ಹವಾದುದು. ಅದುವರೆಗೆ ದೊರಕಿದ್ದ ಸಾಮಗ್ರಿಗಳೆಲ್ಲವನ್ನೂ ಚೆನ್ನಾಗಿ ಅಧ್ಯಯನಮಾಡಿ ಪರಿಷ್ಕೃತ ಗ್ರಂಥಪಾಠ, ವಿಸ್ತಾರವಾದ ಪೀಠಿಕೆ, ವಿವರಣಾತ್ಮಕ ಟಿಪ್ಪಣಿಗಳು, ಅಧ್ಯಯನಕ್ಕೆ ನೆರವು ನೀಡುವ ಉಪಯುಕ್ತ ಅನುಬಂಧಗಳು –ಇವನ್ನು ಪ್ರೊ| ಎಂ. ವಿ. ಸೀ.ಯವರು ಅದರಲ್ಲಿ ದೊರಕಿಸಿಕೊಟ್ಟರು. ಅವರೇ ಮತ್ತೆ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಪೀಠಿಕೆ ಮೊದಲಾದ್ದನ್ನು ಮಾತ್ರ ಸಂಕ್ಷೇಪಿಸಿ, ಕವಿರಾಜಮಾರ್ಗದ ಇನ್ನೊಂದು ಸುಲಭ ಬೆಲೆಯ ಸಂಸ್ಕರಣವನ್ನೂ ತಂದಿದ್ದಾರೆ. ಇಷ್ಟಾದರೂ ಈ 'ರಾಜಮಾರ್ಗ' ದುರ್ಗಮ

---

* "ನೃಪತುಂಗದೇವಾನುಮತಂ ಶ್ರೀ ವಿಜಯಪ್ರಭೂತಂ ಕವಿರಾಜಮಾರ್ಗಂ"; ಸಂಪಾದಕರು: ಡಾ| ಕೆ. ಕೃಷ್ಣಮೂರ್ತಿ, ಎಂ. ಎ., ಬಿ. ಟಿ., ಪಿಎಚ್.ಡಿ. ಪ್ರಕಾಶಕರು: ಐ. ಬಿ. ಎಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು; ಪುಟ 179+44. ಬೆಲೆ: ಸಾದಾ ಪ್ರತಿ ರೂ. ೨೦.೦೦; ಉತ್ತಮ ಪ್ರತಿ ರೂ. ೩೦.೦೦. ಈ ಗ್ರಂಥಸಮೀಕ್ಷಾ ಲೇಖನವು 'ಲೋಚನ' ಪತ್ರಿಕೆಯ ಸಂಪುಟ ೧, ಸಂಚಿಕೆ ೨ರಲ್ಲಿ (ಡಿಸೆಂಬರ್ ೧೯೮೩) ಪ್ರಕಟಗೊಂಡಿದೆ.

ವಾಗಿಯೇ ಇದೆ. ಕಲ್ಲು ಮುಳ್ಳು ಹಳ್ಳ ತಿಟ್ಟುಗಳಿಂದ ವಿಷಮಮಾರ್ಗವಾಗಿ ಕಂಡರೆ ಅಚ್ಚರಿಯಲ್ಲ.

ಅಶುದ್ಧಪಾಠಭೂಯಿಷ್ಠವೂ ಶಾಸ್ತ್ರಾತ್ಮಕವೂ ಆದ ಕವಿರಾಜಮಾರ್ಗವನ್ನು ಪೂರ್ಣವಾಗಿ ಪರಿಷ್ಕರಿಸುವುದಾಗಲಿ, ಹೊಸಗನ್ನಡದಲ್ಲಿ ಅನುವಾದಿಸುವುದಾಗಲಿ ಸಾಮಾನ್ಯರಿಗೆ ಶಕ್ಯವಾದ್ದಲ್ಲ. ಭಾಮಹನನ್ನು ಮತ್ತು ವಿಶೇಷವಾಗಿ ದಂಡಿಯನ್ನು ಅನುಸರಿಸುವ ಈ ಗ್ರಂಥದ ಶೋಧನೆಗೆ ಸಂಸ್ಕೃತ ಲಕ್ಷಣಗ್ರಂಥಗಳಲ್ಲಿ ಒಳ್ಳೆಯ ಪಾಂಡಿತ್ಯ ಉಳ್ಳವರು ಕೈಹಾಕಿದರೆ ಯಶಸ್ವಿಯಾದಾರು. ಪ್ರಸ್ತುತ ಸಂಪಾದಕರೂ ಅನುವಾದಕರೂ ಆದ ಡಾ। ಕೆ. ಕೃಷ್ಣಮೂರ್ತಿಗಳು ಅಲಂಕಾರಶಾಸ್ತ್ರದಲ್ಲಿ ನಿರರ್ಗಳ ವಾದ ವಿದ್ವತ್ತೆಯನ್ನು ಗಳಿಸಿದ ವಿದ್ವನ್ಮೂರ್ಧನ್ಯರು. ಬಹುಸಂಖ್ಯೆಯಲ್ಲಿ ಅಲಂಕಾರ ಗ್ರಂಥಗಳನ್ನು ಶೋಧಿಸಿ, ಅನುವಾದಿಸಿ, ಭಾಷಾಂತರಿಸಿ ವಿಖ್ಯಾತರಾದವರು. ಇವರು ಈ ಗ್ರಂಥದ ಸಂಸ್ಕರಣಕ್ಕೆ ಮನಸ್ಸು ಮಾಡಿದುದು ಕನ್ನಡಿಗರ ಸೌಭಾಗ್ಯ. ಇವರೇ ತಿಳಿಸುವಂತೆ "ಶಾಸ್ತ್ರೀಯ ಪಾಠಶೋಧನೆಯಿಂದ ನಿರ್ಣೀತವಾದ ಮೂಲ ಹಾಗೂ ಪಾಠಾಂತರಗಳ ನಿರ್ದೇಶನ, ಸಂಪೂರ್ಣ ಹೊಸಗನ್ನಡ ಅನುವಾದ, ವಿವರಣಾತ್ಮಕ ಟಿಪ್ಪಣಿಗಳು ಮತ್ತು ವಿವೇಚನಾತ್ಮಕ ಪೀಠಿಕೆಯೊಡನೆ" ಸಹಿತವಾದ ಈ ನೂತನ ಸಂಸ್ಕರಣವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ.

ಈ ಸಂಪಾದಕರು ಕವಿರಾಜಮಾರ್ಗದ ಕರ್ತೃ ನೃಪತುಂಗನೊ ಶ್ರೀವಿಜಯನೊ? –ಎಂಬ ವಿವಾದಾತ್ಮಕ ವಿಷಯವನ್ನು ಪೀಠಿಕೆಯಲ್ಲಿ ಪ್ರಸ್ತಾವಿಸಿ ಚರ್ಚಿಸಿದ್ದಾರೆ. ಈಗಿರುವ ಸಾಮಗ್ರಿಗಳಿಂದ ಯಾವ ನಿರ್ಣಯವನ್ನೂ ಕೊಡಲು ಸಾಧ್ಯವಾಗದೆಂದೂ ಶ್ರೀವಿಜಯನು ಇದರ ಕರ್ತೃವೆಂಬ ಪಕ್ಷ ಹೆಚ್ಚು ಸಬಲವಾಗಿದೆಯೆಂದೂ ತಿಳಿಸಿದ್ದಾರೆ. ಅನುವಾದದ ಕ್ಲೇಶವನ್ನು ವಿವರಿಸುತ್ತ ಪ್ರೊ। ಎಂ. ವಿ. ಸೀತಾರಾಮಯ್ಯನವರು ಮಾಡಿರುವ ಕೆಲವೇ ಪದ್ಯಗಳ ಅನುವಾದದಲ್ಲಿ ಸಹ ಪ್ರಮಾದಗಳಾಗಿವೆಯೆಂಬುದನ್ನು ವಿವೇಚಿಸಿ ತೋರಿಸಿದ್ದಾರೆ. ನಾವು ಮೊದಲೇ ಹೇಳಿದಂತೆ ಈ ಗ್ರಂಥದ ಅನುವಾದ ಕ್ಲಿಷ್ಟವಾದದ್ದು ಹೌದು. ಎಂತಹ ವಿದ್ವಾಂಸನಾದರೂ ಮುಗ್ಗರಿಸುವುದು ಸಹಜ. ಯಾರೇ ಆಗಲಿ, ತಪ್ಪನ್ನು ಎತ್ತಿ ತೋರಿಸುವಾಗ ಭಾಷೆಯಲ್ಲಿ ಸಂಯಮ ಅಗತ್ಯ. ಈ ವಿಷಯದಲ್ಲಿ ಡಾ। ಕೆ. ಕೃಷ್ಣಮೂರ್ತಿಯವರ ಭಾಷೆ ಮಿತಿಯ ಗೆರೆಯನ್ನು ದಾಟಿದೆ ಎನಿಸುತ್ತದೆ. ಯಾರೂ ತುಳಿಯದ ಮಾರ್ಗದಲ್ಲಿ ಮುನ್ನುಗ್ಗಿದ ಪ್ರೊ। ಎಂ. ವಿ. ಸೀ. ಅವರ ಸಾಧನೆ ಸಾಮಾನ್ಯವಾದ್ದಲ್ಲ. ಮುಂದೆ ಸಾಗಿದ ಅವರು ಕತ್ತಲಲ್ಲಿ ಎಡವಿದರೆ, ಹಿಂದೆ ಸಾಗತಕ್ಕವರಿಗೆ ಅದು ಎಚ್ಚರಿಕೆಯನ್ನಿತ್ತು ಉಪಕರಿಸುತ್ತದೆಯೆಂಬುದನ್ನು ಮರೆಯಬಾರದು.

ಉದಾಹರಣೆಗೆ: ಮಾರ್ಗಕಾರನ 'ಮಹಾಧ್ವಕೃತಿ' (I –೧೬) ಎಂಬ ಶಬ್ದಕ್ಕೆ ಪ್ರೊ। ಎಂ. ವಿ. ಸೀ. ಅವರು 'ಮಹಾಮಾರ್ಗಕಾವ್ಯ' ಎಂದು ಅರ್ಥ ಬರೆದಿದ್ದಾರೆ. ಇದನ್ನು ಡಾ। ಕೆ. ಕೃಷ್ಣಮೂರ್ತಿ ಅವರು ಪ್ರಬಲವಾಗಿ ದೂಷಿಸಿ ಇದು ಅಕ್ಷರಾನುವಾದವಾಯಿತೆಂದು ಹೇಳಿದ್ದಾರೆ. ಸ್ವತಃ ಅನುವಾದ ಮಾಡುವಾಗ 'ದೊಡ್ಡ ಮಾರ್ಗಕಾವ್ಯಗಳನ್ನು (= ಮಹಾಕಾವ್ಯಗಳನ್ನು)' ಎಂದೇ ಬರೆದಿದ್ದಾರೆ (ಪು. 5).

'ದೊಡ್ಡಮಾರ್ಗಕಾವ್ಯ' ಎಂಬ ಶಬ್ದ ಎಲ್ಲಾದರೂ ಬಳಕೆಯಲ್ಲಿದೆಯೊ? ಪ್ರೊ। ಎಂ. ವಿ. ಸೀ. ಅವರು ಕಂಸದಲ್ಲಿ 'ಮಹಾಕಾವ್ಯ' ಎಂದು ಬರೆಯಲಿಲ್ಲ. ಅದೇ ಒಂದು ಉಲ್ಲೇಖನೀಯ ದೋಷವಾಗಿ ಇವರಿಗೆ ಕಂಡಿದೆ.

ನಮಗೆ ಹೀಗೆ ತೋರುತ್ತದೆ: ಮಾರ್ಗಕಾರನು ಮಾರ್ಗ, ಅಧ್ವ ಎಂಬ ಶಬ್ದಗಳನ್ನೇ ಮತ್ತೆ ಮತ್ತೆ ಬಳಸುತ್ತಾನೆ. ಲಕ್ಷಣಬದ್ಧವಾದ ಮಹಾಕೃತಿಯನ್ನು 'ಮಹಾಕಾವ್ಯ'ವೆನ್ನುವುದಕ್ಕಿಂತ 'ಮಹಾಮಾರ್ಗಕಾವ್ಯ' ಎನ್ನುವುದೇ ಸೂಕ್ತವೆಂದು ಆತನ ಆಶಯವಾಗಿರಬೇಕು.

ಕವಿರಾಜಮಾರ್ಗದ ಹಿಂದಿನ ಸಂಸ್ಕರಣಗಳಿಗಿಂತ ಡಾ। ಕೆ. ಕೃಷ್ಣಮೂರ್ತಿಯವರ ಈ ಗ್ರಂಥ ಉತ್ತಮವೆಂಬುದು ನಿಸ್ಸಂಶಯ. ಮೂಲದ ಲಕ್ಷ್ಯಲಕ್ಷಣಶ್ಲೋಕಗಳನ್ನು ಹೊಸಗನ್ನಡಕ್ಕೆ ಅನುವಾದಿಸಿರುವುದು ಮತ್ತು ಸಂಸ್ಕೃತ ಲಾಕ್ಷಣಿಕರ ಗ್ರಂಥಗಳೊಂದಿಗೆ ತುಲನಾತ್ಮಕವಾಗಿ ವಿಮರ್ಶಿಸಿರುವುದು ಇದರ ಹಿರಿಮೆ. ಎರಡನೆಯ ಪರಿಚ್ಛೇದದಲ್ಲಿ ದುಷ್ಕರಕಾವ್ಯಬಂಧಗಳ ಉದಾಹರಣೆಗಳಿಗೆ ಮಾತ್ರ ಅರ್ಥವನ್ನು ಬರೆದಿಲ್ಲ. ಈ ದುಷ್ಕರ ಬಂಧಗಳು ಹಸ್ತಪ್ರತಿಗಳ ಲಿಪಿದೋಷದಿಂದ 'ಕಗ್ಗಂಟಾ'ಗಿರುವುದೇನೋ ನಿಜ. ಅವುಗಳ ಲಕ್ಷಣಗಳನ್ನು ಗ್ರಂಥಕಾರನು ಹೇಳಿಲ್ಲ. ಆದರೆ ನಿರುತ್ತರ, ಭಾವೆ, ನುಸುಳು –ಮೊದಲಾದ ಬಂಧಗಳ ಸ್ವರೂಪವನ್ನು ವಿವರಿಸಲು ಯತ್ನಿಸಬಹುದಾಗಿತ್ತು. ಇರಲಿ.

ಪ್ರೊ। ಎಂ.ವಿ.ಸೀ. ಅವರು ಸಂಪಾದಿಸಿದ ಗ್ರಂಥದಲ್ಲಿ ವಿವರಣಾತ್ಮಕವಾದ ದೀರ್ಘ ಟಿಪ್ಪಣಿಗಳಿವೆ. ಸಂಬಂಧಪಟ್ಟ ಲಕ್ಷ್ಯಲಕ್ಷಣಗಳಿಗೆ ಭಾಮಹ, ದಂಡಿ ಮೊದಲಾದವರು ಏನು ಹೇಳಿದ್ದಾರೆಂಬುದನ್ನು ಸ್ಫುಟವಾಗಿ ಉಲ್ಲೇಖಿಸಲಾಗಿದೆ. ಪದ್ಯಗಳಿಗೆ ಪ್ರತಿಪದಾನುವಾದವಿಲ್ಲವೆಂಬುದೊಂದೇ ಕೊರತೆಯಾಗಿತ್ತು. ಆ ಕೊರತೆ ಯನ್ನು ಡಾ। ಕೆ. ಕೃಷ್ಣಮೂರ್ತಿ ಅವರು ತುಂಬಿದ್ದಾರೆ. ಕೆಲವು ಅಪಪಾಠಗಳಿಗೆ ಪರಿಷ್ಕರಣವನ್ನೂ ಸೂಚಿಸಿದ್ದಾರೆ. ಇಷ್ಟು ಉತ್ತಮಪಡಿಸಲು ಪ್ರೊ। ಎಂ.ವಿ.ಸೀ. ಅವರ ಗ್ರಂಥದಿಂದ ಇವರಿಗೆ ತುಂಬ ನೆರವು ದೊರಕಿದೆಯೆಂಬುದು ನಿಶ್ಚಿತ. ಇವೆಲ್ಲ ಕವಿರಾಜ ಮಾರ್ಗದ ಪರಿಷ್ಕರಣದ ಕೆಲವು ಹಂತಗಳು. ಸರ್ವೋತ್ತಮವಾದ ಪರಿಷ್ಕರಣವಿನ್ನೂ ಬರಬೇಕಾಗಿದ್ದಿದೆ. ಆದರ ಇನ್ನೊಂದು ಹಂತವಾಗಿ ಪ್ರಕೃತ ಗ್ರಂಥವನ್ನು ಸ್ವಲ್ಪ ವಿಸ್ತಾರವಾಗಿಯೇ ಸಮೀಕ್ಷಿಸಬೇಕೆಂದು ನಮ್ಮ ಹಂಬಲ. ನಾವೀಗ ಪ್ರಸ್ತಾವಿಸುವ ಲೋಪದೋಷಗಳಿಂದ ಮುಂದಿನ ಪರಿಷ್ಕರಣಕರ್ತರಿಗೆ ದಾರಿ ಸುಗಮವಾದೀತೆಂದು ನಂಬಿಕೆ. ಕೇವಲ ಸದ್ಭಾವನೆಯಿಂದ ಮಾಡುವ ಈ ಸಮೀಕ್ಷೆಯನ್ನು ಡಾ। ಕೆ. ಕೃಷ್ಣಮೂರ್ತಿಯವರೂ ಅನ್ಯವಿದ್ವಜ್ಜನರೂ ಸಹೃದಯತೆಯಿಂದಲೇ ಪರಿಶೀಲಿಸ ಬೇಕೆಂದು ಎಲ್ಲರಲ್ಲಿ ವಿನಯಪೂರ್ವಕ ಪ್ರಾರ್ಥನೆ. ಗ್ರಾಹ್ಯವೆನಿಸಿದರೆ ಸ್ವೀಕರಿಸ ಬಹುದು. ಇಲ್ಲವಾದರೆ ತೊರೆಯಬಹುದು. ಆಗ್ರಹವಾಗಲಿ, ವಾದ, ಕುತೂಹಲ ವಾಗಲಿ ನಮಗೆ ಇಲ್ಲ. ಇನ್ನೊಂದು ಮಾತು. ಗ್ರಂಥಕಾರನು ಲಕ್ಷಣಗಳನ್ನು ಪದ್ಯದಲ್ಲಿ ರಚಿಸಿರುವುದರಿಂದ, ಕೆಲವು ಅನಾವಶ್ಯಕ ಶಬ್ದಗಳನ್ನೂ ಲಕ್ಷಣಪದ್ಯದಲ್ಲಿ ಸೇರಿಸಿರು ವುದುಂಟು. ಮೇಲ್ನೋಟಕ್ಕೆ ಹಾಗೆ ತೋರುವ ಎಲ್ಲವೂ ಅಂತಹವಲ್ಲ. ಕೆಲವು ಅರ್ಥವತ್ತಾದವೂ ಇವೆ.

ಪ್ರಥಮ ಪರಿಚ್ಛೇದ

೧. ಪದ-ಪಾದ-ವಿಯುತ-ನಿಯಮಾ
ಸ್ಪದಮಲ್ಲದಳಂಕೃತಂ ಕ್ರಿಯಾ-ಕಾರಕದೊಳ್ ।
ಪುದಿದರ್ಥವ್ಯಕ್ತಿಯನೀ
ವುದು ಗದ್ಯಮನೇಕರೂಪ-ಭೇದ-ವಿಭಕ್ತಂ ॥ — (ಪದ್ಯ ೨೫; ಪುಟ ೬)

ಇದು ಗದ್ಯ ಲಕ್ಷಣ. ಇದರ ಅನುವಾದ ಹೀಗಿದೆ–

"(ಛಂದಶ್ಶಾಸ್ತ್ರದಲ್ಲಿ ಹೇಳಿದ) ಪದ, ಪಾದಗಳ ನಿಯಮಗಳಿಗೆ ಒಳಗಾಗ ದಿದ್ದರೂ ಅಲಂಕಾರಗಳಿಂದ ಕೂಡಿ, ಕ್ರಿಯೆಗಳು (ನೇರವಾಗಿ) 'ಕಾರಕ'ಗಳೊಂದಿಗೆ (=ನಾಮ ವಿಭಕ್ತ್ಯಂತಪದಗಳೊಂದಿಗೆ) ಅನ್ವಯಿಸುವಂತೆ ಇರುತ್ತ, ಅರ್ಥಕೊಡುವುದೇ 'ಗದ್ಯ' (ಕಾವ್ಯ); ಮತ್ತೆ ಅದರಲ್ಲಿಯೂ ಅನೇಕ ಬಗೆಗಳಿರುತ್ತವೆ."

ಗದ್ಯದಲ್ಲಿ ಪಾದನಿಯಮವಿಲ್ಲವೆಂದರೆ ಅರ್ಥವಾಗುತ್ತದೆ. ಪದನಿಯಮವಿಲ್ಲ ಎಂದರೇನು? ಇದು ಅಕ್ಷರಾನುವಾದವಲ್ಲವೆ?

ಪದನಿಯಮವೆಂದರೆ ಯತಿನಿಯಮವೆಂದು ಗ್ರಂಥಕಾರನ ಅಭಿಪ್ರಾಯ ವಾಗಿರಬೇಕು. '**ಯತಿಯೆಂಬುದುಸಿರ್ವತಾಣಂ ಕೃತಾಸ್ಪದಂ ವೃತ್ತ ಜಾತಿ ಪದ ಪದ್ಧತಿ ಯೊಳ್**' (ಪದ್ಯ ೭೧). ವೃತ್ತಜಾತಿಗಳ ಪದಸ್ಥಾನದಲ್ಲಿ 'ಉಸಿರ್ವತಾಣಂ ಯತಿ'. ಯತಿಯು ಪದಾಂತದಲ್ಲಿ ಬರಬೇಕು, ಪದಮಧ್ಯದಲ್ಲಲ್ಲ. "ಶ್ಲೋಕೇಷು ನಿಯತಸ್ಥಾನಂ ಪದಚ್ಛೇದಂ ಯತಿಂ ವಿದುಃ" ಎಂದಿದ್ದಾನೆ ದಂಡಿ (II –೧೫). ಆದ್ದರಿಂದ ಪದನಿಯಮವೆಂದರೆ ಯತಿನಿಯಮವೆಂದು ನಮ್ಮ ನಂಬಿಕೆ.

"ಕ್ರಿಯೆಗಳು ನೇರವಾಗಿ ಕಾರಕಗಳೊಂದಿಗೆ ಅನ್ವಯಿಸುವುದು" ಎಂದರೇನು? ಅವು ಸೊಟ್ಟಸೊಟ್ಟಾಗಿ ಅನ್ವಯಿಸುವುದೂ ಉಂಟೇನು? ಮುಂದಿನ ಪದ್ಯದಲ್ಲಿ ಹೇಳುವ ಹರ್ಷಚರಿತೆ, ಕಾದಂಬರಿಗಳನ್ನು ಗ್ರಂಥಕಾರನು ಲಕ್ಷ್ಯದಲ್ಲಿಟ್ಟುಕೊಂಡಿದ್ದಾನೆ. ಗದ್ಯದಲ್ಲಿ ದೀರ್ಘವಾಕ್ಯಗಳಿದ್ದು, ಪೂರ್ಣಕ್ರಿಯಾವಾಚಿಯು ವಾಕ್ಯದಲ್ಲಿ ಒಂದೇ ಇದ್ದರೂ ಅಪೂರ್ಣಕ್ರಿಯಾವಾಚಿಗಳೂ ಅವುಗಳಿಗೆ ಸಂಬಂಧಿಸಿದ ಕಾರಕಗಳೂ ಪುಂಖಾನುಪುಂಖವಾಗಿ ಬರಬೇಕೆಂದು 'ಕ್ರಿಯಾ–ಕಾರಕದೊಳ್ ಪುದಿದು' ಎಂಬುದರ ಆಶಯ. ಹಾಗಿಲ್ಲದಿದ್ದರೆ ಈ ರೀತಿ ಹೇಳಿದ್ದು ನಿರರ್ಥಕವಾದೀತು.

೨. ಪದಮಳ ಸಮ-ಸಂಸ್ಕೃತ-ಕಾ
ವ್ಯದ ಹೃದಯಂ ಹರ್ಷಚರಿತ-ಕಾದಂಬರಿಗಳ್
— (ಪ. ೨೬, ಪು. ೭).

ಇಲ್ಲಿ 'ಸಮಸಂಸ್ಕೃತ'ವೆಂದರೆ ಕನ್ನಡ ವೈಯಾಕರಣರು ಹೇಳುವ ಸಮಸಂಸ್ಕೃತ ಪದಗಳಲ್ಲ. ಸಂಸ್ಕೃತಕಾವ್ಯಕ್ಕೂ ಅದಕ್ಕೂ ಸಂಬಂಧವಿಲ್ಲ. ಇದು ತೊಡಕಿನ ಪ್ರಶ್ನೆ ಎಂದಿದ್ದಾರೆ ಪ್ರೊ। ಎಂ.ವಿ.ಸೀ. ಅವರು (ಪು. ೧೨೮). ಡಾ। ಕೆ. ಕೃಷ್ಣಮೂರ್ತಿ ಅವರು ಉಪೇಕ್ಷಿಸಿದ್ದಾರೆ.

ನಮಗೆ ಹೀಗೆ ತೋರುತ್ತದೆ –ಹಿಂದಿನ ಪದ್ಯದಲ್ಲಿ ಗ್ರಂಥಕಾರನು ಗದ್ಯಲಕ್ಷಣ ವನ್ನು ಹೇಳಿದ್ದಾನೆ. ಅದಕ್ಕೆ ಸಮವಾದ ಸಂಸ್ಕೃತ ಕಾವ್ಯ –ಎಂದರೆ ಗದ್ಯಕಾವ್ಯ ಎಂದು ಅರ್ಥಮಾಡುವುದು ಸಮಂಜಸ ಅಥವಾ ಸಮಶಬ್ದಕ್ಕೆ ಸರ್ವ ಎಂಬ ಅರ್ಥವೂ ಉಂಟು. 'ಅಥ ಸಮಂ ಸರ್ವಂ' –ಅಮರ. ಸಮಸಂಸ್ಕೃತ ಕಾವ್ಯದ=ಸಮಸ್ತ ಸಂಸ್ಕೃತ ಕಾವ್ಯದ.

೩. ಕಾವ್ಯಲಕ್ಷಣವನ್ನು ಹೇಳುತ್ತ 'ಸವಿಶೇಷ ಶಬ್ದರಚನಂ' ಎಂದಿದ್ದಾನೆ ಗ್ರಂಥಕಾರ (ಪು. ೨೨). ಇದಕ್ಕೆ ಅರ್ಥವನ್ನು ಬರೆಯುತ್ತ 'ವಿಶೇಷತೆಯಿರುವ ಶಬ್ದ ಗಳಿಂದ ರಚಿತವಾದುದು' ಎಂದಿದ್ದಾರೆ ಅನುವಾದಕರು (ಪು. ೬).

ಇದು ಅಕ್ಷರಾನುವಾದವಲ್ಲವೆ? 'ವಿಶೇಷತೆ'ಯಲ್ಲಿರುವ 'ತೆ' ಮಾತ್ರ ಇಲ್ಲಿಯ ವಿಶೇಷ. ವಿಶೇಷವೆಂದರೆ ಮಾಧುರ್ಯಾದಿ ಕಾವ್ಯಗುಣ. ಇಂತಹ ಕಾವ್ಯಗುಣವಿಶಿಷ್ಟ ವಾದ ಪದರಚನೆಯುಳ್ಳದ್ದು ಕಾವ್ಯವೆಂದರ್ಥ. 'ವಿಶಿಷ್ಟಾ ಪದರಚನಾ ರೀತಿಃ, ವಿಶೇಷೋ ಗುಣಾತ್ಮಾ' ಎಂದಿದ್ದಾನೆ ವಾಮನ. ಅದನ್ನೇ ಮಾರ್ಗಕಾರನು 'ಸವಿಶೇಷ ಶಬ್ದರಚನಂ' ಎಂದು ಬದಲಾಯಿಸಿ ಹೇಳಿದ್ದಾನೆಂಬುದು ಸ್ಫುಟ.

೪. ೫೧ನೆಯ ಪದ್ಯದಲ್ಲಿ 'ಸಮಸಂಸ್ಕೃತ' ಶಬ್ದದ 'ಸಮವಾಗಿರುವ ಸಂಸ್ಕೃತ' ಎಂದೂ ೫೫ನೆಯ ಪದ್ಯದಲ್ಲಿ 'ಸರಿಸಮವಾಗಿರುವ ಸಂಸ್ಕೃತೋಕ್ತಿ' ಎಂದೂ ಅರ್ಥ ಬರೆದಿದ್ದಾರೆ (ಪು. ೧೩, ೧೪). ಸಮಸಂಸ್ಕೃತ ಎಂಬುದು ಕನ್ನಡ ವ್ಯಾಕರಣದಲ್ಲಿ ಒಂದು ಪಾರಿಭಾಷಿಕ ಶಬ್ದ. ಕೇಶಿರಾಜನು ಇದರ ಲಕ್ಷಣವನ್ನು–

> ಸಮುದಿತಸಂಖ್ಯಾವ್ಯಯರಹಿ
> ತಮೆ ನಿ ವರ್ತಿಪ ನಿಘಂಟುವಿನ ನಾಮಪದೋ ।
> ತ್ತಮವರ್ಣಪ್ರಕೃತಿಗಳಂ
> ಸಮಸಂಸ್ಕೃತವೆಸರನಿಟ್ಟು ಲಿಂಗಂ ಮಾಳ್ಪರ್ ॥

ಎಂದು ಹೇಳಿದ್ದಾನೆ (ಶ–ದ. ಸೂ. ೯೦). ಈ ವಿಷಯವನ್ನೇ ಎತ್ತದೆ 'ಸಮವಾಗಿರುವ ಸಂಸ್ಕೃತ' ಎಂದು ಬರೆದರೆ ಏನು ಹೇಳಿದಹಾಗಾಯಿತು? ಓದುಗನಿಗೆ ಯಾವ ಅರ್ಥವೂ ಅದರಿಂದಾಗುವುದಿಲ್ಲ.

೫೭ನೆಯ ಪದ್ಯದಲ್ಲಿ ಗ್ರಂಥಕಾರನು ಕನ್ನಡದಲ್ಲಿ ಬೆರೆಸಬಾರದ ಸಂಸ್ಕೃತ ಅವ್ಯಯಗಳನ್ನು ಹೇಳುತ್ತ 'ಅಹರಹರುಚ್ಚೈರ್ನೀಚೈಃ........... ಸಹಸಾದಿಗಳವ್ಯಯಂ ಗಳಸಹಾಯಂಗಳ್' ಎಂದಿದ್ದಾನೆ. 'ಅಸಹಾಯಂಗಳ್' ಎಂಬುದಕ್ಕೆ ಅನುವಾದಕರು "ಅವುಗಳಿಗ ಸಹಾಯಕ ಕನ್ನಡ(ವಿಭಕ್ತಿ)ಪ್ರತ್ಯಯಗಳು ಭಾರವು" ಎಂದು ಬರೆದಿದ್ದಾರೆ. ಮಹಾಪ್ರಾಣ 'ಭ'ಕಾರ ಇಲ್ಲಿ ಮುದ್ರಣದೋಷದಿಂದಾಗಿರಬೇಕು. 'ಬಾರವು' ಎಂಬ ಅಲ್ಪಪ್ರಾಣವಾಗಿರಬಹುದು. ಆದರೆ ಈ ಅರ್ಥ ಸರಿಯಲ್ಲ. "ಈ ಅವ್ಯಯಗಳಿಗೆ ವಿಭಕ್ತಿಪ್ರತ್ಯಯಗಳು ಬಾರವು" ಎಂದರೆ 'ವಿಭಕ್ತಿಪ್ರತ್ಯಯಗಳನ್ನು ಸೇರಿಸದೆಯೇ ಇವನ್ನು ಪ್ರಯೋಗಿಸಬೇಕು" ಎಂಬ ವಿಪರೀತಾರ್ಥವೇ ಹೊಮ್ಮುತ್ತದೆ.

ಈ ದೋಷಕ್ಕೆ ಉದಾಹರಣೆಯಾಗಿ ಕೊಟ್ಟ ಮುಂದಿನ ಪದ್ಯದಲ್ಲಿ 'ಅಹರಹಂ', 'ಇತಸ್ತತಂ' ಎಂಬಲ್ಲಿ ವಿಭಕ್ತಿಪ್ರತ್ಯಯ ಇದೆ. 'ಬಹಿರಂತಃ' 'ಸಹಸಾ' 'ಅಹೋ' ಎಂಬಲ್ಲಿ ಇಲ್ಲ. 'ಉಭಯತಸ್ಪಾಶಾ ರಜ್ಜುಃ'

ಅಸಹಾಯ, ಕೇವಲ ಎಂಬೆರಡು ಶಬ್ದಗಳು ವ್ಯಾಕರಣಶಾಸ್ತ್ರದಲ್ಲಿ ಪಾರಿಭಾಷಿಕವಾಗಿ ಬಳಸತಕ್ಕವು. ಯಾವ ಶಬ್ದಕ್ಕೆ ಸಮಾಸಘಟಕವಾದ ಇನ್ನೊಂದು ಶಬ್ದದ ಸಹಾಯವಿಲ್ಲವೋ ಅದು ಅಸಹಾಯ, ಅದೇ ಕೇವಲ. ಸಂಸ್ಕೃತ ವ್ಯಾಕರಣದಲ್ಲಿ ಇದು ಸುಪ್ರಸಿದ್ಧ. ಪ್ರಕೃತದಲ್ಲಿ, ಸಮಾಸವಾಗದಿರುವ ವ್ಯಸ್ತಶಬ್ದ ಎಂದರ್ಥ. ಒಂಟಿ ಶಬ್ದ ಎನ್ನಬಹುದು. ಸಮಾಸಮಾಡದೆ ಸಂಸ್ಕೃತಾವ್ಯಯಗಳನ್ನು ಕನ್ನಡದಲ್ಲಿ ಪ್ರಯೋಗಿಸಬಾರದೆಂದು ನಿಯಮ. ಅಂತೆಯೇ ದೋಷವಿಲ್ಲದ್ದಕ್ಕೆ ಉದಾಹರಣೆಯಾಗಿ ಗ್ರಂಥಕಾರನು ಮುಂದಿನ ೫೬ನೆಯ ಪದ್ಯದಲ್ಲಿ 'ಬಹಿರುದ್ಯಾನಾಂತರ' 'ಸಹಸೋದಿತ ಮತ್ತಕೋಕಿಲೋಚ್ಚೈರ್ಧ್ವಾನ' 'ಮಹುರಾಕರ್ಣಿಸೆ' –ಎಂದು ಪ್ರಯೋಗಿಸಿ ತೋರಿಸಿದ್ದಾನೆ. 'ಮಹುರಾಕರ್ಣಿಸೆ' ಎಂಬುದು ಕ್ರಿಯಾಸಮಾಸ. ಇದನ್ನೇ ಕೇಶಿರಾಜನು ಇನ್ನೂ ವಿಸ್ತರಿಸಿದ್ದಾನೆ (ನೋಡಿ. ಶ–ದ. ಸೂ. ೯೧, ೯೨).

೫೨ನೆಯ ಪದ್ಯಾನುವಾದದಲ್ಲಿ 'ಮುಂತಾದವು ಅವ್ಯಯಗಳು' ಎಂದು ಉದ್ದೇಶ್ಯವಿಧೇಯಭಾವದಿಂದ ಅರ್ಥವನ್ನು ಬರೆದದ್ದೂ ಸರಿಯಲ್ಲ. ಇವುಗಳಿಗೆ ಅವ್ಯಯಸಂಜ್ಞೆಯನ್ನೇನೂ ಗ್ರಂಥಕಾರನು ವಿಧಿಸುತ್ತಿಲ್ಲವಷ್ಟೆ? ಕನ್ನಡದಲ್ಲಿ ಬೆರೆಸಬಾರದ ಅವ್ಯಯಗಳ ಪಟ್ಟಿಯನ್ನು ಒದಗಿಸುತ್ತಿದ್ದಾನೆ, ಅಷ್ಟೆ. 'ಅಸಮಸ್ತವಾದ ಈ ಬಗೆಯ ಅವ್ಯಯಗಳು' ಎಂದಿಷ್ಟೇ ಅರ್ಥ.

ವಿಚಾರಃ ಗ್ರಂಥಕಾರನು ಹೇಳಿದ 'ಅಹರಹಃ' ಎಂಬುದು ಅವ್ಯಯವಲ್ಲ. ಅಹನ್ ಶಬ್ದಕ್ಕೆ ವೀಪ್ಸಾರ್ಥದಲ್ಲಿ ದ್ವಿತ್ವ ಬಂದು ಈ ರೂಪವಾಗಿದೆ. ಆದ್ದರಿಂದ 'ಅಹರಹಃ ಎಂಬ ಶಬ್ದ, ಉಚ್ಚೈಃ –ಮೊದಲಾದ ಅವ್ಯಯಗಳು' ಎಂದು ಬಿಡಿಸಿ ಅರ್ಥ ಹೇಳುವುದು ಯುಕ್ತ.

ಕಾರಕವಿಚಾರ

೫. ಕಾರಕಮಾಱು ಕರ್ಮ–ಕರಣಾದಿಕದಿಂ ಪ್ರಥಮಾದಿ –ಭೇದ–ನಿ–
ರ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇೞನಿಕ್ಕುಂ ॥
— (ಪ. ೧೧೪, ಪು. ೨೯)

"ಕನ್ನಡದಲ್ಲಿ ಷಷ್ಠಿಗೂ ಕಾರಕತ್ವವುಂಟೆನ್ನುವುದಾದರೆ ಕರ್ತೃವಿಗೆ ಕಾರಕತ್ವವಿಲ್ಲವೆಂದು ಭಾವಿಸಬೇಕು" ಎಂದಿದ್ದಾರೆ ಅನುವಾದಕರು.

ಇಲ್ಲಿ 'ರೆ' ಪಕ್ಷ ಹುಟ್ಟಿದ್ದೇಕೆ? ಡಾ| ಕೆ. ಕೃಷ್ಣಮೂರ್ತಿಗಳಂಥ ವಿದ್ವಾಂಸರೂ ಈ ಪಕ್ಷವನ್ನು ಜೀವಂತ ಉಳಿಸಿದ್ದರಿಂದ ನಮಗೆ ಸಖೇದಾಶ್ಚರ್ಯವಾಗಿದೆ. ಈ ವಿಷಯವಾಗಿ ವಾದವಿವಾದಗಳು ನಡೆದಿವೆ. ಪ್ರೊ| ಎಂ.ವಿ.ಸೀ.ಯವರು ಈ ಪದ್ಯದ

ಟಿಪ್ಪಣಿಯಲ್ಲಿ ಸುದೀರ್ಘವಾಗಿಯೇ ನಿರೂಪಿಸಿದ್ದಾರೆ. ಅನೇಕ ವಿದ್ವಜ್ಜನರ ಅಭಿಪ್ರಾಯಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.

ಕಾರಕಸಂಜ್ಞೆ ಸಂಸ್ಕೃತ ವ್ಯಾಕರಣದಲ್ಲಿ ಆವಶ್ಯಕ. ಉದಾತ್ತಾದಿ ಸ್ವರವಿಧಿಯಲ್ಲಿ, ಸಮಾಸವಿಧಿಯಲ್ಲಿ, ಉತ್ಸರ್ಗಾಪವಾದ ವ್ಯವಸ್ಥೆಯಲ್ಲಿ ಇದು ಉಪಯುಕ್ತವಾಗಿದೆ. ಕನ್ನಡ ವ್ಯಾಕರಣದಲ್ಲಿ ಕಾರಕಸಂಜ್ಞೆಯಿಂದ ಉಪಯೋಗವೇನೂ ಇಲ್ಲ. ಆದರೂ ಸಂಸ್ಕೃತವ್ಯಾಕರಣವನ್ನನುಸರಿಸಿದ ಕನ್ನಡ ವೈಯಾಕರಣರು ಕರ್ತೃ, ಕರ್ಮ ಮೊದಲಾದವನ್ನು ಕಾರಕವೆಂದು ಹೇಳಿ, ಆ ಶಬ್ದದಿಂದ ವ್ಯವಹರಿಸಿದ್ದಾರೆ. ಕರ್ತೃವಿಗೆ ಕಾರಕಸಂಜ್ಞೆ ಇರಲಿ–ಇಲ್ಲದಿರಲಿ, ಷಷ್ಠಿ ಕಾರಕವಿಭಕ್ತಿಯಾಗಲಿ–ಆಗದಿರಲಿ ಕನ್ನಡ ವ್ಯಾಕರಣದವರಿಗೆ ಆಗಬೇಕಾದ್ದೇನೂ ಇಲ್ಲ. ಸಂಸ್ಕೃತವ್ಯಾಕರಣದಲ್ಲಿ ವ್ಯವಸ್ಥಿತವಾದ ಕಾರಕತ್ವವನ್ನು ಇವರು ಸಿದ್ಧವೆಂದು ಅನುವಾದ ಮಾಡಿದ್ದಾರೆಯೇ ಹೊರತು, ಕಾರಕವೆಂದರೇನೆಂಬ ನೂತನ ವ್ಯವಸ್ಥೆಗೆ ಇವರು ಹೊರಟೇ ಇಲ್ಲ. ಭಟ್ಟಾಕಳಂಕನು ಶಬ್ದಾನುಶಾಸನದಲ್ಲಿ "ನಾವು ಕಾರಕ ಎಂಬ ಸಂಜ್ಞೆಯನ್ನು ಮಾಡದಿದ್ದರೂ–

ಕರ್ತಾ ಕರ್ಮ ಚ ಕರಣಂ ಸಂಪ್ರದಾನಂ ತಥೈವ ಚ ।
ಅಪಾದಾನಂ ಚಾಧಿಕರಣಂ ಷಡ್ವಿಧಂ ಕಾರಕಂ ಮತಂ ॥

ಎಂದು ಪ್ರಾಚೀನರು ಪರಿಗಣಿಸಿರುವ ಕರ್ತ್ರಾದಿ ಆರರಲ್ಲಿಯೂ ಕಾರಕ ಶಬ್ದವು ಸಮಾನಾಧಿಕರಣಸಂಬಂಧದಿಂದ ಈ ಶಾಸ್ತ್ರದಲ್ಲಿ ಪ್ರಯೋಗವಿದೆ" ಎಂದು ಸ್ಪಷ್ಟವಾಗಿ ಬರೆದಿದ್ದಾನೆ (ಕರ್ಣಾಟಕ ಶಬ್ದಾನುಶಾಸನ ಪ್ರಕಾಶಿಕೆ, ಶಿ.ಶಿ. ಬಸವನಾಳ ಸಂಪಾದಿತ, ಪು. ೨೦೪). ಹಾಗೆಯೇ ಕರ್ತೃ, ಕರ್ಮ, ಕರಣಾದಿಗಳ ಲಕ್ಷಣವನ್ನೂ ಹೇಳಿಲ್ಲ, ಸುಪ್ರಸಿದ್ಧವೆಂಬ ಕಾರಣದಿಂದ. ಕೇಶಿರಾಜನು–

ಪ್ರವಿದಿತ ತತ್ಕರ್ಮಂ ಕ-
ರ್ತೃವಿನೀಪ್ಸಿತತಮ ಪದಾರ್ಥಮದು.... ॥ – (ಸೂ. ೧೩೮)

ಎಂದು ಕರ್ಮದ ಸಾಮಾನ್ಯ ಲಕ್ಷಣವನ್ನು ಹೇಳಿದನೇ ಹೊರತು ಕರ್ತೃ, ಕರಣ, ಸಂಪ್ರದಾನ ಮೊದಲಾದವುಗಳಿಗೂ ಕಾರಕಕ್ಕೂ ಲಕ್ಷಣವನ್ನು ಹೇಳಲೇ ಇಲ್ಲ. ಇದರಿಂದ ಸಿದ್ಧವಾಗುವುದೇನೆಂದರೆ ಕನ್ನಡದವರು ಸಂಸ್ಕೃತವ್ಯಾಕರಣದಿಂದ ಕಾರಕ, ಕರ್ತೃ, ಕರ್ಮ –ಮೊದಲಾದವನ್ನು ಉಂಡೆಯಾಗಿ ತೆಗೆದುಕೊಂಡಿದ್ದಾರೇ ಹೊರತು ಸ್ವತಂತ್ರವಾಗಿ ಬೇರೊಂದು ವ್ಯವಸ್ಥೆಯನ್ನು ಒಪ್ಪಿಕೊಂಡಿಲ್ಲ ಎಂದು. ಕನ್ನಡ ವೈಯಾಕರಣರೆಲ್ಲರೂ ಕರ್ತೃವನ್ನು ಕಾರಕವೆಂದೇ ತಿಳಿದಿದ್ದಾರೆ.

೧. "ನಾಗವರ್ಮ ಕೇಶಿರಾಜರಿಬ್ಬರೂ ಕರ್ತೃ ಮೊದಲಾಗಿ ಕಾರಕಗಳು ಆರು ಎಂದೂ ವಿಭಕ್ತಿಗಳು ಏಳು ಎಂದೂ ಸ್ಪಷ್ಟವಾಗಿ ಹೇಳಿದ್ದಾರೆ; ಷಷ್ಠಿಗೆ ಕಾರಕತ್ವವಿಲ್ಲವೆಂಬ ಬಗೆಗೂ ಅವರದ್ದು ಏಕಾಭಿಪ್ರಾಯ" (ಪ್ರೊ। ಎಂ.ವಿ.ಸೀ. ಅವರ ಟಿಪ್ಪಣಿ, ಪು. ೧೬೬).

ಕೇಶಿರಾಜ ನಾಗವರ್ಮರ ಹೇಳಿಕೆಯನ್ನಿಲ್ಲಿ ಮತ್ತೆ ಬರೆಯುವುದು ಅನಾವಶ್ಯಕ. 'ಷಷ್ಠಿಗೆ ಕಾರಕತ್ವವಿಲ್ಲ' ಎಂಬ ವಿಷಯದಲ್ಲಿ ಮುಂದೆ ಬರೆಯುತ್ತೇವೆ.

೨. ಭಟ್ಟಾಕಳಂಕನು ಕರ್ತೃ ಕಾರಕವೆಂದು ಒಪ್ಪಿದ್ದಾನೆಂಬುದು ಮೇಲೆ ಉದ್ಧೃತವಾದ ವ್ಯಾಖ್ಯಾನದಿಂದ ಸ್ಪಷ್ಟ.

ಹೀಗೆ ಎಲ್ಲಾ ವೈಯಾಕರಣರೂ ಏಕಾಭಿಪ್ರಾಯದಲ್ಲಿರುವಾಗ, ಕವಿರಾಜಮಾರ್ಗ ಕಾರನಿಗೆ 'ಕರ್ತೃ ಕಾರಕವೆಂಬುದು ಸಂಮತವಲ್ಲ' ಎಂಬ ವಾದಕ್ಕೆ ನಿಮಿತ್ತವೇನು? ಅದು ಕಾರಕವಲ್ಲವೆಂದು ಅವನೇನೂ ಹೇಳಿಲ್ಲ. ಅವನದು ಅಲಂಕಾರ ಗ್ರಂಥ. ವ್ಯಾಕರಣ ವಿಷಯ ಪ್ರಾಸಂಗಿಕವಾಗಿ ಸ್ವಲ್ಪ ಬಂದಿದೆಯಷ್ಟೆ. ಷಷ್ಠಿಯು ಕಾರಕವಿಭಕ್ತಿ ಯೆಂದೂ ಅವನು ಹೇಳಿಲ್ಲ. ಅವನು ಹೇಳದೆ ಇದ್ದುದನ್ನು ಬರಿಯ ಊಹೆಯಿಂದ ತಿರುವು ಮುರುವು ಮಾಡಿ ಅವನಲ್ಲಿ ಆರೋಪಿಸಿ, ವ್ಯಾಕರಣ ಸಿದ್ಧಾಂತಕ್ಕೇ ಅಪಚಾರವೆಸಗುವ ಈ ವಾದವೈಖರಿಗೆ ಬೀಜವೇನು? ಕವಿರಾಜಮಾರ್ಗಕಾರನು ಪ್ರಾಚೀನರ ಮೇಲೆ ತಿರುಗಿಬಿದ್ದ ಬಂಡಾಯಗಾರನೆಂದು ಭಾವಿಸಬೇಕೆ?

ಕಾರಕಮಾಱು ಕರ್ಮ-ಕರಣಾದಿಕದಿಂ ಪ್ರಥಮಾದಿ ಭೇದ-ನಿ
ರ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇೞನಿಕ್ಕುಂ ॥

ಇಷ್ಟೇ ಅವನು ಹೇಳಿದ್ದು. ಉದಾಹರಣೆಯಾಗಿ–

ನರಪತಿ ಬಂದನಾ ನೃಪನನಟ್ಟಿಯೆ ಕಾಣ್ಬುದು ।
.....ಇದು ಕಾರಕಯುಕ್ತವಿಭಕ್ತ್ಯನುಕ್ರಮಂ ॥

ಎಂದು ಏಳು ವಿಭಕ್ತಿಗಳ ಪ್ರಯೋಗವನ್ನು ತೋರಿಸಿದ್ದಾನೆ. ಇದರ ಮೇಲೆ ಪ್ರೊ| ಎಂ.ವಿ.ಸೀ. ಅವರ ಟಿಪ್ಪಣಿ ಹೀಗಿದೆ: "ಮಾರ್ಗಕಾರನು ಕರ್ತೃವನ್ನು ಕಾರಕಾನುಕ್ರಮ ದಲ್ಲಿ ಸೇರಿಸಿಲ್ಲ; ಹಾಗೂ ಕಾರಕಗಳು ಆರೆಂದು ಸ್ಪಷ್ಟವಾಗಿ ಹೇಳಿ, 'ಇದು ಕಾರಕ ಯುಕ್ತ ವಿಭಕ್ತ್ಯನುಕ್ರಮಂ' ಎಂದು ಉಪಲಕ್ಷಿಸುವಲ್ಲಿ ಷಷ್ಠಿಯನ್ನು ಆ 'ಅನುಕ್ರಮ'ದಲ್ಲಿ ಸೇರಿಸಿಕೊಂಡಿರುವುದರಿಂದ ಅವನು ಷಷ್ಠಿಗೂ ಕಾರಕತ್ವವನ್ನು ಆರೋಪಿಸಿರುವನೆಂದು ಅನುಮಾನಿಸಬೇಕಾಗುತ್ತದೆ. ಅವನ ಅಭಿಪ್ರಾಯದಂತೆ, ಕರ್ತೃಕಾರಕವಲ್ಲದಿದ್ದರೂ ಅದು ಪ್ರಥಮಾ ವಿಭಕ್ತಿಯಿಂದ ನಿರ್ದಿಷ್ಟವಾಗಿ, ವಿಭಕ್ತಿಗಳು ಏಳು; ಇದರಲ್ಲಿ ಸಂದೇಹವಿಲ್ಲ." (ಪು. ೧೬೬).

ಕರ್ತೃವಿಗೂ ಪ್ರಥಮಾವಿಭಕ್ತಿಗೂ ಗಂಟುಹಾಕಿಕೊಂಡದ್ದರಿಂದ ಈ ರಾದ್ಧಾಂತ. ಕರ್ತೃಕಾರಕದ ಮೇಲೆ ಪ್ರಥಮಾವಿಭಕ್ತಿ ಬರುತ್ತದೆಯೆಂದು ಯಾವ ವೈಯಾಕರಣನೂ ಹೇಳಿಲ್ಲ. ಕೇಶಿರಾಜನು–

ಅಭಿರೂಪದಿನಾ ಪ್ರಥಮಾ
ವಿಭಕ್ತಿಲಿಂಗಾರ್ಥವಚನಸಂಬೋಧನದೊಳ್,
ಪ್ರಭವಿಪ್ಪುದಾ ದ್ವಿತೀಯಾ
ವಿಭಕ್ತಿ ಕರ್ಮದೊಳನಾಕುಲಂ ವರ್ತಿಸುಗುಂ ॥ — (ಸೂ. ೧೩೭)

ಎಂದು ಮಾತ್ರ ಹೇಳಿದ್ದಾನೆ. ಪ್ರಥಮೆಯು ಪ್ರಾತಿಪದಿಕಾರ್ಥದಲ್ಲಿ ಬರುತ್ತದೆಯೇ ಹೊರತು ಕರ್ತ್ರರ್ಥದಲ್ಲಲ್ಲ. ಕರ್ತ್ರರ್ಥದಲ್ಲಿ ತೃತೀಯೆಯನ್ನು ಹೇಳಿದ್ದಾನೆ ಕೇಶಿರಾಜ–

ನುಡಿಗುಂ ತೃತೀಯೆ ಪೇಟಿಲ್
ಪಡೆಗುಂ ಸಲೆ ಕರ್ತೃಕರಣಹೇತುಸ್ಥಿತಿಯೊಳ್ ॥ — (ಸೂ. ೧೩೯)

ಉದಾ: ಕರ್ತೃವಿಂಗೆ: ಪದಕಮಕ್ಕಸಾಲೆಯಿಂ ಮಾಡೆಪಟ್ಟುದು; ಕಾವ್ಯಮೆನ್ನಿಂ ಪೇಟೆಪಟ್ಟುದು.

ಇಲ್ಲಿ ಕರ್ಮಣಿ ಪ್ರಯೋಗವನ್ನು ಮಾತ್ರ ಉದಾಹರಿಸಿದ್ದಾನೆಂಬುದು ಗಮನಾರ್ಹ. ಏಕೆಂದರೆ, ಕರ್ತರಿ ಪ್ರಯೋಗದಲ್ಲಿ ಕರ್ತೃ ಪ್ರಥಮೆಯ ಅರ್ಥವಲ್ಲ. ಭಟ್ಟಾಕಳಂಕನು ಕೇಶಿರಾಜನಿಗಿಂತ ಪರಿಷ್ಕಾರವಾಗಿ ವಿವರಿಸಿದ್ದಾನೆ. ಇಲ್ಲಿ ಬರೆದರೆ ತುಂಬ ವಿಸ್ತಾರವಾಗುತ್ತದೆ. ಮಥಿತಾರ್ಥ ಇಷ್ಟು–

೧. ಕರ್ತೃಕಾರಕಕ್ಕೂ ಪ್ರಥಮಾವಿಭಕ್ತಿಗೂ ಯಾವ ಸಂಬಂಧವೂ ಇಲ್ಲ.
೨. ಕರ್ತ್ರರ್ಥದಲ್ಲಿ ತೃತೀಯೆ ಬರುತ್ತದೆ, ಪ್ರಥಮೆಯಲ್ಲ.

ಹಾಗಾದರೆ, 'ರಾಮನು ಗಡಿಗೆಯನ್ನು ಮಾಡುತ್ತಾನೆ' ಎಂಬಲ್ಲಿ ಕರ್ತೃವನ್ನು ಬೋಧಿಸತಕ್ಕದ್ದು ಯಾವುದು? ವ್ಯಾಕರಣಶಾಸ್ತ್ರದಂತೆ ಇಲ್ಲಿ ಆಖ್ಯಾತಪ್ರತ್ಯಯವು ಕರ್ತೃವನ್ನು ಬೋಧಿಸುತ್ತದೆ. ಆದ್ದರಿಂದಲೇ ಇದಕ್ಕೆ 'ಕರ್ತರಿ' ಪ್ರಯೋಗ ಎಂದು ಹೆಸರು. ಪ್ರಥಮೆಗೆ ಪ್ರಾತಿಪದಿಕದ ಅರ್ಥವೇ ಅರ್ಥ. ಆಖ್ಯಾತಪ್ರತ್ಯಯವೇ ಕರ್ತೃವನ್ನು ಬೋಧಿಸುವುದರಿಂದ ಮತ್ತೆ ತೃತೀಯೆ ಬರುವುದಿಲ್ಲ. ಕರ್ಮಣಿ ಪ್ರಯೋಗದಲ್ಲಿ ಕರ್ಮವನ್ನು ಆಖ್ಯಾತಪ್ರತ್ಯಯವೇ ಬೋಧಿಸುತ್ತದೆ. 'ರಾಮನಿಂದ ಗಡಿಗೆ ಮಾಡಲ್ಪಡುತ್ತದೆ.' ಇಲ್ಲಿ ಗಡಿಗೆ ಕರ್ಮವಾದರೂ ದ್ವಿತೀಯೆ ಬಂದಿಲ್ಲವೆಂಬು ದನ್ನು ಗಮನಿಸಬೇಕು. ಕರ್ತ್ರರ್ಥವನ್ನು ಆಖ್ಯಾತವು ಇಲ್ಲಿ ಹೇಳುವುದಿಲ್ಲವಾದ್ದರಿಂದ 'ರಾಮ' ಶಬ್ದದ ಮೇಲೆ ಕರ್ಮಣಿ ಪ್ರಯೋಗದಲ್ಲಿ ತೃತೀಯೆ ಬಂದಿದೆ ಎಂಬುದನ್ನು ಗಮನಿಸಬೇಕು.

ಏವಂಚ ಪ್ರಥಮೆಗೂ ಕರ್ತೃಕಾರಕಕ್ಕೂ ಸಂಬಂಧವಿಲ್ಲದ ಮೇಲೆ, ಮುಂದೆ ಬರುವುದು ದ್ವಿತೀಯೆ. ಅದು ಕರ್ಮಕಾರಕದ ಮೇಲೆ ಬರುವುದರಿಂದ ಕಾರಕಕ್ರಮ ದಲ್ಲಿ ಮೊದಲು ಕರ್ಮವನ್ನು ಕವಿರಾಜಮಾರ್ಗಕಾರನು ಹೇಳಿದ್ದು ಕ್ರಮಬದ್ಧವೇ ಆಗಿದೆ. ವಿಭಕ್ತಿಕ್ರಮದಲ್ಲಿ ಪ್ರಥಮೆಯಿಂದ ಉದಾಹರಣೆ ಕೊಟ್ಟಿದ್ದೂ ಸರಿ.

ಇಲ್ಲೊಂದು ಪ್ರಶ್ನೆ ಏಳುತ್ತದೆ. ಪ್ರಥಮೆಯೂ ಷಷ್ಠಿಯೂ ಕಾರಕವಿಭಕ್ತಿಗಳಲ್ಲದೇ ಹೋದರೆ, ಆರು ಕಾರಕಗಳಿಗೆ ಐದೇ ವಿಭಕ್ತಿಗಳು ಉಳಿಯುತ್ತವಲ್ಲ! ಅದರಿಂದ ಏನಾಯಿತು? ಕರ್ತೃ ಕರಣ ಈ ಎರಡು ಕಾರಕಗಳಲ್ಲಿಯೂ ತೃತೀಯಾವಿಭಕ್ತಿಯೇ ವರ್ತಿಸುವುದರಿಂದ ಇದು ಚೋದ್ಯವೇ ಅಲ್ಲ. 'ತೃತೀಯೆ ಪೇಟಿಲ್ ಪಡೆಗುಂ ಕರ್ತೃಕರಣಹೇತುಸ್ಥಿತಿಯೊಳ್' ಎಂಬ ಕೇಶಿರಾಜನ ಸೂತ್ರವನ್ನು ಸ್ಮರಿಸಿಕೊಳ್ಳಬೇಕು. **'ಕರ್ತೃಕರಣಯೋಸ್ತೃತೀಯಾ'** –ಪಾಣಿನಿಸೂತ್ರ.

ಈಗ ಇನ್ನೊಂದು ಶಂಕೆ ಹುಟ್ಟಬಹುದು. ಕಾರಕವಿಭಕ್ತಿಗಳು ಐದೇ ಆದರೆ ಗ್ರಂಥಕಾರನು ಏಳು ವಿಭಕ್ತಿಗಳಿಗೆ ಉದಾಹರಣೆ ಕೊಟ್ಟಿದ್ದೇಕೆ? ಎಂದು. 'ಏಳು ವಿಭಕ್ತಿಗಳಿಗೆ ಏಳು ಉದಾಹರಣೆಗಳು' ಎಂಬ ಉತ್ತರವನ್ನು ಸುಲಭವಾಗಿ ಊಹಿಸಿಕೊಳ್ಳಬಹುದು. ಪ್ರತಿವಾದಿಗಳ ಪಕ್ಷದಲ್ಲಿಯೂ ಆರು ಕಾರಕಗಳಿಗೆ ಏಳು ವಿಭಕ್ತಿಗಳೆಂಬುದು ಕೂಡುವುದಿಲ್ಲವಷ್ಟೆ. ಅವರ ಮತದಲ್ಲಿಯೂ ಕರ್ತೃ ಕಾರಕವಲ್ಲವಾದರೆ, 'ನರಪತಿ ಬಂದನ್' ಎಂಬುದು ಯಾವುದಕ್ಕೆ ಉದಾಹರಣೆ? ಪದ್ಯದ ಮೊದಲಲ್ಲಿಯೇ ಅಸಂಬದ್ಧವಾದದ್ದನ್ನು ಉದಾಹರಿಸಬಹುದೆ? ಅಲ್ಲಿ ಪ್ರಥಮಾವಿಭಕ್ತಿ ಹುಟ್ಟಿಯೇ ಇಲ್ಲವೆಂದು ಭಾಷಾಶಾಸ್ತ್ರಜ್ಞರ ಮತವನ್ನು ಎತ್ತುವುದಾದರೆ, ಏಳು ವಿಭಕ್ತಿಗಳಲ್ಲಿ ಇನ್ನೊಂದು ಯಾವುದು? ಏಳು ವಿಭಕ್ತಿಗಳೆಂದು ಗ್ರಂಥಕಾರನು ಕಂಠೋಕ್ತವಾಗಿ ಹೇಳಿದ್ದಾನಲ್ಲವೆ?

ಪ್ರೊ। ಎಂ.ವಿ.ಸೀ. ಅವರ ಟಿಪ್ಪಣಿಯಲ್ಲಿ ಮುಳಿಯ ತಿಮ್ಮಪ್ಪಯ್ಯನವರ 'ಸೂಕ್ಷ್ಮವಾದ ವಿವೇಚನೆ'ಯನ್ನು ಹೀಗೆ ಬರೆಯಲಾಗಿದೆ: "ಕಾರಕಂ ಎಂಬ ಪದವು ಸಂಸ್ಕೃತ ವ್ಯಾಕರಣಾನುಸಾರವಾದ ವ್ಯುತ್ಪತ್ತಿಯಂತೆ 'ಮಾಡಿಸುವ ವ್ಯಕ್ತಿ'ಯನ್ನು ಸೂಚಿಸುವುದಲ್ಲದೆ, 'ಮಾಡುವ ವ್ಯಕ್ತಿ'ಯನ್ನಲ್ಲ. (ಕಾರಯತೀತಿ ಕಾರಕಃ) 'ಕರೋತಿ ಇತಿ ಕರ್ತಾ' ಎಂದು 'ಕರ್ತೃ' ಪದವು ರೂಪಿತವಾಗಿದೆ. ಇಂಥ 'ಕರ್ತೃ' ಎಂಬ ಪದವು ಕಾರಕವೆನ್ನಿಸುವುದು ಹೇಗೆ? 'ನರಪತಿ ಬಂದಂ' ಎಂಬ ದೃಷ್ಟಾಂತವನ್ನು ನೋಡಿರಿ. ಅದಕ್ಕೆ ನರಪತಿಯು 'ಬರುವಿಕೆ' ಎಂಬ ಕಾರ್ಯವನ್ನು 'ಮಾಡಿದನು' ಎಂದಲ್ಲದೆ 'ಮಾಡಿಸಿದನು' ಎಂದರ್ಥವಲ್ಲ" (ಪು. ೧೭೧).

ಇದು ಅತ್ಯಂತ ನಿರಾಧಾರವೂ ಪ್ರಮಾಣವಿರುದ್ಧವೂ ಆದ ಹೇಳಿಕೆ. 'ಕಾರಯತೀತಿ ಕಾರಕಃ' ಎಂದು ಈ ಕಾರಕಶಬ್ದಕ್ಕೆ ಯಾವನು ಎಲ್ಲಿ ವ್ಯುತ್ಪತ್ತಿಯನ್ನು ತೋರಿಸಿದ್ದಾನೆ? 'ಕರೋತೀತಿ ಕಾರಕಂ' ಎಂಬುದೇ ಇದರ ವ್ಯುತ್ಪತ್ತಿ. ಕರ್ತೃ ಶಬ್ದಕ್ಕೂ ಕಾರಕ ಶಬ್ದಕ್ಕೂ ಅರ್ಥದಲ್ಲಿ ಯಾವ ಭೇದವೂ ಇಲ್ಲ. ಮಹಾಭಾಷ್ಯಕಾರನಾದ ಪತಂಜಲಿ 'ಕಾರಕೇ' ಎಂಬ ಪಾಣಿನಿ ಸೂತ್ರಕ್ಕೆ (೧-೪-೨೩) ಭಾಷ್ಯವನ್ನು ಬರೆಯುತ್ತ 'ಕರೋತೀತಿ ಕಾರಕಂ' ಎಂದು ಸ್ಪಷ್ಟವಾಗಿ ನಿರೂಪಿಸಿದ್ದಾನೆ. ವ್ಯಾಕರಣಶಾಸ್ತ್ರದಲ್ಲಿ ಪತಂಜಲಿಗಿಂತಲೂ ಹೆಚ್ಚಿನ ಪ್ರಾಮಾಣಿಕನು ಯಾರು?

ಅಂತೆಯೇ ಕೈಯಟನ ಪ್ರದೀಪ, ಶಬ್ದೇಂದುಶೇಖರ, ಪ್ರೌಢಮನೋರಮಾ, ತತ್ತ್ವಬೋಧಿನೀ -ಮುಂತಾದ ಸಕಲ ವ್ಯಾಕರಣಗ್ರಂಥಗಳಲ್ಲಿಯೂ ಈ ವ್ಯುತ್ಪತ್ತಿಯನ್ನು ಅಂಗೀಕರಿಸಲಾಗಿದೆ. ಮುಳಿಯ ತಿಮ್ಮಪ್ಪಯ್ಯನವರ ಹೇಳಿಕೆಯಂತೆ 'ಮಾಡಿಸುವವನು' ಕಾರಕನಾದಮೇಲೆ 'ನೃಪಂ ಸೈನಕರಂ ಬರಿಸಿದಂ', 'ನೃಪಂ ಸೈನಿಕರಿಂ ಯುದ್ಧಮಂ ಮಾಡಿಸಿದಂ' ಎಂಬ ವಾಕ್ಯಗಳಲ್ಲಿ ನೃಪನು ಕಾರಕನಾಗುವುದಕ್ಕೆ ಅಡ್ಡಿಯೇನು? ಇಲ್ಲಿ ಪ್ರಥಮೆಯೇ ಇದೆ. ಕರ್ತೃ ಕಾರಕವಾಗಲು ಬಾಧಕವೇನು?

'ಪಂಪನು ಕಾವ್ಯವನ್ನು ರಚಿಸಿದನು' ಎಂಬ ವಾಕ್ಯದಲ್ಲಿ ಪಂಪನು ಕರ್ತೃ, ಕಾವ್ಯವು ಕರ್ಮಪದ ಎಂಬುದು ಎಲ್ಲರಿಗೂ ತಿಳಿದಿದೆ. ಇದನ್ನು ಕರ್ಮಣಿ

ಪ್ರಯೋಗಕ್ಕೆ ತಿರುಗಿಸಿದರೆ 'ಪಂಪನಿಂದ ಕಾವ್ಯವು ರಚಿತವಾಯಿತು' ಎಂದಾಗುತ್ತದೆ. ಎರಡನೆಯ ವಾಕ್ಯದಲ್ಲಿ ಕಾರಕ ಯಾವುದು? ಪಂಪನು ಕರ್ತೃವಾದ್ದರಿಂದ ನಿಮ್ಮ ಮತದಂತೆ ಕಾರಕವಲ್ಲ. ಕಾವ್ಯವು ಪ್ರಥಮಾಂತವಾದ್ದರಿಂದ ನಿಮಗೆ ಕಾರಕವಲ್ಲ! ಕಾರಕವಿಲ್ಲದ ವಾಕ್ಯವೂ ಇರುವುದುಂಟೊ? ಇನ್ನು ಪ್ರಶ್ನೆಗಳಿವೆ. ತೃತೀಯಾವಿಭಕ್ತಿ ನಿಮಗೆ ಕಾರಕವಷ್ಟೆ? ಎರಡನೆಯ ವಾಕ್ಯದಲ್ಲಿ 'ಪಂಪನಿಂದ' –ಯಾವ ಕಾರಕ? ಮೊದಲನೆಯ ವಾಕ್ಯದಲ್ಲಿ ಕರ್ತೃವಾದ್ದರಿಂದ ಇಲ್ಲಿಯೂ ಕರ್ತೃವೆನ್ನಬೇಕು. ಇಲ್ಲಿ ತೃತೀಯಾ ಬಂದಿರುವುದರಿಂದ ಕರ್ತೃ ಕಾರಕವೆನ್ನಲಡ್ಡಿಯೇನು? ಕರಣವೆಂದರೆ ಕರ್ತೃತ್ವ ಹೋಗಿ ಕರಣತ್ವ ಬಂದದ್ದು ಹೇಗೆ? ಎರಡನೆಯ ವಾಕ್ಯದಲ್ಲಿ 'ಕಾವ್ಯವು'– ಯಾವ ಕಾರಕ? ಕರ್ಮವೆಂದರೆ ಪ್ರಥಮಾವಿಭಕ್ತಿ ಇರುವುದರಿಂದ ನಿಮಗೆ ಕಾರಕವಾಗದು! ಕರ್ಮವಲ್ಲವೆಂದರೆ ಮೊದಲಿನ ಕರ್ಮತ್ವವನ್ನು ಕಳೆದುಕೊಂಡದ್ದು ಹೇಗೆ? ಪ್ರಥಮೆ ಇರುವುದರಿಂದ ಇದು ಕರ್ತೃ ಎನ್ನುತ್ತೀರೇನು? ಯಥೇಚ್ಛವಾಗಿ ಆಡಿಸುವುದಕ್ಕೆ ಶಾಸ್ತ್ರವು ಕೀಲ್ಗೊಂಬೆಯಲ್ಲ.

ಕ್ರಿಯಾನ್ವಯಿತ್ವ ಅಥವಾ ಕ್ರಿಯಾನಿರ್ವರ್ತಕತ್ವ ಕಾರಕದ ಲಕ್ಷಣ. ಅದು ಕ್ರಿಯಾಜನಕ. ಧಾತ್ವರ್ಥದ ಪ್ರಧಾನಕ್ರಿಯೆ ಕರ್ತೃವಿನಲ್ಲಿರುತ್ತದೆ. ಆದ್ದರಿಂದ ಕರ್ತೃವೇ ಪ್ರಧಾನಕಾರಕ. ಅದು ಕಾರಕಗಳ ರಾಜ ಎಂದರೂ ಸಲ್ಲುವುದು. ಕರ್ಮಾದಿ ಕಾರಕಗಳೆಲ್ಲ ಕರ್ತೃವಿಗೇ ಅಧೀನ. ಕರ್ತೃವಿಲ್ಲದೆ ವಾಕ್ಯವೇ ಇಲ್ಲ. 'ಮಗು ನಿದ್ರಿಸುತ್ತದೆ, ಕಪ್ಪೆ ಕುಪ್ಪಳಿಸುತ್ತದೆ' –ಇಲ್ಲಿ ಕರ್ತೃ ಹೊರತಾಗಿ ಬೇರೆ ಕಾರಕಗಳೇ ಇಲ್ಲ. ಕಾರಕವಿಲ್ಲದ ವಾಕ್ಯವೂ ಇರುತ್ತದೆಯೊ?

ಪ್ರಥಮೆಯೂ ಕಾರಕ ವಿಭಕ್ತಿಯೇ. ಸಾಕ್ಷಾತ್ ಕಾರಕವಿಭಕ್ತಿಯಲ್ಲದಿದ್ದರೂ ಪರ್ಯಾಯವಾಗಿ ಕಾರಕವಿಭಕ್ತಿಯಾಗುತ್ತದೆ. ಹೇಗೆಂದರೆ, ಕರ್ತರಿ ಪ್ರಯೋಗದಲ್ಲಿ ಕರ್ತೃವೂ ಕರ್ಮಣಿ ಪ್ರಯೋಗದಲ್ಲಿ ಕರ್ಮವೂ ತಿಙ್ (ಆಖ್ಯಾತ) ಪ್ರತ್ಯಯದ ಅರ್ಥ. ಈ ಕರ್ತೃಕರ್ಮಗಳಿಗೂ ಪ್ರಥಮಾಂತಕ್ಕೂ ಅಭೇದಾನ್ವಯ. ಕರ್ತೃ ಕರ್ಮಗಳಿಂದ ಅಭಿನ್ನವಾದ್ದರಿಂದ ಪ್ರಥಮಾಂತವು ಕರ್ತೃವೂ ಕರ್ಮವೂ ಆಗುತ್ತದೆ. 'ನರಪತಿ ಬಂದಂ' –ಇಲ್ಲಿ ನರಪತಿ ಕರ್ತೃ. 'ನರಪತಿಯಿಂ ಆನೆ ಏರಲ್ಪಟ್ಟಿತು' –ಇಲ್ಲಿ ಆನೆ ಕರ್ಮ. ಆದ್ದರಿಂದ ಪ್ರಥಮೆಯೂ ಕಾರಕವಿಭಕ್ತಿಯೆಂದು ಮಹಾಭಾಷ್ಯದಲ್ಲಿ ವ್ಯವಹೃತವಾಗಿದೆ. ಹೆಚ್ಚಿನ ವಿವರಗಳಿಗೆ ಲಘುಮಂಜೂಷಾ, ಶಬ್ದೇಂದುಶೇಖರಗಳ ಕಾರಕಪ್ರಕರಣವನ್ನು ನೋಡಬಹುದು.

ಷಷ್ಠಿಯು ಕಾರಕವಿಭಕ್ತಿಯಲ್ಲವೆನ್ನುವುದು ಅರ್ಧಸತ್ಯ. ಷಷ್ಠಿಯ ಅರ್ಥ ಸಂಬಂಧವಾದರೆ, ಕ್ರಿಯಾನ್ವಯವಿಲ್ಲವಾದ್ದರಿಂದ ಕಾರಕವಲ್ಲ. ಸಂಬಂಧವು ನಾನಾ ವಿಧ. ಸ್ವಾಮಿತ್ವ ಒಂದೇ ಅಲ್ಲ. 'ರಾಜನ ಸೇವಕ' –ಇಲ್ಲಿ ಸ್ವಾಮಿತ್ವದ ಸಂಬಂಧ. 'ದಶರಥನ ಮಗ' –ಇಲ್ಲಿ ಜನ್ಯಜನಕಭಾವ ಸಂಬಂಧ. 'ಮರದ ಕೊಂಬೆ' –ಇಲ್ಲಿ ಅವಯವಾವಯವಿಭಾವ. 'ನದಿಯ ದಡ' –ಇಲ್ಲಿ ಸಾಮೀಪ್ಯವೇ ಸಂಬಂಧ. 'ಶಬ್ದದ ಅರ್ಥ' ಇಲ್ಲಿ ವಾಚ್ಯವಾಚಕ ಸಂಬಂಧ. (ಕೇಶಿರಾಜನ ೧೪೩ನೆಯ ಸೂತ್ರವನ್ನು

ನೋಡಿ) 'ಏಕಶತಂ ಷಷ್ಠ್ಯರ್ಥಾಃ' ಎಂದಿದ್ದಾನೆ ಮಹಾಭಾಷ್ಯಕಾರ. ನೂರೊಂದು ಷಷ್ಠ್ಯರ್ಥಗಳಿವೆಯಂತೆ. ಮೇಲ್ಕಂಡ ಉದಾಹರಣೆಗಳಲ್ಲಿ ಷಷ್ಠಿಯು ಕಾರಕವಲ್ಲ.

ಕರ್ತೃತ್ವ, ಕರ್ಮತ್ವ –ಎಂಬೆರಡು ಅರ್ಥಗಳೂ ಷಷ್ಠಿಗೆ ಉಂಟು. ಕೃದಂತದ ಯೋಗವಿದ್ದಾಗ ಕರ್ತೃಕರ್ಮವಾಚಕಗಳಿಗೆ ಷಷ್ಠೀವಿಭಕ್ತಿ ಬರುತ್ತದೆ. '**ಕರ್ತೃಕರ್ಮಣೋಃ ಕೃತಿ**' ಎಂದು ಪಾಣಿನಿ ಸೂತ್ರ. ಇದು ಕನ್ನಡದಲ್ಲಿಯೂ ಸಮಾನ.

ಉದಾ:

೧) ದೇವದತ್ತನ ಘಟದ ಮಾಟ್ಕೆ
ಇಲ್ಲಿ ದೇವದತ್ತ ಕರ್ತೃ, ಘಟ ಕರ್ಮ ಎಂಬುದು ಸ್ಪಷ್ಟ.

೨) ದೇವದತ್ತನ ನಿದ್ರೆ
ಇಲ್ಲಿ ದೇವದತ್ತ ಕರ್ತೃ. (ಭಟ್ಟಾಕಳಂಕನ ೨೨೫ನೇ ಸೂತ್ರವನ್ನು ನೋಡಿ)

೩) ಕಾಳಿದಾಸನ ಕೃತಿ.
ಕಾಳಿದಾಸಕರ್ತೃಕವಾದ ಕೃತಿಯೆಂದರ್ಥ.

೪) ವಸ್ತ್ರದ ನಿರ್ಮಾಣ.
ವಸ್ತ್ರಕರ್ಮಕವಾದ ನಿರ್ಮಾಣಕ್ರಿಯೆಯೆಂದರ್ಥ.

ಕರ್ತೃ, ಕರ್ಮಾದಿ ಸಂಜ್ಞೆಗಳು ಬರುವುದಕ್ಕೆ ಕ್ರಿಯಾಪದವೇ ಇರಬೇಕೆಂಬ ನಿಯಮವಿಲ್ಲ. ಕೃದಂತವಿದ್ದರೂ ಬರುತ್ತದೆ. ಉಭಯತ್ರ ಧಾತುವಿದೆಯಷ್ಟೆ. ಧಾತ್ವರ್ಥ ಕ್ರಿಯೆ ಇದ್ದರೆ ಸಾಕು ಕಾರಕವಾಗುವುದಕ್ಕೆ.

'ಅಧೀಶ್ವರನಾ ದಯೆ ಸಾಲ್ಗುಂ' ಎಂಬ ಉದಾಹರಣೆಯನ್ನು (ಪ. ೧೧೫) ಈಗ ಪರೀಕ್ಷಿಸಬಹುದು. ದಯಧಾತುವಿನಿಂದ ನಿಷ್ಪನ್ನವಾದ ಕೃದಂತ ಶಬ್ದ ಕ್ರಿಯೆ. ವ್ಯಾಕರಣಪ್ರಕ್ರಿಯೆಯಂತೆ ಇದು ಕ್ರಿಯೆ. ಕರ್ತೃಭಾವದಿಂದ ಅಧೀಶ್ವರನಿಗೆ ದಯೆಯಲ್ಲಿ ಅನ್ವಯ ವಿವಕ್ಷಿತವಾದರೆ, ಅಧೀಶ್ವರಕರ್ತೃಕ ದಯೆ ಎಂದರ್ಥ. ಈ ಪಕ್ಷದಲ್ಲಿ ಷಷ್ಠಿ ಕಾರಕವಿಭಕ್ತಿ. ಅಧೀಶ್ವರನೇ ಕರ್ತೃ. ಹಾಗಲ್ಲದೆ ಸಂಬಂಧಸಾಮಾನ್ಯದಿಂದ ವಿವಕ್ಷಿತವಾದರೆ ಅಧೀಶ್ವರಸಂಬಂಧಿಯಾದ ದಯೆ ಎಂದಿಷ್ಟೇ ಅರ್ಥ. ಈ ಪಕ್ಷದಲ್ಲಿ ಷಷ್ಠಿ ಕಾರಕವಿಭಕ್ತಿಯಲ್ಲ. ಇದು ವಿವಕ್ಷಾಧೀನ. '**ವಿವಕ್ಷಾತಃ ಕಾರಕಾಣಿ ಭವಂತಿ**'. ಇದು ವ್ಯಾಕರಣದಲ್ಲಿ ಸುಪ್ರಸಿದ್ಧವಾದ ವಿಷಯ.

ಆದರೆ ಅಧೀಶ್ವರನ ಮನೆ, ಮರದ ಹಣ್ಣು, ನನ್ನ ಮಡದಿ –ಮೊದಲಾದ ಸ್ಥಳದಲ್ಲಿ ಕ್ರಿಯಾಶಬ್ದವಿಲ್ಲದ್ದರಿಂದ ಷಷ್ಠಿಯು ಎಂದಿಗೂ ಕಾರಕವಿಭಕ್ತಿ ಎನ್ನಿಸುವುದಿಲ್ಲ. ನಾಗವರ್ಮನು ಭಾಷಾಭೂಷಣದಲ್ಲಿ ಸ್ವಾಮ್ಯರ್ಥವನ್ನು ಕಾರಕವೆಂದಿರುವುದು ಪ್ರಾಮಾದಿಕ.

ಇನ್ನೊಂದು ಪ್ರಶ್ನೆ. ನಿಮ್ಮ ಮತದಂತೆ ಷಷ್ಠೀಕಾರಕಕ್ಕೆ ಹೆಸರೇನು? ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ –ಇವುಗಳಂತೆ ಈ ಕಾರಕದ ನಾಮ ಯಾವುದು?

ಅಲ್ಲಿಗೆ ಏಳು ವಿಭಕ್ತಿಗಳೂ ಕಾರಕವಿಭಕ್ತಿಗಳಾಗಬಹುದೆಂದು ಸಿದ್ಧವಾಯಿತು. ದಾತ್ವರ್ಥಕ್ರಿಯೆಯಲ್ಲಿ ಕರ್ತ್ರಾದಿಭಾವದಿಂದ ಅನ್ವಯವಿದ್ದರೆ ಕಾರಕ, ಹಾಗಿಲ್ಲದಿದ್ದರೆ ಕಾರಕವಲ್ಲ ಎಂದು ನಿಷ್ಕರ್ಷೆ. ಷಷ್ಠೀವಿಭಕ್ತಿಗೆ ವಿಶೇಷವೇನೂ ಇಲ್ಲ. ಇತರ ವಿಭಕ್ತಿಗಳೂ ಕಾರಕವಿಭಕ್ತಿಗಳಾಗದೆ ಇರಬಹುದು–

೧. ಪಂಪನನ್ನು ಹೊರತು ಉಳಿದವರಿಗೆ ಶಕ್ಯವಲ್ಲ.

'ಹೊರತು' ಶಬ್ದಯೋಗದಿಂದ ದ್ವಿತೀಯೆ ಬಂದಿದೆ. ಕರ್ಮವಿಲ್ಲವಾದ್ದರಿಂದ ಇದು ಕಾರಕವಿಭಕ್ತಿಯಲ್ಲ.

೨. ಅವನಿಗೆ ಒಳ್ಳೆಯ ಬುದ್ಧಿ ಇಲ್ಲ.
ಸಂಬಂಧಾರ್ಥದಲ್ಲಿ ಚತುರ್ಥೀ; ಕಾರಕವಿಭಕ್ತಿಯಲ್ಲ.

೩. ಮನೆಯಿಂದ ಹೊರಗೆ ಇದ್ದಾನೆ.
'ಹೊರಗೆ' ಶಬ್ದದ ಯೋಗದಿಂದ ತೃತೀಯೆ ಅಥವಾ ಪಂಚಮಿ; ಕಾರಕವಲ್ಲ.

೪. ಹುಡುಗನ ಪುಸ್ತಕ.
ಇಲ್ಲಿ ಷಷ್ಠೀವಿಭಕ್ತಿಕಾರಕವಲ್ಲ.

ಇರಲಿ. ಕರ್ತೃವು ಕಾರಕವೆಂಬುದೂ ಪ್ರಥಮೆಯು ಕಾರಕವಿಭಕ್ತಿಯೆಂಬುದೂ ವ್ಯಾಕರಣಸಿದ್ಧಾಂತ. ಇದನ್ನು ಕವಿರಾಜಮಾರ್ಗಕಾರನೂ ಒಪ್ಪಿಕೊಂಡಿದ್ದಾನೆನ್ನುವುದಕ್ಕೆ ಆಧಾರವನ್ನೂ ಕೊಡಬಹುದು. ಮುಂದೆ ೧೨೧ನೆಯ ಪದ್ಯದಲ್ಲಿ "ನರಪತಿಯುಂ ನೃಪಾಂಗನೆಯರುಂ ನೆರೆದಟ್ಟಿಯಿನಾಡಿ ಪೋದರ್, ಪರಿಜನಮುಂ ಮಹೋತ್ಸವದೊಳೊಂದಿದುದು' ಎಂಬಲ್ಲಿ ನರಪತಿ, ನೃಪಾಂಗನೆಯರ್, ಪರಿಜನ –ಇವು ಮೂರೂ ಕರ್ತೃಗಳೆಂಬುದು ಸ್ಪಷ್ಟ. ಇವುಗಳಿಗೆ 'ಕಾರಕಸಂಪದಮಂ ತುಗುಳ್ಚುಗುಂ' ಎಂದು ಹೇಳುತ್ತಾನೆ. ಇವು ಕಾರಕಗಳಲ್ಲದಿದ್ದರೆ ಈ ಮಾತು ಹೇಗೆ ಸಂಗತವಾಗುತ್ತದೆ?

'ಮಾಡಿಸುವವನು ಕಾರಕ, ಮಾಡುವವನು ಕಾರಕನಲ್ಲ' ಎಂದು ಹೇಳತಕ್ಕ ಮುಳಿಯ ತಿಮ್ಮಪ್ಪಯ್ಯನವರು 'ತಮ್ಮದೇ ಆದ ಜಾಣ್ಮೆಯಿಂದ' ಈ ರೀತಿ ಈ ಸಂದೇಹವನ್ನು ನಿವಾರಿಸಿದ್ದಾರಂತೆ– ಮೇಲ್ಕಂಡ ವಾಕ್ಯಗಳಲ್ಲಿ "ಸಮುಚ್ಚಯಪದಗಳ ಕೂಟದಿಂದ ಆಯಾ ಪದಗಳು ತಂತಮ್ಮ ಕರ್ತೃತ್ವನ್ನುಳಿದು ಕಾರಕಗಳೇ ಆಗಿ ಪರಿಣಮಿಸುವುದು ನ್ಯಾಯವಿದೆ ಎಂದರೆ ಕ್ರಿಯೆಯನ್ನು ಒಂದೊಂದಾಗಿ ಮಾಡಲಾರದೆ ಎರಡೂ ಕೂಡಿ ಮಾಡಿಸುವ ಕಾರಕತ್ವವನ್ನೊಂದಿದುವು ಎನ್ನಬೇಕು" (ಪು. ೧೭೮).

ಸರಿಯೇ. ಏಕವಚನದಲ್ಲಿ ಕಾರಕಗಲ್ಲದಿದ್ದರೂ ಬಹುವಚನದಲ್ಲಿ ಕಾರಕ ಎಂದಾಯಿತು! ಅಂತೂ 'ನರಪತಿ ಬಂದನ್' ಎಂಬಲ್ಲಿ ಏಕವಚನವಿರುವುದರಿಂದ ಅದು ಕಾರಕವಲ್ಲ ಎಂದು ತೀರ್ಮಾನ! ಆಡುವ ಕ್ರಿಯೆಯಲ್ಲೇನೋ ನೃಪತಿಯೂ ನೃಪಾಂಗನೆಯರೂ ಸಹಕರಿಸಿ 'ಮಾಡಿಸುವ' ಕ್ರಿಯೆ ನಡೆಯಿತೆಂದೇ ತಿಳಿಯೋಣ. ವಾಕ್ಯರಚನೆ ಹೀಗಿದ್ದರೆ– ನೃಪತಿಯುಂ ನೃಪಾಂಗನೆಯರುಂ ತಂತಮ್ಮ ಮನೆಗಳೊಳ್

ಬಟ್ಟೆಯುಟ್ಟರ್, ಉಂಡರ್, ಮಲಂಗಿದರ್ –ಎಂದು? ಈ ಕ್ರಿಯೆಗಳೂ ಅನ್ಯೋನ್ಯ ಸಹಕಾರದಿಂದ ನಡೆದು 'ಮಾಡಿಸಿದವು' ಆಗುತ್ತವೆಯೆಂದು ತಿಳಿಯೋಣವೆ?

ಇಷ್ಟೆಲ್ಲ ತಿರುವುಮುರುವಾಗಿ ವ್ಯಾಖ್ಯಾನ ಮಾಡುವುದಕ್ಕೆ ಕವಿರಾಜಮಾರ್ಗದ ಪದ್ಯಗಳಲ್ಲಿರುವ ವಿರೋಧವಾದರೂ ಏನು? ನಾವು ಹಿಂದೆ ಹೇಳಿದ ಕ್ರಮದಿಂದಲೂ ಸಂಸ್ಕೃತವ್ಯಾಕರಣಕ್ರಮದಿಂದಲೂ ಕರ್ಮವೇ ಮೊದಲನೆಯ ಕಾರಕವಾದ್ದರಿಂದ 'ಕಾರಕಾಮಾಱು ಕರ್ಮಕರಣಾದಿಕದಿಂ' ಎಂದು ಗ್ರಂಥಕಾರನು ಹೇಳಿದ್ದಾನೆ. ವಿಭಕ್ತಿ ಕ್ರಮದಲ್ಲಿ ಪ್ರಥಮಾವಿಭಕ್ತಿಯೇ ಮೊದಲಿನದಾದ್ದರಿಂದ 'ಪ್ರಥಮಾದಿ ಭೇದ ನಿರ್ಧಾರಣದಿಂದ' ಎಂದು ಹೇಳಿ ಅಂತೆಯೇ ಉದಾಹರಿಸಿದ್ದಾನೆ. ಇಲ್ಲಿ ವಿರೋಧ ವೇನಿದೆ? ಯಾವ ಕಾರಕಕ್ಕೆ ಯಾವ ವಿಭಕ್ತಿಯೆಂಬುದನ್ನು ವ್ಯಾಕರಣದಿಂದ ನಿರ್ಣಯಿಸಿ ಕೊಳ್ಳಬೇಕು. ಅದನ್ನೆಲ್ಲ ವಿವರಿಸಲು ಇದೇನು ವ್ಯಾಕರಣಶಾಸ್ತ್ರವೆ? ಹಾಗೆ ನೋಡಿದರೆ ಕಾರಕಗಳಲ್ಲದಿದ್ದರೂ ದ್ವಿತೀಯಾದಿ ವಿಭಕ್ತಿಗಳು ಬರುತ್ತವೆಯೆಂದು ನಾವು ತೋರಿಸಿದ್ದೇವೆ. ಇದನ್ನು ಗ್ರಂಥಕಾರನು ಹೇಳದಿದ್ದರಿಂದ ನ್ಯೂನತೆಯಾಗಲಿಕ್ಕಿಲ್ಲವೆ? ಈ ವಿಷಯದಲ್ಲಿ ಗ್ರಂಥಕಾರನ ಇಚ್ಛೆಯೇ ನಿಯಾಮಕ. ಷಷ್ಠಿಯೂ ಕಾರಕ ವಿಭಕ್ತಿಯಾಗಬಹುದೆಂದು ತೋರಿಸಿದ್ದೇವೆ. ಅರ್ಥಾಲಂಕಾರಗಳಲ್ಲಿ ಉಪಮೆಯೇ ಸರ್ವಮೂಲವೂ ಪ್ರಧಾನವೂ ಆದ ಅಲಂಕಾರ. ರೂಪಕವು ಉಪಮಾಜನ್ಯವಾದದ್ದು. ಈ ಗ್ರಂಥಕಾರನು ರೂಪಕವನ್ನು ಹೇಳಿದ ಮೇಲೆ ಎಲ್ಲಿಯೋ ಒಂದು ಕಡೆ ಉಪಮೆಯನ್ನು ವಿವರಿಸಿದ್ದಾನೆ. ಇಲ್ಲಿ ವಿರೋಧ ಕಾಣದೆ? 'ನಿದರ್ಶನಾ'ಲಂಕಾರ ಎಂದು ಪ್ರಾರಂಭಿಸಿ 'ದೃಷ್ಟಾಂತ' ಎಂದು ಮುಗಿಸಿದ್ದಾನೆ. ಇದು ವಿರುದ್ಧವಲ್ಲವೆ? 'ಸಮಾಹಿತ'ವನ್ನು ಗುಣವೆಂದೂ ಅಲಂಕಾರವೆಂದೂ ವಿರುದ್ಧವಾಗಿ ಹೇಳುತ್ತಾನೆ (ಪು. ೬೯).

ವಸ್ತುಸ್ಥಿತಿಯೇನೆಂದರೆ, ಕನ್ನಡದ ಅಲಂಕಾರವ್ಯಾಕರಣಲಕ್ಷಣಗ್ರಂಥಗಳೆಲ್ಲವೂ (ಭಟ್ಟಾಕಳಂಕನ ಶಬ್ದಾನುಶಾಸನವೊಂದನ್ನು ಹೊರತಾಗಿಸಿ) ಸಾಮಾನ್ಯರೂಪದಲ್ಲಿ ಬರೆದವು. ಈ ಲಾಕ್ಷಣಿಕರು ಹೇಳುವ ಲಕ್ಷಣಗಳು ಕೇವಲ ಪರಿಚಯಾತ್ಮಕವಾದವು. ಅವ್ಯಾಪ್ತಿ, ಅತಿವ್ಯಾಪ್ತಿ ದೋಷಗಳಿಂದ ಇವು ಮುಕ್ತವಾಗಿಲ್ಲ. ಏಕೆಂದರೆ, ಸಾಮಾನ್ಯ ಜ್ಞಾನವನ್ನು–ಪರಿಚಯವನ್ನು ಮಾಡಿಕೊಡುವುದು ಮಾತ್ರ ಇವರ ಉದ್ದೇಶವಾಗಿತ್ತು. ಇವುಗಳಲ್ಲಿ ಅತಿಯಾದ ತರ್ಕವನ್ನು ಬಳಸಬಾರದು. ವಿದ್ವಾಂಸರು ಬರಿಯ ಊಹೆ ಯಿಂದ ಪರಮ ಸಿದ್ಧಾಂತವನ್ನೇ ಅಲ್ಲಗಳೆಯುವುದು ಸರಿಯಲ್ಲ.

ಜಾತ್ಯೇಕವಚನ ವಿಚಾರ

೬. ಜಾತಿವಿಭಾಗಮಮಂ ಬಗೆದು ಪೇೞೆ ಬಹುತ್ವಮನೇಕವಾಕ್ಯ –ಸಂ-
ಜಾತ–ಗುಣಂ ತದೇಕವಚನಂಗಳೊಳುಂ ದೊರೆವೆತ್ತು ಕೂಡುಗುಂ ।
ಮಾತಿನೊಳೇನೊ ಸಂಖ್ಯೆಗಳೊಳೇಕ–ಬಹುತ್ವ–ವಿಪರ್ಯಯಕ್ಕಸಂ-
ಖ್ಯಾತಗುಣಂ ವಿಕಲ್ಪಮದು ಕನ್ನಡದೊಳ್ ಗುಣಮಂ ತಗುಳ್ಚುಗುಂ ॥
— (ಪ. ೧೯೯ –ಪು. ೩೨)

ಜಾತ್ಯೇಕವಚನ ಇಲ್ಲಿ ಪ್ರಸ್ತುತ. ಡಾ| ಕೆ. ಕೃಷ್ಣಮೂರ್ತಿ ಅವರ ಅರ್ಥವಿವರಣೆ ಹೀಗಿದೆ: "[ಕರ್ತೃವಾದ ನಾಮಪದ] 'ಜಾತಿ' ಅಥವಾ ಸಾಮಾನ್ಯವೆಂದು (ವಿವಕ್ಷಿಸದೆ) ಅದರ ಪ್ರತ್ಯೇಕ ವ್ಯಕ್ತಿಯನ್ನು ಕುರಿತಿದ್ದರೆ ಅನೇಕ ಅಥವಾ ಬಹುವಚನದ ವಾಕ್ಯಕ್ರಿಯೆ ಗುಣವೇ ಆಗುವುದು; ಹಾಗಲ್ಲದೆ ಜಾತಿವಾಚಕವಾಗಿ (ಸಾಮಾನ್ಯವಿವಕ್ಷೆ) ಇರುವಾಗ ಏಕವಚನಪ್ರಯೋಗವೂ ಸರಿಯೇ ಎನಿಸುವುದು. ಸಂಖ್ಯೆಗಳ ಸಂಬಂಧವೊದಗಿದಾಗ ಜಾತಿವಾಚಕ ಪದಕ್ಕೆ ಏಕವಚನ ಬಹುವಚನಗಳ ವ್ಯತ್ಯಯ ಕೂಡ ವೈಕಲ್ಪಿಕವಾಗಿ ಅನಿರ್ದಿಷ್ಟವಿರುತ್ತದೆ. ಕನ್ನಡದಲ್ಲಿ ಅಂತಹ ವ್ಯತ್ಯಯವೂ ಗುಣವನ್ನೇ ಉಂಟು ಮಾಡುತ್ತದೆ."

ಈ ಅರ್ಥವಿವರಣೆ ಸರಿಯಾದೀತೆ?

೧. ಶಬ್ದದ ಅರ್ಥ ವ್ಯಕ್ತಿಯಾದಾಗ ಬಹುವಚನದಲ್ಲಿ ಬಹುತ್ವ ಬರುವುದು ಸಹಜವೇ. ಇಲ್ಲಿ ಹೇಳಬೇಕಾದ್ದಿಲ್ಲ. 'ಜಾತಿವಿಭಾಗಮಂ ಬಗೆದು ಪೇಟ್' ಎಂದಿರುವಾಗ ವ್ಯಕ್ತಿ ಪಕ್ಷದ ವಿವರಣೆಗೆ ಉತ್ಥಿತಿ ಎಲ್ಲಿ?

೨. 'ಬಹುವಚನದ ವಾಕ್ಯಕ್ರಿಯೆ' ಎಂಬ ಪದಪುಂಜದ ಅರ್ಥ ನಮಗಾಗಲಿಲ್ಲ.

೩. ಶಬ್ದದ ಅರ್ಥ ಜಾತಿಯಾದಾಗ ಏಕವಚನ ಬರುವುದು ಸಹಜವೇ. ಅದನ್ನೂ ಹೇಳಬೇಕಾದ್ದಿಲ್ಲ.

ಪ್ರೊ| ಎಂ.ವಿ.ಸೀ. ಅವರೂ ಇದರ ಅರ್ಥವನ್ನು ಸರಿಯಾಗಿ ಗ್ರಹಿಸಿದಂತೆ ಕಾಣುವುದಿಲ್ಲ (ಪು. ೧೭೪-೧೭೫).

ಮೊದಲು ತಿಳಿದಿರಬೇಕಾದದ್ದು ಇಷ್ಟು: ಶಬ್ದಕ್ಕೆ ಜಾತಿ ಮತ್ತು ವ್ಯಕ್ತಿ (ದ್ರವ್ಯ) ಎರಡರಲ್ಲೂ ಶಕ್ತಿಯಿದೆ. ಜಾತಿಯೆಂದರೆ ಅನೇಕ ವ್ಯಕ್ತಿಗಳಲ್ಲಿರುವ ಸಾಮಾನ್ಯಧರ್ಮ. ಇದನ್ನು ಸಾಮಾನ್ಯವೆಂದೂ ಕರೆಯುತ್ತಾರೆ. ವ್ಯಕ್ತಿಗಳು ಅನೇಕವಾದರೂ ಜಾತಿ ಒಂದೇ. ಮನುಷ್ಯರಲ್ಲಿ ಮನುಷ್ಯತ್ವ, ಕುದುರೆಗಳಲ್ಲಿ ಅಶ್ವತ್ವ, ಆನೆಗಳಲ್ಲಿ ಗಜತ್ವ, ಘಟಗಳಲ್ಲಿ ಘಟತ್ವ ಜಾತಿಯೆನಿಸುತ್ತದೆ. ಸಾಮಾನ್ಯವಾಗಿ ಶಬ್ದವು ವ್ಯಕ್ತಿಯನ್ನು ಬೋಧಿಸುತ್ತದೆ. ಕೆಲವೆಡೆ ಜಾತಿಯನ್ನು ಬೋಧಿಸುತ್ತದೆ. 'ಭಾವಪ್ರಧಾನೋ ನಿರ್ದೇಶಃ' ಎಂಬ ಘೋಷಣೆಯ ಅರ್ಥ ಇದೇ. ಈ ಪಕ್ಷದಲ್ಲಿ ಅಶ್ವ ಎಂದರೆ ಅಶ್ವತ್ವ ಎಂದರ್ಥ. 'ಅಶ್ವ ಓಡಿತು' ಎಂದಾಗ ಅಶ್ವತ್ವ ಓಡುವುದಿಲ್ಲವಾದ್ದರಿಂದ ವ್ಯಕ್ತಿದ್ವಾರಾ ಕ್ರಿಯೆಯಲ್ಲಿ ಅನ್ವಯ ಎಂದು ಈ ಪಕ್ಷದ ಸಿದ್ಧಾಂತ.

ಪ್ರತಿನಿತ್ಯದ ವ್ಯವಹಾರದಲ್ಲಿ ಜಾತಿಪಕ್ಷವನ್ನಾಶ್ರಯಿಸಿ ಮಾತನಾಡುತ್ತೇವೆ. 'ಮನುಷ್ಯನು ತಪ್ಪು ಮಾಡುವುದು ಸಹಜ' –ಈ ವಾಕ್ಯವನ್ನು ಗಮನಿಸಬೇಕು. ಸಕಲ ಮನುಷ್ಯರೂ ತಪ್ಪು ಮಾಡುತ್ತಾರೆ –ಎಂಬುದು ವಿವಕ್ಷಿತಾರ್ಥ. ಆದರೆ 'ಮನುಷ್ಯನು' ಎಂದು ಏಕವಚನವಿದೆಯಲ್ಲ? ಆದ್ದರಿಂದ ಇಲ್ಲಿ ಮನುಷ್ಯ ಶಬ್ದಕ್ಕೆ 'ಮನುಷ್ಯತ್ವ' ಎಂದರ್ಥ. 'ಎಲ್ಲೆಲ್ಲಿ ಮನುಷ್ಯತ್ವ ಇದೆಯೋ ಅಲ್ಲೆಲ್ಲ ತಪ್ಪುಮಾಡುವುದಿದೆ' ಎಂದು ತಾತ್ಪರ್ಯವಾಗುತ್ತದೆ. 'ಕುದುರೆಗೆ ಬಾಲವಿದೆ. ಆನೆಗೆ ಸೊಂಡಿಲಿದೆ' ಮೊದಲಾದದ್ದೆಲ್ಲ

ಜಾತಿಪಕ್ಷವನ್ನವಲಂಬಿಸಿದ ಪ್ರಯೋಗ. ಜಾತಿಯು ಒಂದೇ ಆದ್ದರಿಂದ ಏಕವಚನವೇ ಬರಬೇಕು. ಹಾಗಾದರೆ 'ಮನುಷ್ಯರು ತಪ್ಪು ಮಾಡುತ್ತಾರೆ, ಕುದುರೆಗಳಿಗೆ ಬಾಲವಿದೆ' ಮುಂತಾದ ಪ್ರಯೋಗವಿದೆಯಲ್ಲ, ಇಲ್ಲಿ ಬಹುವಚನ ಹೇಗೆ? ಎಂಬುದು ಈಗ ಬಂದಿರುವ ಪ್ರಶ್ನೆ. 'ಜಾತ್ಯಾಖ್ಯಾಯಾ ಮೇಕಸ್ಮಿನ್ ಬಹುವಚನಮನ್ಯತರಸ್ಯಾಂ' ಎಂಬ ಪಾಣಿನಿಸೂತ್ರ (೧-೨-೫೮) ಹೊರಟಿರುವುದು ಇದಕ್ಕಾಗಿ. ವ್ಯಕ್ತಿಪಕ್ಷದಲ್ಲಿ ಈ ಪ್ರಶ್ನೆಯೇ ಇಲ್ಲ. ಬಹುತ್ವವಿವಕ್ಷಿತ ವಾದರೆ ಬಹುವಚನ ಬಂದೇ ಬರುತ್ತದೆ. ಜಾತಿಯು ಒಂದೇ ಆದ್ದರಿಂದ ಬಹುವಚನ ಸಾಧುವೆ? -ಎಂಬುದಕ್ಕೆ ಉತ್ತರವಾಗಿ ಮಾರ್ಗಕಾರನ ಲಕ್ಷಣ ಹೊರಟಿದೆ.

ಪದ್ಯದ ಅರ್ಥವಿವರಣೆ:

"ಜಾತಿಯು ವಾಚ್ಯವೆಂಬ ಅಭಿಪ್ರಾಯದಿಂದ ಶಬ್ದವನ್ನು ಹೇಳಿದಾಗ ಬಹುವಚನ ಬರಬಹುದು. ಹೇಗೆಂದರೆ, ಇದು ಪ್ರಾಚೀನರ ಹಲವಾರು ವಾಕ್ಯಪ್ರಯೋಗಗಳಿಂದ ಗುಣವೆಂದು ಸಿದ್ಧವಾಗಿದೆ. (ಶಿಷ್ಟರ ಪ್ರಯೋಗವನ್ನನುಸರಿಸಿ ವ್ಯಾಕರಣ ನಿಯಮ.) ಈ ಬಹುವಚನವು ಜಾತ್ಯೇಕವಚನಕ್ಕೆ ಸರಿಸಮವಾಗಿ ಕೂಡಿಕೊಳ್ಳುತ್ತದೆ. (ಬಹುವಚನಕ್ಕೆ ಏಕವಚನದ ಅರ್ಥವೇ.) ಇದು ಏಕ, ಇದು ಅನೇಕ -ಎಂದು ಸಂಖ್ಯಾವಿಷಯವಾಗಿ ಇಲ್ಲಿ ಆಕ್ಷೇಪದ ಮಾತನ್ನೆತ್ತುವುದು ಬೇಡ. ಏಕತ್ವ ಬಹುತ್ವಗಳ ವೈಪರೀತ್ಯವೂ ಇಲ್ಲಿ ಬರುತ್ತದೆ. (ಕರ್ತೃವು ಏಕವಚನದಲ್ಲಿದ್ದರೆ ಕ್ರಿಯಾಪದವು ಬಹುವಚನದಲ್ಲಿಯೂ ಇರುತ್ತದೆ.) ಇದು ಹೆಚ್ಚಿನ ಗುಣವೇ ಹೊರತು ದೋಷವಲ್ಲ. ಜಾತಿವಾಚಕದ ಮೇಲೆ ಬಹುವಚನ ಬರುವುದು ವಿಕಲ್ಪವಾಗಿ. ಈ ವೈಪರೀತ್ಯವು ಕನ್ನಡದಲ್ಲಿ ಗುಣವನ್ನೇ ಉಂಟುಮಾಡುತ್ತದೆ."

ಉದಾ: ೧. ಕುದುರೆ ಆ ದಿಕ್ಕಿನ ಬಿಲ್ಲಾಳ್ಗಳನ್ನು ತಾಗಿದುವು.

(ಮುಂದಿನ ಪದ್ಯದಲ್ಲಿ ವೈಪರೀತ್ಯಕ್ಕೆ ಮಾತ್ರ ಈ ಉದಾಹರಣೆಯನ್ನು ಕೊಟ್ಟಿದ್ದಾನೆ. ಇನ್ನೆರಡನ್ನು ನಾವು ಊಹಿಸಿಕೊಳ್ಳಬೇಕು.)

೨. ಕುದುರೆ ತಾಗಿತು.

೩. ಕುದುರೆಗಳು ತಾಗಿದುವು.

ಮುಂದಿನ ಉದಾಹರಣಪದ್ಯದ ಉತ್ತರಾರ್ಧ ಹೀಗಿದೆ-

> **ಕುದಿಕುದಿದತ್ತಣಿಂ ಕುದುರೆನೂಱಱೊಳಾ ಬಲದಾನೆ ಪತ್ತು ತಾ-**
> **ಗಿದುವೆನೆ ದೋಷಮಾ ಪಿರಿದು ಸಂಖ್ಯೆಯೊಳೇಕಬಹುತ್ವಸಂಗದಿಂ ॥**

— (ಪ. ೧೨೦)

ಪೂರ್ವಾರ್ಧದಲ್ಲಿ ಹೇಳಿದ್ದು ಜಾತ್ಯೇಕವಚನದ ಗುಣ ಮತ್ತು ಉದಾಹರಣೆ. ಈಗ ಹೇಳುತ್ತಿರುವುದು ಅದರಲ್ಲಿಯ ಒಂದು ದೋಷ. ಪದ್ಯದ ಅರ್ಥ ಸ್ಪಷ್ಟವಾಗಿದೆ. ಇದನ್ನು ವಿವರಿಸುತ್ತ ಡಾ॥ ಕೆ. ಕೃಷ್ಣಮೂರ್ತಿ ಅವರು "ಕುದುರೆನೂರರಲ್ಲಿ ಸೈನ್ಯದ ಹತ್ತು ಆನೆ ತಾಗಿದುವು ಎಂದರೆ ಗುಣವಲ್ಲ, ದೋಷವೇ. ಏಕೆಂದರೆ, ಒಂದೇ

ಬಹುತ್ವವಾಚಕವಾದ ಸಂಖ್ಯೆಯಲ್ಲಿ ಏಕವಚನ-ಬಹುವಚನಗಳೆರಡೂ ಸೇರಿಕೊಂಡು ಬಂದಿವೆ" ಎಂದು ಬರೆದು 'ಹತ್ತು ಆನೆ' ಎಂದು ಮಾಡಿಕೊಂಡ ಮೇಲೆ 'ತಾಗಿತು' ಎಂಬ ಏಕವಚನ ಕ್ರಿಯೆಯೇ ಅಗತ್ಯ" ಎಂದು ಹೇಳಿದ್ದಾರೆ (ಪು. ೩೨).

ಪ್ರೊ। ಎಂ.ವಿ.ಸೀ. ಅವರ ಅಭಿಪ್ರಾಯವೂ ಹೀಗೆಯೇ ಇದೆ. ಆದರೆ "ಮೇಲ್ಕಂಡ ಗುಣವನ್ನು ವಿಕಲ್ಪವಾಗಿ ಹೊಂದಬಹುದೇ ಹೊರತು ಸಾಮಾನ್ಯವಾಗಿ ದೋಷವೆ ಎನಿಸುವುದು" ಎಂದು ಬರೆದಿದ್ದಾರೆ (ಪು. ೧೭೫). ಗುಣದೋಷಗಳಲ್ಲಿ 'ವಿಕಲ್ಪ' ಎಂಬುದಾಗಲಿ, 'ಸಾಮಾನ್ಯವಾಗಿ ದೋಷ' ಎಂಬುದಾಗಲಿ ಇರಲಾರದು. ಗುಣವಾದರೆ ಗುಣ, ಇಲ್ಲವಾದರೆ ದೋಷ. ಇವುಗಳಿಗೆ 'ವಿಕಲ್ಪ' ಎಂದರೇನು? 'ಸಾಮಾನ್ಯವಾಗಿ ದೋಷ' ಎಂದು ಯಾವ ಲಾಕ್ಷಣಿಕನೂ ಹೇಳುವುದಿಲ್ಲ.

ಈರ್ವರು ವಿದ್ವಜ್ಜನರ ವಿವರಣೆಯೂ ಸರಿಯಾಗದು. 'ಆನೆ ತಾಗಿದುವು' ಎಂಬುದು ಗುಣವಾದರೆ, 'ಹತ್ತು ಆನೆ ತಾಗಿದುವು' ಎಂಬುದೇಕೆ ಗುಣವಲ್ಲ? 'ಹತ್ತು' ಎಂದು ವಿಶೇಷಿಸಿದ್ದರಿಂದ ಆದ ಬಾಧಕವೇನು? 'ಏಕಬಹುತ್ವಸಂಗ' 'ಆನೆ ತಾಗಿದುವು' ಎಂಬಲ್ಲಿಯೂ ಇದೆ. ಮತ್ತು ಈರ್ವರೂ 'ಕುದುರೆ ನೂಱುಱೊಳ್' ಎಂಬುದನ್ನು ಲಕ್ಷ್ಯಕ್ಕೆ ತಂದುಕೊಂಡಿಲ್ಲ. ಇದೂ ಉದಾಹರಣೆಯಾಗದಿದ್ದಲ್ಲಿ 'ಆನೆಪತ್ತು' ಎಂದಂತೆ 'ಕುದುರೆನೂಱು' ಎನ್ನುವುದಕ್ಕೆ ನಿಮಿತ್ತವಿಲ್ಲದೆ ಹೋಗುತ್ತದೆ. 'ಪ್ರಬಲ ಸೈನ್ಯದೊಳ್' ಎಂದರೂ ನಡೆಯುತ್ತಿತ್ತು.

ಅಶ್ವತ್ವಾದಿ ಜಾತಿಯು ಒಂದೇ ಆದ್ದರಿಂದ ಅದು ವಿವಕ್ಷಿತವಾದಾಗ ಏಕವಚನವು ಸಹಜವೇ ಎಂದು ಹಿಂದೆ ನಿರೂಪಿಸಿದ್ದಾಗಿದೆ. ಈ ವಿವಕ್ಷೆ ವಕ್ತೃವಿನ ಅಧೀನ. ಆದರೂ ಹತ್ತು, ನೂರು ಮೊದಲಾದ ಬಹುತ್ವದ ಸಂಖ್ಯಾವಾಚಿ ವಿಶೇಷಣವಾಗಿದ್ದಾಗ ಜಾತಿಯ ವಿವಕ್ಷೆಯೇ ಕೂಡದು. ಆಗ ವ್ಯಕ್ತಿಪರವಾದ ವಿವಕ್ಷೆಯೇ ಇರಬೇಕು. ಏಕೆಂದರೆ, ಜಾತಿಯಲ್ಲಿ ಬಹುತ್ವಸಂಖ್ಯೆ ಬಾಧಿತವಾಗುತ್ತದೆ. ಪಿರಿದು ಸಂಖ್ಯೆಯ ವಿಷಯದಲ್ಲಿ ಏಕತ್ವ-ಬಹುತ್ವಸಂಗವೆಂಬ ವಿರೋಧವಿರುವುದ ರಿಂದ 'ಪತ್ತು ಆನೆ' ಎಂಬ ಪ್ರಯೋಗ ತಪ್ಪು. 'ಪತ್ತು ಆನೆಗಳ್' ಎಂದಿರಬೇಕು. ಹಾಗೆಯೇ 'ಕುದುರೆನೂಱುಱೊಳ್' ಎಂಬುದು ತಪ್ಪು. 'ಕುದುರೆಗಳ್ ನೂಱುಱೊಳ್' ಎಂದಿರಬೇಕು -ಎಂಬ ಅರ್ಥವಿವರಣೆ ಸಮಂಜಸವೆಂದು ನಮ್ಮ ಅಭಿಪ್ರಾಯ. 'ಹುಡುಗರೈವರೊಳ್' ಎನ್ನಬಹುದು. 'ಹುಡುಗನೈವರೊಳ್' ಎನ್ನಬಹುದೊ? 'ಹತ್ತು ರಾಜನು, ನೂರು ಮನುಷ್ಯನು' ಎಂಬುದು ಸಾಧುಪ್ರಯೋಗವೆಂದು ಯಾರೂ ಹೇಳಲಾರರು.

ಆದರೆ ಕೇಶಿರಾಜನು 'ಪತ್ತು ದೆಸೆ-ಪತ್ತು ದೆಸೆಗಳ್, ನಾಲ್ಕು ಯುಗಂ -ನಾಲ್ಕು ಯುಗಂಗಳ್' ಎಂದೂ (ಸೂ. ೧೫೦) ಭಟ್ಟಾಕಳಂಕನು 'ಈರೇೞು ಲೋಕಂಗಳ್ -'ಈರೇೞು ಲೋಕಂ' (ಸೂ. ೩೨೬) ಎಂದೂ ಉದಾಹರಿಸಿ, ಇಲ್ಲಿ ಏಕವಚನವನ್ನೂ ವಿಕಲ್ಪವಾಗಿ ಅಂಗೀಕರಿಸಿದ್ದಾರೆ. ಇದೂ ಸಹ ನಪುಂಸಕ ಲಿಂಗದ ಶಬ್ದಗಳಿಗೆ ಮಾತ್ರ

ಸೀಮಿತವೆಂದು ತೋರುತ್ತದೆ. ಇಲ್ಲದಿದ್ದರೆ 'ನೂರು ಮನುಷ್ಯನು' 'ಮೂವರು ಭಾರ್ಯೆ' –ಈ ಪ್ರಯೋಗವೂ ಸಾಧುವೆಂದು ಒಪ್ಪಬೇಕಾದೀತು.

ಕವಿರಾಜಮಾರ್ಗಕಾರನ ತರುವಾಯ ಸಂಖ್ಯಾವಾಚಿ ಇದ್ದಾಗಲೂ ಜಾತ್ಯೇಕ ವಚನವನ್ನು ಕವಿಗಳು ಬಳಸಿರಬೇಕು. ಇದನ್ನು ಅನುಲಕ್ಷಿಸಿ ಮುಂದಿನ ವೈಯಾ ಕರಣರು ಸ್ವಲ್ಪ ಮಾರ್ಪಾಟನ್ನು ಮಾಡಿರಬಹುದು. ಮಾರ್ಗಕಾರನಿಗೂ ಕೇಶಿರಾಜ ನಿಗೂ ನಾನೂರು ವರ್ಷಗಳ ಅಂತರವಿದೆ. ಪ್ರಯೋಗದ ಸ್ವಲ್ಪ ಬದಲಾವಣೆಗೆ ಇಷ್ಟು ಸಮಯ ಸಾಕು. ಇದನ್ನು ವಿದ್ವಾಂಸರು ತೀರ್ಮಾನಿಸಬೇಕು. ವಾಸ್ತವದಲ್ಲಿ ಪತ್ತು ದೆಸೆ, ನಾಲ್ಕು ಯುಗಂ –ಎಂಬುದು ಸಮಾಹಾರದ್ವಿಗುವೆಂದು ಅಂಗೀಕರಿಸುವುದು ಯುಕ್ತ. ಸಂಸ್ಕೃತದಲ್ಲಿಯೂ ಸಮಾಹಾರದ್ವಿಗುವಾದರೆ 'ದಶದಿಶಂ' 'ಚತುರ್ಯುಗಂ' ಎಂದು ಏಕವಚನ ಬರುತ್ತದೆ.

ಸಮುಚ್ಚಯ

೭. ಬೆರೆಸಿರೆ ಮುಂ ಸಮುಚ್ಚಯ ಪದ ದ್ವಿತಯೋಕ್ತಿ..... ॥

— (ಪ. ೧೨೧ -ಪು. ೩೩)

ಒಂದೇ ವಾಕ್ಯದಲ್ಲಿ ಎರಡು (ಅಥವಾ ಅಧಿಕ) ಕಾರಕಗಳು (ಕರ್ತೃ ಮತ್ತು ಕರ್ಮ) ಸಮುಚ್ಚಿತವಾಗಿದ್ದರೆ, ಅವುಗಳಿಗೆ ಅನ್ವಯಿಸುವ ಕ್ರಿಯಾಪದವು ಬಹುವಚನದಲ್ಲಿರಬೇಕೆಂದು ಈ ನಿಯಮದ ತಾತ್ಪರ್ಯ. ಕಾರಕ ಸಂಪದ=ಕಾರಕಗಳ ಬಾಹುಲ್ಯ; ಬಹುವಚನವೆಂದರ್ಥ.

ಉದಾ: ನರಪತಿಯುಂ ನೃಪಾಂಗನೆಯರುಂ ನೆರೆದಟ್ಟೆಯಿನಾಡಿ ಪೋದರ್.

ಇಲ್ಲಿ '.....ನೃಪಾಂಗನೆಯುಂ' ಎಂದು ಏಕವಚನವಿದ್ದರೂ ಕ್ರಿಯಾಪದವು 'ಆಡಿ ಪೋದರ್' ಎಂದು ಬಹುವಚನದಲ್ಲೇ ಇರಬೇಕಾಗುತ್ತದೆ.

ಕಾರಕವೆಂದರೆ ಕರ್ತೃವೇ ಅಲ್ಲ, ಕರ್ಮವೂ ಆಗಬಹುದು.

ಉದಾ: ರಾಜನಿಂ ಮಂತ್ರಿಯುಂ ಸೇನಾಪತಿಗಳುಂ ಆಜ್ಞಾಪಿಸಲ್ಪಟ್ಟರ್.

ಅನುವಾದಕರ ವಿವರಣೆಯಲ್ಲಿ ಇಷ್ಟು ವಿಷಯಗಳು ಬಂದಿಲ್ಲ. ಅವರ ಅನುವಾದವು ಮೂಲ ಪದ್ಯಕ್ಕಿಂತ ಕಠಿಣವಾಗಿದೆ.

ಸಮುಚ್ಚಯವಿದ್ದರೂ ಕಾರಕವು ಭಿನ್ನವಾಕ್ಯದಲ್ಲಿದ್ದಾಗ ಬಹುವಚನ ಬರ ಬೇಕಾಗಿಲ್ಲ –ಉದಾ:

ಪರಿಜನಮುಂ ಮಹೋತ್ಸವದೊಳೊಂದಿದುದೆಂಬುದಿದಲ್ಪದೂಷಿತಂ ॥

'ನರಪತಿಯುಂ....' ಎಂಬುದರ ಮುಂದಿನ ವಾಕ್ಯವಿದು. 'ಪರಿಜನ' ಏಕವಚನವಾದ್ದರಿಂದ 'ಒಂದಿದುದು' ಎಂಬ ಕ್ರಿಯಾಪದ ಏಕವಚನದಲ್ಲೇ ಇದೆ. ಭಿನ್ನವಾಕ್ಯವಾದ್ದರಿಂದ 'ಕಾರಕಸಂಪದ' ಬಂದಿಲ್ಲ. ಇದು ದೋಷವಲ್ಲ.

'ಅಲ್ಪದೂಷಿತಂ' ಎಂಬುದನ್ನು ವಿವರಿಸುತ್ತ ಅನುವಾದಕರು ಇಲ್ಲಿ ವಚನಭೇದ 'ದೋಷಾಭಾವಕ್ಕೆ ಲಕ್ಷ್ಯವಲ್ಲ' ಎಂದು ಬರೆದಿದ್ದಾರೆ. ಈ ಬಳಸುಮಾತಿನಲ್ಲಿ ಎರಡು ನಿಷೇಧಾರ್ಥಕ ಶಬ್ದಗಳಿರುವುದರಿಂದ ಈ ವಚನಭೇದ 'ದೋಷಕ್ಕೆ ಲಕ್ಷ್ಯವೇ ಹೌದು' ಎಂದು ನಮಗೆ ಅರ್ಥವಾಗುತ್ತದೆ. ದೋಷವನ್ನು ಪರಿಹರಿಸುವುದು ಹೇಗೆ? 'ಪರಿಜನಮುಂ ಮಹೋತ್ಸವದೊಳೊಂದಿದುವು' ಎಂದು ಕ್ರಿಯಾಪದಕ್ಕೆ ಬಹುವಚನ ವನ್ನಿಡಬೇಕೆ? ಇಟ್ಟರೆ ಗುಣವೆಂದು ಅಭಿಪ್ರಾಯವಾಯಿತು! ಭಿನ್ನವಾಕ್ಯದ ಪ್ರಸ್ತಾವವೇ ಅನಾವಶ್ಯಕವಾಗಿತ್ತು. ಹೇಗಿದ್ದರೂ 'ಕಾರಕಸಂಪದಮಂ ತಗುಳ್ಚುಗುಂ' ಇದ್ದೇ ಇದೆಯಲ್ಲ.

ಪ್ರೊ| ಎಂ.ವಿ.ಸೀ. ಅವರು 'ಅಲ್ಪದೂಷಿತಂ' ಎಂಬುದನ್ನು ವಿವರಿಸುತ್ತ ಉಕ್ತವಾಕ್ಯದಲ್ಲಿ 'ಕಾಣಬರುವ ವಚನಸಂಬಂಧವಾದ ವ್ಯಾಕರಣದೋಷ ಅಲ್ಪ' ಎಂದು ಬರೆದಿದ್ದಾರೆ (ಪು. ೧೭೬). ಅಲ್ಪದೋಷವನ್ನಾದರೂ ಪರಿಹರಿಸುವುದು ಹೇಗೆ? ಕ್ರಿಯಾಪದವು ಬಹುವಚನದಲ್ಲಿರಬೇಕೆ?

ನಮ್ಮ ಪ್ರಶ್ನೆಗೆ ನಿಲುಕುವುದಿಷ್ಟು: ಭಿನ್ನವಾಕ್ಯವಾದರೆ ದೋಷವಲ್ಲವೆಂಬುದಕ್ಕೆ ಪದ್ಯದ ಕಡೆಯ ಸಾಲು ಉದಾಹರಣೆ. ಇದನ್ನೇ ಮಾರ್ಪಡಿಸಿ ಹೀಗೆ ಹೇಳೋಣ –"ನರಪತಿಯೂ ನೃಪಾಂಗನೆಯರೂ ಅರಮನೆಗೆ ಹೋದರು. ಜೊತೆಗೆ ಸೇವಕನೂ ಹೋದನು." ಇಲ್ಲಿ 'ಸೇವಕನೂ ಹೋದರು' ಎಂದಿರಬೇಕಾಗಿತ್ತೆ? ಇರುವ 'ಅಲ್ಪದೋಷ'ವಾದರೂ ಯಾವುದು?

ಅಲ್ಪಶಬ್ದವು ಪ್ರಕೃತದಲ್ಲಿ ನಿಷೇದಾರ್ಥಕ. ಅಲ್ಪಜ್ಞ–ಅಜ್ಞ ಎಂದರ್ಥ. ಅಲ್ಪಧನ–ಧನಹೀನ, ದರಿದ್ರ ಎಂದರ್ಥ. 'ಅಲ್ಪದೂಷಿತ'ವೆನ್ನುವುದಕ್ಕೆ ದೋಷರಹಿತ ಎಂದೇ ತಾತ್ಪರ್ಯ. ಅಥವಾ 'ಇದಲ್ತು ದೂಷಿತಂ' ಎಂದು ಪಾಠಾಂತರವನ್ನು ಕಲ್ಪಿಸಬೇಕು, ಬೇರೆ ಮಾರ್ಗವಿಲ್ಲ.

೮. "ಯಾವುದೇ ಒಂದು ಅಲಂಕಾರದಿಂದ ಜನಿಸಿದ್ದರೂ, ಅನ್ವಯಿಸಬೇಕಾದ ಅರ್ಥದಲ್ಲಿ (ಪದಗಳ) ಅನ್ವಯಸಂಬಂಧ ತುಂಬಾ ದೂರವಾಗಿ ಬಿಡುವುದಾದರೆ, ಅದು 'ವ್ಯವಹಿತ'ವೆಂಬ ದೋಷ." (ಪು. ೨೨)

ಅರ್ಥವಾಗಲಿ, ಅನ್ವಯವಾಗಲಿ 'ಯಾವುದೇ ಒಂದು ಅಲಂಕಾರದಿಂದ ಜನಿಸುತ್ತದೆ'ಯೆಂಬುದನ್ನು ನಾವು ಕೇಳಿಲ್ಲ. ಇದು ವಿಚಿತ್ರವಾದ ಅರ್ಥವಿವರಣೆ. 'ಸವಿಶೇಷಾಲಂಕಾರೋದ್ಭವಮಾಗಿಯುಮೊಂದುವರ್ಥದೊಳ್' ಎಂದು ಮೂಲವಿದೆ. ಉದ್ಭವ = ಉತ್ಪತ್ತಿಸ್ಥಾನ, ಅಲಂಕಾರಕ್ಕೆ ಉತ್ಪತ್ತಿಸ್ಥಾನವಾಗಿದ್ದರೂ –ಎಂದು ನಾವು ಹೇಳುವ ಅರ್ಥ. ಅಥವಾ ಅಲಂಕಾರದ ಉದ್ಭವ (ಉತ್ಪತ್ತಿ) ಯಾವುದರಿಂದಲೋ ಅದು. ಇದು ಅರ್ಥಕ್ಕೆ ಅಥವಾ ಅಧ್ಯಾಹೃತವಾದ ಕಾವ್ಯಕ್ಕೆ ವಿಶೇಷಣ. ಕಾವ್ಯವು ಗುಣಾಲಂಕಾರಗಳಿಂದ ಸುಂದರವಾಗಿದ್ದರೂ, 'ವ್ಯವಹಿತ'ವು ದೋಷವೇ ಎಂದು ತಾತ್ಪರ್ಯ.

ಕೆಲವು ದೋಷಗಳ ವಿಚಾರ

೯. ನ್ಯಾಯವಿರುದ್ಧ (ಪ. ೧೦೬ -ಪು. ೨೭)

'ಹೇತುವಿದ್ಯಾತ್ಮಕೋ ನ್ಯಾಯಃ' ಎಂದಿದ್ದಾನೆ ದಂಡಿ (೩-೧೬೩). ಅವನ ಪ್ರಕಾರ ಇಲ್ಲಿ ನ್ಯಾಯವೆಂದರೆ ತರ್ಕಶಾಸ್ತ್ರವೆನ್ನುವುದು ಸರಿಯೇ. ಆದರೆ ಮಾರ್ಗಕಾರನು 'ಸಮಯವಿರುದ್ಧ'ವನ್ನು ಹೇಳುವಾಗ-

'ಆ ಕಪಿಲ-ಸುಗತ-ಕಣಚರ-
ಲೋಕಾಯತಿಕಾದಿ-ಮಾರ್ಗಭೇದಂ ಸಮಯಂ' — (ಪ. ೧೦೫)

ಎಂದು ಹೇಳಿದ್ದಾನೆ. ಕಣಚರಮತವಾದ ವೈಶೇಷಿಕವು ತರ್ಕಶಾಸ್ತ್ರಕ್ಕೆ ಸೇರುತ್ತದೆ ಮತ್ತು 'ಲೋಕಾಯತಿಕಾದಿ' ಎಂದು ಆದಿಪದವಿರುವ ಪ್ರಯುಕ್ತ ತರ್ಕಶಾಸ್ತ್ರವನ್ನೆಲ್ಲ (ಜೈನ ತರ್ಕವನ್ನೂ ಸಹ) 'ಸಮಯ'ದಲ್ಲಿ ಸೇರಿಸುವುದು ಉತ್ತಮ. ಇಲ್ಲಿ ಮಾರ್ಗಕಾರನು **'ನ್ಯಾಯಃ ಶಾಸ್ತ್ರಂ ತ್ರಿವರ್ಗೋಕ್ತಿಃ ದಂಡನೀತಿಂ ಚ ತಾಂ ವಿದುಃ'** ಎಂದು ಹೇಳಿರುವ ಭಾಮಹನನ್ನು (೪-೩೯) ಅನುಸರಿಸಿದ್ದಾನೆನ್ನುವುದು ಸೂಕ್ತವೆನಿಸುತ್ತದೆ.

೧೦. **ಗಣಿತದಳೊಂದಿ ಬರ್ಪ ಪದಂ.....** — (ಪ. ೧೨೨ -ಪು. ೩೪)

ಕನ್ನಡದಲ್ಲಿ ವಿಶೇಷಣ-ವಿಶೇಷ್ಯಗಳು ಜೊತೆಗೂಡಿರಬೇಕು. ಅವುಗಳ ನಡುವೆ ಅನ್ಯಪದದಿಂದ ವ್ಯವಧಾನವನ್ನು ಕಲ್ಪಿಸಕೂಡದು. ಹಾಗೆಯೇ ಸಮುಚ್ಚಯಸ್ಥಳದಲ್ಲಿ 'ಮರಮುಂ ಬಳ್ಳಿಗಳುಂ' ಎಂಬಂತೆ ಏಕವಚನ-ಬಹುವಚನಗಳ ಮಿಶ್ರಣವಿರಕೂಡದು -ಎಂದು ಸಾಮಾನ್ಯನಿಯಮ. ಆದರೆ "ಒಂದು ವಾಕ್ಯದಲ್ಲಿ ವಿಶೇಷಣಗಳು ಅನೇಕವಿದ್ದು ಸಾಲುಸಾಲಾಗಿ ಬಂದಾಗ, ವಿಶೇಷಣ-ವಿಶೇಷ್ಯಗಳ ನಡುವೆ ಪದಾಂತರ ವ್ಯವಧಾನವಿದ್ದರೆ ಅದು ಗುಣವೇ-ಕಾವ್ಯ ಶೋಭಾಕರವೇ ಹೊರತು ದೋಷವಲ್ಲ. ಹಾಗೆಯೇ ಹಲವಾರು ಸಮುಚ್ಚಯಗಳಿದ್ದಾಗ ಕಾರಕಗಳಿಗೆ ಏಕವಚನ-ಬಹುವಚನ ಮಿಶ್ರಣ ದೋಷಾವಹವಲ್ಲ. ಅಲ್ಲಿ ಏಕತ್ವ-ಬಹುತ್ವಭೇದದ ವಿಕಲ್ಪವನ್ನು ಎಣಿಸಬೇಡಿರಿ" -ಎಂದು ಮಾರ್ಗಕಾರನು ಈ ಪದ್ಯದಲ್ಲಿ ಹೇಳಿದ್ದಾನೆ. ಮೊದಲನೆಯ ಗುಣಕ್ಕೆ ೧೨೩ನೆಯ ಪದ್ಯವನ್ನೂ ಎರಡನೆಯ ದೋಷಾಭಾವಕ್ಕೆ ೧೨೪ನೆಯ ಪದ್ಯವನ್ನೂ ಉದಾಹರಣೆಯಾಗಿ ಕೊಟ್ಟಿದ್ದಾನೆ-

ಗುಣಯುತನಪ್ಪನಂ ಸುಭಟನಪ್ಪನನಾಯುಧಯುಕ್ತನಪ್ಪನಂ
ಪ್ರಣುತಸಮಸ್ತವೈರಿಗಣನಪ್ಪನನುಜ್ವಲಕೀರ್ತಿಯಪ್ಪನಂ
ಗಣಿದಮನೇನುಮಂ ಬಗೆಯದಾಗದುಮಂತೆ ಪರೋಪಕಾರ ಕಾ
ರಣಪರನಪ್ಪನಂ ಮನದೆ ಮೆಚ್ಚದರಾರ್ ಅಭಿಮಾನಿಯಪ್ಪನಂ ॥

— (ಪ. ೧೨೩)

ಇಲ್ಲಿ 'ಗುಣಯುತನಪ್ಪನಂ....' ಇತ್ಯಾದಿ ಹಲವಾರು ವಿಶೇಷಣಗಳಿವೆ. ಕಡೆಯಲ್ಲಿರುವ 'ಅಭಿಮಾನಿಯಪ್ಪನಂ' ಎಂಬುದೇ ವಿಶೇಷ್ಯ.

ಹಿಂದಿನ ಹಲವಾರು ವಿಶೇಷಣಗಳಿಗೂ ಈ ವಿಶೇಷ್ಯಕ್ಕೂ ನಡುವೆ 'ಮನದೆ ಮೆಚ್ಚದರಾರ್' ಎಂದು ಸೇರಿಸಿ ಪದಾಂತರೀಕರಣ ಮಾಡಲಾಗಿದೆ. ಪದಾಂತರೀಕರಣ –ಬೇರೆ ಪದವನ್ನು ನಡುವೆ ಇಟ್ಟು ವ್ಯವಧಾನ ಮಾಡುವುದು. ಹೀಗೆ ಹೇಳಿದರೆ ವಾಕ್ಯರಚನೆ ಸುಂದರವಾಗಿರುತ್ತದೆ ಎಂದು ಅಭಿಪ್ರಾಯ.

ಇಲ್ಲಿ 'ಪುರುಷನಂ' ಎಂಬ ಅಧ್ಯಾಹಾರ ಅನಾವಶ್ಯಕ. ಶಾಬ್ದಬೋಧವು ಅಪೂರ್ಣವಾದರೆ ತಾನೆ ಅಧ್ಯಾಹಾರ? ಅಧ್ಯಾಹರಕ್ಕೂ ಪ್ರಕೃತಲಕ್ಷಣಕ್ಕೂ ಯಾವ ಸಂಬಂಧವೂ ಇಲ್ಲ. 'ಮನದೆ ಮೆಚ್ಚದರಾರ್ ನೃಪತುಂಗದೇವನಂ' ಎಂದಿದ್ದರೂ ಸಹ ಉದಾಹರಣೆ ಸಂಗತವೇ ಆಗುತ್ತದೆ.

ಅನುವಾದಕರು ಹೇಳಿದ ಅರ್ಥ, ಲಕ್ಷಣ ಸಮನ್ವಯಗಳೆರಡೂ ಅಡ್ಡದಾರಿ ಹಿಡಿದಿವೆ. ಅಲ್ಲದೆ, 'ನೋಡಲಿಂ' ಎಂಬುದಕ್ಕೆ 'ಕಂಡುಕೊಳ್ಳಬಹುದು' ಎಂದು ಬರೆದಿದ್ದಾರೆ. ನೋಡಲಿಂ = ನೋಡಬೇಡಿರಿ ಎಂದರ್ಥ. ನೋಡು+ಅಲ್+ಇಂ. ಪ್ರತಿಷೇಧಾರ್ಥದಲ್ಲಿ 'ಅಲ್' (ನೋಡಿ. ಶ.ದ.ಸೂ. ೨೪೫ ಮತ್ತು ಶಬ್ದಾನು. ಸೂ. 'ವೇಮಃ' (೫೨೭).

೧೧. ಬೇಱುವೇಱಿರೆ ವಿಕಲ್ಪ-ಸಮುಚ್ಚಯು-ಯುಗ್ಮದೊಳ್

— (ಪ. ೧೩೧ -ಪು. ೩೮)

ಈ ವಾಕ್ಯಖಂಡದ ಅನುವಾದವು 'ಸಮುಚ್ಚಯಗಳ (ಪ್ರಯೋಗದ) ಜೋಡಿಯನ್ನುದಾಹರಿಸಿ' ಎಂದಿದೆ.

ಮೂಲಕ್ಕೆ ಇಷ್ಟು ಅರ್ಥ ಬರಲಾರದು. ಅರ್ಥವೂ ಅಸಂಗತ. ಮತ್ತು 'ವಿಕಲ್ಪ' ಬಿಟ್ಟುಹೋಗಿದೆ. 'ವಿಕಲ್ಪ ಮತ್ತು ಸಮುಚ್ಚಯ ಈ ಎರಡರ ವಿಷಯದಲ್ಲಿ' ಎಂದು ಅರ್ಥ ಹೇಳುವುದು ಯುಕ್ತ. ವ್ಯತ್ಕ್ರಮವಾಗಿ ಮೊದಲು ಸಮುಚ್ಚಯಕ್ಕೂ ಆಮೇಲೆ ವಿಕಲ್ಪಕ್ಕೂ ಗ್ರಂಥಕಾರನು ಉದಾಹರಣೆ ಕೊಟ್ಟಿದ್ದಾನೆ.

೧೨. ಬೇಱುವೇಱು ನಿಲೆ ಕಾರಕದೊಳ್ ಕ್ರಿಯೆ...... ॥ — (ಪ. ೧೩೪ -ಪು. 40)

ಕಾರಕದಲ್ಲನ್ವಯಿಸುವ ಕ್ರಿಯೆ ಬೇರೆಬೇರೆಯಾಗಿದ್ದಾಗ, ಒಂದೆಡೆ ಸಮುಚ್ಚಯ ವಿದ್ದೂ ಇನ್ನೊಂದೆಡೆ ಇಲ್ಲದಿದ್ದರೆ ಸಮುಚ್ಚಯದೋಷವಿಲ್ಲ –ಎಂದು ಹೇಳಿ ಉದಾಹರಣೆಯನ್ನು ಕೊಟ್ಟಂತೆ ಕಾಣುತ್ತದೆ. ಉದಾ:

ಸಾಱುಗಾನೆಯುವರೆಲ್ಲರುಮಂ ನೃಪ ತಾನೆ ಮು- ।
ತ್ತೇಱುವಂ ಪಣೆದೊಡಾನೆಯನೆಂಬುದದೂಷಿತಂ ॥

ಇದರ ಅನುವಾದ ಹೀಗಿದೆ: "ಆನೆಯವರೆಲ್ಲರಿಗೂ ಸಾರಿ ಹೇಳಲಿ, ಆನೆಯನ್ನು ಸಜ್ಜುಮಾಡಿದರೆ ಅರಸನು ಮತ್ತೆ ತಾನೇ ಏರುವನು."

ಇದೇನೋ ಸರಿ. 'ಎಲ್ಲರುಮಂ' ಎಂಬಲ್ಲಿ ಸಮುಚ್ಚಯವಿದೆ. ಇನ್ನೂ ಎಲ್ಲಿ ಸಮುಚ್ಚಯವಿರಬೇಕಾಗಿತ್ತು? ಅದಕ್ಕೆ ಅವಕಾಶವಿದ್ದರೆ ತಾನೆ 'ಅದು ಬರದಿದ್ದರೂ ದೋಷವಲ್ಲ' ಎಂದು ಹೇಳಬೇಕಾದದ್ದು?

ಪ್ರೊ। ಎಂ.ವಿ.ಸೀ. ಅವರೂ ವಿವರಣೆಯನ್ನಿತ್ತಿದ್ದಾರೆ. ನಮಗೆ ಮಾತ್ರ ಏನೇನೂ ತಿಳಿಯಲಿಲ್ಲ; ಮತ್ತು ಉದಾಹರಣೆಯಲ್ಲಿ 'ನೃಪ' ಶಬ್ದದ ಮುಂದಿರಬೇಕಾದ ಪ್ರಥಮಾವಿಭಕ್ತಿಗೆ ಲೋಪ ಹೇಗೆ? 'ನೃಪಂ' ಎಂದಿರಬೇಡವೆ?

೧೩. ೧೪೭ನೇ ಪದ್ಯದ ಎರಡನೆಯ ಪಾದವನ್ನು (ಪು. ೪೫) 'ಕ್ರಮಗಮನಾಭಿಮುಖರ್ಕಳಪ್ಪ ಧೀರರ್' ಎಂದು ಪರಿಷ್ಕರಿಸಿರುವುದು ಸಮುಚಿತವಾಗಿದೆ. ಇದು ಪ್ರಶಂಸನೀಯ. ಆದರೆ 'ಕ್ರಮನಮನ' ಎಂಬ ಪಾಠಾಂತರದಲ್ಲಿ 'ಕ್ರಮ+ನ' ಇಲ್ಲಿ ಣಕಾರ ಬರಬೇಕಾಗುತ್ತಿತ್ತು ಎಂದು ಅಡಿಟಿಪ್ಪಣಿಯಲ್ಲಿ ಬರೆದಿರುವುದು ತಪ್ಪು. ಕ್ರಮ+ನಮನ ಎಂದು ಪದಚ್ಛೇದವಾದ್ದರಿಂದ ಭಿನ್ನಪದದಲ್ಲಿರುವ 'ನ'ಕಾರಕ್ಕೆ 'ಣ'ಕಾರ ಬರುವುದೇ ಇಲ್ಲ.

೧೪. **ಅತಿಶಯಧವಳೋರ್ವಿಪ...** ॥ — (ಪ. ೧೪೮ -ಪು. ೪೫)

ಈ ಪದ್ಯದ ಅನುವಾದದಲ್ಲಿ ಪದವಿಭಾಗ, ಉದ್ದೇಶ್ಯ, ವಿಧೇಯ –ಇದು ಯಾವುದೂ ತಿಳಿಯದಂತೆ ಗೊಂದಲವಾಗಿದೆ. ಕಡೆಯ ಸಾಲನ್ನು 'ಸಾರಸ್ವತಗುಣದಿಂ ಕೃತಕೃತ್ಯಮಾರ್ಗನಕ್ಕುಂ' ಎಂದು ಛಂದೋಬದ್ಧವಾಗಿ ಪರಿಷ್ಕರಿಸಿರುವುದು ಶ್ಲಾಘನೀಯ. ಇದರಲ್ಲಿ ಅರ್ಥಪುಷ್ಟಿಯೂ ಉಂಟು. ಆದರೆ 'ಕೃತಕೃತ್ಯಂ+ಆರ್ಗಂ+ಅಕ್ಕುಂ' ಎಂದು ಭಂಗಶ್ಲೇಷೆಯನ್ನು ಹೇಳಿರುವುದು ವಿಚಾರಣೀಯ. ಈ ಪಕ್ಷದಲ್ಲಿ ನಪುಂಸಕಲಿಂಗವಾಗುವುದರಿಂದ 'ಆರ್ಗಮಕ್ಕುಂ' ಎಂದಾಗಬೇಡವೆ?

'ಕೃತಕೃತ್ಯ' ಶಬ್ದಕ್ಕೆ 'ಕೃತಕೃತ್ಯತೆ' ಎಂದು ಅರ್ಥ ಉಂಟೆ?

ನಮ್ಮ ಅನ್ವಯಾರ್ಥ ಹೀಗೆ- 'ಅತಿಶಯಧವಳೋರ್ವಿಪೋದಿತಾಳಂಕೃತಿಮತಿಯು ಕೃತಕೃತ್ಯಮಾರ್ಗನು ಅಕ್ಕುಂ' ಉಳಿದ ಪದ್ಯಭಾಗದ ಅರ್ಥ ಸುಲಭ.

ಈ ಪದ್ಯದಲ್ಲಿ 'ಶ್ರುತಯುವತಿ' ಎಂಬ ಪಾಠಕ್ಕಿಂತ 'ಶ್ರುತಿಯುವತಿ' ಎಂಬ ಪಾಠವೇ ಉತ್ತಮ. ಯುವತಿ ಶಬ್ದ ಸ್ತ್ರೀಲಿಂಗವಾದ್ದರಿಂದ ಸ್ತ್ರೀಲಿಂಗವಾದ ಶ್ರುತಿ ಶಬ್ದವಿರುವುದು ನ್ಯಾಯ. ಶ್ರುತ ಶಬ್ದ ನಪುಂಸಕಲಿಂಗ.

ದ್ವಿತೀಯ ಪರಿಚ್ಛೇದ:

೧೫. ಮಾರ್ಗಕಾರನು ಇಲ್ಲಿ ಶಬ್ದಾಲಂಕಾರಗಳನ್ನು ಹೇಳಿ, ಮುಂದಿನ ತೃತೀಯ ಪರಿಚ್ಛೇದದಲ್ಲಿ ಅರ್ಥಾಲಂಕಾರಗಳನ್ನು ನಿರೂಪಿಸಿದ್ದಾನೆ. ಅಲಂಕಾರವಾದರೋ-

....ಶಬ್ದಾರ್ಥಭೇದದಿಂದೆರಡಕ್ಕುಂ ॥
ಅನ್ನೆಗಮದಱೊಳಗೆ ಸಮುತ್ಪನ್ನಪ್ರಾಧಾನ್ಯಮನ್ಯಮರ್ಥಾಧಾರಂ ॥
ಮುನ್ನಂ ಶಬ್ದಾಲಂಕಾರಂ...... ॥ — (ಪ. ೩ -ಪು. ೪೮)

ಅರ್ಥಾಲಂಕಾರವೇ ಪ್ರಧಾನವಾದ ಮೇಲೆ ಅದನ್ನು ಮೊದಲು ನಿರೂಪಿಸದೆ, ಶಬ್ದಾಲಂಕಾರವನ್ನೇ ಮೊದಲು ಹೇಳಿದ್ದು ವಿರೋಧ –ಎಂಬ ಒಂದು ಆಕ್ಷೇಪವುಂಟು.

ಇದನ್ನು ಖಂಡಿಸುತ್ತ ಅನುವಾದಕಾರರು "ಅರ್ಥಾಲಂಕಾರಕ್ಕೆ ಆಧಾರಭೂತವಾದ ಶಬ್ದಾಲಂಕಾರವೇ ಪ್ರಧಾನ" ಎಂದು ಮೇಲಿನ ಪದ್ಯಕ್ಕೆ ಅರ್ಥ ಹೇಳಿದ್ದಾರೆ.

ಅರ್ಥಾಲಂಕಾರಕ್ಕೆ ಶಬ್ದಾಲಂಕಾರವು ಆಧಾರಭೂತ ಎಂಬುದು ಹೇಗೆ? ಯಾವ ಯುಕ್ತಿಯೂ ಇಲ್ಲ, ಯಾವ ಲಾಕ್ಷಣಿಕನೂ ಹೀಗೆ ಹೇಳಿಲ್ಲ. ಶಬ್ದಾಲಂಕಾರವಿಲ್ಲದೆ ಅರ್ಥಾಲಂಕಾರವೂ ಅರ್ಥಾಲಂಕಾರವಿಲ್ಲದೆ ಶಬ್ದಾಲಂಕಾರವೂ ಇರುತ್ತದೆಯೆಂಬುದು ಸುವಿದಿತ. ಅವುಗಳಿಗೆ ಅನ್ಯೋನ್ಯವಾಗಿ ಯಾವ ಸಂಬಂಧವೂ ಇಲ್ಲ. ಅನುವಾದಕರು ಹೇಳಿದ ಅರ್ಥ ಸಮಂಜಸವಲ್ಲ.

ಮತ್ತೇನೆಂದರೆ, ಅರ್ಥಜ್ಞಾನಕ್ಕೆ ಶಬ್ದವು ನಿಮಿತ್ತ. ಮೊದಲು ಶಬ್ದೋಚ್ಚರಣೆ, ಅನಂತರ ಅರ್ಥಪ್ರತೀತಿ ಎಂಬುದು ಕ್ರಮ. ಅಲ್ಲದೆ 'ಶಬ್ದಾರ್ಥಭೇದದಿಂದೆರಡಕ್ಕುಂ' ಎಂಬಲ್ಲಿ ಮೊದಲು ಶಬ್ದವನ್ನು ಹೇಳಿರುವುದರಿಂದ ಪ್ರಥಮೋಪಸ್ಥಿತವಾದ ಶಬ್ದಾಲಂಕಾರವನ್ನು ಗ್ರಂಥಕಾರನು ನಿರೂಪಿಸಿದ್ದಾನೆ. 'ಸೂಚೀಕಟಾಹನ್ಯಾಯ'ವನ್ನೂ ಇಲ್ಲ ಅನ್ವಯಿಸಬಹುದು. ಶಬ್ದಾಲಂಕಾರ ಪರಿಮಿತ, ಅರ್ಥಾಲಂಕಾರ ವಿಸ್ತೃತ. ಕೆಲಸಗಾರನು ಮೊದಲು ಸೂಜಿಯ ಕೆಲಸವನ್ನು ಮಾಡಿಕೊಟ್ಟು ಅನಂತರ ದೊಡ್ಡದಾದ ಕಡಾಯದ ಕೆಲಸವನ್ನು ತೆಗೆದುಕೊಳ್ಳುವಂತೆ, ಗ್ರಂಥಕಾರನು ಚಿಕ್ಕದಾದ ಶಬ್ದಾಲಂಕಾರ ಪ್ರಕರಣವನ್ನು ಮೊದಲು ತೆಗೆದುಕೊಂಡಿದ್ದಾನೆನ್ನುವುದು ಸೂಕ್ತ. ಇಂತಹ ಸಂದರ್ಭದಲ್ಲಿ ಗ್ರಂಥಕಾರನ ಇಚ್ಛೆಯೇ ನಿಯಾಮಕವೆನ್ನುವುದು ಶಾಸ್ತ್ರಪದ್ಧತಿ. ಪ್ರಧಾನವಾದ್ದನ್ನು ಮೊದಲು ಹೇಳಬೇಕೆಂಬ ನಿಯಮವೆಲ್ಲಿದೆ? ಶಬ್ದಾಲಂಕಾರವು ಪ್ರಧಾನವೂ ಅಲ್ಲ. ಇಲ್ಲಿ ಯಾವ ವಿರೋಧವೂ ಇಲ್ಲ.

ಅರ್ಥಕ್ಕೆ ಆಧಾರ ಎಂದರೆ 'ಅರ್ಥಾಲಂಕಾರಕ್ಕೆ' ಆಧಾರ ಎಂಬ ಅರ್ಥ ಲಭಿಸುವುದೂ ಇಲ್ಲ. ಅರ್ಥವೇ ಆಧಾರವಾದದ್ದು ಅರ್ಥಾಧಾರ ಎಂದು ಬಹುವ್ರೀಹಿ ಸಮಾಸವಿದು. ಅರ್ಥಾಧಾರವೆಂದರೆ ಅರ್ಥಾಲಂಕಾರವೇ. ಇದಕ್ಕೆ ವಿಪರೀತಾರ್ಥವನ್ನು ಕಲ್ಪಿಸಿದವರು ಅನುವಾದಕರೇ.

೧೬. **ಶಶಧರನಂತೊಪ್ಪಿರೆ ವಿನೋದದಿಂದುರುಮುದದಿಂ ॥**

— (ಪ. ೧೦ -ಪು. 51)

ಕ್ರಿಯಾವಿಶೇಷಣಪ್ರಯೋಗದಲ್ಲಿ ದೋಷಕ್ಕೆ ಉದಾಹರಣೆ ಇದು. 'ವಿನೋದ ದಿಂದುರುಮುದದಿಂ' ಎಂಬೆರಡು ವಿಶೇಷಣಗಳು 'ಒಪ್ಪಿರೆ' ಎಂಬುದರಲ್ಲಿ ಅನ್ವಿತ ವಾಗಬೇಕಾಗಿದೆ. ಅನುವಾದಕರು "ಇಲ್ಲಿ ಎರಡೂ ಕ್ರಿಯಾವಿಶೇಷಣಗಳು ಸರಿಯಾಗಿ ಕ್ರಿಯೆಯೊಡನೆ ಅನ್ವಯಿಸುತ್ತಿಲ್ಲ" ಎಂದು ಬರೆದಿದ್ದಾರೆ. ಏಕೆ ಅನ್ವಯಿಸುತ್ತಿಲ್ಲ –ಎಂದು ಕೇಳಬಹುದೆ? ವಿವರಣೆ ಇದಕ್ಕೆ ಬೇಕು.

'ಹೇಗೆ ಒಪ್ಪಿರೆ?' ಎಂಬ ಆಕಾಂಕ್ಷೆಗೆ ಎರಡರಲ್ಲಿ ಒಂದು ಕ್ರಿಯಾವಿಶೇಷಣವನ್ನು ಹೇಳಿದರೂ ಆಕಾಂಕ್ಷೆ ಮುಗಿದುಹೋಗುತ್ತದೆ. ಇನ್ನೊಂದು ನಿರಾಕಾಂಕ್ಷವಾಗುವುದ ರಿಂದ ತನಗೆ ಅನ್ವಯವೆಲ್ಲಿ –ಎಂದು ಪರದಾಡಬೇಕಾಗುತ್ತದೆ. 'ನಿರಾಕಾಂಕ್ಷತ್ವ' ಎಂಬುದು ಇಲ್ಲಿರುವ ದೋಷ. ಗ್ರಂಥಕಾರನು 'ಶಶಧರನಂತೊಪ್ಪಿರೆ ವಿನೋದದಿಂ

ಜನಿತಮುದಂ' ಎಂದು ತಿದ್ದಿ ಈ ದೋಷವನ್ನು ಪರಿಹರಿಸಿದ್ದಾನೆ. 'ವಿನೋದ ದಿಂದಲೂ ಉರುಮುದದಿಂದಲೂ ಒಪ್ಪಿರೆ' ಎಂದರೂ ದೋಷವಿಲ್ಲ. ಇಲ್ಲಿ ಸಮುಚ್ಚಯವಿರುವುದರಿಂದ 'ಮತ್ತೂ ಹೇಗೆ?' ಎಂದು ಇನ್ನೊಂದಕ್ಕೆ ಆಕಾಂಕ್ಷೆ ಹುಟ್ಟುತ್ತದೆ.

೧೭. 'ದ್ವಿತೀಯಾವಿಭಕ್ತಿಪ್ರತ್ಯಯಾಂತಪದದ ಮುಂದೆ ಆದಿಸ್ವರವಿರುವ ಪದ ಬಂದಾಗ ಪಾದಾಂತ್ಯದಲ್ಲಿ ಮಾತ್ರ ಅದು ದೀರ್ಘವೇ ಆಗಬೇಕೆಂದು ನಿಯಮ. ಉಳಿದ ಸ್ಥಾನಗಳಲ್ಲಿ ದೀರ್ಘ ಇಲ್ಲವೆ ಹ್ರಸ್ವಗಳಲ್ಲಿ ಯಾವುದು ಬೇಕಾದರೂ ಬರ ಬಹುದು.'' (ಪದ್ಯ ೧೬ರ ಅನುವಾದ –ಪು. ೫೨)

ಉದಾಹೃತಪದ್ಯದ ದ್ವಿತೀಯಾರ್ಧ ಇದು–

ಉಪಚಿತಗುಣನಾನ್ ಉಚಿತನ–
ನಪೇತದೋಷನನುದಾರಚರಿತೋದಯನಂ ॥

"'ಉಚಿತನಂ+ಅಪೇತ' ಎನ್ನುವಾಗ ಹ್ರಸ್ವಾದೇಶವು ನಿರ್ದುಷ್ಟವಾಗಿ ಬಂದಿದೆ" ಎಂದು ತಿಳಿಸಿದ್ದಾರೆ. ಮೊದಲನೆಯದಾಗಿ 'ಹ್ರಸ್ವ' ಇದ್ದೇ ಇದೆ. ಅದು ಆದೇಶವಾಗಿ ಬರಬೇಕಾಗಿಲ್ಲ. ಅದಿರಲಿ. 'ಉಚಿತನನ್' ಎಂಬುದು ಪಾದಾಂತದಲ್ಲಿರುವುದರಿಂದ ದೀರ್ಘವೇ ಬರಬೇಕು. ಹ್ರಸ್ವವೇ ಇಲ್ಲಿ ದುಷ್ಟ. ದೀರ್ಘ ಮಾಡಿದರೆ ಛಂದೋಭಂಗ ವಾಗುತ್ತದೆ. ದೀರ್ಘಮಾಡದಿದ್ದರೂ ಯತಿಭಂಗದೋಷ ಇದ್ದೇ ಇದೆ. ಆದ್ದರಿಂದ ನಾವು ಈ ಪಾಠವನ್ನು ಹೀಗೆ ಸೂಚಿಸುತ್ತೇವೆ.

ಉಪಚಿತಗುಣನಾನ್ ಉಚಿತಾ–
ನುಪೇತದೋಷನನುದಾರಚರಿತೋದಯನಂ ॥

ಉಚಿತನೂ ಅನುಪೇತದೋಷನೂ (ದೋಷರಹಿತನೂ) ಆದವನೆಂದರ್ಥ. ಉಚಿತ+ಅನುಪೇತದೋಷ ಶಬ್ದಗಳಿಗೆ ಕರ್ಮಧಾರಯಸಮಾಸ. 'ಸ್ನಾತಾನುಲಿಪ್ತ' ಇದ್ದಂತೆ.

೧೮. **ವಿನಿಮೀಲಿತಕುಮುದವನಂ**
ಜನಿತೋನ್ಮೀಲಾರವಿಂದವನಲಕ್ಷ್ಮೀಕಂ ।
ದಿನಕರನುದಯುಂಗೆಯ್ದಂ
ವಿನಿಹತ-ತಿಮಿರಂ ವಿಶಿಷ್ಟಸಂಧ್ಯಾಶ್ಲೇಷಂ ॥ — (ಪ. ೭೪ –ಪು. ೬೯)

ಸಮಾಹಿತಗುಣಕ್ಕೆ ಇದು ಉದಾಹರಣೆ. ಅನ್ಯಧರ್ಮವನ್ನು ಇನ್ನೊಂದರಲ್ಲಿ ಆರೋಪಿಸುವುದು ಸಮಾಹಿತ ಎಂದು ಗ್ರಂಥಕಾರನು ಹೇಳಿದ್ದಾನೆ.

ಮೂಲದಲ್ಲಿ 'ಲಕ್ಷ್ಮೀಶಂ' ಎಂದಿದ್ದುದನ್ನು ಅನುವಾದಕರು 'ಲಕ್ಷ್ಮೀಕಂ' ಎಂದು ತಿದ್ದಿದ್ದಾರೆ. ಇದಕ್ಕೆ ಅಡಿಟಿಪ್ಪಣಿ ಹೀಗಿದೆ: "ಸೂರ್ಯನಿಗೆ 'ಈಶಂ' ಎಂದು ನೇರವಾಗಿ ಅನ್ವಯಿಸಲಾರದು, ಪ್ರಸ್ತುತ ಅಲಂಕಾರಸಿದ್ಧಿಯಾಗಬೇಕಿದ್ದರೆ, ಅದು 'ವನಲಕ್ಷ್ಮಿ ಯುಳ್ಳವನು' ಎಂದೇ ಅನ್ವಯಿಸಬೇಕೆಂದು ಇಲ್ಲಿ ಪರಿಷ್ಕೃತ."

ಪ್ರಸ್ತುತ ಅಲಂಕಾರವೆಂದರೆ ಸಮಾಹಿತಗುಣ. 'ಜನಿತವಾದ ಅರವಿಂದವನಲಕ್ಷ್ಮಿಗೆ ಈಶ' ಎಂದು ಹೇಳಿದರೆ ಯಾವ ಅನ್ವಯದ ತೊಡಕಿದೆ? ಬಹುವ್ರೀಹಿಸಮಾಸ ಮಾಡಿದರೆ 'ವನಲಕ್ಷ್ಮಿಯುಳ್ಳವನು' ಎಂದು ಅರ್ಥವಾಗುವುದರಿಂದ ಸಮಾಹಿತಗುಣ ಸಿದ್ಧಿಸುತ್ತದೆ ಎಂಬುದು ಆಶಾಮಾತ್ರ. ಅರವಿಂದವನಲಕ್ಷ್ಮಿ ಸೂರ್ಯನಲ್ಲಿದೆಯೆಂದು ಯಾವ ಬುದ್ಧಿಶಾಲಿಯೂ ವರ್ಣಿಸಲಾರ. ಜನಿತವಾದ ಅರವಿಂದ ವನಲಕ್ಷ್ಮಿಯು ಯಾರಿಂದಲೋ ಎಂಬ ತೃತೀಯಾಬಹುವ್ರೀಹಿಯಿಂದ 'ಜನಕತ್ವ'ವು ಮಾತ್ರ ಸೂರ್ಯನಲ್ಲಿ ಲಭಿಸುತ್ತದೆ. ಜನಕತ್ವವು ಅವನ ಸ್ವಧರ್ಮವಾದ್ದರಿಂದ ಸಮಾಹಿತಗುಣ ಬರುವುದೇ ಇಲ್ಲ. 'ಲಕ್ಷ್ಮೀಶಂ' ಎಂಬುದೇ ಸರಿ. ತಿದ್ದುಪಡಿ ಸರಿಯಲ್ಲ. ಪ್ರಕೃತ ವಿಶೇಷಣದಲ್ಲಿ ನೇತ್ರಧರ್ಮವಾದ ಉನ್ಮೀಲನವನ್ನು ಅರವಿಂದದಲ್ಲಿ ಕವಿ ಹೇಳಿದ್ದಾನೆ. ಉನ್ಮೀಲನ ವಿಕಾಸಗಳಿಗೆ ತಾದಾತ್ಮ್ಯಾಧ್ಯಾಸದಿಂದ ಈ ಪ್ರಯೋಗ ಬಂದಿದೆಯಾಗಿ ಸಮಾಹಿತಗುಣ ಸಿದ್ಧಿಸುತ್ತದೆ. ಅರವಿಂದವನಲಕ್ಷ್ಮಿಯೊಡನೆ ಅಧ್ಯಾಸ ಮಾಡಲು ಸೂರ್ಯನಲ್ಲಿರುವ ಇನ್ನೊಂದು ಧರ್ಮವಾದರೂ ಯಾವುದು?

೧೯. ಪುರುಷೋತ್ತಮರಾರ್ ನಿನ್ನ
ನ್ನರುದಾರರರಾತಿಸಮಿತಿಯಂ ಕೊಂದಿರ್ದುಂ ॥

— (ಪ. ೮೦ -ಪು. ೭೧)

ಉಪಲಬ್ಧ ಪ್ರತಿಗಳಲ್ಲಿ 'ಉದಾರಾರಾತಿಸಮಿತಿಯಂ' ಎಂದೇ ಇದೆ. 'ಉದಾರ' ಎಂಬುದನ್ನು ಶತ್ರುಗಳಿಗೆ ಅನ್ವಯಿಸುವುದಕ್ಕಿಂತ ವರ್ಣನೀಯ ರಾಜನಿಗೇ ಅನ್ವಯಿಸುವುದು ಸೂಕ್ತವೆಂದು ಮುಳಿಯ ತಿಮ್ಮಪ್ಪಯ್ಯನವರು ಮೇಲ್ಕಂಡಂತೆ ಪರಿಷ್ಕರಿಸಿದ್ದಾರೆ.

ನಮ್ಮ ಅಭಿಪ್ರಾಯ ಹೀಗೆ– ಉದಾರ ಶಬ್ದಕ್ಕೆ ಔದಾರ್ಯ ಗುಣವುಳ್ಳವನು–ದಾತೃ ಎಂದೇ ಅರ್ಥವಲ್ಲ. ದೊಡ್ಡ, ಮಹಾನ್ ಎಂದೂ ಅರ್ಥವಿದೆ. 'ದೊಡ್ಡ ಶತ್ರುಸಮೂಹ' ಎಂದು ಅರ್ಥ ಹೇಳಿದರೆ ಬಾಧಕವೇನು? ಅಲ್ಲದೆ ಈ ತಿದ್ದುಪಡಿಯಲ್ಲಿ 'ರರರಾ' ಎಂದು ಮೂರು ರೇಫಗಳು ಶ್ರವಣಕರ್ಕಶವಾಗಿ ಸೇರಿಕೊಳ್ಳುತ್ತವೆ. ಆದ್ದರಿಂದ 'ಉದಾರಾರಾತಿ' ಎಂದಿರುವುದೇ ಮೇಲು.

೨೦. ಪರಿದೆಯ್ದಿತಾಗಿದಂ ಭಾ
ಸುರತರ-ರಘುಕುಲ-ಲಲಾಮ-ಲಕ್ಷ್ಮೀಧರನೊಳ್ ।
ಪರಿಕೋಪವಿಧೃತವಿಸ್ಫುರ
ದುರು-ರಕ್ತ-ಕಠೋರ-ನಯನ-ಯುತದಶವದನಂ ॥

— (ಪ. ೯೩ -ಪು. ೭೫)

ದ್ವಿತೀಯಾರ್ಧದಲ್ಲಿ ಸಮಾಸವಿದೆಯಷ್ಟೆ. ಈ ರೀತಿ ಸಮಾಸವನ್ನು ಬೆರೆಸಿದರೆ ಕಾವ್ಯವು ಸುಂದರವಾಗುವುದಿಲ್ಲವೆಂದೂ ಇದನ್ನು ವ್ಯಸ್ತವಾಗಿ ಹೇಳಬೇಕೆಂದೂ ಗ್ರಂಥಕಾರನ ಅಭಿಪ್ರಾಯ (ಪ. ೯೨). ಇದನ್ನು ವ್ಯಸ್ತವಾಗಿಸಿ ತಿದ್ದಿದ ಉದಾಹರಣೆ ಹೀಗಿದೆ–

ಪರಿದೆಯ್ದಿತಾಗಿದಂ ಭಾ
ಸುರತರ-ರಘುಕುಲ-ಲಲಾಮನೊಳ್ ಲಕ್ಷ್ಮಣನೊಳ್ ।
ಪರಿಕೋಪ-ವಶ-ಭ್ರಮಣೋ
ದ್ಧುರ-ರಕ್ತ-ಕಠೋರ-ಲೋಚನಂ ದಶವದನಂ ॥

ಮೊದಲನೆಯ ಉದಾಹರಣೆಯಲ್ಲಿ ಸಮಾಸವೇಕೆ ಯುಕ್ತವಲ್ಲವೆಂದು ಮಾರ್ಗಕಾರನು ವಿವರಿಸಿದ್ದಾನೆ. ವಿವರಣೆಯಲ್ಲಿ 'ಸಮರ್ಥ, ಸಾಪೇಕ್ಷ, ಗಮಕ' ಎಂಬ ಶಬ್ದಗಳನ್ನು ಬಳಸಲಾಗಿದೆ. ಈ ಶಬ್ದಗಳ ಆಧಾರದ ಮೇಲೆ ಅನುವಾದಕರು "ಮೇಲ್ಕಂಡ ಸಮಾಸದಲ್ಲಿ ಪದವು ಸಾಪೇಕ್ಷವಾದ್ದರಿಂದ ಅಸಮರ್ಥವೆಂದೂ ಆದ್ದರಿಂದ ಸಮಾಸವು ಕೂಡದೆಂದೂ, ಗಮಕವಿದ್ದಲ್ಲಿ ಸಮಾಸಮಾಡಬಹುದೆಂದೂ 'ಸಾಪೇಕ್ಷತ್ವೇಽಪಿ ಗಮಕತ್ವಾತ್ ಸಾಧುಃ' ಎಂಬ ಹೇಳಿಕೆಗೆ ಇದು ಕಾರಣವೆಂದೂ ವಿವರಿಸಿದ್ದಾರೆ. ಇದೆಲ್ಲವೂ 'ಭ್ರಾಂತಿವಿಲಾಸ'ವೆಂಬುದು ನಿಶ್ಚಿತ. ಸಮಾಸವೇ ಅಸಾಧುವಾದರೆ ಆತನೇ ಸಮಾಸಮಾಡಿ ಪ್ರಯೋಗಿಸಿದ್ದು ಹೇಗೆ? ಅಲ್ಲದೆ ಇಲ್ಲಿ ಸಮಾಸವು ಅಸಾಧುವೆಂದು ಆತನು ಹೇಳಿಯೂ ಇಲ್ಲ. ಇಲ್ಲಿ ಸಮಾಸ ಮಾಡಿದರೆ ಕಾವ್ಯಬಂಧವು ಬಂಧುರವಾಗುವುದಿಲ್ಲ ಎಂದು ಮಾತ್ರ ಹೇಳಿದ್ದಾನೆ.

'ಪರಿಕೋಪ ವಿಧೃತ..... ಯುತ+ದಶವದನ' ಎಂಬಲ್ಲಿ ಸಮಾಸ ಬರಲು ಅಡ್ಡಿಯೇನಿದೆ? ಯಾವುದು ಸಾಪೇಕ್ಷ, ಯಾವುದು ಅಸಮರ್ಥ? ನೀಲೋತ್ಪಲ ಶಬ್ದದ ಕರ್ಮಧಾರಯದಂತೆ ಸರಳವಾದದ್ದು ಈ ಸಮಾಸ. ವಿಶೇಷಣವು ದೀರ್ಘವಾದರೆ ಸಮಾಸ ಬರಬಾರದೆ? ಈ ವಿವರಣೆ ಸರಿಯಲ್ಲ.

ನಮಗೆ ತೋರುವುದಿಷ್ಟು– 'ದಶವದನಂ ಪರಿದೆಯ್ದಿ ತಾಗಿದಂ' ಎಂಬುದು ಪ್ರಧಾನವಾಕ್ಯ. ಅವನು ತಾಗಿದ ರಭಸವನ್ನಿಲ್ಲಿ ವರ್ಣಿಸಬೇಕಾಗಿದೆ. 'ಪರಿಕೋಪ ವಿಧೃತ....' ಇತ್ಯಾದಿ ವಿಶೇಷಣವು ಸಮಾಸದಲ್ಲಿ ಗುಣೀಭಾವವನ್ನೈದಿರುವುದರಿಂದ ರಭಸದ ಸ್ವರೂಪ ತಿಳಿಯುವುದಿಲ್ಲ. ಅನುವಾದ್ಯ ವಿಶೇಷಣವಾಗಿರುವುದೇ ಇದಕ್ಕೆ ಕಾರಣ. ಹಾಗಲ್ಲದೆ ಮೇಲ್ಕಂಡ ತಿದ್ದಿದ ಪದ್ಯದಲ್ಲಿ ಹೇಳಿರುವಂತೆ 'ಪರಿಕೋಪವಶಭ್ರಮಣೋದ್ಧುರರಕ್ತಕಠೋರಲೋಚನ'ನಾಗಿ 'ತಾಗಿದಂ' ಎಂದರೆ ರಭಸದ ಸ್ವರೂಪ ಸ್ಪಷ್ಟವಾಗುತ್ತದೆ. ಈ ವಿಶೇಷಣವು ವಿಧೇಯರೂಪವಾಗಿ ಬಂದಿರುವುದೇ ಇದಕ್ಕೆ ಕಾರಣ. ಆದ್ದರಿಂದ ವಿಧೇಯವಿಶೇಷಣವಾಗಿ ಹೇಳಬೇಕಾದ್ದನ್ನೇ ಅನುವಾದ್ಯ ವಿಶೇಷಣವಾಗಿ ಹೇಳಿದರೆ ವಿವಕ್ಷಿತಾರ್ಥಪ್ರತೀತಿಯಾಗುವುದಿಲ್ಲ. ಕಾವ್ಯವು ಸುಂದರ ವಾಗುವುದಿಲ್ಲ –ಎಂದು. ಇನ್ನೊಂದು ಉದಾಹರಣೆಯಿಂದ ಇದನ್ನು ಸ್ಪಷ್ಟಪಡಿಸ ಬಹುದು.

೧. ಹನುಮಂತನ ಮಾತನ್ನು ಕೇಳಿ ರಾವಣನು ಕುಪಿತನಾಗಿ ನುಡಿದನು.
೨. ಹನುನಂತನ ಮಾತನ್ನು ಕೇಳಿ ಕುಪಿತರಾವಣನು ನುಡಿದನು.

ಇವುಗಳಲ್ಲಿ ಮೊದಲನೆಯ ವಾಕ್ಯವೇ ಉತ್ತಮವೆಂಬುದು ಸ್ಪಷ್ಟವಾಗಿದೆ.

ನವೀನರ ಮತದಲ್ಲಿ ಇದು 'ಅವಿಮೃಷ್ಟವಿಧೇಯ' ಎಂಬ ಕಾವ್ಯದೋಷವಾಗುತ್ತದೆ (ನೋಡಿಃ ಕಾವ್ಯಪ್ರಕಾಶ –ಸಪ್ತಮೋಲ್ಲಾಸ).

ಇನ್ನೊಂದು ವಿಚಾರಃ ದೋಷಕ್ಕೆ ಉದಾಹೃತವಾದುದರಲ್ಲಿ 'ಲಕ್ಷ್ಮೀಧರನೊಳ್' ಇದೆ. ತಿದ್ದಿದ ಉದಾಹರಣೆಯಲ್ಲಿ 'ಲಕ್ಷ್ಮಣನೊಳ್' ಇದೆ. ಈ ಬದಲಾವಣೆಗೆ ಪ್ರಕೃತದಲ್ಲಿ 'ನಿಮಿತ್ತ'ವೇನು? ಇದು ಉದ್ದೇಶಪೂರ್ವಕವಾದುದೇ ಎಂದು ನಮ್ಮ ಎಣಿಕೆ. ಲಕ್ಷ್ಮೀಧರ–ಲಕ್ಷ್ಮಣ –ಇವುಗಳ ಯೌಗಿಕಾರ್ಥದಲ್ಲಿ ಭೇದವೇನೂ ಇಲ್ಲ. ಉತ್ತಮವಾದ ಲಕ್ಷ್ಮ(ಲಕ್ಷಣ) ಉಳ್ಳವನು ಲಕ್ಷ್ಮಣ. ಮತ್ವರ್ಥೀಯ 'ನ' ಪ್ರತ್ಯಯವು 'ಣ'ತ್ವವನ್ನು ಪಡೆದಿದೆ. ಲಕ್ಷ್ಮ–ಲಕ್ಷ್ಮೀ ಎರಡೂ ಸಮಾನಾರ್ಥಕಗಳು. ರೂಢಾರ್ಥದಲ್ಲಿ ಲಕ್ಷ್ಮಣನು ರಾಮಾನುಜ. ಲಕ್ಷ್ಮೀಧರ ಶಬ್ದಕ್ಕೆ ಈ ಅರ್ಥವಿಲ್ಲ. ಆದ್ದರಿಂದ ಇಲ್ಲಿ 'ಲಕ್ಷ್ಮೀಧರ' ಎಂದು ಪ್ರಯೋಗಿಸುವುದು ಸರಿಯಲ್ಲವೆಂದು ಮಾರ್ಗಕಾರನ ಅಭಿಪ್ರಾಯ. ಅಸಮರ್ಥ ಸಮಾಸಕ್ಕೂ ಇದಕ್ಕೂ ಯಾವ ಸಂಬಂಧ ಉಂಟು? ಈ ಎಲ್ಲ ಕಾರಣಗಳಿಂದ ಮಾರ್ಗಕಾರನ ಲಕ್ಷಣಪದ್ಯಗಳಿಗೆ ಬೇರೆ ತಾತ್ಪರ್ಯವನ್ನು ಹೇಳುವುದು ಅನಿವಾರ್ಯವಾಗಿದೆ. ನಮ್ಮ ಅರ್ಥ ಹೀಗೆ–

೧. ಇಂತು ವಿಶೇಷ್ಯಂ..... — (ಪ. ೯೪)

ಮೇಲ್ಕಂಡ ದೋಷದ ಉದಾಹರಣೆಯಲ್ಲಿ ವಿಶೇಷ್ಯವಾದ 'ದಶವದನ' ಶಬ್ದವು ಮಾತ್ರ ಕ್ರಿಯೆಯಲ್ಲಿ ಅನ್ವಿತವಾಗುವುದರಿಂದ (ವಿಶೇಷಣಕ್ಕೆ ಕ್ರಿಯಾನ್ವಯವಿಲ್ಲವಾದ ಕಾರಣ) ಅದು (ವಿಧೇಯ ವಿಶೇಷಣವನ್ನಪೇಕ್ಷಿಸುತ್ತದೆಯಾಗಿ) ಸಾಪೇಕ್ಷವಾಗುತ್ತದೆ. ಸಮಾಸದಲ್ಲಿ ಸೇರಿಕೊಂಡಿರುವ ವಿಶೇಷಣಪದವು ಕ್ರಿಯಾನ್ವಯಕ್ಕೆ ಸಮರ್ಥವಲ್ಲವಾದ್ದರಿಂದ ಅಸಮರ್ಥವಾಗುತ್ತದೆ. (ವಿವಕ್ಷಿತಾರ್ಥವು ಬರದ ಇಂತಹ ಸ್ಥಳದಲ್ಲಿ ಸಮಾಸವನ್ನು ಮಾಡಬಾರದು.)

೨. ಸಮನಿಸೆ ಸಾಪೇಕ್ಷಮುಂ...... — (ಪ. ೯೫)

ಹೀಗೆ ಸಾಪೇಕ್ಷವಾಗಿದ್ದರೂ ವಿವಕ್ಷಿತಾರ್ಥವನ್ನು ಬೋಧಿಸುವ ಗಮಕಸಾಮಗ್ರಿ ಏನಾದರೂ ಇದ್ದರೆ ಅಲ್ಲಿ ಸಮಾಸ ಮಾಡಬಹುದು.

ಲಕ್ಷ್ಮೀಧರ ಶಬ್ದವು ಷಷ್ಠೀತತ್ಪುರುಷಸಮಾಸವೆಂಬುದನ್ನು ಲಕ್ಷ್ಯದಲ್ಲಿಡಬೇಕು. ಇದು ಲಕ್ಷ್ಮಣನೆಂಬ ಅರ್ಥವನ್ನು ಬೋಧಿಸಲಾರದಾದ್ದರಿಂದ ಈ ಸಮಾಸ ಸರಿಯಲ್ಲ. ಗಮಕ ಸಾಮಗ್ರಿ ಇದ್ದರೆ ಇಂತಹ ಯೌಗಿಕ ಶಬ್ದವನ್ನು ಬಳಸಬಹುದು. 'ರಘುಕುಲಲಲಾಮ' ಈ ಶಬ್ದ ಶ್ರೀರಾಮನಲ್ಲಿ ರೂಢವಾಗಿದೆ. 'ಕುರುಕುಲತಿಲಕ' ಇದು ಕವಿಪ್ರಯೋಗದಿಂದ ದುರ್ಯೋಧನನಲ್ಲಿ ರೂಢವಾಗಿದೆ. ರೂಢಿಯೇ ಇಲ್ಲಿ ಗಮಕ. 'ಕುಂತೀಸುತ' ಇದು ಪ್ರಕರಣಬಲದಿಂದ ಪಾಂಡವರಲ್ಲೊಬ್ಬನನ್ನು ಬೋಧಿಸಬಹುದು. ಪ್ರಕರಣವೇ ಇಲ್ಲಿ ಗಮಕ. ಈ ಶಬ್ದಗಳು ಸರಿಯಾದ ಅರ್ಥವನ್ನು ಕೊಡಲು ಪ್ರಕರಣಾದಿಗಳನ್ನು ಬಯಸುವುದರಿಂದ ಸಾಪೇಕ್ಷ.

ನಾವು ಹೇಳಿದ ಅರ್ಥದಲ್ಲಿ ಸ್ವಲ್ಪ ಎಳೆದಾಟವಿದೆಯೆಂದು ನಮಗೂ ಗೊತ್ತಿದೆ. ಇದು ಅನಿವಾರ್ಯ. ಈ ಅರ್ಥವನ್ನೊಪ್ಪದಿದ್ದರೆ ಕವಿರಾಜಮಾರ್ಗಕಾರನು ಭ್ರಮಿಸಿದ್ದಾನೆ ಎಂದು ಒಪ್ಪಬೇಕು. ಇದೂ ಅನಿವಾರ್ಯ.

ಈ ಪರಿಚ್ಛೇದದಲ್ಲಿ ಬರುವ ದುಷ್ಕರ ಕಾವ್ಯಬಂಧಗಳಿಗೆ ಅನುವಾದಕರು ಅರ್ಥವನ್ನು ಬರೆದಿಲ್ಲ. ಅಪಪಾಠಗಳಿರುವುದರಿಂದ ಅರ್ಥ ಹೇಳುವುದು ತುಂಬ ಕಠಿಣವೂ ಹೌದು. ಕೆಲವೆಡೆ ಅಸಾಧ್ಯವೆನಿಸುವುದೂ ಹೌದು. ಭಾವೆ, ನುಸುಳು –ಮೊದಲಾದವುಗಳ ಸ್ವರೂಪವನ್ನಾದರೂ ಪರಿಚಯಮಾಡಿಕೊಡಲು ಯತ್ನಿಸಬಹುದಾಗಿತ್ತು ಎಂದು ನಮಗೆ ತೋರುತ್ತದೆ.

ಪ್ರೊ। ಎಂ.ವಿ. ಸೀತಾರಾಮಯ್ಯನವರು ಕವಿರಾಜಮಾರ್ಗದ ಟಿಪ್ಪಣಿಗಳಲ್ಲಿ ಇವುಗಳ ಸ್ವರೂಪವನ್ನು ತಿಳಿಸಿದ್ದಾರೆ. ಕೆಲವಕ್ಕೆ ಅರ್ಥವನ್ನೂ ಬರೆದಿದ್ದಾರೆ. ಇದನ್ನು ಪರಿಶೀಲಿಸುವುದು ಈ ಸಮೀಕ್ಷೆಯ ಪರಿಧಿಗೆ ಹೊರತಾದುದು. ಆದರೂ ಇಷ್ಟು ಹೇಳಬಹುದು–

೧. ಗೂಢಚತುರ್ಥ– ನಾಲ್ಕು ಗೂಢಾರ್ಥಗಳನ್ನು ಒಳಗೊಂಡಿರುವಂತೆ ಬರೆದರೆ ಗೂಢಚತುರ್ಥ ಎಂದು ಹೇಳಿದ್ದಾರೆ (ಪು. ೨೩೯). ಹಾಗಲ್ಲ, ಆ ಪಕ್ಷದಲ್ಲಿ ಅದು ಅರ್ಥಾಲಂಕಾರವಾದೀತು. ಚತುರ್ಥಪಾದದ ಎಲ್ಲ ಅಕ್ಷರಗಳೂ ಮೊದಲನೆಯ ಮೂರು ಪಾದಗಳಲ್ಲಿ ಗೂಢವಾಗಿದ್ದರೆ ಗೂಢ ಚತುರ್ಥ ವೆನಿಸುತ್ತದೆ (ನೋಡಿ: ಶಿಶುಪಾಲವಧ ೧೯–೯೬, ಮಲ್ಲಿನಾಥ ವ್ಯಾಖ್ಯಾನ).

೨. ಅತಾಲವ್ಯ– ಇಕಾರ, ಯಕಾರಗಳು ತಾಲವ್ಯವಾದರೂ ಗ್ರಂಥಕಾರನು ಬಳಸಿದ್ದಾನೆ. ಇದಕ್ಕೆ 'ಅಚವರ್ಗೀಯ' ಎಂದು ಹೆಸರಿಡುವುದು ಉತ್ತಮ.

೩. ಗೋಮೂತ್ರಿಕಾ ಬಂಧ. ಉದಾ:

ಜಲದಾಗಮದಿಂ ಚಿತ್ತಸ್ಖಲಿತಂ ಕೇಕಿನರ್ತನಂ ।
ಜಲದಾಗಮದಿಂ ಚಿತ್ತಸ್ಖಲಿತಂ ಕೇಳ ನಲ್ಲನಂ ॥

'ಕೇಳ ನಲ್ಲನಂ' ಎಂಬುದಕ್ಕೆ ಬದಲಾಗಿ ಕೇಕಿನರ್ತನಂ ಎಂದು ಪಾಠಾಂತರವಿದೆಯಂತೆ. ಆ ಪಕ್ಷದಲ್ಲಿ ಪೂರ್ವಾರ್ಧ–ಉತ್ತರಾರ್ಧಗಳಿಗೆ ಅರ್ಥಭೇದ ಉಂಟೆ? ಉಂಟಾದರೆ ಇದು 'ಸಮುದ್ಗಯಮಕ' ಎನಿಸುತ್ತದೆ. (ನೋಡಿ: ಶಿಶು ೧೯–೫೮, ಮಲ್ಲಿನಾಥ ವ್ಯಾಖ್ಯಾನ.) ಅರ್ಥಭೇದವಿಲ್ಲದಿದ್ದರೆ ಯಾವ ಅಲಂಕಾರವೂ ಅಲ್ಲ. 'ಅಯ್ಯೊ ಅಯ್ಯೊ' ಎಂದು ಕೂಗಿಕೊಂಡಂತೆ ಇದು! ಮೇಲೆ ಕಾಣಿಸಿದ ಪಾಠದಲ್ಲಿ 'ಕೇಕಿನರ್ತನಂ, ಕೇಳನಲ್ಲನಂ' ಇಷ್ಟು ಅಂಶದಲ್ಲಿ ಮಾತ್ರ ಗೋಮೂತ್ರಿಕಾಬಂಧವಾಗುತ್ತದೆ. ಗೋಮೂತ್ರಿಕಾಬಂಧವು ದುಷ್ಕರವೆಂದು ಹೇಳಲ್ಪಟ್ಟಿದೆ. ಅದರ ಲಕ್ಷಣ ಬೇರೆ. ಮೇಲಿನ ಉದಾಹರಣೆಯಲ್ಲಿ ಅಪಪಾಠ ಉಂಟು.

ತೃತೀಯ ಪರಿಚ್ಛೇದ

೨೧. ಜಿನಚರಣನಖಾದರ್ಶಂ
ವಿನತಾಮರ-ರಾಜ-ರಾಜಿ-ವದನಪ್ರತಿಮಂ ॥

— (ಪ. ೧೮ -ಪು. ೯೬)

ಇದು ವಿಶೇಷಣರೂಪಕಕ್ಕೆ ಉದಾಹರಣೆ: "ಇಲ್ಲಿ ವಿಶೇಷಣವು ರೂಪಣ ಗೊಂಡಿಲ್ಲವಾದ್ದರಿಂದ 'ವಿನತಾಮರರಾಜ ರಾಜವದನಪ್ರತಿಮಂ' (ನಮಸ್ಕರಿಸುವ ದೇವೇಂದ್ರನ ಮುಖವೆಂಬ ಚಂದ್ರನ ಬಿಂಬವುಳ್ಳ) ಎಂಬುದಾಗಿ ತಿದ್ದಬೇಕೆಂದು" ಮುಳಿಯ ತಿಮ್ಮಪ್ಪಯ್ಯನವರು ಸೂಚಿಸಿದ್ದಾರೆ. ಇದನ್ನು ಪ್ರೊ। ಎಂ.ವಿ.ಸೀ. ಅವರು ಅನುಮೋದಿಸಿದ್ದಾರೆ (ಪು. ೨೬೩).

ಇದನ್ನು ಡಾ। ಕೆ.ಕೃಷ್ಣಮೂರ್ತಿ ಅವರು ಒಪ್ಪದೆ ವಿಶೇಷಣವೂ ರೂಪಣಗೊಂಡಿದೆ ಎನ್ನುತ್ತಾರೆ. ಅವರು ಬರೆದಿರುವ ಅರ್ಥ ಹೀಗೆ "ವಿನತರಾದ ದೇವತೆಗಳು ಹಾಗೂ ರಾಜರ ಮುಖಗಳೆಂಬ ಪ್ರತಿಬಿಂಬಗಳನ್ನುಳ್ಳ ಜಿನಪದನಖ ವೆಂಬ ಕನ್ನಡಿ" ವಿಶೇಷ್ಯದಲ್ಲಿ ನಖವೆಂಬ ಆದರ್ಶ (ಕನ್ನಡಿ) ಎಂದು ರೂಪಕವಿರು ವುದರಿಂದ, ಅದನ್ನು ಸಮರ್ಥಿಸುವುದಕ್ಕೆ ವಿಶೇಷಣದಲ್ಲಿ ರೂಪಕ ಆವಶ್ಯಕವೆಂದೂ ಮುಖಗಳೆಂಬ ಪ್ರತಿಬಿಂಬ ಎನ್ನುವುದೇ ವಿಶೇಷಣರೂಪಕವೆಂದೂ ಇವರ ಅಭಿಪ್ರಾಯ.

ಉಭಯ ವಿದ್ವಜ್ಜನರ ವಾದವೂ ಸರಿಯಲ್ಲವೆಂದು ನಮ್ರತೆಯಿಂದ ನಿವೇದಿಸ ಬೇಕಾಗಿದೆ. ವಿಶೇಷಣರೂಪಕವೆಂದರೇನು? ವಿಶೇಷಣದಲ್ಲಿ ಮಾತ್ರ ರೂಪಕವಿರ ಬೇಕೆಂದೆ? ವಿಶೇಷ್ಯವಾದ 'ನಖಾದರ್ಶ'ದಲ್ಲಿಯೂ ರೂಪಕವಿದೆಯಲ್ಲ? ವಿಶೇಷ್ಯ ರೂಪಕವೆಂದೇಕೆ ಹೇಳಬಾರದು? ಅಥವಾ ಉಭಯರೂಪಕ ಎಂದೇಕೆ ಹೇಳ ಬಾರದು?

ವಿಶೇಷಣನಿಮಿತ್ತಕವಾದ ರೂಪಕ ವಿಶೇಷಣರೂಪಕವೆನಿಸುತ್ತದೆ. ವದನದ ಪ್ರತಿಬಿಂಬ ಬಿದ್ದುದರಿಂದಲೇ (ಈ ರೀತಿ ವಿಶೇಷಣವನ್ನು ಕೊಟ್ಟದ್ದರಿಂದಲೇ) ನಖವನ್ನು ಆದರ್ಶ ಎಂದು ರೂಪಿಸಲು ಸಾಧ್ಯವಾಗಿದೆ. ವಿಶೇಷಣನಿಮಿತ್ತಕವಾಗಿ ವಿಶೇಷ್ಯದಲ್ಲಿ ರೂಪಣವಾದ್ದರಿಂದ ಇದು ವಿಶೇಷಣರೂಪಕ ಎನ್ನುವುದು ಸಾರ್ಥಕ. ಹೀಗೆಯೇ ಹೇತುರೂಪಕ, ಶ್ಲಿಷ್ಟರೂಪಕ, ಹೇತೂಪಮಾ, ಹೇತ್ವಾಕ್ಷೇಪ –ಎಂಬಲ್ಲಿಯೂ ಹೇತುನಿಮಿತ್ತಕರೂಪಕ, ಶ್ಲಿಷ್ಟ(ಶ್ಲೇಷ)ನಿಮಿತ್ತಕರೂಪಕ –ಎಂದೇ ಅರ್ಥಮಾಡಬೇಕಾಗಿದೆ. 'ಕುಲಗಿರಿಯಯ್ ಗೌರವದಿಂ ನೆಲನಯ್ ಸ್ಥೈರಣೆಯಿಂ' ಎಂಬುದು ಹೇತುರೂಪಕವೆಂದು ಗ್ರಂಥಕಾರ ಹೇಳಿದ್ದಾನೆ. ಇಲ್ಲಿ ಹೇತುವಿನಲ್ಲಿ ರೂಪಕ ಎಲ್ಲಿದೆ? 'ಸುರಗಿರಿವೋಲ್ ಧೈರ್ಯದಿನಂಬರಮಣಿವೋಲ್ ತೇಜದಿಂ' ಎಂಬುದು ಹೇತೂಪಮೆ. ಹೇತುವಿನಲ್ಲಿ ಉಪಮೆ ಇಲ್ಲವಷ್ಟೆ? ಹೇತುನಿಮಿತ್ತಕವಾದ ಉಪಮೆ ಹೇತೂಪಮೆಯೆಂದೇ ಅರ್ಥ ಹೇಳಬೇಕು.

ಇನ್ನು ದಂಡಿಯ ಉದಾಹರಣೆಯಲ್ಲಿ ವಿಶೇಷಣದಲ್ಲೂ ರೂಪಕವಿದೆಯೆಂಬ ಒಂದು ಶಂಕೆ ಇದೆ. ಇದು ದಂಡಿಯ ಉದಾಹರಣೆ–

ಹರಿಪಾದಃ ಶಿರೋಲಗ್ನಜಹ್ನುಕನ್ಯಾಜಲಾಂಶುಕಃ ।
ಜಯತ್ಯಸುರನಿಃಶಂಕಸುರಾನಂದೋತ್ಸವಧ್ವಜಃ ॥ – (II-೮೧)

ವಾಮನಾವತಾರದಲ್ಲಿ ಮೇಲೆತ್ತಿದ ಹರಿಪಾದದ ವರ್ಣನೆ ಇದು. 'ಹರಿಪಾದವೆಂಬ ಉತ್ಸವಧ್ವಜ' ಎಂದು ವಿಶೇಷ್ಯದಲ್ಲಿ ರೂಪಣವಿದೆ. 'ಪಾಪದ ಅಗ್ರಭಾಗದಲ್ಲಿ ಸಂಸಕ್ತವಾದ ಗಂಗಾಜಲವೆಂಬ ಶ್ವೇತಪತಾಕೆಯುಳ್ಳ' ಎಂದು ಹರಿಪಾದಧ್ವಜಕ್ಕೆ ವಿಶೇಷಣ. ಇಲ್ಲಿ 'ಜಲಾಂಶುಕ' ಎಂದು ವಿಶೇಷಣದಲ್ಲಿ ರೂಪಕವುಂಟಲ್ಲವೆ? ನಿಜ.

ಹರಿಪಾದವನ್ನು ಧ್ವಜವೆಂದು ರೂಪಿಸಬೇಕಾದರೆ ಅದಕ್ಕೆ ಪತಾಕೆ ಬೇಕು. ಪತಾಕೆಯಿಲ್ಲದೆ ಧ್ವಜವೆಂದು ರೂಪಿಸಲಾಗುವುದಿಲ್ಲ. ಅದಕ್ಕಾಗಿ ಗಂಗಾಜಲವೇ ಪತಾಕೆಯೆಂದು ಕವಿಯು ರೂಪಿಸಿಕೊಂಡಿದ್ದಾನೆ. ಈ ರೂಪಣ ಅನಿವಾರ್ಯವಾಗಿ ಬಂದಿದೆಯೇ ಹೊರತು ವಿಶೇಷಣದಲ್ಲಿಯೂ ರೂಪಕವಿರಬೇಕೆಂದಲ್ಲ. ಇಲ್ಲಿಯೂ ವಿಶೇಷಣನಿಮಿತ್ತಕವಾಗಿಯೇ ವಿಶೇಷ್ಯದಲ್ಲಿ ರೂಪಕವಿದೆ. ಪ್ರಕೃತೋದಾಹರಣೆಯ ವಿಶೇಷಣದಲ್ಲಿ ರೂಪಕವಿಲ್ಲದೆಯೇ ವಿಶೇಷ್ಯದಲ್ಲಿ ರೂಪಣ ಮಾಡುವುದು ಸಾಧ್ಯವಾಗಿರುವುದರಿಂದ ಪಾಠವನ್ನು ತಿದ್ದುವುದು ಅನಾವಶ್ಯಕ. 'ಆದರೆ ದಂಡಿಯು ವಿಶೇಷಣಸಮಗ್ರದ ರೂಪಕವೆಂದಿದ್ದಾನಲ್ಲ. ಆದ್ದರಿಂದ ವಿಶೇಷಣದಲ್ಲಿಯೂ ರೂಪಕ ಆವಶ್ಯಕ' ಎಂದು ತಿಳಿಯಬಾರದು. 'ಹರಿಪಾದದಲ್ಲಿ ಕೇವಲ ಧ್ವಜದ ರೂಪಣವಲ್ಲ. ಪತಾಕಾವಿಶಿಷ್ಟವಾದ ಧ್ವಜದ ರೂಪಣ' ಎಂದು ಅದರ ಅರ್ಥ. ಪ್ರಕೃತದಲ್ಲಿಯೂ ಪ್ರತಿಬಿಂಬವಿಶಿಷ್ಟವಾದ ಆದರ್ಶವೆಂದೇ ರೂಪಣ ಮಾಡಲಾಗಿದೆ. ವಿಶೇಷಣ ನಿಮಿತ್ತಕವಾದ ರೂಪಕ = ವಿಶೇಷಣರೂಪಕ ಎಂಬ ಅರ್ಥವನ್ನು ಒಪ್ಪದಿದ್ದಲ್ಲಿ ವಿಶೇಷ್ಯದಲ್ಲಿಯೂ ರೂಪಕವಿರುವುದರಿಂದ ಈ ಹೆಸರೇ ಅನ್ವರ್ಥಕವಾದೀತು.

ಡಾ। ಕೆ. ಕೃಷ್ಣಮೂರ್ತಿಯವರು ಹೇಳಿರುವುದೂ ಯುಕ್ತವಲ್ಲ. ಬಿಂಬವಾದ ಮುಖದಲ್ಲಿ ಅದೇ ಪ್ರತಿಬಿಂಬವೆಂದು ರೂಪಿಸಲಾಗುವುದಿಲ್ಲ. ಪ್ರತಿಬಿಂಬವೆಂಬ ಒಂದು ವಸ್ತು ಉಪಮಾನವಾಗಿ ಪ್ರಸಿದ್ಧವಿಲ್ಲದಿರುವುದೇ ಇದಕ್ಕೆ ಕಾರಣ. ಅಲ್ಲದೆ ಅರ್ಥವೂ ಬಾಧಿತವಾಗುತ್ತದೆ. ನಖಾದರ್ಶದಲ್ಲಿ ಮುಖದ ಪ್ರತಿಬಿಂಬವಿದೆಯೇ ಹೊರತು ಮುಖವಿಲ್ಲ. ಉಪಮೇಯವು ಆದರ್ಶದಲ್ಲಿದ್ದರೆ ಮಾತ್ರ ಅದು ಯುಕ್ತವಾಗುತ್ತದೆ. ಉದಾಹರಣೆಗೆ, ಮುಖಕಮಲ ಎಂಬ ರೂಪಕಕ್ಕೆ ಮುಖಾಭಿನ್ನ ಕಮಲ ಎಂದರ್ಥ. ಮುಖವನ್ನೇ ಕಮಲವೆಂದು ತಿಳಿಯುವುದು ರೂಪಕ. ಆದರ್ಶದಲ್ಲಿ ಮುಖವಿದ್ದರೆ ಮಾತ್ರ ಹಾಗೆ ಹೇಳಲು ಸಾಧ್ಯ.

'ರಾಜರಾಜ' ಎಂಬ ಶಬ್ದವನ್ನು ಅನುವಾದಕರು 'ರಾಜರಾಜಿ' ಎಂದು ಪರಿಷ್ಕರಿಸಿರುವುದು ಅನಾವಶ್ಯಕ. ರಾಜ ಎಂದರೆ ಚಂದ್ರ. 'ಅಮರರಾಜನ ಚಂದ್ರಸದೃಶವಾದ ಮುಖವು ನಖಾದರ್ಶದಲ್ಲಿ ಪ್ರತಿಬಿಂಬಿತವಾಗಿದೆ' ಎಂದರೆ ಬಾಧಕವೇನು?

ಏವಂಚ ಮೂಲದಲ್ಲಿರುವುದು ಸರಿಯಾಗಿದೆ. ಗೊಂದಲ ಅನಾವಶ್ಯಕ.

೨೨. ಸತತೋದಯನಪ್ರತಿಹತ
ಗತಿತೀವ್ರಂ ದಿನಾಧಿನಾಥನುಮಸ್ತಂ- ।
ಗತನಾದನಂತೆ ನಿಯತ-
ಪ್ರತೀತಿಯುಂ ಕಳೆಯಲಕ್ಕುಮೇ ವ್ಯಾಪಕಮಂ ॥

— (ಪ. ೩೦ -ಪು. ೧೦೦)

ಇದು ಅರ್ಥಾಂತರನ್ಯಾಸಕ್ಕೆ ಉದಾಹರಣೆ. ಪ್ರಸ್ತುತವಾದ ವಿಷಯವನ್ನು ಅಪ್ರಸ್ತುತದಿಂದ ಸಮರ್ಥಿಸುವುದು ಅರ್ಥಾಂತರನ್ಯಾಸ. 'ಸೂರ್ಯನು ಅಸ್ತಂಗತನಾದನು. ಸರ್ವವ್ಯಾಪಿಯಾದ ವಿಧಿನಿಯಮವನ್ನು ಮೀರಲು ಯಾರಿಗೆ ಸಾಧ್ಯ?' ಇಲ್ಲಿ ಸೂರ್ಯನ ಅಸ್ತಮಯವರ್ಣನೆ ಪ್ರಕೃತ. ಇದು ವಿಶೇಷವಾಕ್ಯ. ಇದನ್ನು ಎರಡನೆಯ ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ. ಮೊದಲನೆಯದು ಸಮರ್ಥಿತ. ಎರಡನೆಯದು ಸಮರ್ಥಕ ಎನ್ನುವುದು ಸ್ಪಷ್ಟ. ಅನುವಾದದಲ್ಲಿ "ಮೊದಲನೆಯದು ವಿಶೇಷವಾಕ್ಯ, ಎರಡನೆಯದು ಅದರಿಂದ ಸಮರ್ಥಿತವಾದ ಸಾಮಾನ್ಯವಾಕ್ಯ" ಎಂದು ವಿಪರೀತವಾಗಿ ಬರೆದಿದ್ದಾರೆ. ಮುಂದೆ ಈ ಪ್ರಕರಣದಲ್ಲೆಲ್ಲ ಹೀಗೆಯೇ ಸಮರ್ಥಿತವನ್ನು ಸಮರ್ಥಕವೆಂದೂ ಸಮರ್ಥಕವನ್ನು ಸಮರ್ಥಿತವೆಂದೂ ತಲೆಕೆಳಗಾಗಿ ಬರೆದಿದ್ದಾರೆ.

೨೩. ಪರಿಣತಗುಣರಿರ್ ಕಾಂತೋ
ತ್ಕರರಿರ್ ನಿಜಸೌಖ್ಯರಿರ್ ನಿಶಾನಾಯಕನುಂ ।
ನರಪಾ ನೀನುಂ........ ॥

— (ಪ. ೪೨ -ಪು. ೧೦೫)

ಇದು ಶ್ಲೇಷವ್ಯತಿರೇಕಕ್ಕೆ ಉದಾಹರಣೆ.

ಇದಕ್ಕೆ "ರಾಜನೆ, ನೀನೂ ನಿಶಾನಾಥನಾದ ಚಂದ್ರನೂ ಇಬ್ಬರೂ ಪರಿಣತಗುಣರು. (ಇಬ್ಬರೂ) ಕಮನೀಯತೆಯಿಂದ ತುಂಬಿದವರು. (ಇಬ್ಬರೂ) ನಿಜಸೌಖ್ಯವುಳ್ಳವರು" ಎಂದು ಅರ್ಥ ಬರೆಯಲಾಗಿದೆ.

ಚಂದ್ರನು ಪರಿಣತಗುಣ ಎಂದರೇನು? ಕಾಂತೋತ್ಕರ ಶಬ್ದಕ್ಕೆ ಕಮನೀಯತೆಯಿಂದ ತುಂಬಿದ –ಎಂಬ ಅರ್ಥ ಹೇಗೆ ಬರುತ್ತದೆ? ಚಂದ್ರಪರವಾದಾಗ 'ನಿಜಸೌಖ್ಯವುಳ್ಳವನು' ಎಂಬಲ್ಲಿ ಚಮತ್ಕಾರವೇನೂ ಕಾಣದು. ಅರ್ಥ ಅತ್ಯಂತ ಪೇಶಲವಾಗಿದೆ. ನಮ್ಮ ಅರ್ಥ ಹೀಗೆ–

	ರಾಜಪರವಾಗಿ	ಚಂದ್ರಪರವಾಗಿ
೧. ಪರಿಣತಗುಣರ್	ಧೈರ್ಯ, ಶೌರ್ಯಾದಿ ಮಹಾಗುಣವುಳ್ಳವನು	ವೃದ್ಧಿ, ಹ್ರಾಸ -ಎಂಬ ಬದಲಾಯಿಸುವ ಗುಣವುಳ್ಳವನು.

೨.	ಕಾಂತೋತ್ಕರರ್	ಕಾಂತೆಯರ ಸಮೂಹವುಳ್ಳವನು ಅಥವಾ ಕಾಂತೆಯರ ಮೇಲೆ ನೀಡಿದ ಕರ (ಕೈ) ಉಳ್ಳವನು	ರಮಣೀಯವಾದ ಉದ್ಗತ-ಚಾಚಿದ ಕಿರಣವುಳ್ಳವನು
೩.	ನಿಜಸೌಖ್ಯರ್	ಸ್ವಕೀಯವಾದ ರಾಜ ಸೌಖ್ಯವುಳ್ಳವನು	ಸ್ವಕೀಯವಾದ ಸುಂದರ ಗಗನಮಾರ್ಗದಲ್ಲಿ ಸಂಚರಿಸ ತಕ್ಕವನು.

(ಶೋಭನಂ ಖಂ [ಗಗನಂ] ಯಸ್ಯ ಸಃ ಸುಖಃ । ತಸ್ಯ ಭಾವಃ ಸೌಖ್ಯಂ ।
ನಿಜಂ ಸೌಖ್ಯಂ ಯಸ್ಯ ಸಃ ನಿಜಸೌಖ್ಯಃ)

೨೪. ಅಲಘುಭುಜನಾಗಿಯುಂ....... — (ಪ. ೪೩ -ಪು. ೧೦೫)

ಇಲ್ಲಿಯೂ 'ಅಲಘುಭುಜ, ನಿಶ್ಚಲ, ಭೂಭೃತ್, ಕಠಿನಭೋಗಾಧಾರ' ಎಂಬಲ್ಲಿ ಎರಡೆರಡು ಅರ್ಥಗಳುಂಟು. ಅನುವಾದಕರು ಇದನ್ನು ಸ್ಪಷ್ಟಪಡಿಸಬೇಕಾಗಿತ್ತು.

೨೫. ಮದಮುದಿತಾಳಿಕದಂಬಂ
ಮೃದು-ವಿಳಸಿತ-ಸರಸ-ಕೇಸರಂ-ಸರಸಿರುಹಂ ।
ವದನಮಿದು ಲೋಲ-ಲೋಚನ-
ಮುದಿತಂ ಸ್ಮಿತ-ದಶನವಸನ ರಾಗೋಪಚಿತಂ ॥

— (ಪ. ೪೫ -ಪು. ೧೦೬)

"ಇಲ್ಲಿ ಉಪಮಾನೋಪಮೇಯಗಳಿಗೆ (ಎಂದರೆ ಕಮಲ ಹಾಗೂ ಮುಖಗಳಿಗೆ) ಸಾದೃಶ್ಯವನ್ನು ವಾಚ್ಯವಾಗಿಯೇ ಎತ್ತಿಹೇಳಿ ಅವುಗಳ ಭೇದವನ್ನು ತಿಳಿಸಿರುವುದರಿಂದ ಇದು ವಾಚ್ಯವಾಗಿರುವ ಸದೃಶವ್ಯತಿರೇಕ" ಎಂದು ವಿವರಣೆ ಇದೆ.

ಸಾದೃಶ್ಯವು ವಾಚ್ಯವಾದದ್ದು ಹೇಗೆ? ವಾಚಕ ಶಬ್ದ ಯಾವುದು? ದಂಡಿಯ ಉದಾಹರಣೆಗಳನ್ನು ಸ್ವಲ್ಪ ವಿಪರ್ಯಾಸಗೊಳಿಸಿ ಮಾರ್ಗಕಾರನು ಉದಾಹರಿಸಿದ್ದಾನೆ. 'ಫುಲ್ಲತ್ವ, ಸುರಭಿಗಂಧಿತ್ವ' ಎಂಬ ಸಮಾನಧರ್ಮಗಳನ್ನು ಅವನು ಹೇಳಿದ್ದಾನೆ. ಮಾರ್ಗಕಾರನು ಹೇಳಿಲ್ಲ. ಇದೇ ಪ್ರತೀಯಮಾನ ಸಾದೃಶ್ಯವ್ಯತಿರೇಕ ಅಥವಾ ಅರ್ಥವ್ಯತಿರೇಕ. ಅನುವಾದಕರು ಇದನ್ನು ಗಮನಿಸಿಲ್ಲ. ಮುಂದಿನ ಉದಾಹರಣೆ ಹೀಗಿದೆ–

ಶರದಂಬರಮುಂ ಮತ್ತೀ
ಸರವರಮುಂ ವಿಳಸದತನುಧವಳಚ್ಛವಿಗಳ್ ।
ಹರಿಣಾಂಕಾಲಂಕೃತಮುಂ
ಬರಮೀ ಕೊಳಮುಚಿತರಾಜಹಂಸೋತ್ತಂಸಂ ॥

ಇಲ್ಲಿ ಶರತ್ಕಾಲದ ಆಕಾಶ ಮತ್ತು ಸರೋವರಗಳ ವರ್ಣನೆ ಇದೆ. ಎರಡೂ ವರ್ಣನೀಯಗಳಾದರೂ ಪರಸ್ಪರವಾಗಿ ಉಪಮಾನೋಪಮೇಯಭಾವವಿವಕ್ಷಿತವಾಗಿದೆ. 'ವಿಳಸದತನುಧವಳಚ್ಛವಿ' ಎಂಬ ಶಬ್ದದಿಂದ ಸಮಾನಧರ್ಮವು ಉಕ್ತವಾಗಿರುವುದರಿಂದ ಶಬ್ದತಃ ಸಾದೃಶ್ಯ ತೋರುತ್ತದೆ. ವಾಚಕಶಬ್ದವಿಲ್ಲದ್ದರಿಂದ ಇಲ್ಲಿಯೂ ಸಾದೃಶ್ಯವು

ಪ್ರತೀಯಮಾನವೇ. ಸಾದೃಶ್ಯಪ್ರತೀತಿಗೆ ಇಲ್ಲಿ ಶಬ್ದಬಲವಿರುವುದರಿಂದ ಇದು ಶಾಬ್ದ, ಪೂರ್ವೋಕ್ತೋದಾಹರಣೆಯಲ್ಲಿ ಸಾದೃಶ್ಯಪ್ರತೀತಿಗೆ ಶಬ್ದಬಲವಿಲ್ಲ. ಸಾಹಚರ್ಯವೆಂಬ ಅರ್ಥದ ಬಲದಿಂದಲೇ ಸಾದೃಶ್ಯ ತೋರುತ್ತದೆ. ಆದ್ದರಿಂದ ಅದು ಆರ್ಥ. ದಂಡಿಯ ಸಂವಾದಿಶ್ಲೋಕಗಳನ್ನು ಕಂಡು ಅನುವಾದಕರು ಎಡವಿರುವುದನ್ನು ಮುಂದೆಯೂ ಕಾಣಬಹುದು. ದಂಡಿಯು ಅರ್ಥವ್ಯತಿರೇಕಕ್ಕೆ ಉದಾಹರಿಸಿದ 'ಚಂದ್ರೋऽಯಮಂಬರೋತ್ತಂಸ....' (II-೧೯೪) ಎಂಬ ಉದಾಹರಣೆಯಲ್ಲಿಯೂ ಸಮಾನಧರ್ಮವನ್ನು ಹೇಳಿಲ್ಲ.

೨೬. ಅನಲನಿನದಾಹ್ಯಕಳಂಕ-
ಮನನಿಳ ತಪನೀಯಧೂಳಿಯಾನಜಲಕ್ಷಾ-
ಲನಮನನಾ 'ಕಲ'(ತಪ?) ಶೋಷ್ಯಮ-
ನನಿಯತ-ಕರ್ದಮಮನಯಶಮಂ ತೊಱೆಗೞೆವಂ ॥

— (ಪ. ೪೮ -ಪು. ೧೦೭)

ತುಂಬ ಅಶುದ್ಧವಾಗಿದ್ದ ಈ ಪದ್ಯವನ್ನು ಡಾ। ಕೆ. ಕೃಷ್ಣಮೂರ್ತಿಗಳು ಪರಿಷ್ಕರಿಸಿರುವುದು ಪ್ರಶಂಸನೀಯ. 'ಕಲ'ಕ್ಕೆ ಪ್ರತಿಯಾಗಿ 'ತಪ' ಎಂಬ ತಿದ್ದುಪಡಿಗ್ರಾಹ್ಯವೆನಿಸುತ್ತದೆ. 'ಅ.....ಕಳಂಕಂ' ಎಂಬಲ್ಲಿ ದ್ವಿತೀಯವಿಭಕ್ತಿ ಇದ್ದರೆ ಉತ್ತಮವಾಗುತ್ತಿತ್ತು. ಅಲ್ಲದೆ ಗಾಳಿಯಿಂದ ಧೂಳಿ 'ತಪನೀಯ'ವಾಗುವುದಿಲ್ಲ. ಅಲ್ಲಿಯೂ ತಿದ್ದುವುದು ಆವಶ್ಯಕ. ನಮ್ಮ ಪರಿಷ್ಕರಣ ಹೀಗೆ-

ಅನಲಾದಾಹ್ಯಕಳಂಕಮ-
ನನಿಲಾನಪನೇಯ ಧೂಳಿಯಾನಜಲ ಕ್ಷಾ- ।
ಲನಮನನಾ (ತಪ) ಶೋಷ್ಯಮ-
ನನಿಯತಕರ್ದಮಮನಯಶಮಂ ತೊಱೆಗೞೆವಂ ॥

'ಕಲ' ಎಂಬುದನ್ನು 'ಕುಲ' ಎಂದು ತಿದ್ದಿದರೆ ಹೇಗೆ? ಅನಾಕುಲಶೋಷ್ಯಂ = ಕೆಸರನ್ನು ಕದಡಿ ಒಣಗಿಸಬಹುದು, ಅಪಕೀರ್ತಿಯನ್ನು ಹಾಗೆ ಮಾಡಲಾಗುವುದಿಲ್ಲ -ಎಂಬ ಅರ್ಥ ಉಚಿತವಾಗದೆ? ವಿದ್ವಾಂಸರು ಪರಿಶೀಲಿಸಬೇಕು.

೨೭. ತಿರಿತರ್ಱುಮುಮುಳ-ಜಳನಿಧಿ-
ಪರಿಖಾವೃತ-ಭೂಮಿಭಾಗಮಂ ಭರದೆ ಜಳಾ- ।
ಕರವಿಕ್ಷೇಪಕ ಕಕುದಂ
ತರಮಂ ಸವಿಶೇಷ ರುಚಿಯ ಸಂಭವ-ವಿಧಿಯಂ (?) ॥

— (ಪ. ೫೫ -ಪು. ೧೧೦)

ಆದಿದೀಪಕಕ್ಕೆ ಉದಾಹರಣೆ ಇದು. ಇದರಲ್ಲಿ ಕರ್ತೃಪದವೇ ಇಲ್ಲವಾದ್ದರಿಂದ ಇದನ್ನು ಅನುವಾದಕರು ಪರಿಷ್ಕರಿಸಿದ್ದು ಉಚಿತವೇ. ದ್ವಿತೀಯಾರ್ಧದ ಅವರ ಪರಿಷ್ಕರಣೆ ಹೀಗೆ-

ಕರವಿಕ್ಷೇಪಕ ಕಕುದಂ
ತರಮುಂ ಗಜಸೈನ್ಯಮಂತೆ ನಿನ್ನಯ ಗುಣಮುಂ ॥

'ಕಕುದಂತರ' ಶಬ್ದಕ್ಕೆ ವಿವಕ್ಷಿತವಾದ 'ದಿಗಂತರಾಳ' ಎಂಬ ಅರ್ಥ ಇಲ್ಲ. ಕಕುತ್=ಎತ್ತಿನ ಹಿಣಿಲು. (ಪ್ರೊ। ಎಂ.ವಿ.ಸೀ. ಅವರೂ ಇದನ್ನು ಗಮನಿಸಿಲ್ಲ.) ಅಲ್ಲದೆ 'ಗಜಸೈನ್ಯಮಂತೆ ನಿನ್ನಯ ಗುಣಮುಂ' ಎಂಬ ಪರಿಷ್ಕರಣವು ಅರ್ಥಾನುಗತ ವಾದರೂ ಉಪಲಬ್ಧ ಪಾಠಕ್ಕೆ ಶಬ್ದಾನುಗತವಾಗಿಲ್ಲ. ನಮ್ಮ ಪರಿಷ್ಕರಣ ಹೀಗೆ- 'ಕರವಿಕ್ಷೇಪಕ ಕಕುಬಂತರಮಂ ಸವಿಶೇಷರುಚಿ ಯಶಂ ಭವದ್ವಿಧಿಯುಂ' ಅಥವಾ 'ಸವಿಶೇಷರುಚಿರಯಶಮುಂ ವಿಧಿಯುಂ'

ಕಕುಪ್=ದಿಕ್ಕು. ವಿಧಿ=ಆಜ್ಞೆ. ಭವದ್ವಿಧಿ=ನಿನ್ನ ಆಜ್ಞೆ.

೨೮. ಸರಸಿರುಹಮಿಂದು ದೀಧಿತಿ
ಪರಾಜಿತ ಶ್ರೀವಿಲಾಸಮೀ ನಿನ್ನ ಮುಖಂ ।
ಹರಿಣಧರವಿಜಯ ಶೋಭಾ-
ಕರಮೆಂಬುದಿದೂರ್ಜಿತೋಪಮಾನವಿಭಾಗಂ ॥

— (ಪ. ೭೧ -ಪು. ೧೧೫)

ಇದು ಊರ್ಜಿತೋಪಮೆಯೆಂದು ಮಾರ್ಗಕಾರನು ಹೇಳಿದ್ದಾನೆ. ದಂಡಿಯ ಸಂವಾದಿ ಶ್ಲೋಕದಲ್ಲಿ ನಿರ್ಣಯೋಪಮೆಯೆನ್ನಲಾಗಿದೆ. ಅನುವಾದಕರು "ಇದು ನಿರ್ಣಯೋಪಮೆಯೇ ಹೌದು. ಇದು ಕಮಲವಲ್ಲ, ಮುಖವೇ ಸರಿ ಎಂದು ನಿರ್ಣಯ ಉಂಟಾಗಲು ಇಲ್ಲಿ ಕಾರಣವನ್ನು ಕೊಡಲಾಗಿದೆ. ಅರ್ಥಾಂತರ ಕಲ್ಪಿಸುವುದು ಅಸಮರ್ಥನೀಯ" ಎಂದು ಹೇಳಿದ್ದಾರೆ. ನಿರ್ಣಯೋಪಮೆಯನ್ನೇ ನಾಮಾಂತರದಿಂದ ಕರೆಯಲಾಗಿದೆ ಎಂದು ಅವರ ಅಭಿಪ್ರಾಯ.

ಪ್ರೊ। ಎಂ. ವಿ. ಸೀ. ಅವರು ತಮ್ಮ ಗ್ರಂಥದ ಟಿಪ್ಪಣಿಯಲ್ಲಿ "ಕಮಲದ ಸೌಂದ ರ್ಯವು ಚಂದ್ರಪ್ರಕಾಶಕ್ಕೆ ಕುಂದಿ ಅನೂರ್ಜಿತವಾಗಿರುವಲ್ಲಿ, (ವರ್ಣ್ಯವಾದ) ಮುಖಸೌಂದರ್ಯವು ಅದೇ ಚಂದ್ರಪ್ರಕಾಶವನ್ನು ಗೆದ್ದು ಊರ್ಜಿತವಾಗಿದೆ. ಆದ್ದರಿಂದ ಇದು ಊರ್ಜಿತೋಪಮೆ" ಎಂದು ಬರೆದಿದ್ದಾರೆ. ಇದು ಸರಿ ಎಂದು ನಮ್ಮ ಅಭಿಪ್ರಾಯ. ಆದರೆ ಅವರೇ ಕಡೆಯಲ್ಲಿ 'ನಿರ್ಣಯ, ಊರ್ಜಿತತ್ವ –ಎರಡೂ ಒಂದೇ' ಎಂದಿರುವುದು ಮಾತ್ರ (ಪು. ೨೮೪) ನಮಗೆ ಸಂಮತವಲ್ಲ.

ಮೊದಲು ಸಂಶಯವಿದ್ದರೆ ತಾನೇ ನಿರ್ಣಯ ಹುಟ್ಟಬೇಕು. ಉದಾಹೃತ ಪದ್ಯದಲ್ಲಿ ನಾಯಕನು ಪ್ರೇಯಸಿಗೆ 'ಈ ನಿನ್ನ ಮುಖಂ' ಎಂದು ನಿರ್ದೇಶಿಸಿ ಹೇಳುತ್ತಿರುವಾಗ, ಮುಖವೋ ಕಮಲವೋ ಎಂಬ ಸಂಶಯಕ್ಕೆ ಉತ್ಥಿತಿಯೇ ಇಲ್ಲ. ಸಂಶಯವಿದ್ದರಲ್ಲವೆ ನಿರ್ಣಯಕ್ಕೆ ಕಾರಣವನ್ನು ಕೊಡಬೇಕು? ದಂಡಿಯ ಶ್ಲೋಕ ಹೀಗಿದೆ-

ನ ಪದ್ಮಸ್ಯೇಂದು ನಿಗ್ರಾಹ್ಯಸ್ಯೇಂದುಲಜ್ಜಾಕರೀ ದ್ಯುತಿಮ್ ।
ಅತಸ್ತ್ವನ್ಮುಖಮೇವೇದಮಿತ್ಯಸೌ ನಿರ್ಣಯೋಪಮಾ ॥

"ಚಂದ್ರನಿಗೆ ಸೋತುಹೋಗುವ ಕಮಲಕ್ಕೆ ಚಂದ್ರನನ್ನೇ ನಾಚಿಸುವ ಕಾಂತಿ ಇರಲು ಶಕ್ಯವಿಲ್ಲ. ಆದ್ದರಿಂದ ಇದು ನಿನ್ನ ಮುಖವೇ ಸರಿ."

ಇಲ್ಲಿ 'ಅತಸ್ತ್ವನ್ಮುಖಮೇವೇದಂ' ಎಂದು ಹೇತುಸಹಿತವಾದ ನಿರ್ಣಾಯಕ ವಾಕ್ಯವಿರುವುದರಿಂದ, ಮೊದಲು ಸಂಶಯವನ್ನಿಲ್ಲಿ ಕಲ್ಪಿಸಿಕೊಳ್ಳಬೇಕಾಗಿದೆ. ಆದ್ದರಿಂದ ಇದು ನಿರ್ಣಯೋಪಮೆ. ಮಾರ್ಗಕಾರನ ಪದ್ಯದಲ್ಲಿ ಇಂತಹ ನಿರ್ಣಾಯಕವಾಕ್ಯ ಎಲ್ಲಿದೆ? ದಂಡಿಯ ಉದಾಹರಣೆಯಲ್ಲಿ ಸಂಶಯವನ್ನು ಊಹಿಸಿಕೊಳ್ಳಬೇಕೆಂದು ಪ್ರಕಾಶ ವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ಬರೆದಿದೆ. 'ಉಪಮೇಯಸ್ಯ ಸಂಶಯ್ಯ ನಿಶ್ಚಯಾನ್ನಿಶ್ಚಯೋಪಮಾ' ಎಂದು ಅಗ್ನಿಪುರಾಣದ ವಚನ.

ದಂಡಿಯ ಉದಾಹರಣೆಯನ್ನು ಮಾರ್ಗಕಾರನು ಅಲ್ಲಲ್ಲಿ ಸ್ವತಂತ್ರವಾಗಿ ಮಾರ್ಪಡಿಸಿದ್ದಾನೆಂದು ನಾವು ಹಿಂದೆಯೇ ತಿಳಿಸಿದ್ದೇವೆ. ಊರ್ಜಿತೋಪಮೆ ಯೆಂಬುದು ಮಾರ್ಗಕಾರನ ಸ್ವತಂತ್ರ ಕಲ್ಪನೆ. ಇದು ನಿರ್ಣಯೋಪಮೆಯಲ್ಲ. ಹಾಗಿದ್ದರೆ ಇದು 'ನಿರ್ಣಯೋಪಮಾನವಿಭಾಗಂ' ಎಂದು ಹೇಳಲು ಬಾಧಕವೇನಿತ್ತು?

೨೯. ಅಳಿಗಳಿವು ಕಣ್ಗಳಲ್ಲಿವು
ನಳಿನಮಿದೀ ವದನಮಲ್ತು ನಿಜ-ಕಾಮಿನಿಯಾ ।
ತಿಳಿದಿಂತು ಪೇೞ್ವೊಡಿದು ಮೊ
ಕ್ಕಳಮುಪಮಾಖ್ಯಾತಮಪ್ಪ ತತ್ತ್ವಾಖ್ಯಾನಂ ॥

– (ಪ. ೭೬ -ಪು. ೧೧೭)

"ಇವು ಕಣ್ಣುಗಳಲ್ಲ, ದುಂಬಿಗಳು; ಇದು ಕಾಂತೆಯ ಮುಖವಲ್ಲ, ಕಮಲ" ಎಂದು ಹೇಳುವುದು 'ತತ್ತ್ವಾಖ್ಯಾನೋಪಮೆ'. ಇದು ದಂಡಿ II-೩೬ನ್ನು ಅಪಾರ್ಥ ಮಾಡಿಕೊಂಡ ಅನುವಾದದಂತಿದೆ. ಇಲ್ಲಿ ಇದೇ ತತ್ತ್ವಾಖ್ಯಾನೋಪಮೆಗೆ ಕೊಟ್ಟಿರುವ ಲಕ್ಷ್ಯ ಹೀಗಿದೆ–

ನ ಪದ್ಮಂ ಮುಖಮೇವೇದಂ ನ ಭೃಂಗೌ ಚಕ್ಷುಷೀ ಇಮೇ ।
ಇತಿ ವಿಸ್ಪಷ್ಟ ಸಾದೃಶ್ಯಾತ್ ತತ್ತ್ವಾಖ್ಯಾನೋಪಮೈವ ಸಾ ॥"

–ಎಂದು ಹೇಳಿ ಅನುವಾದಕರು ಇನ್ನೂ ಬೆಳೆಸಿದ್ದಾರೆ.

ಅಪಾರ್ಥ ಮಾಡಿಕೊಂಡವರು ನಾವೇ. ಮಾರ್ಗಕಾರನಲ್ಲ! ಕಾಳಿದಾಸನ ವಿಕ್ರಮೋರ್ವಶೀಯದಲ್ಲಿ ವಿರಹೋನ್ಮತ್ತನಾದ ಪುರೂರವನು ನದೀ, ಲತೆ-ಮೊದಲಾದವು ಉರ್ವಶಿಯೆಂದೇ ಮೊದಲು ಭ್ರಮಿಸುತ್ತಾನೆ. ಅನಂತರ ಉರ್ವಶಿ ಯಲ್ಲ ಎಂಬ ನಿಶ್ಚಯಕ್ಕೆ ಬರುತ್ತಾನೆ. ಹಾಗೆಯೇ ವಿರಹೋನ್ಮತ್ತನ ವಚನವಿದು. ತಾವರೆಯ ಬಳ್ಳಿಯನ್ನು ಕಂಡು ನಿಜಕಾಮಿನಿಯೆಂದು ಭ್ರಮಿಸಿದ್ದಾನೆ. ಅನಂತರ ತಾವರೆಯ ಬಳ್ಳಿಯೆಂಬ 'ತತ್ತ್ವ'ವು ತಿಳಿಯಲಾಗಿ 'ಇವು ನಿಜಕಾಮಿನಿಯ ಕಣ್ಣುಗಳಲ್ಲ, ದುಂಬಿಗಳು; ಅವಳ ವದನವಲ್ಲ, ಕಮಲವಿದು' ಎನ್ನುತ್ತಾನೆ. ಹೀಗೆಯೇ ಇದರ ಅರ್ಥ. ತತ್ತ್ವಾಖ್ಯಾನೋಪಮೆ ಸಂಗತವಾಗಿದೆ. 'ನಿಜಕಾಮಿನಿಯಾ' ಎಂದು ಹೇಳಿಕೊಂಡಮೇಲೆ ಅಪಹ್ನುತಿಗೆ ಅವಕಾಶವೇ ಇಲ್ಲ. ಅಪಹ್ನುತಿಯಾದರೆ 'ಇದು

ತಾವರೆಬಳ್ಳಿ, ಕಾಮಿನಿಯಲ್ಲ' ಎಂದು ಹೇಳಲೇಬೇಕಾಗುತ್ತದೆ. ಇಲ್ಲದಿದ್ದರೆ ವ್ಯಾಹತ ವಾದೀತು. "ಇವು ನನ್ನ ಕಾಂತೆಯ ಕಣ್ಣುಗಳಲ್ಲ, ಅವಳ ದುಂಬಿಗಳು!" ಎಂದು ಯಾವ ಮೂರ್ಖಭ್ರಾಂತನೂ ಅಪಹ್ನವ ಮಾಡುವುದಿಲ್ಲ.

೩೦. ವಿಪರೀತಂ ತರುತತಿಯವೊಲ್...... ॥ — (ಪ. ೮೪ -ಪು. ೧೨೦)

ಇದು ಸಂಧಾನೋಪಮೆಯೆಂದಿದ್ದಾನೆ ಮಾರ್ಗಕಾರ. ದಂಡಿ ಈ ಭೇದವನ್ನು ಹೇಳಿಲ್ಲ. ಶ್ಲೇಷೋಪಮೆಗೂ ಇದಕ್ಕೂ ಭೇದವೇನು? ಸಮಾನಧರ್ಮವು ಅಭಂಗಶ್ಲೇಷ ದಿಂದ ಉಪಾತ್ತವಾದರೆ ಶ್ಲೇಷೋಪಮೆಯೆಂದೂ ಸಭಂಗಶ್ಲೇಷದಿಂದ ಉಪಾತ್ತವಾದರೆ ಸಂಧಾನೋಪಮೆಯೆಂದೂ ಭಾವಿಸಿರಬೇಕು. ಸಭಂಗಶ್ಲೇಷದಲ್ಲಿ ವಿಭಿನ್ನಾಕೃತಿಯ ಶಬ್ದರೂಪಗಳ ಸಂಧಾನ (ಸಂಯೋಜನ) ಇರುತ್ತದೆ. ಅಭಂಗದಲ್ಲಿ ಈ 'ಸಂಧಾನ' ಇಲ್ಲ.

'ಪದ್ಮಿನಿವೊಲ್ ಉಪಗತವಿಭ್ರಮರಹಿತಂ ಕುಪಿತಾಕೃತಿ'. ಪದ್ಮಿನೀಪಕ್ಷದಲ್ಲಿ ಅರ್ಥ ಹೇಗೆ? "ಪದ್ಮಿನಿಯಂತೆ 'ಉಪಗತವಿಭ್ರಮ'ವಿಲ್ಲದ್ದು (ಪದ್ಮಿನಿಯು ವಿಭ್ರಮ ದಿಂದ ಉಪಗತ ಎಂದರೆ ವಿಲಾಸಸಮೇತ. ಆಕೃತಿಯು ಭ್ರಾಂತಿಹೀನ ಅಥವಾ ನಿಶ್ಚಿತ)" ಎಂದು ಅನುವಾದಕರು ಬರೆದಿದ್ದಾರೆ. 'ರಹಿತ' ಶಬ್ದ ಏನಾಯಿತು? 'ವಿಲಾಸರಹಿತ' ಎಂದು ಅರ್ಥವಾಗುತ್ತದೆಯಲ್ಲ!

ಪ್ರೊ। ಎಂ.ವಿ.ಸೀ.ಯವರು 'ಉಪಗತವಿಭ್ರಮರಹಿತಂ' ಎಂಬುದಕ್ಕೆ ಪದ್ಮಿನೀ ಪಕ್ಷದಲ್ಲಿ 'ಸಂಚಲನವಿಲ್ಲದ್ದು, ಇದ್ದ ಕಡೆ ಇರುವುದು' ಎಂದು ಅರ್ಥ ಮಾಡಿದ್ದಾರೆ (ಪು. ೨೮೮). ವಿಭ್ರಮಶಬ್ದಕ್ಕೆ ಸಂಚಲನ ಎಂದು ಅರ್ಥವನ್ನಿಟ್ಟುಕೊಂಡಿರುವುದು ಸ್ಪಷ್ಟ. ಈ ಅರ್ಥ ಪ್ರಸಿದ್ಧವಲ್ಲ. ರೂಢಿವಿರುದ್ಧವೂ ಆಗುತ್ತದೆ. ನಮ್ಮ ಅರ್ಥ ಹೀಗೆ–

ಉಪಗತ = ಬಳಿಗೆ ಬಂದ, ವಿ = ಹಕ್ಕಿಗಳಿಗೂ, ಭ್ರಮರ = ಭ್ರಮರಗಳಿಗೂ ಹಿತ (ಪದ್ಮಿನೀಪಕ್ಷದಲ್ಲಿ)

೩೧. ಪ್ರತಿವಸ್ತೂಪಮಿತಾಲಂ
ಕೃತಮಿಂತಕ್ಕುಂ ಧರಾಧಿಪಾ ನಿನ್ನನ್ನಂ ।
ವಿತತ-ಯಶ-ನಿಲಯ ತಾರಾ
ಪತಿ ದಿನಕರ-ಸದೃಶ-ತೇಜನೆಂಬುದುಮುಂಟೇ ॥

— (ಪ. ೮೫ -ಪು. ೧೨೦)

ಇದು ಪ್ರತಿವಸ್ತೂಪಮೆ. ಪ್ರತಿ ಪದಾರ್ಥದಲ್ಲಿಯೂ ಉಪಮೆಯುಳ್ಳದ್ದು ಪ್ರತಿವಸ್ತೂಪಮೆ. ಉಪಮೇಯವಾಕ್ಯ, ಉಪಮಾನವಾಕ್ಯಗಳೆರಡಿದ್ದು ಅವುಗಳಲ್ಲಿ ಪ್ರತಿಯೊಂದು ಪದಾರ್ಥಕ್ಕೂ ಸಾದೃಶ್ಯವಿರುತ್ತದೆ. ಈ ಸಾದೃಶ್ಯ ಪ್ರತೀಯಮಾನ. ವಾಕ್ಯಾರ್ಥಗಳಲ್ಲಿ ಒಂದೇ ಸಮಾನಧರ್ಮವಿರುತ್ತದೆ. ಕಾವ್ಯಪ್ರಕಾಶದಲ್ಲಿ '....ಪ್ರತಿ ವಸ್ತೂಪಮಾ ತು ಸಾ । ಸಾಮಾನ್ಯಸ್ಯ ದ್ವಿರೇಕಸ್ಯ ಯತ್ರ ವಾಕ್ಯದ್ವಯೇ ಸ್ಥಿತಃ' ಎಂದು ಲಕ್ಷಣವನ್ನು ಹೇಳಲಾಗಿದೆ. ದಂಡಿಯು–

ವಸ್ತು ಕಿಂಚಿದುಪನ್ಯಸ್ಯ ನ್ಯಸನಾತ್ ತತ್ಸಧರ್ಮಣಃ ।
ಸಾಮ್ಯಪ್ರತೀತಿರಸ್ತೀತಿ ಪ್ರತಿವಸ್ತೂಪಮಾ ಯಥಾ ॥ — (II -೪೬)

ಎಂದಿದ್ದಾನೆ. ಆತನ ಉದಾಹರಣೆ–

ನೈಕೋಽಪಿ ತ್ವಾದೃಶೋಽದ್ಯಾಪಿ ಜಾಯಮಾನೇಷು ರಾಜಸು ।
ನನು ದ್ವಿತೀಯೋ ನಾಸ್ತ್ಯೇವ ಪಾರಿಜಾತಸ್ಯ ಪಾದಪಃ ॥

"ರಾಜ, ಹುಟ್ಟುತ್ತಲೇ ಇರುವ ರಾಜರಲ್ಲಿ ಒಬ್ಬನೂ ನನಗೆ ಸಮನಾದವನಿಲ್ಲ. ಪಾರಿಜಾತಕ್ಕೆ ಸದೃಶವಾದ ಇನ್ನೊಂದು ಮರ ಇಲ್ಲವೇ ಇಲ್ಲ."

ಇಲ್ಲಿ ವರ್ಣನೀಯ ರಾಜ–ಪಾರಿಜಾತಗಳಿಗೂ, ಇನ್ನೊಬ್ಬ ರಾಜ–ಮರಗಳಿಗೂ ಸಾದೃಶ್ಯ ಪ್ರತೀತವಾಗುತ್ತದೆ. 'ಇಲ್ಲ' ಎಂಬ ನಿಷೇಧವು ಉಭಯವಾಕ್ಯಗಳಲ್ಲಿರುವ ಸಮಾನಧರ್ಮ.

ಇದನ್ನು ಮುಂದಿನವರು ಪ್ರತ್ಯೇಕವಾದ ಅಲಂಕಾರವೆಂದು ಗಣಿಸಿದ್ದಾರೆ. ಪ್ರಕೃತದಲ್ಲಿ ಮಾರ್ಗಕಾರನು ಲಕ್ಷಣವನ್ನು ಹೇಳಿಲ್ಲವಾದ್ದರಿಂದ ದಂಡಿಯ ಲಕ್ಷಣವನ್ನೇ ಅನುಸರಿಸುವುದು ಸೂಕ್ತ. ಮಾರ್ಗಕಾರನ ಉದಾಹರಣೆಯಲ್ಲಿ ವಾಕ್ಯರಚನೆ ಸರಿಯಾಗಿಲ್ಲ. ಕೇವಲ ಕಾವ್ಯದೃಷ್ಟಿಯಿಂದಲೂ ಅನುಚಿತವಾದ ರಚನೆ. ಕೀರ್ತಿ–ಚಂದ್ರಿಕೆಗಳಿಗೂ, ಪರಾಕ್ರಮ–ಸೂರ್ಯತೇಜಸ್ಸುಗಳಿಗೂ ಹೋಲಿಸುವುದು ಕವಿ ಸಂಪ್ರದಾಯ. ಮಾರ್ಗಕಾರನ ಉದಾಹರಣೆಯಲ್ಲಿ ಇದು ವಿವಿಕ್ತವಾಗಿ ತೋರು ವುದಿಲ್ಲ. ಒಂದೇ ಪದ್ಯದಲ್ಲಿ ಎಲ್ಲವನ್ನೂ ತುರುಕುವುದಕ್ಕೆ ಯತ್ನಿಸಿದ್ದರಿಂದ ಉದಾಹರಣೆ ಅಸಂಷ್ಠುಲವಾಗಿದೆ. ಪ್ರಕೃತದಲ್ಲಿ ಇದನ್ನು ವಿಶ್ಲೇಷಿಸಿದರೆ ಎರಡು ವಾಕ್ಯಗಳು ಏರ್ಪಡುತ್ತವೆ–

'ಧರಾಧಿಪ, ನಿನ್ನಂತೆ ಯಶೋನಿಧಿಯೂ ಪರಾಕ್ರಮಿಯೂ ಇನ್ನೊಬ್ಬನಿರುವುದುಂಟೆ? ಶುಭ್ರಕಾಂತಿಯಾದ ಚಂದ್ರನಂತೆಯೂ ತೇಜೋರಾಶಿಯಾದ ಸೂರ್ಯನಂತೆಯೂ ಇನ್ನೊಬ್ಬನಿದ್ದಾನೆಯೇ?'

ರಾಜನಿಗೂ–ಚಂದ್ರಸೂರ್ಯರಿಗೂ, ಯಶಸ್ಸಿಗೂ–ಕಾಂತಿಗೂ, ಪರಾಕ್ರಮಕ್ಕೂ–ತೇಜಸ್ಸಿಗೂ ಸಾದೃಶ್ಯವು ಇಲ್ಲಿ ಪ್ರತೀಯಮಾನವಾಗಿದೆ. 'ಇಲ್ಲ' ಎಂಬ ನಿಷೇಧರೂಪವಾದ ಧರ್ಮ ಉಭಯವಾಕ್ಯಗಳಲ್ಲಿಯೂ ಸಮಾನ.

ಸಮಾನಧರ್ಮವು ನಿಷೇಧರೂಪವೇ ಆಗಬೇಕೆಂದೇನೂ ಇಲ್ಲ. ಕುವಲಯಾನಂದದಲ್ಲಿ ಪ್ರತಿವಸ್ತೂಪಮೆಯ ಉದಾಹರಣೆ ಇದು–

ತಾಪೇನ ಭ್ರಾಜತೇ ಸೂರ್ಯಃ ಶೂರಶ್ಚಾಪೇನ ರಾಜತೇ ॥

'ಸೂರ್ಯನು ತಾಪದಿಂದ ಪ್ರಕಾಶಿಸುತ್ತಾನೆ; ಶೂರನು ಚಾಪದಿಂದ ವಿರಾಜಿಸುತ್ತಾನೆ'. ಇಲ್ಲಿ 'ಪ್ರಕಾಶಿಸುವುದು' ಉಭಯತ್ರ ಸಮಾನಧರ್ಮ.

ಈ ಪ್ರಕಾರದಲ್ಲಿ ಎರಡು ವಾಕ್ಯಗಳನ್ನು ನಿರ್ಮಿಸಿಕೊಂಡು ಮಾರ್ಗಕಾರನ ಉದಾಹರಣೆಯನ್ನು ಸಮನ್ವಯಗೊಳಿಸುವುದು ಶಾಸ್ತ್ರೀಯ ಮಾರ್ಗ. ಅನುವಾದಕರು ಎತ್ತಲೋ ಸರಿದಿದ್ದಾರೆ.

೩೨. ವರಹಂಸ-ಕದಂಬಕಮದು
ಶರದಂಬುದಮಲ್ತು ಮುಖರನೂಪುರ-ಸಂವಾ- ।
ದಿರವಂ ನೆಗಟ್ಟಿಪ್ಪುದು ಬಂ
ಧುರಮದಱಿಂದಿದಱೊಳೆಂಬುದುಪಮಾಕ್ಷೇಪಂ ॥

— (ಪ. ೧೦೩ -ಪು. ೧೨೬)

ದಂಡಿ ಹೇಳಿದ ಸಂಶಯಾಕ್ಷೇಪದ ಉದಾಹರಣೆಯನ್ನು ಸ್ವಲ್ಪ ಮಾರ್ಪಡಿಸಿ ಉಪಮಾಕ್ಷೇಪವನ್ನು ಮಾರ್ಗಕಾರನು ಸ್ವತಂತ್ರವಾಗಿ ಕಲ್ಪಿಸಿದ್ದಾನೆ. ಸಂಶಯಾಕ್ಷೇಪಕ್ಕೆ ಬೇರೆ ಉದಾಹರಣೆಯನ್ನು ಕೊಟ್ಟಿದ್ದಾನೆ. ಅನುವಾದಕರು "ಉಪಮಾಕ್ಷೇಪವೆಂಬ ಗ್ರಂಥಕಾರನ ಮಾತಿಗೆ ಉಪಮಾಮೂಲ ಸಂಶಯಾಕ್ಷೇಪವೆಂದೇ ತಾತ್ಪರ್ಯವನ್ನು ಕಲ್ಪಿಸಬೇಕು. ಇಲ್ಲವೆ ಸಂಶಯಮೂಲವಾದ ಉಪಮಾಕ್ಷೇಪವೆಂದು ಕಲ್ಪಿಸಬೇಕು" ಎಂದು ಬರೆದಿದ್ದಾರೆ.

ಈ ಕಲ್ಪನೆ ಸರಿಯಲ್ಲ. ಎಲ್ಲ ಸಂಶಯಾಕ್ಷೇಪವೂ ಉಪಮಾಮೂಲವೇ ಆಗಿರುವುದರಿಂದ ಉಪಮಾಮೂಲ ಸಂಶಯಾಕ್ಷೇಪವೆನ್ನುವುದು ನಿರರ್ಥಕ. ಮುಂದೆ ಉದಾಹರಿಸಿದ ಸಂಶಯಾಕ್ಷೇಪವೂ ಉಪಮಾಮೂಲವೇ ಆಗಿದೆ. ಎಲ್ಲ ಆಕ್ಷೇಪ ಭೇದದಲ್ಲಿಯೂ ಸಂಶಯವನ್ನು ಕಲ್ಪಿಸಲು ಬರುವುದರಿಂದ ಸಂಶಯಮೂಲವಾದ ಉಪಮಾಕ್ಷೇಪವೆನ್ನುವುದೂ ನಿರರ್ಥಕ. ದಂಡಿಯ ಸಂಶಯಾಕ್ಷೇಪದ ಉದಾ ಹರಣೆಯಲ್ಲಿ (II-೧೬೪) 'ಕಿಂ, ಕಿಂ' ಎಂದು ಸಂಶಯವಾಚಕ ಶಬ್ದವಿದೆ. ಮಾರ್ಗ ಕಾರನ ಉದಾಹರಣೆಯಲ್ಲಿ ಅಂತಹ ವಾಚಕಶಬ್ದ ಇಲ್ಲ. ಆದ್ದರಿಂದ ಇದು ಉಪಮಾಕ್ಷೇಪ ಎಂದು ಗ್ರಂಥಕಾರನು ಹೇಳಿರುವುದೂ ಸರಿಯಾಗಿಯೇ ಇದೆ.

೩೩. ವ್ಯತಿರೇಕ ಮತ್ತು ಆಕ್ಷೇಪ –ಈ ಎರಡು ಅಲಂಕಾರಗಳ ಭೇದವನ್ನು ಹೇಳುತ್ತ "ಎರಡಕ್ಕೂ ವ್ಯತ್ಯಾಸವಿಷ್ಟೆ. ವ್ಯತಿರೇಕವು ವಿಧಿರೂಪವಾಗಿದ್ದರೆ (Affirmative) ಆಕ್ಷೇಪ ನಿಷೇಧರೂಪವಾಗಿರುತ್ತದೆ(Negative): ವ್ಯತಿರೇಕದಲ್ಲಿ ಉಪಮೇಯ ದೊಡನೆ ಉಪಮಾನ ಕೂಡ ವಾಚ್ಯವಾಗಿದ್ದರೆ, ವ್ಯತಿರೇಕದಲ್ಲಿ ಉಪಮೇಯವೊಂದೇ ವಾಚ್ಯವಾಗಿರುತ್ತದೆ" ಎಂದಿದ್ದಾರೆ (ಪು. ೧೨೭)

ಇವುಗಳಲ್ಲಿ ಮೊದಲನೆಯ ಹೇಳಿಕೆ ಸರಿಯಲ್ಲ. ಮಾರ್ಗಕಾರನೇ ಉದಾಹರಿಸಿ ರುವ ಉಭಯ ವ್ಯತಿರೇಕದಲ್ಲಿ 'ನಿಯತವೃತ್ತಸ್ಥಿತನೇಂ' ಎಂದು ನಿಷೇಧರೂಪವೂ (ಪು. ೧೦೫), ಸಾಕ್ಷೇಪವ್ಯತಿರೇಕದಲ್ಲಿ 'ನೆಲಸಿಯುಮೆಯ್ದದು' ಎಂದು ನಿಷೇಧವೂ (ಪು. ೧೦೫), ಪ್ರತೀಯಮಾನ ಸಾದೃಶ್ಯವ್ಯತಿರೇಕದಲ್ಲಿ 'ಕಮಲಮದು ಪೋಲದು' ಎಂಬ ನಿಷೇಧವೂ (ಪು. ೧೦೭) ಸ್ಪಷ್ಟವಾಗಿದೆ.

ಎರಡನೆಯ ಹೇಳಿಕೆಯೂ ಸರಿಯಲ್ಲ. (ಉಭಯತ್ರ 'ವ್ಯತಿರೇಕ–ವ್ಯತಿರೇಕ' ಎಂದು ಮುದ್ರಿತವಾಗಿದೆ. ಯಾವುದೋ ಒಂದೆಡೆ ಆಕ್ಷೇಪವೆಂದಿರಬೇಕಾಗಿತ್ತು. ಹೇಗಿದ್ದರೂ ಅಸಂಗತವೇ.)

೧. ಹೇತ್ವಾಕ್ಷೇಪ, ವೃತ್ತಾಕ್ಷೇಪ, ಅನುಶಯಾಕ್ಷೇಪಗಳಲ್ಲಿ ಉಪಮಾನವಿಲ್ಲ. ಸಾದೃಶ್ಯ ಪ್ರತೀತಿಯೇ ಇಲ್ಲವಾದ್ದರಿಂದ ವರ್ಣನೀಯವು ಉಪಮೇಯವೆನಿಸುವುದೂ ಇಲ್ಲ.

೨. ಉಳಿದ ಎಲ್ಲ ಆಕ್ಷೇಪಭೇದಗಳಲ್ಲಿ ಉಪಮಾನೋಪಮೇಯಗಳೆರಡೂ ಉಂಟು. ಹಾಗೆಯೇ ವ್ಯತಿರೇಕಭೇದಗಳಲ್ಲಿ ಉಭಯವೂ ಉಂಟು.

ನಮಗೆ ತೋರುವುದು ಹೀಗೆ: ಆಕ್ಷೇಪ ವ್ಯತಿರೇಕಗಳೆರಡರಲ್ಲಿಯೂ ವರ್ಣನೀಯ ವಸ್ತುವಿನಲ್ಲಿ ಒಂದು ವಿಶೇಷವು ತೋರುತ್ತದೆ. ಉಭಯಾಲಂಕಾರಗಳಲ್ಲಿಯೂ ಪ್ರತಿಷೇಧವು ವಾಚ್ಯವಾಗಿಯೋ ಆಕ್ಷೇಪಲಭ್ಯವಾಗಿಯೋ ಇರುತ್ತದೆ. ಆದ್ದರಿಂದ ಆಕ್ಷೇಪವನ್ನೂ ವ್ಯತಿರೇಕದ ಭೇದದಲ್ಲಿ ಸೇರಿಸಬಹುದೆಂದು ಮಾರ್ಗಕಾರನ ಅಭಿಪ್ರಾಯ. ಅಂತೆಯೇ–

ಪ್ರತಿಪದಾರ್ಥತತ್ವಭೇದದೊಳ್
ಪ್ರತಿಷೇಧಮಂ ನೆಗಟ್ಟುಮನಿತೆ ಮಾಟ್ಕೆಯಿಂ ॥

ಎಂದಿದ್ದಾನೆ. 'ಅನಿತೆ ಮಾಟ್ಕೆಯಿಂ' ಎಂಬುದು ಗಮನಾರ್ಹ. ಉಭಯಾಲಂಕಾರಗಳಿಗೂ ಪ್ರತಿಷೇಧವು ಸಮ. ಆದ್ದರಿಂದ 'ವ್ಯತಿರೇಕವಿಕಲ್ಪಮಿದು' (ಪ. ೧೦೭ –ಪು.127) ಎಂದು ಮಾರ್ಗಕಾರನ ನಿಲುವು.

೩೪. **ಗುಣದೋಷಾದಿಗಳಿಂದನು**
ಗುಣಮಾಗಿರೆ ಪೇಟ್ದು ತದನುಸದೃಶದಿನೊಂದಂ ।
ಪ್ರಣಿಹಿತ ನಿದರ್ಶನ ಕ್ರಮು
ವೆಣಿಸುವುದಕ್ಕುಂ ನಿದರ್ಶನಾಲಂಕಾರಂ ॥

— (ಪು. ೧೪೩ –ಪು. ೧೩೭)

"ಗುಣದೋಷಾದಿಗಳಿಂದ ಅವುಗಳಿಗೆ ಅನುಗುಣವಾದ ಫಲಿತಾಂಶವಿದೆಯೆಂದು ವರ್ಣಿಸಿ, ತತ್ಸದೃಶವಾದ ಇನ್ನೊಂದು ಸಂಗತಿಯನ್ನು ನಿದರ್ಶನವಾಗಿ ಹೇಳಿದರೆ ನಿದರ್ಶನಾಲಂಕಾರವೆನಿಸುತ್ತದೆ" ಎಂದು ಇದರ ಅರ್ಥ.

ಈ ಅಲಂಕಾರದ ವಿಷಯವಾಗಿ ಡಾ॥ ಕೆ. ಕೃಷ್ಣಮೂರ್ತಿಯವರ ವಿವರಣೆಯನ್ನೂ (ಪು. ೧೪೧), ಪ್ರೊ॥ ಎಂ.ವಿ.ಸೀ.ಯವರ ಗ್ರಂಥದಲ್ಲಿನ ಟಿಪ್ಪಣಿಯನ್ನೂ (ಪು. ೩೧೯) ಅನುಲಕ್ಷಿಸಿ ಮುಂದಿನ ಮಾತನ್ನು ಹೇಳಬೇಕಾಗಿದೆ.

ಮಾರ್ಗಕಾರನು ಯಾವ ಉದಾಹರಣೆಯಲ್ಲಿ 'ಅಂತೆ, ವೊಲ್' ಮುಂತಾದ ಸಾದೃಶ್ಯವಾಚಕ ಶಬ್ದವನ್ನು ಬಳಸಿದ್ದಾನೋ ಅದು ವಾಕ್ಯಾರ್ಥೋಪಮೆಯೇ ಸರಿ. ಆದ್ದರಿಂದಲೇ ಭಾಮಹನು ನಿದರ್ಶನಾಲಂಕಾರದಲ್ಲಿ ಸಾದೃಶ್ಯವಾಚಕ ಶಬ್ದವಿರಬಾರದೆಂದು ಸ್ಪಷ್ಟವಾಗಿ ತಿಳಿಸಿದ್ದಾನೆ. ಆದರೆ ನಿದರ್ಶನರೂಪವಾಗಿ ಉಪಮಾನವಾಕ್ಯವಿದ್ದಾಗ 'ನಿದರ್ಶನ'ಕ್ಕೆ ಪ್ರಾಧಾನ್ಯವನ್ನಿತ್ತು ಗ್ರಂಥಕಾರನು ನಿದರ್ಶನಾಲಂಕಾರವೆಂದು ಹೇಳಿದ್ದಾನೆ. ಮಾರ್ಗಕಾರನ ಅಭಿಪ್ರಾಯಕ್ಕೆ ನಾವೇನೂ ಹೇಳತಕ್ಕದ್ದಿಲ್ಲ.

ಉಪಮಾಲಕ್ಷಣವಂತೂ ನಿರ್ಬಾಧಿತವಾಗಿ ಈ ಉದಾಹರಣೆಗಳಲ್ಲಿ ಉಂಟು. ನಿದರ್ಶನಾಲಂಕಾರವೆಂದಾರಂಭಿಸಿ ದೃಷ್ಟಾಂತವೆಂದು ಮುಕ್ತಾಯ ಮಾಡಿದುದಕ್ಕೆ ಈ ಎರಡು ಶಬ್ದಗಳೂ ಪರ್ಯಾಯಪದಗಳಾಗಿರುವುದೇ ಕಾರಣ. ಇಷ್ಟು ಮಾತ್ರದಿಂದ ದೃಷ್ಟಾಂತಾಲಂಕಾರದ ಬಿಂಬಪ್ರತಿಬಿಂದ ಭಾವವನ್ನು ಮಾರ್ಗಕಾರನು ಮೊದಲು ಗುರುತಿಸಿದವನೆಂದು ಹೊಗಳುವುದು ಅತಿಶಯೋಕ್ತಿಯೇ ಸರಿ.

ಈ ಎರಡು ಅಲಂಕಾರಗಳಿಗಿರುವ ಭೇದ ಹೀಗೆ-

ಉಪಮಾನೋಪಮೇಯ ವಾಕ್ಯಗಳಿಗೆ ಐಕ್ಯವನ್ನು (ಅಭೇದವನ್ನು) ಆರೋಪಿಸುವುದು ನಿದರ್ಶನಾಲಂಕಾರ. ಉದಾ:

೧. ಜಿಪುಣನನ್ನು ಸೇವಿಸುವುದೆಂದರೆ ಅರಣ್ಯದಲ್ಲಿ ರೋದಿಸುವುದೇ.

೨. ಮಂದಮತಿಯಾದ ನಾನು ಮಹಾಕಾವ್ಯವನ್ನು ರಚಿಸುವುದು, ಮುರುಕು ದೋಣಿಯಲ್ಲಿ ಮಹಾಸಾಗರವನ್ನು ದಾಟುವುದು -ಎರಡೂ ಒಂದೇ.

ಉಪಮಾನೋಪಮೇಯ ವಾಕ್ಯಗಳಲ್ಲಿ ಬೇರೆಬೇರೆ ಧರ್ಮಗಳೂ ಬಿಂಬಪ್ರತಿಬಿಂಬಭಾವದಿಂದ ನಿರ್ದಿಷ್ಟವಾಗಿದ್ದರೆ ದೃಷ್ಟಾಂತಾಲಂಕಾರ. ಈ ವಾಕ್ಯಗಳಿಗೆ ಇದರಲ್ಲಿ ಅಭೇದಾರೋಪ ಇಲ್ಲ. ಉದಾ:-

೧. ನೀನೊಬ್ಬನೇ ಕೀರ್ತಿಶಾಲಿ: ಚಂದ್ರನೊಬ್ಬನೇ ಕಾಂತಿಶಾಲಿ.

ಕೀರ್ತಿ-ಕಾಂತಿಗಳಿಗೆ ಬಿಂಬಪ್ರತಿಬಿಂಬ ಭಾವ.

೨. ಎಷ್ಟೇ ರಾಜರಿರಲಿ, ಈತನೊಬ್ಬನಿಂದಲೇ ಭೂಮಿ ರಾಜನ್ವತಿಯೆನಿಸುತ್ತದೆ.

ಎಷ್ಟೇ ನಕ್ಷತ್ರಗಳಿರಲಿ, ಚಂದ್ರನೊಬ್ಬನಿಂದಲೇ ರಾತ್ರಿ ಜ್ಯೋತಿಷ್ಮತಿಯೆನಿಸುತ್ತದೆ.

ಇಲ್ಲಿ ರಾಜರು-ನಕ್ಷತ್ರಗಳು, ರಾಜನ್ವತೀ-ಜ್ಯೋತಿಷ್ಮತೀ ಧರ್ಮಗಳಿಗೂ ಬಿಂಬಪ್ರತಿಬಿಂಬ ಭಾವ. ಸಾದೃಶ್ಯವಾಚಕ ಶಬ್ದ ಉಭಯಾಲಂಕಾರಗಳಲ್ಲೂ ಇಲ್ಲ.

೩೫. ಗುಣ ಜಾತ್ಯಾದಿಗಳಿಂ ದೊರೆಯೆಣೆಸುವುದು ಸಹೋಕ್ತಿ ॥

— (ಪ. ೧೫೫ -ಪು. 141)

ಗುಣ, ಜಾತಿ, ಕ್ರಿಯೆ, ದ್ರವ್ಯ -ಇವುಗಳೊಡನೆ ಸಹಭಾವದಿಂದ ಎರಡು ಅಥವಾ ಅಧಿಕ ವಸ್ತುಗಳಿಗೆ ಅನ್ವಯವಿದ್ದರೆ ಸಹೋಕ್ತಿಯೆಂಬ ಅಲಂಕಾರ. ದೊರೆಯೆಣೆಸುವುದು ಎಂದರೆ ಸಮಾನವಾಗಿ (ಸಹಭಾವದಿಂದ) ಅನ್ವಯಿಸುವುದು ಎಂದರ್ಥ. ಸಾದೃಶ್ಯವೇನೂ ಇಲ್ಲಿ ತೋರಬೇಕಾದ್ದಿಲ್ಲ. ಉದಾ:

ಅತಿಧವಳವಮಾಯ್ತು ಗುಣ-ಸಂ
ತತಿಯೊಡನೆ ಯಶೋವಿತಾನವಮಾಶಾಧೀನಂ ।
ಸತತಂ ಪೆರ್ಚಿತ್ತು ನಿಜಾ
ಯತಿಯೊಡನೆ ಮಹಾವಿಭೂತಿ ಪರಮೋದಯನಾ ॥

"ಇಲ್ಲಿ 'ಜತೆಜತೆಯಾಗಿ' ಎರಡೆರಡನ್ನು –ಒಂದು ಗುಣ, ಇನ್ನೊಂದು ಜಾತಿ(?) –ಹೇಳಿರುವುದರಿಂದ ಸಹೋಕ್ತಿ" ಎಂದು ಅನುವಾದಕರು ಲಕ್ಷಣಸಮನ್ವಯ ಮಾಡಿದ್ದಾರೆ. ಯಾವುದು ಗುಣ, ಯಾವುದು ಜಾತಿ, ಯಾವುದಕ್ಕೆ ಎಲ್ಲಿ ಅನ್ವಯ ಒಂದೂ ತಿಳಿಯುವುದಿಲ್ಲ. "ಗುಣಸಂತತಿ, ಯಶೋವಿತಾನಗಳೆರಡೂ ಸಹಭಾವದಿಂದ (ಜೊತೆಯಾಗಿ) ಅತಿಧವಳ ಎಂಬ ಗುಣದಲ್ಲಿ ಅನ್ವಿತವಾಗಿವೆ. ನಿಜಾಯತಿ, ಮಹಾವಿಭೂತಿಗಳೆರಡೂ 'ಪೆರ್ಚಿತ್ತು' ಎಂಬ ಕ್ರಿಯೆಯಲ್ಲಿ ಅನ್ವಿತವಾಗಿವೆ" ಎಂದು ಬರೆಯುವುದು ಸಮಂಜಸ.

೩೬. **ಅಪರಾಗಂ ಮುನಿಪತಿವ್ರೋಲ್.....॥** — (ಪ. ೧೫೮ -ಪು. ೧೪೨)

"ಈ ನೃಪಶ್ರೇಷ್ಠನು ಮುನಿಪತಿಯಂತೆ 'ಅಪರಾಗ'ನು (=ಶ್ಲೇಷೆಯಿಂದ ರಾಗವಿದೂರ ಮತ್ತು ಅಕಲಂಕ)" ಎಂದು ಅರ್ಥವನ್ನು ಬರೆದಿದ್ದಾರೆ.

ಅಪರಾಗ ಶಬ್ದಕ್ಕೆ ಅಕಲಂಕ ಎಂಬ ಅರ್ಥ ಹೇಗೆ ಬರುತ್ತದೆ? ನಮ್ಮ ಅರ್ಥ ಹೀಗೆ–

'ಪರಾಂ ಪರಸ್ತ್ರಿಯಂ ಗಚ್ಛತೀತಿ ಪರಾಗಃ' ಪರಸ್ತ್ರೀಗಾಮಿ ಎಂದರ್ಥ.

ಅಪರಾಗ = ಪರಸ್ತ್ರೀವಿಮುಖಿ. ಇದು ನೃಪಶ್ರೇಷ್ಠನಿಗೆ ವಿಶೇಷಣ.

೩೭. ಲೇಶಾಲಂಕಾರದ ಲಕ್ಷಣವನ್ನು ಕುರಿತು "ಈ ಲಕ್ಷಣ ದಂಡಿ ಹೇಳುವ ಮತಾಂತರಾನುಸಾರಿಯಾಗಿದೆ. ಭಾಮಹನು ಈ ಅಲಂಕಾರವನ್ನು ಒಪ್ಪುವುದೇ ಇಲ್ಲ. ಹೋಲಿಸಿ–ದಂಡಿ II-೨೬೮" ಎಂದು ಹೇಳಿದ್ದಾರೆ (ಪು. ೧೪೬).

ಕವಿರಾಜಮಾರ್ಗಕಾರನ ಪ್ರಕಾರ ಒಂದು ವಸ್ತುವಿನಲ್ಲಿ ಹಲವಾರು ಗುಣಗಳನ್ನು ಹೇಳಿ ಒಂದು ಗುಣವನ್ನು ಹೇಳಿದರೆ ಲೇಶಾಲಂಕಾರ. ಉದಾ–

೧. ಆತನು ಅಭಿಮಾನಿ, ಉದಾರಚರಿತ, ಶತ್ರುಧ್ವಂಸಕ, ಮನಸ್ವಿ. ಆದರೆ ಯಾರೂ ತನಗೆ ಸಮರಲ್ಲವೆಂದು ತಿಳಿದುಕೊಂಡಿದ್ದಾನೆ.

ಇಲ್ಲಿ ಅಭಿಮಾನಾದಿ ಗುಣಗಳ ಜೊತೆಗೆ ಅಹಂಕಾರವೆಂಬ ದೋಷವನ್ನು ಹೇಳಿದ್ದರಿಂದ ಲೇಶ.

೨. ಅವನು ಕುಲೀನನಲ್ಲ, ಬಾಂಧವ್ಯದ ಬಲವೂ ಅವನಿಗಿಲ್ಲ, ಕುರೂಪಿ, ಸ್ಥಿರವಾಗಿ ನಿಲ್ಲತಕ್ಕವನಲ್ಲ. ಆದರೆ ಅವನ ಛಲವೆಂದೂ ಕುಗ್ಗುವುದಿಲ್ಲ.

ಇಲ್ಲಿ ಕಡೆಯ ಮಾತಿನಿಂದ ದೃಢನಿಶ್ಚಯನಿವನು ಎಂಬ ಗುಣ ತಿಳಿಯುತ್ತದೆ. ಉಳಿದವು ದೋಷಗಳು. ಆದ್ದರಿಂದ ಲೇಶಾಲಂಕಾರವೆಂದು ಮಾರ್ಗಕಾರನ ಮತ.

ದಂಡಿಯು ಹೇಳುವ ಮತಾಂತರಾನುಸಾರಿಯಾದ ಲೇಶಲಕ್ಷಣವಾದರೋ ಇದಕ್ಕಿಂತ ಭಿನ್ನ.

'ಲೇಶಮೇಕೇ ವಿದುರ್ನಿಂದಾಂ ಸ್ತುತಿಂ ವಾ ಲೇಶತಃ ಕೃತಾಂ'

— (II-೨೬೮)

ಇಲ್ಲಿ ಲೇಶವೆಂದರೆ ವ್ಯಾಜ. "ವ್ಯಾಜದಿಂದ ಮಾಡಿದ ನಿಂದೆ ಅಥವಾ ಸ್ತುತಿ ಲೇಶವೆನಿಸುತ್ತದೆ" ನಿಂದೆಯಿಂದ ಸ್ತುತಿಯೂ ಸ್ತುತಿಯಿಂದ ನಿಂದೆಯೂ ಪ್ರತೀತವಾದರೆ ಲೇಶ. ಇದನ್ನು ನವೀನರು 'ವ್ಯಾಜಸ್ತುತಿ' ಎಂದು ಕರೆದಿದ್ದಾರೆ. ನವೀನರ ಲೇಶದ ಲಕ್ಷಣವೇ ಬೇರೆ. 'ದೋಷವನ್ನು ಗುಣವೆಂದೂ ಗುಣವನ್ನು ದೋಷವೆಂದೂ ಪ್ರಕಾರಾಂತರದಿಂದ ಕಲ್ಪಿಸುವುದು ಲೇಶ' –ಇದು ನವೀನರ ಮತ.

ದಂಡಿಯ ಮತದಂತೆ ಉದಾಹರಣೆಗೆ ಹೀಗೆ ಇರುತ್ತದೆ. "ಈ ರಾಜನು ಯುವಕ, ಓಜಸ್ವಿ. ನಿನಗೆ ಪತಿಯಾಗಲು ಯೋಗ್ಯ. ಕಾಮೋತ್ಸವಕ್ಕಿಂತ ರಣೋತ್ಸವದಲ್ಲಿ ಇವನ ಮನಸ್ಸು ನೆಟ್ಟಿದೆ." ಸ್ವಯಂವರ ಮಂಟಪವನ್ನು ಪ್ರವೇಶಿಸಿರುವ ವಧುವಿಗೆ ಅವಳ ಸಖಿ ಹೇಳುವ ಮಾತಿದು. ಇದರಲ್ಲಿ ರಾಜನ ಗುಣಗಳು ವರ್ಣಿತವಾಗಿವೆ. ಕಡೆಯ ಮಾತಿನಲ್ಲಿ ಈ ರಾಜನು ವೀರನೆಂದು ಮೇಲ್ನೋಟಕ್ಕೆ ಸ್ತುತಿ ಇದ್ದರೂ "ಇವನು ಯುದ್ಧಲಂಪಟ. ಇವನಿಂದ ನಿನಗೆ ಕಾಮಸುಖ ಲಭ್ಯವಿಲ್ಲ. ಇವನನ್ನು ವರಿಸಬೇಡ" ಎಂಬ ಅರ್ಥ ಪ್ರತೀತವಾಗುತ್ತದೆ. ಇಲ್ಲಿ ವ್ಯಾಜದಿಂದ ಗುಣವನ್ನು ವರ್ಣಿಸಿ ದೋಷವನ್ನು ವ್ಯಂಜಿಸಿರುವುದರಿಂದ ಲೇಶ.

ದಂಡಿಯ ಲೇಶಕ್ಕೂ ಮಾರ್ಗಕಾರನ ಲೇಶಕ್ಕೂ ಅಜಗಜಾಂತರ ಉಂಟು. ಭಾಮಹನು ಖಂಡಿಸಿದ್ದು ಮಾರ್ಗಕಾರನ ಲೇಶವನ್ನು ಎಂದು ನಮ್ಮ ಅಭಿಪ್ರಾಯ. ಭಾಮಹನಿಗಿಂತ ಪೂರ್ವದಲ್ಲಿ ಈ ಪ್ರಕಾರವನ್ನು ಲೇಶವೆಂದು ಕೆಲವರು ಹೇಳಿರಬಹುದು. ಮಾರ್ಗಕಾರನ ಉದಾಹರಣೆಯಲ್ಲಿ ಯಾವ ಚಮತ್ಕಾರವೂ ಇಲ್ಲವೆಂಬುದು ಸ್ಪಷ್ಟ. ಅಲಂಕಾರವೆನಿಸಬೇಕಾದರೆ ಚಮತ್ಕಾರಿಯಾದ ವಕ್ರೋಕ್ತಿ ಇರಬೇಕೆಂದು ಭಾಮಹನು ಹೇಳಿದ್ದಾನೆ. ದಂಡಿಯ ಉದಾಹರಣೆಯಲ್ಲೂ ನವೀನರ ಲೇಶಾಲಂಕಾರದಲ್ಲಿಯೂ ಚಮತ್ಕಾರವನ್ನು ಯಾವ ರಸಿಕನೂ ಅಲ್ಲಗಳೆಯಲಾರ. 'ಲೇಶ' ಎಂಬ ಶಬ್ದಮಾತ್ರದಿಂದ ಎಲ್ಲರೂ ಹೇಳಿದ್ದು ಒಂದೇ ಎಂದು ಭ್ರಮಿಸಬಾರದು.

೩೮. ಕರೆಕರೆದು ಮನೋಧೃತಿಯಂ
ನೆರೆವಾಸೆಯೊಳಿರ್ದಳಲ್ಲದುಱುದೊಡೆ ನಿನ್ನಾ ।
ವಿರಹಾನಳನಾ ತಾಪದೆ
ಕರಗುಗುಮಿನ್ನಾಕೆಗಿನಿಸು ಕರುಣಿಸು ಮನದೊಳ್ ॥

— (ಪ. ೧೯೨ -ಪು. ೧೫೩)

ಇಲ್ಲಿ ತೋರತಕ್ಕದ್ದು 'ಕರುಣಾ'ರಸವೇ ಹೊರತು 'ಕರುಣ'ರಸವಲ್ಲವೆಂದೂ ಉದ್ದೀಪ್ತಸ್ಥಾಯಿಭಾವ ದಯೆಯೇ ಹೊರತು ಶೋಕವಲ್ಲವೆಂದೂ ಡಾ। ಕೆ. ಕೃಷ್ಣಮೂರ್ತಿಗಳ ಸ್ಪಷ್ಟವಾದ ನಿಲುವು. ಇದಕ್ಕೆ ಆಧಾರವೇನೆಂದರೆ ಮಾರ್ಗಕಾರನು ರಸಗಳ ಹೆಸರನ್ನು ಹೇಳುವಾಗ 'ಕರುಣಾ' ಎಂದು ದೀರ್ಘೋಚ್ಚರಣೆ ಮಾಡಿರುವುದೇ ಆಗಿದೆ.

ಇದಕ್ಕೆ ನಮ್ಮ ಪ್ರತಿಕ್ರಿಯೆ ಹೀಗೆ –'ಕರುಣಾ'ರಸಕ್ಕೆ ದಯೆ ಸ್ಥಾಯಿಯೆಂದು ಯಾರು ಹೇಳಿದ್ದಾರೆ? ಇದುವರೆಗೆ ಒಬ್ಬ ಕನ್ನಡ ಲಾಕ್ಷಣಿಕನಾಗಲಿ, ಸಂಸ್ಕೃತ ಲಾಕ್ಷಣಿಕನಾಗಲಿ ದಯೆ ಸ್ಥಾಯಿಯೆಂದು ಹೇಳಿಲ್ಲ. ಇದಕ್ಕೆ ವಿರುದ್ಧವಾಗಿ ನಾಗವರ್ಮನು ಕಾವ್ಯಾವಲೋಕನದಲ್ಲಿ 'ಪ್ರಕಟತರ ಶೋಕಭಾವಪ್ರಕೃತಿಪರಂ' ಎಂದು 'ಕರುಣಾ'ರಸಕ್ಕೆ ಶೋಕವೇ ಸ್ಥಾಯಿಯೆಂದು ಹೇಳಿದ್ದಾನೆ. ಅವನು 'ಕರುಣಾರಸ', 'ಕರುಣರಸ' ಎಂಬ ಶಬ್ದಗಳನ್ನೂ ಸಮಾನವಾಗಿ ಪ್ರಯೋಗಿಸಿದ್ದಾನೆ (ಸೂ. ೨೦೬, ಸೂ. ೨೦). ವಾಗ್ಭಟನು 'ಕರುಣಾರಸ' 'ಕರುಣರಸ' ಎಂದು ಎರಡು ಶಬ್ದಗಳನ್ನೂ ಬಳಸಿ ಶೋಕವು ಸ್ಥಾಯಿಯೆಂದು ಸ್ಪಷ್ಟವಾಗಿ ತಿಳಿಸಿದ್ದಾನೆ (೫-೬, ೫-೪).

ಶೋಕ, ದಯೆ –ಇವು ವಿಭಿನ್ನ ಚಿತ್ತವೃತ್ತಿಗಳಾದರೂ ನಿಕಟವಾದ ಸಂಬಂಧ ಇವುಗಳಿಗುಂಟು. ಶೋಕದಿಂದ ದಯೆ, ದಯೆಯ ಹಿಂದೆ ಶೋಕ ಇರತಕ್ಕವೇ. ಆದ್ದರಿಂದ 'ಕರುಣಾ' (ದಯೆ) ಉಳ್ಳದ್ದು ಕರುಣ ಎಂದು ಶಬ್ದದ ವ್ಯುತ್ಪತ್ತಿ. ಹಾಗಾದರೆ ದಯೆ ಏಕೆ ಸ್ಥಾಯಿಯಲ್ಲವೆಂದರೆ, ಆಶ್ರಯವಾದ ವ್ಯಕ್ತಿಯಲ್ಲಿ ದಯೆ ಅಭಿವ್ಯಕ್ತವಾಗದೆ ಶೋಕವೇ ಅಭಿವ್ಯಕ್ತವಾಗುವುದರಿಂದ. ಮಾರ್ಗಕಾರನ ಉದಾಹರಣೆಯಲ್ಲಿ ವಿರಹಾರ್ತಳಾದ ನಾಯಕೆಯ ಶೋಕ ತೋರುವುದೇ ಹೊರತು ದಯೆಯಲ್ಲ. 'ಕರುಣಿಸು' ಎಂದು ಹೇಳಿದ ಮಾತ್ರದಿಂದ ಕಾರುಣ್ಯ ತೋರುವುದಿಲ್ಲ. ನಾಯಕನಿಗೆ ಕಾರುಣ್ಯ ಹುಟ್ಟಿತೆಂಬುದಕ್ಕೆ ದಾಖಲೆ ಏನು? 'ಕರುಣಿಸು' ಎಂದು ಹೇಳಿದ್ದರಿಂದ ನಾಯಿಕೆಯ ಶೋಕ ಇನ್ನೂ ಉದ್ದೀಪ್ತವಾಗಿ ಪ್ರತೀತವಾಗುತ್ತದೆ. ಆದ್ದರಿಂದ ಇದು 'ಕರುಣವಿಪ್ರಲಂಭ' ಎಂದು ನವೀನರ ಹೇಳಿಕೆ. ಶೋಕವು ಮರಣಜನ್ಯವಾಗ ಬೇಕೆಂಬುದು ಮುಂದಿನ ಲಾಕ್ಷಣಿಕರ ವಿಭಾಗವೇ ಹೊರತು, ಪ್ರಾಚೀನ ಲಾಕ್ಷಣಿಕರು ಹೇಳಿದ್ದಲ್ಲ. ಮಾರ್ಗಕಾರನ ಉದಾಹರಣೆಯಲ್ಲಿ ವಿರಹಾರ್ತೆಯ ಶೋಕವೇ ಸ್ಥಾಯಿ. 'ಕರುಣಿಸು' ಎಂಬ ನುಡಿ ಶೋಕಕ್ಕೆ ಉದ್ದೀಪನ.

ಮಾರ್ಗಕಾರನ ಮತದಲ್ಲಿ 'ಕರುಣಾ'ರಸಕ್ಕೆ ದಯೆ ಸ್ಥಾಯಿಯಾದರೆ, ಶೋಕವು ಸ್ಥಾಯಿಯಾದಾಗ ಯಾವ ರಸ? ಅಥವಾ ರಸವೇ ಆಗುವುದಿಲ್ಲವೊ? ಆಗುವುದಿಲ್ಲ ವೆಂದರೆ ಸಮಸ್ತ ಲಾಕ್ಷಣಿಕರಿಗೂ ವಿರುದ್ಧವಾಗುತ್ತದೆ. ಪ್ರಾಚೀನರು 'ಕರುಣಾ-ಕರುಣ' ಎಂದು ಎರಡು ಶಬ್ದಗಳನ್ನೂ ಬಳಸಿದ್ದಾರೆ. ದೀರ್ಘಾಂತವಾಗಿ ಗ್ರಂಥಕಾರನು ಹೇಳಿದ ಮಾತ್ರದಿಂದ ಇಷ್ಟು ದೂರದ ಕಲ್ಪನೆ ಮಾಡುವುದು ನಿರಾಧಾರವಾದದ್ದು. (ವಿವರಗಳಿಗೆ ಈ ಸಮೀಕ್ಷಕನ ಲೇಖನವನ್ನು ನೋಡಿ. ಕನ್ನಡ ನುಡಿ, ಮೇ ೧, ೧೯೭೪).

೩೯. ಪ್ರಣತಾರಿ-ನಿಟಲ-ಮುಕ್ತಾಮ‌ಣಿ
ಗಣಮುತ್ತಂಗದಿಂ ಕಟಿಲ್ದುದುೞಿ ಸಭಾಂ ।
ಗಣವೊಪ್ಪೆ ವೀರನಾರಾ
ಯಣನಾ ತಾರಕಿತ-ನಭದವೋಲ್ ಸೊಗಯಿಸುಗುಂ ॥

— (ಪ. ೧೮೧ -ಪು. ೧೪೯)

ಈ ಪದ್ಯದ 'ನಿಟಿಲ' ಸ್ಥಾನದಲ್ಲಿ ತೃಟಿತ, ತ್ರುಟಿತ –ಎಂಬ ಎರಡು ಪಾಠಗಳುಂಟು. 'ತೃಟಿತ' ಅಶುದ್ಧ. 'ತ್ರುಟಿತ' ಎಂದರೆ ಛಂದೋಭಂಗ. ಆದ್ದರಿಂದ 'ಘಟಿತ' ಎಂದು ಪ್ರೊ। ಎಂ.ವೀ.ಸೀ. ಅವರು ಸೂಚಿಸಿದ ಪಾಠ. ಇದು ಅರ್ಥಕ್ಕೆ ಹೊಂದದೆಂದು ಡಾ। ಕೆ.ಕೃಷ್ಣಮೂರ್ತಿಗಳ ಪರಿಷ್ಕರಣ 'ನಿಟಿಲ' ಎಂದು. ನಮ್ಮ ಪರಿಷ್ಕರಣ 'ಲುಟಿತ' ಎಂದು. ಲುಟಿತ=ಹೊರಳಾಡಿದ, ತೀಡಿದ. ಲುಟಿತವಾದ್ದರಿಂದಲೇ ಮುಕ್ತಾಮಣಿಗಳು ಉದುರಿದುವು –ಎಂದು ಅರ್ಥಪುಷ್ಟಿಯೂ ಈ ಪರಿಷ್ಕರಣದಲ್ಲುಂಟು. ಮೂಲಪಾಠಕ್ಕೆ ಸಮೀಪವೂ ಹೌದು.

೪೦. [ಮಿಗೆ ಗು]ಣದೊಳ್ ಪರಿಚಿತಮುಂ
ದ್ವಿಗುಣಮದೋರಂತೆ ಮಟ್ಟಮಿರ್ದುದು ಮತ್ತಂ ।
ವಿಗತ-ವಿಕಾರಾಕಾರಂ
ಸೊಗಯಿಸುಗುಂ ನಿನ್ನ ರೂಪು ಶಾಂತಾಧಾರಂ ॥

— ಪ. ೧೯೮ -ಪು. ೧೫೫)

ಇದು ಶಾಂತರಸದ ಉದಾಹರಣೆ.

"ಎರಡು ಜೋಡಿಯಾದ ಹುರಿಯಿಂದ ಬಳಸಲ್ಪಟ್ಟದ್ದೂ ನಿನ್ನ ಶರೀರವು ಮಟ್ಟವಾಗಿದೆ. ಯಾವುದೇ ವಿಕಾರವೂ ಇಲ್ಲದಿದೆ. ಶಾಂತತೆಯಿಂದ ಸೊಗಯಿಸುತ್ತಿದೆ" ಎಂದು ಡಾ। ಕೆ.ಕೃಷ್ಣಮೂರ್ತಿಗಳು ಬರೆದಿರುವ ಅರ್ಥ. "(ಇಲ್ಲಿ ಯೋಗಮುದ್ರೆಯಲ್ಲಿರುವ ಶಾಂತನಾದ ಯೋಗಿಯ ವರ್ಣನೆ ಇದೆ. ಮೃಚ್ಛಕಟಿಕ ನಾಟಕದ ಮಂಗಳಶ್ಲೋಕವೊಂದರಲ್ಲಿ ಯೋಗಮುದ್ರೆಯಲ್ಲಿರುವ ಶಿವನ ವರ್ಣನೆ ಮಾಡುವಾಗ 'ಪರ್ಯಂಕಗ್ರಂಥಿಬಂಧ ದ್ವಿಗುಣಿತಭುಜಗಾಶ್ಲೇಷಸಂವೀತಜಾನೋಃ' ಎಂದಿದೆ. ಎಂದರೆ ಅಲುಗಾಡದಂತೆ ಎರಡು ಮಂಡಿಗಳನ್ನೂ ಎರಡೆಳೆಯ ಹುರಿಯಿಂದ ಕಟ್ಟಿ ಗಂಟನ್ನು ಹಾಕಿರುವ 'ಪರ್ಯಂಕಬಂಧ'ದ ವರ್ಣನೆಯಿದು. ಇಲ್ಲಿಯೂ ಹಾಗೆಯೇ. 'ಗುಣ' ಎಂದರೆ ಹಗ್ಗ; ದ್ವಿಗುಣ ಎಂದರೆ ಎರಡೆಳೆ. ಅದರಿಂದ 'ಪರಿಚಿತ' ಎಂದರೆ ಸಮೇತ ಎಂದರ್ಥ ಮಾಡುವುದು ಸಂದರ್ಭೋಚಿತವಾಗಿದೆ. ಇಲ್ಲಿ ಶಾಂತರಸ ಸ್ಪಷ್ಟ. ಮಿಕ್ಕ ಅಪಪಾಠಗಳಲ್ಲಿ ಸಂದರ್ಭೋಚಿತವಾದ ಅರ್ಥಸ್ವಾರಸ್ಯ ಇಲ್ಲ)" ಎಂದು ವಿವರಿಸಿದ್ದಾರೆ.

'ಪರಿಚಿತಮುಂ ದ್ವಿಗುಣಂ' ಎಂದರೆ ದ್ವಿಗುಣದಿಂದ (ಎರಡೆಳೆಯಿಂದ) ಸಮೇತ' ಎಂಬ ಅರ್ಥ ಹೇಗೆ ಬರುತ್ತದೆ, ಯಾವುದಕ್ಕೆ ಎಲ್ಲಿ ಅನ್ವಯ ಎಂಬುದು ನಮ್ಮ ಊಹೆಗೂ ನಿಲುಕುವುದಿಲ್ಲ. ಮತ್ತು 'ಮಿಗೆ ಗುಣದೊಳ್' ಎಂಬುದಕ್ಕೆ ಎಲ್ಲಿ ಅನ್ವಯ? ಇಲ್ಲಿ ಗುಣವೆಂದರೇನು? ಹಗ್ಗವಾದರೆ ಪುನರುಕ್ತ. ಪ್ರಸಿದ್ಧವಾದ ಗುಣವಾದರೆ, ಅದು ಯಾವುದು? ಗುಣವಿಶೇಷವನ್ನು ಹೇಳದೆ ಸಾಮಾನ್ಯ ಶಬ್ದವನ್ನು ಬಳಸಿದ್ದು ಅನುಚಿತ.

ಯೋಗಿಯು ಧ್ಯಾನಮಾಡುವಾಗ ಎರಡೆಳೆಯ ಹಗ್ಗದಿಂದ ಕಟ್ಟಿಕೊಳ್ಳುತ್ತಾನೆನ್ನುವುದಕ್ಕೆ ಪ್ರಮಾಣವೇನು? ಏಕೆ ಕಟ್ಟಿಕೊಳ್ಳುತ್ತಾನೆ? ಆಸನಬಂಧ ಸಡಿಲವಾಗದಿರಲೆಂದೆ?

ಅಂತಹ ಯೋಗಾಸನ ನಮಗೂ ಸಾಧ್ಯ! ನಮಗೆ ತಿಳಿದಂತೆ ಯಾವ ಯೋಗ ಗ್ರಂಥದಲ್ಲಾಗಲಿ, ಜೈನಗ್ರಂಥದಲ್ಲಾಗಲಿ ಹಗ್ಗದಿಂದ ತನ್ನನ್ನು ಕಟ್ಟಿಕೊಳ್ಳಬೇಕೆಂದು ಹೇಳಿಲ್ಲ. ಜಿನಸೇನಾಚಾರ್ಯರ ಮಹಾಪುರಾಣದಲ್ಲಿ ಯೋಗಿಗಳ ಆಸನಧ್ಯಾನ ಕ್ರಮಗಳ ವಿಸ್ತಾರವಾದ ವರ್ಣನೆ ಇದೆ (೨೧ನೆಯ ಅಧ್ಯಾಯ). ಅಲ್ಲಿಯೂ ಹಗ್ಗದ ಸುಳಿವಿಲ್ಲ. ಕುಮಾರಸಂಭವದಲ್ಲಿ ಶಿವನ ಧ್ಯಾನಸ್ಥಿತಿಯನ್ನು ವರ್ಣಿಸುವಾಗ 'ಪರ್ಯಂಕಬಂಧಸ್ಥಿರಪೂರ್ವಕಾಯಂ' (೩-೪೫) ಎಂದು ಮಹಾಕವಿ ಕಾಳಿದಾಸ ಹೇಳಿದ್ದಾನೆ. ವ್ಯಾಖ್ಯಾನಗಳಲ್ಲಿ ಪರ್ಯಂಕಾಸನದ ವಿವರಣೆ ಇದೆ. ಹಗ್ಗದ ವಿಷಯವನ್ನೇ ಎತ್ತಿಲ್ಲ ವ್ಯಾಖ್ಯಾನಕಾರರು. ಸರ್ಪವನ್ನು ಜಟೆಗೆ ಸುತ್ತಿಕೊಂಡಿದ್ದನೆಂದು ಮುಂದಿನ ಶ್ಲೋಕದಲ್ಲಿ ಕಾಳಿದಾಸನೇ ಹೇಳಿದ್ದಾನೆ (ಭುಜಂಗಮೋನ್ನದ್ಧಜಟಾ ಕಲಾಪಂ). ಮೃಚ್ಛಕಟಿಕದಲ್ಲಿ ಸರ್ಪವನ್ನು ಸುತ್ತಿಕೊಂಡಂತೆ ವರ್ಣಿಸಿದ್ದು ಬರಿಯ ಚಮತ್ಕಾರಕ್ಕಾಗಿ. ಹಾವನ್ನು ಜಗ್ಗಿ ಎಳೆದು ಬಿಗಿದು ಕಟ್ಟಿದ್ದರಿಂದ ಅವರ ದೇಹ ದ್ವಿಗುಣಿತ-ದುಪ್ಪಟ್ಟು ನೀಳವಾಯಿತೆಂಬ ಅರ್ಥವೇ ಸ್ವರಸವೂ ಚಮತ್ಕಾರಿಯೂ ಆಗಿದೆ. ಎರಡು ಸುತ್ತು ಎಂದು ಅರ್ಥವಲ್ಲ. ಧ್ಯಾನಕ್ಕೆ ತೊಂದರೆ ಕೊಟ್ಟೀತೆಂಬ ಕಾರಣದಿಂದ ಸರ್ಪವನ್ನು ಬಿಗಿದು ಕಟ್ಟಿದ್ದನೆಂದು ಕವಿಯ ಆಶಯ. ಇದೇ ಕಾರಣ ದಿಂದಲೇ ಸರ್ಪವನ್ನು ಜಟೆಗೆ ಕಟ್ಟಿದ್ದನೆಂದು ಕಾಳಿದಾಸ ಹೇಳಿರುವುದು. ಪರ್ಯಂಕಬಂಧಕ್ಕೂ ಹಗ್ಗವನ್ನು ಕಟ್ಟಿಕೊಳ್ಳುವುದಕ್ಕೂ ಯಾವ ಸಂಬಂಧವೂ ಇಲ್ಲ.

'ಮಿಗೆ ಗುಣದೊಳ್' ಎಂಬುದರ ಸ್ಥಾನದಲ್ಲಿ 'ಮೃಗಗಣದೊಳ್' ಎಂದು ಪಾಠಾಂತರವಿದೆ. ಅದೇ ಸರಿಯೆಂದು ನಮ್ಮ ಅಭಿಪ್ರಾಯ. 'ದ್ವಿಗುಣಂ' ಕ್ರಿಯಾವಿ ಶೇಷಣ. ಎರಡರಷ್ಟು ವಿಶೇಷವಾಗಿ ಎಂದರ್ಥ. ತಪಸ್ವಿಯ ಬಳಿ ಮೃಗಗಳು ನಿರ್ಭೀತಿಯಿಂದ ಸಂಚರಿಸುತ್ತವೆಂಬ ವರ್ಣನೆ ಸುಪ್ರಸಿದ್ಧ. ನಿನ್ನ ರೂಪು ಮೃಗಗಳಿಗೆ ವಿಶೇಷವಾಗಿ ಪರಿಚಿತವಾಗಿದೆ -ಅವು ನಿರ್ಭಯದಿಂದ ಸಮೀಪದಲ್ಲಿ ಸುಳಿದಾಡುತ್ತವೆ -ಎಂಬ ಅರ್ಥದಲ್ಲಿ ಯಾವ ಅನೌಚಿತ್ಯ ಉಂಟು? ಬಾಧಕ ಉಂಟು? ಈ ಅರ್ಥ ಶಾಂತಕ್ಕೆ ಪರಿಪೋಷಕವಾಗಿದೆ.

ನಮ್ಮ ಸಮೀಕ್ಷೆ ದೀರ್ಘವೇ ಆಯಿತು. ಕವಿರಾಜಮಾರ್ಗವನ್ನು ಕ್ರಮವರಿತು ವ್ಯಾಸಂಗಮಾಡತಕ್ಕವರಿಗೆ ಇದರಿಂದ ಪ್ರಯೋಜನವಾದೀತೆಂಬ ನಂಬಿಕೆಯೇ ಇದಕ್ಕೆ ಪ್ರೇರಣೆ. ೯೫ನೇ ಪುಟದ ೧೭ನೇ ಪದ್ಯದ ಅರ್ಥದಲ್ಲಿ 'ಅವಯವಿಯಾದ ಹುಬ್ಬನ್ನು' ಎಂದಿದೆ. 'ಅವಯವವಾದ ಹುಬ್ಬನ್ನು' ಎಂದಿರಬೇಕಾಗಿತ್ತು. ಈ ಬಗೆಯ ಸಣ್ಣಪುಟ್ಟ ದೋಷಗಳೂ ಇವೆ. ಮುದ್ರಣದೋಷವೂ ಅಲ್ಲಲ್ಲಿ ಇದೆ. ಅದೇ ಪುಟದಲ್ಲಿ 'ರೂಪಣಾಶ್ರಯಾತ್' ಎಂಬುದು 'ರೂಪಣಾರೂಪಣಾಶ್ರಯಾತ್' ಎಂದಿರ ಬೇಕಾಗಿತ್ತು. ೨೦ನೇ ಪುಟದ ೭೯ನೆಯ ಪದ್ಯದಲ್ಲಿ 'ಅಱಿಯದವಂ ಮುನಿಗುಂ' ಇದರ ಅರ್ಥ ಬಿಟ್ಟುಹೋಗಿದೆ.

ಪ್ರಫುಲ್ಲಾಮೋದಿಕುಸುಮಾ 'ಗುಲಾಬೀ' ಸಂಜ್ಞಿತಾ ಲತಾ ।
ಕಂಟಕೈರನುವಿದ್ಧಾಪಿ ಹರತ್ಯೇವ ಸತಾಂ ಮನಃ ॥

* * * * *

ಶುದ್ಧಾಶುದ್ಧ ಪತ್ರಿಕೆ

	ಪುಟ	ಸಾಲು	ಅಶುದ್ಧ	ಶುದ್ಧ
1.	9	2	ಗ,ಘ	ಗ,ಜ
2.	11	9	ಅಕ್ಷರಗಳು	ಲಿಪಿಗಳು
3.	51	ಕೆಳಗಿಂದ 4	ಧ್ರುವಮ...ಪಾದನಮ್	ಧ್ರುವಮ....ಪಾದಾನಮ್
4.	97	ಕೆಳಗಿಂದ 3	ನಾಽರ್ಥಃ	ನಾಽರ್ಥಾಃ
5.	168	14	ಶಬ್ದದ	ಶಬ್ದಕ್ಕೆ
6.	168	19	ತಮೆ ನಿ	ತಮೆನಿಸಿ
7.	186	12	ಇಲ್ಲ	ಇಲ್ಲಿ
8.	189	ಕೆಳಗಿಂದ 2	ಹನುನಂತನ	ಹನುಮಂತನ
9.	193	21	ಅನ್ವರ್ಥಕ	ಅನರ್ಥಕ
10.	198	7	ಉಪಯೇಯಸ್ಯ	ಉಪಮೇಯಸ್ಯ
11.	204	18	ಗುಣಗಳನ್ನು	ದೋಷಗಳನ್ನು
12.	208	11	ಅವರ	ಅದರ

ISBN 81-86668-40-3

Honna-Padma Udupi ✆ 521082